ಶ್ರೀ ಪರಾಶರ ಮಹರ್ಷಿ ಪ್ರಣೀತ

# ಶ್ರೀವಿಷ್ಣುಪುರಾಣಮ್

## (ಕಥಾಸಂಕ್ಷೀಪ)

ಲೇಖಕರು

ಡಾ. ಸಿ.ಎಸ್. ಊರ್ಮಿಳಾ

**ತಿರುಮಲ ತಿರುಪತಿ ದೇವಸ್ಥಾನಗಳು**

**ತಿರುಪತಿ**

**2023**

**Sri Parasara Maharshi Praneetha**
**SRI VISHNUPURANAM (Katha Sankshepa)**

**By**
**Dr. C.S. Urmila**

T.T.D. Religious Publications Series No. 1456
©All Rights Reserved

First Edition : 2023

Copies : 250

Published by
**Sri A.V. Dharma Reddy,** IDES
Executive Officer,
Tirumala Tirupati Devasthanams,
Tirupati.

D.T.P:
Publications Division,
T.T.D, Tirupati.

Printed at :
Tirumala Tirupati Devasthanams Press,
Tirupati.



# FOREWORD

'Vedo Akhilo Dharma Moolam'. The Vedas are the source of the Sanatana Haindava Dharma. The Puranas and Itihasas (legends) originated to explain the philosophy of God in the Vedas.

The literature of the Puranas is very ancient and extensive. Keeping with the standards of 'Ashtadasa purananaam karta satyavatee sutah', Vedavyasa, the son of Satyavathi, wrote the 18 Puranas and made exceptional efforts to propagate the essence of the Vedas. These 18 Puranas, taking on qualities such as sarga, prati sarga, vamsa, manvantara, and vamsanucharita, use typical narrative style and spread the qualities of Dharma everywhere as ordained by the Vedas.

The Ashtadasa (18) Puranas were hailed by the ancestors as the limbs of Paramatma (the Lord). Among them, the Vishnu Purana was acclaimed as the right hand of Sri Mahavishnu. This Purana, which has been divided into six components, has 126 adhyayas. In the line of Puranas, Vishnu Purana occupies the third place. This Purana is considered to reign in the Satvik (virtuous) element. Vishnupurana, which propounds the four kinds of purusharthas, dispels all kinds of doubts and affords peace to the mind. This Purana describes how Sri Hari has become the sole source of origin for this jagat (universe).

A reading of the Purana or listening to it destroys sins of all kinds in a man. One can acquire the result of 'Avabrudha snana' (bathing at the end of the Aswamedha yaga). Vishnupurana parayana (reading) or Sravana (listening) endows one with more punya (sanctity) than that one acquires by fasting in Prayaga, Pushkara, Kurukshetra, or on the banks of the sea.

Such a holy Vishnupurana has been attained by Maharshi Parasara through the boon of Maharshi Vasishta. This Purana was explained by Maitreya to Sameeka in the age of Kali. Hence this Vishnupurana is lauded as "Parasara Maharshi Praneeta Sri Vishnupurana."

Tirumala Tirupati Devastanam, as part of its campaign to propagate Haindava Dharma, is publishing spiritual texts in various languages. For this, it has set up a 'Purana Itihasa project' (a research project on puranas and legends) and has taken up the onerous responsibility of translating the Ramayana, the Mahabharata, and also the Ashtadasa (18) Puranas into Telugu.

This book with the title 'Sri Parasara Maharshi Praneeta Vishnupurana - (Kadhasankshepam)' has been written in simple Kannada in the form of stories by Dr. C. S. Urmila. I hope that this book, which in itself is a form of Vishnu, will be appreciated by the devotees and make them ecstatic.

Let the Lord's favour and protection be on the readers! Wishing and praying that Dr. C.S.Urmila would be blessed with the divine grace of Lord Venkateswara all the time.

In the Service of Lord Venkateswara

**Executive Officer**

Tirumala Tirupati Devasthanams
Tirupati.

# ಲೇಖಕಿಯ ಮೊದಲ್ನುಡಿ

ಭಗವಾನ್ ವಿಷ್ಣುಪಾರಮ್ಯದ ಬಗ್ಗೆ ಅನೇಕ ಪುರಾಣ ಇತಿಹಾಸಗಳು ನಮಗೆ ಸ್ಪಷ್ಟಪಡಿಸಿ ಶ್ರೀಯಃಪತಿಯಾದ ಮಹಾವಿಷ್ಣುವಿಗೆ ಗುರುತರವಾದ ಮೂರು ಜವಾಬ್ದಾರಿಯಿದೆ ಎಂದು ತಾನೇ ಗೀತೆಯಲ್ಲಿ ಹೇಳಿಕೊಂಡಿದ್ದಾನೆ. 1. ಶಿಷ್ಟಪರಿಪಾಲನೆ, 2. ದುಷ್ಟನಿಗ್ರಹ, 3. ಧರ್ಮಸಂಸ್ಥಾಪನೆ ಈ ಮೂರು ಪ್ರಮುಖವಾದ ಕಾರ್ಯವನ್ನು ನಿರ್ವಹಿಸಲು ಕೆಲವೊಮ್ಮೆ ತಾನೇ ಪೂರ್ಣಾವತಾರ ಪಡೆದು ಈ ಭುವಿಗೆ ಬಂದು ರಕ್ಷಿಸುತ್ತಾನೆ. ಮತ್ತೆ ಕೆಲವೊಮ್ಮ ಆದಿಶೇಷ, ಸುದರ್ಶನ ಚಕ್ರ ಮುಂತಾದ ಅಂಶಗಳಿಂದ ಜನಿಸಿ ಜಗದ್ರಕ್ಷಣ ಕಾರ್ಯವನ್ನು ನಿರ್ವಹಿಸುತ್ತಾನೆ ಅಷ್ಟೇ ಅಲ್ಲದೆ ಭಗವಂತನು ಪರ, ವ್ಯೂಹ, ವಿಭವ ಹಾರ್ದ, ಅರ್ಚಾ ಎಂಬುದಾಗಿ ಐದು ಪ್ರಧಾನವಾದ ಅವತಾರಗಳನ್ನು ಎತ್ತಿ ಜಗದ್ರಕ್ಷಣೆಯನ್ನು ಮಾಡಿರುವನು.

ಭಗವಂತ ತನ್ನ ಭಕ್ತರ ಬಗ್ಗೆ ಸದಾ ಕಾಳಜಿಯನ್ನು ವಹಿಸುತ್ತಾನೆ. ಸೃಷ್ಟಿಕರ್ತ ಬ್ರಹ್ಮ, ಸ್ಥಿತಿಕರ್ತ ವಿಷ್ಣು, ಲಯಕರ್ತ ಶಿವನೆಂದು ನಮ್ಮಲ್ಲಿ ಪ್ರಸಿದ್ಧವಾಗಿದ್ದರೂ "ಸ್ವಯಂ ವಿಶ್ವೇಶ್ವರೋ ಹರಿಃ ಬ್ರಹ್ಮೋ ಭೂತ್ವಾ" ಎಂದೂ "ಬ್ರಹ್ಮರೂಪಧರಃ ಶೇತೇ ಭಗವಾನಾದಿ ಕೃತ್ ಹರಿ" ಎಂದು ಬ್ರಹ್ಮ ಶಿವ, ಇವರೂ ಸಹ ಪರಬ್ರಹ್ಮದ ಸಗುಣ ಮೂರ್ತಿಗಳೇ ಎಂದು ವಿಷ್ಣು ಪುರಾಣವು ತಿಳಿಸುತ್ತದೆ. ಅಷ್ಟಾದಶ ಪುರಾಣಗಳಲ್ಲಿ ವಿಷ್ಣುಪುರಾಣವೂ ಒಂದು. ಇದರಲ್ಲಿ ವಿಷ್ಣುಪಾರಮ್ಯವು ಸ್ಪಷ್ಟವಾಗಿ ತಿಳಿಯಬಹುದು. ಶ್ರೀ ಪರಾಶರ ಮಹರ್ಷಿ ಪ್ರಣೀತವಾದ ಈ ವಿಷ್ಣು ಪುರಾಣವು ಕಡಲಿನಂತೆ ವಿಸ್ತಾರವಾಗಿದೆ.

ಅದನ್ನು ಸಂಕ್ಷಿಪ್ತವಾಗಿ ಬರೆಯಬೇಕೆಂಬ ಹಂಬಲ ನನ್ನಲ್ಲಿ ಚಿಕ್ಕಂದಿನಿಂದಲೇ ಇದ್ದರೂ ವಿಷ್ಣುಪಾರಮ್ಯದ ಬಗ್ಗೆ ಮತ್ತಷ್ಟು ತಿಳಿಯಬೇಕು, ಅನೇಕ ಗ್ರಂಥಗಳನ್ನು ಓದಬೇಕೆಂಬ ಹಂಬಲ. ಅವುಗಳಲ್ಲಿರುವ ಸಾರವನ್ನು ಯತ್ಕಿಂಚಿತ್ತಾದರೂ ತಿಳಿದುಕೊಂಡು ಆ ಭಗವಂತನ ಗುಣಗಾನ ಮಾಡಬೇಕು ಎಂಬ ಮಹದಾಸೆ ನನ್ನಲ್ಲಿ ಸದಾಕಾಲವೂ ಇರುತ್ತದೆ. ಅದರೆ ಪ್ರತಿಫಲವೋ ಎಂಬಂತೆ ಆ ಭಗವಂತನ ಅನುಗ್ರಹದಿಂದ ಈ ಪುಸ್ತಕವು ಹೊರ ಹೊಮ್ಮಿದೆ. ಈ ಕೃತಿಯ ಮುದ್ರಣಕ್ಕೆ ಅತ್ಯಂತ ಭಕ್ತಿ ಭಾವದಿಂದ ಶ್ರದ್ಧಾಪೂರ್ವಕವಾಗಿ ನೆರವಾದ ಸೋದರ ಸಮಾನರಾದ ಶ್ರೀ ಡಿ. ರವೀಂದ್ರನಾಥ್ ಅವರಿಗೆ ನನ್ನ ಅನಂತಾನಂತ ವಂದನೆಗಳು. ಶ್ರೀಯುತರು ಶ್ರೀ ಯದುಗಿರಿ ಯತಿರಾಜ ಮಠವೆಂಬ ಮಹಾವೃಕ್ಷದ ಕೆಳಗೆ ಆಶ್ರಯವನ್ನು ಪಡೆದುಕೊಂಡು ಜನಹಿತ ಕಾರ್ಯಗಳನ್ನು ನೆರವೇರಿಸುತ್ತಿರುವುದು ಅತ್ಯಂತ ಶ್ಲಾಘನೀಯ.

ಈ ಕೃತಿಯನ್ನು ರಚಿಸಲು ಪ್ರೋತ್ಸಾಹ ನೀಡಿದ ತಿರುಮಲ ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಗೆ ಆಭಾರಿಯಾಗಿದ್ದೇನೆ. ಹಾಗೂ ಕೃತಿ ರಚನೆಗೆ ಸಲಹೆ, ಪ್ರೇರಣೆ ಹಾಗೂ ಮಾರ್ಗದರ್ಶನವನ್ನು ನೀಡಿದ ನನ್ನ ಕುಟುಂಬ ವರ್ಗದವರಿಗೂ ನಾನು ಚಿರಋಣಿಯಾಗಿದ್ದೇನೆ. ಈ ಕೃತಿಯಲ್ಲಿ ಯಾವುದೇ ತಪ್ಪುಗಳಿದ್ದರೂ ಅದು ನನ್ನದು. ತಮ್ಮಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ. ಒಪ್ಪುಗಳು ಯಾವುದೇ ಇದ್ದರೂ ಅದು ಶ್ರೀಕೃಷ್ಣಾರ್ಪಿತ.

ಸರ್ವಂ ಶ್ರೀಕೃಷ್ಣಾರ್ಪಣಮಸ್ತು.

**– ಡಾ. ಸಿ.ಎಸ್. ಊರ್ಮಿಳಾ**

## ಶ್ರೀ ಪರಾಶರ ಮಹರ್ಷಿ ಪ್ರಣೀತ

# ಶ್ರೀ ವಿಷ್ಣುಪುರಾಣಮ್

**ಓಂ ನಮೋ ಭಗವತೇ ವಾಸುದೇವಾಯ**

**ಕೃತಪಾದಃ ಸುಪರ್ಣಾಂಸೇ ಪ್ರಲಂಭಾಷ್ಯಮಹಾಭುಜಃ**

**ಚಕ್ರಶಂಖಾಸಿ ಚರ್ಮೆಷು ಧನುಃಪಾಶಗದಾಧರಃ**

**ಪೀತವಾಸಾ ಘನಶ್ಯಾಮಃ ಪ್ರಸನ್ನ ವದನೇಕ್ಷಣಃ**

**ವನಮಾಲಾ ನಿವೀತಾಂಗೋ ಲಸಚ್ಛ್ರೀವತ್ಸ ಕೌಸ್ತುಭಃ**

**ಏವಂ ರೂಪಂ ಮಹಾವಿಷ್ಣುಂಧ್ಯಾಯೇದ್ಯೋಹೃದಯಾಂಭುಃ**

**ಸಸರ್ವಂ ಶುಭಮಾಪ್ನೋತಿ ಕೃಪಯಾ ಪರಮೇಶಿತುಃ**

ಶ್ರೀ ಮಹಾವಿಷ್ಣುವು ಗರುಡನ ಹೆಗಲಮೇಲೆ ಪಾದವನ್ನು ಇಟ್ಟಿದ್ದಾನೆ.

ಆತನಿಗೆ ದೀರ್ಘವಾದ ಎಂಟು ಭುಜಗಳಿವೆ. ಚಕ್ರ, ಶಂಖ, ಖಡ್ಗ, ಗುರಾಣಿ, ಬಾಣ, ಧನಸ್ಸು, ಪಾಶ ಮತ್ತು ಗದೆಗಳನ್ನು ಧರಿಸಿದ್ದಾನೆ.

ಪೀತಾಂಬರನೂ ಮೇಘಶ್ಯಾಮನೂ ಆಗಿ ಪ್ರಸನ್ನನಾದಮುಖನೇತ್ರಗಳುಳ್ಳವನಾಗಿದ್ದಾನೆ. ವನಮಾಲೆಯನ್ನು ಧರಿಸಿ ಬೆಳಗುವ ಶ್ರೀವತ್ಸ ಲಾಂಛನದಿಂದಲೂ ಕೌಸ್ತುಭಮಣಿಯಿಂದಲೂ ಶೋಭಿತನಾಗಿದ್ದಾನೆ. ಈ ರೂಪದಲ್ಲಿರುವ ಮಹಾವಿಷ್ಣುವನ್ನು ಯಾವಾತನು ತನ್ನ ಹೃದಯ ಕಮಲದಲ್ಲಿ ಧ್ಯಾನಿಸುತ್ತಾನೋ ಆತನು ಪರಮೇಶ್ವರನ ಕೃಪೆಯಿಂದ ಎಲ್ಲ ವಿಧವಾದ ಶ್ರೇಯಸ್ಸನ್ನು ಪಡೆಯುತ್ತಾನೆ.

ನಮ್ಮ ಭಾರತೀಯ ಸಾಹಿತ್ಯಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಜಗತ್ತಿನಲ್ಲಿ ಪುರಾಣಗಳು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಇವುಗಳ ಗುರಿ ಧರ್ಮ ದರ್ಶನ ಮತ್ತು ಲೋಕನೀತಿಗಳು. ಈ ವಿಷಯಗಳನ್ನೇ

ಪ್ರಧಾನವಾಗಿರಿಸಿಕೊಂಡು ದೈವಭಕ್ತಿಯ ಪ್ರಾಮುಖ್ಯತೆ, ತೀರ್ಥಕ್ಷೇತ್ರಗಳ ಮಹಿಮೆ, ಸೃಷ್ಟಿ, ಸ್ಥಿತಿ, ಪ್ರಳಯಗಳ ವಿಚಾರ, ಪರಂಪರಾನುಗತವಾಗಿ ಬಂದ ರಾಜರ ಮತ್ತು ಋಷಿಗಳ **ಚರಿತ್ರೆ ಇವುಗಳನ್ನು** ನಿರೂಪಿಸುತ್ತದೆ ಈ ಪುರಾಣಗಳು.

ಪುರಾಣ ಎಂ**ದರೇನು** ?

**ಪುರಾಣ ಎಂ**ಬುದಕ್ಕೆ ಎರಡು ಅರ್ಥಗಳುಂಟು.

ಪುರಾಭವಂ ಪುರಾಣಮ್ ಎಂದರೆ **ಅತ್ಯಂತ ಪ್ರಾಚೀನವಾದ ಪು**ರಾತನವಾದ ಸಾಹಿತ್ಯ ಪುರಾಣ

ಪುರಾಪಿ ನವಂ ಪುರಾಣಮ್ ಎಂಬ ವ್ಯುತ್ಪತ್ತಿಯನ್ನು ಹೇಳುವುದುಂಟು. ಅಂದರೆ ಸನಾತನವೂ ನಿತ್ಯನೂತನವೂ ಆದ ಧರ್ಮವನ್ನು ದಾರ್ಶನಿಕ ತತ್ವವನ್ನೂ ನಿರೂಪಿಸುವ ಗ್ರಂಥ ಪುರಾಣವೆನಿಸುತ್ತದೆ. ವೇದದ ಗೂಡಾರ್ಥವನ್ನು ಆಖ್ಯಾನ, ಉಪಾಖ್ಯಾನಗಳ **ಮೂಲಕ ಸರಳರೂಪದಲ್ಲಿ ಪು**ರಾಣವು ವರ್ಣಿಸುವುದು.

ಪುರಾಣದ ಉದ್ದೇಶವೇನು ?

**ಇತಿಹಾಸ ಪುರಾಣಾಭ್ಯಾಂ ವೇದಂಸಮುಪ ಬೃಂಹಯೇತ್ ।**
**ಬಿಭೇತ್ಸಲ್ಪ ಶ್ರುತವಾನ್ ವೇದೋಮಾಮಯಂ ಪ್ರಹರೇದಿತಿ ॥**

ಎಂಬುದು ಈ ಪುರಾಣದ ಉದ್ದೇಶ. ಇದರಲ್ಲಿ ಒಟ್ಟು ಹದಿನೆಂಟು ಪುರಾಣಗಳಿವೆ.

**ಪುರಾಣಗಳು ಎಷ್ಟಿವೆ** ?

1. ಮತ್ಸ್ಯ 2. ಮಾರ್ಕಂಡೇಯ 3. ಭವಿಷ್ಯ 4. ಭಾಗವತ 5. ಬ್ರಹ್ಮ 6. ಬ್ರಹ್ಮವೈವರ್ತ 7. ಬ್ರಹ್ಮಾಂಡ 8. ವಾಮನ 9. ವರಾಹ 10. ವಾಯು 11. ವಿಷ್ಣು 12. ಅಗ್ನಿ 13. ನಾರದ 14. ಪದ್ಮ 15. ಅಂಗ 16. ಗರುಡ 17.

ಕೂರ್ಮ 18. ಸ್ಕಾಂದ ಪುರಾಣಗಳೆಂಬವು ಅಷ್ಟಾದಶ ಮಹಾಪುರಾಣಗಳು ಇವುಗಳಾಗಿವೆ. 18 ಉಪಪುರಾಣಗಳಿವೆಯೆಂತೆ ಅವುಗಳಲ್ಲಿ ಸನತ್ಕುಮಾರ, ನಾರಸಿಂಹ, ಕಾಪಿಲ, ಮಾನವ ಎಂಬುವು ಮಾತ್ರ ಉಪಲಬ್ಧವಿದೆ. ಇದನ್ನು ಸುಲಭವಾಗಿ ಜ್ಞಾಪಕದಲ್ಲಿಟ್ಟುಕೊಳ್ಳುವ ಶ್ಲೋಕವಿದು.

ಮ–ದ್ವಯಂ ಭ–ದ್ವಯಂ ಚೈವ ಬ್ರ– ತ್ರಯಂ ವ– ಚತುಷ್ಟಯಂ
ಅ–ನಾ–ಪ–ಲಿಂ–ಗ ಕೂ–ಸ್ಕಾನಿ ಪುರಾಣಾನಿ ಪ್ರಚಕ್ಷತೆ

ಮ–ದ್ವಯಂ ಎಂದರೆ – 1 ಮತ್ಸ್ಯ 2. ಮಾರ್ಕಂಡೇಯ

ಭ –ದ್ವಯಂ ಎಂದರೆ – 1 ಭವಿಷ್ಯ 2. ಭಾಗವತ

ಬ್ರ –ತ್ರಯಂ ಎಂದರೆ – 1 ಬ್ರಹ್ಮ 2. ಬ್ರಹ್ಮವೈವರ್ತ 3. ಬ್ರಹ್ಮಾಂಡ

ವ– ಚತುಷ್ಟಯಮ್ ಎಂದರೆ – ವೈವರ್ತ, ವರಾಹ, ವಾಯು, ವಿಷ್ಣು ಇವುಗಳಲ್ಲದೆ ಅಗ್ನಿ, ನಾರದ, ಪದ್ಮ, ಲಿಂಗ, ಗರುಡ ಕೂರ್ಮ ಮತ್ತು ಸ್ಕಾಂದ ಎಂಬವೇ ಅಷ್ಟಾದಶ ಪುರಾಣಗಳು.

ಈ ಪುರಾಣಗಳಲ್ಲಿ ಸ್ಕಾಂದ ಪುರಾಣವು ಅತ್ಯಂತ ದೊಡ್ಡದು. ಇದರಲ್ಲಿ 81,100 ಶ್ಲೋಕಗಳಿವೆ. ಪುರಾಣಗಳಲ್ಲಿ ಅತಿ ಚಿಕ್ಕದು ಮಾರ್ಕಂಡೇಯ ಪುರಾಣ ಬಹಳ ಚಿಕ್ಕದು. ಇದರಲ್ಲಿ 9000 ಶ್ಲೋಕಗಳಿವೆ.

ಒಟ್ಟು ಅಷ್ಟಾದಶ ಪುರಾಣಗಳ ಶ್ಲೋಕಸಂಖ್ಯೆ ಸುಮಾರು ನಾಲ್ಕುಲಕ್ಷವೆಂದು ಹೇಳುತ್ತಾರೆ.

**ಪುರಾಣಗಳಲ್ಲಿ ಕಂಡುಬರುವ ಮುಖ್ಯ ಲಕ್ಷಣಗಳು ಯಾವುವು ?**

ಅಮರಸಿಂಹನು ಪುರಾಣಕ್ಕೆ ಐದು ಲಕ್ಷಣಗಳನ್ನು ಹೇಳಿದ್ದಾನೆ.

**ಸರ್ಗಶ್ಚ ಪ್ರತಿಸರ್ಗಶ್ಚ ವಂಶೋ ಮನ್ವಂತರಾಣಿಚ ।**
**ವಂಶಾನುಚರಿತಂ ಚೇತಿ ಪುರಾಣಂ ಪಂಚಲಕ್ಷ್ಮಣಮ್ ॥**

ಎಂದು ಅಮರಸಿಂಹನು ಹೇಳಿದ್ದಾನೆ.

ಜಗತ್ತಿನ ಪ್ರಥಮ ಸೃಷ್ಟಿ, ಆನಂತರದ ಸೃಷ್ಟಿ ದೇವತೆಗಳ ಮತ್ತು ಪಿತೃಗಳ

ವಂಶಾನುಕ್ರಮ ಸ್ವಾಯಂಭುವ ಮೊದಲಾದ ಹದಿನಾಲ್ಕು ಮನುಗಳ ಇತಿಹಾಸ ಸೂರ್ಯ ಮತ್ತು ಚಂದ್ರರ ವಂಶಾವಳಿ, ಹೀಗೆ ಐದು ಲಕ್ಷಣಗಳು ಇದ್ದರೆ ಅದಕ್ಕೆ ಪುರಾಣವೆಂದು ಹೇಳುತ್ತಾರೆ. ಇದಲ್ಲದೆ ಕೆಲವು ಪುರಾಣಗಳಲ್ಲಿ ಧರ್ಮಶಾಸ್ತ್ರ, ವೇದಾಂತ, ಯೋಗ, ಸಂಖ್ಯಾ, ಜ್ಯೋತಿಷ್ಯ, ವೈದ್ಯ, ವ್ಯಾಕರಣ, ಧನುರ್ವೇದ, ಸಂಗೀತ, ಶಿಲ್ಪ, ಅಲಂಕಾರ ಮುಂತಾದ ವಿಷಯಗಳು ಪುರಾಣಗಳಲ್ಲಿ ಕಂಡುಬರುತ್ತವೆ.

ಈ ಪುರಾಣಗಳಲ್ಲಿ ಕೆಲವು ಮತೀಯಭಾವನೆಗಳನ್ನು ಒಳಗೊಂಡಿರುತ್ತದೆ. ಶೈವ ಮತ್ತು ವೈಷ್ಣವ ಮತಗಳ ಸ್ಪರ್ಧೆಯನ್ನು ನಾವು ಕಾಣಬಹುದು. ಸ್ವಮತಸ್ಥಾಪನೆಗಾಗಿ ಪರಮತಖಂಡನೆ ಮಾಡಿರುವುದನ್ನು ನಾವು ಕಾಣಬಹುದು. ಅಂದರೆ ಒಬ್ಬ ದೇವತೆಯನ್ನು ಹೊಗಳಿ ಇನ್ನೊಬ್ಬ ದೇವತೆಯನ್ನು ತೆಗಳುವ ಪ್ರಸಂಗಗಳು ಈ ಪುರಾಣಗಳಲ್ಲಿ ಇವೆ. ಇದರ ಬಗ್ಗೆ ಓದುಗರು ಎಚ್ಚರಿಕೆಯಿಂದ ಇರಬೇಕಾದುದು ಅತ್ಯವಶ್ಯ. ಭಾವೋದ್ರೇಕಕ್ಕೆ ಒಳಗಾಗಬೇಕಿಲ್ಲ. **ಪುರಾಣಮಿತ್ಯೇವ ನ ಸಾಧು ಸರ್ವಂ** ಎಂದು ಒಬ್ಬ ವಿಮರ್ಶಕ ಹೇಳಿದ್ದಾನೆ.

**ಈ ಪುರಾಣಗಳ ಕರ್ತೃ ಯಾರು ?**

ಅಷ್ಟಾದಶ ಪುರಾಣಗಳ ಶ್ಲೋಕ ಸಂಖ್ಯೆ ಸುಮಾರು ನಾಲ್ಕುಲಕ್ಷ ಎಂದು ಪರಿಗಣಿಸಲಾಗಿದೆ. ಇಷ್ಟೊಂದು ಬೃಹತ್ ಪ್ರಮಾಣದ ಗ್ರಂಥಗಳನ್ನು ಬರೆದವರು ಯಾರು ಎಂಬ ಪ್ರಶ್ನೆ ನಮ್ಮಲ್ಲಿ ಸಹಜವಾಗಿ ಏಳುವುದುಂಟು. ವ್ಯಾಸರು ಈ ವಿಷ್ಣುಪುರಾಣವನ್ನು ಬರೆದರೆಂದೂ, ವ್ಯಾಸರ ತಂದೆ ಪರಾಶರರು ಮೈತ್ರೇಯರಿಗೆ ಹೇಳಿದರೆಂದು ವಿವರಣೆ ಇದೆ.

**ಅಷ್ಟಾದಶ ಪುರಾಣಾನಾಂ ಕರ್ತಾ ಸತ್ಯವತೀಸುತಃ** ಎಂದು ಸಂಪ್ರದಾಯ ಹೇಳುತ್ತದೆ. ಪದ್ಮಪುರಾಣದಲ್ಲೂ ಇದರ ಬಗ್ಗೆ ಪ್ರಸ್ತಾಪಿಸಲಾಗಿದೆ.

**ವಿಸ್ತಾರಾಯತು ಲೋಕಾನಾಂ ಸ್ವಯಂ ನಾರಾಯಣ ಪ್ರಭುಃ ।**
**ವ್ಯಾಸ ರೂಪೇಣ ಕೃತವಾನ್ ಪುರಾಣಾನಿ ಮಹೀತಲೇ ॥**

ಎಂದು ಹೇಳಿದೆ. ಇದರ ಪ್ರಕಾರ ದ್ವೈಪಾಯನ ವೇದವ್ಯಾಸರು ಇಡೀ ಹದಿನೆಂಟು ಪುರಾಣಗಳನ್ನು ರಚಿಸಿದ್ದಾರೆ ಎಂದು ವೇದವ್ಯಾಸರೇ ವಿಷ್ಣುರೂಪರಾಗಿ ಬಂದು ಹದಿನೆಂಟು ಪುರಾಣಗಳನ್ನು ರಚಿಸಿದ್ದಾರೆಂಬ ಪ್ರತೀತಿಯಿದೆ. **ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ** ಎಂಬುದನ್ನು ಇಲ್ಲಿ ಸ್ಮರಿಸಬಹುದು. ಆದರೆ ಪರಿಶೋಧಕರಾದ ಆಧುನಿಕ ವಿದ್ವಾಂಸರು ಈ ಮಾತನ್ನು ಒಪ್ಪುವುದಿಲ್ಲ. ಈ ಹದಿನೆಂಟು ಪುರಾಣಗಳನ್ನು ವ್ಯಾಸರ ಶಿಷ್ಯರಾದ ಸುಮತಿ, ಅಗ್ನಿವರ್ಚ, ಮಿತ್ರಾಯು ಶಾಂಸಪಾಯನ, ಅಕೃತವ್ರಣ, ಸಾವರ್ಣಿ ಮುಂತಾದವರು ಇವನ್ನು ಬರೆದಿರಬಹುದು ಎಂದು ಅಭಿಪ್ರಾಯಪಡುತ್ತಾರೆ. ಹೇಗಾದರಾಗಲಿ, ವಿಷ್ಣುಪುರಾಣವನ್ನು ವ್ಯಾಸರ ತಂದೆಯಾದ ಪರಾಶರರು ಮೈತ್ರೇಯನಿಗೆ ಹೇಳಿದರೆಂದು ವಿಷ್ಣುಪುರಾಣದಲ್ಲಿ ಸ್ಪಷ್ಟಪಡಿಸಲಾಗಿದೆ. ಆದರೆ ಒಂದು ಮಾತ್ರ ಸತ್ಯ ಈ ಪುರಾಣಗಳನ್ನು ವಿಸ್ತರಿಸಿದವರು ಪ್ರಾಚೀನ ಮುನಿಗಳೇ ವಿನಹ ನವೀನರಲ್ಲ.

ವಿಷ್ಣುಪುರಾಣದಲ್ಲಿ ಪ್ರತಿಪಾದಿತವಾಗಿರುವ ವಿಷಯಗಳನ್ನು ಹೀಗೆ ಸಂಗ್ರಹಿಸಲಾಗಿದೆ. ವಿಷ್ಣುಪುರಾಣದಲ್ಲಿ ಒಟ್ಟು 26 ಅಧ್ಯಾಯಗಳಿವೆ.

**ಪ್ರಥಮಾಂಶ** : ಇಪ್ಪತ್ತನಾಲ್ಕು ತತ್ವಗಳು ವಿಚಾರಪೂರ್ವಕವಾಗಿದೆ. ಜಗತ್ತಿನ ಉತ್ಪತ್ತಿ, ಪ್ರಜಾಪತಿಗಳು, ದೇವತೆಗಳು, ಪಿತೃಗಣಗಳು ಇತ್ಯಾದಿಗಳ ಸೃಷ್ಟಿಕ್ರಮ ಧ್ರುವ ಚರಿತೆ, ಪ್ರಹ್ಲಾದ ಚರಿತೆ, ಮರುದ್‌ಗಣಗಳ ಉತ್ಪತ್ತಿ, ವಿಷ್ಣುವಿನ ಮಹಿಮೆ

**ದ್ವಿತೀಯಾಂಶ** : ಇದರಲ್ಲಿ ಭೂಗೋಳದ ವಿವರಣೆ, ನವಖಂಡಗಳ ವಿಭಾಗ, ಅಧೋಲೋಕ ಮತ್ತು ಊರ್ಧ್ವಲೋಕ ಜ್ಯೋತಿಶ್ಚಕ್ರ ಮತ್ತು ನವಗ್ರಹಗಳ ವರ್ಣನೆ, ಜಡಭರತ ಋಭು, ನಿದಾಘರ ಆಖ್ಯಾನ.

**ತೃತೀಯಾಂಶ** : ಮನುಪುತ್ರರ ವರ್ಣನೆ, ಚತುರ್ಯುಗಗಳಿಗೆ ಅನುಸಾರ ಭಿನ್ನ ಭಿನ್ನ ವ್ಯಾಸರು, ಚತುರ್ವೇದಗಳ ವಿಭಾಗ, ಚಾತುರ್ವಣ್ಯ ಧರ್ಮ, ಬ್ರಹ್ಮಚರ್ಯ ಮತ್ತು ಗಾರ್ಹಸ್ಥ್ಯದ ಆಚಾರಗಳು, ವಿಸ್ತಾರವಾದ ಶ್ರಾದ್ಧವಿಧಿ.

**ಚತುರ್ಥಾಂಶ** : ವೈವಸ್ವತ ಮನುವಿನ ವಂಶ

**ಇಕ್ಷ್ವಾಕು ವಂಶ :** ಶ್ರೀರಾಮನ ಸಂಕ್ಷಿಪ್ತಕಥೆ

**ಸೋಮವಂಶ** : ಯದುವಂಶವರ್ಣನೆ ಕುರುವಂಶ.

ಭವಿಷ್ಯದಲ್ಲಿ ಆಳುವ ರಾಜರು, ಮಗಧ ವಂಶ. ಕಲಿಯುಗದ ರಾಜರು ಕಲಿಧರ್ಮ

**ಪಂಚಮಾಂಶ :** ವಿಸ್ತಾರವಾಗಿ ಶ್ರೀಕೃಷ್ಣ ಚರಿತ್ರೆ, ಯಾದವರ ಅಂತ್ಯ, ಪರೀಕ್ಷಿತರಾಜನ ಪಟ್ಟಾಭಿಷೇಕ, ಪಾಂಡವರ ಸ್ವರ್ಗರೋಹಣ

**ಷಷ್ಠಾಂಶ :** ಕಲಿಧರ್ಮನಿರೂಪಣ, ಶೂದ್ರ ಮತ್ತು ಸ್ತ್ರೀಯುಗ ಮಹತ್ವ, ಕಾಲವಿಚಾರ, ನೈಮಿತ್ತಿಕಪ್ರಳಯ, ಪ್ರಾಕೃತ ಪ್ರಳಯ, ಭಗವಂತನ ಪಾರದರ್ಶಕಸ್ವರೂಪ ಬ್ರಹ್ಮಯೋಗ, ಶಿಷ್ಯಪರಂಪರೆ, ಉಪಸಂಹಾರ, ಶ್ರೀಪರಾಶರಮಹರ್ಷಿ ಪ್ರಣೀತವಾದ ಶ್ರೀವಿಷ್ಣುಪುರಾಣವು ಸಾತ್ವಿಕ ಭಾಗವತವೆಂದೂ ಪ್ರಸಿದ್ಧಿಯಾಗಿದೆ. ಅಷ್ಟೇ ಅಲ್ಲದೆ ಸರ್ವಧರ್ಮಗಳ ವ್ಯವಸ್ಥೆಗೆ ಇದು ಪರಿಪೂರ್ಣವಾಗಿದೆ. **ವೇದೋಖಿಲಂ ಧರ್ಮಮೂಲಂ** ಎಂದು ಮಹರ್ಷಿಗಳ ಅಭಿಪ್ರಾಯ ವೇದವು ಜ್ಞಾನಭಂಡಾರ ಅದರ ಅರ್ಥಗಳನ್ನು ಸ್ಪಷ್ಟಪಡಿಸುವುದೇ ಇತಿಹಾಸ, ಪುರಾಣಗಳ ಉದ್ದೇಶ ಶ್ರೀವಿಷ್ಣು ಪುರಾಣವು ವೇದಸಮ್ಮತವಾದುದ್ದೆಂದು ಪರಾಶರ ಮಹರ್ಷಿಗಳೇ ಹೇಳಿದ್ದಾರೆ. **ಏತತ್ತೇ ಯನ್ಮಯಾಖ್ಯಾತಂ ಪುರಾಣಂ ವೇದಸಂಮತಮ್** (6–8–12) ಇದರಿಂದ ವೇದ ಪ್ರತಿಪಾದಿತವಾದ ವಿಷಯತೇ ಈ ಪುರಾಣದಲ್ಲಿ ಬಂದಿದೆ ಎಂಬುದು ಸ್ಪಷ್ಟವಾಗುತ್ತದೆ.

ಉದಾಹರಣೆಗೆ **ನಾಹೋ ನ ರಾತ್ರಿರ್ನ ನಭೋ ನ ಭೂಮಿಃ ನಾಸೀತ್ತಮೋ ಜ್ಯೋತಿರಭೂಚ್ಚ ನಾನ್ಯತ್** (1.2.231) ಈ ಶ್ಲೋಕವು ಋಗ್ವೇದದಲ್ಲಿರುವ ನಾಸದಾಸೀತ್ ನೋ ಸದಾಸೀತ್' ಎಂಬ ನಾಸದೀಯ ಸೂಕ್ತವನ್ನೇ ಪ್ರತಿಬಿಂಬಿಸುತ್ತದೆ. **ಸಹಸ್ರಶೀರ್ಷಾಪುರುಷಃ ಸಹಸ್ರಾಕ್ಷಃ ಸಹಸ್ರಪಾತ್** ಎಂಬ (1.12.58) ಪುರುಷ ಸೂಕ್ತದ ವಿವರಣೆಯಾಗಿದೆ.

ಇಂತೆಯೇ ಉಪನಿಷತ್ತುಗಳ ಮತ್ತು ಭಗವದ್ಗೀತೆಯ ಅರ್ಥವನ್ನು ಅಲ್ಲಲ್ಲಿ

ನಾವು ಕಾಣಬಹುದು. ಹೀಗಾಗಿ ವಿಷ್ಣುಪುರಣವು ಪ್ರಾಚೀನ ಕಾಲದಿಂದಲೂ ಅತ್ಯಂತ ಜನಪ್ರಿಯವಾದ ಪ್ರಖ್ಯಾತವಾದ ಕೃತಿಯಾಗಿತ್ತೆಂದು ಸ್ಪಷ್ಟವಾಗುತ್ತದೆ. ಅಷ್ಟೆ ಅಲ್ಲ– ನಮ್ಮ ಭರತಭೂಮಿಯು ಪುಣ್ಯಭೂಮಿಯೆಂದೂ, ಕರ್ಮಭೂಮಿಯೆಂದೂ ಇಲ್ಲಿ ಜನಿಸುವುದೇ ಪುಣ್ಯಬಲದಿಂದಲೇ ಎಂದು ರಾಷ್ಟ್ರಭಕ್ತಿ ಪ್ರಚೋದಕನಾದ ಶ್ಲೋಕಗಳು ವಿಷ್ಣುಪುರಾಣದಲ್ಲಿ ಬಂದಿದೆ ಎಂಬುದು ಗಮನಾರ್ಹವಾದ ಸಂಗತಿ. ಈ ಶ್ಲೋಕಗಳು ಎಂತಹವರಿಗೂ ದೇಶಭಕ್ತಿಯನ್ನು ಹೆಚ್ಚಿಸುತ್ತವೆ. ಅವುಗಳ ಉದಾಹರಣೆಯನ್ನು ನೋಡೋಣ.

**ಜಾನೀಮನೈತತ್ಕ್ವಯಂ ವಿಲೀನೇ**
**ಸ್ವರ್ಗಪ್ರದೇ ಕರ್ಮಣಿ ದೇಹಬಂದನಮ್**
**ಪ್ರಾಪ್ಯಾಮ ಧನ್ಯಾಃ ಖಲುತೇ ಮನುಷ್ಯಾಃ**
**ಯೇ ಭಾರತೇ ನೇಂದ್ರಿಯ ವಿಪ್ರಹೀನಾಃ**

(ವಿ.ಪು. 2.3.26)

**ಅತ್ರಜನ್ಮಸಹಸ್ರಾಣಾಂ ಸಹಸ್ರೈರಪಿ ಸತ್ತಮ ।**
**ಕದಾಚಿಲ್ಲಭತೇ ಜಂತುರ್ಮಾನುಷ್ಯಂ ಪುಣ್ಯಸಂಚಯಾತ್ ॥**
**ಗಾಯಂತಿ ದೇವಾಃ ಕಿಲ ಗೀತಕಾನಿ ।**
**ಧನ್ಯಾಸ್ತು ತೇ ಭಾರತ ಭೂಮಿ ಭಾಗೇ ॥**
**ಸ್ವರ್ಗಾಪ ವರ್ಗಾಸ್ಪದ ಮಾರ್ಗಭೂತೇ ।**
**ಭವಂತಿ ಭೂಯಃ ಪುರುಷಾಃ ಸುರತ್ವಾತ್ ॥**

(2.3–23,24)

ಭರತಭೂಮಿಯಲ್ಲಿ ಜನ್ಮಪಡೆಯುವುದೆಂದರೆ ಅದು ಸಹಸ್ರಾರು ವರ್ಷಗಳ ಪುಣ್ಯಸಂಚಯ ಎಂದು ಸ್ಪಷ್ಟಪಡಿಸಿದ್ದಾರೆ. ಎಂದೆಂದಿಗೂ ನಾವು ದೇಶಸೇವೆ ದೇಶರಕ್ಷಣೆ, ದೇಶಪ್ರಗತಿಯತ್ತ ಸಾಗೋಣ.

ವಿಷ್ಣುಪುರಾಣದಲ್ಲಿ ಖಗೋಳಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಅನೇಕ ಉದಾಹರಣೆಗಳಿವೆ. ಹೀಗಾಗಿ ಪುರಾಣ ಕರ್ತೃವಿಗೆ ಜ್ಯೋತಿಶಾಸ್ತ್ರ ವಿಜ್ಞಾನ ತಿಳಿದಿತ್ತೆಂದು ಸ್ಪಷ್ಟವಾಗುತ್ತದೆ. ಈ ವಿಚಾರವನ್ನು ದ್ವಿತೀಯಾಂಶದ ಎಂಟನೆಯ ಅಧ್ಯಾಯದಿಂದ ಹನ್ನೆರಡನೆಯ ಅಧ್ಯಾಯದವರೆಗೆ ಪ್ರಸ್ತಾಪಿಸಲಾಗಿದೆ.

ಇಂದಿನ ವಿಜ್ಞಾನಿಗಳು ಸಮರ್ಥಿಸಿರುವಂತೆ ಸೂರ್ಯನಿಗೆ ಉದಯಾಸ್ತಮಾನಗಳಿಲ್ಲ. ಅವನನ್ನು ಜನರು ಬೆಳಿಗ್ಗೆ ಕಂಡಾಗ ಸೂರ್ಯ ಉದಯಿಸಿದನೆಂದೂ, ಸಂಜೆ ಅಸ್ತಂಗತನಾದನೆಂದು ಹೇಳುತ್ತಾರೆ. ಬೆಳಕಾಗುವ ಪ್ರಮಾಣ – ರಾತ್ರಿಯಾಗುವ ಪ್ರಮಾಣಗಳು ಹೆಚ್ಚು ಕಡಿಮೆ ಯಾಗುವುದಕ್ಕೆ ಕಾರಣಗಳನ್ನು ಈ ಕೃತಿಯಲ್ಲಿ ಪ್ರಸ್ತಾಪಿಸಲಾಗಿದೆ. ಸೂರ್ಯನು ಸಮುದ್ರದಿಂದ ಜಲವನ್ನು ಹೀರಿ ಮಳೆಸುರಿಸುತ್ತಾನೆ. ಚಂದ್ರನು ಭೂಮಿಗೂ ಸೂರ್ಯನಿಗೂ ಸಮಕಕ್ಷೆಯಲ್ಲಿ ಬಂದಾಗ ಅಮಾವಾಸ್ಯೆಯಾಗುತ್ತದೆ. ದಕ್ಷಿಣಾಯನ ಉತ್ತರಾಯಣ, ವಿಷುವದ್ರೇಖೆ ಮತ್ತು ಮೇಷಾದಿ ರಾಶಿಗಳನ್ನು ಶಾಸ್ತ್ರೀಯವಾಗಿ ಗುರುತಿಸಲಾಗಿದೆ. ಭೂಮಿಯ ಛಾಯೆಗೆ (ನೆರಳಿಗೆ) ರಾಹು ಎಂದು ಹೆಸರು. ಈ ರಾಹು ಹುಣ್ಣಿಮೆಯಂದು ಚಂದ್ರನ ಬಳಿಯೂ, ಅಮಾವಾಸ್ಯೆಯಂದು ಸೂರ್ಯನ ಬಳಿಯೂ ಇರುತ್ತದೆ. ಈ ಆಕಾಶದಲ್ಲಿ ಅನಂತಾನಂತ ತಾರಾಪುಂಜಗಳಿವೆ. ಈ ಜ್ಯೋತಿಶ್ಚಕ್ರವು 'ವಾಯುರಶ್ಮಿ'ಗಳಿಂದ ಒಂದಕ್ಕೊಂದು ಬದ್ಧನಾಗಿ ಹಿಡಿಯಲ್ಪಟ್ಟು ಆಕಾಶದಲ್ಲಿ ನಿಂತಿವೆ. ಭೂಮಿಯನ್ನು ಸೂರ್ಯನು ತನ್ನ ಆಕರ್ಷಕ ಶಕ್ತಿಯಿಂದ ಹಿಡಿದು ನಿಲ್ಲಿಸಿದ್ದಾನೆ. ಸೂರ್ಯಾದಿಗ್ರಹಗಳು ಧ್ರುವನಕ್ಷತ್ರದಿಂದ ವಾಯುರಶ್ಮಿಗಳ ಮೂಲಕ ಧರಿಸಲ್ಪಟ್ಟಿವೆ. ಧ್ರುವ ನಕ್ಷತ್ರವನ್ನು ಶಿಶುಮಾರ ನಕ್ಷತ್ರ ಚಕ್ರವು ಹಿಡಿದು ನಿಲ್ಲಿಸಿದೆ. ಶಿಶುಮಾರ ಚಕ್ರವನ್ನು ಅದರ ಸ್ಥಳದಲ್ಲಿ ಹಿಡಿದು ನಿಲ್ಲಿದವನು ಶ್ರೀಮನ್ನಾರಾಯಣನೇ ಎಂದು ಈ ಕೃತಿಯಲ್ಲಿ ಪ್ರಸ್ತಾಪಿಸಲಾಗಿದೆ.

ಹೀಗಾಗಿ ಇಂದಿನ ವಿಜ್ಞಾನಿಗಳೂ ಸಹ ಪೌರಾಣಿಕ ಸಂಗತಿಗಳನ್ನು ತಿಳಿದು ಅಚ್ಚರಿಪಡುವಂತಾಗಿದೆ. "ಯದಿಹಾಸ್ತಿ ನದನ್ಯತ್ರ ಯನ್ನೇಹಾಸ್ತಿನತತ್‌ಕ್ವಚಿತ್" ಎಂಬ ಮಾತು ಶತಶಃ ಸತ್ಯ. ಇದೇ ಭರತಖಂಡದ ಹಿರಿಮೆ ಇವುಗಳ ಬಗ್ಗೆ ನಾವು ವಿಸ್ತಾರವಾಗಿ ತಿಳಿದುಕೊಳ್ಳೋಣ.

**ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್**
**ದೇವೀಂ ಸರಸ್ವತೀಂ ವ್ಯಾಸಂ ತತೋ ಜಯ ಮುದೀರಯೇತ್**

ಶ್ರೀಸೂತ ಉವಾಚ

**ಪರಾಶರಂ ಮುನಿವರಂ ಕೃತ ಪೌರ್ವಾಹ್ಣಿಕ ಕ್ರಿಯಮ್**
**ಮೈತ್ರೈಯಃ ಪರಿಪಪ್ರಚ್ಛ ಪ್ರಣಿಪತ್ಯಾಭಿವಾದ್ಯ ಚ**

**ತ್ವತ್ತೋ ಹಿ ವೇದಾಧ್ಯಯನ ಮಧೀತಮಖಿಲಂ ಗುರೋ**
**ಧರ್ಮ ಶಾಸ್ತ್ರಣಿ ಸರ್ವಾಣಿ ತಥಙ್ಞಾನಿ ಯತಾಕ್ರಮಮ್**
**ತ್ವತ್ಪಸಾದುನ್ಮುನಿ ಶ್ರೇಷ್ಠ ಮಾಮನ್ಯೇ ನಾಕೃತಶ್ರಮಮ್**
**ಪಷ್ಯನ್ತಿ ಸರ್ವಶಾಸ್ತ್ರೇಷು ಪ್ರಾಯಶೋ ಯೇಪಿವಿದ್ವಿಶಃ**
**ಸೋಹಮಿಚ್ಛಾಮಿ ಧರ್ಮಜ್ಞಂ ಶ್ರೋತುಂತ್ವತೋಯಥಾಜಗತ್**

**ಬಭೂವ ಭೂಯಶ್ಚ ಯಥಾ ಮಹಾಭಾಗ ಭವಿಷ್ಯತಿ**

(ವಿ.ಪು. ಅ.1 ಪುಟ 1ರಿಂದ 4 ಶ್ಲೋಕ)

ಬೆಳಗ್ಗೆ ಸಂಧ್ಯಾದಿ ನಿತ್ಯಕರ್ಮವನ್ನು ಮುಗಿಸಿ ಕುಳಿತಿದ್ದ ಪರಾಶರ ಮುನಿಗಳ ಬಳಿಗೆ ಮೈತ್ರೇಯರು ಬಂದು ಸಾಷ್ಟಾಂಗವಾಗಿ ನಮಸ್ಕರಿಸಿ ಅಭಿವಾದನೆ ಮಾಡಿ ಹೀಗೆ ಕೇಳಿದರು. ಗುರುಗಳೇ ತಮ್ಮಿಂದ ಸಕಲ ವೇದಾಧ್ಯಯನ ಮಾಡಿ ಸಮಸ್ತ ಧರ್ಮಶಾಸ್ತ್ರಗಳನ್ನು ಹಾಗೂ ವೇದಾಂಗಗಳನ್ನು ಕ್ರಮವಾಗಿ ಕಲಿತಿದ್ದೇನೆ. ಇನ್ನುಮೇಲೆ ನನ್ನನ್ನು ಶಾಸ್ತ್ರ ಪರಿಣತಿ ಪಡೆದಿಲ್ಲವೆಂ ದು ಯಾರೂ ಹೇಳಲಾರರು.

ಓ ಬ್ರಹ್ಮರ್ಷಿಗಳೇ, ಈ ಜಗತ್ತಿಗೆ ಉಪಾದಾನ ಕಾರಣ ಯಾವುದು ? ಚರಾಚರಾತ್ಮಕವಾದ ಇದು ಯಾರಿಂದ ಉದ್ಭವಿಸಿತು. ಈ ಜಗತ್ತು ಸೃಷ್ಟಿಯಾಗುವ ಮೊದಲು ಎಲ್ಲಿ ಹೇಗೆ ಅಡಗಿತ್ತು. ಮುಂದೆ ಇದು ಎಲ್ಲಿ ಲಯ ಹೊಂದುತ್ತದೆ. ಆಕಾಶಾದಿಗಳ ಪರಿಮಾಣವೆಷ್ಟು ? ದೇವಾದಿದೇವತೆಗಳ ಉತ್ಪತ್ತಿ, ಸಮುದ್ರ ಪರ್ವತಗಳು ಹೇಗೆ ಹುಟ್ಟಿದವು ? ಭೂಮಿಯ ಆಧಾರ, ಸೂರ್ಯಾದಿ ಗ್ರಹ ನಕ್ಷತ್ರಗಳ ಆಧಾರ ಮತ್ತು ಪರಿಮಾಣ, ದೇವಾದಿಗಳ ವಂಶ ಮನುಗಳು, ಮನ್ವಂತರಗಳು, ಚತುರ್ಯುಗ ವಿಶಿಷ್ಟವಾದ ಕಲ್ಪನೆಗಳು, ಕಲ್ಪಬೇಧಗಳು ಪ್ರಳಯದ ಸ್ವರೂಪ, ಸಮಸ್ತ ಯುಗಧರ್ಮಗಳು ದೇವರ್ಷಿಗಳ ಮತ್ತು ರಾಜರ ಚರಿತ್ರೆ ವ್ಯಾಸಮುನಿಗಳು ಮಾಡಿದ ವೇದಶಾಖೆಗಳ ವಿಭಾಗ ಬ್ರಾಹ್ಮಣಾದಿ ವರ್ಣಗಳ ಮತ್ತು ಬ್ರಹ್ಮಚರ್ಯ ಗೃಹಸ್ಥಾದಿ ಆಶ್ರಮಗಳಲ್ಲಿ ಇರುವವರ ಧರ್ಮಗಳು ಯಾವುವು ? ಇವೆಲ್ಲವನ್ನೂ ವಾಸಿಷ್ಠನಂದನರಾದ ತಮ್ಮಿಂದ ಕೇಳಲು ಇಚ್ಛಿಸುತ್ತೇನೆ ಎಂದು ಮೈತ್ರೇಯರು ಹೇಳಿದರು.

ಮೈತ್ರೇಯರ ಉತ್ಸುಕತೆಯನ್ನು ಕಂಡು ಪರಾಶರರಿಗೆ ಬಹಳ ಸಂತಸವಾಯಿತು. ಮೈತ್ರೇಯರ ಸಂದೇಹಗಳನ್ನು ಪರಿಹರಿಸುವ ಮುನ್ನ ಅವರು ತಮ್ಮ ಜೀವನದಲ್ಲಿ ಈ ಹಿಂದೆ ಆದ ಸಂಗತಿಯನ್ನು ಅವರು ಹೀಗೆ ವಿವರಿಸುತ್ತಾರೆ. ವಿಶ್ವಾಮಿತ್ರ ಪ್ರಯುಕ್ತೇನ ರಕ್ಷಸಾ ಭಕ್ಷಿತಃ ಪುರಾಶ್ರುತ್ರಿಸ್ತಾತಸ್ತತಸ್ತತಃ ಕ್ರೋಧೋ ಮೈತ್ರೇಯಾಭೂನ್ಮಮಾತುಲಃ

**ತತೋಹಂ ರಕ್ಷಸಾಂ ಸತ್ರಂ ವಿನಾಶಾಯ ಸಮಾರಭಮ್**
**ಭಸ್ಮೀ ಭೂತಾಶ್ಚ ಶತಶಸ್ತಸ್ಮಿನ್ ಸತ್ರೇನಿಶಾಚರಾ**
**ತತಃ ಸಂಕ್ಷೀಯ ಮಾಣೇಶು ತೇಷು ರಕ್ಷಸ ಶೇಷತಃ**
**ಮಾಮುವಾಚ ಮಹಾಭಾಹೋ ವಸಿಷ್ಠೋ ಮತ್ಪಿತಾಮಹಃ ॥**
**ಅಲಮತ್ಯಂತಕೋಪೇನ ತಾತ ಮನ್ಯು ಮಿಮಂಜಹಿ ।**
**ರಾಕ್ಷಸಾ ನಾಪರಾಧ್ಯನ್ತಿ ಪಿತುಸ್ತೇ ವಿಹಿತಂಹಿತತ್ ॥**
**ಮೂಢಾನಾಮೇವ ಭವತಿ ಕ್ರೋಧೋ ಜ್ಞಾನವತಾಂ ಕುತಃ ।**
**ಹನ್ಯತೇ ತಾತ ಕಃ ಕೇನ ಯತಃ ಸ್ವಕೃತಭುಕ್ಪುಮಾನ್ ॥**
**ಸಂಜಿತಸ್ಯಾಪಿಮಹತಾ ವತ್ಸಕ್ಲೇಶೇನ ಮಾನವೈಃ ।**
**ಯಶಸಸ್ತಪಸಶ್ಚೈವ ಕ್ರೋಧೋ ನಾಶಕರಃ ಪರಃ ॥**
**ಸ್ವರ್ಗಾಪವರ್ಗವ್ಯಾಸೇಧ ಕಾರಣಂ ಪರಮರ್ಷಯಃ ।**
**ವರ್ಜಯಂತಿ ಸದಾ ಕ್ರೋಧಂ ತಾತಮಾ ತದ್ವಶೋಭವ ॥**
**ಅಲಂ ನಿಶಾಚರೈ ರ್ದಗ್ಧೈರ್ದಿನೈರನಪಕಾರಿಭಿಃ ।**
**ಸತ್ರಂ ತೇ ವಿರಮತ್ಯೇ ತತ್ಕ್ಷಮಾಸಾರಾಹಿ ಸಾಧವಃ ॥**

(ವಿ.ಪು. ಪ್ರಥಮಾಂಶ 13ನೇ ಶ್ಲೋಕದಿಂದ 20ನೇ ಶ್ಲೋಕ)

ಮೈತ್ರೇಯ ನನಗೀಗ ನೆನಪಿಗೆ ಬರುತ್ತಿದೆ. ನನ್ನ ತಂದೆಯ ತಂದೆಯವರಾದ ಭಗವಾನ್ ವಸಿಷ್ಠರು ಹೇಳಿದ ಮಾತಿದು.

ಈ ಹಿಂದೆ ವಿಶ್ವಾಮಿತ್ರರಿಂದ ಪ್ರೇರಿತನಾದ ಒಬ್ಬ ರಾಕ್ಷಸನು ನನ್ನ ತಂದೆಯಾದ ಶಕ್ತಿಮಹರ್ಷಿಯನ್ನು ಭಕ್ಷಿಸಿಬಿಟ್ಟನು. ಅದನ್ನು ಕೇಳಿ

ಮೈತ್ರೇಯ ನನಗೆ ಬಹಳ ಕ್ರೋಧ ಉಂಟಾಯಿತು. ಆಗ ನಾನು ರಾಕ್ಷಸರನ್ನು ನಾಶಗೊಳಿಸಬೇಕೆಂದು ಒಂದು ಯಾಗವನ್ನು ಆರಂಭಿಸಿದೆ. ಆಯಾಗದಲ್ಲಿ ನೂರಾರು ರಾಕ್ಷಸರು ಭಸ್ಮವಾಗುತ್ತಿದ್ದರು. ಹೀಗೆ ಅವರೆಲ್ಲರೂ ನಾಶವಾಗುತ್ತಿರಲಾಗಿ ನನ್ನ ಪಿತಾಮಹ (ತಾತ) ರಾದ ವಸಿಷ್ಠರು ಆಗಮಿಸಿ ನನ್ನನ್ನು ಕುರಿತು ಹೀಗೆಂದರು, ಮಗು, ಇಷ್ಟು ಕೋಪಬೇಡ, ಕೋಪವನ್ನು ತ್ಯಜಿಸು ಇದು ರಾಕ್ಷಸರ ತಪ್ಪಲ್ಲ. ನಿನ್ನ ತಂದೆಯ ವಿಧಿಲಿಖಿತ ಹಾಗಿತ್ತು. ವತ್ಸ, ಯಾರನ್ನು ಯಾರು ಕೊಲ್ಲಲು ಸಾಧ್ಯ ? ಮನುಷ್ಯನು ತಾನು ಮಾಡಿದ್ದನ್ನು ಅನುಭವಿಸುತ್ತಾನೆ. ವತ್ಸ ಮಾನವರು ಬಹು ಕ್ಲೇಶದಿಂದ ಯಶಸ್ಸನ್ನು ತಪಶ್ಶಕ್ತಿ ಸಂಪಾದಿಸಬೇಕಾಗುತ್ತದೆ. ಅದನ್ನು ನಾಶಪಡಿಸುವುದರಲ್ಲಿ ಪ್ರಬಲವಾದದ್ದು ಕ್ರೋಧ. ಇದು ಸ್ವರ್ಗ ಮೋಕ್ಷಗಳೆರಡನ್ನೂ ತಡೆಯಲು ಕಾರಣವಾಗಿದೆ. ಆದ್ದರಿಂದಲೇ ಮಹರ್ಷಿಗಳಾದರೂ ಕ್ರೋಧವನ್ನು ವರ್ಜಿಸುತ್ತಾರೆ. ನೀನೂ ಇದಕ್ಕೆ ವಶನಾಗಬೇಡ. ನಿಶಾಚರರನ್ನು ಭಸ್ಮ ಮಾಡುವುದು ಸಾಕು. ಅಲ್ಲದೆ ದೀನರಾದ ಇವರು ನಿನ್ನಲ್ಲಿ ಅಪರಾಧ ಮಾಡಿದವರಲ್ಲ. ಈ ಯುಗವು ನಿಲ್ಲಲಿ. "ತಾಳ್ಮೆಯೇ ಸಜ್ಜನರಿಗೆ ಬಲ" ಎಂದರು. ಪರಾಶರರು ತಮ್ಮ ಪಿತಾಮಹರಾದ ವಸಿಷ್ಠರ ಮಾತನ್ನು ಕೇಳಿ ಒಡನೆಯೇ ಯಾಗವನ್ನು ನಿಲ್ಲಿಸಿದರು. ಅಷ್ಟು ಹೊತ್ತಿಗೆ ಸರಿಯಾಗಿ ಬ್ರಹ್ಮಪುತ್ರರಾದ ಪುಲಸ್ತ್ಯರು ಅಲ್ಲಿಗೆ ಆಗಮಿಸಿದರು. ವಸಿಷ್ಠರು ಅವರಿಗೆ ಅರ್ಘ್ಯಪಾದಾದಿಗಳನ್ನು ಇತ್ತು ಸತ್ಕರಿಸಿದರು. ನಂತರ ಜೇಷ್ಠರೂ ಮಹಾತ್ಮರೂ ಆದ ಪುಲಸ್ತ್ಯರು ಆಸನದಲ್ಲಿ ಕುಳಿತುಕೊಂಡರು. ಮೈತ್ರೇಯನನ್ನು ಉದ್ದೇಶಿಸಿ ಹೀಗೆಂದರು, "ಪರಾಶರ ನಿನಗೆ ರಾಕ್ಷಸರಲ್ಲಿ ಕ್ರೋಧವಿದ್ದರೂ ಸಹ ಹಿರಿಯರಾದ ವಸಿಷ್ಠರ ಮಾತಿಗೆ ಬೆಲೆಕೊಟ್ಟು ತಾಳ್ಮೆಯನ್ನು ವಹಿಸಿದೆ. ಆದ್ದರಿಂದ ಈಗ ನೀನು ಸಮಸ್ತ ಶಾಸ್ತ್ರಗಳ ತತ್ವವನ್ನು ತಿಳಿದವನಾಗುವೆ. ನೀನು ಕ್ರುದ್ಧನಾದರೂ ನನ್ನ ಸಂತತಿಯಾದ ರಾಕ್ಷಸರ ಮೂಲೋಚ್ಛೇದನ ಮಾಡಲಿಲ್ಲ. ಆದ್ದರಿಂದ ನಿನಗೆ ನಾನು ಅಪೂರ್ವವಾದ ವರವನ್ನು ಕೊಡುವೆನು. ನೀನು ಪುರಾಣಸಂಹಿತೆಯ ಕರ್ತನಾಗುವೆ. ಸಮಸ್ತ ದೇವತೆಗಳ ಯಥಾರ್ಥ ಸ್ವರೂಪವು ನಿನಗೆ ತಿಳಿಯುತ್ತದೆ" ಎಂದರು– ಅದರಂತೆ ಮೈತ್ರೇಯ ಹೀಗೆ ಜ್ಞಾನಿಗಳಾದ ವಸಿಷ್ಠರು, ಪುಲಸ್ತ್ಯರು ಏನು ಹೇಳಿದ್ದರೋ ಅದೆಲ್ಲವೂ ನಿನ್ನ ಪ್ರಶ್ನೆಯಿಂದ ಈಗ ಸ್ಮರಣೆಗೆ ಬರುತ್ತಿದೆ.

ಆದ್ದರಿಂದ ನಾನು ಈಗ ಪ್ರಶ್ನಿಸುತ್ತಿರುವ ನಿನಗೆ ಪುರಾಣ ಸಂಹಿತೆಯನ್ನು ವಿವರಿಸುವೆ ಎಂದು ಹೇಳಿ ಪರಾಶರರು ಮೈತ್ರೇಯರಿಗೆ ವಿಷ್ಣುವಿನ ಮಹಿಮೆಯನ್ನು ಸವಿಸ್ತಾರವಾಗಿ ಹೇಳಲು ಆರಂಭಿಸಿದರು.

**ವಿಷ್ಣೋಃ ಸಕಶಾದುದ್ಭೂತಂ ಜಗತ್ತತ್ರೈವ ಚಸ್ಥಿತಮ್**

**ಸ್ಥಿತಿ ಸಂಯಮಕರ್ತಾಸೌ ಜಗತೋಽಸ್ಯ ಜಗಚ್ಚ ಸಃ**

ಈ ಜಗತ್ತು ಮಹಾವಿಷ್ಣುವಿನಿಂದಲೇ ಹುಟ್ಟಿದೆ. ಅವನಲ್ಲಿಯೇ ನಿಂತಿದೆ. ವಿಷ್ಣುವೇ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕರ್ತನು. ಅವನೇ ಈ ಜಗತ್ತು ಎಂದು ಪರಾಶರರು ಮೈತ್ರೇಯನಿಗೆ ವಿಷ್ಣುವಿನ ಮಹಾತ್ಮೆಯನ್ನು ತಿಳಿಸಲು ಆರಂಭಿಸಿದರು. ಇದಕ್ಕೆ ಮೊದಲು ಭಗವಾನ್ ವಿಷ್ಣುವನ್ನು ಹೀಗೆ ಸ್ತೋತ್ರ ಮಾಡಿದರು.

**ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ ।**
**ಸದೈಕರೂಪರೂಪಾಯ ವಿಷ್ಣವೇ ಸರ್ವ ಜಿಷ್ಣವೇ ॥**
**ನಮೋ ಹಿರಣ್ಯಗರ್ಭಾಯ ಹರಯೇ ಶಂಕರಾಚ ।**
**ವಾಸುದೇವಾಯ ತಾರಾಯ ಸರ್ಗಸ್ಥಿತ್ಯನ್ತಕಾರಿಣೇ ॥**
**ಏಕಾನೇಕಸ್ವರೂಪಾಯ ಸ್ಥೂಲಸೂಕ್ಷ್ಮಾತ್ಮನೇ ನಮಃ ।**
**ಅವ್ಯಕ್ತ ವ್ಯಕ್ತರೂಪಾಯ ವಿಷ್ಣವೇ ಮುಕ್ತಿಹೇತವೇ ॥**
**ಸರ್ಗಸ್ಥಿತಿವಿನಾಶಾನಾಂ ಜಗತೋ ಯೋ ಜಗನ್ಮಯಃ ।**
**ಮೂಲಭೂತೇ ನಮಸ್ತಸ್ಮೈ ವಿಷ್ಣವೇ ಪರಮಾತ್ಮನೇ ॥**
**ಆಧಾರಭೂತಂ ವಿಶ್ವಸ್ಯಾಪ್ಯಣೀಯಾಂಸ ಮಣೀಯ ಸಾಮ್ ।**
**ಪ್ರಣಮ್ಯ ಸರ್ವಭೂತಸ್ಥಮಚ್ಯುತಂ ಪುರುಷೋತ್ತಮಮ್ ॥**
**ಜ್ಞಾನಸ್ವರೂಫಮತ್ಯನ್ತ ನಿರ್ಮಲಂ ಪರಮಾರ್ಥತಃ ।**
**ತಮೇ ವಾರ್ಥಸ್ವರೂಪೇಣ ಭ್ರಾನ್ತಿದರ್ಶನತಃ ಸ್ಥಿರಮ್ ॥**
**ವಿಷ್ಣುಂ ಗ್ರಸಿಷ್ಣುಂ ವಿಶ್ವಸ್ಯ ಸ್ಥಿತೌ ಸರ್ಗೇ ತಥಾ ಪ್ರಭುಮ್ ।**
**ಪ್ರಣಮ್ಯ ಜಗತಾಮೀಶಮಜ ಮಕ್ಷಯಮವ್ಯಯಮ್ ॥**

(ಪ್ರಥಮಾಂಶ ಅಧ್ಯಾಯ 2ನೇ ಶ್ಲೋಕದಿಂದ 7ರವರೆಗೆ)

ಭಗವಾನ್ ಬ್ರಹ್ಮನು ಈ ಜಗತ್ತಿನ ಉತ್ಪತ್ತಿಕ್ರಮವನ್ನು ದಕ್ಷಾದಿಮುನಿಗೆ ತಿಳಿಸಿದನು. ದಕ್ಷಾದಿಮುನಿಗಳು ಪುರುಕುತ್ಸನೆಂಬ ರಾಜನಿಗೆ ನರ್ಮದಾ ತೀರದಲ್ಲಿ ಹೇಳಿದನು. ಅವನು ಹೇಳಿದ ವಿಷಯವನ್ನು ನಿನಗೆ ಹೇಳುತ್ತೇನೆ ಕೇಳು ಎಂದು ಪರಾಶರರು ಆರಂಭಿಸಿದರು.

ನಮ್ಮ ದೇಹದಲ್ಲಿ ಪರಮಾತ್ಮನು ನೆಲಸಿದ್ದಾನೆ. ಅವನು ಪರಗಳಾದ ಇಂದ್ರಿಯಾದಿಗಳಿಗೂ ಅಗೋಚರವಾಗಿ ಪರ ಎಂದೆನಿಸಿಕೊಂಡಿದ್ದಾನೆ. ಅವನಿಗೆ ರೂಪವರ್ಣಾದಿಯಾದ ವಿಶೇಷಗಳು ಯಾವುದೂ ಇಲ್ಲ. ಅವನಿಗೆ ಕ್ಷಯವಿನಾಶಗಳಿಲ್ಲ. ಪರಿಣಾಮ, ವೃದ್ಧಿಗಳಿಲ್ಲ, ಜನ್ಮವಿಲ್ಲ ಆದರೆ ಅವನು ಎಲ್ಲೆಲ್ಲಿಯೂ **ಅಸ್ತಿ–ಸತ್** ಎಂದು ಮಾತ್ರ ಹೇಳುತ್ತಾರೆ. ಆದ್ದರಿಂದಲೇ ಅವನನ್ನು ವಾಸುದೇವ ಎನ್ನುತ್ತಾರೆ. (ವಸತೀತಿ ವಾಸು ; ದೀವ್ಯತಿಇತಿ ದೇವಃ) ಪ್ರಕಾಶಿಸುತ್ತಾನೆಯಾದ್ದರಿಂದ ದೇವ. ವಾಸುವಾದ ದೇವ ವಾಸುದೇವ. ಅದೇ ಪರಬ್ರಹ್ಮ, ಅವನು ನಿತ್ಯನೂ, ಅಜನೂ, ಅಕ್ಷಯನೂ, ಅವ್ಯಯನು ಆಗಿದ್ದಾನೆ. ಸದಾ ಏಕಸ್ವರೂಪನಾದದ್ದು ಈ ಪರ. ವ್ಯಕ್ತವೂ ಅವ್ಯಕ್ತವೂ ಆದ ಸ್ವರೂಪವುಳ್ಳ ಕಾರ್ಯಕಾರಣಾತ್ಮಕವಾದ ಈ ಜಗತ್ತೆಲ್ಲವೂ ಆ ಪರಬ್ರಹ್ಮನೇ. ಇದು ಪುರುಷ ರೂಪದಲ್ಲೂ ಕಾಲ ರೂಪದಲ್ಲೂ ಇದೆ. ಆ ಪರಬ್ರಹ್ಮದ ಶ್ರೇಷ್ಠವಾದ ರೂಪವೇ ಪುರುಷ (ಜೀವ) ವ್ಯಕ್ತ ಮತ್ತು ಅವ್ಯಕ್ತಗಳು (ಜಗತ್ತು) ಅದರ ಇನ್ನೆರಡು ರೂಪಗಳು.

ಹೀಗೆ ಪ್ರಧಾನ (ಅವ್ಯಕ್ತ) ಪುರುಷ ವ್ಯಕ್ತ ಮತ್ತು ಕಾಲಗಳಿಗೆ ಪರಮಮೂಲವೆಂದು ಜ್ಞಾನಿಗಳು ಯಾವುದನ್ನು ತಿಳಿದಿದ್ದರೋ ಅದೇ ಶುದ್ಧವಾದ ವಿಷ್ಣುವಿನ ಪರಮಪದ.

**ಪ್ರಧಾನಪುರುಷವ್ಯಕ್ತ ಕಾಲಾನಾಂ ಪರಮಂಹಿತತ್**
**ಪಶ್ಯನ್ತಿ ಸೂರಯಃ ಶುದ್ಧಂ ತದ್ವಿಷ್ಣೋಃ ಪರಮಂಪದಮ್**

(ಪು.ಅ.2–16)

ನಿತ್ಯಸೂರಿಗಳು ವಿಷ್ಣುವಿನ ಲೋಕ ಪರಮಪದದಲ್ಲಿ ವಿಷ್ಣುಸೇವಾನಿರತರಾಗಿರುತ್ತಾರೆ. ಪ್ರಧಾನ ಎಂದರೆ ಅವ್ಯಕ್ತ ಪ್ರಕೃತಿ ಪುರುಷ

(ಜೀವಾತ್ಮ) ಅವ್ಯಕ್ತ (ಪೃಥ್ವಿ) ಮತ್ತು ಕಾಲ ಇವು ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳು ನಡೆಯುತ್ತಿರುವುದಕ್ಕೆ ಕಾರಣವಾದವು. ವಿಷ್ಣುವಿನ ರೂಪಗಳು ವ್ಯಕ್ತ, ಅವ್ಯಕ್ತ, ಪುರುಷ, ಕಾಲ – ಇವು ನಾಲ್ಕು ವಿಷ್ಣುವಿನ ರೂಪಗಳು ಎಂದು ಸ್ಪಷ್ಟವಾಗುತ್ತದೆ.

ಈ ಜಗವೇ ಒಂದು ನಾಟಕರಂಗ. ಆಟವಾಡುವ ಬಾಲಕನ ಚೇಷ್ಟೆಯಂತೆ ಪರಮಾತ್ಮನ ಲೀಲಾಚೇಷ್ಟಿತಗಳೇ ಜಗತ್ತಿಗೆ ಕಾರಣವಾದ ಯಾವ ಅವ್ಯಕ್ತ ಉಂಟೋ ಅದನ್ನು ಋಷಿಮುನಿಗಳು ಪ್ರಧಾನವೆಂದೂ ಹೇಳುತ್ತಾರೆ. ಅಂದರೆ ಅದಕ್ಕೆ ಜನನ, ಬಾಲ್ಯ, ಯೌವನ, ವೃದ್ಧಾಪ್ಯ ಮುಂತಾದ ವಿಕಾರಗಳಿರುವುದಿಲ್ಲ. ಅದು (ಅವ್ಯಕ್ತ) ಕಾರ್ಯಕಾರಣ ರೂಪವುಳ್ಳದ್ದು. ಅಂದರೆ ಸತ್ಕಾರ್ಯ, ಅಸತ್ಕಾರ್ಯಗಳಿಂದ ಕೂಡಿದೆ. ಅದು ಎಂದಿಗೂ ಕ್ಷಯಿಸುವುದಿಲ್ಲ. ಆಧಾರರಹಿತವಾದುದು. ಅಜರಾಮರವೂ, ಶಾಶ್ವತವೂ ಆದದ್ದು. ಈ ಅವ್ಯಕ್ತ ಶಬ್ದ, ಸ್ಪರ್ಶ, ರೂಪಾದಿಗಳಿಲ್ಲ. ಈ ಅವ್ಯಕ್ತವು ತ್ರಿಗುಣಾತ್ಮಕವಾದದ್ದು. ಇದು ಇಡೀ ಜಗತ್ತಿಗೆ ಕಾರಣವಾದದ್ದು. ಇದಕ್ಕೆ ಆದಿ ಇಲ್ಲ. ಹುಟ್ಟುವ ಪದಾರ್ಥಗಳೆಲ್ಲ ಇದರಲ್ಲಿ ಲೀನವಾಗುತ್ತದೆ. ಈ ಹಿಂದೆ ಪ್ರಳಯವಾದ ಮೇಲೆ ಎಲ್ಲೆಲ್ಲಿಯೂ ಈ ಪ್ರಧಾನ ಅವ್ಯಕ್ತ ಪ್ರಕೃತಿ ವ್ಯಾಪಿಸಿಕೊಂಡಿತ್ತು. ಪ್ರಳಯದಲ್ಲಿ ಈ ವ್ಯಕ್ತವಾದ ಜಗತ್ತು ಪ್ರಕೃತಿಯಲ್ಲಿ (ಪ್ರಧಾನದಲ್ಲಿ) ಲೀನವಾಗಿತ್ತು. ಆದ್ದರಿಂದ ಈ ಪ್ರಳಯವು ಪ್ರಾಕೃತವೆನಿಸುತ್ತದೆ. ಭಗವಂತನ ಕಾಲವು ಅನಾದಿಯದದ್ದು. ಅದಕ್ಕೆ ಅಂತ್ಯವೇ ಇಲ್ಲ. ಆದ್ದರಿಂದ ಸೃಷ್ಟಿ, ಸ್ಥಿತಿ, ಪ್ರಳಯಗಳು ನಿಯಮದಿಂದ ವಿಚ್ಛೇದವಿಲ್ಲದೆ ಬರುತ್ತಲೇ ಇರುತ್ತವೆ. ಹೀಗೆ ಪ್ರಳಯಕಾಲದಲ್ಲಿ ಪ್ರಧಾನವು ಗುಣಸಾಮ್ಯದಿಂದ ಪುರುಷನು (ಜೀವಾತ್ಮ) ಅದರಿಂದ ವಿಯುಕ್ತನಾಗಿಯು ಇರುತ್ತಾನೆ. ನಂತರ ವಿಷ್ಣುವಿನ ಕಾಲವೆಂಬ ಸ್ವರೂಪವು (ಪ್ರಧಾನಪುರುಷರನ್ನು ಕೂಡಿಸುವ ಕಾರ್ಯದಲ್ಲಿ ಪ್ರವೃತ್ತವಾಗುತ್ತದೆ. ಆಗ ಸೃಷ್ಟಿ ಕಾಲವು ಪ್ರಾಪ್ತವಾದ್ದರಿಂದ ಪರಮಾತ್ಮ ಪರಬ್ರಹ್ಮ, ಜಗನ್ಮಯನಾದವನು, ಪರಮೇಶ್ವರನೆನಿಸಿದ.

ಹರಿಯು ತನ್ನ ಇಚ್ಛೆಯಿಂದ ಪ್ರಧಾನಪುರುಷರನ್ನು ಪ್ರವೇಶ ಮಾಡಿ ವಿಕಾರಿಯಾದ ಪ್ರಧಾನವನ್ನೂ, ಅವಿಕಾರಿಯಾದ ಪುರುಷನನ್ನೂ

ಕ್ಷೋಭೆಗೊಳಿಸಿದ. ಸರ್ವೇಶ್ವರನಾದ ವಿಷ್ಣುವೇ ವಿಕಾಸಗೊಂಡ ಪೃಥಿವ್ಯಾದಿರೂಪದಿಂದಲೂ ಅಣುರೂಪದಿಂದಲೂ ಬ್ರಹ್ಮಾದಿದೇವತಾ ಸ್ವರೂಪದಿಂದಲೂ ವ್ಯಕ್ತವಾದ ಮಹತತ್ವಾದಿರೂಪನಾಗಿಯೂ ಇದ್ದಾನೆ. ಪ್ರಕೃತಿಯಲ್ಲಿ ಕ್ಷೇತ್ರಜ್ಞನು ಈಶ್ವರನು ಸೃಷ್ಟಿಕಾರ್ಯದಲ್ಲಿ ಪ್ರವೇಶಿಸಿದಾಗ (ಕ್ಷೋಭೆಗೊಂಡ ಪ್ರಕೃತಿಯ ಏರುಪೇರಿನಿಂದ) ಮಹತತ್ವವೆಂಬ ವ್ಯಕ್ತವಸ್ತುವಿನ ಉತ್ಪತ್ತಿಯಾಗುತ್ತದೆ. ಉತ್ಪನ್ನವಾದ ಮಹತತ್ವವನ್ನು ಪ್ರಧಾನವು (ಪರಮಾತ್ಮ) ಆವರಿಸಿಕೊಂಡಿತು. ಮಹತತ್ವವೆಂದರೆ ಬುದ್ಧಿ. ಇದನ್ನು ಮನಸ್ಸು, ಚಿತ್ ಪ್ರಜ್ಞೆ, ಸಂವಿತ್, ಬ್ರಹ್ಮಾ, ಈಶ್ವರ ಎಂದೂ ವ್ಯವಹರಿಸಿದ್ದಾರೆ.

ಈ ಮಹತ್ತಾದರೋ ಸಾತ್ವಿಕ, ರಾಜಸ, ತಾಮಸವೆಂಬ ಮೂರುಗುಣಗಳಿಂದ ಕೂಡಿರುತ್ತದೆ. ಈ ಮಹತತ್ವದಿಂದ ಸಾತ್ವಿಕ, ರಾಜಸ, ತಾಮಸ ಎಂಬ ಮೂರು ಬಗೆಯ ಅಹಂಕಾರ ಹುಟ್ಟಿತು. ಈ ಅಹಂಕಾರವು ತ್ರಿಗುಣಾತ್ಮಕವಾಗಿದ್ದರಿಂದ ಪ್ರಥಿವ್ಯಾಧಿ ಭೂತಗಳ ಮತ್ತು ಇಂದ್ರಿಯಗಳ ಉತ್ಪತ್ತಿಗೆ ಕಾರಣವಾಗಿದೆ. ಈ ಮಹತ್ತು ಬೀಜವು ಸಿಪ್ಪೆಯಿಂದ ಆವರಿಸಲ್ಪಟ್ಟಿರುವಂತೆ ಪ್ರಧಾನದಿಂದ ಆವೃತ್ತವಾಗಿದೆ. ಸಾತ್ವಿಕ, ರಾಜಸ, ತಾಮಸ ಎಂಬ ಅಹಂಕಾರವು ಮಹತ್ತಿನಿಂದ ಆವೃತವಾಗಿದೆ. ಭೂತಾದಿಯೆಂಬ ತಾಮಸಾಹಂಕಾರವು ವಿಕಾರಗೊಂಡು ಶಬ್ದತನ್ಮಾತ್ರೆಯನ್ನು ಉಂಟುಮಾಡಿತು. ಈ ಭೂತಾದಿಯೆಂಬ ಅಹಂಕಾರವು ಶಬ್ದ ತನ್ಮಾತ್ರೆಯಿಂದ ಶಬ್ದಗುಣಕವಾದ ಆಕಾಶವನ್ನು ನಿರ್ಮಿಸಿತು. ಭೂತಾದಿಯು ಶಬ್ದತನ್ಮಾತ್ರವನ್ನೂ ಅದು ವಾಯುವನ್ನೂ ನಿರ್ಮಿಸಿದವು. ವಾಯುವಿನ ಗುಣ, ಸ್ಪರ್ಶ, ಶಬ್ದ ತನ್ಮಾತ್ರವು ಆಕಾಶವನ್ನು ಸ್ಪರ್ಶತನ್ಮಾತ್ರವನ್ನು ಅಂದರೆ ವಾಯುವನ್ನು ಆಕ್ರಮಿಸಿಕೊಂಡಿತು. ನಂತರ ವಾಯುವು ವಿಕೃತವಾಗಿ ರೂಪತನ್ಮಾತ್ರವನ್ನು ಸೃಜಿಸಿತು. ಆ ವಾಯುವಿನಿಂದ (ರೂಪತನ್ಮಾತ್ರದ ಮೂಲಕ) ಅಗ್ನಿ ಹುಟ್ಟುತ್ತದೆ. ಅದರ ಗುಣ, ರೂಪ, ಸ್ಪರ್ಶ ತನ್ಮಾತ್ರದಿಂದ ಕೂಡಿದ ವಾಯುವು ರೂಪಮಾತ್ರೆಯನ್ನು ಅಗ್ನಿಯನ್ನೂ ಆವರಿಸಿತು. ರೂಪತನ್ಮಾತ್ರೆಯು ರಸತನ್ಮಾತ್ರೆಯನ್ನೂ ಜಲವನ್ನೂ ಆವರಿಸಿತು. ಜಲವು ವಿಕೃತನಾಗಿ ಗಂಧಮಾತ್ರೆಯನ್ನು ಸೃಷ್ಟಿಸಿತು. ಅದರಿಂದ ಪೃಥ್ವಿ ಸಂಘಾತವು ಜನಿಸುತ್ತದೆ. ಅದರ ಗುಣಗಂಧ ಹೀಗಾಗಿ ಈ ಆಕಾಶಾದಿ ಭೂತದಲ್ಲಿ ಶಬ್ದಾದಿ ತನ್ಮಾತ್ರೆ ಇದೆ. ಈ ಮಹಾದಾದಿ ಪಂಚಭೂತಗಳು ನಾನಾ ಬಗೆಯ

ಶಕ್ತಿಯುಳ್ಳವು. ಇವು ಎಲ್ಲ ಬಗೆಯಲ್ಲಿಯೂ ಒಟ್ಟುಸೇರಿ ಸಂಘಾತವಾಗದೆ ಪ್ರಜೆಗಳನ್ನು (ಜಗತ್ತನ್ನು) ನಿರ್ಮಿಸಲು ಅಸಮರ್ಥವಾದವು. ಆದ್ದರಿಂದ ಅವು ಅನ್ಯೋನ್ಯವಾಗಿ ಸೇರಿಹೋದವು. ಒಂದನ್ನೊಂದು ಆಶ್ರಯಿಸಿ ಎಲ್ಲವೂ ಸೇರಿ ಒಂದು ಸಂಘಾತವಾದವು. ಪರಮಾತ್ಮನು ಅದಿಷ್ಠಿತನಾದ್ದರಿಂದ ಪ್ರಧಾನವು ಅನುಗ್ರಹಿಸಿದ್ದರಿಂದ ಮಹದಾದಿಗಳು ಪಂಚಭೂತಾಂಶ ಪದಾರ್ಥಗಳು ಒಂದು ಅಂಡವನ್ನು ಉತ್ಪಾದಿಸಿದವು. ಈ ಅಂಡವು ಪಂಚಭೂತಗಳಿಂದ ಕ್ರಮವಾಗಿ ವರ್ಧಿಸಿ ಮಹತ್ತರವಾದ ಅಂಡವಾಗಿ, ನೀರಿನಗುಳ್ಳೆಯಂತೆ ನೀರಿನಲ್ಲಿ ನಿಂತಿತು. ಬ್ರಹ್ಮರೂಪನಾದ ವಿಷ್ಣುವಿಗೆ ಅದು ಪ್ರಕೃತಿ ನಿರ್ಮಿತವಾದ ಸ್ಥಾನವೆನಿಸಿತು. ಸ್ವಯಂ ಅವ್ಯಕ್ತವಾದ ಜಗದೀಶ್ವರನು, ವ್ಯಕ್ತರೂಪವನ್ನು ಧರಿಸಿ ಬ್ರಹ್ಮನಾಗಿ (ಹಿರಣ್ಯಗರ್ಭಬ್ರಹ್ಮ) ಈ ಅಂಡದಲ್ಲಿ ವ್ಯವಸ್ಥಿತನಾದನು. ಮಹಾತ್ಮ ಹಿರಣ್ಯಗರ್ಭನಿಗೆ ಮೇರುವೇ ಗರ್ಭದ ಪೊರೆಯಾಯಿತು. ಪರ್ವತಗಳು ಗರ್ಭಕೋಶ ಸಮುದ್ರಗಳು ಗರ್ಭಕೋಶದ ನೀರು, ಸರ್ವತ ದ್ವೀಪ ಸಮುದ್ರಗಳೂ ಗ್ರಹನಕ್ಷತ್ರಗಳಿಂದಲೂ ದೇವಾಸುರಮಾನುಷರಿಂದಲೂ ಸೇರಿ ಈ ಲೋಕಸಮುದಾಯವೂ ಆ ಬ್ರಹ್ಮಾಂಡದೊಳಗೆ ನಿರ್ಮಿತವಾದವು. ಈ ಬ್ರಹ್ಮಾಂಡವನ್ನು ಹೊರಗಿನಿಂದ ಜಲ, ಅಗ್ನಿ, ವಾಯು, ಆಕಾಶ, ಭೂತಾದಿಯೆಂಬ ಅಹಂಕಾರಗಳು ಒಂದಕ್ಕಿಂತ ಇನ್ನೊಂದು ಹತ್ತರಷ್ಟು ಪರಿಮಾಣವುಳ್ಳದ್ದಾಗಿ ವ್ಯಾಪಿಸಿದೆ. ನಂತರ ವಿಶ್ವಾದಿಪನಾದ ಹರಿಯು ರಜೋಗುಣವನ್ನು ಆಶ್ರಯಿಸಿ ಚತುರ್ಮುಖ ಬ್ರಹ್ಮನಾಗಿ ಜಗತ್ತಿನ ಸೃಷ್ಟಿಯಲ್ಲಿ ಪ್ರವೃತ್ತನಾಗುತ್ತಾನೆ. ಅದೇ ಅಪ್ರಮೇಯದ ವಿಷ್ಣುವು ಸತ್ವಗುಣವನ್ನಾಶ್ರಯಿಸಿ ತಾನು ಸೃಷ್ಟಿಸಿದ ಜಗತ್ತನ್ನು ಎಲ್ಲ ಯುಗಗಳಲ್ಲಿಯೂ ಮುಂದೆ ಪ್ರಳಯವಾಗುವವರೆಗೆ ರಕ್ಷಿಸುತ್ತಾನೆ. ಆ ಜನಾರ್ಧನನೇ ತಮೋಗುಣವನ್ನು ಆಶ್ರಯಿಸಿ ರುದ್ರರೂಪದಿಂದ ಅತಿಭೀಕರನಾಗಿ ಸಕಲಭೂತಗಳನ್ನು ಭಕ್ಷಿಸಿದ ಮೇಲೆ ವಿಶ್ವವೆಲ್ಲವೂ ಜಲಮಯವಾಗುತ್ತದೆ. ಅಲ್ಲಿ ಆದಿಶೇಷನೆಂಬ ಪರ್ಯಂಕಶಯನದಲ್ಲಿ ವಿಷ್ಣುಪರಮಾತ್ಮ ಪವಡಿಸುತ್ತಾನೆ, ಆದರೆ ಆ ವಿಷ್ಣುವಿನ ನಿದ್ರೆ ಯೋಗನಿದ್ರೆ ನಮ್ಮಂತ ಹುಲುಮಾನವರದು ಗಾಢನಿದ್ರೆ. ಇರಲಿ ಯೋಗನಿದ್ರೆಯಿಂದ ಎಚ್ಚೆತ್ತನಂತರ ಮತ್ತೆ ಬ್ರಹ್ಮರೂಪವನ್ನು ಧರಿಸಿ ಜಗತ್ತಿನ ಸೃಷ್ಟಿಕಾರ್ಯದಲ್ಲಿ ತೊಡಗುತ್ತಾನೆ. ಹೀಗೆ ಆ ಒಬ್ಬ ಭಗವಂತನೇ

ಸೃಷ್ಟಿ, ಸ್ಥಿತಿ, ಲಯಕಾರ್ಯಗಳನ್ನು ಮಾಡತಕ್ಕ ಬ್ರಹ್ಮ–ವಿಷ್ಣು–ಶಿವ ಎಂಬ ಮೂರು ಹೆಸರನ್ನು ಧರಿಸುತ್ತಾನೆ. 'ಪುರುಷ ಏವೇಗಮ್ ಸರ್ವಮ್' – ಎಂಬ ಪುರುಷಸೂಕ್ತದ ಸೂಕ್ತಿಯೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿ.

**ಸ ಏವ ಸೃಜ್ಯಃ ಸ ಚ ಸರ್ಗಕರ್ತಾ**

**ಸ ಏವ ಪಾತ್ಯಕ್ತಿ ಚಪಾಲ್ಯತೇಚ**

**ಬ್ರಹ್ಮಾದ್ಯವಸ್ಥಾಭೀರಶೇಷ ಮೂರ್ತಿ**

**ವಿಷ್ಣುರ್ವರಿಷ್ಠೋ ವರದೋ ವರೇಣ್ಯಃ**

(ವಿ.ಪು. ಅ. 2–ಪ್ರಥಮಾಂಶ 70ನೇ ಶ್ಲೋಕ)

ಸರ್ವಸ್ವರೂಪನೂ ಶ್ರೇಷ್ಠನೂ ವರದನೂ ವರೇಣ್ಯನೂ ಆದ ವಿಷ್ಣುವೇ ಬ್ರಹ್ಮಾದಿರೂಪಗಳಿಂದ ತನ್ನನ್ನು ತಾನೇ ಸೃಷ್ಟಿಸಿಕೊಂಡು ಸೃಷ್ಟಿಕರ್ತನಾಗುತ್ತಾನೆ. ತಾನೇ ತನ್ನನ್ನು ಪಾಲಿಸಿಕೊಳ್ಳುತ್ತಾನೆ. ತಾನೇ ಭಕ್ಷಿಸುತ್ತಾನೆ. ಅಂದರೆ ಉಪಸಂಹೃತನಾಗುತ್ತಾನೆ. ಮೈತ್ರೇಯನಿಗೆ ಪರಾಶರರು ಹೇಳಿದ ಮಾತು. ನಾರಾಯಣನೊಬ್ಬನೇ ಸ್ಥಿತಿ ಲಯಗಳಿಗೆ ಕಾರಣನು ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಆಗ ಮತ್ತೆ ಪರಾಶರರು ಸಮಸ್ತ ಪದಾರ್ಥಗಳ ಶಕ್ತಿಗಳೂ, ಚಿಂತನೆಗಳು ಮತ್ತು ಜ್ಞಾನಗಳಿಗೆ ಗೋಚರಿಸುವಂತಿಲ್ಲ. ಅಂತೆಯೇ ಬ್ರಹ್ಮದಲ್ಲಿರುವ ಅಂತಃಶಕ್ತಿಗಳೂ ಗೋಚರವಾಗುವುದಿಲ್ಲ. ಅದು ಅಗ್ನಿಯಲ್ಲಿರುವ ಉಷ್ಣತಾ ಶಕ್ತಿಯಂತೆ ಎಂದು ಹೇಳುತ್ತಾ ಭಗವಂತನ ಸೃಷ್ಟಿಕಾರ್ಯದಲ್ಲಿ ಹೇಗೆ ಪ್ರವೃತ್ತನಾಗುತ್ತಾನೆ ಎಂಬುದನ್ನು ವಿವರಿಸುತ್ತಾರೆ. ಮುಂದೆ ಬ್ರಹ್ಮಾದಿಗಳ ಆಯಸ್ಸು ಕಾಲದ ಸ್ವರೂಪ ಮತ್ತು ವಿಭಜನೆ ಮುಂತಾದವುಗಳ ಬಗ್ಗೆ ಸವಿಸ್ತಾರವಾಗಿ ಮೈತ್ರೇಯರಿಗೆ ವಿವರಿಸುತ್ತಾರೆ.

**ನಾರಾಯಣಾಖ್ಯೋ ಭಗವಾನ್ ಬ್ರಹ್ಮಲೋಕಪಿತಾಮಹಃ**

**ಉತ್ಪನ್ನಃ ಪ್ರೋಚ್ಯತೇ ವಿದ್ವನ್ನಿತ್ಯ ಏವೋಪಚಾರತಃ**

ನಾರಾಯಣ ಎಂಬ ಹೆಸರಿನ ಆ ಭಗವಂತನೇ ಲೋಕಪಿತಾಮಹ ಬ್ರಹ್ಮನಾಗಿದ್ದಾನೆ. ಬ್ರಹ್ಮನು ಕಮಲದಲ್ಲಿ ಉತ್ಪನ್ನನಾದವನೆಂದು ಔಪಚಾರಿಕವಾಗಿ

ಹೇಳುತ್ತಾರೆ. ಆತನು ನಿತ್ಯನಾದವನು. ಬ್ರಹ್ಮನಿಗೆ ತನ್ನ ಬ್ರಹ್ಮಮಾನದಿಂದ ಆಯಸ್ಸು ನೂರುವರ್ಷ. ಬ್ರಹ್ಮನು ಈ ನೂರು ವರ್ಷಗಳಿಗೆ ಪರವೆಂದೂ, ಅದರ ಅರ್ಧಪ್ರಮಾಣಕ್ಕೆ ಪರಾರ್ಧವೆಂದು ಹೆಸರು. ಪರಾಶರರು ಬ್ರಹ್ಮನ, ಪ್ರಾಣಿಗಳ, ಪರ್ವತಸಮುದ್ರಗಳು, ಸ್ಥಾವರ ಜಂಗಮಗಳ ಆಯಸ್ಸನ್ನು ಅಳೆಯುವ ವಿಧಾನವನ್ನು ತಿಳಿಸುತ್ತಾ ಹೀಗೆಂದರು.

**ಕಾಷ್ಠಾ ಪಂಚದಶಾಖ್ಯಾತಾ ನಿಮೇಷಾ ಮುನಿಸತ್ತಮ**
**ಕಾಷ್ಠಾತ್ರಿಂಶತ್ಕಲಾ ತ್ರಿಂಶತ್ಕಲಾ ಮೌಹೂರ್ತಿಕೋ ವಿಧಿಃ**
**ತಾವತ್ ಸಂಖ್ಯೆ ಅಹೋರಾತ್ರಾಂ ಮುಹೂರ್ತೈರ್ಮಾನುಷಂ ಸ್ಮೃತಮ್**
**ಅಹೋರಾತ್ರಾಣಿ ತಾವಂತಿ ಮಾಸಃ ಪಕ್ಷದ್ವಯಾತ್ಮಕಃ**
**ತೈಃ ಷಡ್‌ಭಿರಯನಂ ವರ್ಷಂ ದ್ವೇಯನೇ ದಕ್ಷಿಣೋತ್ತರೇ**
**ಅಯನಂ ದಕ್ಷಿಣಂ ರಾತ್ರಿರ್ದೇವಾನಾಂ ಮುತ್ತರಂ ದಿನಮ್ ॥**
**ದಿವ್ಯೋರ್ವರ್ಷಸಹಸ್ರೈಸ್ತು ಕೃತ ತ್ರೇತಾದಿಸಂಜ್ಞಿತಮ್ ।**
**ದಿವ್ಯಾಬ್ದಾನಾಂ ಸಹಸ್ರಾಣಿ ಯುಗೇಷ್ವಹುಃ ಪುರಾವಿದಃ ॥**
**ಶತ್ಪ್ರಮಾಣೈ ಶತೈಃ ಸಂಧ್ಯಾಪೂರ್ವ ತತ್ರಾಬಿಧೀಯತೇ ।**
**ಸಂಧ್ಯಾಂಶಶ್ಚೈವ ತತ್ತುಲ್ಯೋ ಯುಗಸ್ಯಾನನ್ತರೋ ಹಿದಃ ॥**
**ಸಂಧ್ಯಾ ಸಂಧ್ಯಾಂಶಯೋರಂತರ್ಯ ಕಾಲೋ ಮುನಿಸತ್ತಮ ।**
**ಯುಗಾಖ್ಯಃ ಸತುವಿಜ್ಞೇಯಃ ಕೃತತ್ರೇತಾದಿಸಂಜ್ಞಿತಃ ॥**
**ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚೈವ ಚತುರ್ಯುಗಂ ।**
**ಪ್ರೋಚ್ಯತೇ ತತ್ಸಹಸ್ರಂಚ ಬ್ರಹ್ಮಣೇ ದಿವಸಂ ಮುನೇ ॥**
**ಬ್ರಹ್ಮಣೋ ದಿವಸೇ ಬ್ರಹ್ಮನ್ ಮನವಸ್ತು ಚತುರ್ದಶ ।**
**ಭವಂತಿ ಪರಿಮಾಣಂ ಚ ಶೇಷಾಂ ಕಾಲಕೃತಂ ಶೃಣು ॥**
**ಸಪ್ತರ್ಷಯಃ ಸುರಾಶಕ್ರೋ ಮನುಸ್ತಂತ್ಸೂನವೋ ನೃಪಾಃ ।**
**ಏಕಕಾಲೇ ಹಿ ಸೃಜ್ಯಂತೇ ಸಂಹ್ರಿಯನ್ತೇಚಪೂರ್ವವತ್**

(ವಿ.ಪು. ಪ್ರಥಮಾಂಶ ಅಧ್ಯಾಯ 3 ಶ್ಲೋಕ 8ರಿಂದ 17)

ಎಲೈ ಮೈತ್ರೇಯ – ಹದಿನೈದು ನಿಮಿಷಗಳಿಗೆ ಒಂದು ಕಾಷ್ಠಾ ಎಂದು ಹೆಸರು. ಮೂವತ್ತು ಕಾಷ್ಠಗಳಿಗೆ ಒಂದು ಕ್ಷಣ. ಮೂವತ್ತು ಕಲೆಗಳಿಗೆ ಒಂದು ಮುಹೂರ್ತ. ಮೂವತ್ತು ಮುಹೂರ್ತಗಳಿಗೆ ಮನುಷ್ಯರ ಒಂದು ಅಹೋರಾತ್ರಿ. ಇದರ ಬಗ್ಗೆ ಮತ್ತಷ್ಟು ವಿವರ :

ಕ್ಷಣ (ರೆಪ್ಪೆಹೊಡೆಯುವಷ್ಟು ಕಾಲ) = 1/270 ಸೆಕೆಂಡ್

ಕ್ಷಣ = 1 ಲವ (1/135 ಸೆಕೆಂಡ್)

ಲವ 1 ನಿಮಿಷ (2/135 ಸೆಕೆಂಡ್)

18 ನಿಮಿಷ – 1 ಕಾಷ್ಠಾ (8 ಸಕೆಂಡ್) 30 ಕಲಾ = ಕ್ಷಣ (240 ಸೆಕೆಂಡ್ – 4 ನಿಮಿಷ)

12 ಕ್ಷಣ = 1 ಮುಹೂರ್ತ (48 ನಿಮಿಷ)

30 ಮುಹೂರ್ತ = 24 ಘಂಟೆಗಳ 1 ದಿನ

15 ದಿನ = 1 ಪಕ್ಷ

30 ದಿನ = 1 ಮಾಸ

2 ಮಾಸ = 1 ಋತು

6 ಋತು ಅಥವಾ 12 ಮಾಸ = 1 ಸಂವತ್ಸರ

ಸಂವತ್ಸರವು ಚಾಂದ್ರ, ಸೌರ, ಸಾವನ, ನಕ್ಷತ್ರ, ಬಾರ್ಹಸ್ಪತ್ಯ ಎಂದು ಐದು ವಿಧಗಳಿವೆ. ಚಾಂದ್ರ – ಶುಕ್ಲ ಪಾಡ್ಯದಿಂದ ಅಮಾವಾಸ್ಯೆಯವರೆಗೆ ವಿಶಾಖವಿದ್ದರೆ ವೈಶಾಖ. ಹೀಗೆ 12 ತಿಂಗಳಿಗೆ ಅಧಿಕ ಮಾಸವಿದ್ದರೆ 13 ತಿಂಗಳಿಗೆ – 1 ಚಾಂದ್ರ ಸಂವತ್ಸರ ಹುಣ್ಣಿಮೆಯವರೆಗೆ 1 ತಿಂಗಳೆಂಬ ಗಣನೆಯೂ ಉಂಟು.

ಕಾಲದಿಂದ ಬ್ರಹ್ಮನ ಪ್ರಾಣಿಗಳ, ಪರ್ವತ ಸಮುದ್ರಾದಿಗಳೆಂಬ ಸಕಲ ಸ್ಥಾವರ ಜಂಗಮಗಳ ಆಯಸ್ಸನ್ನು ಅಳೆಯುವ ವಿಧಾನವನ್ನು ಪರಾಶರರು ವಿವರಿಸುತ್ತಾ ಮೈತ್ರೇಯರಿಗೆ ಹೀಗೆ ಹೇಳುತ್ತಾರೆ.

ಹದಿನೈದು ನಿಮಿಷಗಳಿಗೆ ಒಂದು ಕಾಷ್ಠಾ– ಮೂವತ್ತು ಕಾಷ್ಠಾಗಳಿಗೆ ಒಂದು ಕಲಾ. ಮೂವತ್ತು ಕಲೆಗಳಿಗೆ ಒಂದು ಮುಹೂರ್ತ. ಅಷ್ಟೇ ಮೂವತ್ತು ಮುಹೂರ್ತಗಳಿಗೆ ಮನುಷ್ಯರ ಒಂದು ಅಹೋರಾತ್ರಿ ಅಂದರೆ ಒಂದು ದಿನ. ಅಷ್ಟೇ ಮೂವತ್ತು ಅಹೋರಾತ್ರಿಗಳು ಸೇರಿದರೆ ಒಂದು ಮಾಸ. ಈ ಮಾಸವು ಎರಡು ಪಕ್ಷಗಳಿಂದ ಕೂಡಿದೆ. ಒಂದು ಪಕ್ಷಕ್ಕೆ ಹದಿನೈದು ದಿನ. ಆರು ಮಾಸಗಳಿಗೆ ಒಂದು ಅಯನ. ಇದರಲ್ಲಿ ದಕ್ಷಿಣಾಯನ, ಉತ್ತರಾಯಣ ಎಂಬ ಎರಡು ಬೇಧಗಳಿವೆ ಹನ್ನೆರಡು ಮಾಸಗಳು ಒಂದು ವರ್ಷ. ದಕ್ಷಿಣಾಯನವು ದೇವತೆಗಳಿಗೆ ರಾತ್ರಿಯೆಂದೂ ಉತ್ತರಾಯಣವು ಹಗಲೆಂದು ಪರಿಗಣಿಸಲ್ಪಟ್ಟಿದೆ. ಮಾನವರ ಒಂದು ವರ್ಷ ದೇವತೆಗಳಿಗೆ ಒಂದುದಿನ. ಮಾನವರ ಮುನ್ನೂರು ಅರವತ್ತು ವರ್ಷಗಳು ದೇವತೆಗಳಿಗೆ ಒಂದು ವರ್ಷ. ಇದಕ್ಕೆ ದಿವ್ಯ ವರ್ಷ ಎಂದು ಹೆಸರು. ಇಂತಹ ಹನ್ನೆರಡು ಸಾವಿರ ದಿವ್ಯ ವರ್ಷಗಳಿಂದ ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ ಎಂಬ ಚತುರ್ಯುಗಗಳಾಗುತ್ತದೆ. ಅವುಗಳ ವಿಭಾಗಗಳನ್ನು ಹೀಗೆ ಮಾಡಿದ್ದಾರೆ.

| | | |
|---|---|---|
| ಕೃತಯುಗ | – 4000 | ದಿವ್ಯವರ್ಷ |
| ಸಂಧ್ಯಾ | – 400 | ದಿವ್ಯವರ್ಷ |
| ಸಂಧ್ಯಾಂಶ | – 400 | ದಿವ್ಯವರ್ಷ |
| ತ್ರೇತಾಯುಗ | – 3000 | ದಿವ್ಯವರ್ಷ |
| ಸಂಧ್ಯಾ | – 300 | ದಿವ್ಯವರ್ಷ |
| ಸಂಧ್ಯಾಂಶ | – 300 | ದಿವ್ಯವರ್ಷ |
| ದ್ವಾಪರಯುಗ | – 2000 | ದಿವ್ಯವರ್ಷ |

| | | |
|---|---|---|
| ಸಂಧ್ಯಾ | – 200 | ದಿವ್ಯವರ್ಷ |
| ಸಂಧ್ಯಾಂಶ | – 200 | ದಿವ್ಯವರ್ಷ |
| ಕಲಿಯುಗ | – 1000 | ದಿವ್ಯವರ್ಷ |
| ಸಂಧ್ಯಾ | – 100 | ದಿವ್ಯವರ್ಷ |
| ಸಂಧ್ಯಾಂಶ | – 100 | ದಿವ್ಯವರ್ಷ |

ಸೂಚನೆ : (ಈ ಪ್ರತಿಯೊಂದು ಯುಗದ ಹಿಂದೆ ಮತ್ತು ಮುಂದೆ ಕಾಲ ವಿಶೇಷವಿರುತ್ತದೆ. ಹಿಂದಿರುವ ಕಾಲಕ್ಕೆ ಸಂಧ್ಯಾ ಎಂದೂ ಮುಂದಿರುವ ಕಾಲಕ್ಕೆ ಸಂಧ್ಯಾಂಶ ಎಂದೂ ಹೆಸರು.

ಈ ಎರಡರಲ್ಲಿ ಪ್ರತಿಯೊಂದರ ಪ್ರಮಣವು ಆಯಾ ಯುಗಕ್ಕೆ ಹೇಳಿದ ಸಂಖ್ಯೆಯ ನೂರು ದಿವ್ಯವರ್ಷಗಳಾಗಿರುತ್ತವೆ. ಇಂತಹ ಸಾವಿರ ಚತುರ್ಯುಗಗಳಿಗೆ ಬ್ರಹ್ಮನ ಒಂದು ದಿನವಾಗುತ್ತದೆ. ಬ್ರಹ್ಮನ ಈ ಒಂದು ದಿನದಲ್ಲಿ ಹದಿನಾಲ್ಕು ಮನುಗಳು ಆಗುತ್ತಾರೆ, ಅವರ ಕಾಲಕೃತ ಪರಿಮಾಣಗಳು ಇಂತಿವೆ.

| | |
|---|---|
| ಮನುಷ್ಯರ 360 ವರ್ಷ | = 1 ದೇವವರ್ಷ |
| ಕಲಿಯುಗ ಪ್ರಮಾಣ | = 4,32,000 ಮಾನುಷವರ್ಷ |
| ದ್ವಾಪರಯುಗ ಪ್ರಮಾಣ | = 8,64,000 ಮಾನುಷವರ್ಷ |
| ತ್ರೇತಾಯುಗ ಪ್ರಮಾಣ | = 12,96,000 ಮಾನುಷವರ್ಷ |
| ಕೃತಯುಗ ಪ್ರಮಾಣ | = 17, 28,000 ಮನುಷವರ್ಷ |
| ಈ 4 ಯುಗಗಳು | = ದೇವತೆಗಳಿಗೆ 1 ಯುಗ (ದೇವಮಾನದಿಂದ 12000 ವರ್ಷ) |

1000 ದೇವಯುಗ = ಬ್ರಹ್ಮನ 1 ಹಗಲು (ಪ್ರಾಣಿಗಳು ಜೀವಿಸಿರುವ ಕಾಲ)

1000 ದೇವಯುಗ = ಬ್ರಹ್ಮನ 1 ರಾತಿ (ಪ್ರಳಯಕಾಲ)

2000 ದೇವಯುಗ = ಬ್ರಹ್ಮನ ಅಹೋರಾತ್ರಿ (1 ದಿನ)

ಬ್ರಹ್ಮನ 1 ಹಗಲು = ಕಲ್ಪ (ಮನುಷ್ಯರ 432 ಕೋಟಿ ವರ್ಷ)

ಬ್ರಹ್ಮನ 1 ರಾತ್ರಿ = ಕಲ್ಪ (71 ದೇವಯಾಗ= 1 ಮನ್ವಂತರ

## ಸಪ್ತರ್ಷಿಗಳು, ದೇವತೆಗಳು, ಇಂದ್ರ ಮನು

ಮನುವಿನ ಮಕ್ಕಳಾದ ರಾಜರು – ಇವರು ಪೂರ್ವ ಕಲ್ಪಾನುಸಾರವಾಗಿ ಏಕಕಾಲದಲ್ಲಿ ಸಂಭವಿಸುತ್ತಾರೆ. ಅಂತೆಯೇ ಅವಧಿ ಮುಗಿದ ಬಳಿಕ ಏಕಕಾಲದಲ್ಲಿ ಅವರ ಸಮಾಪ್ತಿಯಾಗುತ್ತದೆ. ಇಪ್ಪತ್ತೇಳು ಚತುರ್ಯುಗಗಳೂ ಅಥವಾ ಸ್ವಲ್ಪ ಅಧಿಕ ವರ್ಷಗಳೂ ಸೇರಿ ಒಂದು ಮನ್ವಂತರವಾಗುತ್ತದೆ. ಒಂದು ಮನ್ವಂತರಕ್ಕೆ 852,000 ದಿವ್ಯ ವರ್ಷವಾಗುತ್ತವೆ. ಮನುಷ್ಯರ ವರ್ಷಗಣನೆಯಿಂದ ಒಂದು ಮನ್ವಂತರಕ್ಕೆ 306,720,000 ವರ್ಷಗಳಾಗುತ್ತವೆ. ಇದರ ಹದಿನಾಲ್ಕರಷ್ಟು ಕಾಲಕ್ಕೆ ಅಂದರೆ ಹದಿನಾಲ್ಕು ಮನ್ವಂತರಗಳಿಗೆ ಬ್ರಹ್ಮನ ಒಂದು ಹಗಲಾಗುತ್ತದೆ. ಈ ಹಗಲಿನ ಕಡೆಯಲ್ಲಿ ಪ್ರಳಯವಾಗುತ್ತದೆ. ಬ್ರಹ್ಮಸಂಬಂಧಿಯಾದ್ದರಿಂದ ಈ ಪ್ರಳಯಕ್ಕೆ ಬ್ರಾಹ್ಮ ಎಂದು ನೈಮಿತ್ತಿಕ ಹೆಸರನ್ನು ನೀಡಲಾಗಿದೆ.

ಆಗ ಭೂಲೋಕ, ಭುವಲೋಕ, ಸುವರ್ಲೋಕಗಳೆಂಬ ಮೂರು ಲೋಕವೂ ಸುಟ್ಟುಹೋಗುತ್ತದೆ. ಮಹರ್ಲೋಕದಲ್ಲಿ ವಾಸಿಸುವ ಸಿದ್ಧಪುರುಷರು ತಾಪಾರ್ತರಾಗಿ ಜನಲೋಕಕ್ಕೆ ಹೊರಟುಹೋಗುತ್ತಾರೆ. ತ್ರಿಲೋಕವು ಜಲವೃತವಾಗಿ ನಾರಾಯಣನ ಸ್ವರೂಪನಾದ ಬ್ರಹ್ಮನು ಲೋಕತ್ರಯನನ್ನು ತಿಂದು ತೃಪ್ತನಾಗಿ ಶೇಷಶಯ್ಯೆಯಲ್ಲಿ ಪವಡಿಸುತ್ತಾನೆ. ಯೋಗಿಗಳೆಲ್ಲಾ ಜನಲೋಕದಲ್ಲಿ ನಾರಾಯಣನನ್ನು ಧ್ಯಾನಿಸುತ್ತಾ ಇರುವರು. ಹಗಲಿನಷ್ಟೇ ಪ್ರಮಾಣದ ರಾತ್ರಿಯನ್ನು ಕಳೆದು ಬ್ರಹ್ಮನು ಮತ್ತೆ ಸೃಷ್ಟಿ ಕಾರ್ಯದಲ್ಲಿ ತೊಡಗುತ್ತಾನೆ. ಆದ್ದರಿಂದ ಇತ್ತೀಚಿನ ಮಾಧ್ಯಮಗಳಲ್ಲಿ

ಬರುವ ಪ್ರಳಯಪ್ರಳಯವೆಂಬ ಕೂಗಿಗೆ ನಾವ್ಯಾರು ಹೆದರಬೇಕಾಗಿಲ್ಲ. ಎಲ್ಲೋ ಒಂದೊಂದು ಕಡೆ ಜಲಾವೃತವಾಗುವುದೋ, ಸುಟ್ಟುಭಸ್ಮವಾಗುವ ಘಟನೆಗಳು ನಡೆಯುತ್ತವೆಯೇ ವಿನಹ ಇಡೀ ಮಾನವ ಕೋಟಿಗೆ ವಿನಾಶ ಎಂಬುದು ಆಗುವುದಾದರೆ ಇನ್ನೂ ಸಾವಿರಾರು ವರ್ಷಗಳಾಗುತ್ತದೆ. ಈಗ ನಾವು ಯಾವ ಕಲ್ಪದಲ್ಲಿರುವೆವು ಎಂಬುದನ್ನು ತಿಳಿಯೋಣ. ಸಾಮಾನ್ಯವಾಗಿ ಶುಭಕಾರ್ಯಗಳನ್ನು ಆರಂಭಿಸುವಾಗ ದೇವಾಲಯಗಳಲ್ಲಿ ಅರ್ಚನೆ, ಆರಾಧನೆ ಮುಂತಾದವುಗಳನ್ನು ನಡೆಸುವಾಗ ಅರ್ಚಕರು, ಪುರೋಹಿತರು ಈ ಸಂಕಲ್ಪವನ್ನು ಹೇಳುವುದುಂಟು, ಅದನ್ನು ಮಾತ್ರ ತಿಳಿಯೋಣ.

ಹರಿಃ ಓಂ ತತ್ಸತ್ ಶ್ರೀ ಗೋವಿಂದ ಗೋವಿಂದ ಗೋವಿಂದಃ

ಅಸ್ಯ ಶ್ರೀ ಭಗವತೋ ಮಹಾಪುರುಷಸ್ಯ, ಶ್ರೀಮಹಾವಿಷ್ಣೋ ರಾಜ್ಞಯಾ ಪ್ರವರ್ತಮಾನಸ್ಯ ಅದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೆ ಶ್ರೀ ಶ್ವೇತ ವರಾಹಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೆ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಶತಾಬ್ದೇ ಮೇರೋಃ ದಕ್ಷಿಣೇ ಪಾರ್ಶ್ವೇ – ಅಸ್ಮಿನ್ ವರ್ತಮಾನೇ ವ್ಯಾವಹಾರಿಕೇ ಚಾಂದ್ರಮಾನೇನ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೆ . . . . . ನಾಮ ಸಂವತ್ಸರೇ ಅಯನೇ . . . . ಋತೌ. . . . . . ಮಾಸ್ಯೆ . . . . . . . ಪಕ್ಷೇ . . . . . .ಪುಣ್ಯತಿಥೌ ವಾಸರ . . . . . ವಾಸರಯುಕ್ತಾಯಾಂ ನಕ್ಷತ್ರಯುಕ್ತಾಯಾಂ . . . . . . . ಅಸ್ಯಾಶುಭ ತಿಥೌ .. ಶ್ರೀ ಭಗವದಾಜ್ಞಯಾ . . . ಶ್ರೀ ಭಗವತ್ ಕೈಂಕರ್ಯ ರೂಪಾ, ಶ್ರೀಮನ್ನಾರಾಯಣ ಪ್ರೀತ್ಯರ್ಥಂ . . . . . . ಮಂತ್ರ ಜಪಂಕರಿಷ್ಯ . . . . .. (ಅಥವಾ ಹೋಮಂ ಕರಿಷ್ಯೆ).. ಎಂದು ಮೊದಲು ಸಂಕಲ್ಪ ಮಾಡುತ್ತಾರೆ.

[ಈಗ ವೈವಸ್ವತವೆಂಬ 6ನೇ ಮನ್ವಂತರ ನಡೆಯುತ್ರಿದೆ. 864 ಕೋಟಿ ಮನುಷ ವರ್ಷಗಳಿಗೆ ಬ್ರಹ್ಮನ ಅಹೋರಾತ್ರ ರೂಪವಾದ 1ದಿನ 360 ದಿನಗಳಿಗೆ 1 ವರ್ಷ ಈ ರೀತಿಯಲ್ಲಿ 100 ವರ್ಷ ಬ್ರಹ್ಮನ ಆಯಸ್ಸು (864 ಕೋಟಿ ವರ್ಷ x 360) ಈ ಆಯುಃ ಪ್ರಮಾಣಕ್ಕೆ ಪರ ಎಂದು ಹೆಸರು ಇದರಲ್ಲಿ ಮೊದಲನೆಯ 50 ವರ್ಷ ಪ್ರಥಮಪರಾರ್ಧ ಆಮೇಲೆ ದ್ವಿತೀಯ

ಪರಾರ್ಧ. ಈಗ ದ್ವಿತೀಯ ಪರಾರ್ಧ ನಡೆಯುತ್ತಿದೆ. ಇದೇ ಶ್ವೇತವರಾಹಾಕಲ್ಪ]

ಭೂದೇವಿಯಿಂದ ವಿಷ್ಣುಸ್ತುತಿ ಭಗವಂತನು ವರಾಹರೂಪದಿಂದ ಭೂಮಿಯನ್ನು ಎತ್ತಿದ ಪ್ರಸಂಗ ಬ್ರಹ್ಮನಿಂದ ಸೃಷ್ಟಿಯ ಪ್ರಾರಂಭ

ಪ್ರಳಯವಾದ ನಂತರ ನಾರಾಯಣನೆಂಬ ಭಗವಾನ್ ಬ್ರಹ್ಮದೇವನ ಕಲ್ಪಾದಿಗಳಲ್ಲಿ ಸಕಲ ಭೂತಗಳನ್ನು ಹೇಗೆ ಸೃಷ್ಟಿಸಿದನೆಂದು ತಿಳಿಸಬೇಕೆಂದು ಮೈತ್ರೇಯಿರು ಪರಾಶರರಲ್ಲಿ ಪ್ರಾರ್ಥಿಸಿದರು. ಅದಕ್ಕೆ ಪರಾಶರರು ಹೀಗೆ ಉತ್ತರಿಸಿದರು.

**ಆಪೋನಾರಾಇತಿಪ್ರೋಕ್ತಾ ಆಪೋ ವೈನರಸೂನವಃ**
**ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣ ಸ್ಮೃತಃ**
**ತೋಯಾನ್ತಃ ಸ್ಥಾಂ ಮಹೀಂ ಜ್ಞಾತ್ವಾ ಜಗತ್ಸೇ ಕಾರ್ಣವೀಕೃತೇ**
**ಅನುಮಾನಾತ್ತದುದ್ಧಾರಂ ಕರ್ತುಕಾಮಃ ಪ್ರಜಾಪತಿಃ**
**ಅಕರೋತ್ ಸ್ವತನೂಮನ್ಯಾಂ ಕಲ್ಪಾ ದಿಷುಯಥಾಪುರಾ**
**ಮತ್ಸ್ಯ ಕೂರ್ಮಾದಿಕಾಂ ತದ್ವದ್ ವಾರಾಹಂವಪುರಸ್ಥಿತಃ**
**ವೇದಯಜ್ಞಮಯಂ ರೂಪಶೇಷ ಜಗತಃ ಸ್ಥಿತೌ**
**ಸ್ಥಿತಃ ಸ್ಥಿರಾತ್ಮಾ ಸರ್ವಾತ್ಮಾ ಪರಮಾತ್ಮಾ ಪ್ರಜಾಪತಿಃ**
**ಜನಲೋಕ ಗತೈಸ್ಸಿದ್ಧೈಸ್ಸನಕಾದ್ಯೈ ರಭಿಷ್ಟುತಃ ।**
**ಪ್ರವಿವೇಶ ತದಾ ತೋಯ ನೂತ್ಮಾಧಾರೋ ಧರಾಧರಃ ॥**
**ನಿರೀಕ್ಷ್ಯಂ ತಂ ತದಾ ದೇವಿ ಪತಾಲತಲಮಾಗತಮ್**
**ತುಷ್ಟಾವ ಪ್ರಣತಾ ಭೂತ್ವಾಭಕ್ತಿನಮ್ರಾ ವಸುಂಧರಾ ॥**

(ವಿ.ಪು. ಪ್ರಥಮಾಂಶ 4 ಅಧ್ಯಾಯ ಶ್ಲೋಕ 6ರಿಂದ 11)

ಈ ಹಿಂದೆ ಹೇಳಿದಂತೆ ಪ್ರಳಯಕಾಲದಲ್ಲಿ ಎಲ್ಲವೂ ಜಲಮಯವಾಯಿತು. ಈ ಪೃಥ್ವಿಯೇ ನೀರಿನಲ್ಲಿ ಮುಳುಗಿತು. ಜಲಕ್ಕೆ ನಾರ ಎಂದು ಹೆಸರು.

ಏಕೆಂದರೆ ಅದು ನರನಿಂದ (ನಾರಾಯಣನಿಂದ) ಜನಿಸಿದ್ದು. ಈ **ನಾರವು** ಪ್ರಳಯಕಾಲದಲ್ಲಿ ಅವನಿಗೆ ಅಯನ ಎಂದರೆ ನಿವಾಸಸ್ಥಾನವಾದ್ದರಿಂದ ಆತನು ನಾರಾಯಣ ಎಂದು ಸ್ತುತಿಸಲ್ಪಟ್ಟಿದೆ. ಈ ಜಗತ್ತೆಲ್ಲವೂ ಜಲಮಯವಾಗಿರುವುದನ್ನು ಕಂಡು ಪೃಥ್ವಿಯು ನೀರಿನಲ್ಲಿ ಮುಳುಗಿದೆಯೆಂದು ಊಹಿಸಿ ಆ ಪ್ರಜಾಪತಿಯು ಪೃಥ್ವಿಯನ್ನು ಎತ್ತಬೇಕೆಂದು ಬಯಸಿದನು. ಈ ಹಿಂದೆ ಕಲ್ಪಾದಿಗಳಲ್ಲಿ ಭಗವನ್ನಾರಾಯಣ ಹೇಗೆ ಮತ್ಸ್ಯ ಕೂರ್ಮಾದಿಗಳ ಶರೀರವನ್ನು ಧರಿಸಿದ್ದನೋ ಹಾಗೆ ಈ ಸಲ ವರಾಹದ ರೂಪವನ್ನು ಧರಿಸಿದನು. ಈ ವರಾಹ ರೂಪವು ವೇದಯಜ್ಞಮಯವಾದದ್ದು. ಎಲ್ಲ ಜಗತ್ತಿನ ಸ್ಥಿತಿಯಲ್ಲಿ ತತ್ಪರನಾದ ಸ್ಥಿರನೂ ಸರ್ವಾತ್ಮನೂ ಆದ ಪ್ರಜಾಪತಿಯು ಸ್ವಯಮಾಧಾರನೂ ಆದ ಪರಮಾತ್ಮನು ಪೃಥ್ವಿಯನ್ನು ಎತ್ತಿ ತರಬೇಕೆಂದು ಉದ್ದೇಶಿಸಿ, ಜನಲೋಕದಲ್ಲಿದ್ದ ಸನಕ ಸನಾದಿ ಸಿದ್ಧಪುರುಷರು ನಾರಾಯಣನನ್ನು ಪ್ರಾರ್ಥಿಸಿದರು. ತತ್ಫಲವಾಗಿ ನಾರಾಯಣನು ನೀರಿನೊಳಗೆ ಪ್ರವೇಶಿಸಿದನು. ಭೂದೇವಿಯು ಭಗವಂತನನ್ನು ಕಂಡು ಮತ್ತೆ ತನ್ನನ್ನು ಮೇಲಕ್ಕೆ ಎತ್ತಿ ತರಬೇಕೆಂದು ದೈನ್ಯದಿಂದ ಪ್ರಾರ್ಥಿಸಿದರು.

**ನಮಸ್ತೇ ಪುಂಡರೀಕಾಕ್ಷ ಶಂಖ ಚಕ್ರಗಧಾದರ**
**ಮಾಮುದ್ಧರಾಸ್ಮಾವದ್ಯತ್ವಂ ತ್ವತ್ತೋಹಂ ಪೂರ್ವಮುತ್ಥಿತಾ ॥**
**ತ್ವಯಾಹಮುದ್‌ಧೃತಾಪೂರ್ವಂ ತ್ವನ್ಮಯಾಹಂ ಜನಾರ್ಧನ**
**ತಥಾನ್ಯಾನಿಚ ಭೂತಾನಿ ಗಗನಾದೀನ್ಯಶೇಷತಃ**
**ನಮಸ್ತೇ ಪರಮಾತ್ಮಾತ್ಮನ್ ಪುರುಷಾತ್ಮನ್ನ ಮೋಸ್ತುತೇ**
**ಪ್ರಧಾನವ್ಯಕ್ತ ಭೂತಾಯ ಕಾಲಭೂತಾಯತೇ ನಮಃ**
**ತ್ವಂ ಕರ್ತಾ ಸರ್ವಭೂತಾನಾಂ ತ್ವಂ ಪಾತಾ ತ್ವಂ ವಿನಾಶಕೃತ್**
**ಸರ್ವಾದಿಷು ಪ್ರಭೋ ಬ್ರಹ್ಮ ವಿಷ್ಣು ರುದ್ರಾತ್ಮರೂಪಧೃಕ್**
**ಸಮಕ್ಷಯಿತ್ವಾ ಸಕಲ ಜಗತ್ಯೇಕಾರ್ಣವೀಕೃತೇ**
**ಶೇಷೇ ತ್ವಮೇವ ಗೋವಿಂದ ಚಿಂತ್ಯಮಾನೋ ಮನೀಷಿಭಿಃ**

(ವಿ.ಪು. ಪ್ರಥಮಾಂಶ ಅಧ್ಯಾಯ. 4–12 ರಿಂದ 16)

ಹಿಂದಿನ ಕಲ್ಪದಲ್ಲಿ ನಾನು ನಿನ್ನಿಂದಲೇ ಮೇಲೆ ಬಂದೆ (ಕಲ್ಪ ಎಂದರೆ, ಮನುಷ್ಯರ 432 ಕೋಟಿ ವರ್ಷ ಬ್ರಹ್ಮನಿಗೆ 1 ಹಗಲು) ನಾನು ನಿನ್ನಿಂದಲೇ ಆದವಳು ನೀನು ನನಗೆ ಉಪಾದಾನಕಾರಣ

ನನ್ನಂತೆಯೇ ಆಕಾಶಾದಿ ಸಮಸ್ತಂ ಭೂತಗಳೂ ಸಹ ನಿನ್ನದೇ ಆತ್ಮರಿಗೆ ಅಂತರಾತ್ಮನಾಗಿರುವವನೇ ನಿನಗೆ ನಮಸ್ಕಾರ.

ಪ್ರಧಾನರಾದ ಕಾರಣವೂ ವ್ಯಕ್ತವಾದ ಕಾರ್ಯವೂ ನೀನೇ ಕಲಾಸ್ವರೂಪನು ನೀನೇ ಸಕಲ ಪದಾರ್ಥಗಳಲ್ಲಿಯೂ ನೀನಿರುವೆ.

ಸೃಷ್ಟಿ ಸ್ಥಿತಿ ಲಯಗಳಲ್ಲಿ ನೀನೇ ಬ್ರಹ್ಮ- ವಿಷ್ಣು ರುದ್ರರ ಸ್ವರೂಪನು. ಪ್ರಳಯದಲ್ಲಿ ಈ ಜಗತ್ತನ್ನೇ ನುಂಗಿನೊಣೆದು ಎಲ್ಲವೂ ಸಲಿಲಮಯವಾದಾಗ ಹೇ ಗೋವಿಂದ ಜ್ಞಾನಿಗಳಿಂದ ಸ್ತುತಿಸಲ್ಪಡಲಾಗಿ ನೀನು ಶೇಷಶಾಯಿಯಾಗಿ ಮಲಗುತ್ತಿಯೇ । ಒಟ್ಟಿನಲ್ಲಿ ಈ ವಿಶ್ವಕ್ಕೇ ಆದಿಕಾರಣನಾದವನು ನೀನು ನನ್ನನ್ನು ಮೇಲಕ್ಕೆತ್ತಿ ನನ್ನನ್ನು ಉದ್ಧರಿಸು ದೇವಾ ಎಂದು ಭೂಮಾತೆಯು ನಾರಾಯಣನಲ್ಲಿ ಪ್ರಾರ್ಥಿಸುತ್ತಾಳೆ. ಭೂಮಾತೆಯ ಪ್ರಾರ್ಥನೆಯನ್ನು ಮನ್ನಿಸಿ ಶ್ರೀಮನ್ನಾರಾಯಣನು ಸೃಷ್ಟಿ ಕಾರ್ಯದಲ್ಲಿ ತೊಡಗುತ್ತಾನೆ. ಮೈತ್ರೇಯರು ದೇವ ಮನುಷ್ಯಾದಿಗಳ ಸೃಷ್ಟಿಯ ಬಗ್ಗೆ ಕೇಳಲಾಗಿ ಪರಾಶರರು ಅದರ ಬಗ್ಗೆ ಸವಿವರವಾಗಿ ತಿಳಿಸುತ್ತಾರೆ.

**ಸೃಷ್ಟಿಂ ಚಿಂತಯತಸ್ತಸ್ಯ ಕಲ್ಪಾದಿಷುಯಥಾಪುರಾ**

**ಅಬುದ್ಧಿಪೂರ್ವಕಃ ಸರ್ಗಃ ಪ್ರಾದುರ್ಭೂಸ್ತಮೋಮಯಃ**

**ತಮೋಮೋಹೋ ಮಹಾಮೋಹಸ್ತಾಮಿಸ್ರೋಹ್ಯನ್ಧ ಸಂಜ್ಞಿತಃ**

**ಅವಿದ್ಯಾ ಪಂಚಪರ್ವೇಷಾಪ್ರಾದುರ್ಭೂತಾ ಮಹಾತ್ಮನಃ**

**ಪಂಚಧಾನಸ್ಥಿತ: ಸರ್ಗೋ ಧ್ಯಾಯತೋ ಪ್ರತಿಬೋಧವಾನ್ ।**

**ಬಹಿರಂತೋ ಪ್ರಕಾಶಶ್ಚ ಸಂವೃತಾತ್ಮಾ ನಗಾತ್ಮಕಃ ॥**

**ಮುಖ್ಯಾನಗಾಯತಃಪ್ರೋಕ್ತಾಂ ಪ್ರೋಕ್ತಾ ಮುಖ್ಯಸರ್ಗಸ್ತ್ವತಸ್ವಯಮ್**

**ತಂದೃಷ್ಟ್ವಾ ಸಾಧಕಂ ಸರ್ಗಮಮನ್ಯದಪರಂ ಪುನಃ**

ತಸ್ಯಾಭಿಧ್ಯಾಯತಃ ಸರ್ಗಸ್ತಿರ್ಯಕ್ ಸ್ರೋತಾಭ್ಯವರ್ತತ ।
ಯಸ್ಮಾತ್ತಿರ್ಯಕ್‌ಪ್ರವೃತ್ತಿ ಸ್ಸತಿರ್ಯಕ್‌ಸ್ರೋತಾಸ್ತತಃಸ್ಮೃತಃ ॥
ಪಶ್ವಾದಯಸ್ತೇ ವಿಖ್ಯಾತಾಸ್ತಮಃ ಪ್ರಾಯಾಹ್ಯವೇದಿನಃ ।
ಉತ್ಪಥಗ್ರಾಹಿಣಿಶ್ಚೈತ ತೇ ಜ್ಞಾನೇ ಜ್ಞಾನ ಮಾನಿನಃ ॥
ಅಹಂಕೃತಾಅಹಮ್ಮಾನಾ ಅಷ್ಟಾವಿಂಶದ್ವಧಾತ್ಮಕಾಃ ।
ಅಂತಃಪ್ರಕಾಶಾಸ್ತೇ ಸರ್ವೇ ಅವೃತಾಶ್ಚಪರಸ್ಪರಮ್ ॥
ತಮಪ್ಯಸಾಧಕಂ ಮತ್ವಾ ಧ್ಯಾಯತೋನ್ಯಸ್ತತೋಭವತ್ ।
ಊರ್ಧ್ವಸ್ರೋತ್ರಾ ಸ್ತಂತೀಯಸ್ತು ಸಾತ್ವಿಕೋರ್ಧ್ವಮವರ್ತತ ॥
ತೇ ಸುಖಪ್ರೀತಿಬಹುಲಾ ಬಹಿರಂತಸ್ತ್ವನಾವೃತಾಃ ।
ಪ್ರಕಾಶಾ ಬಹಿರಂತಶ್ಚ ಐರ್ಧ್ವಾಸ್ರೋತೋದ್ಭವಾಃಸ್ಮೃತಾಃ ॥
ತನ್ಮಾತ್ರಾಣಾಂ–ದ್ವಿತೀಯಶ್ಚ ಭೂತಸರ್ಗೋಹಿಸಸ್ಮತಃ
ವೈಕಾರಿಕಸ್ತತೀಯಸ್ತು ಸರ್ಗ ಐನ್ದ್ರಿಯಕಃ ಸ್ಮೃತ
ಇತ್ಯೇಷಪ್ರಾಕೃತಃ ಸರ್ಗಃ ಸಮ್ಭೂತೋಬುದ್ಧಿಪೂರ್ವಕಃ ।
ಮುಖ್ಯಸರ್ಗಶ್ಚತುರ್ಥಸ್ತು ಮುಖ್ಯಾವೈಸ್ಥಾವರಾಃಸ್ಮೃತಾಃ
ತಿರ್ಯಕ್ಸ್ರೋತಾಸ್ತುಯಃ ಪ್ರೋಕ್ತಸ್ತೈರ್ಯಗ್ಯೋನ್ಯಃಸಉಚ್ಚತ
ತದೂರ್ಧ್ವ ಸ್ರೋತಸಾಂ ಷಷ್ಠೋ ದೇವಸರ್ಗಸ್ತು ಸಂಸ್ಮೃತಃ
ತತೋರ್ವಾಕ್ಸ್ರೋತಸಾಂಸರ್ಗಃ ಸಪ್ತಮಃ ಸತುಮಾನುಷಃ
ಅಷ್ಟಮೋನುಗ್ರಹಃ ಸರ್ಗ ಸಾತ್ವಿಕಸ್ತಾಮಸಶ್ಚಸಃ ।
ಪಂಚೈತೇ ವೈಕೃತಾಃ ಸರ್ಗಾಃ ಪ್ರಾಕೃತಾಸ್ತುತ್ರಯಃಸ್ಮೃತಾ
ಪ್ರಾಕತೋ ವೈಕೃತಶ್ಚೈವ ಕೌಮಾರೋ ನವಮಃ ಸ್ಮೃತಃ
ಇತ್ಯೇತೇ ವೈ ಸಮಾಖ್ಯಾತಾ ನವಸರ್ಗಾಃ ಪ್ರಜಾಪತೇ

(ವಿ.ಪು. ಪ್ರಥಮಾಂಶ ಅ.5 ಶ್ಲೋ 4ರಿಂದ 25ರವರೆಗೆ)

## ಹೇದ್ವಿಜೋತ್ತಮರಾದ ಮೈತ್ರೇಯರೇ

ಭೂಮಿ, ಆಕಾಶ, ಜಲಗಳಲ್ಲಿ ವಾಸಿಸುವ ದೇವ, ಋಷಿ, ಪಿತೃ, ದಾನವಗಣಗಳನ್ನು ಮನುಷ್ಯತಿರ್ಯಕ್‌ಜಂತು ಮೊದಲಾದವುಗಳನ್ನು ನಾರಾಯಣನು ಹೇಗೆ ಸೃಷ್ಟಿಸಿದನು ಎಂಬುದನ್ನು ಹೇಳುತ್ತೇನೆ ಕೇಳು ಎಂದು ಪರಾಶರರು ಆರಂಭಿಸಿದರು.

1. ಮೊದಲನೆಯದು ಮಹತ್ತಿನ ಸೃಷ್ಟಿ ಎಂದರೆ ಬ್ರಹ್ಮ ಸೃಷ್ಟಿಯಾಯಿತು ಹಿಂದಿನ ಕಲ್ಪಾದಿಯಲ್ಲಿ ಹೇಗೋ ಹಾಗೇ ಬ್ರಹ್ಮನು ಸೃಷ್ಟಿ ಮಾಡಬೇಕೆಂದು ಆಲೋಚಿಸುತ್ತಿರುವಾಗಲೇ, ಇದ್ದಕ್ಕಿದಂತೆ

2. ಅಜ್ಞಾನಪೂರ್ವಕವಾದ ಒಂದು ತಮೋಮೂರ್ತಿಯ ಸೃಷ್ಟಿಯಾಯಿತು. ಆ ಮಹಾತ್ಮನಿಂದ ಆವಿರ್ಭವಿಸಿದ ತಪೋಮೂರ್ತಿಯಾದರೋ ತಮಸ್ಸು. ಮೋಹ, ಮಹಾಮೋಹ, ತಾಮಿಸ್ರ ಅಂಧತಾಮಿಸ್ರ ಎಂದು ಐದು ಪ್ರಕಾರ ಅವಿದ್ಯೆಯು ಹುಟ್ಟಿತು ಧ್ಯಾನಿಸುತ್ತಿದ್ದ ಬುದ್ಧಿ ಬ್ರಹ್ಮನಿಂದ ಬುದ್ಧಿರಹಿತವಾದ ಐದು ಪ್ರಕಾರದ ಸೃಷ್ಟಿಯಾಯಿತು.

ಇವನ್ನೂ ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ ಎಂಬ ಪಂಚಕ್ಲೇಶಗಳಾಗಬಹುದು ಎಂದು ಸಾಂಖ್ಯರು ತಿಳಿಸಿದ್ದಾರೆ.

ಇದು ಹೊರಗೂ ಒಳಗೂ ಪ್ರಕಾಶವಿಲ್ಲದ್ದು ಇದು ಗತಿಶೂನ್ಯವಾದ್ದರಿಂದ ನಗ ಎನಿಸಿತು. ಇದು ಮೊದಲು ಉದ್ಭವಿಸಿದ್ದರಿಂದ ಈ ನಗಗಳು ಮುಖ್ಯವೆನಿಸಿ ಈ ಸೃಷ್ಟಿಯು ಮುಖ್ಯಸರ್ಗ ಎನ್ನಿಸಿತು, ಇದು ಕಾರ್ಯಸಾಧಕವಾಗಲಿಲ್ಲ. ಆದ್ದರಿಂದ ಬ್ರಹ್ಮನು ಇನ್ನೊಂದನ್ನು ಸೃಷ್ಟಿಸಲು ಉದ್ದೇಶಿಸಿದನು

3. ಅವನು ಅಂತೆಯೇ ಧ್ಯಾನಿಸುತ್ತಿರಲಾಗಿ ತಿರ್ಯಗ್ಗಾಮಿಗಳು ಸೃಷ್ಟಿಯಾಯಿತು. (ತಿರ್ಯಕ್–ಎಂದರೆ ಗಾಳಿಯಂತೆ ಅಡ್ಡಲಾಗಿ) ಸಂಚಾರವಿರುವುದರಿಂದ ತಿರ್ಯಗ್ಗಾಮಿಯೆನಿಸಿದವು. ಪಶು ಪಕ್ಷಿ ಮುಂತಾದಾವುಗಳು ಈ ಗುಂಪಿಗೆ ಸೇರಿದ್ದವು. ಇವು ತಮೋಮಯವಾಗಿದ್ದು ವಿವೇಕ ಜ್ಞಾನವೇ ಇಲ್ಲದದ್ದು. ಇವು ಅನುಚಿತಮಾರ್ಗದಲ್ಲಿ ಹೋಗುತ್ತಾ ತಾನು ಮಾಡಿದ್ದೇ ಸರಿ ಎಂದು

ಅದೇ ಸರಿಯಾದ ಜ್ಞಾನ ಎಂದುಕೊಂಡಿವೆ. ಇವು ನಾನು ಎಂಬ ನಾನು ಹೆಚ್ಚು ನಾನೇ ಹೆಚ್ಚು, ಎಂಬ ಅಹಂಕಾರವುಳ್ಳದ್ದು. ಇವು ಇಪ್ಪತ್ತೆಂಟು ವಧಗಳಿಗೆ ಒಳಗಾದವು. ಇವು ಆಂತರಿಕವಾದ ಸುಖದುಃಖಗಳನ್ನು ಬಲ್ಲವು. ಅಂದರೆ ಪಕ್ಷಿಗಳು ತಮ್ಮ ತಮ್ಮ ವರ್ಗದೊಡನೆ ಸೇರುತ್ತದೆಯೇ ವಿನಹ ಮತ್ತೊಂದು ವರ್ಗದೊಡನೆ ಸೇರುವುದಿಲ್ಲ. ತಮ್ಮ ತಮ್ಮಲ್ಲಿಯೇ ಸೇರಿಕೊಂಡಿರುತ್ತವೆ. ಇದು ಸರಿಯಲ್ಲ ಎಂದು ಬಗೆದು ಮತ್ತೆ ಬ್ರಹ್ಮ ಧ್ಯಾನಾಸಕ್ತನಾದನು ತತ್ಫಲವಾಗಿ ಊರ್ಧ್ವಗಾಮಿಗಳ ಮತ್ತೊಂದು ಸೃಷ್ಟಿಯಾಯಿತು. ಅದು ಸಾತ್ವಿಕವಾದುದ್ದು. ಸದಾ ಮೇಲ್ಲೋಕದಲ್ಲಿ ಇರುವಂತಹುದು. ಈ ಸೃಷ್ಟಿಯ ಜನರು ಸುಖ ಪ್ರೇಮಗಳನ್ನು ವಿಶೇಷವಾಗಿ ಬಯಸತಕ್ಕವರು. ಒಳಗೂ ಹೊರಗೂ ಒಂಟಿಯಾಗಿರತಕ್ಕವರು. ಇವರಿಗೆ ಬಾಹ್ಯ ಮತ್ತು ಆಂತರಿಕ ದೃಷ್ಟಿಜ್ಞಾನವಿರುತ್ತದೆ. ಈ ಸೃಷ್ಟಿಯನ್ನೇ ದೇವಸರ್ಗ ಎನ್ನುತ್ತಾರೆ. ಇದರಿಂದ ಬ್ರಹ್ಮ ದೇವನಿಗೆ ಸಂತೋಷವಾಯಿತು. ಆದರೂ ಸಹ ಈ ಮುಖ್ಯಸರ್ಗಾದಿಗಳಲ್ಲಿ ಹುಟ್ಟಿದವರು ತನ್ನ ಉದ್ದೇಶ ಸಿದ್ಧಿಗೆ ಸಾದಕರಾಗಿರಲಿಲ್ಲ, ಆದ್ದರಿಂದ ಬ್ರಹ್ಮನು ಉತ್ತಮವಾದ ಇನ್ನೊಂದು ಸೃಷ್ಟಿಯನ್ನು ಮಾಡಬೇಕೆಂದು ಮತ್ತೊಮ್ಮೆ ಧ್ಯಾನಸ್ಥನಾದನು.

ಸತ್ಯಸಂಕಲ್ಪನಾಗಿ ಹಾಗೆಯೇ ಧ್ಯಾನಮಾಡುತ್ತಿರುವಾಗ ಕಾರ್ಯಸಾಧಕವಾದ ಅರ್ವಾಕ್‌ಸ್ರೋತದ ಸೃಷ್ಟಿಯು ಅವ್ಯಕ್ತದಿಂದ ಅಂದರೆ ಪ್ರಧಾನದಿಂದ ಆವಿರ್ಭವಿಸಿತು. ಈ ಸೃಷ್ಟಿಯಲ್ಲಾದ ಮನುಷ್ಯರು ಅರ್ವಾಕ್ ಅಂದರೆ ಕೆಳಗೆ ಭೂಮಿಯಲ್ಲಿ ಸಂಚರಿಸುವುದರಿಂದ ಇವರಿಗೆ ಅರ್ವಾಕ್‌ಸ್ರೋತರೆಂದು ಹೆಸರು. ಇವರಲ್ಲಿ ಸತ್ವರಜಸ್ಸು, ತಮಸ್ಸು ಈ ಮೂರು ಗುಣಗಳು ಅಧಿಕವಾಗಿವೆ.

ಇವರಿಗೆ ದುಃಖವು ಅಧಿಕವಾಗಿರುತ್ತದೆ. ಇವರು ಅತ್ಯಂತ ಕ್ರಿಯಾಶೀಲರು. ಇವರಿಗೆ ಬಾಹ್ಯ ಮತ್ತು ಆಂತರಿಕ ಜ್ಞಾನ ಉಂಟು. ಆಂತರಿಕ ಬಾಹ್ಯ ದೃಷ್ಟಿಯೂ ಉಂಟು. ಆದ್ದರಿಂದ ಕಾರ್ಯಸಾಧಕರು ಇವರೇ ಮನುಷ್ಯರು ಇಷ್ಟೆಲ್ಲಾ ಆಯಿತಲ್ಲಾ ಭಗವಂತ ವಾಸಿಸುವ ವೈಕುಂಠ ಮತ್ತೆ ಮತ್ತೆ ಸೃಷ್ಟಿಸಲ್ಪಡುತ್ತದೆಯೇ ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಖಂಡಿತಾ ಇಲ್ಲ. ಪರಾತ್ಪರನ ಪರಂಧಾಮ ಅಚಲವಾಗಿದೆ. ಒಟ್ಟಿನಲ್ಲಿ ಭಗವದ್ಗೀತೆಯಲ್ಲಿಯೂ ಇದನ್ನು ಸಮರ್ಥಿಸುತ್ತದೆ

**ಸಹಸ್ರಯುಗ ಪರ್ಯಂತಂ ಅಹರ್ಯದ್ ಬ್ರಹ್ಮಣೋ ವಿಧುಃ ।**
**ರಾತ್ರಿಯುಗ ಸಹಸ್ರಾಂತಾಂ ತೇಹೋರಾತ್ರ ವಿದೋ ಜನಾಃ ॥**

(ಭಗವದ್ಗೀತೆ ಅ.8.17ನೇ ಶ್ಲೋಕ)

ಊರ್ಧ್ವಲೋಕದ ವ್ಯವಸ್ಥೆಯಲ್ಲಿ ಒಂದು ಪೂರ್ಣದಿನ ಮತ್ತು ರಾತ್ರಿಯ ಅವಧಿಯು ಭೂಮಿಯ ಮೇಲಿನ ಒಂದು ವರ್ಷಕ್ಕೆ ಸಮನಾಗಿದೆ. ಇದು ಆಧುನಿಕ ವಿಜ್ಞಾನಿಗಳಿಂದ ಅಂಗೀಕೃತವಾಗಿದೆ ಮತ್ತು ಗಗನಯಾತ್ರಿಗಳಿಂದ ಪ್ರಮಾಣಿತವಾಗಿದೆ. ಮಹಾಕಲ್ಪ, ವಿಕಲ್ಪ, ಕಲ್ಪವೆಂಬ ಮೂರು ಬಗೆಯ ಸೃಷ್ಟಿಗಳಿವೆ. ಮಹಾಕಲ್ಪದಲ್ಲಿ ಭಗವಂತ ಮಹತ್ವ ತತ್ವದ ಸಕಲ ಶಕ್ತಿಗಳೊಂದಿಗೆ ಇರುತ್ತವೆ. ಮೊತ್ತಮೊದಲನೆಯದಾಗಿ ಪುರುಷಾವತಾರವನ್ನು ತಾಳುತ್ತಾನೆ. ಸೃಜನಾತ್ಮಕಸಾಧನೆಗಳು ಹನ್ನೊಂದು ಇವೆ. ಮೂಲಾಂಶಗಳು ಐದು ಇವೆ. ಅವೆಲ್ಲವೂ ಮಹತ್‌ನ ಅಥವಾ ಭೌತಿಕ ಅಹಂಕಾರದ ಉತ್ಪತ್ತಿಗಳಾಗಿವೆ. ವಿಷ್ಣುವಿನ ಲಕ್ಷಣದಲ್ಲಿ ಭಗವಂತನ ಈ ಸೃಷ್ಟಿಗಳನ್ನು ಮಹಾಕಲ್ಪ ಎಂದು ಕರೆಯಲಾಗಿದೆ. ಬ್ರಹ್ಮನ ಸೃಷ್ಟಿ ಹಾಗೂ ಭೌತಿಕ ಘಟಕಗಳ ಪ್ರಸಾರವನ್ನು ವಿಕಲ್ಪವೆಂದು ಕರೆಯಲಾಗಿದೆ ಮತ್ತು ಅವನ ಜೀವಿತಕಾಲದ ಪ್ರತಿದಿನವೂ ಒಂದು ಕಲ್ಪವೆಂದು ಹೆಸರು. ಆದ್ದರಿಂದ ಬ್ರಹ್ಮನ ಪ್ರತಿದಿನವೂ ಒಂದು ಕಲ್ಪ ಎನ್ನಲಾಗಿದೆ. ಈ ಕಲ್ಪಗಳ ಬಗ್ಗೆ ಸ್ಕಂದಪುರಾಣದ ಪ್ರಭಾಸಖಂಡದಲ್ಲಿಯೂ ವಿಸ್ತೃತವಾಗಿ ವಿವರಿಸಲಾಗಿದೆ. ಮಹಾಕಲ್ಪ, ವಿಕಲ್ಪ, ಕಲ್ಪಗಳ ಕ್ರಮವಾದ ವ್ಯವಸ್ಥಿತವಾದ ಕಾಲಚಕ್ರಗಳ ವಿವರ ಇಂತಿವೆ.

ಪ್ರಥಮ : ಶ್ವೇತಕಲ್ಪಶ್ಚ ದ್ವಿತೀಯೋ ನೀಲಲೋಹಿತಃ ವಾಮದೇವ ಸ್ತ್ರಿತೀಯಸ್ತು ತತೋ ಗಾಥಾಂತರೋಪರ ರೌರವಃ ಪಂಚಮಃ ಪ್ರೋಕ್ತಃ ಷಷ್ಠಃ ಪ್ರಾಣ ಇತಿ ಸ್ಮೃತಃ ಸಪ್ತಮೋಥ ಬೃಹತ್‌ಕಲ್ಪಃ ಕಂದರ್ಪೋಷ್ಟಮ ಉಚ್ಯತೇ ಸದ್ಯೋಥ ನಮಮಃ ಕಲ್ಪಃ ಈಶಾನೋ ದಶಮಃ ಸ್ಮೃತಃ ಧ್ಯಾನ ಏಕಾದಶಃ ಪ್ರೋಕ್ತ ಸ್ತಥಾ ಸಾರಸ್ವತೋಪರಃ ತ್ರಯೋದಶ ಉದಾನಸ್ತು, ಗರುಡೋಥ ಚತುರ್ದಶಃ, ಕೌರ್ಮಃ ಪಂಚದಶೋ ಜ್ಞೇಯಃ ಪೌರ್ಣಮಾಸೀಪ್ರಜಾಪತೇಃ ಷೋಡಶೋನಾರಸಿಂಹಸ್ತು ಸಮಾಧಿಸ್ತು ತತೋಪರಃ ಆಗ್ನೇಯೋ ವಿಷ್ಣು ಜಃ ಸೌರಃ ಸೋಮಕಲ್ಪಸ್ತಂತೋರಃ

**ದ್ವಾವಿಂಶೋಭಾವನಃ ಪ್ರೋಕ್ತಃ ಸುಪುಮಾನ್ ಇತಿ ಚಾಪರಃ**

**ವೈಕುಂಠಶ್ಚಾರ್ಷಿಷಸ್ತದ್ವದದಲೀ ಕಲ್ಪಸ್ತತೋಪರಃ**

**ಸಪ್ತವಿಂಶೋಥ ವೈರಾಜೋ ಗೌರೀ ಕಲ್ಪಸ್ತಥಾಪರಃ**

**ಮಾಹೇಶ್ವರಸ್ತಥಾ ಪ್ರೋಕ್ತಾಸ್ತಿಪುರೋಯತ್ರಘಾತಿತಃ**

**ಪಿತೃಕ್ಲಪಸ್ತಥಾಚಾಂತೇಯಃ ಕುಹೂರ್ಬ್ರಹ್ಮಣಃ ಸ್ಮೃತಾ**

1. ಈ ಜಗತ್ತಿನ ಸೃಷ್ಟಿಯಲ್ಲಿ ಮೊದಲನೆಯದು ಮಹತ್ತಿನ ಸೃಷ್ಟಿ ಇದು ಬ್ರಹ್ಮನ ಸೃಷ್ಟಿ.

2. ಪಂಚತನ್ಮಾತ್ರೆಗಳ ಸೃಷ್ಟಿ ಎರಡನೆಯದು, ಇದಕ್ಕೆ ಭೂತಸರ್ಗವೆಂದೂ ಕರೆಯುವರು.

3. ಮೂರನೆಯದು ವೈಕುಂಠ ಸೃಷ್ಟಿ ಇಂದ್ರಿಯಗೋಚರಗಳಾದ ಪಂಚಭೂತಗಳನ್ನು ಇಂದ್ರಿಯಗಳನ್ನು ಒಳಗೊಂಡಿರುವುದರಿಂದ ಇದನ್ನು ಇಂದ್ರಿಯಗಳನ್ನು ಸರ್ಗ ಎಂದು ಹೇಳುತ್ತಾರೆ. ಈ ರೀತಿಯಲ್ಲಿ ಮಹತ್ಪೂರ್ವಕವಾದ ಪ್ರಾಕೃತ ಸರ್ಗ ನಿರ್ಮಿತವಾಯಿತು.

4. ನಾಲ್ಕನೆಯದು ಸ್ಥಾವರಗಳ ಸೃಷ್ಟಿಯಾಯಿತು. ಇದನ್ನು ಬಹು ಮುಖ್ಯ ಎಂದು ಪರಿಗಣಿಸಲಾಗಿದೆ.

5. ಐದನೆಯದು ತಿರ್ಯಕ್‌ಗಾಮಿಗಳ ಅಥವಾ ತೈರ್ಯ್ಯೋಗ್ಯೋನ್ಯದ ಸೃಷ್ಟಿ

6. ಊರ್ಧ್ವಸ್ರೋತರ ಸರ್ಗ ಆರನೆಯದು. ಇದು ದೇವಸರ್ಗ ಎನಿಸಿದೆ.

7. ಅರ್ವಾಕಸ್ರೋತರಾದ ಮನುಷ್ಯರ ಸರ್ಗ ಏಳನೆಯದು ಇದನ್ನು ಮಾನುಷ್ಯಸರ್ಗ ಎನ್ನುತ್ತಾರೆ.

8. ಅನುಗ್ರಹಸರ್ಗ ಇದು ಸಾತ್ವಿಕ ಹಾಗೂ ತಾಮಸಗಳಿಂದ ಕೂಡಿದೆ.

9. ಒಂಭತ್ತನೆಯದು ಕೌಮಾರಸರ್ಗ. ಇದನ್ನು ಅನುಗ್ರಹಕುಮಾರಸರ್ಗ

ಎಂದೂ ಕರೆಯುತ್ತಾರೆ. ಇಲ್ಲಿ ಗ್ರಹ ಎಂದರೆ ಬುದ್ದಿ. ಬುದ್ಧಿಯನು ಅನುಸರಿಸಿದ್ದು ಅನುಗ್ರಹ ಇದನ್ನು ಪ್ರತ್ಯಯಸರ್ಗ ಎಂದು ಕರೆಯುವುದುಂಟು.

ಹೀಗೆ ಭಗವಂತನು ಒಂಭತ್ತು ಸೃಷ್ಟಿಗಳಲ್ಲಿ ಮೊದಲ ಮೂರು ಸರ್ಗಗಳು ಪ್ರಾಕೃತ ಸರ್ಗಗಳು. ಕಡೆಯ ಐದು ಸರ್ಗಗಳು ವೈಕೃತ ಸರ್ಗಗಳು. ಮೈತ್ರೇಯರು ಸಂಶಯದಿಂದ ಹಾಗಾದರೆ ಪ್ರಳಯ ಕಾಲದಲ್ಲಿ ಆಗುವ ಅಲ್ಲೋಲ ಕಲ್ಲೋಲಗಳಿಂದಾಗಿ ಮನುಷ್ಯರು, ದೇವತೆಗಳು, ಸ್ಥಾವರಗಳು ಮಾಡಿರುವ ಪೂರ್ವಜನ್ಮಕೃತ ಪಾಪಪುಣ್ಯಗಳು ನಾಶಹೊಂದುತ್ತದೆಯೇ ? ಎಂದು ಪ್ರಶ್ನಿಸಿದರು.

ಅದಕ್ಕೆ ಪರಾಶರರು ಖಂಡಿತ ಇಲ್ಲವೆಂದರು. ಪ್ರಳಯಕಾಲದಲ್ಲಿ ಆ ಸಂಸ್ಕಾರಗಳೊಂದಿಗೆ ವಿಲೀನರಾಗಿದ್ದರು ಅಷ್ಟೇ. ದೇವತೆಗಳಿಂದ ಹಿಡಿದು ಸ್ಥಾವರಗಳು ತಮ್ಮ ತಮ್ಮ ಪೂರ್ವಕೃತ ಪುಣ್ಯಗಳೊಂದಿಗೆ ಜನಿಸುತ್ತಾರೆ. ಬ್ರಹ್ಮನು ದೇವ, ಅಸುರ, ಪಿತೃ, ಮನುಷ್ಯ ಎಂಬ ಚತುಷ್ಟಯವನ್ನೂ ಮತ್ತು ಜಲವನ್ನು ಸೃಜಿಸಬೇಕೆಂದು ತನ್ನ ದೇಹವನ್ನು ಉಪಯೋಗಿಸಿದನು.

**ತತ್ಸಸರ್ಜ ತದಾ ಬ್ರಹ್ಮಾ ಭಗವನಾದಿಕೃತ್ಪ್ರಭುಃ**

**ತೇಷಾಂ ತೇಯಾನಿ ಕರ್ಮಾಣಿ ಪ್ರಾಕ್‌ಸೃಷ್ಟ್ಯಾಂ ಪ್ರತಿಪೇದಿರೋ**

**ತಾನ್ಯೇವತೇ ಪ್ರಪದ್ಯಂತೇ ಸೃಜ್ಯಮಾನಾಃ ಪುನಃ ಪುನಃ**

**ಹಿಂಸ್ರಾ ಹಿಂಸ್ರೇ ಮೃದುಕ್ರೂರೇ ಧರ್ಮಾವೃತಾನೃತೇ**

**ತದ್ಭಾವಿತಾಃ ಪ್ರಪದ್ಯಂತೇ ತಸ್ಮಾತ್ತತ್ತಸ್ಯ ರೋಚತೇ**

(ವಿ.ಪು. ಅಧ್ಯಾಯ 5 ಪ್ರಥಮಾಂಶ 61.62 ಶ್ಲೋಕ)

ಹಿಂದಿನ ಸೃಷ್ಟಿಗಳಲ್ಲಿ ಈ ಜೀವಗಳು ಯಾವ ಯಾವ ಕರ್ಮ ಮೋಕ್ಷಗಳನ್ನು ಮಾಡಿ ಸಂಸ್ಕಾರಗಳನ್ನು ಪಡೆದಿರುತ್ತವೆಯೋ ಅವುಗಳಿಗೆ ಅನುಗುಣವಾಗಿ ಕರ್ಮಶೇಷಗಳನ್ನು ಮತ್ತೆ ಸೃಷ್ಟಿಯಾದಾಗ ಪಡೆದಿರುತ್ತವೆ. ಹಿಂಸೆ–ಅಹಿಂಸೆ, ಮೃದುತ್ವ–ಕ್ರೌರ್ಯ, ಧರ್ಮ–ಅಧರ್ಮ, ಸತ್ಯ–ಅಸತ್ಯ ಇವುಗಳಿಂದ ಸಂಸ್ಕಾರ ಹೊಂದಿದ ಪ್ರಾಣಿಗಳು ಅಂತಹ ಪ್ರವತ್ತಿಯನ್ನೇ

ಅವಲಂಬಿಸುತ್ತವೆ ಆದ್ದರಿಂದಲೇ ನಾವು ಅನುಭವಿಸುವ ಸುಖವಾಗಲಿ, ದುಃಖವಾಗಲಿ ನಾವು ಪೂರ್ವಜನ್ಮದಲ್ಲಿ ಮಾಡಿದ ಕರ್ಮಶೇಷಗಳೇ ಆಗಿರುತ್ತವೆ. ಆದ್ದರಿಂದ ನಮ್ಮ ಜೀವಿತದಲ್ಲಿ ಒಳ್ಳೆಯದನ್ನೇ ಮಾಡಬೇಕು. ಒಳ್ಳೆಯದನ್ನೇ ಸ್ಮರಿಸಬೇಕು ಎಂದು ನಮ್ಮ ಹಿರಿಯರು ಹೇಳುವುದು ಅಕ್ಷರಶಃ ಸತ್ಯ ಎಂಬುದನ್ನು ಈ ಸಂದರ್ಭದಲ್ಲಿ ತಿಳಿದು ನಡೆಯಬೇಕಾಗಿದೆ.

## ಚಾತುರ್ವರ್ಣ್ಯದ ವ್ಯವಸ್ಥೆ, ಪೃಥ್ವಿಯ ವಿಭಾಗ, ಅನ್ನಾದಿಗಳ ಉತ್ಪತ್ತಿ

ವಿಷ್ಣುಪುರಾಣದಲ್ಲಿ ಇದು ಪ್ರಮುಖವಾದ ಘಟ್ಟ. ಬ್ರಹ್ಮನು ಸೃಷ್ಟಿಕಾರ್ಯದಲ್ಲಿ ತೊಡಗಿದಾಗ ಯಾರ್‍ಯಾರು ಹೇಗೆ ಹುಟ್ಟಿದರು ಎಂಬುದನ್ನು ಪರಾಶರರು ಮೈತ್ರೇಯರಿಗೆ ವಿವರಿಸಿದರು. ಇದರಲ್ಲಿ ಮನುಷ್ಯ ಹೇಗೆ ತನ್ನ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸಿದ ಎಂಬ ವಿವರಣೆ ಇದೆ.

**ಸತ್ಯಾಭಿದ್ಯಾಯಿನಃ ಪೂರ್ವಂ ಸಿಸೃಕ್ಷೋಬ್ರಹ್ಮಣೋಜಗತ್**
**ಅಜಾಯಂತ ದ್ವಿಜ ಶ್ರೇಷ್ಠ ಸತ್ವೋದ್ರಿಕ್ತಾಮುಖಾತ್ಪ್ರಜಾಃ**
**ವಕ್ಷಸೋ ರಜಸೋದ್ರಿಕ್ತಾಸ್ಥತಾವೈ ಬ್ರಹ್ಮಣೋ ಭವನ್**
**ರಜಸಾ ತಮಸಾ ಚೈವ ಸಮುದ್ರಿಕ್ತಾಸ್ಥತೋರುತಃ**
**ಪದ್ಭ್ಯಾಮನ್ಯಾಃ ಪ್ರಜಾ ಬ್ರಹ್ಮಾ ಸಸರ್ಜ ದ್ವಜ ಸತ್ತಮ**
**ತಮಃ ಪ್ರಧಾನಾಸ್ತಾಃ ಸರ್ವಾಶ್ಚಾತುರ್ವರ್ಣ್ಯಮಿದಂತತಃ**
**ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚ ದ್ವಿಜಸತ್ತಮ**
**ಪಾದೋರು ವಕ್ಷಃ ಸ್ಥಲತೋ ಮುಖತಶ್ಚ ಸಮುದೆಗತಾಃ**
**ಯಜ್ಞನಿಷ್ಪತ್ತಯೇ ಸರ್ವಮೇತದ್ ಬ್ರಹ್ಮಾಚಕಾರವೈ**
**ಚಾತುರ್ವರ್ಣ್ಯಂ ಮಹಾಭಾಗ ಯಜ್ಞಸಾಧನಮುತ್ತಮಮ್**
**ಯಜ್ಞೋರಾಪ್ಯಾಯಿತಾ ದೇವಾವ್ಯಷ್ಟ್ಯುತ್ಸರ್ಗೇಣ್ಯ ವೈಪ್ರಜಾ**
**ಅಪ್ಯಾಯಯನ್ತೇ ಧರ್ಮಜ್ಞ ಯಜ್ಞಾಃ ಕಲ್ಯಾಣಹೇತವ**
**ನಿಷ್ಪಾದ್ಯನ್ತೇ ನರೈಸ್ತೇಸ್ತು ಸ್ವಧರ್ಮಾಭಿರತೈಸ್ಸದಾ**

ವಿಶುದ್ಧಾ ಚರಣೋ ಪೇತೈಃ ಸದ್ಭಿಃ ಸನ್ಮಾರ್ಗಗಾಮಿಭಿ
ಸ್ವರ್ಗಾಪವರ್ಗೌ ಮಾನುಷ್ಯಾತ್ ಪ್ರಾಪ್ನುವಂತಿ ನರಾಮುನೇ
ಯಚ್ಛಾಭಿರುಚಿತಂ ಸ್ಥಾನಂ ತದ್ಯಾಸ್ತ ಮನುಜಾದ್ವಿಜ
ಪ್ರಜಾಸ್ತಾ ಬ್ರಹ್ಮಣಾಸೃಷ್ಟಾಶ್ಚಾತುರ್ವರ್ಣ್ಯವ್ಯವಸ್ಥಿತಾಃ
ಸಮ್ಯಕ್ ಶ್ರದ್ಧಾ ಸದಾಚಾರ ಪ್ರವಣಾಮುನಿಸತ್ತಮ
ಯಥೇಚ್ಛಾವಾಸನಿತಃ ಸರ್ವಭಾದಾ ವಿವರ್ಜಿತಾಃ
ಶುದ್ಧಾಂತಃ ಕರಣಾಃ ಶುದ್ಧಾಃ ಕರ್ಮಾನುಷ್ಠಾನ ನಿರ್ಮಲಾಃ
ಶುದ್ಧೇ ಚ ತಾಸಾಂಮನಸಿ ಶುದ್ಧೇಂತಸಂಸ್ಥಿತೇ ಹರೌ
ಶುದ್ಧ ಜ್ಞಾನಂ ಪ್ರಪಶ್ಯನ್ತಿ ವಿಷ್ಣ್ವಾಖ್ಯಂ ಯೇನತತ್ವದಂ
ತತಃ ಕಾಲಾತ್ಮಕೋ ಯೇಸೌ ಚ ಚಾಂಶಃ ಕಥಿತೋ ಹರೇಃ
ಸಪಾಕಯತ್ಸಘಂ ಗೋರ ಮಲ್ಪ ಮಲ್ಪಾಲ್ಪ ಸಾರವತ್ ॥
ಅಧರ್ಮಬೀಜ ಮುದ್ಭೂತಂ ತಮೋ ಲೋಭ ಸಮುದವಂ
ಪ್ರಜಾಸುತಾಸು ಮೈತ್ರೇಯ ರಾಗಧಿಕ ಮಸಾಧಕಮ್
ತತಃ ಸಾ ಸಹಜಾ ಸಿದ್ಧಿಸ್ತಾಸಾಂ ನಾತೀವ ಜಾಯತೇ
ರಸೋಲ್ಯಾಸಾದಯ ಶ್ಚಾನ್ಯಾಃ ಸಿದ್ಧಯೋಷ್ಟೌ ಭವಂತಿಯಾಃ
ತಾಸು ಕ್ಷೀಣಾಸ್ವ ಶೇಷಾಸು ವರ್ಧಮಾನೇ ಚಪಾತಕೇ
ದ್ವಂದ್ವಾಭಿಭವದುಃಖಾರ್ತಾಸ್ತಾ ಭವಂತಿ ತತಃ ಪ್ರಜಾಃ
ತಮೋ ದುರ್ಗಾಣಿ ತಾಶ್ಚಕ್ರು ರ್ಧಾನ್ವಂ ಪಾರ್ವತಮೌದಕಮ್
ಕೃತ್ರಿಮಂ ಚತಥಾದುರ್ಗಂ ಪುರಖರ್ವಪಟಕಾಧಿಕಮ್
ಗೃಹಾಣಿ ಚಯಥಾನ್ಯಾಯಂ ತೇಷು ಚಕ್ರುಃ ಪುರಾದಿಷು
ಶೀತಾತಪಾದಿಬಾಧಾನಾಂ ಪ್ರಶಮಾಯ ಮಹಾಮತೇ ॥
ಪ್ರತೀಕಾರ ಮಿಮಂ ಕೃತ್ವಾ ಶೀತಾದೇಸ್ತಾಃ ಪ್ರಜಾಃ ಪುನ
ವಾರ್ತೋಪಾಯಂ ತತಶ್ಚಕ್ರುರ್ಹಸ್ತಸಿದ್ಧಿಂ ಚ ಕರ್ಮಜಾಂ

(ವಿ.ಪು. ಪ್ರಥಮಾಂಶ ಅಧ್ಯಾಯ 6 ಶ್ಲೋಕ 3ರಿಂದ 20)

ಈ ಜಗತ್ತನ್ನು ಸೃಷ್ಟಿಸಬೇಕೆಂದು ಸಂಕಲ್ಪಿಸಿದಾಗ ಬ್ರಹ್ಮನ ಮುಖದಿಂದ ಸತ್ವಗುಣಪ್ರಧಾನರಾದ ಜನರು (ಬ್ರಾಹ್ಮಣರು) ಮೊದಲು ಹುಟ್ಟಿದರು.

ನಂತರ ಬ್ರಹ್ಮನ ವಕ್ಷಸ್ಥಳದಿಂದ ಕ್ಷತ್ರಿಯ ವೈಶ್ಯರೆಂಬ ರಜೋಗುಣ ಮತ್ತು ತಮೋಗುಣ ಪ್ರಧಾನರಾದವರು ಉತ್ಪನ್ನರಾದರು. ನಂತರ ಬ್ರಹ್ಮನು ತನ್ನ ಪಾದಗಳಿಂದ ತಮಃ ಪ್ರಧಾನರಾದ ಪ್ರಜೆಗಳನ್ನು ಅಂದರೆ ಶೂದ್ರರನ್ನು ಸೃಷ್ಟಿಸಿದನು.

**ಭಗವದ್ಗೀತೆಯಲ್ಲಿಯೂ ಇದನ್ನು ಪ್ರಸ್ತಾಪಿಸಲಾಗಿದೆ.**

**ಚಾತುರ್ವರ್ಣ್ಯಂ ಮಯಾದೃಷ್ಟಂ ಗುಣಕರ್ಮವಿಭಾಗಶಃ**

**ತಸ್ಯಕರ್ತಾರಮಪಿಮಾಂ ವಿದ್ಯಕರ್ತಾರಮವ್ಯಯಮ್**

(ಗೀತೆ 4ನೇ ಅಧ್ಯಾಯ 13ನೇ ಶ್ಲೋಕ)

ಮನುಷ್ಯನ ಗುಣ – ಕರ್ಮಗಳ ಆಧಾರದ ಮೇಲೆ ನಾಲ್ಕು ವರ್ಣಗಳನ್ನು ಹುಟ್ಟಿನಿಂದಲ್ಲ ಸೃಷ್ಟಿಸಲಾಗಿದೆ. ಪುರುಷಸೂಕ್ತದಲ್ಲಿಯೂ ಇದನ್ನು ಪ್ರಸ್ತಾಪಿಸಲಾಗಿದೆ.

**ಸಹಸ್ರ ಶೀರ್ಷಾಪುರುಷಃ । ಸಹಸ್ರಾಕ್ಷಸ್ಸಹಸ್ರಪಾತ್ ।**

**ಸ್ವಭೂಮಿಂ ವಿಶ್ವತೋವೃತ್ವಾ । ಅತ್ಯತಿಷ್ಠದಶಾಙ್ಗುಲಮ್ ।**

**ಪುರುಷ್ಯೇವೇದಗಂ ಸರ್ವಮ್ । ಯದ್ಭೂತಂ ಯಚ್ಚಭವ್ಯಮ್ ।**

**ಉತಾಮೃತತ್ವ ಸ್ಯೇಶಾನಃ । ಯದನ್ನೇನಾತಿರೋಹತಿ । ಏತಾವಾನಸ್ಯಾ ಮಹಿಮಾ।**

**ಅತೋಜ್ಯಾಯಾಗ್ಂಶ್ಚ ಪೂರುಷಃ । ಪಾದೋಸ್ಯವಿಶ್ವಾ ಭೂತಾನಿ ।**

**ತ್ರಿಪಾದಾಸ್ಯಾ ಮೃತಂದಿವಿ । ತ್ರಿಪಾದೂರ್ಧ್ವ ಉದ್ಯೇತ್ಪುರುಷ ಪಾದೋಸ್ಯೇಹಾ ಭವಾತ್ಪುನಃ ।**

**ತತೋ ವಿಷ್ವಙ್ವ್ಯಕ್ರಾಮತ್ । ಸಾಶನಾನಶನೇ ಅಭಿ । ತಸ್ಮಾದ್ವಿರಾಳಜಾಯತ । ವಿರಾಜೋ**

**ಅಧಿಪುರುಷಃ । ಸಜಾತೋ ಅತ್ಯರಿಚ್ಯತ । ಪಶ್ಚಾದ್ಭೂಮಿ ಮಥೋಪುರಃ**

**ಯತ್ಪುರುಷೇಣ ಹವಿಷಾ । ದೇವಾಯಜ್ಞಾಮತನ್ವತಾ ವಸನ್ತೋ ಅಸಾಸೀದಾಜ್ಯಮ್ । ಗ್ರೀಷ್ಮ**

**ಇದ್ಮಶ್ಶರದ್ಧವಿಃ । ಸಪ್ತಾಸ್ಯಾಸನ್ ಪರಿಚಯಃ । ತ್ರಿಸ್ಸಪ್ತಸಮಿಧಃ ಕೃತಾಃ ।**

ದೇವಾಯದ್ಯಜ್ಞಾನ್ಸ್ವನಾ ಅಬದ್ನನ್ ಪುರುಷಂ  ಪಶುಂ
ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗತ ಹ ।
ತೇನ ದೇವಾ ಅಯಜಂತ । ಸಾಧ್ಯಾಋಷಯಶ್ಚಯೇ
ತಸ್ಮಾದ್ಯಜ್ಞಾತ್ಸರ್ವಹುತಃ । ಸಂಭೃತಂ ಪೃಷದಾಜ್ಯಮ್
ಪಶೂಂಗ್‌ಂಸ್ತಾಗ್‌ಂಶ್ಚಕ್ರೇ ವಾಯವ್ಯಾನ್ । ಆರಣ್ಯಾನ್
ಗ್ರಾಮ್ಯಾಂಶ್ಚಯೇ । ತಸ್ಮಾದ್ಯಜ್ಞಾತ್ಸರ್ವಹುತಃ ಋಚಸ್ಸಾ
ಮಾನಿಜಜ್ಞಿರೇ । ಛಂದಾಂಗಂಸಿ ಜಜ್ಞಿರೇ ತಸ್ಮಾತ್ ।
ಯಜುಸ್ತಸ್ಮಾದಜಾಯತ । ತಸ್ಮಾದಶ್ವಾ ಅಜಾಯಂತ
ಯೇ ಕೇಚೋ ಭಯಾದತಃ । ಗಾವೋಹ ಜಜ್ಞಿರೇ ತಸ್ಮಾತ್
ತಸ್ಮಾಜ್ಞಾತಾ ಅಜಾವಯಃ । ಯತ್ಪುರುಷಂವ್ಯದದು
ಕತಿ ಧಾವ್ಯಕಲ್ಪಯನ್ । ಮುಖಂಕಿಮಸ್ಯ ಕೌಬಾಹೂ ।
ಕಾಊರೂಪಾದಲಾಚ್ಯತೇ । ಬ್ರಾಹ್ಮಣೋಸ್ಯಮುಖ ಮಾಸೀತ್ ।
ಬಾಹೂರಾಜನ್ಯಃ ಕೃತಃ । ಊರೂತದಸ್ಯಯ ದ್ವೈಶಃ ।
ಪದ್ಭ್ಯಾಂಗ್‌ಂಶೂದ್ರೋ ಅಜಾಯತಾ ।
ಚಂದ್ರಮಾ ಮನಸೋ ಜಾತಃ । ಚಕ್ಷೋಸ್ಸೂರ್ಯೋ ಅಜಾಯತ ।
ಮುಖಾದಿಂದ್ರಶ್ಚಾಗ್ನಿಶ್ಚ । ಪ್ರಾಣಾದ್ವಾಯುರಜಾಯತ
ನಾಭ್ಯಾಂ ಆಸೀದಂತರಿಕ್ಷಮ್ । ತಥಾಲೋಕಾಗಂ ಅಕಲ್ಪಯನ್ ।
ವೇದಾಹಮೇತಂ ಪುರುಷಮಹಾಂತಮ್ । ಆದಿತ್ಯ
ವರ್ಣಂಮನಸಸ್ತುಪಾರೇ । ಸರ್ವಾಣಿ ರೂಪಾಣಿ ವಿಚಿತ್ಯಧೀರಃ
ನಾಮಾ ನಿಕೃತ್ವಾಭಿವದನ್ ಯದಾಸ್ತೇ । ಧಾತಾಪುರಸ್ತಾ
ದ್ಯಮುದಾಜಹಾರ । ಶಕ್ರಃಪ್ರವಿದ್ವಾನ್ ಪ್ರದಿಶಶ್ಚತಸ್ರಃ ।
ತಮೇವಂ ವಿದ್ವಾನಮೃತ ಇಹಭವತಿ ।
ನಾನ್ಯಃ ಪಂಥಾ ಅಯನಾಯ ವಿದ್ಯತೇ । ಯಜ್ಞೇನ ಯಜ್ಞಮಯ ಜಂತದೇವಾಃ
ತಾನಿಧರ್ಮಾಣಿ ಪ್ರಥಮಾನ್ಯಾಸನ್ ತೇಹನಾಕರ್ಮಹಿಮಾನಸ್ಸಚಂತೇ ।
ಯತ್ರ ಪೂರ್ವೇ ಸಾಧ್ಯಾಸ್ಸನ್ತಿ ದೇವಾಃ

## ಪುರುಷಸೂಕ್ತ

ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಆ ಪ್ರಜೆಗಳು ಚಾತುರ್ವರ್ಣ್ಯ ಪಾಲನೆಯಲ್ಲಿ ನಿರತರಾಗಿ, ಶ್ರದ್ಧೆಯಿಂದ ಸದಾಚಾರದಲ್ಲಿ ಆಸಕ್ತರಾಗಿದ್ದರು. ಕರ್ಮಾನುಷ್ಠಾನದಿಂದ ನಿರ್ಮಲರಾದ ಅವರು ಪರಿಶುದ್ಧಾತ್ಮರೂ, ಮುಕ್ತರೂ ಆಗಿ ತಮಗೆ ತೋರಿದ ಸ್ಥಳದಲ್ಲಿ ನೆಲಸಿದ್ದರು. ಅವರು ಮನಸ್ಸು ಶುದ್ಧವಾಗಿರಲು, ಶುದ್ಧವಾದ ಅಂತಃಕರಣದಲ್ಲಿ ಶ್ರೀಹರಿಯು ನೆಲೆಸಿದ್ದನು. ಆದ್ದರಿಂದ ಅವರಿಗೆ ಶುದ್ಧವಾದ ಪರಿಪೂರ್ಣವಾದ ಜ್ಞಾನವು ನೆಲಸಿತ್ತು. ಅದರಿಂದ ಅವರು ವಿಷ್ಣು ಎಂಬ ಪರಮಪದವನ್ನು ತಿಳಿದವರಾಗಿದ್ದರು.

ಅನಂತರ (ಕೃತಯುಗ ಕಳೆದಮೇಲೆ) ವಿಷ್ಣುವಿನ ಅಂಶವಾದ ಕಾಲ ಎಂಬುದನ್ನು ಈ ಹಿಂದೆ ಹೇಳಿದೆನಲ್ಲಾ ಮೈತ್ರೇಯ, ಅದು ಅಲ್ಪಸಾರವೂ ಘೋರವೂ ಆದ 'ಪಾಪ'ವೆಂಬುದನ್ನು ಪ್ರದರ್ಶಿಸಿತು. ಅದರಿಂದಾಗಿ ಪ್ರಜೆಗಳಲ್ಲಿ ಅಜ್ಞಾನ ಮತ್ತು ಲೋಭಗಳಿಂದ ಹುಟ್ಟಿದ, ಪುರುಷಾರ್ಥಕ್ಕೆ ಘಾತುಕವೂ ಆದ ರಾಗದ್ವೇಷಾದಿಗಳೆಂಬ ಅಧರ್ಮಬೀಜವು ಹುಟ್ಟಿತು. ಅದರಿಂದಾಗಿ ಪ್ರಜೆಗಳಲ್ಲಿ ಸಹಜಸಿದ್ಧಿಯಾದ ವಿಷ್ಣುಪದ ಪ್ರಾಪ್ತಿಯೂ ಸಹ ರಸೋಲ್ಲಾಸ ಮೊದಲಾದ ಉಳಿದ ಅಷ್ಟಸಿದ್ಧಿಗಳೂ ವಿಶೇಷವಾಗಿ ದೊರಕದೆ ಹೋದವು. ಅಷ್ಟಸಿದ್ಧಿಗಳು ಯಾವುವೆಂದರೆ **1. ರಸೋಲ್ಲಾಸ** (ಆಹಾರವಿಲ್ಲದೆ ಹಸಿವಿನ ನಿವಾರಣೆ) **2. ತೃಪ್ತಿ ಭೋಗವಿಲ್ಲದಿದ್ದರೂ ತೃಪ್ತಿ 3. ಧರ್ಮೋತ್ತಮ** (ಧರ್ಮದಲ್ಲಿ ನಿಷ್ಠೆ) **4. ತುಲ್ಯತಾ** (ಎಲ್ಲರಿಗೂ ಸಮಾನವಾದ ಆಯಸ್ಸು ಮತ್ತು ರೂಪ) **5. ವಿಶೋಕ** (ಶೋಕವಿಲ್ಲದುದು) **6. ತಪೋಧ್ಯಾನನಿಷ್ಠೆ** (ತಪೋನುಷ್ಠಾನಗಳಲ್ಲಿ ನಿಷ್ಠೆಯಿಂದ ಇರುವುದು **7. ಕಾಮಚಾರಿತ್ವ** (ಮನಸ್ಸು ಬಂದೆಡೆಗೆ ಕೂಡಲೇ ಹೋಗುವ ಶಕ್ತಿ **8. ಯತ್ರಕ್ವಚನಶಾಯಿತಾ** (ಯಾವ ಸ್ಥಳದಲ್ಲಾದರೂ ಸಂತೋಷದಿಂದ ಮಿಶ್ರಮಿಸಿಕೊಳ್ಳಬಲ್ಲ ಮನೋಬಲ)

ಈ ಸಿದ್ಧಿಗಳೆಲ್ಲವೂ ಕ್ರಮೇಣ ಕ್ಷೀಣವಾದಾಗ ಪಾಪಕರ್ಮವು ಹೆಚ್ಚಾಯಿತು. ಪ್ರಜೆಗಳು ಶೀತ ಉಷ್ಣಾದಿ ದ್ವಂದ್ವಗಳಿಗೆ ಸಿಕ್ಕಿ ದುಃಖಾರ್ತರಾದರು, ಆ ಸಮಯದಲ್ಲಿ ಜನರು ತಮ್ಮ ರಕ್ಷಣೆಗಾಗಿ ಮರುಭೂಮಿ, ಪರ್ವತ

ನೀರು ಮೊದಲಾದ ಸಹಜಕೋಟೆಗಳಿಂದಲೂ ಸ್ವಯಂ ನಿರ್ಮಿತವಾದ ಕೋಟೆಗಳಿಂದಲೂ ಆವೃತವಾದ ನಗರ ಹಳ್ಳಿ (ಖೇಡ, ಖರ್ವಡ, ದುರ್ಗ ದ್ರೋಣಾಮುಖ) ಗಳನ್ನು ನಿರ್ಮಿಸಿದರು. ಅವರು ಚಳಿ-ಬಿಸಿಲು ಮೊದಲಾದ ಬಾಧೆಗಳಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಮನೆಗಳನ್ನು ಕಟ್ಟಿಕೊಂಡರು. ಹೀಗೆಯೇ ಪ್ರಜೆಗಳು ಜೀವನೋಪಾಯಕ್ಕಾಗಿ ಕೃಷಿ ಮುಂತಾದವುಗಳನ್ನು ಕೈಗಾರಿಕೆಗಳನ್ನು ಪ್ರಾರಂಭಿಸಿದರು. ಭತ್ತ ಜವೆ ಗೋಧಿ ಎಳ್ಳು, ನವಣೆ, ಉದಾರ (ಜೋಳ), ಹಾರಕ, ಬಟಾಣಿ, ಉದ್ದು, ಹೆಸರು, ಮಸೂರ, ಅವರೆ, ಹುರುಳಿ, ತೊಗರಿ ಕಡಲೆ ಶಣ ಎಂಬ ಹದಿನಾರು ಜಾತಿಯ ಗ್ರಾಮ್ಯ ಬೆಳೆಗಳನ್ನು ಸೇರಿದ ಬೆಳೆಗಳನ್ನು ಬೆಳೆದರು. ಅಷ್ಟೇ ಅಲ್ಲದೇ ಯಜ್ಞಕ್ಕೆ ಬೇಕಾಗುವ ಭತ್ತ, ಜವೆಧಾನ್ಯ, ಉದ್ದು, ಗೋಧಿ, ಅಣು, ಎಳ್ಳು, ನವಣೆ, ಹುರುಳಿ ಸಾಮೆ, ನೀವಾರ (ಒಂದು ರೀತಿಯ ಕಾಡುಭತ್ತ) ಕಾಡುಎಳ್ಳು ಕಾಡುಗೋಧಿ, ಬಿದಿರಿನ ಧಾನ್ಯ ಮರ್ಕಟಕ ಎಂಬ ಕಾಡುಧಾನ್ಯ ಈ ಹದಿನಾಲ್ಕು ಯಜ್ಞೋಪಯೋಗಿಗಳಾದ ಔಷಧಿಗಳನ್ನು ಉತ್ಪಾದಿಸಿದರು. ಮೇಲೆ ಹೇಳಿದ ಮಾನವನ ಜೀವನ ವಿಕಸನವು ವಿಜ್ಞಾನಿಯಾದ ಡಾರ್ವಿನ್ ಸಿದ್ಧಾಂತವನ್ನು ಹೋಲುತ್ತದೆ. ಅಲ್ಲವೇ?

ಈ ಧಾನ್ಯಗಳೂ ಯಜ್ಞವೂ ಸಹ ಪ್ರಜೆಗಳ ಅಭಿವೃದ್ಧಿಗೆ ಕಾರಣವಾಗಿವೆ. ಆದ್ದರಿಂದ ಇಹ - ಪರಗಳನ್ನು ತಿಳಿದ ಪ್ರಾಜ್ಞರು ಯಜ್ಞವನ್ನು ಮಾಡಿದರು. ಇಂದಿಗೂ ಯಜ್ಞ-ಯಾಗಾದಿಗಳನ್ನು ಕೆಲವರು ಆಚರಿಸುತ್ತಾರೆ. ಪಾಪಪರಿಹಾರವಾದ, ಆರೋಗ್ಯವರ್ಧಕವಾದ ಈ ಯಜ್ಞವು ಜನರಿಗೆ ತುಂಬಾ ಉಪಕಾರಿಯಾದದ್ದು. ಆದರೆ ಯಾರ ಚಿತ್ತದಲ್ಲಿ ಕಾಲವಶದಿಂದ ಅಧರ್ಮದ ಬೀಜವು ಬೆಳೆಯಿತೋ ಅವರು ಯಜ್ಞಗಳನ್ನು ಆಚರಿಸಲು ಮನಸ್ಸು ಮಾಡಲಿಲ್ಲ. ಯಜ್ಞವನ್ನು ವಿರೋಧಿಸಬೇಕೆಂದೇ ಆ ಜನರು ವೈದಿಕಮತವನ್ನು ವೇದವನ್ನೂ ಯಜ್ಞಾದಿಕರ್ಮಗಳನ್ನು ನಿಂದಿಸಲು ಆರಂಭಿಸಿದರು. ಈ ಕುಟಿಲ ಬುದ್ಧಿಯುಳ್ಳವರು ವೇದವನ್ನೂ, ಯಜ್ಞಾದಿಕರ್ಮಗಳನ್ನು ನಿಂದಿಸಲು ಆರಂಭಿಸಿದರು. ಈ ಕುಟಿಲ ಬುದ್ಧಿಯುಳ್ಳವರು ವೇದವನ್ನು ನಿಂದಿಸುತ್ತಾರೆ. ಪ್ರವೃತ್ತಿ ಮಾರ್ಗವನ್ನೇ ತೊಡೆದುಹಾಕಲು ಉದ್ಯುಕ್ತರಾದರು. ಆ ಸಮಯದಲ್ಲಿ ಪ್ರಜೆಗಳ ಸ್ಥಾನ, ಗುಣಗಳಿಗೆ ಅನುಕೂಲವಾಗಿ ಒಂದು

ವ್ಯವಸ್ಥೆಯನ್ನು ಮಾಡಿದನು. ವರ್ಣಗಳ ಮತ್ತು ಆಶ್ರಮಗಳ ಧರ್ಮಗಳನ್ನು ತಮ್ಮ ಧರ್ಮಗಳನ್ನು ಚೆನ್ನಾಗಿ ಪಾಲಿಸುವ ಎಲ್ಲ ವರ್ಣದವರಿಗೆ ತಕ್ಕ ಲೋಕಗಳನ್ನು ಗೊತ್ತು ಮಾಡಿದನು. ಅದರಂತೆ ಕ್ರಿಯಾಶೀಲರಾದ ಬ್ರಾಹ್ಮಣರಿಗೆ  ಪಿತೃಲೋಕವನ್ನೂ, ಯುದ್ಧದಲ್ಲಿ ಹಿಮ್ಮೆಟ್ಟದ ಕ್ಷತ್ರಿಯರಿಗೆ ಇಂದ್ರಲೋಕವನ್ನೂ, ಸ್ವಧರ್ಮನಿಷ್ಠರಾದ ವೈಶ್ಯರಿಗೆ ವಾಯುಲೋಕವನ್ನೂ ಗೊತ್ತು ಮಾಡಿದನು. ಇವೆಲ್ಲಕ್ಕೂ ಮಿಗಿಲಾಗಿ

**ಅಷ್ಟಾಶೀತಿಪ್ರಾಣಿ ಮುನೀನಾಮೂರ್ಧ್ವರೇತಸಾಮ್**

**ಸಮೃತಂ ತೇಷಾಂತು ಯತ್ಸ್ಥಾನಂ ತದೇವ ಗುರುವಾಸಿನಾಮ್**

ವಿ.ಪು. ಪ್ರಥಮಾಂಶಅ–6ಶ್ಲೋಕ 34

ಊರ್ದ್ವರೇತಸ್ಯರಾದ ಎಂಬತ್ತೆಂಟುಸಾವಿರ ಮುನಿಗಳಿದ್ದಾರಂತೆ ಅವರಿಗೆ ಯಾವ ಸ್ಥಾನವೋ ಅದು ಗುರುಕುಲ ವಾಸಿಗಳಾದ ಬ್ರಹ್ಮಚಾರಿಗಳಿಗೆ ಲಭಿಸುತ್ತದೆ. ವಾನಪ್ರಸ್ಥಾಶ್ರಮದವರಿಗೆ ಸಪ್ತರ್ಷಿ ಲೋಕವು ಪ್ರಾಪ್ತವಾಗುತ್ತದೆ. ಗೃಹಸ್ಥರಿಗೆ, ಪಿತೃಲೋಕ ಸಂನ್ಯಾಸಿಗಳಿಗೆ ಬ್ರಹ್ಮಲೋಕವು (ಮೋಕ್ಷ) ದೊರೆಯುತ್ತದೆ.

**ಏಕಾಂತಿನಃ ಸದಾ ಬ್ರಹ್ಮ ಧ್ಯಾಯಿನೋ ಯೋಗಿನಶ್ಚಯೇ**

**ತೇಷಾಂ ತು ಪರಮಂ ಸ್ಥಾನಂ ಯತ್ತತ್ಪಶ್ಯನ್ತಿ ಸೂರಯಃ**

**ಗತ್ವಾ ಗತಾ ನಿವರ್ತಂತೇ ಚಂದ್ರ ಸೂರ್ಯದಯೋಗೃಹಾಃ**

**ಅದ್ಯಾಪಿ ನ ನಿವರ್ತಂತೇ ದ್ವಾದಶಾಕ್ಷರ ಚಿಂತಕಾಃ**

ವಿ.ಪು. ಪ್ರಥಮಾಂಶ ಅ.6.ಶ್ಲೋಕ 39–40

ಚಂದ್ರ ಸೂರ್ಯಾದಿಗಳು ಮತ್ತೆ ಮತ್ತೆ  ಲಯವಾಗಿ ಹುಟ್ಟಿ ಬರುತ್ತದೆ. ಆದರೆ ದ್ವಾದಶಾಕ್ಷರ ಮಂತ್ರವನ್ನು ಅಂದರೆ 'ಓಂ ನಮೋ ಭಗವತೇ ವಾಸುದೇವಾಯ" ಎಂಬ ಮಂತ್ರವನ್ನು ಜಪಿಸುವವರಿಗೆ ಪುನರ್ಜನ್ಮವೆಂಬುದೇ ಇರುವುದಿಲ್ಲ ಎಂದು ಪರಾಶರರು ಖಡಾಖಂಡಿತವಾಗಿ ತಿಳಿಸಿದ್ದಾರೆ.

**ತಾಮಿಸ್ರ ಮನ್ದ ತಾಮಿಸ್ರಂ ಮಹಾರೌರವರೌರವೌ**

**ಅಸಿಪತ್ರವನಂ ಘೋರಂ ಕಾಲಸೂತ್ರಮವೀಚಿಕಮ್**

**ವಿನಿಂದ ಕಾನಾಂ ವೇದಸ್ಯ ಯಜ್ಞ ವ್ಯಾಘಾತಕಾರಿಣಮ್**

**ಸ್ಥಾನಮೇತತ್ಸಮಾಸ್ಯಾತಂ ಸ್ವಧರ್ಮತ್ಯಾಗಿನಶ್ಚಯೇ ॥**

ವಿ.ಪು. ಪ್ರಥಮಾಂಶ ಅ.6.ಶ್ಲೋಕ. 41–42

ಯಾರು ವೇದನಿಂದಕರೋ ಯಜ್ಞಕ್ಕೆ ವಿಷಕಾರಿಗಳೋ ಸ್ವಧರ್ಮವನ್ನೇ ಬಿಟ್ಟವರೋ ಅಂಥಹವರಿಗೆ ನರಕ ಲಭ್ಯವಾಗುತ್ತದೆ. ಸ್ವಧರ್ಮೇನಿಧನಂ ಶ್ರೇಯಃ ಎಂದು  ಗೀತೆಯಲ್ಲಿ ವಿವರಿಸಲಾಗಿದೆ. ನರಕಯಾತನೆಗಳಲ್ಲಿಯೂ ಏಳು ವಿಧಗಳಿವೆ.

1. ತಾಮಿಸ್ರ  2. ಅಂಧತಾಮಿಸ್ರ 3. ಮಹಾರೌರವ 4. ರೌರವ 5. ಅಸಿಪತ್ರವನ, 6. ಘೋರವಾದ ಕಾಲಸೂತ್ರ 7. ಅವೀಚಕ ಎಂಬ ನರಕಗಳು ಇವೆ.

ಬ್ರಹ್ಮನು ಈ ಸೃಷ್ಟಿಯನ್ನು ಕುರಿತು ಧ್ಯಾನಮಗ್ನನಾಗಿದ್ದಾಗ ಅವನ ಶರೀರದಿಂದ ಹುಟ್ಟಿದ ಪಂಚಭೂತಗಳಿಂದಲೇ ನಿರ್ಮಿತವಾದ ಶರೀರಗಳಿಂದಲೂ ಇಂದ್ರಿಯಗಳಿಂದಲೂ ಕೂಡಿದ ಮಾನಸ ಪ್ರಜೆಗಳು ಜನಿಸಿದರು. ದೇವತೆಗಳಿಂದ ಹಿಡಿದು ಸ್ಥಾವರಾಂತಗಳಾದ ಸಕಲರೂ ತ್ರಿಗುಣಾತ್ಮಕರಾಗಿದ್ದಾರೆ. ಹೀಗೆ  ಚರಾಚರಗಳ ಸೃಷ್ಟಿಯಾಯಿತು. ಆಗ

**ಯದಾಸ್ಯ ತಾಃ ಪ್ರಜಾಃ ಸರ್ವಾ ನವ್ಯವರ್ಧಂತ ದೀಮತಃ**

**ಅಧಾನ್ಯಾನ್ಮಾನ ಸಾನ್ಪುತ್ರಾದೃಶಾ ನಾತ್ಮನೋ ಸೃಜತ್**

**ಭೃಗುಂ ಪುಲಸ್ತ್ಯಂ ಪುಲಹಂ ಕ್ರತಮಂಗೀರಸಂತಥಾ**

**ಮರೀಚಿ ದಕ್ಷಮತ್ರಿಂ ಚ ವಸಿಷ್ಠಂ ಚೈವ ಮಾನಸಾನ್**

**ನವ ಬ್ರಹ್ಮಾಣ ಇತ್ಯೇತೇ ಪುರಾಣೇ ನಿಶ್ಚಯಂಗತಾಃ**

**ಖ್ಯಾತಿ, ಭೂತಿಂ ಚ ಸಂಭೂತಿಂ ಕ್ಷಮಾಂ ಪ್ರೀತಿ ತಥೈವಚ**

**ಸನ್ನತಿಂ ಚ ತಥೈವೋರ್ಜಾ ಮನಸೂಯಾಂ ತಥೈವ ಚ**

**ಪ್ರಸೂತಿಂ ಚತತಃ ಸೃಷ್ಟ್ವಾ ದದೌ ತೇಷಾಂ ಮಹಾತ್ಮಾನಾಂ**

**ಪತ್ನ್ಯೋ ಭಗವದ್ವಮಿತ್ಯುಕ್ತ್ವಾ ತೇಷಾಮೇವತು ದತ್ತವಾನ್**

**ಸನಂದಾನಾದಯೇ ಯೇ ಚ ಪೂರ್ವಸೃಷ್ಟಾಸ್ತುತ ವೇಧಸಾ**

**ನತೇ ಲೋಕೇ ಷ್ವ ಸಂಜಂ ತಂ ನಿರಪೇಕ್ಷಾಃ ಪ್ರಜಾಸುತೇ**

**ಸರ್ವೇ ತೇಭ್ಯಾಗತ ಜ್ಞಾನಾ ವೀತರಾಗಾ ವಿಮತ್ಸರಾಃ**

**ತೇಷ್ವೇನಂ ನಿರಪೇಕ್ಷೇಷು ಲೋಕಸೃಷ್ಟೌ ಮಹಾತ್ಮನಃ**

**ಬ್ರಹ್ಮಣೋಭೂನ್ಮಾಹಾನ್ ಕ್ರೋಧಸ್ತ್ರೈ ಲೋಕ ದಹನಕ್ಷಮಃ**

**ತದ್ಯ ಕ್ರೋಧಾತ್ಸಮುದ್ಭೂತ ಜ್ವಾಲಾ ಮಾಲಾತಿ ದೀಪಿತಮ್**

**ಬ್ರಹ್ಮಣೋಭುತ್ತದಾ ಸರ್ವ ತ್ರೈಲೋಕ್ಯಮಖಿಲಂ ಮುನೇ**

**ಭುಕುಟೀಕುಟಿಲಾತ್ತಸ್ಯ ಲಲಾಟಾ ತ್ಕ್ರೋಧದೀಪಿಕಾತ್**

**ಸಮುತ್ಪನ್ನ ಸ್ತದಾ ರುದ್ರೋ ಮದ್ಧ್ಯಾಹಾರ್ಕ ಸಮಪ್ರಭಃ**

**ಅರ್ಧನಾರೀ ನರವಪುಃ ಪ್ರಚಂಡೋತಿ ಶರೀರವಾನ್**

**ವಿಭಜಾತ್ಮಾನ ಮತ್ಯುಕ್ತ್ವಾಂ ತಂ ಬ್ರಹ್ಮಾಂತರ್ದದೇ ತತಃ**

**ತಥೋಕ್ತೋಸೌ ದ್ವಿಧಾ ಸ್ತ್ರೀತ್ವಂ ಪುರುಷತ್ವಂ ತಥಾಕರೋತ್**

**ಬಭೇದ ಪುರುಷತ್ವಂ ಚ ದಶಧಾ ಚೈಕಧಾಪುನಃ**

**ಸೌಮ್ಯಾಸೌಮ್ಯೈಸ್ತದಾ ಶಾನ್ತಾ ಶಾನ್ತೈಃ ಸ್ತ್ರೀತ್ವಂ ಚಸಪ್ರಭು**

**ಬಭೇದ ಬಹುದಾ ದೇವಃ ಸ್ವರೂಪೈರಸಿತೈಃ ಸಿತೈಃ**

ವಿ.ಪು. ಪ್ರಥಮಾಂಶ ಅ. 7. ಶ್ಲೋಕ. 4ರಿಂದ 15

ಹೀಗೆ ಜನಿಸಿದ ಪ್ರಜೆಗಳು ಸಂತತಿಯನ್ನು ಪಡೆದು ವೃದ್ಧಿಹೊಂದಲಿಲ್ಲ. ಆಗ ಬ್ರಹ್ಮನು ತನಗೆ ಸದೃಶರಾದ ಕೆಲವು ಪುತ್ರರನ್ನು ಸೃಜಿಸಿದರು. ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗೀರಸ, ಮರೀಚಿ, ದಕ್ಷ, ಅತ್ರಿ, ವಸಿಷ್ಠ ಇವರೇ ಬ್ರಹ್ಮನ ಮಾನಸಪುತ್ರರು, ಇವರು ಒಂಬತ್ತು ನವಬ್ರಹ್ಮರೆಂದು ಪುರಾಣದಲ್ಲಿ ಪ್ರಸಿದ್ಧರಾಗಿದ್ದಾರೆ. ನಂತರ ಬ್ರಹ್ಮನು ಈ ನವಬ್ರಹ್ಮರಿಗೆ ವಿವಾಹಮಾಡಿದನು.

ಅದರ ವಿವರಗಳು ಇಂತಿವೆ.

| ನವಬ್ರಹ್ಮರು | ನವಬ್ರಹ್ಮರ ಪತ್ನಿಯರು |
|---|---|
| ಭೃಗು | ಖ್ಯಾತಿ |
| ಪುಲಸ್ತ್ಯ | ಭೂತಿ |
| ಪುಲಹ | ಸಂಭೂತಿ |
| ಕ್ರತು | ಕ್ಷಮಾ |
| ಅಂಗೀರಸ್ | ಪ್ರೀತಿ |
| ಮರೀಚಿ | ಸಂನತಿ |
| ದಕ್ಷ | ಊರ್ಜಾ |
| ಅತ್ರಿ | ಅನಸೂಯ |
| ವಸಿಷ್ಠ | ಪ್ರಸೂತಿ |

ಇದಕ್ಕೂ ಮೊದಲು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಸನಕ ಸನಂದಾದಿಗಳು ಸಂತಾನದಲ್ಲಿ ಅಪೇಕ್ಷೆಯಿಲ್ಲದವರಾದರು. ಅವರು ಲೋಕವ್ಯವಹಾರದಲ್ಲಿ ತೊಡಗಲಿಲ್ಲ. ಅವರು ವಿರಕ್ತರಾಗಿ ಮದಮಾತ್ಸರ್ಯಾದಿ ದೋಷಗಳಿಂದಲೂ ವಿಮುಕ್ತರಾದರು. ಮಹಾಜ್ಞಾನಿಗಳೂ ಆದರು.

ಇವರ ನಿರಪೇಕ್ಷೆಯನ್ನು ಕಂಡು ಬ್ರಹ್ಮನಿಗೆ ಅತ್ಯಂತ ಕ್ರೋಧ ಉಂಟಾಯಿತು. ಎಲೈ ಮೈತ್ರೇಯ! ಬ್ರಹ್ಮನ ಆ ಕ್ರೋಧದಿಂದ ಸಮಸ್ತ ಲೋಕತ್ರಯವೂ ಜ್ವಾಲೆಗಳಿಂದ ಸಮಾವೃತ ಉದ್ದೀಪಿತವಾಯಿತು. ಕೋಪದಿಂದ ಹುಬ್ಬುಗಂಟಿಕ್ಕಿದ ಆತನ ಲಲಾಟದಿಂದ ಮಧ್ಯಾಹ್ನದ ಸೂರ್ಯನಂತೆ ದೀಪ್ತನಾದ ರುದ್ರನು ಆವಿರ್ಭವಿಸಿದನು. ಆ ರುದ್ರನು ಉಗ್ರಸ್ವರೂಪನಾಗಿದ್ದನು. ಮಹಾಶರೀರಿಯಾದ ಅವನು ತನ್ನ ಶರೀರವನ್ನು ವ್ಯಕ್ತಪಡಿಸಿದನು. ಅವನ ಶರೀರದ ಅರ್ಧಭಾಗವು ಸ್ತ್ರೀ ರೂಪವುಳ್ಳದ್ದೂ ಮತ್ತೊಂದು ಭಾಗವು ಪುರುಷರೂಪವುಳ್ಳದ್ದಾಗಿತ್ತು. ಇದರಿಂದಾಗಿ

ಅರ್ಧನಾರೀಶ್ವರ ಎಂದು ಪ್ರಸಿದ್ಧನಾದನು. ಬ್ರಹ್ಮನು ಆತನನ್ನು ಕಂಡು **ನಿನ್ನ ದೇಹವನ್ನು ವಿಭಾಗಿಸು** ಎಂದು ನುಡಿದನು. ಅದರಂತೆರುದ್ರನ್ನು ತನ್ನ ದೇಹವನ್ನು ಸ್ತ್ರೀ–ಪುರುಷ ಎಂದು ಎರಡು ಭಾಗವಾಗಿ ವಿಭಾಗಿಸಿದನು. ಅಷ್ಟೇ ಅಲ್ಲದೆ ತನ್ನ ಪುರುಷ ದೇಹವನ್ನು ಮತ್ತೆ ಏಕಾದಶ ಬೇಧಗಳಾಗಿ ವಿಭಾಗಿಸಿಕೊಂಡನು. ಹೀಗಾಗಿ ಏಕಾದಶರುದ್ರರು ಜನಿಸಿದರು. ಅನಂತರ ಆ ರುದ್ರನು ತನ್ನ ಸ್ತ್ರೀದೇಹವನ್ನು ಸೌಮ್ಯ–ಕ್ರೂರ, ಶಾಂತ–ಅಶಾಂತ ಶ್ಯಾಮ–ಗೌರ ಎಂಬಂತೆ ನಾನಾಸ್ವರೂಪಗಳನ್ನಾಗಿ ವಿಂಗಡಿಸಿದನು. ರುದ್ರನು ಸತೀ ಎಂಬ ದಕ್ಷಪ್ರಜಾಪತಿಯ ಮಗಳನ್ನು ಮದುವೆಯಾದನು. ಅವಳು ಒಮ್ಮೆ ದಕ್ಷನ ಮೇಲೆ ಕೋಪಗೊಂಡು ತನ್ನ ದೇಹವನ್ನು ತ್ಯಜಿಸಿದಳು. (ದಕ್ಷಯಜ್ಞಕ್ಕೆ ತನ್ನ ಪತಿಯನ್ನು ಆಹ್ವಾನಿಸಲಿಲ್ಲವೆಂದು ಕುಪಿತಳಾದಳು. ಯಜ್ಞ ಮಾಡುತ್ತಿರುವಾಗ ಅಗ್ನಿಯಲ್ಲಿ ಧುಮುಕಿ ತನ್ನ ದೇಹವನ್ನು ತ್ಯಜಿಸಿದಳು ಎಂಬ ಕಥೆಯು ಇದೆ) ನಂತರ ಅವಳೇ ಹಿಮವಂತನ ಮಗಳಾಗಿ ಮೇನೆಯಲ್ಲಿ ಹುಟ್ಟಿದಳು.

**ಹಿಮವದ್ ದುಹಿತಾ ಸಾಭೂನ್ಮೇನಾಯಾಂ ದ್ವಿಜಸತ್ತಮ**

**ಉಪಯೋಮೇ ಪುನಶ್ಚೋಮಾಮನನ್ಯಾಂ ಭಗವಾನ್ ಹರಃ**

(ವಿ.ಪು. ಪ್ರಥಮಾಂಶ ಅ.6. 14ನೇ ಶ್ಲೋಕ)

ಆಗ ಭಗವಾನ್ ಹರನು ಸತೀದೇವಿಗೆ ಅಭಿನ್ನಳಾದ ಉಮಾ ಎಂಬ ಆ ಕನ್ಯೆಯನ್ನು ವಿವಾಹವಾದನು. ದುರ್ವಾಸರಿಂದ ಇಂದ್ರನಿಗೆ ಶಾಪ ಬ್ರಹ್ಮನಸ್ತುತಿ.

## ಅಮೃತಮಂಥನ

ಶ್ರೀಮನ್ನಾರಾಯಣನಿಗೂ ಲಕ್ಷ್ಮೀ ದೇವಿಗೂ ಅವಿನಾವಸಂಬಂಧವಿದೆ ಎಂದು ಪರಾಶರರು ಪರಾಮರ್ಶಿಸುತ್ತಾ ಮೈತ್ರೇಯರಿಗೆ ಇದರ ಬಗ್ಗೆ ತಿಳಿಸುತ್ತಾರೆ. ಪರಾಶರರು ಈ ಸಂಗತಿಯನ್ನು ಮರೀಚಿ ಮಹರ್ಷಿಗಳಿಂದ ಕೇಳಿ ತಿಳಿದಿದ್ದರು.

**ದುರ್ವಾಸಾಃ ಶಂಕರಸ್ಯೈಸ್ಸಾಂಶಶ್ಚಚಾರ ಪೃಥಿವೀಮಿಮಾಮ್ ।**

**ಸ ದದರ್ಶ ಸ್ರಜಂ ದಿವ್ಯಾಮೃಷಿವಿದ್ಯಾಧರೀಕರೇ ॥**

**ಸಂತಾನಕಾನಮಖಿಲಿಂ ಯಸ್ಯಾ ಗಂಧೇನ ವಾಸಿಕಮ್ ।**

**ಅತಿಸೇವ್ಯ ಮ ಭೂದ್ ಬ್ರಹ್ಮನ್ ತದ್ವನಂ ವನಚಾರಿಣಾಮ್ ॥**

**ಉನ್ಮತ್ತ ವೃತಧೃಗ್ವಿಪ್ರಸ್ತಾಂ ದೃಷ್ಟ್ವಾ ಶೋಭನಾಂ ಸ್ರಜಮ್ ।**

**ತಾಂಯಯಾಚೇ ವರಾರೋಹಾಂ ವಿದ್ಯಾಧರ ವಧೂಂ ತತಃ ॥**

**ಯಾಚಿತಾ ತೇನ ತನ್ವಂಗೀ ಮಾಲಾಂ ವಿದ್ಯಾಧರಾಂಗನಾ ।**

**ದದೌತಸ್ಮೈ ವಿಶಾಲಾಕ್ಷೀ ಸಾದರಂ ಪ್ರಣಿಪತ್ಯ ತಮ್ ॥**

**ಸದದರ್ಶ ತಮಾಯಾನ್ತ ಮುನ್ಮತ್ತೈರಾವತೇ ಸ್ಥಿತಮ್ ।**

**ತ್ರೈಲೋಕ್ಯಾಧಿಪತಿಂ ದೇವಂ ಸಹ ದೇವೈಃ ಶಚೀಪತಮ್ ॥**

(ವಿ.ಪು. ಪ್ರಥಮಾಂಶ ಅಧ್ಯಾಯ 9 2ರಿಂದ 7)

ದುರ್ವಾಸ ಮುನಿಗಳು ಶಂಕರನ ಅಂಶ. ಕೋಪದ ಪ್ರತಿರೂಪ ಒಮ್ಮೆ ಅವರು ಭೂಸಂಚಾರ ಮಾಡುತ್ತಿರುವಾಗ ಒಬ್ಬ ವಿದ್ಯಾಧರಿಯ ಕೈಯಲ್ಲಿ ಒಂದು ದಿವ್ಯವಾದ ಪುಷ್ಪಮಾಲೆಯನ್ನು ಕಂಡರು. ಅದು ಸಂತಾನಕ ಪುಷ್ಪಗಳಿಂದ ನಿರ್ಮಿತವಾದದ್ದು. ಅದರ ಸುಗಂಧವು ವನವನ್ನೆಲ್ಲ ವ್ಯಾಪಿಸಿತ್ತು. ಅದರಿಂದ ಅರಣ್ಯವಾಸಿಗಳು ಆನಂದದಿಂದ ಆ ಸುಗಂಧವನ್ನು ಆಘ್ರಾಣಿಸುತ್ತಿದ್ದರು. ಉನ್ಮತ್ತವೃತದಲ್ಲಿದ್ದ ದುರ್ವಾಸರು ಆ ಮಾಲೆಯನ್ನು ಕಂಡು ಅದನ್ನು ತಮಗೆ ಕೊಡಬೇಕೆಂದು ವಿದ್ಯಾಧರಿಯನ್ನು ಬೇಡಿದರು. ಆಗ ವಿಶಾಲಾಕ್ಷಿಯೂ ಸುಂದರಿಯೂ ಆದ ವಿದ್ಯಾಧರಿಯು ಅತ್ಯಂತ ಆದರದಿಂದ ದುರ್ವಾಸಮುನಿಗಳಿಗೆ ವಂದಿಸಿ ಆ ಮಾಲೆಯನ್ನು ಕೊಟ್ಟಳು. (ಉನ್ಮತ್ತ ವೃತ ಎಂಬುದಿದೆಯೇ ? ಹಾಗಿದ್ದರೆ ಅದು ದುರ್ವಾಸಮುನಿಗಳಿಗೆ ಮೀಸಲೇ ಅಥವಾ ಸತ್ಯವ್ರತ, ಧರ್ಮವ್ರತ ಎಂಬಂತೆ ಇದು ಉನ್ಮತ್ತವ್ರತ– ದುರ್ವಾಸರು ಮಾತ್ರ ಕೈಕೊಂಡ ವ್ರತವೇ ?) ತಮ್ಮ ಜೀವನದ ಗುರಿ ....... ಉನ್ಮತ್ತ ವೇಷದಲ್ಲಿದ್ದ ದುರ್ವಾಸರು ಆ ಮಾಲೆಯನ್ನು ಸ್ವೀಕರಿಸಿ ತಮ್ಮ ತಲೆಯ ಮೇಲಿಟ್ಟುಕೊಂಡು ಭೂಮಂಡಲದಲ್ಲಿ ಸುತ್ತಾಡುತ್ತಿದ್ದರು. ಹೀಗಿರುವಲ್ಲಿ ಶಚೀಪತಿಯೂ ತ್ರಿಲೋಕೇಶ್ವರನೂ ಆದ ಇಂದ್ರನು ಮದಿಸಿದ ಐರಾವತದ ಮೇಲೆ ಕುಳಿತು ದೇವತೆಗಳೊಡನೆ ಬರುತ್ತಿರುವುದನ್ನು ಅವರು

ಕಂಡರು. ಆಗ ದುರ್ವಾಸರು, ಪರಿಮಳಕ್ಕಾಗಿ ಮುತ್ತಿ ಮದವೇರಿದ ದುಂಬಿಗಳಿಂದ ಆವೃತವಾದ ಆ ಹೂಮಾಲೆಯನ್ನು ತಮ್ಮ ಶಿರಸ್ಸಿನಿಂದ ತೆಗೆದು ಹುಚ್ಚನಂತೆ, ದೇವೇಂದ್ರನ ಕಡೆಗೆ ಎಸೆದರು. ದೇವೇಂದ್ರನು ಅದನ್ನು ಹಿಡಿದುಕೊಂಡು ಐರಾವತದ ತಲೆಯ ಮೇಲೆ ಇಟ್ಟನು. ಆ ಮಾಲೆಯು ಕೈಲಾಸ ಶಿಖರದ ಮೇಲಿರುವ ಗಂಗಾನದಿಯಂತೆ ಶೋಭಿಸುತ್ತಿತ್ತಂತೆ. ಮದೋನ್ಮತವಾಗಿದ್ದ ಆ ಗಜವು ಪರಿಮಳದಿಂದ ಆಕರ್ಷಿತವಾಗಿ ಹೂಮಾಲೆಯನ್ನು ಸೊಂಡಲಿನಿಂದ ಎಳೆದು ಮೂಸಿನೋಡಿ ನೆಲದ ಮೇಲೆ ಎಸೆಯಿತು. ಅದನ್ನು ನೋಡಿ ದುರ್ವಾಸ ಮುನಿಗಳಿಗೆ ಅತ್ಯಂತ ಕ್ರೋಧ ಉಂಟಾಯಿತು. ಅವರು ದೇವೇಂದ್ರನನ್ನು ನೋಡಿ "ಎಲೈ, ಇಂದ್ರ, ಐಶ್ವರ್ಯ ಮದದಿಂದ ನಿನ್ನ ಚಿತ್ತ ಕಲುಷಿತವಾಗಿದೆ. ದುರಹಂಕಾರಿಯಾಗಿರುವೆ. ಲಕ್ಷ್ಮಿಗೆ ವಾಸಸ್ಥಾನವಾದದ್ದು ಈ ಪುಷ್ಪಮಾಲೆ. ಇದನ್ನು ಅನಾದರದಿಂದ ನೋಡುತ್ತಿದ್ದೀಯೇ, ಅದನ್ನು ಶಿರಸ್ಸಿನಲ್ಲಿಯೂ ಧರಿಸಲಿಲ್ಲ. ಎಲೈ ಮೂಢ! ಈ ನಿನ್ನ ತ್ರಿಲೋಕಾಧಿಪತ್ಯದ ಸಂಪತ್ತೆಲ್ಲಾ ನಾಶವಾಗುವುದು. ಯಾವಾತನಿಗೆ ಕೋಪ ಬಂದರೆ ಈ ಚರಾಚರ ಜಗತ್ತೇ ಭಯದಿಂದ ನಡುಗುವುದೋ ಅಂತಹ ನನ್ನನ್ನು ಅತಿಗರ್ವದಿಂದ ಅವಮಾನ ಮಾಡಿದ್ದೀಯೇ" ಎಂದರು. ಒಡನೆಯೇ ದೇವೇಂದ್ರನು ಐರಾವತದ ಹೆಗಲಿನಿಂದ ಕೆಳಗಿಳಿದು ಅವರ ಕಾಲಿಗೆ ಅಡ್ಡಬಿದ್ದು ಕ್ಷಮಿಸಬೇಕೆಂದು ಬೇಡಿಕೊಂಡನು. ಅದಕ್ಕೆ ದುರ್ವಾಸರು "ಎಲೈ ಇಂದ್ರ, ನಾನು ಕೃಪಾಳುವಲ್ಲ, ಕ್ಷಮಿಸುವ ಮುನಿಗಳೇ ಬೇರೆ ಇದ್ದಾರೆ. ನಾನು ದುರ್ವಾಸ ಗೌತಮಾ, ವಸಿಷ್ಠಾದಿ ಮುನಿಗಳು ನಿನಗೆ ವ್ಯರ್ಥವಾಗಿ ಗರ್ವವೆಂಬ ಅಟ್ಟಕ್ಕೇರಿಸಿದ್ದಾರೆ. ಆದರೆ "ಈ ದುರ್ವಾಸರಿಗೆ ಕ್ಷಮಿಸದೇ ಇರುವುದೇ ಸಾರಸರ್ವಸ್ವ" ಇಂದ್ರ ನಾನು ನಿನ್ನನ್ನು ಕ್ಷಮಿಸುವುದಿಲ್ಲ. **ಅಕ್ಷಾನ್ತಿ ಸಾರಸರ್ವಸ್ವಂ ದುರ್ವಾಸ ಸಮವೇಹಿಮಾಮ್** ಎಂದರು. ನಾನು ಕ್ಷಮಿಸುವುದಿಲ್ಲ ಹೆಚ್ಚು ಮಾತಾಡಿ ಏನು ಪ್ರಯೋಜನ ಎಂದು ಹೇಳಿ ದುರ್ವಾಸರು ಹೊರಟುಹೋದರು. ಇಂದ್ರನಾದರೋ ಮತ್ತೆ ಐರಾವತವನ್ನೇರಿ ಅಮರಾವತಿಗೆ ಹೋದನು. ಅಲ್ಲಿಂದ ಮುಂದೆ ಇಂದ್ರ ಸಹಿತವಾಗಿ ಮೂರುಲೋಕಗಳೂ ಶೋಭಾಹೀನವಾದವು. ಗಿಡಬಳ್ಳಿಗಳು ಫಲಪುಷ್ಪರಹಿತವಾದವು. ಎಲ್ಲೂ ಯಜ್ಞಗಳು ನಡೆಯಲಿಲ್ಲ. ಜನರಿಗೆ

ದಾನಾದಿ ಧರ್ಮ ಕಾರ್ಯಗಳಲ್ಲಿ ಮನಸ್ಸು ಬರಲಿಲ್ಲ, ಸತ್ವಹೀನವಾಗಿ ಲೋಕತ್ರಯವೂ ಸಂಪದ್ರಹಿತವಾಗಿ ಶೋಭಾಹೀನವಾಗಲು ದೈತ್ಯದಾನವರು ದೇವತೆಗಳ ಮೇಲೆ ಆಕ್ರಮಣ ಮಾಡಲು ಸಿದ್ಧರಾದರು. ಯುದ್ಧದಲ್ಲಿ ದೈತ್ಯರಿಂದ ಪರಾಜಿತರಾದ ಇಂದ್ರಾದಿ ದೇವತೆಗಳು ಅಗ್ನಿಯನ್ನು ಮುಂದಿಟ್ಟುಕೊಂಡು ಹೋಗಿ ಮಹಾತ್ಮನಾದ ಬ್ರಹ್ಮನಲ್ಲಿ ಮೊರೆಹೊಕ್ಕರು. ದೇವತೆಗಳೆಲ್ಲಾ ಯಥಾವತ್ತಾಗಿ ನಡೆದ ವೃತ್ತಾಂತವನ್ನು ತಿಳಿಸಿದರು. ಆಗ ಬ್ರಹ್ಮನು ದೇವತೆಗಳನ್ನು ಕುರಿತು ದೇವತೆಗಳೇ ಸರ್ವೇಶ್ವರನಾದ ಅಸುರಾರಿ ಎನಿಸಿದ ವಿಷ್ಣುವಿನಲ್ಲಿ ಹೋಗಿ ಶರಣಾಗಿರಿ ಎಂದನು. ಆತನೇ ಉತ್ಪತ್ತಿ ಸ್ಥಿತಿ ನಾಶಗಳಿಗೆ ಕಾರಣನು. ಅದರಲ್ಲೂ ಸ್ವಯಂ ಕಾರಣರಹಿತನಾದ ಕಾರಣನು. ಬ್ರಹ್ಮನ ಮಾತಿನಂತೆ ಸಕಲದೇವತೆಗಳೂ ವಿಷ್ಣುವಿನಲ್ಲಿ ಬಂದು ಮೊರೆಯಿಟ್ಟರು.

**ಪ್ರೋಚ್ಯತೇ ಪರಮೇಶೋ ಹಿಯಃ ಶುದ್ಧೋಪ್ಯುಪಚಾರತಃ**
**ಪ್ರಸೀದತು ಸನೋ ವಿಷ್ಣುರಾತ್ಮಾಯಃ ಸರ್ವದೇಹಿನಾಮ್**
**ಯಃ ಕಾರಣಂ ಚ ಕಾರ್ಯಂ ಚ ಕಾರಣಸ್ಯಾಪಿ ಕಾರಣಮ್**
**ಕಾರ್ಯವ್ಯಾಪಿ ಚಯಃ ಕಾರ್ಯಂ ಪ್ರಸೀದತುಸನೋಹರಿಃ**
**ಕಾರ್ಯ ಕಾರ್ಯಸ್ಯ ಯತ್ಕಾರ್ಯಂ ತತ್ಕಾರ್ಯಸ್ಯಾಪಿಯಃ ಸ್ವಯಂ**
**ತತ್ಕಾರಣಾನಾಂ ಹೇತುಂ ತಂ ಪ್ರಣತಾಃ ಸ್ಮ ಪರಮೇಶ್ವರಮ್**

(ವಿ.ಪು. ಪ್ರಥಮಾಂಶ 9ನೇ ಅಧ್ಯಾಯ 46ರಿಂದ 49ನೇ ಶ್ಲೋಕ)

ಇಲ್ಲಿ ಭಗವಂತ ಎಲ್ಲಕ್ಕೂ ಕಾರಣನು ಎಂದು ಸೊಗಸಾಗಿ ವರ್ಣಿಸಿದ್ದಾರೆ. ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟ.

ಭಗವಂತನಾದ ಮಹಾವಿಷ್ಣುವು ಕಾರಣನೂ ಕಾರ್ಯನೂ ಹೌದು. ಕಾರಣಕ್ಕೆ ಕಾರಣನೂ ಅವನೇ. ಕಾರ್ಯಕ್ಕೆ ಕಾರ್ಯನೂ ಅವನೇ. ಪರಮಾತ್ಮನ ಶಕ್ತಿಯೇ ಪ್ರಕೃತಿ. ಅದಕ್ಕೆ ಪ್ರಧಾನ ಅವ್ಯಕ್ತ ಎಂಬ ನಾಮಾಂತರಗಳಿವೆ. ಶಕ್ತಿಗೂ – ಶಕ್ತಿಮತ್ತಿಗೂ ವ್ಯತ್ಯಾಸವಿಲ್ಲ. ಪರಮಾತ್ಮನ ರೂಪಾಂತರವೇ ಪ್ರಕೃತಿಯೆನಿಸುತ್ತದೆ. ಇದರಿಂದ ಮಹತ್ತು ಅಹಂಕಾರ ಮೊದಲಾದ

ಪದಾರ್ಥಗಳು ಅವನಿಂದಲೇ ಹುಟ್ಟಿದವು. ಇಲ್ಲಿ ಯಾವುದು ಕಾರಣವೋ ಅದು ಕಾರ್ಯವೂ ಆಗಬಹುದು. ಉದಾಹರಣೆಗೆ ಮಹತ್ತು ಇದು ಪ್ರಕೃತಿಯ ಕಾರ್ಯಮಹತ್ತಿನಿಂದ ಅಹಂಕಾರ ಹುಟ್ಟುವುದರಿಂದ ಅಹಂಕಾರಕ್ಕೆ ಮಹತ್ತೇ ಕಾರಣ. ಹೀಗೆ ಎಲ್ಲವೂ ಪರಮಾತ್ಮನ ಸ್ವರೂಪವೇ ಆದ್ದರಿಂದ ಆತನು ಸಾಪೇಕ್ಷವಾಗಿ ಕಾರಣನೂ ಆಗುತ್ತಾನೆ. ಅವನೇ ಕಾರ್ಯನೂ ಆಗುತ್ತಾನೆ. ಯಾವಾತನು ಕಾರ್ಯಕ್ಕೆ ಅಂದರೆ ಮಹತ್ವಕ್ಕೂ ಕಾರ್ಯವಾದುದಕ್ಕೂ (ಅಹಂಕಾರ) ಕಾರ್ಯನಾಗಿ (ತನ್ಮಾತ್ರಾಪಂಚಕ) ಇದ್ದಾನೋ ಅದರ ಕಾರ್ಯದ (ಭೂತಪಂಚಕ) ಕಾರ್ಯವೂ (ಬ್ರಹ್ಮಾಂಡ) ಸ್ವಯಂ ಆಗಿದ್ದಾನೋ ಅದರ ಕಾರ್ಯಕ್ಕೆ (ಬ್ರಹ್ಮದಕ್ಷಾದಿ) ಕಾರ್ಯನೂ (ಪ್ರಜಾಪತಿಗಳ ಪುತ್ರಪೌತ್ರಾದಿ) ಆಗಿದ್ದಾನೋ ಆತನಿಗೆ ನಾವು ವಂದಿಸುತ್ತೇವೆ ಎಂದು ದೇವತೆಗಳು ಹಾಗೆಯೇ ಜಗತ್ ಕಾರಣಕ್ಕೆ (ಬ್ರಹ್ಮಾದಿ) ಕಾರಣವಾದ (ಬ್ರಹ್ಮಾಂಡ) ವಸ್ತುವೂ ಅದರ ಕಾರಣದ (ಪಂಚಭೂತಗಳ) ಕಾರಣವೂ (ತನ್ಮಾತ್ರಾಪಂಚಕ) ಅದರ ಕಾರಣಗಳಿಗೆ (ಅಹಂಕಾರ–ಮಹತತ್ವ) ಕಾರಣನೂ (ಪ್ರಕೃತಿ) ಆದ ಪರಮಾತ್ಮನಿಗೆ ಶರಣನಾಗಿದ್ದೇವೆ ಎಂದರು. ಅಂದರೆ ಭೋಕ್ತಾರನೂ ಅವನೇ, ಭೋಗ್ಯ ವಸ್ತುವೂ ಅವನೇ, ಸೃಷ್ಟಿಕರ್ತನೂ ಅವನೇ, ಸೃಜ್ಯವಸ್ತುವೂ ಅವನೇ, ಕರ್ತವೂ ಅವನೇ. ಕರ್ಮವೂ ಅವನೇ. ಅಂತಹ ಪರಮಪದವಾದ ಮಹಾವಿಷ್ಣುವಿಗೆ ಶರಣಾಗಿದ್ದೇವೆ ಎಂದು ದೇವತೆಗಳು ಪ್ರಾರ್ಥಿಸಿದರು. ಯಾವುದೇ ಸಂದರ್ಭದಲ್ಲಿ ಕಾರ್ಯ ಕಾರಣ ಸಂಬಂಧವಿಲ್ಲದೆ ಘಟನೆ ಅಥವಾ ಸಂಭವ ನಡೆಯುವುದಿಲ್ಲ ಎಂಬ ಹೇಳಿಕೆಯುಂಟು. ಇಲ್ಲಿ ಮಹಾವಿಷ್ಣುವೇ ಕಾರ್ಯನೂ ಹೌದು ಕಾರಣನೂ ಹೌದು. ಕರಣಂ ಕರಣಂಕರ್ತಾ 'ವಿಕರ್ತಾ ಗಹನೋ ಗುಹಃ' ಎಂಬ ವಿಷ್ಣುಸಹಸ್ರನಾಮದ ವಾಕ್ಯವನ್ನು ಗಮನಿಸೋಣ.

**ಆದ್ಯೋ ಯಜ್ಞಪುಮಾನೀಡ್ಯಃ ಪೂರ್ವೇಷಾಂಯಶ್ಚ ಪೂರ್ವಜಃ**

**ತನ್ನಾತಾಃ ಸ್ಮ ಜಗತ್ಸಷ್ಟುಃ ಸೃಷ್ಟಾರಮವಿಶೇಷಣಮ್**

(ವಿ.ಪು. ಪ್ರಥಮಾಂಶ ಅಧ್ಯಾಯ. 9, 61ನೇ ಶ್ಲೋಕ)

ಯಾವಾತನು ಆದ್ಯನೂ, ಸ್ತೋತ್ರಾರ್ಹನಾದ ಯಜ್ಞಪುರುಷನಾಗಿದ್ದಾನೋ,

ಪೂರ್ವಜರಾದ ಪ್ರಭಾವತಿ ಮೊದಲಾದವರಿಗಿಂತಲೂ ಹಿಂದಿನವನಾಗಿದ್ದಾನೋ ಸೃಷ್ಟಿಕರ್ತನಾದ ಬ್ರಹ್ಮನನ್ನು ಸೃಷ್ಟಿಸಿದ್ದಾನೋ ಅಂತಹ ಗುಣಾತೀತವಾದ ಪರವಸ್ತುವಿಗೆ ತಲೆಬಾಗುತ್ತೇವೆ ಎಂದು ಪ್ರಾರ್ಥಿಸಿದರು. ಆಗ ಭಗವಾನ್ ಶ್ರೀಹರಿಯು ಅವರನ್ನು ಪ್ರಸನ್ನ ದೃಷ್ಟಿಯಿಂದ ನೋಡುತ್ತಾ ಹೀಗೆಂದನು.

**ತೇಜಸೋಭವತಾಂ ದೇವಾಃ ಕರಿಷ್ಯಾಮ್ಯುಪಬೃಂಹಣಮ್**
**ವದಾಮಹ್ಯಂ ಯತ್ಕ್ರಿಯತಾಂ ಭವದ್ಭಿಸ್ತದಿದಂ ಸುರಾಃ**
**ಆನೀಯ ಸಹಿತಾದೈತ್ಯೈಃ ಕ್ಷೀರಾಬ್ಧೌ ಸಕಲೌಷದೀ**
**ಪ್ರಕ್ಷಿಪ್ಯಾ ತ್ರಾಮೃತಾರ್ಥಂ ಸಕಲಾ ದೈತ್ಯದಾನವೈಃ**
**ಮನ್ಥಾನಂ ಮನ್ದರಂ ಕೃತ್ವಾನೇತ್ರಂ ಕೃತ್ವಾಚವಾಸುಕಿಮ್**
**ಮಥ್ಯತಾ ಮಮೃಥಂ ದೇವಾಃ ಸಹಾಯೇ ಮಯ್ಯವಸ್ಥಿತೇ**
**ಸಾಮಪೂರ್ವಂ ಚ ದೈತೇಯಾಸ್ತತ್ರ ಸಾಹಾಯ್ಯಕರ್ಮಣಿ**
**ಸಾಮಾನ್ಯ ಫಲ ಭೋಕ್ತಾರೋ ಯಾಯಂ ವಾಚ್ಯಾ ಭವಿಷ್ಯಥ**
**ಮಥ್ಯಮಾನೇ ಚ ತತ್ರಾಭ್ಧೌ ಯತ್ರಮುತ್ಪತ್ಸ್ಯತೇಮೃತಮ್**
**ತತ್ಪಾನಾದ್ಬಲಿನೋ ಯಾಯಮಮರಾಶ್ಚ ಭವಿಷ್ಯತ**
**ತಥಾ ಚಾಹಂ ಕರಿಷ್ಯಾಮಿ ತೇಯಥಾ ತ್ರಿದಶದ್ವಿಷಃ**
**ನ ಪ್ರಾಪ್ಸ್ಯನ್ತಂ ಮೃತಂ ದೇವಾಃ ಕೇವಲಂ ಕ್ಲೇಶಭಾಗಿನಃ**

(ವಿ.ಪು. ಅಧ್ಯಾಯ 9, ಶ್ಲೋಕ 76ರಿಂದ 81)

ಶ್ರೀಹರಿಯು ದೇವತೆಗಳನ್ನು ಪ್ರಸನ್ನಮುಖದಿಂದ ನೋಡುತ್ತಾ ಹೀಗೆ ಹೇಳಿದನು. "ದೇವತೆಗಳೇ ನಿಮ್ಮ ಶಕ್ತಿಯು ವರ್ಧಿಸುವಂತೆ ನಾನು ಮಾಡುತ್ತೇನೆ. ನೀವು ದೈತ್ಯ ದಾನವರೊಂದಿಗೆ ಸೇರಿ ಸಕಲ ಮೂಲಿಕೆಗಳನ್ನು ತಂದು ಅಮೃತೋತ್ಪಾದನೆಗಾಗಿ ಅವನ್ನು ಕ್ಷೀರಸಮುದ್ರದಲ್ಲಿ ಹಾಕಿರಿ. ನಂತರ ಮಂದರ ಪರ್ವತವನ್ನು ಕಡಗೋಲನ್ನಾಗಿಯೂ ವಾಸುಕಿಯನ್ನು (ಮಹಾಸರ್ಪ) ಕಡೆಯುವ ಹಗ್ಗವನ್ನಾಗಿಯೂ ಮಾಡಿಕೊಂಡು ಅಮೃತಕ್ಕಾಗಿ ಸಮುದ್ರವನ್ನು ಕಡೆಯಿರಿ. ನಾನು ನಿಮಗೆ ಸಹಾಯಕನಾಗಿರುವೆ. ನೀವು ದೈತ್ಯರೊಡನೆ ಸಾಮನೀತಿಯನ್ನು ಅವಲಂಬಿಸಿ ಈ ಕಾರ್ಯದಲ್ಲಿ

ಸಹಾಯಮಾಡಿದರೆ ಸಮುದ್ರಮಂಥನದಿಂದ ದೊರೆಯುವ ಫಲದಲ್ಲಿ ಸಮಭಾಗಿಗಳಾಗುತ್ತೀರಿ" ಬಹು ಮುಖ್ಯವಾದ ವಿಷಯವೊಂದಿದೆ ಸಮುದ್ರವನ್ನು ಕಡೆಯುವಾಗ ಯಾವ ಅಮೃತವು ಲಭಿಸುತ್ತದೋ ಅದನ್ನು ಕುಡಿಯುವುದರಿಂದ ನೀವು ಬಲಶಾಲಿಗಳೂ, ಮರಣರಹಿತರೂ ಆಗುವಿರಿ. ಆ ದೈತ್ಯರಿಗೆ ಅಮೃತವು ದೊರೆಯದಂತೆಯೂ ಕೇವಲ ಸಮುದ್ರಮಂಥನ ಕಾರ್ಯದಲ್ಲಿ ಮಾತ್ರ ಭಾಗಿಯಾಗುವಂತೆ ನಾನು ಮಾಡುವೆನು ಎಂದನು. ಸರಿ, ಅಮೃತಮಂಥನ ಕಾರ್ಯ ಆರಂಭಿಸಿತು. ಎಲ್ಲಾ ದೇವತೆಗಳು ವಾಸುಕಿಯ (ಹಾವು) ಬಾಲದ ಕಡೆಯಲ್ಲಿಯೂ ದೈತ್ಯರೆಲ್ಲರೂ ತಲೆಯ ಕಡೆಯಲ್ಲಿಯೂ ಇರುವಂತೆ ವಿಷ್ಣುವು ಯೋಜಿಸಿದನು.

ದೈತ್ಯರು ಬಲಿಷ್ಠರಾಗಿದ್ದರೂ ವಾಸುಕಿಯ ಉಸುರಿನ ಬೇಗೆಯ ತಾಪದಿಂದ ಕುಂದಿ ತೇಜೋಹೀನರಾದರು. ವಾಸುಕಿಯ ಅದೇ ಉಸಿರಿನ ರಭಸಕ್ಕೆ ತಳ್ಳಲ್ಪಟ್ಟ ಮೋಡಗಳು ಅದರ ಬಾಲದ ಕಡೆಗೆ ಹೋಗಿ ಮಳೆ ಸುರಿಸಲು ಆರಂಭಿಸಿತು. ಇದು ದೇವತೆಗಳಿಗೆ ತೃಪ್ತಿಯನ್ನುಂಟುಮಾಡಿತು.

**ಕ್ಷೀರೋದಮಧ್ಯೆ ಭಗವಾನ್ ಕೂರ್ಮರೂಪೀ ಸ್ವಯಂಹರಿಃ ।**
**ಮಂಥನಾದ್ರೇರಧಿಷ್ಠಾನಂ ಭಮತೋಭೂನ್ಮಹಾಮುನೇ ॥**
**ರೂಪೇಣಾನ್ಯೇನ ದೇವಾನಾಂ ಮಧ್ಯೆ ಚಕ್ರಗದಾಧರಃ**
**ಚಕರ್ಷ ನಾಗರಾಜಾನಂ ದೈತ್ಯಮಧ್ಯೇಪರೇಣ ಚ**
**ಉಪರ್ಯಾಕ್ರಾನ್ತವಾನ್ ಶೈಲಂ ಬೃಹಸದ್ರೂಪೇಣ ಕೇಶವಃ**
**ತಥಾ ಪರೇಣ ಮೈತ್ರೇಯ ಯನ್ನಂ ದೃಷ್ಟಂ ಸುರಾಸರೈಃ**
**ತೇಜಸಾ ನಾಗರಾಜಾನಂ ತಥಾಸ್ಯಾಯಿತವಾನ್ ಹರಿಃ**
**ಅನ್ಯೇನ ತೇಜಸಾ ದೇವಾನುಪಬೃಂಹಿತವಾನ್ ಪ್ರಭುಃ**
**ಮಥ್ಯಮಾನೇ ತತಸ್ತಸ್ಮಿನ್ ಕ್ಷೀರಾಬ್ಧೌ ದೇವದಾನವೈಃ**
**ಹವಿರ್ಧಾಮಭವತ್ಪೂರ್ವಂ ಸುರಭಿಃ ಸುರಪೂಜಿತಾ**
**ಜಗ್ಮುರ್ಮುದಂ ತತೋ ದೇವಾ ದಾನವಾಶ್ಚ ಮಹಾಮುನೇ**
**ವ್ಯಾಕ್ಷಿಪ್ತ ಚೇತನಶ್ಚೈವ ಬಬೂವುಃ ಸ್ತಿಮಿತೇಕ್ಷಣಾಃ**

**ಕಿಮೇತದಿತಿ ಸಿದ್ಧಾನಾಂ ದಿವಿಚಿಂತಯತಾಂ ತತಃ**
**ಬಭೂವ ವಾರುಣೀ ದೇವಿ ಮದಾಘೂರ್ಣಿತ ಲೋಚನಾ**
**ಕೃತಾವತ್ತಾಶತ್ತತಸ್ತಸ್ಮಾತ್ ಕ್ಷೀರೋದಾದ್ವಾದಯಂಜಗತ್**
**ಗಂಧೇನ ಪಾಜಾತೋಭೂದ್ದೇವಸ್ತ್ರೀ ನಂದನಸ್ತರುಃ**
**ರೂಪೌದಾರ್ಯ ಗುಣೋಪೇತಸ್ತಥಾ ಚಾಪ್ಸರಸಾಂ ಗಣಃ**
**ಕ್ಷೀರೋದಧೇಃ ಸಮುತ್ಪನ್ನೋ ಮೈತ್ರೇಯ ಪರಮಾದ್ಭುತಃ**
**ತತಃ ಶೀತಾಂಶುರಭವನ್ ಜಗ್ನಹೇ ತಂ ಮಹೇಶ್ವರಃ**
**ಜಗೃಹುಶ್ಚ ವಿಷಂ ನಾಗಾಃ ಕ್ಷೀರೋ ದಾಬ್ಧಿ ಸಮುತ್ಥಿತಮ್**
**ತತೋ ಧನ್ವಂತರಿರ್ದೇವಃ ಶ್ವೇತಾಂಬರದರಸ್ವಯಮ್**
**ಬಿಭೃತ್ಕಮಂಡಲುಂ ಪೂರ್ಣಂ ಅಮೃತಸ್ಯ ಸಮುತ್ಥಿತಃ**
**ತತಃ ಸ್ವಸ್ಥಮನಸ್ಕಾಸ್ತೇ ಸರ್ವೇ ದೈತೇಯ ದಾನವಾಃ ।**
**ಬಭೂವ ರ್ಮುದಿತಾ ಸರ್ವೇ ಮೈತ್ರೇಯಮುನಿಭಿಃ ಸಹ ॥**
**ತತಃ ಸ್ಫುರತ್ಕಾನ್ತಿಮತೀಃ ವಿಕಾಸಿಕಮಲೇ ಸ್ಥಿತಾ ।**
**ಶ್ರೀದೇವಿ ಪಯಸಸ್ತಸ್ಮಾದುದ್ಭೂತಾ ಧೃತಪಂಕಜಾ ॥**
**ತಾಂ ತುಷ್ಟುವುರ್ಮುದಾಯುಕ್ತಾಃ ಶ್ರೀಸೂಕ್ತೇನ ಮಹರ್ಷಯಃ**
**ವಿಶ್ವಾವಸು ಮುಕಾಸ್ತಸ್ಯಾ ಗಂದರ್ವಾಃ ಪುರತೋ ಜಗುಃ**

(ವಿ.ಪು. ಪ್ರಥಮಾಂಶ ಅಧ್ಯಾಯ–9 ಶ್ಲೋಕ 88 ರಿಂದ 101)

ಪರಾಶರರು ಮೈತ್ರೇಯರಿಗೆ ಅಮೃತಮಂಥನದ ಬಗ್ಗೆ ವಿವರಿಸುತ್ತ ಹೀಗೆಂದರು. ಎಲೈ ಮಹಾಮುನಿ ಮೈತ್ರೇಯ ಕ್ಷೀರಸಾಗರ ಮಧ್ಯದಲ್ಲಿ ಗಿರ್ರನೆ ತಿರುಗುತ್ತಿದ್ದ ಮಂರ ಗಿರಿಯ ತಳದಲ್ಲಿ ಮಹಾವಿಷ್ಣುವು ಕೂರ್ಮರೂಪವನ್ನು ಧರಿಸಿ ಆಧಾರವಾದನು. ಚಕ್ರಗದಾಧರನು ಒಂದು ರೂಪದಿಂದ ದೇವತೆಗಳ ನಡುವೆಯೂ ಇನ್ನೊಂದು ರೂಪವನ್ನು ಧರಿಸಿ ದೈತ್ಯರ ನಡುವೆಯು ನಿಂತು ನಾಗರಾಜನೆನಿಸಿದ ವಾಸುಕಿಯನ್ನು ಎಳೆದು ಅತ್ತಿತ್ತ ಸಮುದ್ರವನ್ನು ಕಡೆಯುತ್ತಿದ್ದನು. ಆ ಕೇಶವನೇ ಮತ್ತೊಂದು ಬೃಹದ್ರೂಪವನ್ನು ಧರಿಸಿ ಮಂಥರ ಶಿಖರದ ಮೇಲೆ ನಿಂತು ಅದನ್ನು ಒತ್ತಿಹಿಡಿದಿದ್ದನು. ಅದು

ದೇವದಾನವರಿಗೆ ಗೋಚರಿಸುತ್ತಿರಲಿಲ್ಲ. ಇಂತೆಯೇ ಕ್ಷೀರಸಾಗರವು ಮಥಿತವಾಗುತ್ತಿರಲಾಗಿ ಯಜ್ಞದಾಮಗ್ನಿಯಾದ ಹವಿಸ್ಸಿಗೆ ಆಶ್ರಯವೂ ಸುರರಿಂದ ಪೂಜಿಸಲ್ಪಪಡುವ ಕಾಮಧೇನು ಮೊದಲು ಆವಿರ್ಭವಿಸಿತು. ಅದರಿಂದ ದೇವತೆಗಳಿಗೂ ದಾನವರಿಗೂ ಹರ್ಷವಾಯಿತು. ನಂತರ ಮದಚಂಚಲನೇತ್ರೆಯಾದ ವಾರುಣೀದೇವಿಯು ಮೇಲೆದ್ದಳು, ಮತ್ತೆ ಕಡೆಯಲ್ಪಟ್ಟ ಕ್ಷೀರ ಸಮುದ್ರದಿಂದ ಪಾರಿಜಾತ ವೃಕ್ಷವು ಹುಟ್ಟಿತು, ದೇವಸ್ತ್ರೀಯರಿಗೆ ಪ್ರಿಯವಾದ ಈ ವೃಕ್ಷವು ಹೂಗಳ ಸುಗಂಧದಿಂದ ಜಗತ್ತನ್ನು ವ್ಯಾಪಿಸಿತು, ನಂತರ ರೂಪಲಾವಣ್ಯಾದಿ ಗುಣಗಳಿಂದ ಕೂಡಿದ ಅಪ್ಸರೆಯರ ಸಮೂಹವೇ ಉದ್ಭವಿಸಿತು, ನಂತರ ಚಂದ್ರನು ಹುಟ್ಟಿದನು. ಅವನನ್ನು  ಮಹೇಶ್ವರನು ಸ್ವೀಕರಿಸಿದನು. ಕ್ಷೀರಸಾಗರದಿಂದ ಹುಟ್ಟಿದ ವಿಷವನ್ನು ನಾಗಗಳು ಸ್ವೀಕರಿಸಿದವು. ಈ ವಿಷವನ್ನು ಶಿವನು ಕುಡಿದು ಅದು ಕಂಠದಲ್ಲಿಯೇ ನಿಲ್ಲಲಿ ಎಂದು ಅವನು ಆಣತಿ ಇತ್ತುದರಿಂದ ಕಂಠದಲ್ಲಿಯೇ ನಿಂತಿತು. ಆದ್ದರಿಂದ ಶಿವನನ್ನು ವಿಷಕಂಠ ಎಂದು ಕರೆಯುವುಂಟು. ಅಷ್ಟೆಅಲ್ಲದೆ ಕೆಳಗೆ ಬಿದ್ದ ಒಂದಂಶವನ್ನು ಸರ್ಪ, ಚೇಳು, ಕ್ರಿಮಿಕೀಟಗಳಾದಿಗಳು ಮತ್ತು ವಿಷಪೂರಿತವಾದ ಬಳ್ಳಿಗಳು ಸ್ವೀಕರಿಸಿದವೆಂದು ಪುರಾಣಗಳು ಸ್ಪಷ್ಟಪಡಿಸುತ್ತವೆ. ಅನಂತರ ಶ್ವೇತಾಂಬರಧಾರಿಯಾದ ಧನ್ವಂತರಿ ದೇವನು ಅಮೃತಪೂರ್ಣವಾದ ಕಮಂಡಲವನ್ನು ತಾನೇ ಕೈಯಲ್ಲಿ ಹಿಡಿದುಕೊಂಡು ಆವಿರ್ಭವಿಸಿದನು. ಆಗ ಋಷಿಮುನಿಗಳು, ದೈತ್ಯದಾನವರು ಸಂತಸಪಟ್ಟರು, ನಂತರ ಅರಳಿದ ಕಮಲದ ಮೇಲೆ ನಿಂತು, ಕೈಯಲ್ಲಿ ಕಮಲಪುಷ್ಪವನ್ನು ಹಿಡಿದು, ಕಾಂತಿಯುಕ್ತಳಾಗಿ ಶ್ರೀದೇವಿಯು ಕ್ಷೀರಸಾಗರಲಜಲದಿಂದ ಆವಿರ್ಭವಿಸಿದಳು, ಮಹರ್ಷಿಗಳು ಅತ್ಯಂತ ಸಂತುಷ್ಟರಾಗಿ ಶ್ರೀಸೂಕ್ತದಿಂದ **"ಹಿರಣ್ಯವರ್ಣಾಂ ಹರಿಣೀಂ ಸುವರ್ಣರಜಸ್ರಜಾಮ್ ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋಮಮಾವಹ"** ಎಂದು ಮುಂತಾಗಿ ಶ್ರೀಲಕ್ಷ್ಮಿಯನ್ನು ಸ್ತುತಿಸಿದರು. ಘೃತಾಚೀ ಮೊದಲಾದ ಅಪ್ಸರ ಸ್ತ್ರೀಯರು ಶ್ರೀದೇವಿಯ ಎದುರಿಗೆ ನಿಂತು ನರ್ತಿಸಿದರು. ಗಂಗಾದಿ ನದಿಗಳಿಂದ ನೀರನ್ನು ತಂದು ಅವಳಿಗೆ ಅಭಿಷೇಕ ಮಾಡಲು ಸಿದ್ಧರಾದರು.  ಕ್ಷೀರಸಾಗರನೇ ಸ್ವಯಂ ಪ್ರತ್ಯಕ್ಷನಾಗಿ ಬಂದು ಎಂದೆಂದಿಗೂ ಬಾಡದಿರುವ ಪದ್ಮ ಮಾಲೆಯನ್ನು

ಶ್ರೀದೇವಿಗೆ ಅರ್ಪಿಸಿದನು. ಶ್ರೀದೇವಿಯು ಸ್ನಾನಮಾಡಿ ದಿವ್ಯಾಲಂಕಾರ ಭೂಷಿತಳಾಗಿ, ಎಲ್ಲ ದೇವತೆಗಳೂ ನೋಡುತ್ತಿರುವಾಗಲೇ ಶ್ರೀಹರಿಯ ವಕ್ಷಸ್ಥಳವನ್ನು ಸೇರಿದಳು.

**ದಿವ್ಯಮಾಲಾಂಬರಧರಾ ಸ್ನಾತಾಭೂಷಣಭೂಷಿತಾ ।**

**ಪಶ್ಯತಾಂ ಸರ್ವದೇವಾನಾಂ ಯಯೌ ವಕ್ಷಃಸ್ಥಲಂಹರೇ ॥**

(ವಿ.ಪು. ಅಧ್ಯಾಯ.9 ಪು.ಅಂ.105ನೇ ಶ್ಲೋಕ)

ಆಹಾ! ಎಂತಹ ಸೊಗಸಾದ ಸನ್ನಿವೇಶ. ಲಕ್ಷ್ಮಿಯೇ ಶ್ರೀಮನ್ನಾರಾಯಣನ ವಕ್ಷಸ್ಥಳದಲ್ಲಿಯೇ ಕುಳಿತು ತನ್ನ ಭಕ್ತರಿಗೆ ಅನುಗ್ರಹಿಸುತ್ತಾಳೆ. ತ್ರಿಲೋಕವೂ ಲಕ್ಷ್ಮೀಯುಕ್ತವಾಗಿ ಸಮೃದ್ಧಿಯಿಂದ ಶೋಭಿಸಿದವು. ಆದರೆ ದೈತ್ಯರಿಗೆ ಈ ಸನ್ನಿವೇಶವು ಉದ್ವೇಗವನ್ನುಂಟುಮಾಡಿತು. ಮಹಾಶೂರರಾದ ಆ ದೈತ್ಯರು ಉತ್ತಮವಾದ ಅಮೃತವಿದ್ದ ಕಮಂಡಲುವನ್ನು ಧನ್ವಂತರಿಯ ಕೈಯಿಂದ ಕಿತ್ತುಕೊಂಡರು. ಆಗ ಸ್ವಯಂವಿಷ್ಣುವೇ ಮೋಹಿನಿ ಅವತಾರವನ್ನು ಧರಿಸಿ ಮಾಯೆಯಿಂದ ದೈತ್ಯರನ್ನು ಮೋಹಗೊಳಿಸಿ, ದಾನವರಿಂದ ಅಮೃತವನ್ನು ತೆಗೆದುಕೊಂಡು ಅದನ್ನು ದೇವತೆಗಳಿಗೆ ಕೊಟ್ಟನು. (ದಿವ್ಯಕ್ಷೇತ್ರಗಳಲ್ಲಿ ನಡೆಯುವ ಬ್ರಹ್ಮೋತ್ಸವದಲ್ಲಿ ಮೋಹಿನಿ ಅಲಂಕಾರದ ಉತ್ಸವ ಪ್ರಮುಖವಾದದ್ದು) ಇಂದ್ರಾದಿ ದೇವತೆಗಳು ಅಮೃತಪಾನ ಮಾಡಿ ಅತಿ ಬಲಾಢ್ಯರಾದರು.

ದೈತ್ಯರು ದೇವತೆಗಳ ಹೊಡೆತಗಳಿಗೆ ಸಿಕ್ಕಿ ದಿಕ್ಕು ದಿಕ್ಕುಗಳಿಗೆ ಓಡುತ್ತಾ ಪಾತಾಳವನ್ನು ಹೊಕ್ಕರು ನಂತರ ದೇವತೆಗಳು ಸಂತುಷ್ಟರಾಗಿ ಶಂಖ ಚಕ್ರಗದಾಧಾರಿಯಾದ ವಿಷ್ಣುವಿಗೆ ನಮಸ್ಕರಿಸಿ ಮೊದಲಿನಂತೆ ಸ್ವರ್ಗವನ್ನಾಳತೊಡಗಿದರು. ಹೀಗೆ ವಿಷ್ಣುಪುರಾಣದಲ್ಲಿ ಅಮೃತಮಂಥನವೆಂಬುದು ಪ್ರಮುಖಘಟ್ಟವಾಗಿದೆ.

ಅದರಲ್ಲೂ ಶ್ರೀಮಹಾಲಕ್ಷ್ಮಿಯನ್ನು ಕುರಿತು ದೇವಾನುದೇವತೆಗಳು ಸ್ತುತಿಸಿರುವ ಧಾಟಿಯೇ ಅತ್ಯದ್ಭುತವಾದದ್ದು. ಅವುಗಳಲ್ಲಿ ದೇವೇಂದ್ರನು ಲಕ್ಷ್ಮಿಯನ್ನು ಸ್ತುತಿಸಿದ ಬಗೆಯನ್ನು ನೋಡೋಣ. ಆ ಲಕ್ಷ್ಮೀಸ್ತುತಿಯನ್ನು ನಾವೂ ಸ್ತುತಿಸಿ ಕೃತಾರ್ಥರಾಗೋಣ. ಇಂತು ಇಂದ್ರ ಸ್ತುತಿಸಿದನು.

# ಮಹಾಲಕ್ಷ್ಮೀ ಸ್ತುತಿ

ನಮಸ್ತೇ ಸರ್ವಲೋಕಾನಾಂ ಜನನೀಮಬ್ಜಸಮ್ಭವಾಮ್
ಶ್ರಿಯಮುನ್ನಿದ್ರಪದ್ಮಾಕ್ಷೀಂ ವಿಷ್ಣು ವಕ್ಷಃಸ್ಥಲಸ್ಥಿತಾಮ್
ಪದ್ಮಾಲಯಾಂ ಪದ್ಮಕರಾಂ ಪದ್ಮಪತ್ರ ನಿಭೇಕ್ಷಣಾಮ್
ವಂದೇ ಪದ್ಮ ಮುಖೀಂ ದೇವೀಂ ಪದ್ಮನಾಭಪ್ರಿಯಾಮಹಮ್
ತ್ವಂ ಸಿದ್ಧಿಸ್ತ್ವಂ ಸ್ವಧಾಸ್ವಾಹಾ ಸುಧಾ ತ್ವಂ ಲೋಕಪಾವನೀ
ಸಂಧ್ಯಾ ರಾತ್ರಿಃ ಪ್ರಭಾ ಭೂತಿರ್ಮೇಧಾ ಶ್ರದ್ಧಾ ಸರಸ್ವತೀ
ಯಜ್ಞ ವಿದ್ಯಾ ಮಹಾವಿದ್ಯಾ ಗುಹ್ಯವಿದ್ಯಾತು ಶೋಭನೇ
ಆತ್ಮವಿದ್ಯಾ ಚ ದೇವಿ ತ್ವಂ ವಿಮುಕ್ತಿ ಫಲದಾಯಿನೀ
ಆನ್ವೀಕ್ಷಿಕೀ ತ್ರಯೀ ವಾರ್ತಾ ದಂಡನೀತಿಸ್ತ್ವಮೇನ ಚ
ಸೌಮ್ಯಾ ಸೌಮ್ಯೈ ರ್ಜನ ದ್ರೂಪೈಸ್ತ್ವೈ ಯೈತದ್ದೇವಿ ಪೂರಿತಮ್
ಕಾತ್ವನ್ಯಾ ತ್ವಾಮೃತೇ ದೇವಿ ಸರ್ವಯಜ್ಞಮಯಂ ವಪುಃ
ಅಧ್ಯಾಸ್ತೇ ದೇವದೇವಸ್ಯ ಯೋಗಿಚಿಂತ್ಯ ಗದಾಭೃತಃ
ತ್ವಯಾದೇವಿ ಪರಿತ್ಯಕ್ತಂ ಸಕಲ ಭುವನತ್ರಯಮ್
ವಿನಷ್ಟ ಪ್ರಾಯ ಮ ಭವತ್ವಯೇದಾನೀಂ ಸಮೇಧಿತಮ್
ದಾರಾಃ ಪುತ್ರಾಸ್ತಥಾಗಾರ ಸುಹೃದ್ಧಾನ್ಯ ಧನಾದಿಕಮ್
ಭವತ್ಯೇ ತನ್ಮಹಾಭಾಗೇ ನಿತ್ಯಂ ತ್ವದ್ವೀ ಕ್ಷಣಾನ್ನೃಣಾಮ್
ಶರೀರಾರೋಗ್ಯ ಮೈಶ್ವರ್ಯಂ ಅರಿಪಕ್ಷಕ್ಷಯಃ ಸುಖಮ್
ದೇವಿ ತ್ವದ್ ದೃಷ್ಟಿ ದೃಷ್ಟಾನಾಂ ಪುರುಷಾಣಾಂನದುರ್ಲಭಮ್
ತ್ವಂ ಮಾತಾ ಸರ್ವಲೋಕಾನಾಂ ದೇವೊ ದೇವದೇವೋ ಹರಿಃ ಪಿತಾ
ತ್ವ ಯೈತದ್ವಿಷ್ಣುನಾ ಚಾಮ್ಬ ಜಗದ್ವ್ಯಾಪ್ತಂ ಚರಾಚರಮ್
ಮಾ ನಃ ಕೋಶಂ ತಥಾ ಗೋಷ್ಠಂ ಮಾಗೃಹಂಮಾಪರಿಚ್ಛದಮ್
ಮಾ ಶರೀರಂ – ಕಲತ್ಯಂಚ ತ್ಯಜೇಥಾಃ ಸರ್ವಪಾವನಿ
ಮಾ ಪುತ್ರಾನ್ಮಾ ಸುಹೃದ್ವರ್ಗಂ ಮಾ ಪಶೂನ್ಮಾ ವಿಭೂಷಣಮ್
ತ್ಯಜೇಥಾ ಮಮ ದೇವಸ್ಯ ವಿಷ್ಣೋರ್ವಕ್ಷಃಸ್ಥಲಾಲಯೇ

**ಸತ್ತ್ವೇನ  ಸತ್ ಶೌಚಾಭ್ಯಾಂ ತಥಾಶೀಲಾದಿಭಿರ್ಗುಣೈಃ**
**ತ್ಯಜ್ಯನ್ತೇ ತೇ ನರಾಃ ಸದ್ಯಃ ಸಂತ್ಯಕ್ತಾಯೇತ್ವಯಾಮಲೇ**
**ತ್ವಯಾ ವಿಲೋಕಿತಾಃ ಸದ್ಯಃ ಶೀಲಾಧ್ಯೈರಖಿಲೈರ್ಗುಣೈ**
**ಕುಲೈಶ್ವರ್ಯೈಶ್ಚ ಯುಜ್ಯಂತೇ ಪುರುಷಾನಿರ್ಗುಣಾಅಪಿ**
**ಸಶ್ಲಾಘಃ ಸಗುಣೀ ಧನ್ಯಃ ಸಕುಲೀನಃ ಸ ಬುದ್ಧಿಮಾನ್**
**ಸಶೂರಃ  ಸಚವಿಕ್ರಾಂತೋ ಯಸ್ತ್ವಯಾ ದೇವಿ ವೀಕ್ಷಿತಃ**
**ಸದ್ಯೋ ವೈಗುಣ್ಯಮಾಯಾಂತಿ ಶೀಲಾದ್ಯಾಃ ಸಕಲಾಗುಣಾಃ**
**ಪರಾಙ್ಮುಖೀ ಜಗದ್ಧಾತ್ರೀಯಸ್ಯ ತ್ವಂ ವಿಷ್ಣು ವಲ್ಲಭೇ**
**ನತೇ ವರ್ಣಯಿತುಂ ಶಕ್ತಾ ಗುನಾಂಜಿಹ್ವಾಪಿ ವೇದಸಃ**
**ಪ್ರಸೀದದೇವಿ ಪದ್ಮಾಕ್ಷೀಮಾಸ್ಮಾಂ ಸ್ತ್ಯಾಕ್ಷೀಃ ಕದಾಚನ**

(ವಿ.ಪು.ಅಂ.9.117ರಿಂದ 133 ಶ್ಲೋಕಗಳವರೆಗೆ)

## ಲಕ್ಷ್ಮೀಸ್ತೋತ್ರದ ಭಾವಾಂಶ

ಸರ್ವಲೋಕಗಳಿಗೂ ಜನನಿಯಾದಂತಹ, ಪದ್ಮಸಂಭೂತಳೂ, ಅರಳಿದ ಪದ್ಮದಂತೆ ನಯನವುಳ್ಳವಳೂ, ವಿಷ್ಣುವಕ್ಷಃಸ್ಥಲದಲ್ಲಿ ನೆಲಸಿರುವವಳೂ ಆದ ಶ್ರೀದೇವಿಯನ್ನು ನಾನು ವಂದಿಸುತ್ತೇನೆ.

ಪದ್ಮಾಲಯಳೂ, ಪದ್ಮಹಸ್ತೆಯೂ, ಪದ್ಮದಳೇಕ್ಷಣೆಯೂ, ಪದ್ಮಮುಖಿಯೂ, ಪದ್ಮನಾಭನ ಪ್ರಿಯೆಯೂ ಆದ ಮಹಾಲಕ್ಷ್ಮೀಯನ್ನು ವಂದಿಸುತ್ತೇನೆ.

ಹೇ ದೇವೀ, ನೀನೇ ಸಿದ್ಧಿ, ನೀನೇ ಸ್ವದಾ, ನೀನೇ ಸ್ವಾಹಾ, ಲೋಕಪಾವನೆಯಾದ ನೀನೇ ಸುಧೆ, ಸಂಧ್ಯಾರಾತ್ರಿ ಪ್ರಭಾ ಸಮೃದ್ಧಿ, ಮೇಧಾ, ಶ್ರದ್ಧಾ, ಸರಸ್ವತಿ ಎಲ್ಲವೂ ನೀನೆ.

ಹೇ ಶೋಭನಾಂಗೀ, ಬ್ರಹ್ಮ ವಿದ್ಯಾ, ಮಹಾವಿದ್ಯಾ, ಗುಹ್ಯವಿದ್ಯೆಗಳು ನೀನೇ ದೇವಿ; ಮೋಕ್ಷಫಲವನ್ನು ನೀಡುವೆ ಆತ್ಮವಿದ್ಯೆಯೂ ನೀನೇ.

ತರ್ಕಶಾಸ್ತ್ರ, ವೇದತ್ರಯೀ, ಶಿಲ್ಪವಾಣಿಜ್ಯಾದಿವಾರ್ತೆಗಳು ನೀನೇ,

ಶಾಂತವಾದ ಮತ್ತು ಉಗ್ರವಾದ ನಿನ್ನ ರೂಪಗಳಿಂದ ಹೇ ದೇವಿ ಈ ಜಗತ್ತನ್ನೇ ನೀನು ವ್ಯಾಪಿಸಿರುವೆ, ಗದಾಧರನಾದ ದೇವ ದೇವನ ಸರ್ವಯಜ್ಞಮಯವೂ ಯೋಗಿಜನ ಧ್ಯೇಯವೂ ಆದ ಶರೀರವನ್ನು ನೀನಲ್ಲದೆ ಇನ್ನು ಯಾರು ಆಶ್ರಯಿಸಿ ನಿಂತಾರು?

ಹೇ ದೇವಿ, ಈ ಭುವನತ್ರಯವನ್ನು ನೀನು ಪರಿತ್ಯಜಿಸಿದ್ದರಿಂದ ಇದೆಲ್ಲವೂ ವಿನಷ್ಟವಾದಂತೆ ಇತ್ತು. ಈಗ ಇದನ್ನು ಮತ್ತೆ ಸಮೃದ್ಧಿಗೊಳಿಸಿರುವೆ.

ಹೇ ಭಾಗ್ಯನಿಧಿಯೇ ಮಡದಿ, ಮಕ್ಕಳು, ಮನೆ, ಮಿತ್ರರು ಧನಧಾನ್ಯಗಳೂ ನಿನ್ನ ಕೃಪಾದೃಷ್ಟಿಯಿಂದಲೇ ಜನರಿಗೆ ಲಭಿಸುತ್ತವೆ. ದೇಹಾರೋಗ್ಯ, ಐಶ್ವರ್ಯ, ಶತ್ರುಜಯ, ಸೌಖ್ಯ ಇವೆಲ್ಲವೂ ನಿನ್ನ ಕೃಪಾದೃಷ್ಟಿಪಾತ್ರರಾದ ಜನರಿಗೆ ಎಂದಿಗೂ ದುರ್ಲಭವಲ್ಲ.

ಸರ್ವಲೋಕಗಳಿಗೂ ನೀನೇ ತಾಯಿ, ದೇವದೇವನಾದ ಶ್ರೀಹರಿಯೇ ತಂದೆ, ಚರಾಚರಾತ್ಮಕವಾದ ಈ ವಿಶ್ವವನ್ನು ನೀವಿಬ್ಬರೂ ವ್ಯಾಪಿಸಿರುವಿರಿ.

ಹೇ ಸರ್ವಪಾವನೇ ನಮ್ಮ ಕೋಶವನ್ನು, ಕೊಟ್ಟಿಗೆಯನ್ನು, ಮನೆಯನ್ನು, ಭೋಗಸಾಮಾಗ್ರಿಯನ್ನೂ, ಶರೀರವನ್ನೂ, ಮಡದಿಯನ್ನೂ ಎಂದಿಗೂ ತ್ಯಜಿಸಬೇಡ.

ವಿಷ್ಣುವಿನ ವಕ್ಷಸ್ಥಲದಲ್ಲಿ ನೆಲೆಸಿದ ಮಾತೆಯೇ ನಮ್ಮ ಪುತ್ರರನ್ನು, ಮಿತ್ರವರ್ಗವನ್ನು, ಪಶುಗಳನ್ನು ಅಲಂಕಾರವಸ್ತುಗಳನ್ನು ಎಂದೂ ತ್ಯಜಿಸಹೋಗಬೇಡ.

ಹೇ ನಿರ್ಮಲೆ, ನೀನು ಯಾರನ್ನು ಪರಿತ್ಯಜಿಸುವೆಯೋ ಆ ಜನರನ್ನು ಸತ್ವ, ಶೌಚಗಳೂ, ಶೀಲಾದಿಸದ್ಗುಣಗಳೂ ಕೂಡಲೇ ತ್ಯಜಿಸಬಿಡುತ್ತವೆ.

ನೀನು ಕೃಪಾದೃಷ್ಟಿಯನ್ನು ಹರಿಸಿದರೆ ಸಾಕು. ಒಡನೆಯೇ ನಿರ್ಗುಣರಾದ ಜನರಲ್ಲಿಯೂ ಶೀಲಾದಿ ಸದ್ಗುಣಗಳೂ, ಕುಲೀನತೆ ಐಶ್ವರ್ಯವರ್ಯಗಳೂ ಬಂದು ಸೇರಿಕೊಳ್ಳುತ್ತವೆ.

ಹೇ ದೇವಿ, ನಿನ್ನ ದೃಷ್ಟಿಗೆ ಯಾವನು ಪ್ರಾಪ್ತನಾಗುತ್ತಾನೆ. ಅವನು ಪ್ರಶಂಸನೀಯ, ಗುಣಶಾಲಿ, ಧನ್ಯ, ಕುಲೀನ, ಬುದ್ಧಿವಂತ, ಆತನೇ ಶೂರ, ಆತನೇ ಪರಾಕ್ರಮಿಯಾಗಿರುತ್ತಾನೆ.

ಓ ವಿಷ್ಣುವಲ್ಲಭೆ ಜಗನ್ಮಾತೆಯಾದ ನೀನು ಯಾರ ವಿಷಯದಲ್ಲಿ ನಿರಾಸಕ್ತಳಾಗಿರುತ್ತೀಯೋ ಅವರ ಶೀಲಾದಿ ಸಕಲಗುಣಗಳೂ ಅವಗುಣಗಳಾಗಿ ಬಿಡುತ್ತವೆ.

ಎಲೈ ದೇವಿ ನಿನ್ನ ಮಹಿಮೆಗಳನ್ನು ವರ್ಣಿಸಲು ಬ್ರಹ್ಮನ ನಾಲಗೆಯೂ ಕೂಡ ಸಮರ್ಥವಾಗಿಲ್ಲ. ಹೇ ! ಮಾತೇ ಪದ್ಮಾಕ್ಷಿ ಎಂದೆಂದೂ ನಮ್ಮನ್ನೂ ಕೈ ಬಿಡಬೇಡ, ಎಂದು ಭಕ್ತಿಪೂರ್ವಕವಾಗಿ ಇಂದ್ರನು ಮಹಾಲಕ್ಷ್ಮಿಯನ್ನು ಸ್ತುತಿಸಿದನು. ಇಂದ್ರನು ಮಾಡಿದ ಸ್ತುತಿಯನ್ನು ಮೆಚ್ಚಿ ಮಹಾಲಕ್ಷ್ಮಿಯು ಎರಡು  ವರಗಳನ್ನು ನೀಡಿದಳು.

ಈ ಲೋಕತ್ರಯವನ್ನು ಎಂದೂ ತ್ಯಜಿಸಬಾರದು.

ಈ ಸ್ತೋತ್ರವನ್ನು ಪಠಿಸಿ ಯಾರು ಮಹಾಲಕ್ಷ್ಮಿಯನ್ನು ಸ್ತುತಿಸುತ್ತಾರೋ ಅವರನ್ನು ಎಂದೂ ತ್ಯಜಿಸುವುದಿಲ್ಲ. ಅವರ ಅಭೀಷ್ಟವನ್ನು ನೆರವೇರಿಸುತ್ತೇನೆ ಎಂದು ಹೇಳಿದಳು ಇಂತಹ ಮಹಾಲಕ್ಷ್ಮಿಯ ಸ್ತೋತ್ರವನ್ನು ಪಠಿಸಿ ನಾವು ಧನ್ಯರಾಗೋಣ.

## ಭೃಗು ವಂಶಗಳ ವರ್ಣನೆ

ಮೈತ್ರೇಯರು ಭೃಗುವಿನ ಸಂತಾನದಿಂದ ಹಿಡಿದು ಮುಂದಾದ ಈ ಸೃಷ್ಟಿಯ ವಿವರವನ್ನು ತಿಳಿಸಬೇಕೆಂದು ಪರಾಶರರಲ್ಲಿ ಪ್ರಾರ್ಥಿಸಿದರು. ಆಗ ಪರಾಶರರು ಹೇಳಿದರು.

ಭೃಗುವಿಗೆ ಖ್ಯಾತಿ ಎಂಬ ಪತ್ನಿಯಲ್ಲಿ ವಿಷ್ಣುಪತ್ನಿಯಾದ ಲಕ್ಷ್ಮಿಯು ಹುಟ್ಟಿದಳು. ಹಾಗೆಯೇ ಧಾತೃ ವಿಧಾತೃ ಎಂಬುವ ಭೃಗುವಿನಿಂದ ಖ್ಯಾತಿಯಲ್ಲಿ ಹುಟ್ಟಿದ ಮಕ್ಕಳು.

ಮಹಾತ್ಮನಾದ ಮೇರುವಿನ ಪುತ್ರಿಯರಾದ ಆಯತಿ ಮತ್ತು ನಿಯತಿ ಎಂಬುವರು ಕ್ರಮವಾಗಿ ಧಾತೃ ಮತ್ತು ವಿಧಾತೃಗಳ ಮಡದಿಯರು, ಅವರಲ್ಲಿ ಧಾತೃವಿಗೆ ಪ್ರಾಣನೆಂದೂ, ವಿಧಾತೃವಿಗೆ ಮೃಕಂಡು ಎಂಬ ಹೆಸರುಳ್ಳ ಪುತ್ರರು ಜನಿಸಿದರು. ಮೃಕಂಡುವಿನ ಮಗನೇ ಮಾರ್ಕಂಡೇಯ. ಅವನಿಂದ ವೇದಶಿರ ಎಂಬ ಮಗ ಹುಟ್ಟಿದನು. ಪ್ರಾಣನಿಗೆ ದ್ಯುತಿಮಾನ್ ಎಂಬುವನೂ ಅವನಿಗೆ ರಾಜವಾನ್ ಎಂಬ ಮಗ ಹುಟ್ಟಿದರು. ನಂತರ ರಾಜವಂತನಿಂದ ಭೃಗುವಂಶವು ಬೆಳೆಯಿತು.

ಮರೀಚಿಯ ಪತ್ನಿಯಾದ ಸಂಭುತಿಯು ಪೌರ್ಣಮಾಸನನ್ನು ಹಡೆದಳು. ಪೌರ್ಣಮಾಸನಿಗೆ ವಿರಜ, ಪರ್ವತ ಎಂಬ ಪುತ್ರರು ಜನಿಸಿದರು.

ಅಂಗೀರಸನ ಪತ್ನಿಯಾದ ಸ್ಮೃತಿಯು ಸಿನೀವಾಲೀ, ಹೂ, ರಾಕಾ, ಅನುಮತಿ ಎಂಬ ಪುತ್ರಿಯರನ್ನು ಪ್ರಸವಿಸಿದಳು.

ಅನಸೂಯೆಯು ಅತ್ರಿ ಮಹರ್ಷಿಗಳಿಂದ ಚಂದ್ರ, ದುರ್ವಾಸ ಮತ್ತು ಯೋಗಿಯಾದ ದತ್ತಾತ್ರೇಯನು ಜನಿಸಿದನು.

ಪುಲಸ್ತ್ಯನ ಪತ್ನಿಯಲ್ಲಿ ಪ್ರೀತಿಯಲ್ಲಿ ದತ್ತೋಲಿ ಎಂಬ ಪುತ್ರನು ಜನಿಸಿದನು. ಅವನು ಪೂರ್ವಜನ್ಮದಲ್ಲಿ ಸ್ವಾಯಂಭುವ ಮನ್ವಂತರದಲ್ಲಿ ಅಗಸ್ತ್ಯನೆಂದು ಪ್ರಸಿದ್ಧನಾಗಿದ್ದನು. ಪುಲಹ ಪ್ರಜಾಪತಿಯ ಪತ್ನಿ ಕ್ಷಮಾ ಎಂಬುವಳು ಕರ್ದಮ, ಉರ್ವರೀಯ ಸಹಿಷ್ಣು ಎಂಬ ಮೂವರು ಪುತ್ರರನ್ನು ಪಡೆದಳು.

ಕ್ರತುವಿನ ಹೆಂಡತಿಯಾದ ಸಂತತಿಯು ವಾಲಖಿಲ್ಯರೆಂಬ ಪುತ್ರರನ್ನು ಹಡೆದಳು. ಈ ವಾಲಖಿಲ್ಯರು ಅರವತ್ತು ಸಾವಿರ ಮಂದಿ. ಅವರೆಲ್ಲರೂ ಊರ್ಧ್ವ ರೇತಸ್ಕರಾದ ಮುನಿಗಳೂ ಅಂಗುಷ್ಟಮಾತ್ರದಷ್ಟು ಶರೀರವುಳ್ಳವರೂ ಆಗಿದ್ದರು. ಸೂರ್ಯನಂತೆ ಮಹಾತೇಜಸ್ವಿಗಳಾಗಿದ್ದರು.

ವಸಿಷ್ಠರಿಗೆ ಊರ್ಜೆಯೆಂಬ ಪತ್ನಿಯಲ್ಲಿ ರಜ, ಗೋತ್ರ, ಊರ್ಧ್ವಬಾಹು

ಸವನ, ಅನಘ, ಸುತಪ, ಶುಕ್ರ ಎಂಬ ಏಳುಮಂದಿ ಪುತ್ರರು ಜನಿಸಿದರು. ನಿರ್ಮಲ ಸ್ವಭಾವವಾದ ಇವರೆಲ್ಲರೂ ಮೂರನೆಯ ಮನ್ವಂತರದಲ್ಲಿ ಸಪ್ತರ್ಷಿಗಳಾದರು.

ಬ್ರಹ್ಮನಿಗೆ ಅಗ್ನ್ಯಭಿಮಾನಿಯಾದ ಜೇಷ್ಠಪುತ್ರನಿಂದ ಸ್ವಾಹದೇವಿಯು ಪಾವಕ, ಪವಮಾನ ಜಲಭಕ್ಷಕನಾದ ಶುಚಿ ಎಂಬ ಮೂವರು ಓಜಸ್ವಿಗಳಾದ ಪುತ್ರರನ್ನು ಪಡೆದಳು. ಈ ಮೂರು ಅಗ್ನಿಗಳ ಸಂತತಿಯಲ್ಲಿ (ಒಬ್ಬೊಬ್ಬರಿಗೆ ಹದಿನೈದರಂತೆ) ನಲವತ್ತೈದು ಅಗ್ನಿಗಳು ಉದಿಸಿದವು. ಹೀಗೆ ಮೂಲಭೂತ ತಂದೆಯಾದ ಅಗ್ನಿ, ಅವನ ಮಕ್ಕಳು ಮೂವರು, ಅವರ ಸಂತಾನ ನಲವತ್ತೈದು. ಹೀಗೆ ಒಟ್ಟು 49 ಅಗ್ನಿಗಳೆಂದು ಪರಿಗಣಿಸಲ್ಪಟ್ಟಿದ್ದಾರೆ. ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಅಗ್ನಿಷ್ವಾತ್ತಾ ಮೊದಲಾದವರು ನಿರಗ್ನಿಗಳು. ಬಹಿರ್ಷದರೇ ಮೊದಲಾದವರು ಸಾಗ್ನಿಗಳು. ಆ ಪಿತೃ ದೇವತೆಗಳಿಂದ ಸ್ವಧೆಯುಮೇನಾ ಧಾರಿಣಿ ಎಂಬ ಇಬ್ಬರು ಪುತ್ರಿಯರನ್ನು ಪಡೆದಳು. ಈರ್ವರೂ ಬ್ರಹ್ಮವಾದಿನಿಯರೂ ಯೋಗಿನಿಯರೂ ಆಗಿದ್ದರು. ಈ ಪ್ರಕಾರವಾದ ದಕ್ಷಕನ್ಯೆಯರ ಸಂತಾನ ಪರಂಪರೆ ಬೆಳೆಯಿತು.

## ಈ ಬ್ರಹ್ಮಾಂಡದ ಪ್ರಮುಖ ಮನುಗಳು

| | |
|---|---|
| **ಸ್ವಾಯಂಭುವ ಮನುವಾಗಿ** | **– ಯಜ್ಞ** |
| **ಸ್ವಾರೋಚಿಷ ಮನುವಾಗಿ** | **– ವಿಭು** |
| **ಉತ್ತಮ ಮನುವಾಗಿ** | **– ಸತ್ಯಸೇನ** |
| **ತಾಮಸ ಮನುವಾಗಿ** | **– ಹರಿ** |
| **ರೈವತ ಮನುವಾಗಿ** | **– ವೈಕುಂಠ** |
| **ಚಾಕ್ಷುಷ ಮನುವಾಗಿ** | **– ಅಜಿಕ** |
| **ವೈವಸ್ವತ ಮನುವಾಗಿ** | **– ವಾಮ** |

(ಈ ಯುಗವು ವೈವಸ್ವತ ಮನುವಿನ ಅಧೀನದಲ್ಲಿದೆ)

**ಸಾವರ್ಣಿಮನುವಾಗಿ – ಸಾರ್ವಭೌಮ**

**ದಕ್ಷಸಾವರ್ಣಿ ಮನುವಾಗಿ – ಋಷಭ್ಯ**

**ಬ್ರಹ್ಮ ಸಾವರ್ಣಿ ಮನುವಾಗಿ – ವಿಶ್ವಕ್ಸೇನ**

**ಧರ್ಮ ಸಾವರ್ಣೀ ಮನುವಾಗಿ – ಋಷಭ್ಯ**

**ರುದ್ರಸಾವರ್ಣಿ ಮನುವಾಗಿ – ಸುಧಾಮ**

**ದೇವಸಾವರ್ಣಿ ಮನುವಾಗಿ – ಯೋಗೇಶ್ವರ**

**ಇಂದ್ರ ಸಾವರ್ಣಿ ಮನುವಾಗಿ – ಬೃಹದ್ಧಾಮ,**

ಇವು ಸೂರ್ಯಮಾನ 4,300,000,000 (4 ಶತಕೋಟಿ 3 ದಶಕೋಟಿ ವರ್ಷಗಳಿಂದ ಕೂಡಿದ ಒಂದು ಗುಂಪಿನ 14 ಮನುಗಳ ಹೆಸರುಗಳು

ಈ ಹದಿನಾರು ಮನ್ವಂತರಗಳು ಒಂದಾವರ್ತಿ ಆದಾಗ ದೈನಂದಿನ ಪ್ರಳಯವಾಗುತ್ತದೆ ಎಂಬುದನ್ನು ಮಾರ್ಕಂಡೇಯ ಪುರಾಣ ಈ ವಿಷ್ಣುಪುರಾಣ ಮಂತಾದ ಕೃತಿಗಳಿಂದ ಜ್ಯೋತಿಷಿಗಳು, ವಿದ್ವಾಂಸರು ಖಚಿತಪಡಿಸಿದ್ದಾರೆ. ಹೇಗಾದರಾಗಲಿ ನಾವು ಈಗ ವೈವಸ್ವತ ಮನ್ವಂತರ ಮನುವಿನ ಅಧೀನದಲ್ಲಿದ್ದೇವೆ. ಅದರಲ್ಲಿ ವೈವಸ್ವತ ಮನ್ವಂತರದಲ್ಲಿ ಪ್ರಥಮ ಪಾದದಲ್ಲಿದ್ದೇವೆ ಎಂಬುದನ್ನು ಗಮನಿಸಬಹುದು. ಆದ್ದರಿಂದ ಪೂರ್ಣ ಪ್ರಳಯವಾಗುತ್ತದೆ. ಎಂದು ನಾವು ಭಯಪಡಬೇಕಾಗಿಲ್ಲ.

## ಧ್ರುವ ಚರಿತ್ರೆ

ಸ್ವಾಯಂಭುವ ಮನುವಿಗೆ ಪ್ರಿಯವ್ರತ, ಉತ್ತಾನಪಾದ ಎಂಬ ಇಬ್ಬರು ಪುತ್ರರು ಜನಿಸಿದರು. ಅವರು ಮಹಾವೀರರೂ ಧರ್ಮಜ್ಞರೂ ಆಗಿದ್ದರು. ಅವರಲ್ಲಿ ಉತ್ತಾನಪಾದನಿಗೆ ಸುರುಚಿಯೆಂಬ ಪ್ರಿಯಳಾದ ಪತ್ನಿಯಲ್ಲಿ ಉತ್ತಮ ಎಂಬ ಪುತ್ರನು ಜನಿಸಿದನು. ಅವನ ತಂದೆಗೆ ಅತ್ಯಂತ ಪ್ರೀತಿಪಾತ್ರನಾಗಿದ್ದನು. ಉತ್ತಾನಪಾದರಾಜನ ಪಟ್ಟದ ರಾಣಿಯಾದ ಸುನೀತಿಗೆ ಧ್ರುವನೆಂಬ ಮಗನಿದ್ದನು. ಆ ರಾಜನಿಗೆ ಸುನೀತಿಯನ್ನು ಕಂಡರೆ ಅಷ್ಟೇನೂ ಪ್ರೀತಿ

ಇರಲಿಲ್ಲ. ಹೀಗಿರುವಲ್ಲಿ ಒಂದು ದಿನ ಧ್ರುವನು ಸಿಂಹಾಸನದಲ್ಲಿ ಕುಳಿತಿದ್ದ ತನ್ನ ತಂದೆಯ ತೊಡೆಯಮೇಲೆ  ಸೋದರನಾದ ಉತ್ತಮನು ಕುಳಿತಿರುವುದನ್ನು ನೋಡಿದನು. ತಾನೂ ತಂದೆಯ ತೊಡೆಯ ಮೇಲೆ ಕೂರಬೇಕೆಂಬ ಆಸೆ ಅವನಿಗೆ ಉಂಟಾಯಿತು. ಎದುರಿಗೆ ಸುರುಚಿಯು  ಎದುರಿಗೆ ಸುರುಚಿಯು ಇದ್ದುದರಿಂದ ತನ್ನ ತೊಡೆಯನ್ನು ಪ್ರೀತಿಯಿಂದೇರಲು ಬಂದ ಮಗನನ್ನು ದೊರೆಯು ಮೆಚ್ಚಿಕೊಳ್ಳಲಿಲ್ಲ. ಧ್ರುವನ ಮನೋರಥವನ್ನು ಅರಿತ ಸುರುಚಿಯು ಹೀಗೆಂದಳು.

**ಕ್ರಿಯತೇ ಕಿಂ ವೃಥಾ ವತ್ಸ ಮಹಾನೇಷ ಮನೋರಥಃ ।**
**ಅನ್ಯಸ್ತ್ರೀಗರ್ಭಜಾತೇನ ಹ್ಯಸಂಭೂಯ ಮಮೋದರೆ ॥**
**ಉತ್ತಮೋತ್ತಮನುಪ್ರಾಪ್ಯ ಮವಿವೇಕೋ ಹಿವಾಂಚಸಿ ।**
**ಸತ್ಯಂ ಸುತಸ್ತ್ವಮಪ್ಯಸ್ಯ ಕಿಂತು ನತ್ವಂ ಮಯಾಧೃತಃ ॥**
**ಏತದ್ರಾಜಾಸನಂ ಸರ್ವಭೂ ಭೃತ್ಸಂಶ್ರಯ ಕೇತನಮ್ ।**
**ಯೋಗ್ಯಂ ಮಮೈವ ಪುತ್ರಸ್ಯ ಕಿಮಾತ್ಮಾಕ್ಲಿಶ್ಯತೇ ತ್ವಯಾ ॥**
**ಉಚ್ಚೈರ್ಮನೋರಥಸ್ತೇಯಂ ಮತ್ಪುತ್ರಸ್ಯೇವ ಕಿಂ ವೃಥಾ ।**
**ಸುನೀತ್ಯಾಮಾತ್ಮನೋ ಜನ್ಮ ಕಿಂ ತ್ವಯಾ ನಾವಗಮ್ಯತೇ ॥**

(ವಿ.ಪು. ಪ್ರಥಮಾಂಶ ಅಧ್ಯಾಯ ಶ್ಲೋಕ 7ರಿಂದ 10)

ಮಗು ವ್ಯರ್ಥವಾಗಿ ಏಕೆ ಇಷ್ಟು ದೊಡ್ಡ ಆಸೆಯನ್ನು ಇಟ್ಟುಕೊಂಡಿದ್ದೀಯೇ ? ನನ್ನ ಹೊಟ್ಟೆಯಲ್ಲಿ ಹುಟ್ಟದೆ ಬೇರೊಬ್ಬ ಸ್ತ್ರೀಗರ್ಭದಲ್ಲಿ ಜನಿಸಿದ ನಿನಗೆ ಇದು ನಿಲುಕತಕ್ಕದುದಲ್ಲ. ತನಗೆ ದೊರೆಯದ ಉತ್ತಮೋತ್ತಮ ವಸ್ತುವನ್ನು ಅವಿವೇಕಿಯು ಮಾತ್ರ ಬಯಸುತ್ತಾನೆ. ನೀನೂ ಸಹ ಈ ರಾಜನ ಮಗನೇನೋ ನಿಜ, ಆದರೆ ನಾನು ನಿನ್ನನ್ನು ಗರ್ಭದಲ್ಲಿ ಧರಿಸಲಿಲ್ಲವಲ್ಲಾ – ಈ ಸಿಂಹಾಸನವು ಸಮಸ್ತ ರಾಜಸಿಂಹಾಸನಗಳಲ್ಲಿ ಅತ್ಯಂತ ಶ್ರೇಷ್ಠವಾದದ್ದು. ಇದು ನನ್ನ ಮಗನಿಗೆ ಮಾತ್ರ ಯೋಗ್ಯವಾಗಿದೆ. ಈ ಸಿಂಹಾಸನವ್ನನೇರಬೇಕೆಂಬ ವ್ಯರ್ಥವಾದ ಆಸೆ ನಿನಗೇಕೆ ಎಂದಳು.

ಮಲತಾಯಿಯ ಈ ಮಾತನ್ನು ಕೇಳಿ ಬಾಲಧ್ರುವನು ಕೋಪದಿಂದ ತಂದೆಯನ್ನು ತೊರೆದು, ತನ್ನನ್ನು ಹಡೆದ ತಾಯಿಯ ಬಳಿ ಬಂದನು. ಧ್ರುವನು ನಡೆದ ವೃತ್ತಾಂತವನ್ನೆಲ್ಲಾ ತಾಯಿಗೆ ತಿಳಿಸಿದನು. ಸುನೀತಿಯು ಅದನ್ನು ಕೇಳಿ ಬಹಳ ದುಃಖಿತಳಾದಳು, ಅವಳು ಮಗನಿಗೆ ಸಮಾಧಾನ ಮಾಡುತ್ತಾ ಸುರುಚಿ ಹೇಳಿದ್ದು ನಿಜವೇ, ನೀನು ಭಾಗ್ಯಹೀನ. ಪುಣ್ಯವಂತರಿಗೆ ವೈರಿಗಳೂ ಇಂತಹ ಮಾತನ್ನಾಡುವುದಿಲ್ಲ. ನೀನು ಬೇಸರಪಡಬಾರದು.

**ನೋದ್ವೇಗಸ್ತಾತ ಕರ್ತವ್ಯಃ ಕೃತಂ ಯದ್ಭವತಾ ಪುರಾ**

**ತತ್ಕೋಪಹರ್ತುಂ ಶಕ್ನೋತಿ ದಾತುಂ ಕಶ್ಚಾಕೃತಂತ್ವಯಾ**

**ತತ್ವಯಾ ನಾತ್ರ ಕರ್ತವ್ಯಂ ದುಃಖಂ ತದ್ವಾಕ್ಯ ಸಂಭವಮ್**

**ರಾಜಾಸನಂ ರಾಜಚ್ಛತ್ರಂ ವರಾಶ್ವ ವರವಾರಣಾಃ**

**ಯಸ್ಯ ಪುಣ್ಯಾನಿ ತಸ್ಯೈತೇ ಮತ್ವೈತಚ್ಛಾಮ್ಯ ಪುತ್ರಕ**

(ವಿ.ಪು. ಪ್ರಥಮಾಂಶ ಅಧ್ಯಾಯ– 11 (17ರಿಂದ 19)

ನಾವು ಹಿಂದಿನ ಜನ್ಮದಲ್ಲಿ ಏನು ಮಾಡಿದ್ದೇವೋ ಅದನ್ನು ಯಾರೂ ಕಿತ್ತುಕೊಳ್ಳಲಾರರು. ಮಾಡದೇ ಇದ್ದದನ್ನು ಕೊಡಲಾರರು. ಅವಳ ಮಾತಿಗೆ ನೀನು ದುಃಖಿಸಬೇಡ. ರಾಜನ ಸಿಂಹಾಸನ, ರಾಜನ ಶ್ವೇತಚ್ಛತ್ರ, ಶ್ರೇಷ್ಠವಾದ ಆನೆ ಕುದುರೆಗಳು – ಇವೆಲ್ಲವೂ ಯಾರು ಪುಣ್ಯಮಾಡಿದ್ದಾರೋ ಅವರಿಗೆ ಲಭಿಸುತ್ತದೆ. ನನ್ನಂತಹ ಪುಣ್ಯಹೀನೆಗೆ **ಭಾರ್ಯೆ** ಎಂದು ಮಾತ್ರ ಹೆಸರಿದೆ. ಹಾಗೆಯೇ ಪುಣ್ಯರಾಶಿಯುಳ್ಳ ಉತ್ತಮನು ಸುರುಚಿಗೆ ಮಗನಾಗಿ ಹುಟ್ಟಿದ್ದಾನೆ. ಅಲ್ಪಪುಣ್ಯನಾದ ನೀನು ಧ್ರುವನೆಂಬ ಹೆಸರಿನಿಂದ ನನ್ನ ಮಗನಾಗಿ ಹುಟ್ಟಿದೆ. ಧ್ರುವನು ಅದಕ್ಕುತ್ತರವಾಗಿ ನಾನು ಅವಳ ಗರ್ಭದಿಂದ ಜನಿಸಲಿಲ್ಲ ಅಮ್ಮ ನಿನ್ನ ಗರ್ಭದಲ್ಲಿ ನಾನು ಬೆಳೆದಿದ್ದರೂ ನನ್ನ ಪ್ರಭಾವ ಏನೆಂಬುದನ್ನು ನೋಡುತ್ತಿರು. ಉತ್ತಮನಿಗೆ ಆ ಸಿಂಹಾಸನ ಲಭಿಸಲಿ ಚಿಂತೆಯಿಲ್ಲ.

**ನಾನ್ಯದತ್ತಮಭೀಪ್ಸಾಮಿ ಸ್ಥಾನಮಂಬ ಸ್ವಕರ್ಮಣಾ**

**ಇಚ್ಛಾಮಿ ತದಹಂ ಸ್ಥಾನಂ ಯನ್ನ ಪ್ರಾಪ ಪಿತಾಮಹ**

**ನಿರ್ಜಗಾಮ ಗೃಹಾನ್ಮಾತುರಿತ್ಯುಕ್ತ್ವಾ ಮಾತರಂ ಧ್ರುವಃ**

**ಪುರಾಚ್ಚ ನಿರ್ಗಮ್ಯ ತತಸ್ತದ್ಬಾಹ್ಯೋಪವನಂ ಯಯೌ**

**ಸ ದದರ್ಶ ಮುನೀಂಸ್ತತ್ರ ಪೂರ್ವಾಗತಾನ್ ಧ್ರುವ**

**ಕೃಷ್ಣಾಜಿನೋತ್ತರೀಯೇಷು ವಿಷ್ಟರೇಷು ಸಮಾಸ್ಥಿತಾನ್**

(ವಿ.ಪು. ಪ್ರಥಮಾಂಶ ಅ.11 (ಶ್ಲೋಕ 29ರಿಂದ 31)

ಅಮ್ಮ ನನಗೆ ಮತ್ತೊಬ್ಬನು ಕೊಟ್ಟದ್ದು ಬೇಡ. ನಾನು ದುಡಿದು ಸಂಪಾದಿಸಿದ ಸ್ಥಾನವನ್ನು ಮಾತ್ರ ನಾನು ಬಯಸುತ್ತೇನೆ. ನನ್ನ ತಂದೆಗೂ ದೊರಕಿಲ್ಲದ ಉತ್ತಮಸ್ಥಾನವನ್ನು ಪಡೆಯುತ್ತೇನೆ. ಹೀಗೆಂದು ತಾಯಿಗೆ ಹೇಳಿ ಮೈತ್ರೇಯ ಧ್ರುವನು ಮನೆಯಿಂದ ಹೊರಟೇ ಬಿಟ್ಟನು ಎಂದು ಪರಾಶರರು ಹೇಳಿದರು.

ರಾಜಧಾನಿಯನ್ನು ದಾಟಿ ಹೊರಗೆ ಇದ್ದ ಉಪವನವನ್ನು ಸೇರಿದನು. ಅಲ್ಲಿಗೆ ಮೊದಲೇ ಬಂದು ಕೃಷ್ಣಾಜಿನವನ್ನು ಹಾಸಿದ ಪೀಠಗಳಲ್ಲಿ ಕುಳಿತಿದ್ದ ಸಪ್ತರ್ಷಿಗಳನ್ನು ಧ್ರುವನು ಕಂಡನು. ಸಪ್ತರ್ಷಿಗಳು ಧ್ರುವನನ್ನು ಕುರಿತು "ರಾಜಪುತ್ರ ನೀನು ಇನ್ನೂ ನಾಲ್ಕೈದು ವರ್ಷಗಳ ಬಾಲಕ, ಇಷ್ಟು ಬೇಗ ನಿನಗೆ ನಿರ್ವೇದವುಂಟಾಗಲು ಕಾರಣವೇನು ? ಎಂದು ಕೇಳಿದಾಗ ಧ್ರುವನು ಹೀಗೆಂದನು.

**ನಾಹಮರ್ಥಮಭೀಪ್ಸಾಮಿ ನ ರಾಜ್ಯಂ ದ್ವಿಜಸತ್ತಮಾಃ**

**ತತ್ ಸ್ಥಾನಮೇಕ ಮಿಚ್ಛಾಮಿ ಭುಕ್ತಂ ನಾನ್ಯೇನಯತ್ಪುರಾ**

**ಏತನ್ಮೇ ಕ್ರಿಯತಾಂ ಸಮ್ಯ ಕೃಥ್ಯತಾಂ ಪ್ರಾಪ್ಯತೇಯಥಾ**

**ಸ್ಥಾನಮಗ್ರ್ಯ ಸಮಸ್ತೇಭ್ಯಃ ಸ್ಥಾನೇಭ್ಯೋ ಮುನಿಸತ್ತಮಾಃ**

(ವಿ.ಪು.ಪ್ರಥಮಾಂಶ ಅ.11, 41, 42ನೇ ಶ್ಲೋಕ)

"ಮುನಿವರ್ಯರೇ ನನಗೆ ಐಶ್ವರ್ಯವಾಗಲಿ, ಈ ರಾಜ್ಯವಾಗಲಿ ಬೇಕಾಗಿಲ್ಲ, ಈ ಹಿಂದೆ ಯಾರೂ ಅನುಭವಿಸದೇ ಇರುವಂತಹ ಶ್ರೇಷ್ಠಸ್ಥಾನವನ್ನು ನಾನು ಬಯಸುತ್ತಿದ್ದೇನೆ. ಈ ವಿಷಯದಲ್ಲಿ ನನಗೆ ಸಹಾಯಮಾಡಿರಿ. ಹೇಗೆ

ಮಾಡಿದರೆ ಸರ್ವೋತ್ತಮವಾದ ಶ್ರೇಷ್ಠಸ್ಥಾನವು ದೊರೆಯುತ್ತದೆ ಎಂಬುದನ್ನು ಹೇಳಬೇಕು" ಎಂದನು. ಅದಕ್ಕೆ ಉತ್ತರವಾಗಿ ಮರೀಚ, ಅತ್ರಿ, ಅಂಗೀರಸಮುನಿ, ಪುಲಸ್ತ್ಯ, ಪುಲಹ, ಕೃತು, ವಸಿಷ್ಠ, ಸಪ್ತಋಷಿಗಳೆಲ್ಲಾ ಪುರುಷೋತ್ತಮನೂ, ಅಚ್ಯುತನೂ ಯೋಗೇಶ್ವರನೂ ಆದ ಶ್ರೀಮನ್ನಾರಾಯಣನನ್ನು ಆರಾಧಿಸು. ಆ ವಿಷ್ಣುವು ಸಂಪ್ರೀತನಾದಲ್ಲಿ ಈ ಮೂರು ಲೋಕಗಳಲ್ಲಿರುವ ಯಾವ ಯಾವ ಸ್ಥಾನವನ್ನು ನೀನು ಅಪೇಕ್ಷಿಸುವೆಯೋ ಅದೆಲ್ಲವೂ ದೊರೆಯುತ್ತದೆ ಎಂದರು. ಆಗ ಧ್ರುವನು ಮಹಾವಿಷ್ಣುವನ್ನು ಆರಾಧಿಸುವ ವಿಧಾನ ಹೇಗೆಂದು ಕೇಳಿದನು. ಆಗ ಅವರು ಏಕಾಗ್ರಚಿತ್ತನಾಗಿ, ತನ್ಮಯೀಭಾವದಿಂದ –

**ಹಿರಣ್ಯಗರ್ಭಪುರುಷ ಪ್ರಧಾನಾ ವ್ಯಕ್ತರೂಪಿಣೇ ॥**
**ಓಂ ನಮೋ ವಾಸುದೇವಾಯ ಶುದ್ಧಜ್ಞಾನ ಸ್ವರೂಪಿಣೇ**

(ವಿ.ಪು. ಅ.11, 55ನೇ ಶ್ಲೋಕ)

**ಎಂದು ಜಪಿಸು "ಹಿರಣ್ಯಗರ್ಭ ಪುರುಷಪ್ರಧಾನಾವ್ಯಕ್ತರೂಪಿಣೇ**
**ಓಂ ನಮೋ ವಾಸುದೇವಾಯ ಶುದ್ಧಜ್ಞಾನ ಸ್ವರೂಪಿಣೇ ॥**

ಎಂದು ಜಪಿಸುತ್ತಿರಬೇಕು. ಹಿರಣ್ಯಗರ್ಭ, ಜೀವಾತ್ಮ, ಪ್ರಧಾನ, ಪಂಚತನ್ಮಾತ್ರೆ – ಈ ರೂಪಗಳನ್ನು ತಳೆದಿರುವ, ಶುದ್ಧಜ್ಞಾನ ಸ್ವರೂಪನಾದ ವಾಸುದೇವನಿಗೆ ನಮಸ್ಕಾರ ಎಂದು ಜಪಿಸು, ಗೋವಿಂದನನ್ನು ಸಂತೋಷಪಡಿಸು ಎಂದರು.

ಇದು **ಓಂ ನಮೋ ಭಗವತೇ ವಾಸುದೇವಾಯ** – ಎಂಬ ದ್ವಾದಶಾಕ್ಷರ ಮಂತ್ರಕ್ಕೆ ಸಂವಾದಿಯಾದುದು ಎಂಬುದರ ಬಗ್ಗೆ ಮುಂದಿನ ಅಧ್ಯಾಯದಲ್ಲಿ ನಾವು ಕಾಣಬಹುದು.

ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೆ ಯಾವುದೇ ಒಳ್ಳೆಯ ಧ್ಯೇಯೋದ್ದೇಶವಿದ್ದರೆ ಅದನ್ನು ಸಾಧಿಸುವ ಛಲ ಪ್ರತಿಯೊಬ್ಬರಲ್ಲಿಯೂ ಇರಬೇಕು. ಸಾಧನಾಮಾರ್ಗಕ್ಕೆ

ವಯಸ್ಸು ಮುಖ್ಯವಲ್ಲ. ನಿರ್ಮಲವಾದ ಮನಸ್ಸು, ದೃಢವಾದ ಮನಸ್ಸು ಅವಶ್ಯ. ಸಾಧನಾಮಾರ್ಗದಲ್ಲಿ ಎಂತಹ ಎಡರುತೊಡರುಗಳು ಬಂದರೂ ಅದನ್ನು ಧೈರ್ಯದಿಂದ ಎದುರಿಸಿ ಮುಂದೆ ಸಾಗಬೇಕು ಎಂಬ ದಿವ್ಯಸಂದೇಶವನ್ನು ಧ್ರುವ ಚರಿತ್ರೆಯು ನೀಡುತ್ತದೆ.

ರಾಜಪುತ್ರನಾದ ಧ್ರುವನು ಸಪ್ತರ್ಷಿಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಉದ್ಯಾನವನದಿಂದ ಮುಂದಕ್ಕೆ ಹೊರಟ. ತಾನು ಕೃತಕೃತ್ಯನಾದನೆಂದು ಭಾವಿಸಿ ಯಮುನಾತಟದಲ್ಲಿರುವ ಮಹಾಪುಣ್ಯಕರವಾದ ಮಧು ಎಂಬ ಹೆಸರಿನ ವನವನ್ನು ಸೇರಿದನು.

**ಕೃತಕೃತ್ಯಮಿವಾತ್ಮಾನಂ ಮನ್ಯಮಾನಸ್ತತೋ ದ್ವಿಜ ।**
**ಮಧು ಸಂಜ್ಞಂ ಮಹಾಪುಣ್ಯಂ ಜಗಮಯಮುನಾತಟಮ್ ।**
**ಪುನಶ್ಚ ಮಧುಸಂಜ್ಞೇನ ದೈತ್ಯೇನಾದಿಷ್ಠಿತಂ ಯತಃ ।**
**ತತೋ ಮಧುವನಂ ನಾಮ್ನಾ ಖ್ಯಾತಮತ್ರ ಮಹೀತಲೇ ॥**
**ಹತಾಚ ಲವಣಂ ರಕ್ಷೋ ಮಧುಪುತ್ರಂ ಮಹಾಬಲಮ್ ।**
**ಶತ್ರುಘ್ನೋ ಮಧುರಾಂ ನಾಮ ಪುರೀಂ ಯತ್ರಚಕಾರವೈ ॥**
**ಯತ್ರವೈ ದೇವದೇಸವ್ಯ ಸಾನ್ನಿಧ್ಯಂ ಹರಿಮೇಧಸಃ ।**
**ಸರ್ವಪಾಪಹರೇ ತಸ್ಮಿಂ ಸ್ತಪಸ್ತೀರ್ಥೇ ಚಕಾರಸಃ ॥**

(ವಿ.ಪು. ಪ್ರಥಮಾಂಶ ಅ.12, ಶ್ಲೋಕ 2ರಿಂದ 5)

ಈ ಹಿಂದೆ ಮಧು ಎಂಬ ರಾಕ್ಷಸನು ವಾಸವಾಗಿದ್ದರಿಂದ ಅದು 'ಮಧುವನ' ಎಂದು ಪ್ರಸಿದ್ಧವಾಗಿದ್ದಿತು. ಅಲ್ಲಿಯೇ ಮಧುಪುತ್ರನಾದ ಲವಣಾಸುರನನ್ನು ಸಂಹರಿಸಿ ಮಧುರೆಯೆಂಬ ನಗರವನ್ನು ಕಟ್ಟಿಸಿದ್ದಾನೆ. ದೇವದೇವನಾದ ಶ್ರೀಹರಿಯ ಸಾನ್ನಿಧ್ಯವು ಅಲ್ಲಿ ಇದೆ. ಸಕಲ ಪಾಪಹಾರಿಯಾದ ಆ ತೀರ್ಥಕ್ಷೇತ್ರದಲ್ಲಿ ಸಪ್ತರ್ಷಿಗಳು ಹೇಳಿದ ಪ್ರಕಾರದಲ್ಲಿ ಧ್ರುವನು ತಪೋನಿರತನಾದನು.

ಮುಂದೆ ಪರಾಶರರು ಧ್ರುವ ಚರಿತ್ರೆಯನ್ನು ಮೈತ್ರೇಯರಿಗೆ ವರ್ಣಿಸುತ್ತಾ ಹೀಗೆಂದರು. ಧ್ರುವನು ಏಕಾಗ್ರಚಿತ್ತದಿಂದ ಶ್ರೀಮನ್ನಾರಾಯಣನನ್ನು ಧ್ಯಾನಮಾಡಿದನು. ಅವನ ಘೋರವಾದ ತಪಸ್ಸಿನಿಂದಾಗಿ ಭೂತಧಾರಿಣಿಯಾದ ಭೂದೇವಿಗೆ ಅವನ ಭಾರವನ್ನು ಹೊರಲಾಗಲಿಲ್ಲ. ಧ್ರುವನು ಎಡಗಾಲಿನ ಮೇಲೆ ನಿಂತು ತಪಸ್ಸನ್ನು ಆಚರಿಸುವಾಗ ಭೂಮಿಯ ಅರ್ಧಭಾಗ ಕಂಪಿಸಿತು. ಯಾವಾಗ ಧ್ರುವನು ಕಾಲಿನ ಅಂಗುಷ್ಠವನ್ನು ನೆಲದ ಮೇಲೆ ಊರಿ ನಿಂತನೋ ಆಗ ಸಮಸ್ತ ಭೂ ತಳವೂ ಪರ್ವತಸಹಿತವಾಗಿ ಅಲ್ಲಾಡಿತು. ನದ–ನದಿ (ಬ್ರಹ್ಮಪುತ್ರ, – ಗಂಗಾ, ಯಮುನಾ ಮುಂತಾದವು) ಸಮುದ್ರಗಳು ಮೇರೆ ತಪ್ಪಿದವು. ಇದರಿಂದಾಗಿ ದೇವತೆಗಳೆಲ್ಲಾ ಗಾಬರಿಯಾದರು. ಯಾಮ ಎಂಬ ದೇವತೆಗಳು ಅತ್ಯಂತ ವ್ಯಾಕುಲರಾಗಿ ದೇವೇಂದ್ರ ನೊಡನೆ ಸಮಾಲೋಚಿಸಿ, ಧ್ರುವನ ತಪಸ್ಸಿಗೆ ಭಂಗವನ್ನುಂಟುಮಾಡಲು ತೊಡಗಿದರು. ಉದ್ವಿಗ್ನರಾದ ಕೂಷ್ಮಾಂಡ ದೇವತೆಗಳು, ಮಹೇಂದ್ರನೊಡನೆ ಹೋಗಿ ನಾನಾ ಬಗೆಯ ರೂಪಗಳನ್ನು ಧರಿಸಿ ಧ್ರುವನ ಸಮಾಧಿಸ್ಥಿತಿಗೆ (ಧ್ಯಾನದ ಒಂದು ಭಂಗಿ) ಭಂಗವನ್ನು ತರಲು ಪ್ರಯತ್ನಿಸಿದರು. ಧ್ರುವನ ತಾಯಿಯಾದ ಸುನೀತಿಯಂತೆ ರೂಪವನ್ನು ಧರಿಸಿದ ಮಾಯಾಸ್ತ್ರೀಯೊಬ್ಬಳನ್ನು ಸೃಷ್ಟಿಸಿದರು. ಆಕೆಯು ಕಣ್ಣೀರು ಸುರಿಸುತ್ತಾ ಧ್ರುವನ ಎದುರಿಗೆ ನಿಂತು ಕಂದ ಆಟವಾಡುವ ಈ ವಯಸ್ಸಿನಲ್ಲಿ ನಿನಗೇಕೆ ತಪಸ್ಸು ? ಹಠಬೇಡ, ಕಂದ ದೇಹಕ್ಕೆ ಇಷ್ಟು ಯಾತನೆಯನ್ನು ಕೊಡಬೇಡ ನಿಲ್ಲಿಸು. ಹಲವು ಮನೋರಥಗಳನ್ನು ಇಟ್ಟುಕೊಂಡು ಕಷ್ಟದಿಂದ ನಾನು ನಿನ್ನನ್ನು ಪಡೆದಿದ್ದೇನೆ ಎಂದು ಮುಂತಾಗಿ ಹೇಳಿದಳು. ಅಷ್ಟೇ ಅಲ್ಲ ಆ ಮಾಯಾ ಸುನೀತಿಯು ಮತ್ತೊಮ್ಮೆ ಹೀಗೆಂದಳು ಈ ತಪಶ್ಚರಣೆಯನ್ನು ನಿಲ್ಲಿಸದಿದ್ದರೆ, ಇದೋ ನಿನ್ನ ಕಣ್ಣೆದುರಿಗೆ ನಾನು ಪ್ರಾಣವನ್ನು ಬಿಡುತ್ತೇನೆ ಎಂದಳು. ಧ್ರುವ ಅದಾವುದಕ್ಕೂ ಜಗ್ಗಲಿಲ್ಲ. ಏಕಾಗ್ರ ಮನಸ್ಕನಾಗಿ ತಪಸ್ಸು ಮಾಡುತ್ತಿದ್ದನು. ಅಷ್ಟರಲ್ಲಿ ಬೆಂಕಿಯ ಜ್ವಾಲೆಗಳನ್ನು ಹೊರಸೂಸುವಂತೆ ರಾಕ್ಷಸರು ಉಗ್ರವಾದ ಆಯುಧಗಳನ್ನು ಹಿಡಿದು ಧ್ರುವನ ಮುಂದೆ ಬಂದುನಿಂತರು. ಆಯುಧಗಳಾನ್ನು ಝಳಪಿಸುತ್ತಾ ಅತ್ಯುಗ್ರವಾಗಿ ಗರ್ಜಿಸಿದರು. ಇವನನ್ನು ಕೊಲ್ಲಿರಿ ಕೊಲ್ಲಿರಿ, ಕತ್ತರಿಸಿ–ತಿನ್ನಿರಿ–ತಿನ್ನಿರಿ ಎಂದು ಕೂಗಾಡಿದರು. ಆದರೆ ಗೋವಿಂದನಲ್ಲಿ ನೆಟ್ಟ ಮನಸ್ಕನಾಗಿದ್ದ

ಧ್ರುವನಿಗೆ ಆ ರಾಕ್ಷಸರಾಗಲಿ, ಅವರ ಗರ್ಜನೆಗಳಾಗಲಿ, ಆಯುಧಗಲಾಗಲಿ ಯಾವುದೂ ಕಾಣಿಸಲಿಲ್ಲ. ಬಾಲಧ್ರುವನಿಗೆ ಶ್ರೀಹರಿಯ ಶ್ರೀರಕ್ಷೆಯ ಬಲ ಚೆನ್ನಾಗಿದ್ದಿತು. ಧ್ರುವನು ಮಾಡುತ್ತಿದ್ದ ತಪಸ್ಸಿನ ಬೇಗೆಯಿಂದ ದೇವತೆಗಳು ಕಂಗಾಲಾದರು. ಬೇರೆ ವಿಧಿಯಿಲ್ಲದ ಜಗತ್ಕಾರಣ ಆದ್ಯಂತರಹಿತನೂ ಆದ ಶ್ರೀಮನ್ನಾರಾಯಣನಲ್ಲಿ ಅವರು ಮೊರೆಹೊಕ್ಕರು. ಅವನು ಇಂದ್ರಪದವಿಯನ್ನು ಬಯಸುತ್ತಿದ್ದಾನೋ, ಸೂರ್ಯನಾಗಬೇಕೆಂದಿದ್ದಾನೋ ನಮಗೆ ತಿಳಿಯದು ಒಟ್ಟಿನಲ್ಲಿ ಧ್ರುವನ ತಪಸ್ಸೇ ನಮಗೆ ಭರ್ಜಿಯಂತಾಗಿದೆ. ಅದನ್ನು ನಮ್ಮ ಎದೆಯಿಂದ ಕಿತ್ತುಹಾಕು ದೇವಾ. ಧ್ರುವನನ್ನು ತಪಸ್ಸಿನಿಂದ ನಿವೃತ್ತಗೊಳಿಸು ಎಂದು ಪರಿಪರಿಯಾಗಿ ದೇವತೆಗಳು ಬೇಡಿಕೊಂಡರು. ದೇವತೆಗಳ ಮಾತನ್ನು ಕೇಳಿ ಶ್ರೀಮನ್ನಾರಾಯಣನು ಅವರಿಗೆಲ್ಲಾ ಅಭಯಪ್ರಧಾನ ಮಾಡಿ ತಪೋನಿರತನಾದ ಧ್ರುವನಲ್ಲಿಗೆ  ಬಂದನು.

**ಔತ್ತಾನಪಾದೇ ಭದ್ರಂತೇ ತಪಸಾ ಪರಿತೋಷಿತಃ**

**ವರದೋಹಮನುಪ್ರಾಪ್ತೋ ವರವರಯ ಸುವ್ರತ**

**ಬಾಹಾರ್ಥ ನಿರಪೇಕ್ಷಂ ತೇ ಮಯಿ ಚಿತ್ತಂ ಯದಾಹಿತಮ್**

**ತುಷ್ಟೋಹಂ ಭವತಸ್ತೇನ ತದ್ ವೃಣೀಷ್ವವರಂಪರಮ್**

(ವಿ.ಪು. ಪ್ರಥಮಾಂಶ ಅಧ್ಯಾಯ. 12, ಶ್ಲೋಕ 42, 43)

“ಎಲೈ ಉತ್ತಾನಪಾದನ ಮಗನಾದ ಧ್ರುವನೇ, ನಿನಗೆ ಶುಭವಾಗಲಿ, ನಿನ್ನ ತಪಸ್ಸಿಗೆ ಮೆಚ್ಚಿ ನಾನು ವರವನ್ನು ನೀಡಲು ಬಂದಿದ್ದೇನೆ. ಸುವ್ರತ, ಬಾಹ್ಯವಸ್ತುಗಳನ್ನು ನೀನು ತೃಣೀಕರಿಸಿ ನನ್ನಲ್ಲಿ ದೃಢವಾದ ಚಿತ್ತವನ್ನು ನಿಲ್ಲಿಸಿರುವೆ. ಆದ್ದರಿಂದ ನಾನು ಸಂತುಷ್ಟನಾಗಿರುವೆ. ನಿನಗೆ ಬೇಕಾದ ವರವನ್ನು ಕೇಳಿಕೋ” ಎಂದನು. ದೇವದೇವನಾದ ಶ್ರೀಹರಿಯ ನುಡಿಯನ್ನು ಕೇಳಿ ಧ್ರುವನು ಕಣ್ತೆರೆದನು. ಧ್ಯಾನದೃಷ್ಟಿಗೆ ಗೋಚರನಾದ ಶ್ರೀಹರಿಯು ಶಂಖ, ಚಕ್ರ, ಗಧೆ, ಶಾರ್ಙ್ಗ, ಧನಸ್ಸು, ಖಡ್ಗಗಳನ್ನು ಹಿಡಿದ ಕಿರೀಟಧಾರಿಯಾದ ಅಚ್ಯುತನನ್ನು ಧ್ರುವನು ಕಣ್ತುಂಬ ನೋಡಿ ತಲೆಬಾಗಿ ಸಾಷ್ಟಾಂಗವಾಗಿ ನಮಸ್ಕರಿಸಿದನು. ಅವನ ಅಂಗಾಂಗಳೆಲ್ಲವೂ ರೋಮಾಂಚನಗೊಂಡವು.

ಇದ್ದಕ್ಕಿದಂತೆ ಒಂದು ರೀತಿಯ ಭಯ ಆವರಿಸಿತು. ದೇವದೇವನನ್ನು ಸ್ತುತಿಸಬೇಕೆಂಬ ಆಸೆ ಧ್ರುವನಿಗೆ ಉಂಟಾಯಿತು. ಓ ಸ್ವಾಮಿ, ನನ್ನ ತಪಸ್ಸಿನಿಂದ ನೀನು ಸಂತುಷ್ಟವಾಗಿದ್ದರೆ ನಾನು ನಿನ್ನನ್ನು ಸ್ತೋತ್ರ ಮಾಡಲು ಇಚ್ಛಿಸುತ್ತೇನೆ. ಹೇ ಪರಮೇಶ್ವರ ನಿನ್ನ ಭಕ್ತಿಯಲ್ಲಿ ಮುಳುಗಿದ ನನ್ನ ಮನಸ್ಸು ನಿನ್ನ ಪಾದಗಳನ್ನು ಸ್ತುತಿಸುವುದಕ್ಕೆ ಪ್ರವೃತ್ತವಾಗಿದೆ. ಅದಕ್ಕೆ ಬೇಕಾದ ಪ್ರಜ್ಞಾಶಕ್ತಿಯನ್ನು ದಯಪಾಲಿಸು ಎಂದು ನುಡಿದನು. ಶ್ರೀಹರಿಯನ್ನು ನೋಡಿದಾಕ್ಷಣ ತಾನು ಜಪಮಾಡಲು ಉದ್ದೇಶಿಸಿದ ಕಾರಣ ಮರೆತು ಮತ್ತೆ ಅವನನ್ನೇ ಸ್ತುತಿಸಿದ.

**ಭೂಮಿರಾಪೋನಲೋ ವಾಯುಃ ಖಂ ಮನೋಬುದ್ಧಿರೇವಚ**

**ಭೂತಾದಿ ರಾದಿರಕೃತಿರ್ಯಸ್ಯ ರೂಪಂನತೋಸ್ಮಿ ತಮ್**

**ಶುದ್ಧಃ ಸೂಕ್ಷೋಽಖಿಲವ್ಯಾಪೀ ಪ್ರಧಾನಾತ್ಪರತಃ ಪುಮಾನ್ ।**

**ಯಸ್ಯ ರೂಪಂ ನಮಸ್ತಸ್ಮೈ ಪುರುಷಾಯ ಗುಣಾಶಿವೇ ॥**

**ಭೂರಾಧೀನಾಂ ಸಮಸ್ತಾನಾಂ ಗಂಧಾದೀನಾಂ ಚ ಶಾಶ್ವತಃ ।**

**ಬುದ್ಧ್ಯಾದೀನಾಂ ಪ್ರಧಾನಸ್ಯ ಪುರುಷಸ್ಯ ಚಯಃ ಪರಃ॥**

**ತಂ ಬ್ರಹ್ಮಭೂತಮಾತ್ಮಾನಮಶೇಷಜಗತಃ ಪತಿಮ್ ।**

**ಪ್ರಪದ್ಯೇ ಶರಣಂ ಶುದ್ಧಂ ತ್ವದ್ರೂಪಂ ಪರಮೇಶ್ವರ ॥**

**ಬೃಹತ್ತ್ವಾದ್ ಬೃಂಹಣತ್ವಾಚ್ಚಯದ್ರೂಪಂ ಬ್ರಹ್ಮಸಂಜ್ಞಿತಮ್ ।**

**ತಸ್ಮೈ ನಮಸ್ತೇ ಸರ್ವಾತ್ಮನ್ ಯೋಗಿ ಚಿಂತ್ಯಾವಿಕಾರಿಣೇ**

**ಸರ್ವ ಸಹಸ್ರ ಶೀರ್ಷಾ ಪುರುಷ ಸಹಸ್ರಾಕ್ಷಃ ಸಹಸ್ರಪಾತ್**

**ಸರ್ವವ್ಯಾಪೀ ಭುವಃ ಸ್ಪರ್ಶಾದತ್ಯತಿಷ್ಠದಶಾಙ್ಗಲಮ್**

**ಯದ್ ಭೂತಂ ಯಚ್ಚವೈಭವ್ಯಂ ಪುರುಷೋತ್ತಮತದ್ಭವಾನ್**

**ತತೋ ವಿರಾಟ್ ಸ್ವರಾಟ್ ಸಮ್ರಾಟ್ ತ್ವತ್ತ ಶ್ಚಾಪ್ಯಧಿ ಪೂರುಷ**

**ಯದ್ ಭೂತಂ ಯಚ್ಚ ವೈಭವ್ಯಂ ಪುರುಷೋತ್ತಮ ತದ್ಭವಾನ್ ।**

**ಅತ್ಯರಿಚ್ಯತಸೋ ದಶ್ಚ ತಿರ್ಯಗೂ ರ್ಧ್ವಂ ಚವೈಭುವಃ ।**

ತ್ವತ್ತೋ ವಿಶ್ವಮಿದಂ ಜಾತಂ ತ್ವತ್ತೋ ಭೂತಭವಿಷ್ಯತೀ॥
ತ್ವದ್ ರೂಪಧಾರಿಣಶ್ಚಾನ್ತರ್ಭೂತಂ ಸರ್ವಮಿದಂ ಜಗತ್ ।
ತ್ವತ್ತೋಯಜ್ಞಃ ಸರ್ವಹುತಃ ಪೃಷದಾಜ್ಯಂ ಪಶುರ್ದ್ವಿಧಾ ॥
ತ್ವತ್ತಃ ಋಚೋಥ ಸಾಮಾನಿ ತ್ವತ್ತ ಶ್ಚನ್ದಾಂಸಿ ಜಜ್ಞಿರೇ
ತ್ವತ್ತೋ ಯಜೂಂಷ್ಯಜಾಯನ್ತ ತ್ವತ್ತೋಶ್ವಾಶ್ಚೈಕತೋದತಾಃ ॥
ಗಾನಸ್ತ್ವತ್ತಃ ಸಮುದ್ಭುತಾಸ್ತ್ವತೋಜಾ ಅವಯೋ ಮೃಗಾಃ ।
ತ್ವನ್ಮುಖಾದ್ ಬ್ರಾಹ್ಮಣಾಸ್ತ್ವತ್ತೋ ಬಾಹೋಕ್ಷತ್ರಮಜಾಯತ ॥
ವೈಶ್ಯಾಸ್ತವೋರುಜಾಃ ಶೂದ್ರಾಸ್ತವ ಪದ್ಭ್ಯಾಂಸಮುದ್ಗತಾಃ ।
ಅಕ್ಷ್ಣೋಃ ಸೂರ್ಯೋನಿಲಃ ಪ್ರಾಣಾಚ್ಚಂದ್ರಮಾ ಪುನಸಸ್ತವ ॥
ಪ್ರಾಣೋನ್ತಃ ಸುಷಿರಾಜ್ಜಾತೋ ಮುಖಾದಗ್ನಿ ರಜಾಯತ ।
ನಾಭಿತೋ ಗಗನಂ ದ್ಯೌಶ್ಚ ಶಿರಸಃ ಸಮವರ್ತತ ॥
ದಿಶಃ ಶ್ರೋತ್ರಾತ್ ಕ್ಷಿತಃ ಪದ್ಭ್ಯಾಂ ತ್ವತ್ತಃ ಸರ್ವಮಭೂದಿದಮ್ ।
ನ್ಯಗ್ರೋಧಃ ಸುಮಹಾನಲ್ಪೇ ಯಥಾಬೀಜೆ ವ್ಯವಸ್ಥಿತಃ ।
ಸಂಯಮೇ ವಿಶ್ವಮಖಿಲಂ ಬೀಜಭೂತೇ ತಥಾ ತ್ವಯೀ ॥
ಬೀಜಾದಂಕುರ ಸಂಭೂತೋ ನ್ಯಗ್ರೋದಸ್ತು ಸಮುತ್ಥಿತಃ ।
ವಿಸ್ತಾರಂ ಚ ಯಥಾ ಯಾತಿ ತ್ವತ್ತಃ ಸೃಷ್ಟೌ ತಥಾ ಜಗತ್ ॥
ಯಥಾಹಿ ಕದಲೀ ನಾನ್ಯತ್ವಕ್ ಪತ್ರಾದಪಿ ದೇಶ್ಯತೇ ।
ಏವಂ ವಿಶ್ವಸ್ಯ ನಾನ್ಯ ಸ್ತ್ವಂ ತ್ವತ್ಸ್ಥಾಯೀಶ್ವರ ದೃಶ್ಯತೇ ।
ಹ್ಲಾದಿನೀ ಸಂಧಿನೀ ಸಂವಿತಂ ಯ್ಯೇಕಾ ಸರ್ವಸಂಸ್ಥಿತೌ ॥
ಹ್ಲಾದತಾಪಕರೀ ಮಿಶ್ರಾ ತ್ವಯೀ ನೋ ಗುಣವರ್ಜಿತಂ ॥
ಪ್ರಥಗ್ಭೂತೈಕ ಭೂತಾಯ ಭೂತಭೂತಾಯತೇನಮಃ ।
ಪ್ರಭೂತ ಭೂತ ಭೂತಾಯ ತುಭ್ಯಂ ಭೂತಾತ್ಮನೇ ನಮಃ ॥
ವ್ಯಕ್ತಂ ಪ್ರಧಾನಪುರುಷೌ ವಿರಾಟ್ ಸಮ್ರಾಟ್ ಸ್ವರಾಟ್ ತಥಾ।

ವಿಭಾವ್ಯತ್ತೇನ್ತಃ ಕರಣೇಪುರುಷೇಷ್ವಕ್ಷಯೋಭವಾನ್ ॥

ಸರ್ವಸ್ಮಿಸ್ಸರ್ವ ಭೂತಸ್ತ್ವಂ ಸರ್ವಃ ಸರ್ವಸ್ವರೂಪದೃತ್ ।

ಸರ್ವಂ ತ್ವತ್ತಸ್ತತಶ್ಚತ್ವಂ ನಮಃ ಸರ್ವಾತ್ಮನೇಸ್ತುತೇ ॥

ಸರ್ವಾತ್ಮ ಕೋಸಿ ಸರ್ವೇಶ ಸರ್ವಭೂತಸ್ಥಿತೋಯತಃ।

ಕಥಯಾಮಿ ತತಃ ಕಿಂತೇ ಸರ್ವಂ ವೇತ್ಸಿ ಹೃದಿಸ್ಥಿತಮ್ ॥

ಸರ್ವಾತ್ಮನ್ ಸರ್ವಭೂತೇಶ ಸರ್ವಸತ್ವ ಸಮುದ್ಭವ ।

ಸರ್ವಭೂತೋ ಭವಾನ್ವೇತ್ತಿ ಸರ್ವಸತ್ತ್ವ ಮನೋರಥಮ್ ॥

ಯೋ ಮೇ ಮನೋರಥೋ ನಾಥಸದಲಃ ಸತ್ವಯಾಕೃತಃ ।

ತಪಶ್ಚ ತಪ್ತಂ ಸಫಲ್ಯದ್ ದೃಷ್ಟೋಸಿ ಜಗತ್ಪತೇ ॥

ಧ್ರುವನು ಮಾಡಿದ ಈ ವಿಷ್ಣುಸ್ತುತಿ ಪುರುಷಸೂಕ್ತದ ಅಭಿಪ್ರಾಯವನ್ನೇ ಅರ್ಥೈಸುತ್ತದೆ. ಸಾವಿರ ತಲೆ, ಸಾವಿರ ಕಣ್ಣುಗಳು, ಸಹಸ್ರ ಶೀರ್ಷಾಪುರುಷಃ ಸಹಸ್ರಾಕ್ಷಸಹಸ್ರಪಾತ್ ಎಂದು ಮುಂತಾದ ಪುರುಷಸೂಕ್ತ ಉಕ್ತಿಗಳಿಗೆ ಸಂವಾದಿಯಾಗಿದೆ. ವಿಶ್ವರೂಪದರ್ಶನದ ವಿವರಣೆಯೂ ಇದೆ. ಧ್ರುವನು ಹೀಗೆ ಪ್ರಾರ್ಥಿಸಿ ಹೇ, ಸ್ವಾಮಿ ನಿನ್ನ ದರ್ಶನಮಾತ್ರದಿಂದಲೇ ನನ್ನ ಮನೋರಥವು ಸಫಲವಾಯಿತು. ನನ್ನ ತಪಸ್ಸಿಗೆ ಫಲ ದೊರೆಯಿತು ಎಂದನು.

ಆಗ ಭಗವಂತನು ರಾಜಪುತ್ರ ಧ್ರುವ ತಪಸ್ಸಿಗೆ ನನ್ನ ದರ್ಶನವು ಫಲವಾಯಿತು. ಆದರೆ ನನ್ನ ದರ್ಶನಕ್ಕೆ ಇನ್ನೊಂದು ಫಲಸಿಗುತ್ತದೆ. ನನ್ನ ದರ್ಶನವು ವಿಫಲವಾಗುವುದಿಲ್ಲ. ಆದ್ದರಿಂದ ನಿನಗೆ ಇಷ್ಟವಾದ ವರವನ್ನು ಕೇಳಿಕೋ ಎಂದನು. ಆಗ ಧ್ರುವನು ಹಿಂದೆ ಆಗಿದ್ದ ಸಂಗತಿಗಳನ್ನೆಲ್ಲಾ ವಿವರಿಸಿದನು. ಸ್ವಾಮಿ ಜಗತ್ತಿಗೆ ಆಧಾರಭೂತನಾದ ನಿನ್ನಲ್ಲಿ ಬೇಡಿಕೊಳ್ಳುತ್ತೇನೆ, ಅವ್ಯಯವೂ ಸರ್ವೋತ್ತಮವೂ ಆದ ಸ್ಥಾನವು ನಿನ್ನ ಅನುಗ್ರಹದಿಂದ ಲಭಿಸಲಿ ಎಂದು ಕೇಳಿಕೊಂಡನು. ಆಗ ಭಗವಂತನು ನಿನಗೆ ಅಂತಹ ಸ್ಥಾನ ಖಂಡಿತವಾಗಿಯೂ ಲಭಿಸುತ್ತದೆ. ಈ ಹಿಂದಿನ ಜನ್ಮದಲ್ಲಿ ನೀನು ಬ್ರಾಹ್ಮಣನಾಗಿದ್ದೆ, ಏಕಾಗ್ರಚಿತ್ತದಿಂದ ನನ್ನನ್ನು ಧ್ಯಾನಿಸುತ್ತಿದ್ದೆ, ತಂದೆ

ತಾಯಿಗಳ ಸೇವೆಮಾಡುತ್ತಾ ಸ್ವಧರ್ಮವನ್ನು ಪಾಲಿಸುತ್ತಿದ್ದೆ. ಹೀಗಿರಲು ಸ್ವಲ್ಪ ಕಾಲವಾದ ಮೇಲೆ ಒಬ್ಬ ರಾಜಪುತ್ರನು ನಿನಗೆ ಮಿತ್ರನಾದನು. ತಾರುಣ್ಯದಲ್ಲಿದ್ದ ಆತನು ಸಕಲ ಭೋಗಗಳನ್ನು ಅನುಭವಿಸುತ್ತಾ ಇದ್ದನು. ಅವನು ಸುಂದರನೂ ತೇಜಸ್ವಿಯೂ ಆಗಿದ್ದನು. ಅವನ ಸಖ್ಯದಿಂದಾಗಿ 'ನಾನೂ ರಾಜಪುತ್ರನಾಗಬೇಕು' ಎಂಬ ಆಸೆ ನಿನ್ನಲ್ಲಿ ಹುಟ್ಟಿತು. ನಂತರ ನಿನ್ನ ಅಭಿಲಾಷೆಯಂತೆ ಈ ಜನ್ಮದಲ್ಲಿ ನಿನಗೆ ರಾಜಪುತ್ರನಾಗುವ ಯೋಗ ಬಂದಿತು. ಸ್ವಾಯಂಭುವ ಮನುವಿನ ವಂಶದಲ್ಲಿ ಹುಟ್ಟುವುದೇ ಒಂದು ಮಹಾಯೋಗ. ಎಲೈ ಧ್ರುವನೇ ಸ್ವರ್ಗಾದಿಗಳನ್ನು ಪಡೆಯುವುದಕ್ಕಿಂತಲೂ ಹೆಚ್ಚಾಗಿ ತ್ರಿಲೋಕಗಳಿಗೂ ಅಧಿಕವಾದ ಸ್ಥಾನದಲ್ಲಿ ನೀನು ನನ್ನ ಅನುಗ್ರಹದಿಂದ ಸಮಸ್ತ ಗ್ರಹನಕ್ಷತ್ರಗಳಿಗೆ ಆಶ್ರಯದಾತನಾಗುವೆ. ಧ್ರುವ ಇದರಲ್ಲಿ ಸಂದೇಹವಿಲ್ಲ. ಸೂರ್ಯ, ಚಂದ್ರ, ಕುಜ, ಬುಧ, ಗುರು, ಶುಕ್ರ, ಶನಿ ಮುಂತಾದ ಗ್ರಹ ನಕ್ಷತ್ರಗಳಿಗೂ ಮೇಲೆ, ಎಲ್ಲ ಸಪ್ತರ್ಷಿಗಳಿಗೂ ಮೇಲೆ, ವಿಮಾನ ಸಂಚಾರಿಗಳಾದ ಸಮಸ್ತ ದೇವತೆಗಳಿಗೂ ಮೇಲೆ ನಿನಗೆ ಸ್ಥಾನವನ್ನು ನಾನು ಕೊಟ್ಟಿದ್ದೇನೆ.

**ತ್ರೈಲೋಕ್ಯಾ ದಧಿಕೇ ಸ್ಥಾನೇ ಸರ್ವತಾರಾಗ್ರಹಾಶ್ರಯಃ ।**
**ಭವಿಷ್ಯತಿ ನ ಸಂದೇಹೋ ಮತ್ಪ್ರಸಾದಾದ್ಭವಾನ್ ಧ್ರುವ ॥**
**ಸೂರ್ಯೋತ್ಸೋ ಮತ್ತಥಾ ಭೌಮಾತ್ ಸೋಮಪುತ್ರಾದ್‌ಬೃಹಸ್ಪತೇ ।**
**ಸಿತಾರ್ಕತಾನ ಯಾದೀನಾಂ ಸರ್ವಾಕ್ಷಾಣಾಂ ತಥಾ ಧ್ರುವ ॥**
**ಸಪ್ತರ್ಷೀಣಾಮ ಶೇಷಾಣಾಂ ಯೇ ಚ ವೈಮಾನಿಕಾಃ ಸುರಾಃ ।**
**ಸರ್ವೇಷಾ ಮುಘರಿ ಸ್ಥಾನಂ ತವದತ್ತಂ ಮಯಾಧ್ರುವ ॥**
**ಕೇಚಿಚ್ಛತು ರ್ಯುಗಂ ಯಾವತ್ ಕೇಚಿನ್ಮನ್ವನ್ತರಂ ಸುರಾಃ ।**
**ತಿಷ್ಠಂತಿ ಭವತೋದತ್ತಾ ಮಯಾವೈಕಲ್ಪಸಂಸ್ಥಿತಿಃ ॥**

(ವಿ.ಪು. ಅ. 12, ಶ್ಲೋಕ 90ರಿಂದ 93ರವರೆಗೆ)

ದೇವತೆಗಳಲ್ಲಿ ಕೆಲವರು ನಾಲ್ಕು ಯುಗಗಳವರೆಗೂ, ಕೆಲವರು ಒಂದು ಮನ್ವಂತರದವರೆಗೂ ಇರುತ್ತಾರೆ. ನೀನು ಒಂದು ಕಲ್ಪದವರೆಗೆ

ಜೀವಿಸಿರುತ್ತಿಯೇ ಶುದ್ಧಾತ್ಮಳಾದ ನಿನ್ನ ತಾಯಿಯೂ ಸಹ (ಸುನೀತಿ) ಒಂದು ತಾರೆಯಾಗಿ ಅಲ್ಲಿಯವರೆಗೂ ನಿನ್ನ ಬಳಿ ವಿಮಾನದಲ್ಲಿ ನೆಲಸಿರುವಳು.

ಯಾರು ನಿನ್ನನ್ನು ಪ್ರಾತಃಕಾಲ ಸಾಯಂಕಾಲಗಳಲ್ಲಿ ಶ್ರದ್ಧೆಯಿಂದ ನಿನ್ನ ಗುಣಕೀರ್ತನೆ ಮಾಡುವರೋ ಅವರಿಗೆ ಮಹಾಪುಣ್ಯ ಲಭಿಸುವುದು.

ಹೀಗೆ ಧರ್ಮಮಾರ್ಗವನ್ನು ಅವಲಂಬಿಸಿದ್ದರಿಂದ ತಂದೆ ತಾಯಿಗಳನ್ನು ಸೇವಿಸಿದ್ದರಿಂದ ದ್ವಾದಶಾಕ್ಷರ ಮಂತ್ರದ ಮಹಾತ್ಮ್ಯದಿಂದ ಧ್ರುವನಿಗೆ ಲಭಿಸಿದ ಗೌರವನ್ನು, ಸಂಪತ್ತನ್ನು ಮಹಿಮೆಯನ್ನು ವೀಕ್ಷಿಸಿ ದೇವಾಸುರನಿಗೆ ಆಚಾರ್ಯನಾದ ಶುಕ್ರನು ಈ ಶ್ಲೋಕವನ್ನು ಉದ್ಗರಿಸಿದನು.

**ಏವಂ ಪೂರ್ವಂ ಜಗನ್ನಾಥಾದ್ವೇವ ದೇವಾಜ್ಜನಾರ್ಧನಾತ್**

**ವರಂ ಪ್ಯದ್ಯ ಧ್ರುವಃ ಸ್ಥಾನಮಧ್ಯಾಸ್ತೆ ಸಮಹಾಮತೇ ॥**

**ಸ್ವಯಂ ಶು ಶ್ರೂಷಣಾ ದ್ವರ್ಮಾನ್ಯಾತಾಪಿತ್ರೋಶ್ಚ ವೈತಥಾ ।**

**ದ್ವಾದಶಾಕ್ಷರಮಾಹಾತ್ಮ್ಯಾತ್ತಪಸಶ್ಚ ಪ್ರಭಾವತಃ ॥**

**ತಸ್ಯಾಭಿಮಾನಮೃದ್ಧಿಂ ಚ ಮಹಿಮಾನಂ ನಿರೀಕ್ಷ್ಯ ಹಿ ।**

**ದೇವಾಸುರಾಣಾಮಾಚಾರ್ಯ ಶ್ಲೋಕ ಮತ್ರೋಶನಾಜಗೌ ॥**

(ವಿ.ಪು. ಅ.12 ಶ್ಲೋಕ 96ರಿಂದ 98)

ಹೀಗೆ ಧ್ರುವನು ದ್ಯುಲೋಕವನ್ನೇರಿ ಶಾಶ್ವತ ಪದವಿಯನ್ನು ಪಡೆದನು. ಯಾರು ನಿತ್ಯವೂ ಇದನ್ನು (ಧ್ರುವಚರಿತ್ರೆಯನ್ನು, ಕೇಳುತ್ತಾರೋ ಅವರು ಸರ್ವಪಾಪಗಳಿಂದಲೂ ವಿಮುಕ್ತರಾಗಿ ಸ್ವರ್ಗಲೋಕದಲ್ಲಿ ಪೂಜಿಸಲ್ಪಡುವರು.

## ವೇನ ಮತ್ತು ಪೃಥುವಿನ ಚರಿತ್ರೆ

ಪರಾಶರರು ಮುಂದೆ ವೇನ ಮತ್ತು ಪೃಥು ಮಹಾರಾಜರ ಚರಿತ್ರೆಯನ್ನು ಮೈತ್ರೇಯರಿಗೆ ತಿಳಿಸಿದರು. ಧ್ರುವನಿಗೆ ಶಿಷ್ಟಿ, ಭವ್ಯ ಎಂಬ ಇಬ್ಬರು ಪುತ್ರರು

ಜನಿಸಿದರು. ಭವ್ಯನಿಂದ ಶಂಖು ಎಂಬುವನು ಹುಟ್ಟಿದನು. ಶಿಷ್ಟಿಯ ಪತ್ನಿಯಾದ ಸುಚ್ಛಾಯೆಯು ಪುಣ್ಯಾತ್ಮರಾದ ಐವರು ಮಕ್ಕಳನ್ನು ಹಡೆದಳು. ರಿಪು, ರಿಪುಂಜಯ, ವಿಪ್ರ, ವೃಕಲ, ವೃಕತೇಜಸ್ಸು ಎಂದು ಅವರ ಹೆಸರು. ರಿಪುವಿನ ಮಡದಿ ಬೃಹಸ್ಪತಿಯು ಮಹಾತೇಜಸ್ವಿಯಾದ ಚಾಕ್ಷುಷನೆಂಬ ಮಗನಿಗೆ ಜನ್ಮ ನೀಡಿದಳು. ಚಾಕ್ಷುಷನ ಪತ್ನಿ ಪುಷ್ಕರಿಣಿಯು ವರುಣನ ಕುಲದಲ್ಲಿ ಹುಟ್ಟಿದವಳು. ಅವಳು ಮಹಾತ್ಮನಾದ ವೀರಣ ಪ್ರಜಾಪತಿಯ ಮಗಳು. ಆ ಪುಷ್ಕರಿಣಿಯು ಚಾಕ್ಷುಷನಿಂದ ಮನುವೆಂಬ ಪುತ್ರನನ್ನು ಪಡೆದಳು. ವೈರಾಜಪ್ರಜಾಪತಿಯ ಮಗಳಾದ ನಡ್ವಲೆಯೆಂಬ ಪುತ್ರಿಯಲ್ಲಿ ಮನುವಿಗೆ ಮಹಾತೇಜಸ್ವಿಗಳಾದ ಹತ್ತು ಮಂದಿ ಪುತ್ರರು ಜನಿಸಿದರು. ಕುರು, ಪುರು, ಶತದ್ಯುಮ್ನ, ತಪಸ್ವಿ, ಸತ್ಯವಂತ, ಶುಚಿ, ಅಗ್ನಿಷ್ಟೋಮ, ಅತಿರಾತ್ರ, ಸುದ್ಯುಮ್ನ ಎಂಬ ಒಂಬತ್ತು ಜನರು ಮತ್ತು ನಡ್ವಲೆಯಿಂದ ಹುಟ್ಟಿದ ಹತ್ತನೆಯವನು ಅಭಿಮನ್ಯು. ಇವರಲ್ಲಿ ಕುರುವಿನಿಂದ ಆಗ್ನೇಯಿಯು ಪ್ರಭಾವಶಾಲಿಗಳಾದ ಆರುಮಂದಿ ಪುತ್ರರನ್ನು ಹೆತ್ತಳು. ಅಂಗ, ಸುಮನಸ್ಸು, ಖ್ಯಾತಿ, ಕ್ರತು, ಅಂಗೀರಸ್ಸು, ಶಿಬಿ ಎಂಬುವರೇ ಅವರು. ಅಂಗನಿಂದ ಸುನೀಥೆಯು ವೇನ ಎಂಬ ಒಬ್ಬ ಮಗನನ್ನು ಪಡೆದಳು. ಹೀಗೆ ಜನಿಸಿದ ವೇನನ ಬಲಗೈಯನ್ನು ಋಷಿಗಳು ಸಂತಾನಾರ್ಥವಾಗಿ ಕಡಿದರು. ಹೀಗೆ ಅವನ ಕೈಯನ್ನು ಮಥಿಸಲಾಗಿ, ವೈನ್ಯಾನೆಂಬ ರಾಜನು ಜನಿಸಿದನು. ಅವನು ಪ್ರಥು ಎಂದು ಪ್ರಸಿದ್ಧನಾದನು. ಆತನು ಪ್ರಜೆಗಳ ಹಿತಕ್ಕಾಗಿ ಪ್ರಥಿವಿಯನ್ನು ದೋಹನ (ಮಥನ) ಮಾಡಿದನು. ಈ ಮಾತನ್ನು ಕೇಳಿ ಮೈತ್ರೇಯರಿಗೆ ಆಶ್ಚರ್ಯವಾಯಿತು. ಅವರ ಸಂದೇಹವನ್ನು ನಿವಾರಿಸುತ್ತಾ ಪರಾಶರರು ಹೀಗೆ ಹೇಳಿದರು.

ಮೈತ್ರೇಯ – ಸುನೀಥಾ ಎಂಬುವಳು ಮೃತ್ಯುವಿನ ಪ್ರಥಮ ಪುತ್ರಿ. ಅವಳನ್ನು ಅಂಗನಿಗೆ ಮಡದಿಯಾಗಿ ಮದುವೆ ಮಾಡಿಕೊಡಲಾಗಿತ್ತು. ಅವಳಲ್ಲಿ ವೇನನು ಹುಟ್ಟಿದನು. ಮೃತ್ಯುವಿನ ಮಗಳ ಮಗನಾದ ಅವನು ಮಾತಾಮಹನ ದೋಷದಿಂದಾಗಿ ಸ್ವಭಾವದಲ್ಲಿ ದುಷ್ಟನಾಗಿಯೇ ಹುಟ್ಟಿದನು. ಮಹರ್ಷಿಗಳೆಲ್ಲಾ ಸೇರಿ ಆತನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿದರು. ಆ ಕ್ಷಣದಲ್ಲಿಯೇ ಮಹಾರಾಜನು ಒಂದು ಘೋಷಣೆಯನ್ನು

ಹೊರಡಿಸಿದನು. “ಯಾರೂ ಯಜ್ಞ ಯಾಗಾದಿಗಳನ್ನು ಮಾಡಬಾರದು, ದಾನಮಾಡಬಾರದು, ಎಂದೆಂದಿಗೂ ಹವನ ಮಾಡಬಾರದು, ಯಜ್ಞಕ್ಕೆ ಭೋಕ್ತೃನಾದವನು ನಾನೊಬ್ಬನಲ್ಲದೆ ಮತ್ತಾರೂ ಅಲ್ಲ. ಪ್ರಭುವಾದ ನಾನೇ ಯಜ್ಞಪತಿ” ಎಂದನು. ಆಗ ಋಷಿಗಳು ಅವನನ್ನು ತಿದ್ದಲು ಪ್ರಯತ್ನಿಸಿದರು ರಾಜ್ಯಕ್ಕೆ ಪ್ರಜೆಗಳ ಹಿತವಾಗಲೆಂದು ದೀರ್ಘಸತ್ರವೆಂಬ ಯಾಗದಿಂದ ಹರಿಯನ್ನು ಪೂಜಿಸೋಣ. ಶ್ರೀಹರಿಯು ಪ್ರಸನ್ನನಾಗಿ ನಮ್ಮ ಇಷ್ಟಾರ್ಥಗಳನ್ನು ನೆರವೇರಿಸುತ್ತಾರೆ ಎಂದರು. ಆದರೆ ವೇನನು ಇದಾವ ಮಾತಿಗೂ ಕಿವಿಗೊಡಲಿಲ್ಲ. ತನಗಿಂತಲೂ ದೊಡ್ಡವನು ಈ ಪ್ರಪಂಚದಲ್ಲಿ ಯಾರೂ ಇಲ್ಲ ಎಂದು ದುರಹಂಕಾರದಿಂದ ಮೆರೆದನು. ಮತ್ತೆ ಮತ್ತೆ ಆ ಮಹರ್ಷಿಗಳು ವಿಜ್ಞಾಪಿಸಿಕೊಂಡರೂ ವೇನನು ಅದಕ್ಕೆ ಸಮ್ಮತಿಸದೆ ಧಿಕ್ಕರಿಸುತ್ತಲೇ ಇದ್ದನು. ಆಗ ಮಹರ್ಷಿಗಳು ತಾಳ್ಮೆಗೆಟ್ಟು ಸಂಕ್ರುದ್ಧರಾಗಿ ಈ ಪಾಪಿಯನ್ನು ಕೊಲ್ಲಲೇಬೇಕೆಂದುಕೊಂಡು ಮಂತ್ರಪೂತವಾದ ದರ್ಭೆಗಳಿಂದ ಹೊಡೆದರು. ವೇನನು ಮರಣಿಸಿದನು. ವೇನನ ಮರಣದಿಂದಾಗಿ ಎಲ್ಲೆಡೆಯೂ ಧೂಳೆಬ್ಬಿಸಿದುದನ್ನು ಋಷಿಗಳೂ ನೋಡಿದರು. ಕಾರಣವೇನೆಂದು ಕೇಳಿದಾಗ ಸಮೀಪದಲ್ಲಿದ್ದ ಜನರು ಹೇಳಿದರು “ಮುನಿಗಳೇ ಅರಾಜಕವಾದ ಈ ರಾಷ್ಟ್ರದಲ್ಲಿ ಕಷ್ಟಕ್ಕೆ ಸಿಕ್ಕಿರುವ ಜನರು ಕಳ್ಳತನಕ್ಕೆ ಇಳಿದಿದ್ದಾರೆ.

ಪರದ್ರವ್ಯವನ್ನು ಅಪಹರಿಸುವುದಕ್ಕಾಗಿ ಈ ಜನರು ಧಾಂದಲೆ ಎಬ್ಬಿಸಿದುದರಿಂದ ಧೂಳು ಹರಡಿದೆ ಎಂದರು. ಆಗ ಮುನಿಗಳೆಲ್ಲರೂ ಸಮಾಲೋಚಿಸಿ ಸಂತಾನಾರ್ಥವಾಗಿ ವೇನರಾಜನ ತೊಡೆಯನ್ನು ಮಥಿಸಿದರು. ಏಕೆಂದರೆ, ವೇನನಿಗೆ ಮಕ್ಕಳಿರಲಿಲ್ಲ ಋಷಿಗಳು ಪ್ರಯತ್ನಪೂರ್ವಕವಾಗಿ ರಾಜನ ತೊಡೆಯನ್ನು ಮಥಿಸುತ್ತಿರುವಾಗ ವೇನನ ತೊಡೆಯಿಂದ ಒಬ್ಬ ಪುರುಷನು ಆವಿರ್ಭವಿಸಿದನು. ಅವನು ಸುಟ್ಟುಹೋದ ಮರದಂತೆ ಕಪ್ಪಾಗಿ ಕುಳ್ಳಾಗಿ ಇದ್ದನು. ಆತನು ಆತುರಾತುರವಾಗಿ ಹೊರಬಂದು ವಿಪ್ರರನ್ನು ಏನುಮಾಡಲಿ ಎಂದು ಕೇಳಿದನು. ಆಗ ಮಹರ್ಷಿಗಳು ನಿಷಾದ ಕುಳಿತುಕೋ ಎಂದರು. ಅದರಿಂದಾಗಿ ಅವನು ನಿಷಾದನೆನಿಸಿದನು. (ನಿಷಾದ ಎಂದರೆ ಅರಣ್ಯಗಳಲ್ಲಿ ವಾಸಿಸುವವರು. ಬೇಟೆಯಾಡಿ ಜೀವನ ಸಾಗಿಸುವವರು) ಅವರು ವೇನನ ಪಾಪಕರ್ಮವನ್ನು ನಾಶಮಾಡತಕ್ಕವರಾದರು. ನಂತರ ಮುನಿಗಳು ವೇನನ ಬಲಗೈಯನ್ನು ಮಥಿಸಿದರು.

ಇದರಿಂದಾಗಿ 'ಪೃಥು' ಎಂಬ ಪ್ರತಾಪಶಾಲಿಯಾದ ವೇನಪುತ್ರನು ಜನಿಸಿದನು. ಅವನು ಅತ್ಯಂತ ತೇಜಸ್ವಿಯಾಗಿ ಸಾಕ್ಷಾದಗ್ನಿಯಂತೆ ಪ್ರಕಾಶಿಸುತ್ತಿದ್ದನು. ಆಗ ಆಜಗವವೆಂಬ ಶಿವನ ಧನಸ್ಸು ಗಗನದಿಂದ ಮೊದಲು ಬಿದ್ದಿತು. ದಿವ್ಯಸ್ತ್ರಗಳೂ ಕವಚವೂ ಆಕಾಶದಿಂದ ಉದುರಿದವು. ಪೃಥುವು ಜನಿಸಿದಾಗ ಎಲ್ಲೆಲ್ಲಿಯೂ ಹರುಷ ಉಂಟಾಯಿತು. ಸತ್ಪುತ್ರನನ್ನು ಪಡೆದಿದ್ದರಿಂದಲೇ ವೇನನು ಸ್ವರ್ಗವನ್ನೇರಿದನು. (ಇಲ್ಲಿ ಪುತ್ರ ಎಂಬುದಕ್ಕೆ ಅರ್ಥವನ್ನು ತಿಳಿದುಕೊಳ್ಳಬೇಕು. 'ಪುತ್' ಎಂಬ ನರಕದಿಂದ 'ತ್ರಾಯತೇ' ಎಂದರೆ ರಕ್ಷಿಸುತ್ತಾನೆ ಇದೆ 'ಪುತ್ರ' ಶಬ್ದದ ವ್ಯುತ್ಪತ್ತಿ) ಪೃಥುವಿನ ರಾಜ್ಯಾಡಳಿತದಲ್ಲಿ ಭೂಮಾತೆಯು ಪ್ರಸನ್ನಳಾಗಿದ್ದಳು. ಅವಳು ಮೊದಮೊದಲು ಪೃಥುವಿನ ಕೋಪಕ್ಕೆ ಒಳಗಾಗಿದ್ದಳು. ನಂತರ ಭೂಮಾತೆಯ ಪ್ರಾರ್ಥನೆಯಿಂದ ಸಸ್ಯಸಂಪತ್ತು, ಗೋರಕ್ಷಣೆ, ಕೃಷಿ, ವಾಣಿಜ್ಯಮಾರ್ಗ ಇವುಗಳು ಸುವ್ಯವಸ್ಥೆಗೆ ಬಂದವು. ಪೃಥುವು ಸ್ವಾಯಂಭುವ ಮನವನ್ನು ಕರುವನ್ನಾಗಿ ಮಾಡಿಕೊಂಡು ತನ್ನ ಕೈಯಲ್ಲಿ ಗೋ ರೂಪಿಣಿಯೂ ಆದ ಭೂದೇವಿಯಿಂದ ಹಾಲನ್ನು ಕರೆದವನೆಂಬ ಪ್ರತೀತಿ ಇದೆ. ಪೃಥುಮಹಾರಾಜನ ಪ್ರಜೆಗಳ ಹಿತಕ್ಕಾಗಿ ಸಮಸ್ತ ಸಂಪತ್ತನ್ನೂ ಹೊರಗೆಡವಿದನು. ಬರಡು ಭೂಮಿಯಾಗಿದ್ದ ಭೂಮಾತೆಗೆ ಪ್ರಾಣದಾನ ಮಾಡಿ ಪೃಥುವು ತಂದೆಯಾದ್ದರಿಂದ ಭೂಮಿಗೆ ಪೃಥ್ವಿ ಎಂದು ಹೆಸರಾಯಿತು. ಹೀಗೆ ವಿಷ್ಣುಪಾದತಲದಿಂದ ಹುಟ್ಟಿದ ಪೃಥ್ವಿಯು ಸಮಸ್ತ ಜಗತ್ತಿಗೆ ತಾಯಿಯಾಗಿ ನಿರ್ಮಾಪಕಿಯಾಗಿ, ಪೋಷಿಣಿಯಾಗಿ ಇಂದಿಗೂ ಸಮಸ್ತ ಪ್ರಾಣಿಗಳು, ಜಲಚರಗಳಾಗಿ ಅಂತಹ ಪೃಥ್ವಿ ಮಾತೆಗೆ ನಮೋನಮಃ.

ಮುಂದೆ ಬ್ರಹ್ಮದೇವನು ಪ್ರಜಾಸಂಖ್ಯೆಯನ್ನು ಬೆಳೆಸುವುದರಲ್ಲಿ ಆಸಕ್ತನಾಗಿ ಬಳಿಯಲ್ಲಿದ್ದ ಪ್ರಚೇತಸರಿಗೆ ಏಕಾಗ್ರಚಿತ್ತದಿಂದ ಹರಿಯನ್ನು ಉಪಾಸನೆ ಮಾಡಬೇಕೆಂದು ಆದೇಶವಿತ್ತರು. ಬ್ರಹ್ಮನ ಆಜ್ಞೆಯಂತೆ ಪ್ರಚೇತಸರು ಸಮುದ್ರತಳದಲ್ಲಿ ಜಲದಲ್ಲಿ ಮುಳುಗಿ ಏಕಾಗ್ರತೆಯಿಂದ ತಪಸ್ಸಿನಲ್ಲಿ ನಿರತರಾದರು. ಹತ್ತು ಸಾವಿರ ವರ್ಷಗಳವರೆಗೆ ಪ್ರಚೇತಸರು ಮಹಾಸಾಗರ ಜಲದಲ್ಲಿ ತಪಸ್ಸು ಮಾಡಿದರು. ಆಗ ಮಹಾವಿಷ್ಣುವು ಅವರ ತಪಸ್ಸಿಗೆ ಪ್ರಸನ್ನನಾಗಿ ಏನು ವರಬೇಕು ನಿಮಗೆ ಕೇಳಿ ಎಂದನು. ಆಗ ಪ್ರಚೇತಸರು ನಮ್ಮಿಂದ ಪ್ರಜಾವೃದ್ಧಿಯಾಗಬೇಕೆಂದು ಪ್ರಾರ್ಥಿಸಿದರು. ಅದರಂತೆ

ವಿಷ್ಣುವು ಅವರ ಅಭೀಷ್ಟದಂತೆ ಪ್ರಜಾವೃದ್ಧಿಗೆ ಬೇಕಾದ ಅರ್ಹತೆಗಳನ್ನು ನೀಡಿದನು. ಪ್ರಜಾವೃದ್ಧಿಗೆ ಅನುಕೂಲಕರವಾದ ಗಿಡ, ಮರ ಬೆಟ್ಟಗಳು ಆವಿರ್ಭವಿಸಿದವು. ಬ್ರಹ್ಮನ ಆದೇಶದಂತೆ ದಕ್ಷಪ್ರಜಾಪತಿಯು ಜನಿಸಿದನು. ಮಹಾಭಾಗನೆಂಬ ದಕ್ಷಪ್ರಜಾಪತಿಯು ಪ್ರಜಾಸನ್ನಿಧಿಯನ್ನು ಬೆಳೆಸಬೇಕೆಂದು ಸಂಕಲ್ಪಿಸಿ ನೀಚೋಚ್ಚಗಳೂ, ದ್ವಿಪದ ಚತುಷ್ಪದಗಳೂ ಆದ ಪ್ರಾಣಿಗಳನ್ನು ಸಂತಾನವಾಗಿ ಪಡೆದನು. ಇವೆಲ್ಲವನ್ನೂ ದಕ್ಷನು ಮನಸ್ಸಿನಿಂದಲೇ ಸೃಷ್ಟಿಸಿ ನಂತರ ಸ್ತ್ರೀಯರನ್ನು ಸೃಷ್ಟಿಸಿ ಆ ಸ್ತ್ರೀಯರಲ್ಲಿ ಹತ್ತು ಜನರನ್ನು ಧರ್ಮನಿಗೂ, ಹದಿಮೂರು ಕನ್ನಿಕೆಯರನ್ನು ಕಶ್ಯಪನಿಗೂ, ಕಾಲಪರಿವರ್ತನೆಯಲ್ಲಿ, ನಿಯುಕ್ತರಾದ ಅಶ್ವಿನಿ ಮೊದಲಾದ ಇಪ್ಪತ್ತೇಳು ಪುತ್ರಿಯರನ್ನು (ನಕ್ಷತ್ರಗಳು) ಚಂದ್ರನಿಗೆ ಕೊಟ್ಟು ಮದುವೆಮಾಡಿಕೊಟ್ಟನು. ಆ ವಿವಿಧ ಸ್ತ್ರೀಯರಲ್ಲಿ ದೇವತೆಗಳೂ, ದೈತ್ಯರೂ, ನಾಗರೂ, ಗೋವುಗಳು ಪಕ್ಷಿಗಳೂ ಜನಿಸಿದವು. ಗಂಧರ್ವರು, ಅಪ್ಸರೆಯರೂ, ದಾನವಾದಿಗಳೂ ಹುಟ್ಟಿದರು. ಅಲ್ಲಿಂದ ಎಂದರೆ ದಕ್ಷನಿಂದ ಮುಂದೆ ಪ್ರಜೆಗಳೆಲ್ಲರೂ, ಸ್ತ್ರೀಪುರುಷ ಸಂಯೋಗದಿಂದ ಹುಟ್ಟುತ್ತಿದ್ದಾರೆ. ಅದಕ್ಕೆ ಮೊದಲು ತಪೋನಿರತರಾದ ತಪಸ್ವಿಗಳಿಂದ, ಅವರ ತಪೋವಿಶೇಷಗಳಿಂದ ಸಿದ್ಧಪುರುಷರೆನಿಸಿದ ಪ್ರಾಚೀನರಿಗೆ ಸಂಕಲ್ಪ, ದರ್ಶನ, ಸ್ಪರ್ಶಗಳಿಂದಲೇ ಪ್ರಜೆಗಳು ಹುಟ್ಟುತ್ತಿದ್ದರು. ಉದಾ : ದಕ್ಷನು ಮೊದಲು ದೇವ ಗಂಧರ್ವ, ಅಸುರ, ಪನ್ನಗ ಮುಂತಾದವರನ್ನು ತನ್ನ ಮನಸ್ಸಿನಿಂದಲೇ ಸೃಷ್ಟಿಸಿದನು. ಹೀಗೆ ಸೃಷ್ಟಿಸುತ್ತಿದ್ದರೂ ಅವರ ಸಂಖ್ಯೆ ಬೆಳೆಯಲಿಲ್ಲ. ಆಗ ದಕ್ಷಪ್ರಜಾಪತಿಯು ಮೈಥುನಧರ್ಮದಿಂದ ಪ್ರಜೆಗಳನ್ನು ಸೃಷ್ಟಿಸಲು ನಿಶ್ಚಯಿಸಿದನು. ನಂತರ ವೀರಣಪ್ರಜಾಪತಿಯ ಮಗಳಾದ ಅಸಿಕ್ನೀಃ ಎಂಬ ಕನ್ಯೆಯನ್ನು ಮದುವೆಯಾದನು. ಅವಳು ಮಹಾತಪಸ್ವಿಯೂ ಲೋಕಧಾರಣ ಸಮರ್ಥಳೂ ಆಗಿದ್ದಳು. ದಕ್ಷನು ಅಸ್ನಿಕಿಃಯಲ್ಲಿ ಸೃಷ್ಟಿಯನ್ನು ಬೆಳೆಸಬೇಕೆಂದು ಸಂಕಲ್ಪಿಸಿ ಐದು ಸಾವಿರ ಪುತ್ರರನ್ನು ಉತ್ಪಾದಿಸಿದನು. ಹೀಗೆ ಮುಂದೆ ಹದಿನಾಲ್ಕು ಮನ್ವಂತರಗಳಲ್ಲಿ ಪ್ರಜಾಸೃಷ್ಟಿಕಾರ್ಯವು ನಡೆಯಿತು. ಹೀಗಿರುವಲ್ಲಿ ಚಾಕ್ಷುಷ ಮನ್ವಂತರದಲ್ಲಿ ಮರೀಚಿಪುತ್ರನಾದ ಕಶ್ಯಪನಿಂದ ದಕ್ಷಕನ್ಯೆಯಾದ ಅದಿತಿಯ ದ್ವಾದಶಾದಿತ್ಯರು ಜನಿಸಿದರು. ಅವರೇ ವಿಷ್ಣು, ಇಂದ್ರ, ಅರ್ಯಮಾ, ಧಾತ್ರ, ತ್ವಷ್ಟಾೃ, ಪೂಷಾ, ವಿವಸ್ವಂತ, ಸವಿತಾಮಿತ್ರ,

ವರುಣ, ಅಂಶು, ಭಗ ಎಂಬ ದ್ವಾದಶಾದಿತ್ಯರು ಇಂತೆಯೇ ಅಷ್ಟವಸುಗಳು, ಏಕಾದಶರುದ್ರರು, ಪ್ರಜಾಪತಿ ವಷಟ್ಕಾರರೆಂಬುವರು ಜನಿಸಿದರು. ಕಶ್ಯಪನಿಂದ ದಿತಿಯಲ್ಲಿ ವೀರರಾದ ಹಿರಣ್ಯಾಕ್ಷ, ಹಿರಣ್ಯಕಶಿಪು ಎಂಬ ಇಬ್ಬರು ಪುತ್ರರು ಜನಿಸಿದರು.

ದಿತಿಯಲ್ಲಿ ಸಿಂಹಿಕಾ ಎಂಬ ಮಗಳು ಜನಿಸಿ ವಿಪ್ರಚಿತ್ತಿಯ ಪತ್ನಿಯಾದಳು. ಹಿರಣ್ಯಕಶಿಪುವಿಗೆ ಪ್ರಖ್ಯಾತರಾದ ನಾಲ್ವರು ಮಕ್ಕಳಿದ್ದರು ಅನುಹ್ಲಾದ, ಹ್ಲಾದ ಬುದ್ಧಿಶಾಲಿಯಾದ ಪ್ರಹ್ಲಾದ, ಸಂಹ್ಲಾದ ಎಂಬ ನಾಲ್ವರು ಮಕ್ಕಳು ಜನಿಸಿದರು. ಈ ನಾಲ್ವರಲ್ಲಿ ಪ್ರಹ್ಲಾದನು ಮಾತ್ರ ಸಮದರ್ಶಿಯೂ ಜಿತೇಂದ್ರಿಯನೂ ಆಗಿದ್ದನು. ಇನ್ನು ಮುಂದೆ ಪ್ರಹ್ಲಾದನು ಭಕ್ತ ಶಿರೋಮಣಿಯಾಗಿ ಹೇಗೆ ರಾರಾಜಿಸಿದನು ಎಂಬುದನ್ನು ನಾವು ತಿಳಿಯೋಣ. ಪರಾಶರರು ಮೈತ್ರೇಯರಿಗೆ ಪ್ರಹ್ಲಾದ ಚರಿತ್ರೆಯನ್ನು ವಿಸ್ತಾರವಾಗಿ ಹೇಳಲು ಉದ್ಯುಕ್ತರಾದರು.

## ಪ್ರಹ್ಲಾದ ಚರಿತ್ರೆ

ಪ್ರಹ್ಲಾದನು ಶ್ರೀಮನ್ನಾರಾಯಣನ ಪರಮಭಕ್ತನಾಗಿದ್ದನು. ಇವನು ಹಿರಣ್ಯಕಶಿಪುವಿನ ಮಗ. ಬ್ರಹ್ಮನ ವರದಿಂದ ತೃಪ್ತನಾಗಿ ತ್ರೈಲೋಕ್ಯವನ್ನೂ ತನ್ನ ವಶದಲ್ಲಿಟ್ಟುಕೊಂಡಿದ್ದನು. ಆ ಮಹಾಸುರನು ದೇವೇಂದ್ರ ಪದವಿಯನ್ನೇ ತನ್ನ ಸ್ವಾಧೀನಕ್ಕೆ ವಶಪಡಿಸಿಕೊಂಡನು. ತಾನೇ ಸೂರ್ಯನೂ ತಾನೇ ವಾಯುವು, ತಾನೇ ಅಗ್ನಿಯು, ತಾನೇ ವರುಣನೂ, ತಾನೇ ಚಂದ್ರನು, ತಾನೇ ಕುಬೇರನು, ತಾನೇ ಯಮನೆಂದುಕೊಂಡು ಅಹಂಕಾರದಿಂದ ಬೀಗುತ್ತಾ ಯಜ್ಞಭಾಗಗಳನ್ನೆಲ್ಲಾ ತಾನೇ ಭುಂಜಿಸುತ್ತಿದ್ದನು. ದೇವತೆಗಳೆಲ್ಲಾ ಅವನ ಉಪಟಳವನ್ನು ತಾಳಲಾರದೆ ಹೆದರಿ ಸ್ವರ್ಗಲೋಕವನ್ನು ತ್ಯಜಿಸಿ ಭೂಲೋಕದಲ್ಲಿ ಮನುಷ್ಯವೇಷದಿಂದ ಸಂಚರಿಸುತ್ತಿದ್ದರು.

ಮೂರು ಲೋಕಗಳನ್ನು ಗೆದ್ದ ಹಿರಣ್ಯಕಶಿಪು ಸೊಕ್ಕಿ ಗಂಧರ್ವರಿಂದ ಸ್ತುತಿಸಲ್ಪಟ್ಟು ತನಗೆ ಇಷ್ಟವಾದ ವಿಷಯಸುಖಗಳನ್ನು ಅನುಭವಿಸುತ್ತಿದ್ದನು. ಪಾನಾಸಕ್ತನಾಗಿದ್ದ ಹಿರಣ್ಯಕಶಿಪುವನ್ನು ಸಿದ್ಧರು, ಗಂಧರ್ವರು, ಪನ್ನಗರು

ಸೇವಿಸುತ್ತಿದ್ದರು. ದೈತ್ಯ ರಾಜನ ಮನಸ್ಸಂತೋಷಪಡಿಸಲು ಅವನಿಗೆ ಜಯಘೋಷ ಮಾಡುತ್ತಿದ್ದರು. ಇವನಿಗೆ ನಾಲ್ವರು ಮಕ್ಕಳಿದ್ದರು ಅವರಲ್ಲಿ ಪ್ರಹ್ಲಾದನೆಂಬುವನು ಸದಾಚಾರ ಸಂಪನ್ನನು, ಕುಶಾಗ್ರಬುದ್ಧಿಯುಳ್ಳವನೂ ಆಗಿದ್ದನು. ದೈತ್ಯಕುಲದಲ್ಲಿ ಇಂತಹ ಮಹಾತ್ಮನಾದ ಪ್ರಹ್ಲಾದನು ಜನಿಸಿದುದೇ ಅಚ್ಚರಿ. ದೈವಸಂಕಲ್ಪವನ್ನು ಅದಾರು ಬಲ್ಲರು. ಇರಲಿ. ಪ್ರಹ್ಲಾದನು ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದನು. ಒಂದು ಸಲ ತಂದೆಯಾದ ದೈತ್ಯ ರಾಜ ಹಿರಣ್ಯಕಶಿಪುವು ಪಾನಾಸಕ್ತನಾಗಿದ್ದಾಗ ಆ ಬಾಲಕನು ತನ್ನ ಗುರುವಿನೊಡನೆ ಬಂದನು. ಅವನ ತಂದೆಯ ಪಾದಗಳಿಗೆ ನಮಸ್ಕರಿಸಿದನು. ಹಿರಣ್ಯಕಶಿಪು ತನ್ನ ಮಗನನ್ನು ಎತ್ತಿಕೊಂಡು "ಮಗು, ನೀನು ಸದಾ ಕಲಿಯುತ್ತಿದ್ದೀಯೇ, ಇಷ್ಟು ದಿನಗಳಲ್ಲಿ ನೀನು ಕಲಿತಿರುವ ಸಾರಭೂತವಾದ ಒಂದು ಸುಭಾಷಿತವನ್ನು ಹೇಳು" ಎಂದನು ಆಗ ಪ್ರಹ್ಲಾದನು,

**ಶ್ರೂಯತಾಂ ತಾತವಕ್ಷ್ಯಾಮಿ ಸಾರಭೂತಂ ತವಾಜ್ಞಯಾ**
**ಸಮಾಹಿತಮನಾ ಭೂತ್ವಾ ಯನ್ಮೇ ಚೇತಸ್ಯವಸ್ಥಿತಮ್**
**ಅನಾದಿಮಧ್ಯಾಂತ ಮಜಮವೃದ್ಧಿಷಯ ಮಚ್ಯುತಮ್**
**ಪ್ರಣತೋಸ್ಮಿ ಮಹಾತ್ಮಾನಂ ಸರ್ವಕಾರಣ ಕಾರಣಮ್**

(ವಿ.ಪು. ಅ. 17, 14–15ನೇ ಶ್ಲೋಕ)

"ಅಪ್ಪ, ನನ್ನ ಮನಸ್ಸಿನಲ್ಲಿ ಇರುವ ಸಾರಭೂತವಾದ ವಿಷಯವನ್ನು ಹೇಳುವೆನು, ಏನೆಂದರೆ "ಆದಿ ಮಧ್ಯಾಂತರಹಿತನೂ ಅಜನೂ, ವೃದ್ಧಿಕ್ಷಯ ರಹಿತನೂ ಸರ್ವಕಾರಣಗಳಿಗೂ ಕಾರಣನಾದ ಮಹಾತ್ಮನಾದ ವಿಷ್ಣುವಿಗೆ ನಮಸ್ಕರಿಸುತ್ತೇನೆ.

ಈ ಮಾತನ್ನು ಕೇಳಿದೊಡನೆಯೇ ಹಿರಣ್ಯಕಶಿಪುವಿನ ಕಣ್ಣುಗಳೆರಡೂ ಕೋಪದಿಂದ ಕೆಂಪಾದವು. ಅವನು ಪ್ರಹ್ಲಾದನ ಗುರುವನ್ನು ನೋಡಿ 'ಏ ಬ್ರಾಹ್ಮಣಾಧಮ ! ಏನಿದು ? ನನ್ನನ್ನು ಅಲಕ್ಷಿಸಿ ನಿಸ್ಸಾರವಾದ ವೈರಿಯ ಸ್ತುತಿಯನ್ನು ಈ ಹುಡುಗನಿಗೆ ಕಲಿಸಿರುವೆಯಾ ? ದುರ್ಬುದ್ಧಿಯವನೇ ಎಂದು ಗದರಿಸಿದನು. ಆಗ ಗುರುವು ಭಯಗೊಂಡು ದೈತ್ಯೇಶ್ವರ –

ಕೋಪಿಸಿಕೊಳ್ಳಬೇಡ, ನಾನು ಕಲಿಸಿದ್ದನ್ನು ನಿನ್ನ ಮಗನು ಹೇಳುತ್ತಿಲ್ಲ ಎಂದನು. ಹಿರಣ್ಯಕಶಿಪುವು ಮಗನ ಮೇಲೆ ಕೆಂಡದಂತೆ ಕಾರುತ್ತಾ 'ಎಲೈ ದಡ್ಡ ನಾನಿರುವಾಗ ಮತ್ತಾರ ಬಗ್ಗೆ ಹೇಳುತ್ತಿದ್ದೀಯೇ. ವಿಷ್ಣು ನನ್ನ ಪರಮ ವೈರಿ. ಅವನನ್ನೇ ಸ್ತುತಿಸುತ್ತಿದ್ದೀಯೇ ಎಂದನು. ಅದಕ್ಕೆ ಪ್ರಹ್ಲಾದನು, ನಮ್ಮೆಲ್ಲರ ಹೃದಯದಲ್ಲಿ ನೆಲೆಸಿರುವ ವಿಷ್ಣುವು ಸಮಸ್ತ ಜಗತ್ತನ್ನೂ ನಿಯಮಿಸುತ್ತಾನೆ. ಆ ಪರಮಾತ್ಮನ ಹೊರತಾಗಿ, ತಂದೆಯೇ ಯಾರು-ಯಾರಿಗೆ ಉಪದೇಶಿಸಲು ಸಾಧ್ಯ. ಯೋಗಿಗಳು ಧ್ಯಾನಿಸತಕ್ಕ ಯಾವಾತನ ಪರಮಪದವು ಶಬ್ದಗಳಿಗೆ ಗೋಚರವಲ್ಲವೋ ಯಾರಿಂದ ಈ ವಿಶ್ವವೇ ಹುಟ್ಟದೆಯೋ ಯಾವಾತನೇ ಸ್ವಯಂ ವಿಶ್ವವಾಗಿದ್ದನೋ ಆ ವಿಷ್ಣುವೇ ಪರಮೇಶ್ವರ ಎಂದನು. ಯಾರಿಂದ ಪ್ರಕೃತಿಯೂ ಜೀವಾತ್ಮರೂ ಹುಟ್ಟಿದ್ದಾರೋ ಯಾರಿಂದ ಈ ಚರಾಚರ ಜಗತ್ತು ನಿರ್ಮಿತವಾಗಿದೆಯೋ ಎಲ್ಲದಕ್ಕೂ ಆ ವಿಷ್ಣುವು ನಮ್ಮಲ್ಲಿ ಪ್ರಪನ್ನನಾಗಲಿ ಎಂದನು. ಮತ್ತೆ ಮತ್ತೆ ನಾರಾಯಣನನ್ನೇ ಸ್ತುತಿಸುತ್ತಿದ್ದ ಪ್ರಹ್ಲಾದನನ್ನು ನೋಡಿ ಹಿರಣ್ಯಕಶಿಪು ಕುಪಿತನಾಗಿ ತನ್ನ ದೈತ್ಯರನ್ನು ಕರೆದು "ಈ ದುರಾತ್ಮನನ್ನು ಕೊಂದುಹಾಕಿರಿ, ಇವನು ಬದುಕಿ ಏನೂ ಪ್ರಯೋಜನವಿಲ್ಲ ತನ್ನವರಿಗೇ ಹಾನಿಮಾಡುತ್ತಾನಾದ್ದರಿಂದ ಇವನು ನಮ್ಮ ಕುಲಕ್ಕೆ ಅಂಗಾರನೇ ಸರಿ" ಎಂದು ಆಜ್ಞಾಪಿಸಿದ. ಪ್ರಹ್ಲಾದನನ್ನು ಕೊಲ್ಲಲು ದೈತ್ಯರು ದೊಡ್ಡ ದೊಡ್ಡ ಆಯುಧಗಳನ್ನು ಹಿಡಿದು ಬಂದರು. ಆಗ ಪ್ರಹ್ಲಾದನು,

**ವಿಷ್ಣುಃ ಶಸ್ತ್ರೇಷು ಯುಷ್ಮಾಸುಮಯಿ ಚಾಸೌವ್ಯವಸ್ಥಿತಃ**
**ದೈತೇಯಾಸ್ತೇ ನ ಸತ್ಯೇನ ಮಾಕ್ರಮನ್ತ್ವಾಯುಧಾನಿಮೇ**

(ವಿ.ಪು. ಅ.17, 33ನೇ ಶ್ಲೋಕ)

"ಎಲೈ ದೈತ್ಯ, ನಿಮ್ಮ ಆಯುಧಗಳಲ್ಲಿ, ನಿಮ್ಮಲ್ಲಿ, ನನ್ನಲ್ಲಿಯೂ ವಿಷ್ಣುವು ನೆಲೆಸಿದ್ದಾನೆ. ಈ ಸತ್ಯ ಬಲದಿಂದ ಆಯುಧಗಳು ನನ್ನ ಮೇಲೆ ಯಾವ ಪ್ರಭಾವವನ್ನು ಬೀರದಂತಾಗಲಿ" ಎಂದನು. ದೈತ್ಯ ಆಯುಧಗಳಿಂದ ನೂರಾರು ಬಾರಿ ಹೊಡೆದರೂ ಅವನಿಗೆ ಸ್ವಲ್ಪವೂ ವೇದನೆಯಾಗಲಿಲ್ಲ. ಆಗ ಹಿರಣ್ಯಕಶಿಪು "ಎಲೋ ದುರ್ಬುದ್ಧಿಯವನೇ, ವೈರಿಪಕ್ಷದ ಸ್ತುತಿಯನ್ನು ಬಿಡು ನಿನಗೆ ಅಭಯವನ್ನು ನೀಡುವೆನು. ಮೂಢನಾಗಬೇಡ ಎಂದು" ಅದಕ್ಕೆ ಪ್ರಹ್ಲಾದನು . . . .

**ಭಯಂ ಭಯಾನಾಮಪಹಾರಿಣಿಸ್ಥಿತೇ**

**ಮನಸ್ಯನಂತೇ ಮಮಕುತ್ರ ತಿಷ್ಠತಿ**

**ಯಸ್ಮಿನ್ ಸ್ಮೃತೇ ಜನ್ಮಜರಾಂತಕಾದಿ**

**ಭಯಾನಿ ಸರ್ವಾಣ್ಯಪಯಾಂತಿ ತಾತ ॥**

(ವಿ.ಪು. ಪ್ರಥಮಾಂಶ ಅ.17, 36ನೇ ಶ್ಲೋಕ)

ಎಲೈ ತಂದೆಯೇ ಸಕಲ ಭಯಗಳನ್ನು ನಿವಾರಿಸುವ ಅನಂತನು ನನ್ನ ಮನದಲ್ಲಿ ನೆಲೆಸಿರುವಾಗ ಭಯವೆಲ್ಲಿಂದ ಬರುತ್ತದೆ ? ಅವನನ್ನು ಸ್ಮರಿಸುತ್ತಿದ್ದರೆ ಹುಟ್ಟು, ಮುಪ್ಪು, ಸಾವುಗಳ ಭಯಗಳೂ ಹೊರಟುಹೋಗುತ್ತವೆ" – ಎಂದನು.

ಹಿರಣ್ಯಕಶಿಪುವು ಸರ್ಪಗಳ ವಿಷದಿಂದ ತನ್ನ ಮಗನನ್ನು ಸಾಯಿಸಲು ಪ್ರಯತ್ನಿಸಿದನು. ಆ ಮಹಾಸರ್ಪಗಳು ಕಚ್ಚುತ್ತಿರುವಾಗ ಪ್ರಹ್ಲಾದನು ಏಕಾಗ್ರಚಿತ್ತದಿಂದ ಶ್ರೀಕೃಷ್ಣನ ಧ್ಯಾನ ಮಾಡಿದನು. ಆತನ ಸ್ಮರಣೆಯ ಆನಂದದಲ್ಲಿ ತನ್ಮಯನಾಗಿ ತನ್ನ ದೇಹವನ್ನು ಗಮನಿಸಲೇ ಇಲ್ಲ. ಸರ್ಪಗಳ ಹಲ್ಲು ಮುರಿದವೇ ವಿನಹ ಪ್ರಹ್ಲಾದನಿಗೆ ಏನೂ ಆಗಲಿಲ್ಲ. ಇಷ್ಟೇ ಅಲ್ಲ. ಹಿರಣ್ಯಕಶಿಪುವು ಪ್ರಹ್ಲಾದನನ್ನು ಪರ್ವತ ಶಿಖರದಿಂದ ಉರುಳಿಸಿದನು. ಬೆಂಕಿಯಲ್ಲಿ ಬೀಳಿಸಿದನು. ಪರ್ವತಗಳನ್ನೇ ಅವನ ಮೇಲೆ ತಳ್ಳಿಸಿದನು. ದಿಗ್ಗಜಗಳ ದಾಡೆಯಿಂದ ಅವನನ್ನು ತಿವಿಸಿದನು. ಇಂತಹ ಘೋರ ಶಿಕ್ಷೆಗೆ ಒಳಪಡಿಸಿದರೂ ಪ್ರಹ್ಲಾದನು ಎದೆಗುಂದಲಿಲ್ಲ. ಸದಾ ಹರಿಯಧ್ಯಾನ ಮಾಡುತ್ತಾ ಇದ್ದ ಅವನಿಗೆ ಯಾವುದೇ ಘಾಸಿಯುಂಟಾಗಲಿಲ್ಲ. ಇಷ್ಟೇ ಅಲ್ಲ, ಪ್ರಹ್ಲಾದನನ್ನು ಸಾಯಿಸಲು ಹಾಲಾಹಲ ವಿಷವನ್ನು ಅಡಿಗೆಯವರು ಕುಡಿಸಿದರು. ಆದರೆ ಅದನ್ನೂ ಪ್ರಹ್ಲಾದ ಜೀರ್ಣಿಸಿಕೊಂಡುಬಿಟ್ಟನು. ರಾಜಪುರೋಹಿತರೂ ಸಹ ಅವನ ಮನಸ್ಸನ್ನು ತಿದ್ದಲು ಪ್ರಯತ್ನಿಸಿದರು. ಆದರೂ ಸಫಲವಾಗಲಿಲ್ಲ. ಪುರೋಹಿತನಿಗೆ ಪ್ರಹ್ಲಾದನು ಉಪದೇಶ ಮಾಡತೊಡಗಿದನು ನಾವು ಮಾಡಿದ ಕರ್ಮವೇ ಸದ್ಗತಿಗೋ ಅಥವಾ ದುರ್ಗತಿಗೋ ಸಾಧನ. ಸರ್ವಪ್ರಯತ್ನದಿಂದ ಶುಭವನ್ನೇ ಆಚರಿಸಬೇಕು ಎಂದು ಪ್ರಹ್ಲಾದನು ಹೇಳಿದನು. ಪುರೋಹಿತನು ಸಿಟ್ಟಿನಿಂದ ಕೆರಳಿ

ಜ್ವಾಲಾಮಾಲೆಗಳಿಂದ ಭೀಕರಾಕೃತಿಯಾದ ಕೃತ್ಯೆಯನ್ನು ಸೃಷ್ಟಿಸಿದನು. ಆ ರಾಕ್ಷಸಿಯು ಒಂದೊಂದು ಹೆಜ್ಜೆಗೂ ನೆಲವನ್ನು ನಡುಗಿಸುತ್ತಾ ಬಂದು ಕ್ರೋಧಾವಿಷ್ಟಳಾಗಿ ಪ್ರಹ್ಲಾದನ ಎದೆಯನ್ನು ಶೂಲದಿಂದ ಬಲವಾಗಿ ತಿವಿದಳು. ತೇಜೋಮಯವಾದ ಆ ಶೂಲವೇ ಬಾಲಕನ ಎದೆಗೆ ತಾಕಿ ಮುರಿದು ಚೂರು ಚೂರಾಯಿತು. ಪಾಪಿಗಳಾದ ದೈತ್ಯ ಪುರೋಹಿತರು ಪುಣ್ಯಾತ್ಮನಾದ ಪ್ರಹ್ಲಾದನ ಮೇಲೆ ಸೃಷ್ಟಿಸಿದ ಆ ಕೃತ್ಯೆಯು ಕೂಡಲೇ ಆ ಪುರೋಹಿತರನ್ನೇ ಕೊಂದು ಮಾಯವಾದಳು. ಆಗ ಪ್ರಹ್ಲಾದನು ಆ ಪುರೋಹಿತನು ಸುಟ್ಟುಹೋಗುತ್ತಿರುವುದನ್ನು ನೋಡಿ ಭಗವಾನ್ ಶ್ರೀಕೃಷ್ಣನಲ್ಲಿ ಹೀಗೆ ಪ್ರಾರ್ಥಿಸಿದನು.

**ಸರ್ವವ್ಯಾಪಿನ್ ಜಗದ್ರೂಪ ಜಗತ್ಸ್ರಷ್ಟ ಜನಾರ್ಧನ**
**ಪಾಹಿ ವಿಪ್ರಾ ನಿಮಾನಸ್ಮಾದ್ ದುಃಸಹಾನ್ಮಂತ್ರ ಪಾವಕಾತ್**

(ವಿ.ಪು. ಅ.18 ಪ್ರಥಮಾಂಶ 39ನೇ ಶ್ಲೋಕ)

ಹೇ ಸರ್ವವ್ಯಾಪಿ, ಜಗದ್ರೂಪ, ಸೃಷ್ಟಿಕರ್ತ ಜನಾರ್ಧನ ದುಃಸ್ಯಾಹವಾದ ಈ ಮಂತ್ರಾಗ್ನಿಯಿಂದ ಈ ವಿಪ್ರರನ್ನು ರಕ್ಷಿಸು, ಸರ್ವಭೂತಗಳಲ್ಲಿ, ಸರ್ವವ್ಯಾಪಿಯೂ ಜಗದ್ಗುರುವೂ ಆದ ವಿಷ್ಣುವಿರುವುದೇ ಸತ್ಯವಾದರೆ ಇದರ ಬಲದಿಂದ ಈ ಪುರೋಹಿತನು ಬದುಕಲಿ ಎಂದು ಪ್ರಾರ್ಥಿಸಿದನು. ಅಷ್ಟೇ ಅಲ್ಲ. ಪ್ರಹ್ಲಾದನು ಎಲ್ಲರ ಪರವಾಗಿಯೂ ಪ್ರಾರ್ಥಿಸುತ್ತಾನೆ.

**ಯೇ ಹಂತುಮಾಗತಾ ದತ್ತಂ ಯ್ಯೆ ರ್ವಿಷಂ ಯ್ಯೆರ್ಹುತಾಶನಃ**
**ಯ್ಯೆರ್ದಿಗ್ಗಜೈರಹಂ ಕ್ಷುಣ್ಣೋ ದಷ್ಟಸರ್ಪೈಶ್ಚಯ್ಯೆರಪಿ**
**ತೇಷ್ವಹಂ ಮಿತ್ರಾ ಭಾವೇನ ಸಮಃ ಪ್ರಾಪ್ತೋಸ್ಮಿ ನ ಕ್ವಚಿತ್**
**ಯಥಾ ತೇನಾದ್ಯ ಸತ್ಯೇನ ಜೀವಂತ್ವ ಸುರಯಾಜಕಾಃ**

(ವಿ.ಪು. ಪ್ರಥಮಾಂಶ 18ನೇ ಅ. 42, 43ನೇ ಶ್ಲೋಕ)

ಯಾರು ನನ್ನನ್ನು ಕೊಲ್ಲಲು ಬಂದರೋ, ಯಾರು ನನಗೆ ವಿಷವಿಟ್ಟರೋ, ಯಾರು ಬೆಂಕಿಯನ್ನು ಹೊತ್ತಿಸಿದರೋ ಯಾವ ದಿಗ್ಗಜಗಳಿಂದ

ನಾನು ತಿವಿಯಲ್ಪಟ್ಟೆನೋ ಯಾವ ಸರ್ಪಗಳಿಂದ ಕಡಿಯಲ್ಪಟ್ಟೆನೋ ಅವರೆಲ್ಲರಲ್ಲಿಯೂ ನಾನು ಮಿತ್ರಭಾವದಿಂದ, ಸಮದೃಷ್ಟಿಯಿಂದ ಇರುವುದು ನಿಜವಾದರೆ, ಯಾರ ವಿಷಯದಲ್ಲಿಯೂ ನಾನು ಪಾಪ ಮಾಡಿಲ್ಲವಾದರೆ ಆ ಸತ್ಯಬಲವೇ ಎಲ್ಲರನ್ನೂ ರಕ್ಷಿಸಲಿ ದೇವ ಎಂದು ಪ್ರಾರ್ಥಿಸಿದನು. ತಕ್ಷಣ ಪುರೋಹಿತರನ್ನು ಸ್ಪರ್ಶಿಸಿದ ಮಾತ್ರಕ್ಕೆ ಅವರು ಎದ್ದು ಅತ್ಯಂತ ವಾತ್ಸಲ್ಯದಿಂದ – ವತ್ಸ ದೀರ್ಘಾಯುವಾಗು ಎಂದು ಹರಿಸಿದರು.

**ಧೀರ್ಘಾಯುರಪ್ರತಿಹತೋ ಬಲವೀರ್ಯ ಸಮನ್ವಿತಃ ।**

**ಪುತ್ರಪೌತ್ರ ಧನೈಶ್ವರ್ಯೈರ್ಯುಕ್ತೋ ವತ್ಸ ಭವೋತ್ತಮಃ ॥**

(ವಿ.ಪು. ಪ್ರಥಮಾಂಶ 18ನೇ ಅ. 45ನೇ ಶ್ಲೋಕ)

ಇದೆಲ್ಲಾ ವೃತ್ತಾಂತವನ್ನು ಪುರೋಹಿತರು ಹಿರಣ್ಯಕಶಿಪುವಿನ ಬಳಿಗೆ ಹೋಗಿ ತಿಳಿಸಿದರು. ಹಿರಣ್ಯಕಶಿಪುವಿನ ಎಲ್ಲಾ ಪ್ರಯತ್ನಗಳು ವಿಫಲವಾದಾಗ ಶಂಬರಾಸುರ ಕರೆದು ಹೇಗಾದರೂ ಇವನನ್ನು ಧ್ವಂಸಮಾಡು ಎಂದು ಎಂಬ ಮಾಯಾವಿಯನ್ನು ಆಜ್ಞಾಪಿಸಿದನು. ದುರ್ಬುದ್ಧಿಯುಳ್ಳ, ಶಂಬರಾಸುರನು ತನ್ನ ಮಾಯೆಯನ್ನು ಪ್ರಯೋಗಿಸಿದನು. ಪ್ರಹ್ಲಾದನು ಸಮಚಿತ್ತನಾಗಿ ಭಗವಂತನಲ್ಲಿ ಧ್ಯಾನಿಸಿದನು. ಭಗವಂತನ ಭಕ್ತನ ರಕ್ಷಣೆಗಾಗಿ ತನ್ನ ಆಯುಧವಾದ ಸುದರ್ಶನ ಚಕ್ರವನ್ನು ಬೀಸಿದನು. ಆ ಚಕ್ರವು ಜ್ವಾಲೆಗಳಿಂದ ಪ್ರಜ್ವಲಿಸುತ್ತಾ ಬಂದು ಬಾಲಕನ ರಕ್ಷಣೆಗಾಗಿ ಶೀಘ್ರಗತಿಯಿಂದ ಬಂದ ಶಂಬರಾಸುರನ ಮಾಯೆಯನ್ನೆಲ್ಲಾ ವಿಧ್ವಂಸಗೊಳಿಸಿತು. ಇಷ್ಟಾದರೂ ಹಿರಣ್ಯಕಶಿಪುವಿನ ಕೋಪ ಶಮನವಾಗಲಿಲ್ಲ. ಈ ಹುಡುಗ ಬಹಳ ಕೆಟ್ಟಬುದ್ಧಿಯುಳ್ಳವ, ಇವನು ಬದುಕಿರುವುದರಿಂದ ನಮಗೆ ಯಾವ ಪ್ರಯೋಜನವೂ ಇಲ್ಲ. ಇವನನ್ನು ಈ ಬೆಟ್ಟಗಳಿಂದ ಮುಚ್ಚಲ್ಪಟ್ಟ ನೀರಿನ ನಡುವೆ ಎಸೆಯಿರಿ. ಸಾವಿರ ವರ್ಷಗಳಾದರೂ ಅಲ್ಲಿಯೇ ಬಿದ್ದಿದ್ದು ಸಾಯಲಿ ಎಂದನು. ಆಗ ದೈತ್ಯರು ಪರ್ವತಗಳನ್ನೇ ಸಮುದ್ರದಲ್ಲಿ ಹಾಕಿ ಪ್ರಹ್ಲಾದನ ಸುತ್ತಲೂ ಸಾವಿರಾರು ಯೋಜನೆಗಳವರೆಗೆ ಇಡುಕಿದರು. ಮಹಾಪ್ರಾಜ್ಞನಾದ ಪ್ರಹ್ಲಾದನು ಇದಾವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ನಿರಂತರವಾಗಿ ಏಕಾಗ್ರಚಿತ್ತನಾಗಿ ಮಹಾವಿಷ್ಣುವನ್ನು ಪ್ರಾರ್ಥಿಸಿದನು.

**ನಮಸ್ತೇ ಪುಂಡರೀಕಾಕ್ಷ ನಮಸ್ತೇ ಪುರುಷೋತ್ತಮ ।**
**ನಮಸ್ತೇ ಸರ್ವಲೋಕಾತ್ಮನ್ ನಮಸ್ತೇ ತಿಗ್ಮಚಕ್ರೀಣೇ ॥**
**ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣ ಹಿತಾಯ ಚ ।**
**ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥**
**ಬ್ರಹ್ಮತ್ವೇ ಸ್ತ್ರಾಜತೇ ವಿಶ್ವಂ ಸ್ಥಿತೌ ಪಾಲಯತೇ ಪುನಃ ।**
**ರುದ್ರರೂಪಾಯ ಕಲ್ಪಾಂತೇ ನಮಸ್ತುಭ್ಯಂ ತ್ರಿಮೂರ್ತಯೇ ॥**
**ದೇವಾಯಕ್ಷಾಸುರಾಃ ಸಿದ್ಧಾನಾಗಾ ಗಂಧರ್ವಕಿನ್ನರಃ ।**
**ಪಿಶಾಚಾ ರಾಕ್ಷಸಾಶ್ಚೈವ ಮನುಷ್ಯಾಃ ಪಶವಸ್ತಂಥಾ ॥**
**ರೂಪಂ ಗಂಧೋ ಮನೋ ಬುದ್ಧಿರಾತ್ಮಾ ಕಾಲಸ್ತಥಾ ಗುಣಾಃ**
**ಏತೇಷಾಂ ಪರಮಾರ್ಥಶ್ಚ ಸರ್ವಮೇತತ್ವಮತ್ಯುತ**

(ವಿ.ಪು. ಪ್ರಥಮಾಂಶ ಅ. 19ನೇ 42, 64ರಿಂದ 69ನೇ ಶ್ಲೋಕ)

ಬ್ರಹ್ಮನಾಗಿ ವಿಶ್ವವನ್ನು ಸೃಜಿಸುತ್ತಾ, ಸ್ಥಿತಿಕಾಲದಲ್ಲಿ ವಿಷ್ಣುವಾಗಿ ಪಾಲಿಸುತ್ತಾ, ಕಲ್ಪಾಂತದಲ್ಲಿ ರುದ್ರನಾಗಿ ಸಂಹರಿಸುತ್ತ ಇರುವ ಮೂರ್ತಿತ್ರಯರೂಪನಾದ ವಿಷ್ಣುವೇ ನಿನಗೆ ನಮಸ್ಕಾರ ದೇವ, ಯಕ್ಷ, ಅಸುರ, ಸಿದ್ಧ, ನಾಗ, ಗಂಧರ್ವ, ಕಿನ್ನರ, ಪಿಶಾಚ ರಾಕ್ಷಸ, ಮನುಷ್ಯ, ಪಶು, ಪಕ್ಷಿ, ಸ್ಥಾವರ, ಇರುವೆ, ಸರೀಸೃಪ, ಭೂಮಿ ಜಲ, ಅಗ್ನಿ, ಆಕಾಶ, ವಾಯು, ಶಬ್ದ, ಸ್ಪರ್ಶ, ರಥ, ರೂಪ, ಗಂಧ, ಮನಸ್ಸು, ಬುದ್ಧಿ, ಜೀವಾತ್ಮ, ಕಾಲ, ಗುಣತ್ರಯ ಇವೆಲ್ಲವೂ ನೀನೇ ಅಚ್ಯುತ ಇವುಗಳ ಪರಮಾರ್ಥವು ನೀನೇ ಆಗಿದ್ದೀಯೇ.

ವಿದ್ಯೆ, ಅವಿದ್ಯೆಗಳು ನೀನೆ, ಸತ್ಯ ಅಸತ್ಯಗಳೂ ನೀನೇ, ವಿಷವೂ ನೀನೇ, ಅಮೃತವೂ ನೀನೇ, ವೇದೋದಿಗಳಾದ ಪ್ರವೃತ್ತಿ, ನಿವೃತ್ತಿ ಕರ್ಮಗಳೂ ನೀನೇ ಸಮಸ್ತ ಕರ್ಮಗಳ ಭೋಕ್ತನೂ ಕರ್ಮದ ಸಕಲ ಉಪಕರಣಗಳೂ ಕರ್ಮಫಲವೂ ನೀನೆ ಆಗಿದ್ದೀಯೇ ಸ್ವಾಮಿ. ನನ್ನಲ್ಲಿ ಅನ್ಯರಲ್ಲಿ, ಸಮಸ್ತ ಭೂತಗಳಲ್ಲಿ, ಸಮಸ್ತಭುವನಗಳಲ್ಲಿ ಐಶ್ವರ್ಯಗುಣಗಳನ್ನು ಪ್ರಕಟಿಸುವ ವ್ಯಾಪ್ತಿಯು ನಿನ್ನದೇ ಆಗಿದೆ ಎಂದು ಮುಂತಾಗಿ ಮಹಾವಿಷ್ಣುವನ್ನು ಸ್ತುತಿಸಿದನು. ಭಗವಂತನ ಕೃಪೆಯಿಂದ ಪ್ರಹ್ಲಾದ ಎದೆಗುಂದಲಿಲ್ಲ

**ಪಿತುರ್ಯೋಪರತಿಂ ನೀತೇ ನರಸಿಂಹಸ್ವರೂಪಿಣಾ**

**ವಿಷ್ಣುನಾ ಸೋಪಿ ದೈತ್ಯಾನಾಂ ಮೈತ್ರೇಯಾಭೂತ್ಪತಿಸ್ತತಃ**

(ವಿ.ಪು. ಪ್ರಥಮಾಂಶ ಅ. 20, 32ನೇ ಶ್ಲೋಕ)

ಮುಂದೆ ವಿಷ್ಣುವು ನರಸಿಂಹಾವತಾರ ಮಾಡಿ ಪ್ರಹ್ಲಾದನ ತಂದೆ ಹಿರಣ್ಯಕಶಿಪುವನ್ನು ಸಂಹಾರ ಮಾಡಿದನು. ಪ್ರಹ್ಲಾದನು ರಾಜ್ಯಲಕ್ಷ್ಮಿಯನ್ನು ಪಡೆದು, ಬಹಳಮಂದಿ ಪುತ್ರ ಪೌತ್ರರನ್ನು ಐಶ್ವರ್ಯವನ್ನು ಅನುಭವಿಸಿದನು. ಭಗವದ್ಧ್ಯಾನದಿಂದಲೇ ಪ್ರಹ್ಲಾದನು ಮೋಕ್ಷವೈದಿದನು. ಈ ಪ್ರಹ್ಲಾದ ಚರಿತ್ರೆಯನ್ನು ಪಠಿಸಿದವರನ್ನು, ಕೇಳಿದವರನ್ನು ಭಗವಂತನ ರಕ್ಷಿಸುತ್ತಾನೆ ಎಂಬುದರಲ್ಲಿ ಸಂದೇಹವಿಲ್ಲ.

**ಪ್ರಹ್ಲಾದಂ ಸಕಲಾಪತ್ತು ಯಥಾ ರಕ್ಷಿತವಾನ್ ಹರಿಃ ।**

**ತಥಾರಕ್ಷತಿ ಯಸ್ತಸ್ಯ ಶೃಣೋತಿ ಚರಿತಂಸದಾ ॥**

(ವಿ.ಪು. ಪ್ರಥಮಾಂಶ ಅ. 20, 39ನೇ ಶ್ಲೋಕ)

ಈ ಸಂದರ್ಭದಲ್ಲಿ ಹಿರಣ್ಯಕಶಿಪುವಿನ ಪೂರ್ವಜನ್ಮವೃತ್ತಾಂತವನ್ನು ನಾವೆಲ್ಲಾ, ತಿಳಿಯಬೇಕಾದುದು ಅತ್ಯವಶ್ಯ. ಹಿರಣ್ಯಾಕ್ಷ, ಹಿರಣ್ಯಕಶಿಪು ಇವರಿಬ್ಬರೂ ಮೊದಲು ವೈಕುಂಠದಲ್ಲಿ ದ್ವಾರಪಾಲಕರಾಗಿ ಶ್ರೀಮನ್ನಾರಾಯಣನ ಸೇವೆ ಮಾಡುತ್ತಿದ್ದರು. ಒಮ್ಮೆ ಸನಕಾದಿ ಮಹರ್ಷಿಗಳ ಎದುರು ಅಸಡ್ಡೆಯಾಗಿ ವರ್ತಿಸಿದುದರಿಂದ ಅವರ ಶಾಪಕ್ಕೆ ಒಳಗಾದರು. ಹಿರಣ್ಯಾಕ್ಷನನ್ನು ವಿಷ್ಣುವು ವರಾಹಾವತಾರ ಮಾಡಿ ಕೊಂದನು. ಅವರಲ್ಲಿ ಹಿರಣ್ಯಕಶಿಪು ಎಂಬುವನೇ ಜಯ ಎಂಬ ದ್ವಾರಪಾಲಕ. ವಿಷ್ಣು ಅವನ ಕೈಂಕರ್ಯಕ್ಕೆ ಮೆಚ್ಚಿದ್ದನು. ಆದರೆ ಶಾಪ ಅನಿವಾರ್ಯವಾಗಿದ್ದಿತು. ವಿಷ್ಣುವಿಗೆ ಜಯನು ಬೇಗ ತನ್ನಲ್ಲಿಗೆ ಹಿಂದಿರುಗಿ ಪುನಃ ಹಿಂದಿನ ಕೈಂಕರ್ಯವನ್ನು ಮಾಡುವಂತಾಗಲಿ ಎಂಬ ಅಪೇಕ್ಷೆ ಇದ್ದಿತು. ಅದಕ್ಕೆ ತನ್ನನ್ನು ದ್ವೇಷಿಸುವವನಾಗಿ ಹುಟ್ಟಿದರೂ ಪರವಾಗಿಲ್ಲ. ಎಂದು ಭಗವಂತನಿಗೆ ಅನಿಸಿತ್ತು. ಜಯ ವಿಜಯರಿಗೂ ಇದೇ ಅಭಿಪ್ರಾಯವಾಗಿತ್ತು.

ತನ್ನನ್ನು ದ್ವೇಷಿಸುವವನಾಗಿ ಹುಟ್ಟಿದರೂ ಸರಿ, ಭೂಲೋಕದಲ್ಲಿ

ಮೂರೇ ಜನ್ಮಗಳನ್ನು ಬೇಗ ಮುಗಿಸಿ ಹಿಂದಿರುಗುವುದೇ ಸೂಕ್ತ ಎಂದು ಅವನಿಗೆ ಭಗವತನೇ ಸೂಚಿಸಿ ಅವನ ಸಮ್ಮತಿ ಪಡೆದನು. ಅಷ್ಟೇಅಲ್ಲ. ಭಗವಂತನ ಕೈಯಲ್ಲೇ ತನಗೆ ಮರಣ ಉಂಟಾಗಬೇಕೆಂದೂ ಕೇಳುವಂತೆ ಮಾಡಿದ. ರಾಕ್ಷಸನಾಗಿ ಹುಟ್ಟಿದ ಮೇಲೆ ಹಿರಣ್ಯಕಶಿಪುವಿಗೆ ಪೂರ್ವಜನ್ಮ ಸ್ಮೃತಿ ಉಳಿಯಲಿಲ್ಲ. ಹೀಗಾಗಿ ವಿಷ್ಣುದ್ವೇಷವನ್ನೇ ಮೈಗೂಡಿಸಿಕೊಂಡನು. ರಾಕ್ಷಸನಾಗಿದ್ದರೂ ಹಿರಣ್ಯಕಶಿಪುವು ಸಾವಿರಾರು ವರ್ಷಗಳವರೆಗೆ ತಪಸ್ಸುಮಾಡಿ ಬ್ರಹ್ಮನಿಂದ ವರವನ್ನು ಪಡೆದುಕೊಂಡನು. ಅದುವೇ ಒಂದು ರೋಚಕದ ಸಂಗತಿ. ತನಗೆ ಭೂಮಿಯ ಮೇಲಾಗಲಿ, ಆಕಾಶದಲ್ಲಾಗಲಿ, ಮನುಷ್ಯರಿಂದಾಗಲಿ, ದೇವತೆಗಳಿಂದಾಗಲಿ, ಯಾವುದೇ ಆಯುಧಗಳಿಂದಾಗಲಿ ತನಗೆ ಸಾವು ಉಂಟಾಗದಂತೆ ಬ್ರಹ್ಮನಿಂದ ವರವನ್ನು ಪಡೆದುಕೊಂಡಿದ್ದನು. ಅವನು ಮಾಡಿದ ಪುಣ್ಯಕೃತಫಲವೋ ಎಂಬಂತೆ ಮಗ ಪ್ರಹ್ಲಾದ ವಿಷ್ಣುವಿನ ಪರಮಭಕ್ತನಾಗಿಯೇ ಜನಿಸಿದ. ಇದನ್ನು ಎಳ್ಳಷ್ಟೂ ಸಹಿಸದ ಹಿರಣ್ಯಾಕ್ಷನು ಪ್ರಹ್ಲಾದನಿಗೆ ನಾನಾ ವಿಧವಾದ ಚಿತ್ರಹಿಂಸೆ ಕೊಟ್ಟ. ಅವನನ್ನು ಹೇಗಾದರೂ ಕೊಂದು ಬಿಡಬೇಕೆಂದು ವಿವಿಧರೀತಿಯಲ್ಲಿ ಪ್ರಯತ್ನಿಸಿದ ಆದರೆ ಆ ಪ್ರಯುಕ್ತವೆಲ್ಲವೂ ನಿಷ್ಫಲವಾಯಿತು. ಒಮ್ಮೆ ವಿಷ್ಣು ಸರ್ವವ್ಯಾಪಿ, ಎಲ್ಲೆಲ್ಲೂ ಇದ್ದಾನೆ ಎಂದು ಹೇಳುತ್ತಿದ್ದ ಪ್ರಹ್ಲಾದನನ್ನು ಕುರಿತು ತನ್ನ ಸಭಾಮಂಟಪದ ಒಂದು ಕಂಬವನ್ನು ಬಡಿದು “ಇಲ್ಲಿ ಇದ್ದಾನೆಯೇ ನಿನ್ನ ವಿಷ್ಣು” ಎಂದು ಕೇಳಿದನು. ತತ್ಕ್ಷಣ ಭಗವಂತ ಆ ಕಂಬವನ್ನೇ ಸೀಳಿಕೊಂಡು ನರ+ಸಿಂಹನಾಗಿ ಹೊರಬಂದನು. ಸತ್ಯಂ ವಿಧಾತುಂ ನಿಜಭೃತ್ಯ ಭಾಷಿತಂ ಇದು ಶ್ಲೋಕ

**ವ್ಯಾಪ್ತಿಂ ಚ ಭೂತೇಷ್ವಬಿಲೇಷು ಚಾತ್ಮನಃ**

**ಅದೃಶ್ಯತ ಅತ್ಯದ್ಭುತ ರೂಪಮುದ್ವಹನ್**

**ಸ್ತಂಭೇ ಸಭಾಯಾಂ ನಮೃಗಂ ನಮಾನುಷಂ**

ಹೀಗಾಗುವುದೆಂದು ರಾಜನಾಗಲಿ, ಸಭೆಯಲ್ಲಿ ನೆರೆದ ಜನರಾಗಲಿ ನಂಬಿರಲಿಲ್ಲ. ರಾಜಸಭೆಯಲ್ಲಿದ್ದವರೆಲ್ಲ ಈ ವಿಚಿತ್ರವಾದ ಉಗ್ರರೂಪವನ್ನು

ಕಂಡು ನಡುಗಿ ಹೋದರು. ನರಸಿಂಹಸ್ವಾಮಿಯು ಮೊದಲು ತಾನು ವಿಷ್ಣುವೇ ಎಂದು ಸ್ಪಷ್ಟಪಡಿಸುವುದಕ್ಕಾಗಿ ತನ್ನ ಕೈಯಲ್ಲಿ ಶಂಖಚಕ್ರಗಳನ್ನು ಇಟ್ಟುಕೊಂಡು ಹೊರಬಂದ. ಇನ್ನೆರಡು ಕೈಗಳನ್ನು ಮಂಡಿಯ ಮೇಲಿಟ್ಟುಕೊಂಡು, ನರಸಿಂಹ ಯುದ್ಧಮುದ್ರೆಯಲ್ಲಿ ಹಿರಣ್ಯಕಶಿಪುವನ್ನು ಮಲ್ಲಯುದ್ಧಕ್ಕೆ ಆಹ್ವಾನಿಸುತ್ತಿರುವ ಭಂಗಿಯಲ್ಲಿ ನಿಂತು ಕಾಳಗಕ್ಕೆ ಸಿದ್ಧನಾದ ನರಸಿಂಹ, ಬಳಿಕ ಒಬ್ಬ ಮಲ್ಲನಂತೆ ದ್ವಿಭುಜನಾಗಿ ನಿಂತ ಹಿರಣ್ಯಕಶಿಪುವಿಗೆ ಇದು ಅನಿರೀಕ್ಷಿತ. ಎದೆ ಡವಡವಿಸುತ್ತಿದ್ದರೂ ಅದನ್ನು ತೋರ್ಪಡಿಸದೆ ಹಿರಣ್ಯಕಶಿಪು ವೀರಾಗ್ರಣಿಯಂತೆ ಧೃತಿಗೆಡದವನಂತೆ ಕೈಯಲ್ಲಿ ಕತ್ತಿಯನ್ನು ಹಿಡಿದು ನರಸಿಂಹನ ಮೇಲೆ ಹರಿಹಾಯ್ದನು. ನರಸಿಂಹಸ್ವಾಮಿ ಅವನನ್ನು ಎಳೆದೊಡನೆ ಅವನು ಕೆಳಗೆ ಬಿದ್ದುಬಿಟ್ಟನು. ಅಷ್ಟೇ ಅಲ್ಲ. ಪ್ರಜ್ಞಾಹೀನನಾದನು. ಭಗವಂತನ ಹಸ್ತಸ್ಪರ್ಶವೆಂಬುದು ಸಾಮಾನ್ಯವಾದುದೇ !?

**ಯಂ ಯಂ ಸ್ಪೃಶತಿ ಪಾಣಿಭ್ಯಾಂ ಯಂ ಯಂ ಪಶ್ಯತಿ ಚಕ್ಷುಷಾ**
**ಸ್ಥಾವರಣ್ಯಾಪಿ ಮುಚ್ಯಂತೇ ಕಿಂ ಪುನರ್ಬಾಂಧವಾಜನಾಃ ॥**
**ತಂ ಖಡ್ಗಹಸ್ತಂ ದೈತ್ಯೇಂದ್ರಂ ಜಗ್ರಾಹೈಕೇನಬಾಹುನಾ ।**
**ಪಾತಯಾಮಾನ ದೇವೇಶಃ ಯಥಾತಾಳಂ ಮಹಾನಿಲಃ ॥**
**ಗೃಹೀತ್ವಾ ಪತಿತಂ ಭೂಮೌ ಮಹಾಕಾಯಂ ನೃಕೇಸರೀ ।**
**ಸೋತ್ಸಂಗೇ ಶಾಯಯಿತ್ವಾ ತಂ ದದರ್ಶಾಸ್ಯ ಮುಖಂಹರಿಃ ॥**
**ವಿಷ್ಣೂನಿಂದಾಕೃತಂ ಪಾಪಂ ವೈಷ್ಣವದ್ರೋಹಜಂ ತಥಾ ।**
**ತತ್ತೀರ್ಥಸ್ಪರ್ಶನಾದೇವ ನಿರ್ಭತ್ಸತ ಮಭೂತ್ತದಾ ॥**
**ಅಥ ದೈತ್ಯೇಶ್ವರಸ್ಯಾಸ್ಯ ಮಹಾಗಾತ್ರಂ ನೃಕೇಸರಿ ।**
**ಸ ನಖೈರ್ವಿಧಾರಯಾಮಾಸ ಸುತೀಕ್ಷ್ಣೈಃ ವಜ್ರಸನ್ನಿಭೈಃ ॥**
**ಸನಿರ್ಮಲತ್ಮಾ ದೈತ್ಯೇಂದ್ರ ಪಶ್ಯನ್‌ಸಾಕ್ಷಾದ್ದರೇರ್ಮುಖ**
**ನಬಾಳಿಭಿನ್ನಹೃದಯಃ ಕೃತಾರ್ಥೋದ್ರಾಗ್ಜಹಾವಸೂನ್ ॥**
**ತದ್ಗಾತ್ರಂ ಶತದಾ ಭಿತ್ವಾ ನಖೈಸ್ತೀಕ್ಷ್ಣಂ ಮಹಾಹರಿಃ**
**ಆಕೃಷ್ಯಾನ್ತ್ರಾಣಿ ದೀರ್ಘಾಣಿ ಪ್ರೀತ್ಯಾಸೂಸಕ್ತವಾನ್‌ಗಲೇ**

(ಪಾದ್ಮೋತ್ತರಖಂಡ ಅ. 17, 120–124ನೇ ಶ್ಲೋಕ)

ಭಗವಂತನ ಸ್ಪರ್ಶ ಮಾತ್ರದಿಂದಲೇ ರಾಕ್ಷಸನ ಶರೀರದಲ್ಲೆಲ್ಲಾ ವಿದ್ಯುತ್ ಸಂಚಾರವಾದಂತೆ ಆಯಿತು. ತನಗೆ ಏನಾಗುತ್ತಿದೆ ಎಂಬ ಅರಿವೆ ಇಲ್ಲದಂತಾಯಿತು. ನರಸಿಂಹ ಅವನನ್ನು ಎಳೆದಾಕ್ಷಣ ಹಿರಣ್ಯಕಶಿಪು ಕೆಳಗೆ ಬಿದ್ದುಬಿಟ್ಟನು. ಪ್ರಜ್ಞೆಯೂ ತಪ್ಪಿತು. ಕೂಡಲೇ ನರಸಿಂಹ ಅವನನ್ನು ತನ್ನೆರಡೂ ಕೈಗಳಿಂದಲೂ ಎತ್ತಿಕೊಂಡು ತನ್ನ ತೊಡೆಯಮೇಲೆ ಮಲಗಿಸಿಕೊಂಡನು. ಪ್ರಜ್ಞೆತಪ್ಪಿ ಬಿದ್ದ ಮಗುವನ್ನು ತಂದೆಯಾದವನು ಎತ್ತಿ ತೊಡೆಯಮೇಲೆ ಮಲಗಿಸಿಕೊಳ್ಳುವಂತೆ. ಭಗವಂತ ಅದೆಷ್ಟು ವಾತ್ಸಲ್ಯಪರನಾದವನು, ಊಹಿಸಲೂ ಅಸಾಧ್ಯವಾದುದು.

ಹಿರಣ್ಯಾಕ್ಷನ ಸಂಹಾರ ಭೂಮಿಯ ಮೇಲೆ ಅಥವಾ ಆಕಾಶದಲ್ಲಿ ಆಗುವಂತಿರಲಿಲ್ಲ ನಿಜ. ಅವನನ್ನೇ ಹೊಸ್ತಿಲಿನ ಮೇಲೆ ಮಲಗಿಸಿ ಸಂಹರಿಸಬಹುದಾಗಿತ್ತಲ್ಲ ! ನರಸಿಂಹ ಹಾಗೆ ಮಾಡಲಿಲ್ಲ. ತಾನೇ ಹೊಸ್ತಿಲಿನ ಮೇಲೆ ಕುಳಿತು ತನ್ನ ಮಡಿಲಲ್ಲಿ ಅವನನ್ನು ಮಲಗಿಸಿಕೊಂಡ ಚತುರ್ಭುಜ ವಿಷ್ಣುವಿನಂತೆ ಕೃಪೆಯನ್ನು ತೋರಿದ. ಆ ಸಮಯದಲ್ಲಿ ಹಿರಣ್ಯಕಶಿಪುವಿಗೆ ಪ್ರಜ್ಞೆ ಬಂದು ಭಗವಂತನನ್ನು ಕಣ್ತುಂಬ ನೋಡಿದ. ಅವನು ಆದಷ್ಟು ಬೇಗ ಇಹಜನ್ಮಗಳನ್ನು ಮುಗಿಸಿ ವೈಕುಂಠವನ್ನು ಸೇರಬೇಕಾಗಿದ್ದಿತು. ಆದರೆ ಈ ಜನ್ಮದಲ್ಲಿ ಅವನು ಮಾಡಿದ ವಿಷ್ಣುನಿಂದ, ಪರಮ ವೈಷ್ಣವನಾದ ಪ್ರಹ್ಲಾದನಿಗೆ ಮಾಡಿದ ದ್ರೋಹ ಮುಂತಾದ ಪಾಪಶೇಷ ಪರಿಹಾರವಾಗದೆ ಅದು ಸಾಧ್ಯವಾಗದು. ಆದ್ದರಿಂದ ಈಗ ಭಗವಂತನ ಸಾಕ್ಷಾತ್ ದರ್ಶನಭಾಗ್ಯದಿಂದಲೇ ಸಕಲಪಾಪಗಳೆಲ್ಲವೂ ನೀಗಿಹೋದವು. ಈಗ ರಾಕ್ಷಸ ಹಿರಣ್ಯಕಶಿಪು ನಿರ್ಮಲಾತ್ಮನಾದ. ಆಗ ನರಸಿಂಹ ಹರಿತವಾದ ಕತ್ತಿಯ ಅಲಗಿಗಿಂತ ಹರಿತವಾಗಿದ್ದ ತನ್ನ ಉಗುರುಗಳಿಂದಲೇ ಸಮ್ಮೋಹನಕ್ಕೆ ಒಳಗಾದವನಂತೆ ತನ್ನ ತೊಡೆಯ ಮೇಲೆ ಮಲಗಿದ್ದ ಹಿರಣ್ಯನ ಹೊಟ್ಟೆಯನ್ನು ಬಗೆದ ಅಷ್ಟಕ್ಕೇ ಮುಗಿಯಿತೇ ? ಇಲ್ಲ ಹೊಟ್ಟೆಯೊಳಗಿಂದ ಹಿರಣ್ಯಾಕ್ಷನ ಉದ್ದವಾದ ಕರುಳು ನರಸಿಂಹನ ಉಗುರುಗಳಿಗೆ ಸಿಕ್ಕಿಕೊಂಡು ಹೊರಬಂದಿತು. ನರಸಿಂಹನು ಅದನ್ನು ಕಟಾಕ್ಷಿಸಿದ. ತನ್ನ ಪ್ರಿಯ ದ್ವಾರಪಾಲಕನಾಗಿದ್ದವನ ಕರುಳು ಸ್ಪರ್ಶಮಾತ್ರದಿಂದಲೇ ಹಿರಣ್ಮಯವಾಗಿಬಿಟ್ಟಿತು. ಆ ಕರುಳನ್ನೇ ತನ್ನ ಕೊರಳಿಗೆ ಧರಿಸಿಕೊಂಡು ಆಂತ್ರಮಾಲಾ ವಿಭೂಷಿತನಾದ ಭಗವಾನ್ ಶ್ರೀ ನರಸಿಂಹ

ಇಂದಿಗೂ ಅಹೋಬಲದ ಜ್ವಾಲಾನರಸಿಂಹ ಕ್ಷೇತ್ರದಲ್ಲಿ ಹಿರಣ್ಯಕನೊಡನೆ ನೃಸಿಂಹನ ಮಲ್ಲಯುದ್ಧದ, ಅಷ್ಟಭುಜ ದಶಭುಜಗಳ ಜ್ವಾಲಾನರಸಿಂಗನ ಮತ್ತು ಲಕ್ಷ್ಮೀನರಸಿಂಹ ಅರ್ಚಾವಿಗ್ರಹವನ್ನು ನಾವು ಕಾಣಬಹುದು. ನರಸಿಂಹನು ಉಗ್ರರೂಪದಿಂದ ಆವಿರ್ಭವಿಸಿ, ಸೀಳಿಹೋಗಿ ನೆಟ್ಟಗೆ ನಿಂತಿರುವ ಈ ಕಂಬಕ್ಕೆ ಉಗ್ರಸ್ಥಂಭವೆಂದೇ ಹೆಸರಿದೆ. ಲಕ್ಷ್ಮೀನೃಸಿಂಹನ ಅವತಾರ ಸ್ಥಳವಾದ ಈ ಅಹೋಬಿಲವನ್ನು ಸಂದರ್ಶಿಸಿ ಅವನ ಕೃಪೆಗೆ ಪಾತ್ರಾಗುವುದೇ ಒಂದು ಸೌಭಾಗ್ಯ. ಈಗ ಬ್ರಹ್ಮಾಂಡ ಪುರಾಣದಲ್ಲಿ ಭಕ್ತಪ್ರಹ್ಲಾದನಿಂದಲೇ ಸ್ತುತಿಸಲ್ಪಟ್ಟ ಶ್ರೀಲಕ್ಷ್ಮೀನೃಸಿಂಹ ಕವಚವನ್ನು ನಾವು ಪ್ರತಿನಿತ್ಯವೂ ಪಠಿಸಿ ನೃಸಿಂಹನ ಕೃಪೆಗೆ ಪಾತ್ರಾರೋಗೋಣ.

**ಸತ್ಯಜ್ಞಾನಸುಖಸ್ವರೂಪಮಮಲಂ ಕ್ಷೀರಾಬ್ಧಿಮದ್ಯೇಸ್ಥಿತಂ ।**
**ಯೋಗಾರೂಢಮತಿಪ್ರಸನ್ನವದಣಂ ಭೂಷಾ ಸಹಕ್ರೋಜ್ವಲಂ ॥**
**ತ್ರಕ್ಷ್ಯಂ ಚಕ್ರಪಿನಾಕಸಾಭಯವರಾನ್ ಬಿಭ್ರಾಣಮರ್ಕಚ್ಛಮಿ ।**
**ಛತ್ರೀಭೂತಫಣೀಂದ್ರಮಿಂದುಧವಳಂ ಲಕ್ಷ್ಮೀನೃಸಿಂಹಭಜೇ ॥**

## ಶ್ರೀಲಕ್ಷ್ಮೀನೃಸಿಂಹ ಕವಚಂ

**ನೃಸಿಂಹ ಕವಚಂ ವಕ್ಷ್ಯೇ ಪ್ರಹ್ಲಾದೇನೋದಿತಂ ಪುರಾ ।**
**ಸರ್ವರಕ್ಷಾಕರಂ ಪುಣ್ಯಂ ಸರ್ವೋಪದ್ರವ ನಾಶನಂ ॥**
**ಸರ್ವ ಸಂಪತ್ಕರಂ ಚೈವ ಸ್ವರ್ಗಮೋಕ್ಷಪ್ರದಾಯಕಂ ।**
**ಧ್ಯಾತ್ವಾ ನೃಸಿಂಹಂ ದೇವೇಶಂ ಹೇಮಸಿಂಹಾಸನಸ್ಥಿತಂ ॥**

### ಧ್ಯಾನಂ

**ವಿವೃತಾಸ್ಯಂ ತ್ರಿನಯಂ ಶರದಿಂದು ಸಮಪ್ರಭಂ ।**
**ಲಕ್ಷ್ಮ್ಯಾಲಿಂಗಿತ ವಾಮಾಂಗಂ ವಿಭೂತಿಬಿರುಪಾಶ್ರಿತಂ ॥**
**ತಪ್ತಕಾಂಚನ – ಸಂಕಾಂಶಂ ಪೀತನಿರ್ಮಲ ವಾಸನಂ ।**
**ಇಂದ್ರಾದಿ ಸುರ ಮೌಳಿಸ್ಥ – ಸ್ಫುರನ್ಮಾಣಿಕ್ಯ – ದೀಪ್ತಿಭಿಃ ॥**
**ವಿರಾಜಿತಪದದ್ವಂದ್ವಂ ಶಂಖ ಚಕ್ರಾದಿ ಹೇತಿಭಿಃ**

ಗುರುತ್ಮತಾ ಸವಿನಯಂ ಸ್ತೂಯಮಾನಂ ಮುದಾನ್ವಿತಂ
ಸಹೃತ್ಕಮಲ – ಸಂವಾಸಂ ಕೃತ್ವಾ ತು ಕವಚಂ ಪಠೇತ್
ನೃಸಿಂಹೋ  ಮೇ ಶಿರಃ ಪಾತು ಲೋಕರಕ್ಷಾತ್ಮ ಸಂಭವಃ ।
ಸರ್ವಗೋಪಿ ಸ್ತಂಭವಾಸಃ ಫಾಲಂ ಮೇರಕ್ಷತು ಧ್ವನಿಂ ॥
ನೃಸಿಂಹೋ ಮೇ ದೃಶೌ ಪಾತು ಸೋಮದೂರ್ಯಾಗ್ನಿ ಲೋಚನಃ ।
ಸ್ಮೃತಿಂ ಮೇ ಪಾತುನೃಹರಿಃ ಮುನಿವರ್ಯಸ್ತುತಿಪ್ರಿಯಃ ॥
ನಾಸಾಂ ಮೇ ಸಿಂಹನಾದಸ್ತು ಮುಖಂ ಲಕ್ಷ್ಮೀಮುಖಪ್ರಿಯಃ ।
ಸರ್ವ ವಿದ್ಯಾಧಿಪಃ ಪಾತು ನೃಸಿಂಹೋ ರಸನಾಂ ಮಮ ॥
ವಕ್ತ್ರಂ ಪಾತ್ವಿಂದು ವದನಃ ಸದಾ ಪ್ರಹ್ಲಾದ ವಂದಿತಃ ।
ನೃಸಿಂಹಃ ಪಾತು ಮೇ ಕಂಠಂ ಸ್ಕಂದೌ ಭೂಭರಣಾಂತಕೃತ್ ॥
ದಿವ್ಯಾಸ್ತ್ರ ಶೋಭಿತಭುಜೋ ನೃಸಿಂಹಃ ಪಾತು ಮೇ ಭುಜೌ ।
ಕರೌ ಮೇ ದೇವವರದಃ ನೃಸಿಂಹಃ ಪಾತು ಸರ್ವತಃ ॥
ಹೃದಯಂ ಯೋಗಿಸಾಧ್ಯಶ್ಚ ನಿವಾಸುಪಾತು ಮೇ ಹರಿಃ ।
ಮಧ್ಯಂ ಪಾತು ಹಿರಣ್ಯಾಕ್ಷ ವಕ್ಷಃ – ಕುಕ್ಷಿವಿಧಾರಣಃ ॥
ನಾಭಿಂ ಮೇ ಪಾತು ಗುಹ್ಯನಾಂ ಮಂತ್ರಾಣಾಂ ಗುಹ್ಯ ರೂಪಧೃತ್ ।
ಊರೂ ಮನೋಭವಃ ಪಾತು ಜಾನುನೀ ನರರೂಪಧೃತ್ ॥
ಜಂಘೇ ಪಾತು ಧರಾಭಾರ – ಹರ್ತ್ತಾಯೋಸೌ ನೃಕೇಸರಿ ।
ಸುರಾಜ್ಯ ಪ್ರದಃಪಾತು– ಪಾದೌಮೇ ನೃಹರೀಶ್ವರಃ  ॥
ಸಹಸ್ರಶೀರ್ಷಾಪುರುಷಃ ಪಾತುಮೇ ಸರ್ವಶಸ್ತನುಂ ।
ಮಹೋಗ್ರಃ ಪೂರ್ವತಃ ಪಾತು ಮಹಾವೀರಾಗ್ರಜೋಗ್ನಿತಃ ॥
ಮಹಾವಿಷ್ಣುಃ ದಕ್ಷಿಣೇ ತುಮಹಾಜ್ವಾಲಸ್ತುನೈರುತೌ  ।
ಪಶ್ಚಿಮೇ ಪಾತು ಸರ್ವೇಶಃ ದಿಶಿಮೇ ಸರ್ವತೋಮುಖಃ ॥
ನೃಸಿಂಹಃ ಪಾತು ವಾಯವ್ಯಾಂ ಸೌಮ್ಯಾಂ ಭೀಷಣ ವಿಗ್ರಹಃ ।
ಈಶಾನ್ಯಾಂ ಪಾತುಃ ಭದ್ರೋಮೇ ಸರ್ವಮಂಗಳದಾಯಕಃ ॥
ಸಂಸಾರ ಭಯದಃ ಪಾತು ಮೃತ್ಯಯೋಮೃತ್ಯುನ್ನಕೇಸರಿ ॥
ಇದಂ ನೃಸಿಂಹ ಕವಚಂ ಪ್ರಹ್ಲಾದ ಮುಖಮಂಡಿತಂ ।

ಭಕ್ತಿಮಾನ್ ಯಃ ಪಠೇನ್ನಿತ್ಯಂ ಸರ್ವಪಾಪೈಃ ಪ್ರಮುಚ್ಯತೇ ॥
ಪುತ್ರವಾನ್ ಧನವಾನ್ ಲೋಕೇ ದೀರ್ಘಾಯುರುಪಜಾಯತೇ ।
ಯಂ ಯಂ ಕಾಮಯತೇ ಕಾಮಂ ತಂ ತಂ ಪ್ರಾಪ್ನೋತ್ಯ ಸಂಶಯಃ ॥
ಸರ್ವತ ಜಯಮಾಪ್ನೋತಿ ಸರ್ವತ್ರ ವಿಜಯೀ ಭವೇತ್ ।
ಭೂಮ್ಯಂತರಿಕ್ಷಂ ದಿವ್ಯಾನಾಂ ಗ್ರಹಾಣಾಂ ವಿನಿವಾರಣಂ ॥
ವೃಶ್ಚಿಕೋರಗ ಸಂಭೂತಂ ವಿಷಾಪಹರಣಂ ಪರಂ ।
ಬ್ರಹ್ಮರಾಕ್ಷಸಯಕ್ಷಾಣಾಂ ದೂರೋತ್ಸಾರಣ ಕಾರಣಂ ॥
ಭೂರ್ಜೇ ಪಾತಾಳಪತ್ರೇ ವಾಕವಚಂ ಲಿಖಿತಂ ಶುಭಂ ।
ಕರಮೂಲೇ ಧೃತಂ ಯೇನ ಸಿಧ್ಯ್ಯೇಯುಃ ಕರ್ಮಸಿದ್ಧಯಃ ॥
ಸರ್ವಮಂಗಳ ಮಾಂಗಲ್ಯಂ ಭುಕ್ತಿಂ ಮುಕ್ತಿಂನವಿಂದತಿ ।
ದ್ವಾತ್ರಿಂಶತಿ ಸಹಸ್ರಾಣಿ ಪಠೇತ್ ಶುದ್ಧಾತ್ಮನಾಂನೃಣಾಂ ॥
ಕವಚಸ್ಸಾಸ್ಯ ಮಂತ್ರಸ್ಯ ಮಂತ್ರಸಿದ್ಧಿಃ ಪ್ರಜಾಯತೇ ।
ಅನೇನ ಮಂತ್ತರರಾಜೇನ ಕೃತ್ವಾ ಭಸ್ಮಾಭಿ ಮಂತ್ರಣಂ ॥
ತಿಲಕಂ ವಿನ್ಯಸೇದ್ಯಸ್ತುಂ ತಸ್ಯ ಗ್ರಹಭಯಂ ಹರೇತ್ ।
ತ್ರಿವಾರಂ ಜಪಮಾನಸ್ತು ದತ್ತಂ ವಾರ್ಯಭಿ ಮಂತ್ರ್ಯ ಚ ॥
ಪ್ರಾಶಯೇದ್ಯೋ ನರೋ ಮಂತ್ರಂ ನೃಸಿಂಹಧ್ಯಾನ ಮಾಚೇರೇತ್ ।
ತಸ್ಯ ರೋಗಾಃ ಪ್ರಣಶ್ಯಂತಿ ಯೇ ಚಸ್ಯುಃ ಕುಕ್ಷಿಸಂಭವಾಃ ॥
ಕಿಮತ್ರ ಬಹುನೋಕ್ತೇನ ನೃಸಿಂಹಸದೃಶೋಭವೇತ್ ।
ಮನಸಾ ಚಿಂತಿತಂ ಯತ್ತು ಸ ತಚ್ಚಾಪ್ನೋತ್ಯಸಂಶಯಂ ॥
ಗರ್ಜಂತಂ ಗರ್ಜಯಂತಂ ನಿಜಭುಜಪಟಲಸ್ಫೋಟಯಂತಂ ಹಟಂತಂ
ರೂಪ್ಯಂತಂ ತಾಪಯಂತಂ ದಿವಿ ಭುವಿ ದಿತಿಜಂ ಕ್ಷೇಪಯಂತಂ ಕ್ಷಿಪಂತಂ
ಕ್ರಂದಂತಂ ರೋಷಯಂತಂ ದಿಶಿ ದಿಶಿ ಸತತಂ ಸಂಹರಂತಂ ಭರಂತಂ
ವೀಕ್ಷಂತಂ ಘೂರ್ಣಯಂತಂ ಶರನಿಕರ ಶತೈಃ ದಿವ್ಯಸಿಂಹಂ ನಮಾಮಿ

********

ಇತಿ ಬ್ರಹ್ಮಾಂಡಪುರಾಣೇ ಪ್ರಹ್ಲಾದೋಕ್ತಂ ನೃಸಿಂಹಕವಚಂ ಸಂಪೂರ್ಣಂ

ಭೂಮಂಡಲ, ಸಾಗರ, ದ್ವೀಪ, ವರ್ಷ ಮುಂತಾದವುಗಳು ಸಂಕ್ಷಿಪ್ತ ಪರಿಚಯ ಸೃಷ್ಟಿಯ ರಹಸ್ಯವನ್ನು ಪುರಾಣಗಳಲ್ಲಿ ನಾವು ತಿಳಿದುಕೊಳ್ಳಬಹುದು. ನಮ್ಮಲ್ಲಿ 'ಏಳು' ಎಂಬ ಸಪ್ತ ಸಂಖ್ಯೆಗೆ ಅತ್ಯಂತ ಪ್ರಾಧಾನ್ಯತೆ ಇದೆ. ಸಪ್ತಾಶ್ವ, ಸಪ್ತಸಮುದ್ರ, ಸಪ್ತಪದಿ, ಸಪ್ತವರ್ಣ, ಸಪ್ತದ್ವೀಪ, ಸಪ್ತದಿನ, ಸಪ್ತಗಿರಿ, ಸಪ್ತಮಾತೃಕೆಯರು, ಸಪ್ತರ್ಷಿ ಎಂದು ಮುಂತಾಗಿ 'ಸಪ್ತ' ಎಂಬ ಸಂಖ್ಯೆಯೇ ಹೆಚ್ಚಿನ ಪ್ರಾಧಾನ್ಯತೆ ಗಳಿಸಿದೆ ಇದರ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ.

ಈ ಭೂಮಂಡಲದಲ್ಲಿ ಸಪ್ತದ್ವೀಪಗಳಿವೆ. ಅವು ಯಾವುವೆಂದರೆ ಜಂಬೂ, ಪ್ಲಕ್ಷ, ಶಾಲ್ಮಲ, ಕುಶ, ಕ್ರೌಂಚ, ಶಾಕ, ಪುಷ್ಕರ ಇವು ಸಪ್ತಸಮುದ್ರಗಳಿಂದ ಒಂದೊಂದು ಆವೃತವಾಗಿವೆ. ಲವಣ, ಇಕ್ಷು, ಸುರಾ, ಘೃತ, ದಧಿ, ಕ್ಷೀರ, ಜಲ ಎಂಬ ಸಪ್ತ ಸಮುದ್ರಗಳು ಈ ದ್ವೀಪಗಳನ್ನು ಆವರಿಸಿಕೊಂಡಿವೆ. ಜಂಬೂದ್ವೀಪವು ಎಲ್ಲ ದ್ವೀಪಗಳ ಮಧ್ಯದಲ್ಲಿದೆ. ಅದರ ನಡುವೆ ಸುವರ್ಣಮಯವಾದ ಮೇರುಪರ್ವತವಿದೆ. ಅದರ ದ್ವೀಪವು ಎತ್ತರ ನಲವತ್ತು ಸಾವಿರಯೋಜನೆಗಳು ಇದರಲ್ಲಿ ಹದಿನಾರು ಯೋಜನಗಳಷ್ಟು ನೆಲದೊಳಗಿದೆ. ಈ ಪರ್ವತವು ಮೇಲ್ಗಡೆ ಮೂವತ್ತೆರಡು ಯೋಜನೆಗಳಷ್ಟು ಅಗಲವಾಗಿದೆ. ಮೇರು ಪರ್ವತದ ಬುಡದ ವಿಸ್ತಾರವು ಹದಿನಾರು ಸಾವಿರ ಯೋಜನವಿದೆ. ಈ ಶೈಲವು ಭೂಮಿಯೆಂಬ ಕಮಲಕ್ಕೆ ಕರ್ಣಿಕೆಯಂತಿದೆ. ಮೇರು ಪರ್ವತದ ದಕ್ಷಿಣದಲ್ಲಿ ಹಿಮಲಯ, ಹೇಮಕೂಟ, ನಿಷಧ ಎಂಬ ಪರ್ವತಗಳು ಉತ್ತರದಲ್ಲಿ ನೀಲ, ಶ್ವೇತ, ಶೃಂಗಿ ಎಂಬ ಪರ್ವತಗಳೂ ಇವೆ. ಇವುಗಳಲ್ಲಿ ನಡುವೆ ವಿಷದ, ನೀಲ ಎಂಬ ಇವರೆಡು ಲಕ್ಷಯೋಜನಗಳವರೆಗೆ ಉಳಿದವು. ಕ್ರಮವಾಗಿ ಲಕ್ಷಕ್ಕೆ ಹತ್ತು ಕಡಿಮೆ ಯೋಜನೆಗಳವರೆಗೆ ಹರಡಿವೆ.

ಹಾಗೆಂದರೆ ನಿಷದ – ನೀಲಗಳು ಒಂದು ಲಕ್ಷ ಯೋಜನ ಹರಡಿವೆ. ಹೇಮಕೂಟ– ಶ್ವೇತಗಳು ತೊಂಬತ್ತು ಸಾವಿರಯೋಜನ, ಹಿಮಾಲಯ–ಶೃಂಗಿಗಳು ಎಂಬತ್ತು ಸಾವಿರ ಯೋಜನ ಹರಡಿವೆ. ಇವೆಲ್ಲವೂ ಎರಡು ಸಾವಿರ ಯೋಜನ ಎತ್ತರವಾಗಿದ್ದು ಅಷ್ಟೇ ಅಗಲವಾಗಿವೆ.

ಮೇರುವಿನ ದಕ್ಷಿಣಕ್ಕೆ ಮೊದಲನೆಯದು ಭಾರತವರ್ಷ. ನಮ್ಮಲ್ಲಿ ಯಾವುದೇ ಸತ್ಕಾರ್ಯವನ್ನಾಗಲೀ ಅಂದರೆ ದೇವರ ಅಷ್ಟೋತ್ತರ, ಯಜ್ಞಯಾಗಾದಿಗಳನ್ನು

ಮಾಡುವಾಗ ಸಂಕಲ್ಪ ಮಾಡುವುದುಂಟು, "ಹರಿಃ ಓಂ ತತ್ಸತ್ ಶ್ರೀಗೋವಿಂದ ಗೋವಿಂದ, ಗೋವಿಂದ ಅಸ್ಯ ಶ್ರೀ ಭಗವತೋ ಮಹಾಪುರುಷಸ್ಯ ಶ್ರೀ ಮಹಾವಿಷ್ಣೋ ರಾಜ್ಞಯಾ ಪ್ರವರ್ತಮಾನಸ್ಯ ಅದ್ಯಬ್ರಹ್ಮಣಃ ದ್ವಿತೀಯ ಪರಾರ್ಧೆ ಶ್ರೀಶ್ವೇತವರಾಹ ಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಶಕಾಬ್ದೇ ಮೇರೋಃ ದಕ್ಷಿಣೇ ಪಾರ್ಶ್ವೇ ಅಸ್ಮಿನ್ ವರ್ತಮಾನೇ, ವ್ಯಾವಹಾರಿಕೆ, ಚಾಂದ್ರಮಾನೇನ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೆ . . . .. ..ಎಂದೂ ಮುಂತಾಗಿ ಸಂಕಲ್ಪ ಮಾಡುವುದುಂಟು. ಹೀಗಾಗಿ ಮೇರು ಪರ್ವತದ ದಕ್ಷಿಣಭಾಗದಲ್ಲಿ ನಮ್ಮ ಭರತಖಂಡ, ಭಾರತದೇಶವಿದೆ ಎಂದು ದೃಢಪಡಿಸಲಾಗಿದೆ. ನಂತರ ಕಿಂಪುರುಷವರ್ಷ ತದನಂತರ ಹರಿವರ್ಷಗಳಿವೆ ಮೇರುವಿನ ಉತ್ತರಕ್ಕೆ ಮೊದಲು ರಮ್ಯಕ ವರ್ಷ, ಆಮೇಲೆ ಹಿರಣ್ಮಯವರ್ಷ ಅನಂತರ ಉತ್ತರ ಕುರುವರ್ಷಗಳಿವೆ. ಇವುಗಳಲ್ಲಿ ಒಂದೊಂದು ವರ್ಷವೂ ಒಂಬತ್ತು ಸಾವಿರ ಯೋಜನಗಳು ವಿಸ್ತಾರವಾಗಿದೆ. ಉತ್ತರ ಕುರುವರ್ಷವು ಭಾರತವರ್ಷದಂತೆ ಧನುರಾಕಾರವಾಗಿ ಇದೆ.

ಇವೆಲ್ಲವುಗಳ ನಡುವೆ ಇಲಾವೃತ ವರ್ಷವಿದ್ದು ಅದರ ನಡುವೆ ಮೇರುಪರ್ವತವಿದೆ. ಇಲಾವೃತವು ಮೇರುವಿನ ನಾಲ್ಕು ಕಡೆಗಳಲ್ಲಿಯೂ ಒಂಬತ್ತುಸಾವಿರ ಯೋಜನೆಗಳವರೆಗೆ ಹರಡಿದೆ. ಇದರಲ್ಲಿ ನಾಲ್ಕು ಪರ್ವತಗಳುಂಟು. ಇವು ಹತ್ತುಸಾವಿರ ಯೋಜನ ಎತ್ತರವಾಗಿದ್ದು ಪರ್ವತಕ್ಕೆ ಸುತ್ತಲೂ ರಚಿಸಿರುವ ನಾಲ್ಕು ಕೀಲುಗಳಂತೆ ಇವೆ. ಪೂರ್ವದಲ್ಲಿ ಮಂದರಪರ್ವತ, ದಕ್ಷಿಣದಲ್ಲಿ ಗಂಧಮಾದನ, ಪಶ್ಚಿಮದಲ್ಲಿ ವಿಪುಲಪರ್ವತ ಮತ್ತು ಉತ್ತರದಲ್ಲಿ ಸುಪಾಶ್ವಪರ್ವತ ಇವೆ. ಈ ಪರ್ವತಗಳ ಮೇಲೆ ಕದಂಬ, ಜಂಬೂ, ಅಶ್ವತ್ಥ, ಆಲದಮರಗಳಿವೆ. ಈ ವೃಕ್ಷಗಳು ಹನ್ನೊಂದು ಮೂರು ಯೋಜನಗಳಷ್ಟು ಎತ್ತರವಾಗಿದ್ದು ಪರ್ವತಗಳ ಮೇಲಿರುವ ಧ್ವಜಸ್ತಂಬಗಳಂತೆ ಇವೆ.

ನಮ್ಮ ಭರತಖಂಡ ಜಂಬೂದ್ವೀಪದಲ್ಲಿದೆ ಎಂದು ತಿಳಿದುಕೊಂಡೆವು. ಇದನ್ನು ಏಕೆ ಜಂಬೂದ್ವೀಪ ಎಂದು ಕರೆಯುತ್ತಾರೆ ? ಅದಕ್ಕೂ ಈ ವಿಷ್ಣುಪುರಾಣದಲ್ಲಿ ಉತ್ತರವಿದೆ.

ವಿಪುಲಃ ಪಶ್ಚಿಮ ಪಾರ್ಶ್ವ ಸುಪಾರ್ಶ್ವಶ್ಚೋತ್ತರೇ ಸ್ಮೃತಃ ।
ಕದಂಬಸ್ತೇಷು ಜಂಬೂಶ್ಚ ಪಿಪ್ಪಲೋ ವಟ ಏವಚಃ ॥
ಏಕಾದಶ ಶತಾಯಾಮಾಃ ಪಾದಪಾಃ ಗಿರಿಕೇತವಃ ।
ಜಂಬೂದ್ವೀಪಸ್ಯ ಸಾ ಜಂಬೂರ್ನಾಮಹೇತುರ್ಮಹಾಮುನೇ ॥
ಮಹಾಗಜಪ್ರಮಾಣಾನಿ ಜಮ್ಬ್ವಾಸ್ತಸ್ಯಾಃ ಫಲಾನಿವೈ ।
ಪತಂತಿ ಭೂಭೃತಃ ಪೃಷ್ಠೇ ಶೀರ್ಯಮಾಣಾನಿ ಸರ್ವತಃ ॥
ರಸೇನ ತೇಷಾಂ ಪ್ರಖ್ಯಾತಾ ತತ್ರ ಜಾಂಬೂನದೀತಿ ವೈ ।
ಪರಿತ್ರವರ್ತತೇ ಚಾಪಿ ಪೀಯತೇ ತನ್ನವಾಸಿಭಿಃ ॥
ನಸ್ವೇದೋ ನಚ ದೌರ್ಗಂಧಂ ನ ಜರಾ ನೇಂದ್ರಿಯಕ್ಷಯಃ ।
ತತ್ಪಾನಾತ್ ಸ್ವಚ್ಛ ಮನಸಾಂ ಜನಾನಾಂ ತತ್ರಜಾಯತೇ ॥
ತೀರವೃತ್ತದೃಸಂ ಪ್ರಾಪ್ಯ ಸುಖವಾಯು ವಿಶೋಷಿತಾ ।
ಜಾಂಬೂನದಾಖ್ಯಂ ಭವತೀ ಸುವರ್ಣಂ ಸಿದ್ಧಭೂಷಣಂ ॥

(ವಿ.ಪು. ದ್ವಿತೀಯಾಂಶ ಅಧ್ಯಾಯ 2 17ರಿಂದ 22ನೇ ಶ್ಲೋಕ)

ಈ ಪ್ರದೇಶದಲ್ಲಿ ಜಂಬೂವೃಕ್ಷವು (ನೇರಳೆ) ಹೇರಳವಾಗಿರುವುದರಿಂದ ಇದಕ್ಕೆ ಜಂಬೂದ್ವೀಪವೆಂದು ಹೆಸರು ಬಂದಿತು. ಈ ನೇರಳೆ ಹಣ್ಣುಗಳು ದೊಡ್ಡ ಆನೆಯ ಗಾತ್ರದಲ್ಲಿರುವುವು. ಈ ಹಣ್ಣುಗಳು ಪರ್ವತದ ಮೇಲೆ ಉದುರುತ್ತವೆ. ಆಗ ನೇರಿಳೆ ಹಣ್ಣಿನ ರಸ ನದಿಯಾಗಿ ಹರಿಯುತ್ತದೆ. ಅದರ ಹೆಸರು ಜಂಬೂನದಿ. ಅಲ್ಲಿಯ ಜನರು ಈ ರಸವನ್ನು ಕುಡಿಯುತ್ತಾರೆ. ಆ ರಸವನ್ನು ಕುಡಿಯುವುದರಿಂದ ಅಲ್ಲಿರುವ ಜನರಿಗೆ ಬೆವರು ಇಲ್ಲ, ದುರ್ಗಂಧವಿಲ್ಲ, ಮುಪ್ಪಿಲ್ಲ, ಇಂದ್ರಿಯ ದೌರ್ಬಲ್ಯವೂ ಇಲ್ಲ. ಆ ನದೀತೀರದ ಮಣ್ಣು ಜಂಬೂರಸವನ್ನು ಹೀರಿಕೊಳ್ಳುತ್ತದೆ. ಅನಂತರ ಮಂದವಾತದಿಂದ ಒಣಗಿ ಜಾಂಬೂನದವೆಂಬ ಚಿನ್ನವಾಗುತ್ತದೆಯಂತೆ. ಇದು ಸಿದ್ಧಪುರುಷರಿಗೆ ಒಡವೆಯಾಗುತ್ತದೆ. ಇದೇ ಜಂಪೂದ್ವೀಪದ ಹಿರಿಮೆ. ಮೇರುವಿನ ಪೂರ್ವದಿಕ್ಕಿನಲ್ಲಿ ಭದ್ರಾಶ್ವ ಪಶ್ಚಿಮ ದಿಕ್ಕಿನಲ್ಲಿ ಕೇತುಮಾಲ ಎಂಬ ಎರಡು ವರ್ಷಗಳಿವೆ ಇವೆರಡರ ನಡುವೆ ಇಲಾವೃತ ವರ್ಷವಿದೆ. ಮೇರುವಿನ ಪೂರ್ವಕ್ಕೆ ಚೈತ್ರರಥ ಎಂಬ ಉದ್ಯಾನವಿದೆ. ದಕ್ಷಿಣಕ್ಕೆ ಗಂಧಮಾದನವನ

ಪಶ್ಚಿಮಕ್ಕೆ ವೈಭ್ರಾಜವನವೂ ಉತ್ತರಕ್ಕೆ ನಂದನವನವೂ ಇದೆ. ಮೇರುವಿನ ಮೇಲೆ ಅಂತರಿಕ್ಷದಲ್ಲಿ ಹದಿನಾಲ್ಕು ಸಾವಿರ ಯೋಜನಗಳಷ್ಟು ವಿಸ್ತಾರವಾದ ಬ್ರಹ್ಮನ ಮಹಾಪುರಿ ಇದೆ. ಈ ಮಹಾಪುರಿಯ ಸುತ್ತಲೂ ಅಷ್ಟ ದಿಕ್ಕುಗಳಲ್ಲಿ ಇಂದ್ರಾದಿ ಲೋಕಪಾಲರ ಎಂಟುನಗರಗಳು ಇವೆ. ವಿಷ್ಣು ಪಾದೋದ್ಭವೆಯಾದ ಗಂಗಾನದಿಯು ಚಂದ್ರಮಂಡಲವನ್ನೇ ನೆನೆಯಿಸಿ ಬ್ರಹ್ಮಪುರಿಯಲ್ಲಿ ಧುಮುಕುತ್ತದೆ. ಅಲ್ಲಿ ಧುಮುಕಿದ ಗಂಗಾನದಿಯು ನಾಲ್ಕು ಕವಲುಗಳಾಗಿ ಹರಿಯುತ್ತದೆ. ಅದೇ ಸೀತಾ, ಅಲಕಾನಂದ, ಚಕ್ಷು, ಭದ್ರಾ ಎಂಬಿವು ಅವುಗಳಲ್ಲಿ ಸೀತಾನದಿಯು ಅಂತರಿಕ್ಷ ಮಾರ್ಗದಲ್ಲಿ ಬೆಟ್ಟದಿಂದ ಬೆಟ್ಟಕ್ಕೆ ಹರಿಯುತ್ತ ಕಡೆಗೆ ಪೂರ್ವದಿಕ್ಕಿನಲ್ಲಿರುವ ಭದ್ರಾಶ್ವ ಎಂಬ ವರ್ಷದ ಮೂಲಕ ಸಮುದ್ರವನ್ನು ಸೇರುತ್ತದೆ. ಅಲಕನಂದೆಯು ದಕ್ಷಿಣಕ್ಕೆ ಹರಿದು ಭಾರತದೇಶವನ್ನು ಸೇರಿ ಮತ್ತೆ ಏಳು ಕವಲಾಗಿ ಸಾಗರವನ್ನು ಸೇರುತ್ತದೆ. ಚಕ್ಷು ಎಂಬ ನದಿಯು ಪಶ್ಚಿಮ ಪರ್ವತಗಳನ್ನು ಹಾಯ್ದು ಅಲ್ಲಿರುವ ಕೇತುಮಾಲ ಎಂಬ ವರ್ಷದ ಮೂಲಕ ಸಮುದ್ರವನ್ನು ಸೇರುತ್ತದೆ. ಭದ್ರಾನದಿ ಉತ್ತರ ಗಿರಿಗಳನ್ನು ಹಾಯ್ದು ಉತ್ತರ ಕುರುವರ್ಷದ ಮೂಲಕ ಹರಿದು ಉತ್ತರಸಾಗರವನ್ನು ಸೇರುತ್ತದೆ ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ನಮ್ಮಂತಹ ಹುಲುಮಾನವರು ನೂರು ಜನ್ಮಕಳೆದರೂ ಇಲ್ಲೆಲ್ಲಾ ಹೋಗಲು ಸಾಧ್ಯವಿಲ್ಲ. ಇದನ್ನು ಪರಾಶರರೇ ದೃಢಪಡಿಸಿದ್ದಾರೆ.

**ಭೌಮಾ ಹ್ಯೇತೇ ಸ್ಮೃತಾಃ ಸ್ವರ್ಗಾಃ ಧರ್ಮಿಣಾಮಾಲಯಾಮುನೇ ।**
**ನೈತೇಷು ಪಾಪಕರ್ಮಾಣೋಯಾಂತಿ ಜನ್ಮಶತೈರಪಿ ॥**

(ವಿ.ಪು. ಅಧ್ಯಾಯ 2, 49ನೇ ಶ್ಲೋಕ)

ಭದ್ರಾಶ್ವ ದೇಶದಲ್ಲಿ ವಿಷ್ಣು ಹಯಗ್ರೀವನಾಗಿರುತ್ತಾನೆ. ಕೇತುಮಾಲಾ ಪ್ರದೇಶದಲ್ಲಿ ವರಾಹರೂಪದಲ್ಲಿರುತ್ತಾನೆ. ಉತ್ತರದ ಕುರುವರ್ಷದಲ್ಲಿ ಜನಾರ್ಧನನು ಮತ್ಸ್ಯರೂಪದಿಂದ ಇರುತ್ತಾನೆ. ಸರ್ವನೂ ಸರ್ವಗನೂ ಆದ ಶ್ರೀಹರಿಯು ಸರ್ವತ ವಿಶ್ವರೂಪನಾಗಿ ಇದ್ದಾನೆ. ಆತನೇ ಸರ್ವಾತ್ಮಕನಾಗಿರುವನು. ಸರ್ವಕ್ಕೂ ಆಧಾರನಾದವನು ಎಂದು ಪರಾಶರರು ಮೈತ್ರೇಯರಿಗೆ ಭಗವಾನ್ ವಿಷ್ಣುವಿನ ಸರ್ವವ್ಯಾಪ್ತಿಯನ್ನು ವಿವರಿಸುತ್ತಾನೆ.

**ಭದ್ರಾಶ್ವೇ ಭಗವಾನ್ ವಿಷ್ಣೂರಾಸ್ತೇ ಹಯಾಶಿರಾದ್ವಿಜ ।**

**ವರಾಹಃ ಕೇತುಮಾಲೇ ತು ಭಾರತೇ ಕೂರ್ಮರೂಪಧೃಕ್ ॥**

**ಮತ್ಸರೂಪಶ್ಚ ಗೋವಿಂದಃ ಕುರುಷಾಸ್ತೇ ಜನಾರ್ಧನಃ**

**ವಿಶ್ವರೂಪೇಣ ಸರ್ವತ್ರ ಸರ್ವತ್ರಗೋಹರಿಃ**

ವಿ.ಪು. ಅಧ್ಯಾಯ 2, 50, 51 ನೇ ಶ್ಲೋಕ

# ನಮ್ಮ ಭಾರತದ ವರ್ಣನೆ ಭಾರತದ ಮಹಿಮೆ

### ಭರತ ಭೂಮಿ ನನ್ನ ತಾಯಿ, ನನ್ನ ಪೊರೆವ ತೊಟ್ಟಿಲು

ನಾವೆಲ್ಲಾ ಭಾರತ ಮಾತೆಯ ಪುತ್ರರಾಗಿ ಜನಿಸಿರುವೆವು. ಇದು ನಮ್ಮ ಜನ್ಮ ಜನ್ಮಾಂತರದ ಪುಣ್ಯಕೃತ ಫಲ. ನಾವೇ ಧನ್ಯರು ಎಂದು ನಾವು ಭಾವಿಸಬೇಕಾದುದು ಅತ್ಯವಶ್ಯ. ಇಂತಹ ಪುಣ್ಯಭೂಮಿಯ ವಿಶೇಷತೆಯ ಬಗ್ಗೆ ಪರಾಶರರು ಮೈತ್ರೇಯರಿಗೆ ಹೀಗೆ ವಿವರಿಸಿದ್ದಾರೆ.

ಪರಾಶರ ಉವಾಚ :

**ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್**

**ವರ್ಷ ತದ್ಭಾರತಂ ನಾಮ ಭಾರತೀ ಯತ್ರ ಸಂತತಿಃ**

**ನವಯೋಜನ ಸಾಹಸ್ರೋ ವಿಸ್ತಾರೋಸ್ಯ ಮಹಾಮುನೇ**

**ಕರ್ಮಭೂಮಿರಿಯಂ ಸ್ವರ್ಗಮಪವರ್ಗಂ ಚ ಗಚ್ಛತಾಮ್**

**ಮಹೇಂದ್ರೋ ಮಲಯಃ ಸಹ್ಯಃ ಶುಕ್ತಿಮಾನೃಕ್ಷಪರ್ವತಃ**

**ವಿಂದ್ಯಶ್ಚ ಪಾರಿಯಾತ್ರಶ್ಚ ಸಪ್ತಾತ್ರ ಕುಲಪರ್ವತಾಃ**

**ಅತಃ ಸಂಪ್ರಾಪ್ಯತೇ ಸ್ವಗೋಮುಕ್ತಿಮಸ್ಮಾತ್ಪ್ರಯಾಂತಿವೈ**

**ತಿರ್ಯಕ್ತ್ವಂ ನರಕಂ ಚಾಪಿಯಾಂತ್ಯತಃ ಪುರುಷಾಮುನೇ**

ಇತಃ ಸ್ವರ್ಗಶ್ಚ ಮೋಕ್ಷಶ್ಚ ಮಧ್ಯಂ ಚಾಂತ್ಯಶ್ಚಗಮ್ಯತೇ
ನ ಖಲ್ವನ್ಯತ್ರ ಮರ್ತ್ಯಾನಾಂ ಕರ್ಮಭೂಮೌ ವಿಧೀಯತೇ
ಭಾರತಸ್ಯಾಸ್ಯ ವರ್ಷಸ್ಯ ನವಭೇದಾನ್ನಿಶಾಮಯ
ಇಂದ್ರದ್ವೀಪಃ ಕಸೇರುಶ್ಚ ತಾಮ್ರ ಪರ್ಣೋ ಗಭಸ್ತಿಮಾನ್
ನಾಗರದ್ವೀಪಸ್ತಂಥಾ ಸೌಮ್ಯೋ ಗನ್ಧರ್ವಸ್ತ್ವಥವಾರುಣಃ
ಅಯಂತು ನವಮಸ್ತೇಷಾಂ ದ್ವೀಪಃ ಸಾಗರಸಂವೃತಃ
ಯೋಜನಾನಾಂ ಸಹಸ್ರತು ದ್ವೀಪೋಯಂ ದಕ್ಷಿಣೋತ್ತರಾತ್
ಪೂರ್ವೇ ಕಿರಾತಾ ಯಸ್ಯಾಂತೇ ಪಶ್ಚಿಮೇಯವನಾಃ ಸ್ಥಿತಾಃ
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಮಧ್ಯೇ ಶೂದ್ರಾಶ್ಚ ಭಾಗಶಃ
ಇಜ್ಯಾಯುಧವಣಿಜ್ಯಾದ್ಯೈರ್ವರ್ತಯನ್ತೋವ್ಯವಸ್ಥಿತಾಃ
ಶತದ್ರು ಚಂದ್ರ ಭಾಗಾದ್ಯಾ ಹಿಮ ವತ್ಪಾದ ನಿರ್ಗತಾಃ ।
ವೇದಸ್ಮೃತಿ ಮುಖಾಧ್ಯಾಶ್ಚ ಪಾರಿಯಾತ್ರೋದ್ಭವಾ ಮುನೇ
ನರ್ಮದಾ ಸುರಸಾಧ್ಯಾಶ್ಚ ನದ್ಯೋ ವಿಂದ್ಯಾದ್ರಿ ನಿರ್ಗತಾಃ
ತಾಪೀಪಯೋಸ್ಣೀ ನಿರ್ವಿಂಧ್ಯಾ ಪ್ರಮುಖಾ ಋಕ್ಷಸಂಭವಾ
ಗೋದಾವರೀ ಭೀಮರಥೀ ಕೃಷ್ಣ ವೇಣ್ಯಾದಿಕಾಸ್ತಥಾ
ಸಹ್ಯ ಪಾದೋದ್ಭವಾ ನದ್ಯ ಸ್ಮತಾ ಪಾಪಭಯಾಪಹಾ
ಕೃತಮಾಲಾ ತಾಮ್ರಪರ್ಣೀಪ್ರಮುಖಾಮಲಂಯೋದಭವಾಃ
ತ್ರಿಸಾಮಾ ಚಾರ್ಯ ಕುಲ್ಯಾದ್ಯಾ ಮಹೇಂದ್ರ ಪ್ರಭವಾಃ ಸ್ಮೃತಾ
ಋಷಿಕುಲ್ಯಾ ಕುಮಾರಾಧ್ಯಾಃ ಶುಕ್ತಿ ಮತ್ಪಾದ ಸಂಭವಾಃ
ಅಸಾಂ ನದ್ಯುಪನದ್ಯಶ್ಚ ಸಂತ್ಯಾನ್ಯಾಶ್ಚ ಸಹಸ್ರಶಃ
ತಾಸ್ವಿಮೇ ಕುರು ಪಾಂಚಾಲಾ ಮಧ್ಯೆದೇಶಾದಯೋ ಜನಾಃ
ಪೂರ್ವಾದೇಶಾದಿಕಾಶ್ಚೈವ ಕಾಮರೂಪನಿವಾಸಿನಃ
ಪುಂಡ್ರಾಃ ಕಲಿಂಗಾ ಮಗಧಾ ದಕ್ಷಿಣಾದ್ಯಶ್ಚ ಸರ್ವಶಃ

ತಥಾ ಪರಾಂತಾಃ ಸೌರಾಷ್ಟ್ರಾಃ ಶೂರಾ ಭೀರಾಸ್ತಥಾರ್ಬುದಾಃ
ಕಾರೂಷಾ ಮಲವಾಶ್ಚೈವ ಪಾರಿಯಾತ್ರ ನಿವಾಸಿನಃ
ಸೌವೀರಾಃ ಸೈಂಧವಾ ಹೂಣಾಃ ಸಾಲ್ವಾಃ ಕೋಸಲವಾಸಿನಃ
ಮಾದ್ರಾರಾಮನ್ತಥಾಮ್ಬಷ್ಟಾಃ ಪಾರಸೀಕಾದಯಸ್ತಥಾ
ಅಸಾಂ ಪಿಬಂತಿ ಸಲಿಲಂ ವಸಂತು ಸಹಿತಾಃ ಸದಾ
ಸಮೀಪತೋ ಮಹಾಭಾಗ ಹೃಷ್ಟಪುಷ್ಟಜನಾಕುಲಾಃ
ಚತ್ವಾರಿ ಭಾರತೇವರ್ಷೇ ಯುಗಾನ್ಯತ್ರ ಮಹಾಮುನೇ ।
ಕೃತಂ ತ್ರೇತಾ ದ್ವಾಪರಂಚ ಕಲಿಶ್ಯಾನ್ಯತ್ರ ನ ಕ್ವಚಿತ್
ತಪಸ್ತಪ್ಯಂತಿ ಮುನಯೇ ಜುಹ್ವತೇ ಚಾತ್ರಯಜ್ವಿನಃ
ದಾನಾನಿ ಚಾತ್ರ ದೀಯಂತೇ ಪರಲೋಕಾರ್ಥಮಾದರಾತ್
ಪುರುಷೈರ್ಯಜ್ಞಪುರುಷೋ ಜಂಬೂದ್ವೀಪೇಸದೇಜ್ಯತೇ
ಯಜ್ಞೈ ರ್ಯಜ್ಞಮಯೋ ವಿಷ್ಣೂರನ್ಯದ್ವೀಪೇಷುಚಾನ್ಯಥಾ
ಆತ್ರಾಪಿ ಭಾರತಂ ಶ್ರೇಷ್ಠಂ ಜಂಬೂದ್ವೀಪೇ ಮಹಾಮುನೇ
ಯತೋ ಹಿ ಕರ್ಮಭೂರೇಷಾ ಹ್ಯತೋನ್ಯಾ ಭೋಗ ಭೂಮಯ
ಅತ್ರ ಜನ್ಮ ಸಹಸ್ರಾಣಾಂ ಸಹಸ್ರೈರಪಿ ಸತ್ತಮ
ಕದಾ ಚೀಲ್ಲಭರೇ ಜಂತುರ್ಮಾನುಷ್ಯಂ ಪುಣ್ಯಸಂಚಯಾತ್
ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ತೇ ಭಾರತ ಭೂಮಿಭಾಗೇ
ಸ್ವರ್ಗಾಪವರ್ಗಾ ಸ್ಪದ ಮಾರ್ಗಭೂತೇ
ಭವಂತಿ ಭೂಯಃ ಪುರುಷಾಃ ಸುರತ್ವಾತ್
ಕರ್ಮಾಣ್ಯ ಸಂಕಲ್ಪಿತ ತತ್ಪಲಾನಿ
ಸಂನ್ಯಸ್ಯ ವಿಷ್ಣೌ ಪರಮಾತ್ಮಭೂತೇ
ಅವಾಪ್ಯ ತಾಂ ಕರ್ಮ ಮಹೀಮನಂತೇ

**ತಸ್ಮಿನ್‌ಲಯಂ ಯೇ ತ್ವಮಾಲಾಃ ಪ್ರಯಾಂತಿ**
**ಜಾನೀಮ ನೈತತ್ ಕ್ವ ವಯಂ ವಿಲೀನೇ**
**ಸ್ವರ್ಗಪ್ರದೇ ಕರ್ಮಣಿ ದೇಹಬಂಧಮ್**
**ಪ್ರಾಪ್ಸ್ಯಾಮ ಧನ್ಯಾಃ ಖಲು ತೇ ಮನುಷ್ಯಾ**
**ಯೇ ಭಾರತೇ ನೇಂದ್ರಿಯವಿಪ್ರಹೀನಾ**

(ವಿ.ಪು. ದ್ವಿತೀಯಾಂಶ ಅಧ್ಯಾಯ 3 1ರಿಂದ 26ನೇ ಶ್ಲೋಕ)

ಪ್ರಸ್ತುತ ಈ ಶ್ಲೋಕಗಳಲ್ಲಿ ಭಾರತದ ಪ್ರಾಕೃತಿಕ ವಿಭಜನೆ, ಪ್ರಾಕೃತಿಕ ಸಂಪತ್ತು, ಜನಜೀವನ, ನದಿಪರ್ವತಗಳ ಮಹಿಮೆ ಮುಂತಾದವುಗಳನ್ನು ವಿವರಿಸಿದ್ದಾರೆ.

ಪರಾಶರರು ಭಾರತದ ಬಗ್ಗೆ ಹೀಗೆ ವಿವರಿಸಿದ್ದಾರೆ. ಸಮುದ್ರಕ್ಕೆ ಉತ್ತರದಲ್ಲಿ ಮತ್ತು ಹಿಮಾಲಯದ ದಕ್ಷಿಣದಲ್ಲಿ ಇರುವಂತಹ ದೇಶಕ್ಕೆ ಭರತವರ್ಷವೆಂದು ಹೆಸರು. ಭರತನ ಸಂತತಿ ಇಲ್ಲಿ ನೆಲೆಸಿದೆ. ಇದು ಒಂಭತ್ತು ಸಾವಿರ ಯೋಜನೆಗಳ ವಿಸ್ತಾರ (ಸುತ್ತಳತೆ) ಉಳ್ಳದ್ದು. ಸ್ವರ್ಗವನ್ನಾಗಲೀ, ಮೋಕ್ಷವನ್ನಾಗಲಿ ಸೇರತಕ್ಕವರಿಗೆ ಭಾರತವರ್ಷವು ಕರ್ಮಭೂಮಿಯಾಗಿದೆ. ಮಹೇಂದ್ರ, ಮಲಯ, ಸಹ್ಯ, ಶಕ್ತಿಮಾನ್, ಋಕ್ಷ, ವಿಂಧ್ಯ, ಪಾರಿಯಾತ್ರ – ಇವು ಸಪ್ತಕುಲ ಪರ್ವತಗಳು. ಈ ಕರ್ಮಭೂಮಿಯಿಂದ ಸ್ವರ್ಗವು ಪ್ರಾಪ್ತವಾಗುತ್ತದೆ. ಇಲ್ಲಿಂದಲೇ ಮುಕ್ತಿಯನ್ನೈಸುತ್ತಾರೆ. ತಿರ್ಯಗ್ಯೋನಿಗಳು ನರಕವನ್ನು ಪಡೆಯುವುದೂ ಇಲ್ಲಿಂದಲೇ. ಇಲ್ಲಿಂದ ಅವರವರ ಕರ್ಮಾನುಸಾರವಾಗಿ ಸ್ವರ್ಗ, ಮೋಕ್ಷ, ಅಂತರಿಕ್ಷಲೋಕ, ಪಾತಾಳಾದಿ ಲೋಕಗಳು ಎಲ್ಲವೂ ದೊರೆಯುತ್ತವೆ. ಮಾನವರಿಗೆ ಭಾರತವರ್ಷವನ್ನು ಬಿಟ್ಟು ಬೇರೆ ಎಲ್ಲಿಯೂ ಕರ್ಮವು ವಿಹಿತವಾಗಿಲ್ಲ. ಈ ಭಾರತ ದೇಶದಲ್ಲಿ ಒಂಬತ್ತು ವಿಭಾಗಗಳಿವೆ. ಅವು ಯಾವುವೆಂದರೆ ಇಂದ್ರದ್ವೀಪ, ಕಸೇರು, ತಾಮ್ರಪರ್ಣಿ, ಗಭಸ್ತಿಮಾನ್, ನಗದ್ವೀಪ, ಸೌಮ್ಯ, ಗಂಧರ್ವ, ವಾರುಣ ಅವುಗಳಲ್ಲಿ ಒಂಬತ್ತನೆಯ ದ್ವೀಪವಾದರೋ (ಅಂದರೆ ಸಮಗ್ರ ಭಾರತ ವರ್ಷವನ್ನೇ 9ನೇ ಬೇಧವೆಂದು)ಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ. ಈ

ದ್ವೀಪವು ಅಂದರೆ ಭಾರತವರ್ಷವು ದಕ್ಷಿಣೋತ್ತರವಾಗಿ ಒಂದು ಸಾವಿರ ಯೋಜನವಿದೆ. ಇದರ ಪೂರ್ವದಲ್ಲಿ ಕಿರಾತರೂ, ಪಶ್ಚಿಮದಲ್ಲಿ ಯವನರೂ ವಾಸವಾಗಿದ್ದಾರೆ. ಮಧ್ಯದಲ್ಲಿರತಕ್ಕವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವಿಭಾಗವಾಗಿದ್ದಾರೆ. ಯಜ್ಞ, ಶಸ್ತ್ರಧಾರಣ, ವಾಣಿಜ್ಯ ಮುಂತಾದ ವೃತ್ತಿಗಳನ್ನು ನಡೆಸುತ್ತ ಇವರು ವ್ಯವಸ್ಥಿತವಾಗಿ ಜೀವಿಸುತ್ತಾರೆ. ಶತದ್ರು, ಚಂದ್ರಭಾಗ ಮೊದಲಾದ ನದಿಗಳು ಹಿಮಾಲಯದ ತಪ್ಪಲಿನಿಂದ ಹೊರಟಿವೆ. ವೇದಸ್ಮೃತಿ ಮುಂತಾದ ನದಿಗಳು ಪಾರಿಯಾತ್ರಾ ಪರ್ವತದಿಂದ ಹರಿಯುತ್ತವೆ. ನರ್ಮದಾ, ಸುರಸಾ ಮೊದಲಾದ ನದಿಗಳು ವಿಂಧ್ಯ ಪರ್ವತದಿಂದ ಹುಟ್ಟಿವೆ. ತಾಪೀ, ಪಯೋಷ್ಣೀ, ನಿರ್ವಿಂಧ್ಯಾ ಮೊದಲಾದವು ಋಕ್ಷಗಿರಿ ಸಂಭೂತವಾದವು. ಗೋದಾವರಿ, ಭೀಮರಥೀ, ಕೃಷ್ಣವೇಣಿ, ಮೊದಲಾದವು ಸಹ್ಯಾದ್ರಿಯಿಂದ ಹರಿಯುತ್ತಿರುವ ಪುಣ್ಯನದಿಗಳು. ಕೃತಮೂಲಾ, ತಾಮ್ರಪರ್ಣಿ ಮುಂತಾದವು. ಮಲಯಗಿರಿಯಿಂದ ಹರಿಯುತ್ತಿರುವ ಪುಣ್ಯನದಿಗಳು. ತ್ರಿಸಾಮಾ, ಆರ್ಯ–ಕುಲ್ಯಾ ಮೊದಲಾದವು. ಮಹೇಂದ್ರಗಿರಿಯಿಂದಲೂ, ಋಷಿಕುಲ್ಯಾ ಕುಮಾರ ಮುಂತಾದವು ಶುಕ್ತಿಮತ್ ಪರ್ವತದಿಂದಲೂ ಹುಟ್ಟಿ ಹರಿಯುವ ನದಿಗಳು. ಇವಲ್ಲದೆ ಇತರ ನದಿಗಳು, ಉಪನದಿಗಳೂ ಸಾವಿರಾರು ಇವೆ. ಈ ನದಿತೀರಗಳಲ್ಲಿ ಕುರು, ಪಾಂಚಾಲ, ಮಧ್ಯದೇಶ ನಿವಾಸಿಗಳೂ ಹಾಗೂ ಕಾಮರೂಪ ಮುಂತಾದ ಪೂರ್ವದೇಶವಾಸಿಗಳೂ ಪುಂಡ್ರ, ಕಲಿಂಗ, ಮಗಧ ಮತ್ತಿತರ ದಾಕ್ಷಿಣಾತ್ಯರೂ ಇದ್ದಾರೆ. ಅಪರಾಂತ, ಸೌರಾಷ್ಟ್ರ, ಸೂರ, ಅಭೀರ, ಅರ್ಬುದರೂ ಇದ್ದಾರೆ. ಕಾರೂಷ, ಮಾಲನ, ಪಾರಿಯಾತ್ರ ನಿವಾಸಿಗಳೂ ಸೌವೀರ, ಸೈಂಧವ, ಹೂಣರು, ಸಾಲ್ವರು, ಕೋಸಲವಾಸಿಗಳೂ ಮಾದ್ರ, ಆರಾಮ, ಅಂಬಷ್ಠ, ಪಾರಸೀಕ ಮೊದಲಾದವರೂ ಈ ಭರತಖಂಡದಲ್ಲಿದ್ದಾರೆ. ಇವರೆಲ್ಲರೂ ಪರಸ್ಪರ ಸೌಹಾರ್ದದಿಂದ ನದಿತೀರ ಪ್ರದೇಶಗಳಲ್ಲಿಯೇ ಜೀವನ ನಡೆಸುತ್ತಿದ್ದಾರೆ. ಈ ಜನಪದಗಳಲ್ಲಿ ಇರತಕ್ಕ ಪ್ರಜೆಗಳು ದಷ್ಟಪುಷ್ಟರಾಗಿದ್ದು ಈ ಭಾರತವರ್ಷದಲ್ಲಿ ಮಾತ್ರ ಕೃತ, ತ್ರೇತಾ, ದ್ವಾಪರ, ಕಲಿ– ಎಂಬ ಯುಗಗಳು ಪ್ರವರ್ತಿಸುತ್ತವೆ. ಇವು ಬೇರೆ ಇನ್ನೆಲ್ಲಿಯೂ ಇಲ್ಲ. ಇಲ್ಲಿ ಪರಲೋಕಾರ್ಥವಾಗಿ ನಿಷ್ಠೆಯಿಂದ ಮಹರ್ಷಿಗಳೂ ತಪಸ್ಸನ್ನು ಆಚರಿಸುತ್ತಾರೆ. ಯಾಜಕರು ಯಜ್ಞ ಮಾಡುತ್ತಾರೆ.

ದಾನಿಗಳು ದಾನ ಮಾಡುತ್ತಾರೆ. ಜಂಬೂದ್ವೀಪದಲ್ಲಿ ಯಜ್ಞಪುರುಷನಾದ ವಿಷ್ಣುವು ಯಜ್ಞಾದಿದ್ವಾರಾ ಸದಾಕಾಲವೂ ಆರ್ಜಿಸಲ್ಪಡುತ್ತಾನೆ. ಮೈತ್ರೇಯ ಜಂಬೂದ್ವೀಪವು ಅದರಲ್ಲೂ ಭಾರತವರ್ಷವು ಸರ್ವಶ್ರೇಷ್ಠವಾದುದು. ಏಕೆಂದರೆ ಇದು ಕರ್ಮಭೂಮಿ. ಉಳಿದ ಪ್ರದೇಶಗಳು ಭೋಗಭೂಮಿ. ಯಾವಾಗಲೋ ಒಮ್ಮೆ ಭರತಖಂಡದಲ್ಲಿ ಜೀವಿಗೆ ಮನುಷ್ಯಜನ್ಮ ಬರುತ್ತದೆ.

ದೇವತೆಗಳಿಗಿಂತ ಈ ಮನುಷ್ಯ ಜನ್ಮ ಉತ್ತಮ ಎಂದು ದೇವತೆಗಳೇ ಹಾಡಿಕೊಳ್ಳುತ್ತಾರಂತೆ. ಈ ಕರ್ಮಭೂಮಿಯಲ್ಲಿ ಜನ್ಮವನ್ನು ಪಡೆದು ಫಲಾಪೇಕ್ಷೆಯಿಲ್ಲದ ನಿಷ್ಕಾಮಕರ್ಮಿಗಳಾಗಿ ಪರಮಾತ್ಮನಿಗೆ ತಮ್ಮೆಲ್ಲ ಕರ್ಮಫಲವನ್ನು ಸಮರ್ಪಿಸಿ ನಿರ್ಮಲರಾಗಿ ಅನಂತನಾದ ಭಗವಂತನಲ್ಲಿ ಹೊಂದತಕ್ಕ ಭರತಖಂಡ ನಿವಾಸಿಗಳೇ ಧನ್ಯರು. ನಮಗೆ ಸ್ವರ್ಗವನ್ನು ಕೊಟ್ಟಿರುವ ಈ ಪುಣ್ಯಕರ್ಮವು ಸವೆದಮೇಲೆ ಮತ್ತೆ ಎಲ್ಲಿ ಹುಟ್ಟಿ ದೇಹಬಂಧವನ್ನು ಪಡೆಯುತ್ತವೆಯೋ ನಮಗೆ ಗೊತ್ತಿಲ್ಲ. ಇಂದ್ರಿಯ ಶಕ್ತಿಗಳಿಂದ ಹುಟ್ಟಿದ ಭರತಖಂಡದ ಮನುಷ್ಯರೇ ಧನ್ಯರು ಎಂದು ಮೈತ್ರೇಯರಿಗೆ ಪರಾಶರರು ಭಾರತಭೂಮಿಯ ಈ ಪುಣ್ಯಭೂಮಿಯ ಮಹಿಮೆಯನ್ನು ಹೆಗ್ಗಳಿಕೆಯನ್ನು ವಿಸ್ತಾರವಾಗಿ ಹೇಳಿದ್ದಾರೆ. ಆ ಮಹಾಮುನಿಗಳು ಹೇಳಿರುವ ಒಂದೊಂದು ಮಾತುಗಳೂ ನಮ್ಮ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ. “ಭರತಭೂಮಿ ಕರ್ಮಭೂಮಿ. ಮಿಕ್ಕೆಲ್ಲವೂ ಭೋಗಭೂಮಿ ಎಂದು ಹೇಳಿರುವ ಮಾತು ಶತಷಃ ಸತ್ಯವಾದುದು, ನಮ್ಮ ಭಾರತಾಂಬೆಯ ಪುತ್ರರು ಮಾನವೀಯ ಮೌಲ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾರೆ. ಅಬ್ಬಬ್ಬಾ ! ನಮ್ಮ ಭಾರತದಲ್ಲಿ ಅದೆಷ್ಟು ಜನಾಂಗಗಳು ಇವೆ. ಇವರೆಲ್ಲರೂ ಪರಸ್ಪರ ಸೌಹಾರ್ದದಲ್ಲಿರುವರೆಂದರೆ ಅದೇ ವರಪ್ರಸಾದ. ನಮ್ಮಲ್ಲಿ ಯಾರೂ ಕಂಡು ಕೇಳರಿಯದ ಅದ್ಭೂತಶಕ್ತಿ ನಮ್ಮಲ್ಲಿದೆ ಎಂದು ಜಗತ್ತಿಗೇ ತಿಳಿದಿದೆಯಷ್ಟೇ. ನಿಜವಾಗಿಯೂ ಆ ಭಗವಂತನ ಕೃಪೆಯಿಂದ ಭಾರತೀಯರಾಗಿ ಜನಿಸಿರುವುದೇ ನಾವು ಮಾಡಿರುವ ಪುಣ್ಯಫಲ. ಭಾರತಾಂಬೆಯ ಹಿರಿಮೆಯನ್ನು ಕಾಪಾಡುವ ಮಹೋನ್ನತವಾದ ಜವಾಬ್ದಾರಿ ನಮ್ಮೆಲ್ಲರದಾಗಿರಲಿ, ಭಾರತಾಂಬೆಯನ್ನು ಸರ್ವಶಕ್ತಳನ್ನಾಗಿ ಮಾಡೋಣ. ಇದಕ್ಕಾಗಿ ಆ ಭಾರತಾಂಬೆಯ ಆಶೀರ್ವಾದವನ್ನೇ ನಾವು ಪ್ರಾರ್ಥಿಸೋಣ.

ಮುಂದೆ ಪರಾಶರರು ಪ್ಲಕ್ಷ, ಶಾಲ್ಮಲ ಮುಂತಾದ ದ್ವೀಪಗಳ ಬಗ್ಗೆ ಮೈತ್ರೇಯನ ಬಳಿ ವಿವರಿಸಿದ್ದಾರೆ. ಜಂಬೂದ್ವೀಪವು ಹೇಗೆ ಲವಣ ಸಮುದ್ರದಿಂದ ಆವೃತವಾಗಿದೆಯೋ ಅಂತೆಯೇ ಪ್ಲಕ್ಷದ್ವೀಪವು ಲವಣಸಮುದ್ರದಿಂದ ಆವೃತವಾಗಿದೆ. ಜಂಬೂದ್ವೀಪದ ವಿಸ್ತಾರ ಒಂದು ಲಕ್ಷಯೋಜನ. ಅದರ ಎರಡರಷ್ಟು ಅಂದರೆ ಎರಡು ಲಕ್ಷಯೋಜನ ವಿಸ್ತಾರವುಳ್ಳದ್ದು ಪ್ಲಕದ್ವೀಪ ಎನ್ನುತ್ತಾರೆ. ಆ ದ್ವೀಪಕ್ಕೆ ಒಡೆಯ ಮೇದಾತಿಥಿ ಎಂದು. ಇಲ್ಲಿ ಸೃಷ್ಟಿಕರ್ತನೂ ಸರ್ವೇಶ್ವರನೂ ಆದ ಶ್ರೀಹರಿಯು ಅಲ್ಲಿರುವ ಆರ್ಯಕಾದಿವರ್ಣದವರಿಂದ ಸೋಮರೂಪನಾಗಿ ಅರ್ಚಿಸಲ್ಪಡುತ್ತಾನೆ. ಅಂತೆಯೇ ಶಾಲ್ಮಲಿ ದ್ವೀಪವು ಪ್ಲಕ್ಷದ್ವೀಪವನ್ನು ಆವರಿಸಿದ ಇಕ್ಷು ಸಮುದ್ರಕ್ಕಿಂತ ಎರಡುಪಟ್ಟು ಹೆಚ್ಚಾಗಿರುತ್ತದೆ. ಈ ದ್ವೀಪಗಳು ಅನರ್ಘ್ಯ ರತ್ನಗಳಿಗೆ ಉದ್ಭವಸ್ಥಾನಗಳಾಗಿವೆ.

ಒಟ್ಟಿನಲ್ಲಿ ಅಂಡಾಕಾರದ ಕಟಾಹದಿಂದ ಕೂಡಿದ ಸಮಸ್ತದ್ವೀಪ, ಸಮುದ್ರ, ಪರ್ವತಗಳಿಂದ ಒಡಗೂಡಿದ ಈ ಭೂಮಂಡಲವು ಐವತ್ತು ಕೋಟಿ ಯೋಜನ ವಿಸ್ತಾರವಾದದ್ದು ಎಂದು ಪರಾಶರರು ಹೇಳಿದರು. ಇದರ ಬಗ್ಗೆ ಪಾಶ್ಚಾತ್ಯ ವಿದ್ವಾಂಸರಾದ ವಿಲ್‌ಫೋರ್ಡ್ ಎಂಬುವರು  ಮೇಲೆ ಹೇಳಿರುವ ಸಪ್ತದ್ವೀಪಗಳು ಯಾವುದು ಎಂಬುದನ್ನು  ಊಹಿಸಿದ್ದಾರೆ.

1. ಜಂಬೂದ್ವೀಪ = ಇಂಡಿಯಾ 2. ಕುಶದ್ವೀಪ – ಇಂಡಿಯಾ ಮತ್ತು ಮೆಸಪಟೋಮಿಯಾದ ನಡುವಿನ ಪ್ರದೇಶ 3. ಪ್ಲಕ್ಷದ್ವೀಪ – ಏಷ್ಯಾಮೈನರ್ 4.ಶಾಲ್ಮಲೀದ್ವೀಪ – ಪೂರ್ವಯೂರೋಪ್ 5. ಕ್ರೌಂಚದ್ವೀಪ – ಜರ್ಮನಿ 6. ಶಕದ್ವೀಪ– ಬ್ರಿಟಿಷ್ ದ್ವೀಪಗಳು 7. ಪುಷ್ಕರದ್ವೀಪ – ಐಸ್‌ಲ್ಯಾಂಡ್

ಹೀಗೆ ಇಡೀ ಭೂಮಂಡಲದ ರಚನೆ ಸುತ್ತಳತೆ ವಿಸ್ತೀರ್ಣ ಹೇಗೆ ಆಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ತಿಳಿದುಕೊಂಡ ನಂತರ ನಾವು ಸಪ್ತ ಪಾತಾಳಗಳ ಬಗ್ಗೆ ತಿಳಿಯೋಣ ಎಂದು ಪರಾಶರರು ಮೈತ್ರೇಯರಿಗೆ ಹೇಳುತ್ತಾರೆ. ಪಾತಾಳ ಲೋಕಗಳೂ ಸಹ ಏಳು ಇವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಅವು ಯಾವುವೆಂದರೆ:– 1) ಅತಳ 2) ವಿತಳ 3) ನಿತಳ 4) ಗಭಸ್ತಿಮಾನ್ 5) ಮಹಾತಳ 6) ಸುತಳ 7) ಪಾತಾಳ

ಅವುಗಳ ನೆಲಗಳು ಬಿಳುಪು, ಕಪ್ಪು, ಕೆಂಪು, ಹಳದಿ ಬಣ್ಣದವುಗಳಾಗಿವೆ. ಕೆಲವು ನೆಲಗಳು ಮರಳು, ಕಲ್ಲು, ಸುವರ್ಣಮಯವಾಗಿವೆ. ಉತ್ತಮವಾದ ಎತ್ತರವಾದ ಪ್ರಾಸಾದಗಳು ಅಲ್ಲಿವೆ. ಅವುಗಳಲ್ಲಿ ದೈತ್ಯದಾನವರೂ ಯಕ್ಷರು, ನಾಗಜಾತಿಯವರೂ ವಾಸಿಸುತ್ತಾರೆ. ಈ ಸಪ್ತ ಪಾತಾಳಗಳ ಕೆಳಗೆ ವಿಷ್ಣುವಿನ ತಮೋಮಯವಾದ 'ಶೇಷ' ಎಂಬ ಶರೀರವಿದೆ. ದೇವ, ಋಷಿಗಳಿಂದ ಪೂಜಿತನಾದ ಈ ಸ್ವಾಮಿಯನ್ನು 'ಅನಂತ' ಎಂದು ಸಿದ್ಧಪುರುಷರು ಕರೆಯುತ್ತಾರೆ. ಆತನು ಸಾವಿರ ಫಣಾಮಣಿಗಳಿಂದ ದಿಕ್ಕುಗಳನ್ನು ಬೆಳಗಿಸುತ್ತಾ ಲೋಕಹಿತಕ್ಕಾಗಿ ಎಲ್ಲ ಅಸುರರ ಪರಾಕ್ರಮಗಳನ್ನು ಅಡಗಿಸುತ್ತಾನೆ. ಪುರಾಣಋಷಿಯಾದ ಗರ್ಗನು ಈ ಆದಿಶೇಷನನ್ನು ಆರಾಧಿಸಿ ನಕ್ಷತ್ರಾದಿ ಜ್ಯೋತಿಮಂಡಲದ ತತ್ವವನ್ನು, ಶಕುನಗಳಿಂದಾಗುವ ಸಕಲಫಲವನ್ನು ಅರಿತುಕೊಂಡನು. ಅಂತಹ ನಾಗಶ್ರೇಷ್ಠನಾದ ಆದಿಶೇಷನಿಂದ ಈ ಪೃಥ್ವಿಯು ಧರಿಸಲ್ಪಟ್ಟಿದೆ.

**ಯಮಾರಾಧ್ಯ ಪುರಾಣರ್ಷಿರ್ಗರ್ಗೋ ಜ್ಯೋತೀಂಷಿ ತತ್ವತಃ**

**ಜ್ಞಾತವಾನ್‌ಸಕಲಂ ಚೈವ ನಿಮಿತ್ತ ಪಠಿತಂಪಲಮ್**

**ತೇನೇಯಂ ನಾಗವರ್ಯೇಣ ಶಿರಸಾ ವಿಧೃತಾಮಹೀ**

**ಬಿಭರ್ತಿ ಮಾಲಾಂ ಲೋಕಾನಾಂ ಸ ದೇವಾ ಸುರಮಾನುಷಾಮ**

(ವಿ.ಪು. ಅಧ್ಯಾಯ 5, 26,27ನೇ ಪದ್ಯ)

ಆದಿಶೇಷನಿಂದ ಈ ಭೂಮಂಡಲವು ಧರಿಸಲ್ಪಟ್ಟಿದೆ. ದೇವಾಸುರ ಮನುಷ್ಯರ ಸಹಿತವಾದ ಲೋಕಗಳ ಮಾಲೆಯನ್ನು ಆತನು ಧರಿಸಿದ್ದಾನೆ. ಅಂತಹ ಅನಂತನಿಗೆ ಅನಂತಾನಂತ ನಮಸ್ಕಾರಗಳು.

ನರಕಗಳ ವರ್ಣನೆ – ನರಕಯಾತನೆ ಇವು ಭೂಮಿಯ ಮತ್ತು ಜಲದ ಕೆಳಗೆ ಇರುತ್ತವೆ, ಪಾಪಿಗಳು ಈ ನರಕಗಳಿಗೆ ತಳ್ಳಲ್ಪಡುತ್ತಾರೆ ಎಂಬ

ನಂಬಿಕೆ ಇಂದಿಗೂ ಇದೆ. ನರಕಗಳು ಅನೇಕ ಇವೆ. ರೌರವ, ಸೂಕರ, ರೋಧ, ತಾಲ, ವಿಶಸನ, ಮಹಾಜ್ವಾಲಾ, ತಪ್ತಕುಂಭ, ಲವಣ, ವಿಲೋಹಿತ, ರುಧಿರಾಂಭಸ್, ವೈತರಣಿ, ಕ್ರಮೀಶ, ಕೃಮಿಭೋಜನ, ಅಸಿಪತ್ರವನ, ಕೃಷ್ಣ, ಲಾಲಾಭಕ್ಷ, ದಾರುಣ, ಪೂಯವಹ, ಪಾಪ, ವಹ್ನಿಜ್ವಾಲ, ಅದಃ ಶಿರಸ್, ಸಂದಂಶ, ಕಾಲಸೂತ್ರ ತಮಸ್, ಆವೀಚಿ, ಶ್ವಭೋಜನ, ಅಪ್ರತಿಷ್ಠ, ಅಪ್ರಚಿ ಮುಂತಾದ ಅನೇಕ ಭೀಕರವಾದ ನರಕಗಳು ಇವೆ. ಇವು ಯಮರಾಜನ ಅಧೀನದಲ್ಲಿದ್ದು ಶತ್ರುಭಯ ಅಗ್ನಿಭಯಗಳನ್ನು ನೀಡುವ ಘೋರವಾದ ನರಕಗಳು ಇವೆ. ಪಾಪಕರ್ಮಗಳಾದ ಜನರು ಇವುಗಳಲ್ಲಿ ಬೀಳುತ್ತಾರೆ. ಮನುಷ್ಯನು ಪಾಪಕರ್ಮಗಳನ್ನು ಮಾಡಿ ಅದಕ್ಕೆ ತಕ್ಕಂತೆ ನರಕಯಾತನೆಯನ್ನು ಅನುಭವಿಸುತ್ತಾನೆ. ಆದ್ದರಿಂದ ಒಂದು ವೇಳೆ ತಾನು ಮಾಡಿದ ಪಾಪಕೃತ್ಯದ ಬಗ್ಗೆ ಪಶ್ಚಾತ್ತಾಪಪಟ್ಟರೆ ಮುಂದೆ ಸದ್ಭಾವದಿಂದ ಇದ್ದರೆ, ಸತ್ಕರ್ಮಗಳನ್ನು ಮಾಡಿದರೆ ಪಾಪಗಳನ್ನು ಕ್ಷಯಿಸಿಕೊಳ್ಳುತ್ತಾನೆ.

**ಪ್ರಾಯಶ್ಚಿತ್ತಾನ್ಯಶೇಷಾಣಿ ತಪಃ ಕರ್ಮಾತ್ಮಕಾನಿವೈ**

**ಯಾನಿ ತೇಷಾಮಶೇಷಾಣಾಂ ಕೃಷ್ಣಾನುಸ್ಮರಣಮ್‌ಪರಮ್**

**ಕೃತೇ ಪಾಪೇನುತಾಪೋ ವೈಯಸ್ಯ ಪುಂಸಃ ಪ್ರಜಾಯತೇ**

**ಪ್ರಾಯಶ್ಚಿತ್ತಂ ತುತಸ್ಯೈಕಂ ಹರಿಸಂಸ್ಮರಣಂ ಪರಮ್**

**ಪ್ರಾತರ್ನಿಶಿ ತಥಾಸಂಧ್ಯಾ ಮಧ್ಯಾಹ್ನಾದಿಷು ಸಂಸ್ಮರನ್**

**ನಾರಾಯಣ ಮವಾಪ್ನೋತಿ ಸಧ್ಯಃ ಪಾಪಕ್ಷಯಾನ್ನರ**

**ವಿಷ್ಣುಸಂಸ್ಮರಣಾತ್ ಕ್ಷೀಣಸಮಸ್ತಕ್ಲೇಶಸಂಚಯಃ**

**ಮುಕ್ತಿಂ ಪ್ರಯಾತಿ ಸ್ವರ್ಗಾಪ್ತಿಸ್ತಸ್ಯವಿಘ್ನೋನುಮೀಯತೇ**

(ವಿ.ಪು. ದ್ವಿತೀಯಾಂಶ ಅಧ್ಯಾ 6 ಶ್ಲೋಕ 37ರಿಂದ 40)

ತಪೋರೂಪವಾದ ಮತ್ತು ಕರ್ಮರೂಪವಾದ ಎಲ್ಲ ಪ್ರಾಯಶ್ಚಿತ್ತಗಳಿಗಿಂತಲೂ ಶ್ರೀ ಕೃಷ್ಣನ ಸ್ಮರಣೆಯೇ ಅತ್ಯಂತ ಶ್ರೇಷ್ಠವಾದ ಪ್ರಾಯಶ್ಚಿತ್ತ, ಪ್ರಾತಃಕಾಲ, ಸಾಯಂಕಾಲ, ಮಧ್ಯಾಹ್ನ, ರಾತ್ರಿ ಹೀಗೆ ಎಲ್ಲಾ ಕಾಲಗಳಲ್ಲಿಯೂ ಶ್ರೀಮನ್ನಾರಾಯಣನನ್ನು ಧ್ಯಾನಮಾಡುತ್ತಾನೋ ಅವನು

ಅತಿ ಶೀಘ್ರವಾಗಿ ಪಾಪಗಳನ್ನು ಕ್ಷಯಿಸಿಕೊಳ್ಳುತ್ತಾನೆ. ವಿಷ್ಣುವಿನ ಸ್ಮರಣೆಯಿಂದ ಸಕಲ ಪಾಪಸಂಚಯವು ನಾಶವಾಗಿ ಮನುಷ್ಯ ಮೋಕ್ಷವನ್ನೈದುತ್ತಾನೆ.

**ಮನಪ್ರೀತಿಕರಃ ಸ್ವರ್ಗೋ ನರಕಸ್ತದ್ವಿಪರ್ಯಯಃ**
**ನರಕಸ್ವರ್ಗಸಂಜ್ಞೋವೈ ಪಾಪಪುಣ್ಯೇ ದ್ವಿಜೋತ್ತಮ**
**ವಸ್ತ್ವೇಕ ಮೇವ ದುಃಖಾಯ ಸುಖಾಯೇಷ್ಯಾರ್ಗಮಾಯಚ**
**ಕೋಪಾಯ ಚ ಯತಸ್ತಸ್ಮಾದ್ವಸ್ತು ವಸ್ತ್ವಾತ್ಮಕಂಕೃತಃ**

**ತದೇವ ಪ್ರೀತಯೇ ಭೂತ್ವಾ ಪುನರ್ದುಃಖಾಯ ಜಾಯತೇ**
**ದೇವ ಕೋಪಾಯಯತಃ ಪ್ರಸಾದಾಯಚ ಜಾಯತೇ ॥ ಟ**

**ತಸ್ಮಾದ್ ದುಃಖಾತ್ಮಕಂನಾಸ್ತಿನ ಚಕಿಂಚಿತ್ ಸುಖಾತ್ಮಕಂ**
**ಮನಸಃ ಪರಿಣಾಮೋಯಂ ಸುಖದುಃಖಾದಿ ಲಕ್ಷಣಃ**

**ಜ್ಞಾನಮೇನಂ ಪರಂ ಬ್ರಹ್ಮ ಜ್ಞಾನಂ ಬಂಧಾಯ ಚೇಷ್ಯತೇ**
**ಜ್ಞಾನಾತ್ಮಕಮಿದಂ ವಿಶ್ವಂ ನ ಜ್ಞಾನಾದ್ವಿದ್ಯತೇಪರಮ್**
**ವಿದ್ಯಾ ವಿದ್ಯೇತಿ ಮೈತ್ರೇಯ ಜ್ಞಾನ ಮೇವೋಪಧಾರಯ**

(ವಿ. ಪು. ದ್ವಿತೀಯಾಂಶ ಅ.6, 44ರಿಂದ 49)

ಮನಸ್ಸಿಗೆ ಸಂತೋಷಕರವಾದದ್ದೆ ಸ್ವರ್ಗ. ಅದಕ್ಕೆ ವಿರುದ್ಧವಾದದ್ದು ದುಃಖಕರವಾದದ್ದೇ ನರಕ. ಪಾಪಕ್ಕೆ ನರಕವೆಂದೂ, ಪುಣ್ಯಕ್ಕೆ ಸ್ವರ್ಗವೆಂದೇನೋ ಹೆಸರಿದೆ. ಒಂದೇ ಪದಾರ್ಥವು ಸುಖಕ್ಕೂ ಕಾರಣವಾಗುತ್ತದೆ. ದುಃಖ, ಅಸೂಯೆ, ಕೋಪಗಳಿಗೂ ಕಾರಣವಾಗುತ್ತದೆ. ಹೀಗಿರುವಾಗ ಯಾವ ಪದಾರ್ಥ ಈ ಪ್ರಪಂಚದಲ್ಲಿ ನಿಯತ ಸ್ವಭಾವವುಳ್ಳದಾಗಿರುತ್ತದೆ. ಅದೇ ಪ್ರೀತಿಗೆ ಕಾರಣವಾಗಿದ್ದು ಮತ್ತೆ ದುಃಖಕ್ಕೆ ಕಾರಣವಾಗುತ್ತದೆ. ಅದೇ ವಸ್ತು ಕೋಪಕ್ಕೆ ಕಾರಣವಾಗುತ್ತದೆ. ಮತ್ತೆ ಅದೇ ಪ್ರಸನ್ನತೇಗೂ

ಕಾರಣವಾಗುತ್ತದೆ. ಆದ್ದರಿಂದ ಎಲೈ ಮೈತ್ರೇಯ ಸುಖಾತ್ಮಕವಾದ ವಸ್ತುವಾಗಲಿ, ದುಃಖಾತ್ಮಕವಾದ ವಸ್ತು ಯಾವುದೂ ಈ ಪ್ರಪಂಚದಲಿಲ್ಲ. ಸುಖದುಃಖಾದಿಗಳೆಂಬುದೆಲ್ಲ ಕೇವಲ ಮನಸ್ಸಿನ ಪರಿಣಾಮ. ಮನಮೇವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋ ಎಲ್ಲದಕ್ಕೂ ಮನಸ್ಸೇ ಕಾರಣ. ಜ್ಞಾನವೇ ಪರಬ್ರಹ್ಮ ಜ್ಞಾನಾತ್ಮಕವಾದ ಪರಬ್ರಹ್ಮನೇ ಪರಮಾರ್ಥ ಅವಿದ್ಯೋಪಾದಿಯಿಂದಾಗಿ ಜ್ಞಾನವೇ ಸಂಸಾರ ಬಂಧನಕ್ಕೆ ಕಾರಣ. ಈ ವಿಶ್ವವು ಬರಿಯ ಜ್ಞಾನಾತ್ಮಕವಾದದ್ದು. ಜ್ಞಾನಕ್ಕಿಂತ ಬೇರೆಯಾದದ್ದು ಈ ಪ್ರಪಂಚದಲ್ಲಿ ಮತ್ತಾವುದೂ ಇಲ್ಲ. ವಿದ್ಯೆ, ಅವಿದ್ಯೆಗಳು, ಜ್ಞಾನವೇ ಎಂದು ಪರಾಶರರು ಮೈತ್ರೇಯರಿಗೆ ಜ್ಞಾನದ ವಿಶೇಷತೆಯನ್ನು ಸ್ಪಷ್ಟಪಡಿಸಿದ್ದಾರೆ. ಹೀಗೆ ಅಧೋಲೋಕದ ಬಗ್ಗೆಯೂ ಮೈತ್ರೇಯರು ಪರಾಶರರ ಬಳಿ ಕೇಳಿ ತಿಳಿದುಕೊಂಡರು.

ಊರ್ಧ್ವಲೋಕಗಳು – ವಿಷ್ಣುವೇ ವಿಶ್ವಕಾರಣ ಮುಂದೆ ಮೈತ್ರೇಯರು ಪರಾಶರರ ಬಳಿ ಊರ್ಧ್ವಲೋಕಗಳ ಬಗ್ಗೆ ತಿಳಿಯಲು ಇಚ್ಛಿಸಿದರು. ಪರಾಶರರು ಅವುಗಳನ್ನು ವಿವರಿಸತೊಡಗಿದರು. ಊರ್ಧ್ವಲೋಕಗಳು ಅಂದರೆ ಮೇಲಿರುವ ಲೋಕಗಳೂ ಸಹ ಏಳು ಇವೆ.

**ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹಾಲೋಕ, ಜನರ್ಲೋಕ, ಸತ್ಯಲೋಕ**

**ರವಿ ಚಂದ್ರಮಸೋರ್ಯಾವನ್ಮಯೂಖೈ ದಿವ ಭಾಸ್ಯತೇ**
**ಯಾವತ್ ಪ್ರಮಾಣಾ ಪಥಿವೀ ವಿಸ್ತಾರಪರಿಮಡಲಾತ್ ।**
**ನಭಸ್ತಾವತ್ ಪ್ರಮಾಣಂ ವೈ ವ್ಯಾಸಮಂಡಲತೋದ್ವಿಜ ॥**

(ವಿ.ಪು. ಅಧ್ಯಾಯ 7, 3–4ನೇ ಶ್ಲೋಕ)

ಸೂರ್ಯ ಚಂದ್ರರ ಕಿರಣಗಳು ಎಷ್ಟು ದೂರದವರೆಗೆ ಪ್ರಕಾಶಿಸುತ್ತದೆಯೋ ಅಷ್ಟು ದೂರದವರೆಗೆ ಸಮುದ್ರ, ನದೀ, ಪರ್ವತಗಳಿಂದ ಕೂಡಿದ ಪ್ರದೇಶವು ಪೃಥ್ವಿಯೆನಿಸಿದೆ ಅಂದರೆ ಭೂಲೋಕ ಎಂದೆನಿಸಿಕೊಂಡಿದೆ.

ಪೃಥ್ವಿಯು ಎಷ್ಟು ಅಗಲ ಸುತ್ತಳತೆಗಳುಳ್ಳದ್ದೋ ಮೇಲೆ ಅಷ್ಟೊ ದೂರದ ಆಕಾಶ ಪ್ರದೇಶವು ಭುವರ್ಲೋಕ ಎನಿಸಿಕೊಳ್ಳುತ್ತದೆ. ಭೂಮಿಗೆ ಲಕ್ಷ ಯೋಜನ ದೂರದಲ್ಲಿ ಸೂರ್ಯಮಂಡಲವಿದೆ. ಸೂರ್ಯನಿಂದ ಲಕ್ಷ ಯೋಜನ ದೂರದಲ್ಲಿ ಚಂದ್ರಮಂಡಲವಿದೆ. ಚಂದ್ರನಿಂದ ಒಂದು ಲಕ್ಷ ಯೋಜನ ದೂರದಲ್ಲಿ ಮೇಲ್ಗಡೆ ನಕ್ಷತ್ರ ಮಂಡಲವು ಪ್ರಕಾಶಿಸುತ್ತದೆ. ನಕ್ಷತ್ರ ಮಂಡಲದಿಂದ ಎರಡುಲಕ್ಷ ಯೋಜನದಲ್ಲಿ ಬುಧನೂ ಅವನಿಂದ ಎರಡು ಲಕ್ಷ ಯೋಜನದಲ್ಲಿ ಶುಕ್ರನೂ ಇದ್ದಾನೆ. ಶುಕ್ರನಿಂದ ಎರಡು ಲಕ್ಷ ಯೋಜನದಲ್ಲಿ ಅಂಗಾರಕನೂ, ಅವನಿಂದ ಎರಡು ಲಕ್ಷ ಯೋಜನದ ದೂರದಲ್ಲಿ ದೇವಪುರೋಹಿತನಾದ ಗುರು (ಬೃಹಸ್ಪತಿ)ಯು ಇದ್ದಾರೆ. ಬೃಹಸ್ಪತಿಯಿಂದ ಎರಡು ಲಕ್ಷ ಯೋಜನದ ಮೇಲೆ ಶನಿ ಇದ್ದಾನೆ. ಶನಿಗೆ ಒಂದು ಲಕ್ಷ ಯೋಜನ ದೂರದಲ್ಲಿ ಸಪ್ತರ್ಷಿಮಂಡಲವಿದೆ. ಸಪ್ತರ್ಷಿ ಮಂಡಲಕ್ಕೆ ಒಂದು ಲಕ್ಷ ಯೋಜನದ ಮೇಲೆ ಎಲ್ಲ ಜ್ಯೋತಿಶ್ಚಕ್ರಕ್ಕೂ ನಾಭಿಸ್ಥಾನವಾಗಿ ಧ್ರುವನಿದ್ದಾನೆ. ಹದಿನಾಲ್ಕು ಲಕ್ಷ ಯೋಜನ ವಿಸ್ತಾರವಾದ ಸ್ವರ್ಲೋಕವೆಂದು ಕರೆಯುತ್ತಾರೆ. ಇವರು ಲೋಕಸ್ಥಿತಿಯನ್ನು ಚಿಂತಿಸುವವರೆಂದು ಹೇಳಿದ್ದಾರೆ.

ಇವೆಲ್ಲವೂ ಯಜ್ಞದ ಫಲರೂಪವಾದದ್ದು. ಅಂದರೆ ಯಜ್ಞ ಮಾಡಿಯೇ ಇವರ ಕೃಪೆಗೆ ಪಾತ್ರರಾಗಬಹುದು. ಈ ಯಜ್ಞವಾದರೋ ನಮ್ಮ ಭಾರತವರ್ಷದಲ್ಲಿ ಪ್ರತಿಷ್ಠಿತವಾಗಿದೆ. ಧ್ರುವನಿಂದ ಒಂದು ಕೋಟಿ ಯೋಜನ ಊರ್ಧ್ವದಲ್ಲಿ ಮಹರ್ಲೋಕವಿದೆ. ಅಲ್ಲಿರುವ ಋಷಿಗಳು ಒಂದು ಕಲ್ಪದವರೆಗೆ (ಅಂದರೆ ಬ್ರಹ್ಮನ ಒಂದು ಹಗಲು) ಜೀವಿಸುತ್ತಾರೆ. ಅಲ್ಲಿಂದ ಎರಡು ಕೋಟಿ ಯೋಜನೆಗಳ ಎತ್ತರದಲ್ಲಿ ಜನರ್ಲೋಕವಿದೆ. ಅಲ್ಲಿ ಬ್ರಹ್ಮನ ಪುತ್ರರಾದ ಪರಿಶುದ್ಧಾತ್ಮರಾದ ಸನಕ ಸನಂದಾದಿಗಳು ವಾಸಿಸುತ್ತಾರೆ. ಜನರ್ಲೋಕದಿಂದ ನಾಲ್ಕರಷ್ಟು ಅಂದರೆ ಎಂಟು ಕೋಟಿ ಯೋಜನದ ಎತ್ತರದಲ್ಲಿ ತಪೋಲೋಕವಿದೆ. ಅಲ್ಲಿ ತಾಪವರ್ಜಿತರಾದ ವೈರಾಜರೆಂಬ ದೇವತೆಗಳು ಇದ್ದಾರೆ. ತಪೋಲೋಕದಿಂದ ಆರರಷ್ಟು ಎಂದರೆ ಹನ್ನೆರಡು ಕೋಟಿ ಯೋಜನಗಳ ಊರ್ಧ್ವದಲ್ಲಿ ಸತ್ಯಲೋಕವು ಇದೆ. ಇದನ್ನೇ ಬ್ರಹ್ಮಲೋಕವೆಂದೂ ಹೇಳುವರು.

ಈ ಏಳು ಲೋಕಗಳಲ್ಲಿ ಭೂಲೋಕ, ಭುವರ್ಲೋಕ, ಸುವರ್ಲೋಕಗಳು ಕೃತಕವೆಂದು ಹೇಳಲ್ಪಡುತ್ತವೆ. ಅಂತೆಯೇ ಜನಲೋಕ, ಮಹಾಲೋಕ, ಸತ್ಯಲೋಕ ಇವು ಮೂರು ಅಕೃತಕವೆಂದು ಹೇಳಲ್ಪಟ್ಟಿದೆ.

ಈ ಕೃತಕ ಮತ್ತು ಅಕೃತಕ ಲೋಕತ್ರಯಗಳ ನಡುವೆ ಮಹರ್ಲೋಕವಿದೆ. ಕಲ್ಪಾಂತದಲ್ಲಿ ಇದು ಜನಶೂನ್ಯವಾಗುತ್ತದೆಯೇ ಹೊರತು ನಾಶವಾಗುವುದಿಲ್ಲ.

**ಏತದಂಡಕಟಾಹೇನ ತಿರ್ಯಕ್ ಚೋರ್ಧ್ವಮದಸ್ತಥಾ**

**ಕಪಿತ್ಥಸ್ಯ ಯಥಾ ಬೀಜಂ ಸರ್ವತೋ ವೈಸಮಾವೃತಮ್**

(ವಿ.ಪು. ಅಧ್ಯಾಯ 7 ದ್ವಿ. 22ನೇಶ್ಲೋಕ )

ಬೇಲದ ಹಣ್ಣಿನ ಬೀಜವು ಸುತ್ತಲೂ ಹಣ್ಣಿನ ಸಿಪ್ಪೆಯಿಂದ ಆವರಿಸಲ್ಪಟ್ಟಿರುವಂತೆ, ಬ್ರಹ್ಮಾಂಡವು ಅಡ್ಡಲಾಗಿ ಮೇಲೆ ಕೆಳಗೆ ಎಲ್ಲೆಡೆಯೂ ಅಂಡಕಟಾಹುವಿನಿಂದ (ಅಂದರೆ ಅನಂತ ಬ್ರಹ್ಮಾಂಡಗಳನ್ನೊಳಗೊಂಡ ವಿಶ್ವಕಟಾಹ) ಸುತ್ತುವರೆಯಲ್ಪಟ್ಟಿದೆ.

ಈ ಬ್ರಹ್ಮಾಂಡದ ಹತ್ತರಷ್ಟು ಪ್ರಮಾಣ ಜಲದಿಂದ ಆವೃತವಾಗಿದೆ. ಆ ಜಲವು ಹೊರಗೆ ಅಗ್ನಿಯಿಂದ ಆವೃತವಾಗಿದೆ. ಅಗ್ನಿಯು ವಾಯುವಿನಿಂದ, ವಾಯು ಆಕಾಶದಿಂದ, ಆಕಾಶವು ಭೂತಾದಿಯಾದ ಅಹಂಕಾರ ತತ್ವದಿಂದ, ಅಹಂಕಾರತತ್ವವು ಮಹತತ್ವದಿಂದ ಸುತ್ತುವರೆಯಲ್ಪಟ್ಟಿದೆ. ಬ್ರಹ್ಮಾಂಡದಿಂದ ಹಿಡಿದು ಮಹತತ್ವದವರೆಗಿನ ಈ ಏಳು ಪದಾರ್ಥಗಳು ಸುಮಾರು ಹತ್ತರಷ್ಟು ಅಧಿಕವಾಗಿದೆ. ಮಹತ್ತನ್ನು ಪ್ರಧಾನವು ಆವರಿಸಿಕೊಂಡಿದೆ. ಅನಂತವಾದ ಪ್ರಧಾನಕ್ಕೆ ಅಂತವಿಲ್ಲ ಇದು ಅಸಂಖ್ಯೆಯ ಪರಿಮಾಣ ರಹಿತವೂ ಆಗಿದೆ. ಇದು ಅಶೇಷ ಜಗತ್ತಿಗೆ ಕಾರಣವಾಗಿ ಪರಾ ಪ್ರಕೃತಿಯೆನಿಸಿಕೊಂಡಿದೆ.

**ಹೇತುಭೂತಮಶೇಷಸ್ಯ ಪ್ರಕೃತಿಃ ಸಾಪರಾಮುನೇ**

**ಅಂಡಾನಾಂ ತು ಸಹಸ್ರಾಣಾಂ ಸಹಸ್ರಾಣ್ಯಯುತಾನಿ ಚ**

**ಈ ದೃಶಾನಾಂ  ತಥಾ ತತ್ರ ಕೋಟಿಕೋಟಿ ಶತಾನಿಚ**
**ದಾರುಣ್ಯಗ್ನಿರ್ಯಥಾ ತೈಲಂ ತಿಲೇ ತದ್ವತ್ ಪ್ರಮಾನಪಿ**

**ಪ್ರಧಾನೇವಸ್ಥಿತೋ ವ್ಯಾಪೀ ಚೇತನಾತ್ಮಾತ್ಮ ವೇದನಃ**
**ಪ್ರಧಾನಂ ಚ ಪುಮಾಂಶ್ಚೈವ ಸರ್ವಭೂತಾತ್ಮಭೂತಯಾ**

**ವಿಷ್ಣುಶಕ್ತ್ಯಾ ಮಹಾಬುದ್ಧೇ ವೃತೌ ಸಂಶ್ರಯಧರ್ಮಿಣೌ**
**ತಯೋಃ ಸೈವ ಪಥಗ್ಭಾವ ಕಾರಣಂ ಸಂಶ್ರಯಸ್ಯ ಚ**

(ವಿ.ಪು.ಅಧ್ಯಾಯ.7  27ರಿಂದ  30ನೇ  ಶ್ಲೋಕ)

ಈ ಪ್ರಧಾನದಲ್ಲಿ ಸಾವಿರ ಹತ್ತು ಸಾವಿರಕೋಟಿ ಬ್ರಹ್ಮಾಂಡಗಳೇ ಇರುತ್ತವೆ. ಕಟ್ಟಿಗೆಯಲ್ಲಿ ಬೆಂಕಿಯೂ, ಎಳ್ಳಿನಲ್ಲಿ ಎಣ್ಣೆಯೂ ಇರುವಂತೆ ಪ್ರಧಾನದಲ್ಲಿ ಪುರುಷನಿದ್ದಾನೆ. ಪ್ರಧಾನದಲ್ಲಿರುವ ಪುರುಷನು (ಆತ್ಮನು) ವ್ಯಾಪಕನೂ ಚೇತನನೂ ಸ್ವಯಂ ಪ್ರಕಾಶಕನೂ ಆಗಿದ್ದಾನೆ. ಪ್ರಕೃತಿಪುರುಷ ಇವರಿಬ್ಬರೂ ಸರ್ವ ಭೂತಾತ್ಮಕವಾದ ವಿಷ್ಣುಶಕ್ತಿಯಿಂದ ವ್ಯಾಪ್ತರಾಗಿದ್ದಾರೆ. ಆ ಪ್ರಕೃತಿ – ಪುರುಷರು ಅನ್ಯೋನ್ಯವಾಗಿ ಸೇರಿಕೊಳ್ಳುವ ಸಂಯೋಗಕ್ಕಾಗಲೀ, ವಿಯೋಗಕ್ಕಾಗಲೀ ವಿಷ್ಣುಶಕ್ತಿಯೇ ನಿಮಿತ್ತ. ನಾವು ಕಲಿತುಕೊಳ್ಳಲೇಬೇಕಾದ ಶ್ಲೋಕಗಳು.

## ಏಕಶ್ಲೋಕಿ  ರಾಮಾಯಣಂ

**ಪೂರ್ವಂ ರಾಮ ತಪೋ ವನಾದಿಗಮನಂ ಹತ್ವಾ ಮೃಗಂ ಕಾಂಚನಂ ವೈದೇಹಿ ಹರಣಂ**
**ಜಟಾಯು ಮರಣಂ ಸುಗ್ರೀವ ಸಂಭಾಷಣಮ್ ವಾಲೀ ನಿಗ್ರಹಣಮ್ ಸಮುದ್ರ ತರಣಂ**
**ಲಂಕಾಪುರೀ ದಾಹನಂ ಪಶ್ಚಾದ್ರಾವಣ ಕುಂಭಕರ್ಣಮಥನಂ ಏತದ್ಧಿ ರಾಮಾಯಣಮ್**

## ಏಕಶ್ಲೋಕಿ ಮಹಾಭಾರತಂ

ಆದೌಪಾಂಡವ ಧಾರ್ತರಾಷ್ಟ್ರ ಜನನಂ ಲಾಕ್ಷಾಗೃಹೇದಾಹನಂ
ದ್ಯೂತೇಶ್ರೀಹರಣಂ ವನೇ ವಿಹರಣಂ ಮತ್ಸ್ಯಾಲಯೇ ವರ್ಧನಮ್
ಲೀಲಾಗೋಗ್ರಹಣಂ ರಣೇ ವಿತರಣಂ ಸಂಧೀಕ್ರಿಯಾ ಜೃಂಭಣಮ್
ಭೀಷ್ಮ ದ್ರೋಣ ಸುಯೋಧನಾದಿ ಮಥನಂ ಏತನ್ಮಹಾಭಾರತಮ್

## ಏಕಶ್ಲೋಕಿ ಭಾಗವತಂ

ಆದೌ ದೇವಕೀ ದೇವಿಗರ್ಭಜನನಂ ಗೋಪಿಗೃಹೇ ವರ್ಧನಂ
ಮಾಯಾ ಪೂತನೀ ಜೀವಿತಾಪಹರಣಂ ಗೋವರ್ಧನೋಧಾರಣಂ
ಕಂಸಚ್ಛೇದನ – ಕೌರವಾದಿ ಮಥನಂ ಕಂತೀಸುತಪಾಲನಂ
ಏತದ್ಭಾಗವತಮ್ ಪುರಾಣ ಕಥಿತಮ್ ಶ್ರೀಕೃಷ್ಣಲೀಲಾಮೃತಮ್

## ದಶಾವತಾರ ಮಂಗಳಂ

ಮತ್ಸ–ಕಚ್ಛಪ– ವಾರಾಹ– ಸಿಂಹ ವಾಮನ ಮೂರ್ತಯೇ
ರಾಮ – ರಾಮಾತ್ಮನೇ ಕೃಷ್ಣ – ಕಲ್ಕಿ ಸಿಂಹಾಯ ಮಂಗಳಂ
ಕ್ಷೋಭಕಾರಣಭೂತಾ ಚ ಸರ್ಗಕಾಲೇ ಮಹಾನುತೇ
ಯಥಾ ಸಕ್ತಂ ಜಲೇವಾತೋ ಬಿಭರ್ತಿ ಕಣಿಕಾ ಶತಮ್
ಶಕ್ತಿಃ ಸಾಪಿ ತಥಾ ವಿಷ್ಣೋಃ ಪ್ರಧಾನಪುರುಷಾತ್ಮಕಮ್
ಯಥಾ ಚ ಪಾದವೋ ಮೂಲಃ ಸ್ಕಂದಶಾಖಾದಿ ಸಂಯುತ
ಆದಿ ಬೀಜಾತ್ ಪ್ರಭವತಿ ಬೀಜಾನ್ಯನ್ಯಾನಿ ವೈ ತತಃ
ಪ್ರಭವಂತಿ ತತಸ್ತೇಭ್ಯಃ ಸಂಭವಂತ್ಯಪರೇ ದ್ರುಮಾಃ
ತೇಪಿ ತಲ್ಲಕ್ಷಣದ್ರವ್ಯಕಾರಣಾನು ಗತಾ ಮುನೇ ।
ಏವ ಮವ್ಯಾಕೃತಾತ್ ಪೂರ್ವಂ ಜಾಯಂತೇ ಮಹದಾದಯೇಃ

(ವಿ.ಪು. ಅಧ್ಯಾಯ 7 ನೇ ಶ್ಲೋಕ 31ರಿಂದ 34)

ಈ ಪ್ರಕೃತಿ ಪುರುಷರನ್ನು ಸೃಷ್ಟಿಕಾಲದಲ್ಲಿ ಸ್ಪಂದನವನ್ನುಂಟು ಮಾಡತಕ್ಕದ್ದೂ ಆ ವಿಷ್ಣು ಶಕ್ತಿಯೇ. ನೀರೊಳಗೆ ಸೇರಿದ ವಾಯು ಹೇಗೆ ನೂರಾರು ಗುಳ್ಳೆಗಳನ್ನು ಉಂಟುಮಾಡಿ ಧರಿಸುತ್ತದೆಯೋ ಹಾಗೆಯೇ ವಿಷ್ಣುಶಕ್ತಿಯು ಪ್ರಕೃತಿ ಪುರುಷಾತ್ಮಕವಾದ ಪ್ರಾಣಿಜಾತವನ್ನು ಧರಿಸಿದೆಬೇರು, ಸ್ಕಂದ, ಶಾಖಾದಿಗಳಿಂದ ಕೂಡಿದ ಮರವು ಆದಿಬೀಜದಿಂದ ಹುಟ್ಟುತ್ತದೆ. ಆ ಮರದಿಂದ ಅನ್ಯ ಬೀಜಗಳು ಉತ್ಪನ್ನವಾಗುತ್ತದೆ. ಅವುಗಳಿಂದ ಮತ್ತೆ ಇತರ ಮರಗಳು ಹುಟ್ಟುತ್ತವೆ.

ಅವು ಮೂಲಕಾರಣವಾದ ಬೀಜದ ಎಲ್ಲ ದ್ರವ್ಯಗುಣ ಲಕ್ಷಣಗಳನ್ನು ಹೊಂದಿರುತ್ತವೆ. ಅಂತೆಯೇ ಅವ್ಯಾಹೃತವಾದ ಪ್ರಕೃತಿಯಿಂದ ಮಹತ್ತತ್ತ್ವಾದಿಯಾಗಿ ಪಂಚಭೂತ ವಿಶೇಷಗಳವರೆಗಿನ ವಸ್ತುಗಳು ಉತ್ಪನ್ನವಾಗುತ್ತವೆ. ಅವುಗಳಿಂದಲೇ ಅಸುರ ಮನುಷ್ಯಾದಿಗಳ ನಿರ್ಮಾಣವಾಗುತ್ತವೆ. ಅವರಿಗೆ ಪುತ್ರರು, ಅನ್ಯಪುತ್ರರೂ ಹುಟ್ಟುತ್ತಾರೆ.

**ಸನ್ನಿಧಾನಾದ್ಯಥಾಕಾಶಕಾಲಾಧ್ಯಾಃ ಕಾರಣಂ ತರೋಃ**

**ತಥೈವಾ ಪರಿಣಾಮೇನ ವಿಶ್ವಸ್ಯ ಭಗವಾನ್ ಹರಿಃ**

**ವ್ರೀಹಿಬೀಜೇ ಯಥಾಮೂಲಂ ನಾಲಂ ಪತ್ರಾಂಕುರೌ ತಥಾ**

**ಕಾಂಡಂ ಕೋಶಸ್ತು ಪುಷ್ಪಂ ಚ ಕ್ಷೀರಂ ತದ್ವಚ್ಚ ತಂಡುಲಿ**

**ತುಷಾಃ ಕಣಾಶ್ಚ ಸಂತೋ ವೈ ಯಾಂತ್ಯಾ ವಿರ್ಭಾವ ಮಾತ್ಮನಃ**

**ಪ್ರರೋಹ ಹೇತು ಸಾಮಗ್ರೀ ಮಾಸಾದ್ಯ ಮುನಿಸತ್ತಮ**

**ತಥಾ ಕರ್ಮಸ್ವನೇಕೇಷು ದೇವಾದ್ಯಾಃ ಸಮವಸ್ಥಿತಾಃ**

**ವಿಷ್ಣುಶಕ್ತಿಂ ಸಮಾಸಾದ್ಯ ಪ್ರರೋಹಮುಪಯಾಂತಿವೈ**

**ಸಚ ವಿಷ್ಣುಃ ಪರಂಬ್ರಹ್ಮ ಯತಃ ಸರ್ವಮಿದಂ ಜಗತ್**

**ಜಗಚ್ಚ ಯೋ ಯತ್ರ ಚೇದಂ ಯಸ್ಮಿಂಶ್ಚ ಲಯಮೇಷ್ಯತಿ**

**ತದ್ ಬ್ರಹ್ಮ ತತ್ಪರಂ ಧಾಮ ಸದಸತ್ಪರಮಂ ಪದಮ್**

**ಯಸ್ಯ ಸರ್ವಮ ಭೇಧೇನಂ ಯತ ಶ್ಚೈತ ಚ್ಚರಾ ಚರಮ್**

**ಸ ಏವ ಮೂಲ ಪ್ರಕೃತಿ ರ್ವ್ಯಕ್ತರೂಪೀ ಜಗಚ್ಚ ಸಃ**

**ತಸ್ಮಿನ್ನೇವ ಲಯಂ ಸರ್ವಂಯಾಕಿತಿ ತತ್ರಚ ತಿಷ್ಠತಿ**

**ಕರ್ತಾಕ್ರಿಯಾಣಾಂ ಸ ಚ ಇಜ್ಯತೇ ಕ್ರತುಃ**

**ಸ ಏವ ತತ್ಕರ್ಮಫಲಂ ಚ ತಸ್ಯ**

**ಸ್ರುಗಾದಿ ಯತ್ಸಾದನ ಮಪ್ಯಶೇಷಂ**

**ಹರೇರ್ನಕಿಂಚಿದ್ ವ್ಯತಿರಿಕ್ತ ಮಸ್ತಿ**

(ವಿ.ಪು. ದ್ವಿತೀಯಾಂಶ ಅಧ್ಯಾಯ 7 ಶ್ಲೋಕ 37ರಿಂದ 44)

ಆಕಾಶ, ಕಾಲ ಮೊದಲಾದವು ಸಾನ್ನಿಧ್ಯ ಮಾತ್ರದಿಂದ ಮರದ ಉತ್ಪತ್ತಿಗೆ ಹೇಗೆ ಕಾರಣವೋ ಹಾಗೆ ಭಗವಾನ್ ಹರಿಯು ತನ್ನಲ್ಲಿ ಯಾವ ಪರಿಣಾಮವೂ ಆಗದೆಯೇ ವಿಶ್ವದ ಉತ್ಪತ್ತಿಗೆ ಕಾರಣನಾಗಿದ್ದಾನೆ.

ಬೀಜವಾದ ಭತ್ತ (ಮುಂದೆ ಕಾಣಿಸಲಿರುವ) ಬೇರು, ನಾರು, ಎಲೆ, ಮೊಳಕೆ, ಕಾಂಡ, ಮೊಗ್ಗು, ಹೂ, ಹಾಲು, ಅಕ್ಕಿ, ಹೊಟ್ಟು, ತೆನೆಗಳು (ಅವ್ಯಕ್ತರೂಪದಲ್ಲಿ) ಇರುತ್ತವೆ. ಬೆಳೆಯುವುದಕ್ಕೆ ಕಾರಣವಾದ ಸಾಮಾಗ್ರಿಯನ್ನು ಅಂದರೆ ಮಣ್ಣು, ನೀರು ಇವುಗಳನ್ನು ಪಡೆದು ಅವು ಆವಿರ್ಭವಿಸುತ್ತವೆ. ಹಾಗೆಯೇ ಅನೇಕ ವಿಧವಾದ ಅಂದರೆ ಪುಣ್ಯಶಕ್ತಿಯೆಂಬ ಸಾಮಾಗ್ರಿಯನ್ನು ಪಡೆದು ಆವಿರ್ಭವಿಸುತ್ತಾರೆ. ಆ ವಿಷ್ಣುವೇ ಪರಬ್ರಹ್ಮ. ಅವನಿಂದ ಈ ಸಮಸ್ತ ಜಗತ್ತು ಹುಟ್ಟಿದೆ. ಅವನೇ ಜಗತ್ತು. ಈ ಜಗತ್ತು ಅವನಲ್ಲಿದ್ದು ಅವನಲ್ಲಿಯೇ ಲಯ ಹೊಂದುತ್ತದೆ. ಅವನೇ ಬ್ರಹ್ಮ, ಅವನೇ ಪರಮಗತಿ, ಅವನೇ ಸತ್, ಅಸತ್, ಪರಮಪದ ಎಲ್ಲವೂ ಅವನೇ ಚರಾಚರಾತ್ಮಕವಾದದ್ದೆಲ್ಲವೂ ಅವನಲ್ಲಿ ಅದ್ವೈತವಾಗಿದ್ದು ಅಭಿವ್ಯಕ್ತವಾಗಿದೆ. ಅವ್ಯಕ್ತವಾದ ಮೂಲ ಪ್ರಕೃತಿ ಎಂದರೂ ಆ ಮಹಾವಿಷ್ಣುವೇ ಅವನು ವ್ಯಕ್ತರೂಪನಾದ ಜಗತ್ತಾಗಿದ್ದಾನೆ. ಸರ್ವವೂ ಅವನಲ್ಲಿಯೇ ಲಯವಾಗುತ್ತದೆ. ಅವನಲ್ಲಿಯೇ ಇದ್ದುಕೊಂಡಿರುತ್ತದೆ. ಮಹಾವಿಷ್ಣುವೇ ಯಜ್ಞಾದಿಕ್ರಿಯೆಗೆ ಕರ್ತ. ಯಜ್ಞಕ್ಕೆ ವಿಷಯವಾದ ಕರ್ಮನೂ ಆತನೇ. ಆತನೇ ಯಜ್ಞದ ಸರ್ವಸಲಕರಣೆಯಾಗಿದ್ದಾನೆ.

ಆತನೇ ಯಜ್ಞರೂಪಕ್ರಿಯೆ, ಯಜ್ಞದ ಫಲವೂ ಆತನೇ. ಹೀಗಾಗಿ ಶ್ರೀಹರಿಗೆ ಅತಿರಿಕ್ತವಾದ ವಸ್ತು ಯಾವುದೂ ಇಲ್ಲ.

ಈ ಶ್ಲೋಕಗಳಲ್ಲಿ ಪರಾಶರರು ವಿಷ್ಣುಪಾರಮ್ಯವನ್ನು ಸುಸ್ಪಷ್ಟವಾಗಿ ತಿಳಿಸಿದ್ದಾರೆ. ಅದರಲ್ಲಿಯೂ ದಿನಂಪ್ರತಿ ನೋಡುವ ಭತ್ತ, ಮರ, ಕಾಂಡ ಮುಂತಾದ ವಸ್ತುಗಳನ್ನೇ ಉದಾಹರಣೆಯಾಗಿ ಇಟ್ಟುಕೊಂಡು, ನಮ್ಮಂತಹ ಅಜ್ಞರಿಗೂ ಅರ್ಥವಾಗುವಂತೆ ಪ್ರಕೃತಿ, ಪುರುಷ, ಪರಮಾತ್ಮ ಈ ಮೂರರ ಸ್ವರೂಪವನ್ನು, ಅಸಿತ್ವವನ್ನು ಸೊಗಸಾಗಿ ವರ್ಣಿಸಿದ್ದಾರೆ. ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಕ್ಕೆ ಕಾರಣನಾದವನು ಆ ಶ್ರೀಮನ್ನಾರಾಯಣನೇ ಎಂಬುದನ್ನು ಸಾಬೀತುಪಡಿಸಿದ್ದಾರೆ. ಈ ಶ್ಲೋಕಗಳ ಒಂದೊಂದು ಸಾಲಿನಲ್ಲಿಯೂ ಏಕಮೇವಾದ್ವಿತೀಯನಾದ ವಿಷ್ಣುವೇ ಕಾರಣ ಅಂದರೆ ವಿಷ್ಣುಪಾರಮ್ಯವನ್ನು ಸಮರ್ಥಿಸಿದ್ದಾರೆ.

**ಸರ್ವಂ ವಿಷ್ಣುಮಯಂ ಜಗತ್**

## ಸೂರ್ಯಮಂಡಲ

ಸಕಲ ಜೀವರಾಶಿಗಳಿಗೂ ಆಧಾರಭೂತನಾದ ಸೂರ್ಯ ಸೌರಮಂಡಲದಲ್ಲಿ ನವಗ್ರಹಗಳಿಗೆ ಅಧಿಪತಿಯಾದವನು ಸೂರ್ಯನಾರಾಯಣ. "ಆದಿತ್ಯಾನಾಂ ಅಹಂ ವಿಷ್ಣುಃ ಜ್ಯೋತಿಷಾಂ ರವಿರಂಶುಮಾನ್" ಎಂದು ಸೂರ್ಯಮಂಡಾಲಾಧೀಶ ಆದಿತ್ಯನೂ ಸಹ ನಾನೇ ಎಂದಿದ್ದಾನೆ ಭಗವದ್ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣ ಪರಮಾತ್ಮ.

ಸೌರಮಂಡಲದಲ್ಲಿರುವ ನವಗ್ರಹಗಳಿಗೆ ಸೂರ್ಯನೇ ಅಧಿಪತಿ. ಗ್ರಹಗಳಿಗೆ ಕಾಂತಿ ಮತ್ತು ಶಕ್ತಿಯನ್ನು ಕೊಡುವವನೇ ಸೂರ್ಯದೇವ.

ತೇಜೋಮಯವಾದ ಕಿರಣಗಳಿಂದ ಕಣ್ಣಿಗೆ ಕಾಣುವ ಪ್ರತ್ಯಕ್ಷ ದೈವ ಶ್ರೀ ಸೂರ್ಯನಾರಾಯಣ. ಇವನ ಮಹಿಮೆಯೇ ಅಪಾರ. ತ್ರೇತಾಯುಗದಲ್ಲಿ ಶ್ರೀರಾಮಚಂದ್ರ ಮೂರ್ತಿ ಲಂಕೆಗೆ ರಾವಣನ ಜೊತೆ ಯುದ್ಧಮಾಡಲು ವಾನರಸೇನೆಯೊಡನೆ ಸಿದ್ಧನಾದನು. ಯುದ್ಧವನ್ನು ಆರಂಭಿಸುವ ಮುನ್ನ ಆದಿತ್ಯಹೃದಯ ಸ್ತೋತ್ರವನ್ನು ಜಪಿಸಬೇಕೆಂದು ಅಗಸ್ತ್ಯ ಮಹಾಮುನಿಗಳು ಸೂಚಿಸಿದರು. ಅಂತೆಯೇ ಶ್ರೀರಾಮಚಂದ್ರ ಮೂರು ಸಲ ಆಚಮನ ಮಾಡಿ, ಸೂರ್ಯನಮಸ್ಕಾರ ಮಾಡಿ ಅಗಸ್ತ್ಯರ ಆದೇಶದಂತೆ ಸೂರ್ಯಸ್ತೋತ್ರವನ್ನು ಜಪಿಸಿದನು. ಯುದ್ಧದಲ್ಲಿ ವಿಜಯಲಕ್ಷ್ಮಿಯನ್ನು ಒಲಿಸಿಕೊಂಡನು. ರಾಮಭಕ್ತಾಗ್ರೇಸನೂ, ಚಿರಂಜೀವಿಯೂ ಆದ ಆಂಜನೇಯ ಸ್ವಾಮಿಯು ಸೂರ್ಯನ  ಬಳಿಯಲ್ಲಿ ವಿದ್ಯೆಯನ್ನು ಕಲಿತನು. ದ್ವಾಪರಯುಗದಲ್ಲಿ ಭಾಸ್ಕರನನ್ನು ಅರ್ಚಿಸಿ ಕುಂತೀದೇವಿ ಸಹ ಕವಚ ಕುಂಡಲಗಳಿಂದ ವಿರಾಜಿತನಾದ ಕರ್ಣನನ್ನು ಪುತ್ರನನ್ನಾಗಿ ಪಡೆದಳು. ಸತ್ರಾಜಿತ್ ಮಹಾರಾಜನು ಸೂರ್ಯನ ಉಪಾಸನೆಯನ್ನು ಮಾಡಿ ಬಂಗಾರವನ್ನೇ ಸುರಿಸುವ ಶ್ಯಮಂತಕಮಣಿಯನ್ನು ಪಡೆದುಕೊಂಡನು. ಯಾಜ್ಞವಲ್ಕ್ಯ ಮಹಾಮುನಿ ಸೂರ್ಯನಿಂದಲೇ ಶುಕ್ಲ ಯಜುರ್ವೇದವನ್ನು ಸೃಷ್ಟಿಸಿದರು. ಕಲಿಯುಗ ವೈಕುಂಠವಾಸಿಯಾದ ಶ್ರೀವೆಂಕಟೇಶ್ವರ ಸ್ವಾಮಿಯು ಭಾಸ್ಕರನನ್ನು ಅರ್ಚಿಸಿ ಶ್ರೀಮಹಾಲಕ್ಷ್ಮಿಯನ್ನು ಪಡೆದರು. ಕಶ್ಯಪ ಮತ್ತು ಅದಿತಿಯ ಪುತ್ರನಾದ ಆದಿತ್ಯನು ಧರ್ಮರಾಜನಿಗೆ ಅಕ್ಷಯಪಾತ್ರೆಯನ್ನು ಕೊಟ್ಟು ವನವಾಸವು ಸಾಂಗವಾಗಿ ನಡೆಯುವಂತೆ ಕರುಣಿಸಿದನು.

ಹೀಗೆ ಸೌರ ಕುಟುಂಬದಲ್ಲಿ ಅಂದರೆ ನವಗ್ರಹಗಳಲ್ಲಿ ಪ್ರಧಾನ ಪಾತ್ರ ವಹಿಸಿರುವ ಸೂರ್ಯನು ಹನ್ನೆರಡು ರಾಶಿಗಳಲ್ಲಿ  ಸಂಚರಿಸುತ್ತಾ ಜೀವಕೋಟಿಗೆ ಶುಭಫಲಗಳನ್ನು ನೀಡುವ ಕರುಣಾಮೂರ್ತಿ. ಇಂತಹ ಸೂರ್ಯಮಂಡಲದ ಬಗ್ಗೆ ಶ್ರೀವಿಷ್ಣುಪುರಾಣದಲ್ಲಿ ವಿಸ್ತಾರವಾಗಿ ವಿವರಿಸಿದ್ದಾರೆ ಪರಾಶರ ಮಹರ್ಷಿಗಳು.

ಈಗಾಗಲೇ ಮೇಲೆ ತಿಳಿಸಿದಂತೆ  ಕಶ್ಯಪ ಪ್ರಜಾಪತಿ ಮತ್ತು ಅದಿತಿಯ ಪುತ್ರ ಆದಿತ್ಯ ಅಂದರೆ ಸೂರ್ಯ. ನಾವು ಸೂರ್ಯನನ್ನು ಮನದಲ್ಲಿ

ಕಲ್ಪಿಸಿಕೊಂಡಾಗ ಏಳು ಕುದುರೆಗಳ ಲಗಾಮನ್ನು ಹಿಡಿದು ಚಕ್ರ ಓಡಿಸುವ ಚಿತ್ರ ನಮಗೆ ಮನದಲ್ಲಿ ಮೂಡುತ್ತದೆ. ಆ ಸೂರ್ಯ ರಥ ಹೇಗಿರುತ್ತದೆ. ಸೂರ್ಯನ ರಥವು ಒಂಭತ್ತು ಸಾವಿರ ಯೋಜನೆಗಳ ವಿಸ್ತಾರವಾದದ್ದು. ಅದರ ಈಷಾದಂಡವು ಅಂದರೆ  (ಮೂಕಿಮರ) ಎರಡರಷ್ಟು ಅಂದರೆ ಹದಿನೆಂಟು ಸಾವಿರ ಯೋಜನೆ ಉದ್ದವಾದದ್ದು. ರಥದ ಅಚ್ಚು ಒಂದುವರೆ ಕೋಟಿ ಏಳು ಲಕ್ಷಯೋಜನ ಉದ್ದ. ಅದಕ್ಕೆ  ಚಕ್ರವನ್ನು ಸೇರಿಸಲಾಗಿದೆ. ಸಂವತ್ಸರಮಯವಾದ ಈ ಚಕ್ರದಲ್ಲಿ ಸಮಸ್ತ ಕಾಲಚಕ್ರವು ನೆಲೆಸಿದೆ. ಈ ಚಕ್ರಕ್ಕೆ ಮೂರು ನಾಭಿಗಳು ಅಂದರೆ ಪೂರ್ವಾಹ್ಣ, ಅಪರಾಹ್ಣ, ರಾತ್ರಿ ಎಂದು. ಐದು ಅರೆಕಾಲುಗಳು ಅಂದರೆ ಸೌರ, ಚಂದ್ರ, ಸಾಯನ, ನಕ್ಷತ್ರ, ಬಾರ್ಹಸ್ಪತ್ಯ ಎಂದು. ಆರು ನೇಮಿಗಳು (ಚಕ್ರದ ಅಂಚು ಹಳಿ) ಅಂದರೆ ಆರು ಋತುಗಳು (ವಸಂತಋತು, ಗ್ರೀಷ್ಮಋತು, ವರ್ಷಋತು, ಶರದೃತು, ಹೇಮಂತಋತು, ಶಿಶಿರಋತು). ಇದರಿಂದ ಈ ಚಕ್ರವು ಅಕ್ಷಯವಾಗಿದೆ. ಏಳು ಛಂದಸ್ಸುಗಳು ಆ ರಥದ ಅಶ್ವಗಳು. ಅವುಗಳು ಯಾವುವೆಂದರೆ ಗಾಯತ್ರೀ, ಬೃಹತೀ, ಉಷ್ಣಿಕ್, ಜಗತೀ, ಅನುಷ್ಟುಪ್ ಮತ್ತು ಪಂಕ್ತಿ. ಸೂರ್ಯನ ರಥಕ್ಕೆ ನಲವತ್ತೈದು ಸಾವಿರದ ಐನೂರು ಯೋಜನ ಉದ್ದವಿರುವ ಅಚ್ಚು ಇದೆ. ರಥದ ನೊಗದ ಒಂದು ಅರ್ಧಭಾಗವು ಇನ್ನೊಂದು ಅರ್ಧಭಾಗವು ಮತ್ತೊಂದು ಅಚ್ಚಿನಷ್ಟೊ ಉದ್ದವಾಗಿದೆ. ಅಂದರೆ ಎರಡು ಅಚ್ಚುಗಳ ಒಟ್ಟು ಉದ್ದದಷ್ಟು ನೊಗದ ಪ್ರಮಾಣ. ನೊಗದ ಒಂದು ಪಾರ್ಶ್ವ ಉದ್ದವಾಗಿಯೂ ಮತ್ತೊಂದು ಪಾರ್ಶ್ವ ಗಿಡ್ಡವಾಗಿಯೂ ಇದೆ. ಸೂರ್ಯನ ಬೆಳಕಿನಿಂದ ಈ ಭುವಿಯಲ್ಲಿ ಮಾನವ, ವೃಕ್ಷ, ಪಶು ಪಕ್ಷಿಗಳೆಲ್ಲ, ಜೀವ ಜಂತುಗಳು ಜೀವಿಸಬಲ್ಲವು. ಸೂರ್ಯರಶ್ಮಿ ಇಲ್ಲದೆ ಯಾವುದೂ ಜೀವಿಸುವುದಿಲ್ಲ. ಭೂಮಿಭ್ರಮಣದಿಂದ ಹಗಲು ರಾತ್ರಿ ಉಂಟಾಗುತ್ತದೆ.  ದಿನ, ವಾರ, ಋತು, ವರ್ಷಗಳಗಣನೆಗೆ ಮತ್ತು ಈ ಭುವಿಯಲ್ಲಿ ಇಡೀ ಜೀವಕೋಟಿಗೆ ಆಧಾರಭೂತರಾದರೂ ಸೂರ್ಯಚಂದ್ರರು ಸೂರ್ಯನ ಚಲನೆಯನ್ನೇ ಆಧಾರವನ್ನಾಗಿಟ್ಟುಕೊಂಡು ಕಾಲ ಪರಿವರ್ತನೆ ಗುರುತಿಸಲಾಗುತ್ತದೆ.  ಮಕರ ಸಂಕ್ರಮಣದಿಂದ ಕರ್ಕಾಟಕ ಸಂಕ್ರಮಣದವರೆಗಿನ ಆರುತಿಂಗಳಯ ಉತ್ತರಾಯಣವೆಂದೂ ಕರ್ಕಾಟಕ ಸಂಕ್ರಮಣದಿಂದ ಮಕರ ಸಂಕ್ರಮಣದವರೆಗಿನ ಆರುತಿಂಗಳು

ದಕ್ಷಿಣಾಯನವೆಂದೂ ಕರೆಯುತ್ತಾರೆ. ಸೂರ್ಯ ಉತ್ತರಕ್ಕೆ ಹೋಗುವ ಸಮಯವೇ ಉತ್ತರಾಯಣವೆಂದೂ ದೇವಾನುದೇವತೆಗಳಿಗೆ ಉತ್ತರಾಯಣವು ಹಗಲೆಂದು ದಕ್ಷಿಣಾಯನವು ರಾತ್ರಿ ಎಂದು ಪರಿಗಣಿಸಲಾಗಿದೆ.

ಸೌರಮಂಡಲದಲ್ಲಿ ನವಗ್ರಹಗಳಿಗೆ ಸೂರ್ಯನಾರಾಯಣನೇ ಅಧಿಪತಿ. ಎಲ್ಲ ಗ್ರಹಗಳಿಗೂ ಕಾಂತಿ ಮತ್ತು ಶಕ್ತಿ ಕೊಡುವವನೇ ಸೂರ್ಯ. ಸೂರ್ಯ ದೇವರು ಸಾಕ್ಷಾತ್ ಪರಮಾತ್ಮನಾದ ಶ್ರೀಮನ್ನಾರಾಯಣನ ಪ್ರತೀಕ. ಈ ಭುವನ ಬ್ರಹ್ಮಾಂಡಕ್ಕೆ ಕೇಂದ್ರ ಬಿಂದುವೇ ಸೂರ್ಯ. ಸ್ಥೂಲವಾದ ಕಾಲಕ್ಕೆ ಸೂರ್ಯನೇ ನಿಯಾಮಕ ವಿಶ್ವದ ಪೋಷಕ, ಪ್ರಾಣದಾತ ಸಕಲಚರಾಚರಗಳಿಗೆ ಆಧಾರನು ಅವನೇ, ವೇದಗಳ ಕಾಲದಿಂದಲೂ ಸ್ತುತಿಸಲ್ಪಟ್ಟ ಈ ಸೂರ್ಯದೇವನು ನಮ್ಮೆಲ್ಲರನ್ನೂ ಈ ಜಗತ್ತಿನ ಸಕಲ ಜೀವರಾಶಿಗಳನ್ನು ಸಂರಕ್ಷಿಸಲಿ ಎಂದು ಪ್ರಾರ್ಥಿಸೋಣ.

**ನವಗ್ರಹಸ್ತೋತ್ರ**

**ನಮಃ ಸೂರ್ಯಾಯ ಚಂದ್ರಾಯ ಮಂಗಳಾಯಬುಧಾಯ ಚ**
**ಗುರುಶುಕ್ರ ಶನಿಭ್ಯಶ್ಚ ರಾಹವೇ ಕೇತವೇ ನಮಃ**

**ಸೂರ್ಯಸ್ತೋತ್ರ**

**ಆದಿ ದೇವ ನಮಸ್ತುಭ್ಯಮ್ ಪ್ರಸೀದ ಮಮಭಾಸ್ಕರ**
**ದಿವಾಕರ ನಮಸ್ತುಭ್ಯಮ್ ಪ್ರಭಾಕರ ನಮೋಸ್ತುತೇ**
**ಸಪ್ತಾಶ್ವರಥ ಮಾರೂಡಂ ಪ್ರಚಂಡಂ ಕಶ್ಯಪಾತ್ಮಜಂ**
**ಶ್ವೇತಪದ್ಮಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಂ**

## ಜಡಭರತ ಚರಿತೆ– ಜಡಭರತ

ಜಡಭರತ "ಏಳೋ ಎದ್ದೇಳೋ ಸುಮ್ಮನೆ . . .. ಜಡಭರತನ ಹಾಗೆ ಕೂತುಬಿಟ್ಟ ಎಂದು ನಮ್ಮ ಕನ್ನಡದಲ್ಲಿ ಹಾಸ್ಯದ ನಗೆಯ ತುಣುಕು ಮನೆಮಾತಾಗಿದೆ. ಅದ್ಯಾರದಲ್ಲಿ ಜಡಭರತ ! ಅವನು ಮತ್ತಾರು ಅಲ್ಲ ಪುರಾಣ ಪ್ರಸಿದ್ಧನಾದ ಮಹಾನ್ ವ್ಯಕ್ತಿ ಆ ಭರತನ ಚರಿತ್ರೆಯನ್ನು ಪರಾಶರರು

ಮೈತ್ರೇಯನಿಗೆ ಹೇಳಲು ಆರಂಭಿಸಿದರು.

**ಭರತ ಒಬ್ಬ ಮಹಾಯೋಗಿ – ಮಹೀಪಾಲ**

**ಭರತಃ ಸ ಮಹೀಪಾಲಃ ಶಾಲಗ್ರಾಮೇವಸತ್‌ಕಿಲ**

**ಯೋಗಯುಕ್ತಃ ಸಮಾಧಾಯ ವಾಸುದೇವೆ ಸದಾಮನಃ**

**ಶಾಲಗ್ರಾಮೇ ಮಹಾಭಾಗೋ ಭಗವನ್ನ್ಯಸ್ತಮಾನಸ**

**ಸಉವಾಸ ಚಿರಂ ಕಾಲಂ ಮೈತ್ರೇಯ ಪೃಥಿವೀಪತಿ**

ವಿ.ಪು. ಅ 13–4 ಮತ್ತು 7ನೇ ಶ್ಲೋಕ

ಭರತ ಮಹಾಪುರುಷ ಆ ಭೂಪಾಲನು ಭಗವಂತನಲ್ಲಿ ಚಿತ್ತವನ್ನಿಟ್ಟು ಸದಾ ಧ್ಯಾನಮಗ್ನನಾಗಿದ್ದನು. ಅವನು ಶಾಲಗ್ರಾಮದಲ್ಲಿದ್ದವನು (ಇಂದಿನ ನೇಪಾಳ)

**ಯಜ್ಞೇಶಾಚ್ಯುತ ಗೋವಿಂದ ಮಾಧವ ಅನಂತ ಕೇಶವ**

**ಕೃಷ್ಣ ವಿಷ್ಣೋ ಹೃಷೀಕೇಶ ವಾಸುದೇವ ನಮೋಸ್ತುತೇ**

**ಇತಿ ರಾಜಾಹ ಭರತೋ ಹರೇ ರ್ನಾಮಾನಿ ಕೇವಲಮ್**

**ನಾನ್ಯಾನಿ ಚಕ್ರೇ ಕರ್ಮಾಣಿ ನಿಸ್ಸಂಗೋ ಯೋಗತಾಪಸಃ**

**ಜಗಾಮ ಸೋಭಿಷೇಕಾರ್ಥಮೇಕದಾ ತು ಮಹಾನದೀಮ್**

**ಸಸ್ನೌ ತತ್ರ ತದಾ ಚಕ್ರೇ ಸ್ನಾನಸ್ಯಾನಂತರ ಕ್ರಿಯಾಃ**

**ಅಥಾಜಗಾಮ ತತ್ತೀರಂ ಜಲಂ ಪಾತು ಪಿಪಾಸಿತಾ**

**ಆಸನ್ನಪ್ರಸವಾ ಬ್ರಹ್ಮನ್ನೇಕೈವ ಹರಿಣೀವನಾತ್**

**ತತಃ ಸಮಭವತ್ತತ್ರ ಪ್ರೀತಪ್ರಾಯೇ ಜಲೇತಥಾ**

**ಸಿಂಹಸ್ಯ ನಾದಃ ಸುಮಹಾನ್ ಸರ್ವಪ್ರಾಣಿ ಭಯಂಕರಃ**

**ತತಃ ಸಾ ಸಹಪಾತ್ರಾಸಾದಾಪ್ಲುತಾ ನಿಮ್ನಗಾತಟಮ್**

**ಅತ್ಯುಚ್ಚಾರೋಹಣೇ ನಾಸ್ಯಾ ನದ್ಯಾಂ ಗರ್ಭಃ ಪ್ರಪಾತಹ**

**ತಮೂಹ್ಯ ಮಾನಂ ವೇಗೇನ ವೀಚಿಮಾಲಾಪರಿಪ್ಲುತಮ್**

**ಜಗ್ರಾಹ ಸನ್ನಪೋ ಗರ್ಭಾತ್ ಪತಿತಂ ಮೃಗಪೋತಕಮ್**

**ಗರ್ಭಪ್ರಚ್ಯುತಿದೋಷೇಣ ಪ್ರೋತುಂಗಾಕ್ರಮೇಣೇನ ಚ**
**ಮೈತ್ರೇಯ ಸಾಪಿ ಹರಿಣೀ ಪಪಾತ ಚ ಮಮಾರ ಚ**
**ಹರಿಣೀಂತಾ ವಿಲೋಕ್ಯಾಥ ವಿಪನ್ನಾಂ ನೃಪತಾಪಸಃ**
**ಮೃಗ ಪೋತಂ ಸಮಾದಾಯ ನಿಜಮಾಶ್ರಮಮಾಗತಃ**

(ವಿ.ಪು. ದ್ವಿತೀಯಾ ಅ. 13, 9ರಿಂದ 18ಶ್ಲೋಕ)

ಆ ರಾಜನು ಸದಾ ಕಾಲವೂ ಯಜ್ಞೇಶ, ಅಚ್ಯುತ, ಗೋವಿಂದ, ಮಾಧವ, ಅನಂತ, ಕೇಶವ, ವಿಷ್ಣು, ಹೃಷೀಕೇಶ, ವಾಸುದೇವ ನಮೋಸ್ತುತೇ ಎಂದು ಕೇವಲ ಶ್ರೀಹರಿಯ ನಾಮಸ್ಮರಣೆಯನ್ನೇ ಮಾಡುತ್ತಿದ್ದನು. ಹರಿನಾಮವನ್ನೇ ಜಪಿಸುತ್ತಿದ್ದನು. ಸ್ವಪ್ನದಲ್ಲಿಯೂ ಭರತನು ಇನ್ನೊಂದು ಶಬ್ದವನ್ನು ಉಚ್ಚರಿಸುತ್ತಿರಲಿಲ್ಲ. ಅವನು ದೇವರ ಪೂಜೆಗಾಗಿ ಸಮಿತ್ತು, ಹೂ, ದರ್ಬೆಗಳನ್ನು ತರುತ್ತಿದ್ದನು. ಸದಾ ನಿಸ್ಸಂಗನೂ, ಯೋಗಯುಕ್ತನೂ ಆಗಿದ್ದನು. ಒಂದು ದಿನ ಆತನು ಒಂದು ದೊಡ್ಡ ನದಿಯ ಬಳಿಗೆ ಹೋಗಿ ಸ್ನಾನ ಮಾಡಿ, ಸ್ನಾನ ನಂತರದ ಕರ್ತವ್ಯ ಅನುಷ್ಠಾನಗಳನ್ನು ಮಾಡಿದನು. ಆ ಸಮಯದಲ್ಲಿ ಇನ್ನೇನು ಮರಿ ಹಾಕಲಿದ್ದ ಗರ್ಭಿಣಿಯಾದ ಒಂದು ಹೆಣ್ಣು ಜಿಂಕೆ ಅತ್ಯಂತ ಬಾಯಾರಿಕೆಯಿಂದ ಬಳಲಿ ಕಾಡಿನಿಂದ ಒಂಟಿಯಾಗಿ ನದಿತೀರಕ್ಕೆ ಬಂದಿತು. ಆ ಜಿಂಕೆ ಇನ್ನೇನು ನೀರನ್ನು ಕುಡಿದು ಮುಗಿಸ ಬೇಕೆನ್ನು ವಷ್ಟರಲ್ಲಿ, ಸರ್ವಪ್ರಾಣಿ ಭಯಂಕರವಾದ ಸಿಂಹದ ಗರ್ಜಸಿದುದುನ್ನು ಕೇಳಿಸಿತು. ಒಡನೆಂದು ಹೆದರಿಕೆಯಿಂದ ತತ್ತರಿಸಿದ ಆ ಜಿಂಕೆ ನದಿತೀರಕ್ಕೆ ನೆಗೆಯಿತು. ದಡವು ಬಹಳ ಎತ್ತರವಾಗಿದ್ದುದರಿಂದ ಜಿಂಕೆಯ ಗರ್ಭಸ್ರಾವವಾಗಿ ನದಿಯಲ್ಲಿ ಬಿದ್ದಿತು. ಜಿಂಕೆಯ ಗರ್ಭದಿಂದ ಮರಿಜಿಂಕೆಯು ಅಲೆಗಳ ಸೆಳವಿಗೆ ಸಿಕ್ಕಿ ತೇಲಿ ಹೋಗುತ್ತಿದ್ದಿತು. ತಕ್ಷಣ ಆ ಮರಿಜಿಂಕೆಯನ್ನು ಭರತನು ಹಿಡಿದುಕೊಂಡನು. ಎತ್ತರದ ದಡಕ್ಕೆ ನೆಗೆದುದರಿಂದ ಆ ಗರ್ಭಸ್ರಾವವಾದುದರಿಂದ ಆ ಹೆಣ್ಣು ಜಿಂಕೆ ನೀರಲ್ಲಿ ಉರುಳಿ ಬಿದ್ದಿತಲ್ಲದೆ ಪ್ರಾಣವನ್ನು ಬಿಟ್ಟಿತು. ಹೀಗೆ ಹೆಣ್ಣು ಜಿಂಕೆಯು ಸತ್ತು ಹೋಗಲಾಗಿ ತಪಸ್ವಿಯಿಂದ ಭರತ ರಾಜನು ಆ ಮರಿಯನ್ನು ಎತ್ತಿಕೊಂಡು ತನ್ನ ಆಶ್ರಮಕ್ಕೆ ಬಂದನು. ಅಷ್ಟೇ ಅಲ್ಲ ಪ್ರತಿದಿನವೂ ಮರಿಯ ಆರೈಕೆಯನ್ನು ನೋಡಿಕೊಳ್ಳತೊಡಗಿದನು. ರಾಜನ

ಆಶ್ರಯ ಆರೈಕೆಯಲ್ಲಿಯೇ ಜಿಂಕೆ ಚೆನ್ನಾಗಿ ಬೆಳೆಯಿತು. ಆಶ್ರಮದ ಸುತ್ತ ತಿರುಗಾಡುತ್ತಾ ಮೇಯುತ್ತ ಇದ್ದ ಜಿಂಕೆಯ ಮೇಲೆ ಭರತನ ಮನಸ್ಸು ಅನುರಕ್ತವಾಯಿತು. ರಾಜ್ಯವನ್ನು, ಮಕ್ಕಳನ್ನು ಬಿಟ್ಟು ಸಮಸ್ತಬಾಂಧವರನ್ನೆಲ್ಲಾ ತೊರೆದು ಭರತನಿಗೆ ಆ ಜಿಂಕೆಯ ಮೇಲೆ ಮಮತೆಯನ್ನು ತೋರಿಸಿದನು. ಮತ್ತಾವುದೂ ಅವನಿಗೆ ಬೇಡವಾಯಿತು. ದಿನದಿನಕ್ಕೆ ಆ ಜಿಂಕೆಯ ಮೇಲೆಯೇ ಮನಸ್ಸು ನೆಟ್ಟುಹೋಯಿತು. ಇತ್ತ ಧ್ಯಾನಯೋಗವನ್ನೇ ಅವನು ಮರೆತನು. ಹೀಗೆಯ ದಿನಗಳು ಉರುಳಿತು. ಮರಣವು ಸನ್ನಿಹಿತವಾಯಿತು. ಸಾಯುವ ತಂದೆಯನ್ನು ಕಣ್ಣೀರು ಸುರಿಸುತ್ತ ನೋಡುವ ಮಗನಂತೆ ಜಿಂಕೆಯ ಮರಿ ಕಣ್ಣೀರು ತುಂಬಿಕೊಂಡು ನೋಡುತ್ತಿರುವಾಗ ಭರತನು ಕಾಲವಶನಾದನು. ಭರತನೂ ಸಹ ಪ್ರಾಣಬಿಡುವಾಗ ತನ್ಮಯತೆಯಿಂದ ಜಿಂಕೆಯನ್ನೇ ನೋಡುತ್ತಿದ್ದನು. ಅದರ ವಿಷಯವನ್ನಲ್ಲದೆ ಬೇರೆನನೂ ಚಿಂತಿಸಲಿಲ್ಲ.

**ತತಶ್ಚ ತತ್ಕಾಲಕೃತಾಂ ಭಾವನಾಂ ಪ್ರಾಪ್ಯತಾದೃಶೀಮ್**

**ಜಂಬೂಮಾರ್ಗೇ ಮಹಾರಣ್ಯೇ ಜಾತೋಜಾತಿಸ್ಮರೋಮೃಗಃ**

ವಿ.ಪು.ದ್ವಿತೀಯಾಂಶ ಅ.13 33ನೇ ಶ್ಲೋಕ

ಮರಣಕಾಲದ ತೀವ್ರ ಭಾವನೆಗೆ ಅನುಗುಣವಾಗಿ ಭರತನು ಕಾಲಂಜರ ಪರ್ವತವೆಂಬಲ್ಲಿ ಒಂದು (ಅದು ಈಗಿನ ಬುಂದೇಲ್ ಖಂಡ್ ಎಂದು ಊಹಿಸುತ್ತಾರೆ) ಮಹಾರಣ್ಯದಲ್ಲಿ ಜಿಂಕೆಯಾಗಿ ಹುಟ್ಟಿದನು. ಮಹಾತಪಸ್ವಿಯಾದ ಭರತನು ಜಿಂಕೆಯಾಗಿ ಮರುಜನ್ಮತಾಳಿದನು. ಯಂಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್ ತಂತಮೇವೈತಿ ಕೌಂತೇಯ ಸದಾತದ್ಭಾವಭಾವಿತ ಮನುಷ್ಯನು ತನ್ನ ಕೊನೆಯುಸಿರನ್ನು ಎಳೆಯುವಾಗ ಏನಾಗಬೇಕೆಂದು ಆಶಿಸುತ್ತಾನೋ ಅಥವಾ ಅದೇ ಗೀಳಿನಲ್ಲಿ ಮೃತಪಡುತ್ತಾನೋ ಮುಂದಿನ ಜನ್ಮದಲ್ಲೂ ಅದೇ ಮುಂದುವರಿಯುತ್ತದೆ. ಆದ್ದರಿಂದ ಮರಣಶಯ್ಯೆಯಲ್ಲಿವಾಗಲೂ ಭಗವಂತನನ್ನು ಧ್ಯಾನಿಸಿದರೆ ಅವನ ಅಪೇಕ್ಷೆಯಂತೆ ಭಗವಂತನ ಸಾನ್ನಿಧ್ಯವನ್ನೇ ಪಡೆಯುತ್ತಾನೆ ಎಂದು ಭಗವಾನ್ ಶ್ರೀಕೃಷ್ಣನೇ ಸ್ಪಷ್ಟಪಡಿಸಿದ್ದಾನೆ. ಅದಿರಲಿ ಆ ಜಿಂಕೆಗೆ ಬಂದ ಅದೃಷ್ಟ ನೋಡಿ ಒಣಗಿದ ಹುಲ್ಲನ್ನು, ಎಲೆಯನ್ನು ತಿಂದು ಜೀವಿಸುತ್ತಿದ್ದ ಆ

ಪ್ರಾಣಿ ದೇಹತ್ಯಾಗದ ನಂತರ ತನ್ನ ಮೃಗ ದೇಹವನ್ನು ತೊರೆದ ಭರತನು ಆಚಾರಶೀಲರೂ, ಯೋಗಿಗಳೂ ಆದವರ ಶ್ರೇಷ್ಠವಂಶದಲ್ಲಿ ಒಬ್ಬ ವಿಪ್ರನಾಗಿ ಜನ್ಮತಾಳಿದನು. ಮತ್ತೊಂದು ವಿಚಿತ್ರವೆಂದರೆ ವಿಪ್ರನ ನಡೆವಳಿಕೆ.

ಆ ವಿಪ್ರನಾದರೋ ಸರ್ವಶಾಸ್ತ್ರ ವಿಶಾರದನೂ ಪರಮಾರ್ಥವನ್ನು ಅರಿತವನೂ ಆಗಿದ್ದನು. ತಾನು ಪ್ರಕೃತಿಯ ಆಚೆಗಿರುವ ಆತ್ಮನೆಂದು ತಿಳಿದುಕೊಂಡನು. ಆತ್ಮನು ತತ್ವವನ್ನು ಅರಿತ ಆತನು ದೇವತೆಗಳೇ ಮೊದಲಾದ ಸಮಸ್ತಪ್ರಾಣಿಗಳು ಆತ್ಮಸ್ವರೂಪನಾದ ತನಗೆ ಅಭಿನ್ನದೆಂದು ಅರಿತಿದ್ದನು. ಅವನಿಗೆ ಉಪನಯನವಾಯಿತು. ಆದರೆ ಗುರುಮುಖೇನ ಏನನ್ನೂ ಕಲಿಯಲಿಲ್ಲ. ವೇದ ಶಾಸ್ತ್ರಗಳನ್ನು ಕಲಿಯಲಿಲ್ಲ. ನಿತ್ಯಕರ್ಮಗಳನ್ನು ಆಚರಿಸುತ್ತಿರಲಿಲ್ಲ.

**ಉಕ್ತೋಽಪಿ ಬಹುಶ: ಕಿಂಚಿತ್ ಜಡವಾಕ್ಯಮಭಾಷತ ।**
**ತದಪ್ಯ ಸಂಸ್ಕಾರ ಗುಣಂ ಗ್ರಾಮ್ಯವಾಕ್ಯೋಕ್ತಿ ಸಂಶ್ರಿತಮ್ ॥**
**ಅಪಧ್ವಸ್ತವಪುಃ ಸೋಽಪಿ ಮಲಿನಾಂಬರಧೃನ್ ದ್ವಿಜಃ ।**
**ಕ್ಲಿನ್ನ ದಂತಾಂತರಃ ಸರ್ವೈಃ ಪರಿಭೂತಃ ಸನಾಗರೈಃ**
**ಸಮ್ಮಾನನಾ ಪರಾಂ ಹಾನಿಂ ಯೋಗರ್ದ್ಧೇ ಕುರುತೇತಃ ।**
**ಜನೇನಾವಮತೋ ಯೋಗೀ ಯೋಗಸಿದ್ಧಿಂ ಚ ವಿಂದತಿ ॥**
**ತಸ್ಮಾಚ್ಚರೇತ ವೈಯೋಗೀ ಸತಾಂ ಧರ್ಮಮದೂಷಯನ್ ।**
**ಜನಾಯಥಾವಮನ್ಯೇರನ್ ಗಚ್ಛೇಯುರ್ನೈವ ಸಂಗತಿಮ್ ॥**
**ಹಿರಣ್ಯಗರ್ಭವಚನಂ ವಿಚಿಂತ್ಯೇತ್ಥಂ ಮಹಾಮತಿಃ ।**
**ಆತ್ಮಾನಂ ದರ್ಶಯಾಮಾಸ ಜಡೋನ್ಮತ್ತಾ ಕೃತಿಂ ಜನೇ ॥**

ವಿ.ಪು. ದ್ವಿತೀಯಾಂಶ ಅ.13. 40 ರಿಂದ 44 ಶ್ಲೋಕ

ವಿಪ್ರನನ್ನು ಯಾರಾದರೂ ಮತ್ತೆ ಮತ್ತೆ ಪ್ರಶ್ನಿಸಿದಾಗ ಜಡಪುರುಷನಂತೆ ಅರ್ಥವಾಗದ ಏನೋ ಒಂದು ಮಾತನ್ನು ಹೇಳಿಬಿಡುತ್ತಿದ್ದನು. ಅದರಲ್ಲೂ

ಸಹ ವ್ಯಾಕರಣ ಶುದ್ಧವಾಗಿ ಮಾತಾಡುತ್ತಿರಲಿಲ್ಲ. ಆ ವಿಪ್ರನ ದೇಹವೋ ಯಾವಾಗಲೂ ಕೊಳೆ, ಬಟ್ಟೆಕೊಳಕು. ಬಾಯಿಹಲ್ಲುಗಳಿಂದ ಜೊಲ್ಲು ಸುರಿಯುತ್ತಿತ್ತು. ಅಲ್ಲಿನ ಜನರು ಆತನನ್ನು ಪೆದ್ದನೆಂದು ತಿರಸ್ಕರಿಸಿಬಿಟ್ಟಿದ್ದರಂತೆ. ಇದರ ಬಗ್ಗೆ ಪರಾಶರರು ಮೈತ್ರೇಯರಿಗೆ ಒಂದು ವ್ಯಾಖ್ಯಾನವನ್ನು ನೀಡುತ್ತಾರೆ. ಅದೇನೆಂದರೆ ಜನರ ಆದರ ಗೌರವಗಳಿಗೆ ಯೋಗಿಗಳು ಮರುಳಾಗಬಾರದು ಎಂದು. ಏಕೆಂದರೆ ಯೋಗಸಿದ್ಧಿಗೆ ಮಹತ್ತರವಾದ ಹಾನಿಯನ್ನು ಉಂಟುಮಾಡುತ್ತದೆಯಂತೆ. ಯೋಗಿಯು ಜನರಿಂದ ತಿರಸ್ಕರಿಸಲ್ಪಟ್ಟರೆ ಮಾತ್ರ ಯೋಗಸಿದ್ಧಿಯನ್ನು ಪಡೆಯುತ್ತಾರೆ. ಆದಕಾರಣ ಯೋಗಿಯಾದವನು ಸಜ್ಜನರು ಆಚರಿಸುವ ಧರ್ಮವನ್ನು ದೂಷಿಸದೆಯೇ ಜನರು ತನ್ನನ್ನು ಉಪೇಕ್ಷಿಸುವಂತೆಯೂ ತನ್ನ ಜೀವನವನ್ನು ನಡೆಸಬೇಕು ಎಂದು ಹಿರಣ್ಯಗರ್ಭನು ಹೇಳಿದ್ದಾನೆ. ಅದರಂತೆ ಯೋಗಿಯಾದವನು ಎಲ್ಲವನ್ನು, ಎಲ್ಲರನ್ನು ತ್ಯಜಿಸಬೇಕೆಂದು ಪರಾಶರರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಪ್ರಕೃತ ಪರಿಸ್ಥಿತಿಯಲ್ಲಿ ಇದು ಎಷ್ಟರ ಮಟ್ಟಿಗೆ ಸತ್ಯ, ಎಷ್ಟರ ಮಟ್ಟಿಗೆ ಸಾಧ್ಯ ಎಂಬುದು ಅವರವರ ಊಹೆಗೆ ನಿಲುಕುವಂತಹುದು. ಅದರ ಬಗ್ಗೆ ಇಲ್ಲಿ ಚರ್ಚೆಬೇಡ. ಪ್ರಕೃತ ಜಡಭರತನ ವಿಷಯಕ್ಕೆ ಬರೋಣ. ತಾನು ಪೆದ್ದನಂತೆಯೂ ಜಡಭರತ ಕಾಣಿಸಿಕೊಂಡನು. ಯಾವುದು ದೊರಕುತ್ತದೋ ಅದನ್ನು ತಿಂದು ಜೀವನವನ್ನು ಸಾಗಿಸುತ್ತಿದ್ದನು. ಹೀಗಿದ್ದರೂ ಆ ವಿಪ್ರ ಭರತನಿಗೆ ಎತ್ತಿನಂತೆ ಸುಪುಷ್ಟವಾದ ಅಂಗಗಳಿದ್ದವು. ಕೆಲಸದಲ್ಲಿ ಮಾತ್ರ ಜಡನಾಗಿದ್ದನು. ಹೀಗಾಗಿ ಎಲ್ಲ ಜನರಿಗೂ ಆತನು ಆಹಾರವನ್ನು ಮಾತ್ರ ಕೊಟ್ಟು ಕೆಲಸ ಮಾಡಿಸಿಕೊಳ್ಳಬಹುದಾದ ಒಂದು ಜೀವಂತ ಪ್ರಾಣಿಯಾಗಿಬಿಟ್ಟನು.

**ತಂತಾದೃಶಮ ಸಂಸ್ಕಾರಂ ವಿಪ್ರಕೃತಿ ವಿಚೇಷ್ಟಿತಮ್ ।**

**ಕ್ಷತ್ತಾ ಪ್ನಷತ ರಾಜನ್ಯ ಕಾಲ್ಯೈ ಪಶುಕಲ್ಪಯತ್ ॥**

**ರಾತ್ರೌ ತಂ ಸಮಲಂಕೃತ್ಯ ವೈಶಸಸ್ಯ ವಿಧಾನತಃ ।**

**ಅಧಿಷ್ಠಾತಂ ಮಹಾಕಾಲೀ ಜ್ಞಾತ್ವಾ ಯೋಗೇಶ್ವರಂತದಾ ॥**

**ತತಃ ಖಡ್ಗಂ ಸಮಾದಾಯ ನಿಶಿತಂ ನಿಶಿಸಾತಥಾ ।**

**ಕ್ಷತ್ತಾ ರಂ ಕ್ರೂರ ಕರ್ಮಾಣ ಮಚ್ಛಿನತ್ ಕಂಠಮೂಲತಃ ॥**

**ಸ್ವಪಾರ್ಷದಯತಾ ದೇವಿ ಪಪೌ ರುಧಿರ ಮುಲ್ಬಣಮ್**

**ತತಸ್ಸೌವೀರರಾಜಸ್ಯ ಪ್ರಯಾತಸ್ಯ ಮಹಾತ್ಮನ ।**

**ವಿಷ್ಟಿಕರ್ತಾಥ ಮನ್ಯೇತ ಎಷ್ಟಿ ಯೋಗ್ಯೇಯಮಿತ್ಯಪಿ ॥**

**ತಂ ತಾದೃಶಂ ಮಹಾತ್ಮಾನಂ ಭಸ್ಮಚ್ಛನ್ನ ಮಿವಾನಲಮ್**

**ಕ್ಷತ್ತಾ ಸೌವೀರ ರಾಜಸ್ಯ ವಿಷ್ಟಿಯೋಗಮ ಮನ್ಯತ**

**ಸರಾಜಾ ಶಿಬಿಕಾ ರೂಢೋ ಗಂತುಂ ಕೃತ ಮತಿರ್ದ್ವಿಜ ।**

**ಬಭೂವೇಷು ಮತೀ ತೀರೆ ಕಪಿಲರ್ಷೇ ರ್ವರಾಶ್ರಮಮ್**

**ಶ್ರೇಯಃ ಕಿಮತ್ರ ಸುಸಾರೇ ದುಃಖಪ್ರಾಯೇ ನೃಣಾಮಿತಿ**

**ಪುಷ್ಟುಂ ತಂ ಮೋಕ್ಷ ಧರ್ಮಜ್ಞಂ ಕಪಿಲಾಖಂ ಮಹಾಮುನಿ**

ಶ್ರೀವಿ. ಪು. ದ್ವಿತೀಯಾಂಶ ಅ.13. 48 ರಿಂದ 54

ಹೀಗೆ ಸಂಸ್ಕಾರಶೂನ್ಯನೂ, ಬ್ರಾಹ್ಮಣ ವೇಷಧಾರಿಯೂ ಆದ ಆತನನ್ನು ಪೃಷತರಾಜನ ಸೇವಕನು ಕಾಳಿಕಾದೇವಿಗೆ ಬಲಿಪಶುವಾಗಿ ಗೊತ್ತುಮಾಡಿದನು. ರಾತ್ರಿಯಲ್ಲಿ ಬಲಿವಿಧಿ ನಿಯಮದಂತೆ ಆ ವಿಪ್ರನನ್ನು ಅಲಂಕರಿಸಿ ಎದುರಿಗೆ ತಂದು ನಿಲ್ಲಿಸಿದನು. ಆ ಕಾಳಿಕಾದೇವಿಯು ಅವನು ಯೋಗೇಶ್ವರನೆಂಬುವನ್ನು ಅರಿತಳು. ಒಡನೆಯೇ ಆ ದೇವಿಯು ಹರಿತವಾದ ಖಡ್ಗವನ್ನು ಹಿಡಿದು ಕ್ರೂರಕರ್ಮಿಯಾದ ರಾಜಸೇವಕನ ಕತ್ತನ್ನೇ ಕತ್ತರಿಸಿಹಾಕಿದಳು. ಅಷ್ಟೇ ಅಲ್ಲ ಪರಿವಾರ ಸಹಿತಳಾಗಿ ಕಾಳಿಕಾದೇವಿಯು ಅವನ ಬಿಸಿರಕ್ತವನ್ನು ಕುಡಿದಳು. ಈ ಎಲ್ಲ ಘಟನೆಯು ನಡೆದರೂ ವಿಪ್ರ ಅಲ್ಲೇ ನಿಂತಿದ್ದನು. ನಂತರ ಎತ್ತಲೋ ಪ್ರಯಾಣ ಮಾಡುತ್ತಿದ್ದ ಸೌವೀರ ರಾಜ ಸೇವಕನು ಆ ವಿಪ್ರನನ್ನು ಬಿಟ್ಟಿ ಸೇವಕನೆಂದು ತಿಳಿದನು. ಬೂದಿ ಮುಚ್ಚಿದ ಕೆಂಡದಂತಿದ್ದ ಆ ಮಹಾತ್ಮನನ್ನು ಸೌವೀರ ರಾಜನ ಸೇವಕನು ಬಿಟ್ಟಿ ಚಾಕರಿ ಮಾಡಿಸಿಕೊಳ್ಳುವುದಕ್ಕಾಗಿ ಅರಮನೆಗೆ ಕರೆದುಕೊಂಡು ಹೋದನು. ಒಮ್ಮೆ ಸೌವೀರರಾಜನು ಇಕ್ಷುಮತಿ ತೀರದಲ್ಲಿದ್ದ ಕಪಿಲ

ಮಹರ್ಷಿಯ ಆಶ್ರಮಕ್ಕೆ ಹೋಗಲು ನಿಶ್ಚಯಿಸಿ ಪಲ್ಲಕ್ಕಿಯನ್ನು ಏರಿದನು. ಮಹಾತಪಸ್ವಿಯಾದ ಕಪಿಲ ಮಹರ್ಷಿಯನ್ನು ಕುರಿತು "ದುಃಖಮಯವಾದ ಈ ಸಂಸಾರದಲ್ಲಿ ಮಾನವರಿಗೆ ಯಾವುದು ಶ್ರೇಯಸ್ಕರವಾದ ಮಾರ್ಗ ಎಂದು ಕೇಳಿ ತಿಳಿದುಕೊಳ್ಳಬೇಕೆಂಬ ಉದ್ದೇಶವಿದ್ದಿತ್ತು.

ರಾಜಸೇವಕನ ಮಾತಿನಂತೆ ವಿಪ್ರನು ಪಲ್ಲಕ್ಕಿಯನ್ನು ಹೊರುತ್ತಿದ್ದ ಇತರ ಕೂಲಿ ಸೇವಕರ ನಡುವೆ ಸೇರಿಕೊಂಡು ರಾಜನ ಪಲಕ್ಕಿಯನ್ನು ಹೊತ್ತನು. ಸರ್ವಜ್ಞಾನ ಸಂಪನ್ನನಾದ ಆ ವಿಪ್ರನು ಹೀಗೆ ಬಿಟ್ಟಿಯಾಗಿ ಕೆಲಸ ಮಾಡಲು ನಿಯೋಜಿತನಾದನು. ಜನ್ಮಾಂತರದ ಸ್ಮರಣೆಯುಳ್ಳವನಾದ್ದರಿಂದ ತನ್ನ ಪಾಪ ಕ್ಷಯವಾಗಲಿ ಎಂದು ಪಲ್ಲಕ್ಕಿಯನ್ನು ಹೊತ್ತನು. ಜ್ಞಾನಿಗಳಲ್ಲಿ ಶ್ರೇಷ್ಠನಾದ ಆ ವಿಪ್ರನು ಮಂದಗತಿಯಿಂದ ತನ್ನ ಮುಂದೆ ನಾಲ್ಕು ಮೊಳದಷ್ಟು ಮಾತ್ರ ದೂರವನ್ನು ನೋಡುತ್ತಾ ಮೆಲ್ಲಗೆ ನಡೆಯುತ್ತಿದ್ದನು. ಉಳಿದ ಸೇವಕರು ಬೇಗ ಬೇಗ ಹೋಗುತ್ತಿದ್ದರು. ಪಲ್ಲಕ್ಕಿಯು ಏರುಪೇರಾಗಿ ಜಗ್ಗಾಡುವುದನ್ನು ಕಂಡ ರಾಜನು "ಇದೇನು ಪಲ್ಲಕ್ಕಿ ಏರುಪೇರಾಗುತ್ತಿದೆ ಪಲ್ಲಕ್ಕಿ ಹೊತ್ತವರೇ ಎಲ್ಲರೂ ಸಮನಾಗಿ ನಡೆಯಿರಿ" ಎಂದನು.

ಆದರೂ ಪಲ್ಲಕ್ಕಿಯು ಏರುಪೇರಾಗಿಯೇ ಸಾಗುತ್ತಿತ್ತು. ರಾಜನು ಮತ್ತೊಮ್ಮೆ ಯಾಕಯ್ಯಾ ಹೀಗೆ ಎಂದು ಕೇಳಿದನು. ಆಗ ಪಲಕ್ಕಿಯನ್ನು ಹೊತ್ತ ಇತರರು "ಸ್ವಾಮಿ ಇವನೊಬ್ಬನು ಬೇಗನೆ ನಡೆಯುತ್ತಿಲ್ಲ" ಎಂದರು. ಸೌವೀರರಾಜನು ಆ ಭರತನನ್ನು ಕುರಿತು ಏನಯ್ಯಾ ಸುಸ್ತಾಯಿತೇ ನಿನಗೆ?, ನನ್ನ ಪಲ್ಲಕ್ಕಿಯನ್ನು ಸ್ವಲ್ಪ ದೂರ ಮಾತ್ರ ಹೊತ್ತಿದ್ದೀಯೇ, ಅಷ್ಟರಲ್ಲಿಯೇ ಶ್ರಮವಾಯಿತೇ. ನಿನ್ನನ್ನು ನೋಡಿದರೆ ಗಟ್ಟಿಮುಟ್ಟಾಗಿ ಕಾಣಿಸುತ್ತಿದ್ದೀಯಲ್ಲಾ ಎಂದು ಕೇಳಿದನು. ಇನ್ನು ಮುಂದೆ ರಾಜನಿಗೂ ಮತ್ತು ವಿಪ್ರನಿಗೂ ನಡೆದ ಸಂವಾದ ಅತ್ಯಂತ ಕುತಾಹಲಕಾರಿಯಾಗಿದೆ. ಈ ಸಂಭಾಷಣೆಯನ್ನು ಅರ್ಥ ಮಾಡಿಕೊಳ್ಳವುದು ಅಷ್ಟು ಸುಲಭವಲ್ಲ. ರಾಜ ಆ ವಿಪ್ರನನ್ನು ಗಟ್ಟಿಮುಟ್ಟಾಗಿ ಇದ್ದೀಯಲ್ಲಾ ಎಂದು ಹೇಳಿದಾಗ ವಿಪ್ರನು ಹೀಗೆ ಹೇಳುತ್ತಾನೆ. ನಾನು ಗಟ್ಟಿಮುಟ್ಟಾಗಿಯೂ ಇಲ್ಲ. ನಿನ್ನ ಪಲ್ಲಕ್ಕಿಯನ್ನು ಹೊರುತ್ತಲೂ ಇಲ್ಲ. ನಾನು ಬಳಲಿಯೂ ಇಲ್ಲ. ನಾನು ಆಯಾಸವನ್ನು ಸಹಿಸಿಕೊಳ್ಳಬೇಕಾಗಿಯೂ ಇಲ್ಲ

ಎಂದನು. ಅದಕ್ಕೆ ರಾಜನು ನೀನು ಗಟ್ಟಿಮುಟ್ಟಾಗಿ ಇರುವುದು ಪ್ರತ್ಯಕ್ಷವಾಗಿ (ನಿನ್ನನ್ನು ನೋಡಿದರೆ) ಕಾಣುತ್ತಿದೆ. ಈಗಲೂ ನಿನ್ನ ಮೇಲೆ ಪಲ್ಲಕ್ಕಿ ನಿಂತಿದೆ. ಭಾರವನ್ನು ಹೊತ್ತಾಗ ಮನುಷ್ಯರಿಗೆ ಆಯಾಸವಾಗುವುದು ಸಹಜವೇ ತಾನೇ? ಎಂದನು.

ಆಗ ಬ್ರಾಹ್ಮಣ ಹೀಗೆಂದ "ರಾಜ ನೀನು ಪ್ರತ್ಯಕ್ಷವಾಗಿ ನೋಡಿದ್ದೇನು? ಅದನ್ನು ನನಗೆ ಹೇಳು ಅನಂತರ ಗಟ್ಟಿಮುಟ್ಟು, ಬಲಿಷ್ಠ, ದುರ್ಬಲ ಎಂಬ ವಿಶೇಷಣಗಳನ್ನು ಹೇಳುವೆಯಂತೆ ಎಂದನು. ಎಲೈ ರಾಜನೇ 'ನಿನ್ನಿಂದ ಪಲ್ಲಕ್ಕಿ ಹೊರಲ್ಪಟ್ಟದೆ. ಪಲ್ಲಕ್ಕಿ ನಿನ್ನ ಮೇಲೆ ನಿಂತಿದೆ ಎಂದು ಹೇಳುತ್ತಿರುವೆಯಲ್ಲ ಇದು ಸುಳ್ಳು. ಅದು ಹೇಗೆ ಎಂದು ನಾನು ಹೇಳುತ್ತೇನೆ ಕೇಳು.

ನೋಡು ನನ್ನ ಹೆಜ್ಜೆಗಳೇನೋ ನೆಲದ ಮೇಲಿವೆ. ಹೆಜ್ಜೆಗಳ ಮೇಲೆ ಮೊಳಕಾಲುಗಳೆರಡಿವೆ. ಅವುಗಳನ್ನು ಅವಲಂಬಿಸಿ ತೊಡೆಗಳಿವೆ, ತೊಡೆಗಳನ್ನು ಆಶ್ರಯಿಸಿ ನನ್ನ ಈ ಹೊಟ್ಟೆ ಇದೆ, ಇನ್ನು ಎದೆ, ತೋಳು, ಎರಡು ಹೆಗಲು ಇವು ಉದರಭಾಗವನ್ನು ಆಶ್ರಯಿಸಿಕೊಂಡಿದೆ. ಹೆಗಲಿನ ಮೇಲೆ ಪಲ್ಲಕ್ಕಿ ಇದೆ. ಹೀಗಿರುವಾಗ ನನಗೆ ಭಾರ ಹೇಗಾಯಿತು. ನಿನ್ನದೆಂದು ಹೇಳಲಾಗುವ ದೇಹ ಪಲ್ಲಕ್ಕಿಯಲ್ಲಿದೆ. ದೇಹದಲ್ಲಿ ನೀನು, ನೆಲದಲ್ಲಿ ನಾನು ಎಂದು ಹೇಳುವುದು ಸುಳ್ಳು. ಎಲೈ ರಾಜನೇ ನಾನೂ ನೀನೂ ಮತ್ತು ಉಳಿದ ಜೀವಿಗಳಿಲ್ಲಾ ಪಂಚಭೂತಗಳಿಂದ ಸಾಗಿಲ್ಪಡುತ್ತಿದ್ದೇವೆ. ಈ ಪಂಚಭೂತಾದಿಗಳೂ ಸಹ ಸತ್ವ, ರಜಸ್ಸು, ತಮಸ್ಸು ಮುಂತಾದ ಗುಣ ಪ್ರವಾಹಕ್ಕೆ ಸಿಕ್ಕಿ ಸಾಗುತ್ತಿವೆ. ಎಲೈ ರಾಜನೇ, ಆ ಸತ್ವ ಗುಣಗಳು ಕರ್ಮಕ್ಕೆ ಅಧೀನವಾಗಿವೆ. ಕರ್ಮವು ಅ ವಿದ್ಯೆಯಿಂದ ಉಂಟಾದದ್ದು. ಹೀಗೆ ಅವಿದ್ಯಾಜನ್ಯವಾದ ಕರ್ಮವು ಸಮಸ್ತ ಪ್ರಾಣಿಗಳಲ್ಲಿಯೂ ಇರುತ್ತದೆ. ಈ ಪ್ರಕೃತಿಯ ಆಚೆಗಿರುವ ಆತ್ಮನಾದರೋ ಶುದ್ಧ ಅವಿನಾಶಿ, ಶಾಂತ, ನಿರ್ಗುಣ. ಸಕಲ ಪ್ರಾಣಿಗಳಲ್ಲಿಯೂ ಏಕನಾಗಿರುವ ಈ ಆತ್ಮನಿಗೆ ವೃದ್ಧಿ, ಕ್ಷಯಗಳಲ್ಲ. ಹೀಗಿರುವಾಗ ನೀನು ದಷ್ಟಪುಷ್ಟನಾಗಿದ್ದೀಯೆ ಎಂದು ಹೇಗೆ ಹೇಳುವೆ. ಭೂಮಿ, ಪಾದ, ಮೊಳಕಾಲು, ಸೊಂಟ, ತೊಡೆ,

ಹೊಟ್ಟೆ ಮೊದಲಾದುವುಗಳ ಮೇಲಿರುವ ಹೆಗಲಿನ ಮೇಲೆ ನಿಂತಿರುವ ಈ ಪಲ್ಲಕ್ಕಿ ನನಗೆ ಭಾರವಾದರೆ ಸಮನಾಗಿ ನಿನಗೂ ಭಾರವಾಗುತ್ತದೆ. ಅಂತೆಯೇ ಉಳಿದ ಈ ಜೀವಿಗಳು ಪಲ್ಲಕ್ಕಿಯನ್ನು ಮಾತ್ರ ಹೊತ್ತಿಲ್ಲ. ಪರ್ವತ, ಮರ, ಮನೆ, ಪೃಥ್ವಿ. ಇವುಗಳೆಲ್ಲದರ ಭಾರವನ್ನು ಹೊತ್ತಿದ್ದಾರೆ. ಪ್ರಕೃತಿ ಜನ್ಯಗಳಾದ ಈ ಕಾರಣ ವಸ್ತುಗಳಿಗಿಂತ ಪುರುಷನು ಸರ್ವಥಾಭಿನ್ನನಾಗಿರುವಾಗ ಆಯಾಸವನ್ನು ಸಹಿಸಿಕೊಳ್ಳಲು ನನಗೆ ಹೇಗಾದೀತು. ಈ ಪಲ್ಲಕ್ಕಿ ಯಾವ ದ್ರವ್ಯಗಳಿಂದ ಆಗಿದೆ. ಆದರೆ ನನ್ನ ನಿನ್ನ ಎಲ್ಲರ ಶರೀರವೂ ನನ್ನದು ಎಂಬ ಮಮತ್ವದಿಂದ ಮೆರೆಯುತ್ತಿದೆ ಅಷ್ಟೆ ಎಂದನು. ಈ ಆತ್ಮಕ್ಕೆ ಎಂದೂ ಚ್ಯುತಿಯಿಲ್ಲ. ಇದು ನಾನು ನನ್ನದು ಎಂಬ ಅಹಂಕಾರ ಮಮಕಾರಗಳಿಂದ ಆವೃತವಾಗಿದೆ. ಎಲ್ಲವೂ ಆ ದೈವದ್ದೇ ಎಂಬ ಅರಿವು ನಮಗೆ ಇದಲ್ಲಿ ನಮಗೆ ಯಾವುದೇ ನೋವು ನಲಿವು ಉಂಟಾಗುವುದಿಲ್ಲ ಎಂದು ವಿಪ್ರನು ಹೇಳಿದನು. ಒಡನೆಯೇ ಸೌವೀರರಾಜನು ಪಲ್ಲಕ್ಕಿಯಿಂದ ನೆಲಕ್ಕೆ ಇಳಿದು ವಿಪ್ರನು ಪಾದಗಳಿಗೆ ಸಾಷ್ಟಾಂಗವಾಗಿ ನಮಸ್ಕರಿಸಿದನು. ವಿಪ್ರನ ಪರಮಾರ್ಥಯುಕ್ತವಾದ ಮಾತುಗಳನ್ನು ಕೇಳಿ ಆಶ್ಚರ್ಯವಾಯಿತು. ಅಷ್ಟೇ ಅಲ್ಲ ಅವನಿಗೆ ಮತ್ತೆ ಮತ್ತೆ ಸಂಶಯ. ಸಂದೇಹಗಳನ್ನು ಕಾಡತೊಡಗಿದವು. ಆದ್ದರಿಂದ ಮಹತ್‌ತತ್ವದ ಬಗ್ಗೆ ಕೇಳುತ್ತಾನೆ. 'ಅಹಂ' ಎಂಬುದರ ಅರ್ಥವನ್ನು ತಿಳಿಯಲು ಇಚ್ಚಿಸಿದನು. ಆಗ ತನ್ನ ಬಳಸಿದರೆ ಯಾವ ದೋಷವೂ ಇಲ್ಲ. ಆದರೆ ಅನಾತ್ಮನಲ್ಲಿ 'ನಾನು' ಎಂಬ ಜ್ಞಾನವಾಗಲಿ 'ನಾನು' ಎಂಬ ಶಬ್ಧವಾಗಲಿ ಭ್ರಾಂತಿಯಿಂದ ಉಂಟಾಗುತ್ತದೆ. ಸಮಸ್ತ ದೇಹಗಳಲ್ಲಿಯೂ ಬಬ್ಬನೇ ಆತ್ಮನು ವ್ಯವಸ್ಥಿತನಾಗಿರುವಾಗ 'ಯಾರು ನೀನು' ಎಂಬ ಪ್ರಶ್ನೆಯಾಗಲಿ 'ನಾನು' ಇಂಥವನು' ದಿಂದ ಉತ್ತರಿಸುವುದು ಸರಿಯಲ್ಲ. ನೀನು ರಾಜ, ಇದು ಪಲ್ಲಕ್ಕಿ, ಇವರು ಪಲ್ಲಕ್ಕಿಯ ವಾಹಕರು, ಇವರು ನಿನ್ನ ಪ್ರಜೆಗಳು ಹೀಗೆನ್ನುವುದು ಪರಮಾರ್ಥದಲ್ಲಿ ಸರಿಯಲ್ಲ. ವೃಷದಿಂದ ಹಲಗೆ, ಹಲಗೆಯಿಂದ ನೀನು ಕುಳಿತಿದ್ದ ಪಲ್ಲಕ್ಕಿ ಆಗಿದೆ. ಈಗ ಪಲ್ಲಕ್ಕಿಗೆ ವೃಕ್ಷವೆಂಬ ಹೆಸರು ಸರಿಯೊ, ಹಲಗೆಯೆಂದೊ. ನೀನು ಪಲ್ಲಕ್ಕಿಯಲ್ಲಿ ಕುಳಿತಾಗ ಪ್ರಜೆಗಳು ನಮ್ಮ ಮಹಾರಾಜ ವೃಕ್ಷವನ್ನು ಹತ್ತಿದ್ದಾನೆ ಎಂದು ಹೇಳುವುದಿಲ್ಲ, ಹಲಗೆಯ

ಮೇಲೆ ಕುಳಿತಿದ್ದಾನೆ ಎಂದು ಹೇಳುವುದಿಲ್ಲ. ಪಲ್ಲಕ್ಕಿಯಲ್ಲಿ ಕುಳಿತಿದ್ದಾನೆ ಎಂದೇ ಹೇಳುತ್ತಾರೆ. ಶಿಲ್ಪರಚನಾ ವಿಶೇಷದಿಂದ ಹಲಗೆಯ ರಾಶೀ ಪಲ್ಲಕ್ಕಿ ಎನಿಸಿಕೊಂಡಿದೆ. ಇಂತೆಯೇ ಪಂಚಭೂತಗಳಿಂದಾದ ರಚನಾ ವಿಶೇಷವೇ ಈ ಶರೀರ, ಪಂಚಭೂತಗಳಿಂದ ಬೇರೆಯಾದ ಶರೀರವು ಇಲ್ಲವೇ ಇಲ್ಲ, ಆದರೆ ಆತ್ಮನಾದರೋ ದೇವತೆಯಲ್ಲ, ಮನುಷ್ಯನಲ್ಲ, ಪಶುವಲ್ಲ, ವೃಕ್ಷವಲ್ಲ. ದೇಹದ ಈ ಆಕೃತಿ ಬೇಧಗಳು ಕರ್ಮದಿಂದ ಆದವುಗಳು. ಹೀಗೆ ಆತ್ಮದ ಸ್ವರೂಪವನ್ನು ಸ್ಪಷ್ಟಪಡಿಸಿ ಪ್ರತಿಯೊಬ್ಬರೂ ತಾನು ಮಾಡಿದ ಕರ್ಮಫಲದಿಂದಾಗಿ ಬೇರೆ ಬೇರೆಯ ಜನ್ಮಗಳಲ್ಲಿ ಬೇರೆ ಬೇರೆ ರೂಪವನ್ನು ಪಡೆದುಕೊಳ್ಳುವರೇ ವಿನಹ ಆತ್ಮಕ್ಕೆ ಚ್ಯುತಿಯಿಲ್ಲ. ಈ ದೇಹಗಳು ಅವರವರ ಕರ್ಮಗಳಿಂದ ಬಂದಿರುತ್ತವೆ ಎಂದು ವಿಪ್ರನು ಆತ್ಮದ ಸ್ವರೂಪವನ್ನು ವಿವರಿಸಿದನು. ಇದನ್ನು ಕೇಳಿದ ಸೌವೀರರಾಜನು ಆಶ್ಚರ್ಯಭರಿತನಾದನು.

ರಾಜನಿಗೆ ಈ ಸಂದರ್ಭದಲ್ಲಿ ಪರಮಾರ್ಥದ ಸ್ವರೂಪದ ಬಗ್ಗೆ ತಿಳಿಯಬೇಕೆಂದು ಆಸೆಯುಂಟಾಯಿತು. ಆಗ ವಿಪ್ರನನ್ನೇ ಪರಮಾರ್ಥದ ಬಗ್ಗೆ ಕೇಳುತ್ತಾನೆ. ಆಗ ವಿಪ್ರನು ಸಂಕ್ಷಿಪ್ತವಾಗಿ ವಿವರಿಸುತ್ತಾ ಹೇಳುತ್ತಾನೆ.

**ಏಕೋ ವ್ಯಾಪೀ ಸಮಃ ಶುದ್ಧೋ ನಿರ್ಗುಣಃ ಪ್ರಕೃತೇಪರಃ ।**
**ಜನ್ಮವೃದ್ಧ್ಯಾದಿರಹಿತ ಆತ್ಮಾ ಸರ್ವಗತೋವ್ಯಯಃ ॥**
**ಪರಜ್ಞಾನಮಯೋ ಸದ್ಭಿರ್ನಾಮ ಜಾತ್ಯಾದಿ ಭಿರ್ವಿಭುಃ ।**
**ನಯೋಗವಾನ್ನಯುಕ್ತೋಭನ್ನೈವ ಪಾರ್ಥಿವ ಯೋಕ್ಷ್ಯತೇ ॥**
**ತಸ್ಸಾತ್ಮ ಪರದೇಹೇಷು ಸತೋಪ್ಯೇಕಮಯಂ  ಹಿಯತ್ ।**
**ವಿಜ್ಞಾನಂ ಪರಮಾರ್ಥೋऽಸೌ ದ್ವೈತಿನೋತಥ್ಯದರ್ಶಿನಃ ॥**

ವಿ. ಪು. ದ್ವಿತೀಯಾಂಶ ಅ14 ಶ್ಲೋ 29
ರಿಂದ 31

ಆತ್ಮನು ಒಬ್ಬನೇ. ಅವನು ವ್ಯಾಪಕ, ಸಮ, ಶುದ್ಧ ನಿರ್ಗುಣ, ಪ್ರಕೃತಿಗೆ ಪರ, ಜನ್ಮವೃದ್ಧಿ ಮೊದಲಾದ ಯಾವ ವಿಕಾರವೂ ಆತ್ಮನಿಗೆ ಇಲ್ಲ. ಸರ್ವಗತ

ಅವಿನಾಶಿ ಆತ್ಮನು ಪರಮಜ್ಞಾನ ಸ್ವರೂಪ. ಈ ವಿಭುವಿಗೆ ನಾಮ, ಜಾತಿ ಮುಂತಾದುವುಗಳಿಂದ ಸಂಬಂಧವಿರುವುದಿಲ್ಲ. ಆತನು ನಮ್ಮ ದೇಹದಲ್ಲಿಯೂ, ಅನ್ಯರ ದೇಹಗಳಲ್ಲಿಯೂ ಇದ್ದರೂ ಒಬ್ಬನೇ ಆಗಿದ್ದಾನೆ. ಏಕ ಸ್ವರೂಪವಾದ ಈ ವಿಜ್ಞಾನವೊಂದೇ ಪರಮಾರ್ಥ .ಯಾವ ರೀತಿ ಅಭಿನ್ನಭಾವದಿಂದ ಕೂಡಿರುವ ಕೊಳಲಿನಲ್ಲಿ ವ್ಯಾಪಿಸಿಕೊಂಡಿರುವ ವಾಯುವಿಗೆ, ಕೊಳಲಿನ ರಂಧ್ರಗಳ ಬೇಧದಿಂದ ಸಪ್ತಸ್ವರಗಳ ಬೇಧವಾಗುತ್ತದೋ ಹಾಗೆ ಪರಮಾತ್ಮನಿಗೆ (ಶರೀರಬೇಧದಿಂದ) ಮನುಷ್ಯ ಮೃಗಾದಿ ಭೇದವುಂಟಾಗುತ್ತದೆ. ಬಾಹ್ಯವನ್ನು ದೇಹಾದಿಗಳ ಕರ್ಮ ಪ್ರವೃತ್ತಿಗಳಿಂದ ಏಕಸ್ವರೂಪನಾದ ಆತ್ಮನಿಗೂ ಭೇದ ಕಾಣುತ್ತದೆಯಷ್ಟೇ. ದೇವಾದಿ ಶರೀರಭೇದವನ್ನು ಜ್ಞಾನದಿಂದ ಹೋಗಲಾಡಿಸಿಕೊಂಡಾಗ ಆ ಭೇದ ಉಳಿಯುವುದೇ ಇಲ್ಲ. ಜೀವಾತ್ಮ ಎಂದೆಂದಿಗೂ ಪರಮಾತ್ಮನಿಗಿಂತ ಭಿನ್ನವಾಗಿರುವುದೇ ಇಲ್ಲ ಎಂದು ಪರಮಾರ್ಥ ಸ್ವರೂಪವನ್ನು ವಿಪ್ರನು ವಿವರಿಸುತ್ತಾನೆ. ಅಂತೆಯೇ ಋಭು ಮುನಿಯು ನಿದಾಘನಿಗೆ ಅದ್ವೈತ ಜ್ಞಾನೋಪದೇಶವನ್ನು ಮಾಡಿದನು. ಈ ಜಗತ್ತಿಯಲ್ಲಿ ಸರ್ವವೂ ಅದ್ವೈತಮಯವೆಂಬುದೇ ಪರಮಾರ್ಥದ ಸಾರ ಎಂದರು.

**ಸಿತನೀಲಾದಿ ಭೇದೇನ ಯಥೈಕಂ ದೃಶ್ಯತೇನಭಂ ಭ್ರಾಂತಿದೃಷ್ಟಿಭಿರಾತ್ಮಾಪಿ**

**ತಥೈಕಃ ಸನ್ ಪೃಥಕ್ ಪ್ರಥಕ್**

**ಏಕಃ ಸಮಸ್ತಂ ಯದಿಹಾಸ್ತಿ ಕಿಂಚಿತ್ ತದಚ್ಯುತೋ ನಾಸ್ತಿಪರಂ ತತೋಽನ್ಯತ್**

**ಸೋಹಂ ಸಚತ್ವಂ ಸಚ ಸರ್ವಮೇತ**

**ದಾತ್ಮ ಸ್ವರೂಪಂ ತ್ಯಜ ಭೇದ ಮೋಹಮ್**

ವಿ.ಪು. ದ್ವಿತೀಯಾಂಶ ಅ.16 22, 23ನೇ ಶ್ಲೋಕ

ಒಂದೇ ಆಕಾಶವು ಭ್ರಾಂತಿ ದೃಷ್ಟಿಯವರಿಗೆ ಬಿಳುಪು, ನೀಲಿ, ಕಪ್ಪು ಮುಂತಾದ ಭೇದ ವುಳ್ಳದಾಗಿ ಹೇಗೆ ಕಾಣುವುದೋ ಅಂತೆಯೇ ಒಬ್ಬನೇ ಆತ್ಮನು ಬೇರೆ ಬೇರೆಯಾಗಿ ಭ್ರಾಂತರಿಗೆ ತೋರುತ್ತಾನೆ.

ಈ ಜಗತ್ತಿನಲ್ಲಿ ಏನಿದೆಯೋ ಅದೆಲ್ಲವೂ ಒಬ್ಬನೇ ಅಚ್ಯುತನು. ಅವನಿಗಿಂತ

ಭಿನ್ನವಾದ ವಸ್ತು ಮತ್ತೊಂದಿಲ್ಲ, ಆ ಅಚ್ಯುತನೇ ನಾನು. ಆತ್ಮನೇ ಸಮಸ್ತವು. ಎಲ್ಲವೂ ಆತ್ಮಸ್ವರೂಪವೇ. ಯಾವುದೇ ಬೇಧ ಜ್ಞಾನವನ್ನು ತೊರೆದುಬಿಡು ಎಂದು ಜಡಭರತನು ನುಡಿದನು. ಸೌವೀರರಾಜನಿಗೂ ಜಡಭರತನಿಗೂ ಆದ ಸಂವಾದ ಅದ್ಭುತವಾದದ್ದು, ಅನನ್ಯವಾದದ್ದು.

## ಮೊದಲನೆಯ ಏಳು ಮನ್ವಂತರಗಳ ವಿವರಣೆ

### ಪರಾಶರರು ಮೈತ್ರೇಯನಿಗೆ ಮನ್ವಂತರಗಳ ಬಗ್ಗೆ ವಿವರಿಸಲು ಆರಂಭಿಸಿದರು

1. ಸ್ವಾಯಂಭುವ ಮನ್ವಂತರ
2. ಸ್ವಾರೋಚಿಷ ಮನ್ವಂತರ
3. ಉತ್ತಮ ಮನ್ವಂತರ
4. ತಾಮಸ ಮನ್ವಂತರ
5. ರೈವತ ಮನ್ವಂತರ
6. ಚಾಕ್ಷುಷ ಮನ್ವಂತರ
7. ವೈವಸ್ವತ ಮನ್ವಂತರ

1. ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮನು ತನಗೆ ಸದೃಶರಾದ ಕೆಲವು ಮಾನಸಪುತ್ರರನ್ನು ಸೃಜಿಸಿದನು.

ಭೃಗು, ಪುಲಸ್ತ್ಯ, ಪುಲಿಹ, ಕೃತು, ಅಂಗಿರಸ ಮರೀಚಿ, ದಕ್ಷ, ಅತ್ರಿ, ವಸಿಷ್ಠ ಇವರೇ ಮಾನಸ ಪುತ್ರರು. ಇವರು ನವಬ್ರಹ್ಮರೆಂದೇ ಪ್ರಸಿದ್ಧರಾಗಿದ್ದಾರೆ. ಈ ಮನ್ವಂತರದಲ್ಲಿ ದೇವತೆಗಳು ಯಾಮರು, ಋಷಿಗಳು ಮನುಪುತ್ರರಾದ ಪ್ರಿಯವ್ರತ ಮತ್ತು ಉತ್ತಾನಪಾದ. ಈ ಬಗ್ಗೆ ನಾವು ಹಿಂದೆಯೇ ತಿಳಿದಿದ್ದೇವೆ.

2. ಸ್ವಾರೋಚಿಷ ಮನ್ವಂತರದಲ್ಲಿ ಪಾರಾವತರು ಮತ್ತು ತುಷಿತರು ದೇವತೆಗಳು.ಈಗಾಗಲೇ ಹೇಳಿದಂತೆ ಒಂದೊಂದು ಮನ್ವಂತರದಲ್ಲಿಯೂ

ದೇವತೆಗಳು ಋಷಿಗಳು ಬದಲಾಗುತ್ತಾರೆ. ಅದರ ಪ್ರಕಾರ ಸ್ವಾರೋಚಿಷ ಮನ್ವಂತರದಲ್ಲಿ ವಿಪಶ್ಚಿತ್ ಎಂಬುವನು ಬಲಾಢ್ಯನಾದ ಇಂದ್ರ. ಊರ್ಜ, ಸ್ತಂಭ, ವಾತ, ಪ್ರಾಣ, ವೃಷಭ, ನಿರಯ, ಪರೀವಾನ್ ಎಂಬ ಸಪ್ತರ್ಷಿಗಳು. ಚೈತ್ರ – ಕಿಂಪುರುಷ ಮುಂತಾದವರು ಸ್ವಾರೋಚಿಷ ಮನುವಿನ ಪುತ್ರರು.

3 ಮೂರನೆಯ ಉತ್ತಮ ಮನ್ವಂತರದಲ್ಲಿ ಉತ್ತಮನೆಂಬುವನೇ ಮನು. ಸುಶಾಂತಿ ಎಂಬುವನು ದೇವೇಂದ್ರ. ಸುಧಾಮ, ಸತ್ಯ, ಜಪ, ಪ್ರತರ್ದನ, ವಶವರ್ತಿ ಎಂಬ ದೇವತಾಗಣಗಳು ದೇವತೆಗಳು. ಈ ಹೆಸರಿನ ಒಂದೊಂದು ಗಣದಲ್ಲಿಯೂ ಹನ್ನೆರಡು ದೇವತೆಗಳಿರುತ್ತಾರೆ.

4 ತಾಮಸ ಮನ್ವಂತರದಲ್ಲಿ ಸುಪಾರ, ಹರಿ, ಸತ್ಯ, ಸುಧೀ ಎಂಬ ನಾಲ್ಕು ದೇವತಾಗಣಗಳು. ಒಂದೊಂದು ಗಣದಲ್ಲಿಯೂ ಇಪ್ಪತ್ತೇಳು ದೇವತೆಗಳು. ಇದರಲ್ಲಿ ನೂರು ಯಜ್ಞಗಳನ್ನು ಮಾಡಿದ ಶಿಬಿ ಎಂಬುವನೇ ದೇವೇಂದ್ರ. ಜ್ಯೋತಿರ್ಧಾನು, ಪೃಥು, ಕಾವ್ಯ, ಚೈತ್ರ, ಅಗ್ನಿ ವನಕ, ಪೀವರ ಎಂಬುವರು ತಾಮಸ ಮನ್ವಂತರದ ಸಪ್ತರ್ಷಿಗಳು. ನರ, ಖ್ಯಾತಿ, ಕೇತುರೂಪ, ಜಾನುಜಂಘ ಮುಂತಾದವರು ತಾಮಸ ಮನುವಿನ ಪುತ್ರರು.

5 ಐದನೆಯ ಮನ್ವಂತರದಲ್ಲಿ ರೈವತ ಎಂಬುವನೇ ಮನು. ವಿಭು ಎಂಬುವನು ಇಂದ್ರ. ಅಮಿತಾಭ, ಭೂತರಯ, ವೈಕುಂಠ, ಸುಮೇದಸ್ ಎಂಬುವುದು ದೇವತಾಗಣಗಳು. ಒಂದೊಂದು ಗಣದಲ್ಲಿಯೂ ಹದಿನಾಲ್ಕು ದೇವತೆಗಳು. ರೈವತ ಮನ್ವಂತರದಲ್ಲಿ ಹಿರಣ್ಯರೋಮ, ವೇದಶ್ರೀ, ಊರ್ಧ್ವಬಾಹು, ವೇದಬಾಹು, ಸುಧಾಮ, ಪರ್ಜನ್ಯ ಮಹಾಮುನಿಯರು ಸಪ್ತರ್ಷಿಗಳು. ಬಲಬಂಧು, ಸಂಭಾವ್ಯ, ಸತ್ಯಕ ಮೊದಲಾದ ರಾಜರು ರೈವತ ಮನುವಿನ ಪುತ್ರರು. ಸ್ವಾರೋಚಿಷ, ಉತ್ತಮ, ತಾಮಸ, ರೈವತ. ಈ ನಾಲ್ವರು ಪ್ರಿಯವೃತನ ವಂಶದಲ್ಲಿ ಹುಟ್ಟಿದ ಮನುಗಳು. ಪ್ರಿಯವ್ರತನು ತಪಸ್ಸಿನಿಂದ ವಿಷ್ಣುವನ್ನು ಆರಾಧಿಸಿ ತನ್ನ ವಂಶದಲ್ಲಿ ಈ ಸುಪ್ರಸಿದ್ಧ ಮನ್ವಂತರಾಧಿಪತಿಗಳನ್ನು ಪಡೆದಿದ್ದನು.

6. ಆರನೆಯ ಮನ್ವಂತರದಲ್ಲಿ ಚಾಕ್ಷುಷ ಮನುವಾಗಿದ್ದನು. ಆಗ

ಮನೋಜವನು ದೇವೇಂದ್ರ. ಆಪ್ಯ, ಪ್ರಸೂತ, ಭವ್ಯ, ಪೃಥುಕ, ಲೇಖ ಎಂಬ ದೇವತೆಗಳಿದ್ದರು. ಈ ಹೆಸರಿನ ಐದು ಗಣಗಳಲ್ಲಿ ಒಂದೊಂದರಲ್ಲಿಯೂ ಎಂಟು ದೇವತೆಗಳು. ಸುಮೇಧ, ವಿರಜ, ಹವಿಷ್ಮನ್, ಉತ್ತಮ, ಮಧು ಅತಿನಾಮ, ಸಹಿಷ್ಣು ಎಂಬ ಸಪ್ತರ್ಷಿಗಳಿದ್ದರು. ಊರು, ಪೂರು, ಶತದ್ಯುಮ್ನ ಮುಂತಾದವರು ಚಾಕ್ಷುಷ ಮನುವಿನ ಪುತ್ರರಾಗಿ ಬಲಿಶಾಲಿಗಳಾದ ರಾಜರಾಗಿದ್ದರು. ಪ್ರಕೃತ ನಡೆಯುತ್ತಿರುವ ಮನ್ವಂತರ ವೈವಸ್ವತ ಮನ್ವಂತರ. ಈ ಮನ್ವಂತರದಲ್ಲಿ ವಿವಸ್ವತನ (ಸೂರ್ಯನ) ಪುತ್ರನಾದ ಶ್ರಾದ್ಧದೇವನೆಂಬ ತೇಜಸ್ವಿಯಾದ ಧೀಮಂತನು ಮನುವಾಗಿದ್ದಾನೆ. ಆದಿತ್ಯ, ವಸು, ರುದ್ರ ಮೊದಲಾದವರು ಈ ಮನ್ವಂತರದ ದೇವತೆಗಳು. ಪುರಂದರ ಎಂಬುವನು ದೇವೇಂದ್ರ ವಸಿಷ್ಠ, ಕಾಶ್ಯಪ, ಅತ್ರಿ, ಜಮದಗ್ನಿ, ಗೌತಮ, ವಿಶ್ವಾಮಿತ್ರ, ಭರದ್ವಾಜ ಎಂಬುವರು ಸಪ್ತರ್ಷಿಗಳು.

ಈ ವೈವಸ್ವತ ಮನುವಿಗೆ ಇಕ್ಷ್ವಾಕು, ನೃಗ, ದೃಷ್ಟ, ಶರ್ಯಾತಿ, ನರಿಷ್ಯಂತ, ನಾಭಾಗ, ಅರಿಷ್ಟ, ಕರೂಷ, ಪ್ರಪದ್ರ ಎಂಬ ಲೋಕವಿಖ್ಯಾತರಾದ ಒಂಬತ್ತು ಧಾರ್ಮಿಕ ಪುತ್ರರು ಈ ಸಮಸ್ತ ಮನ್ವಂತರಗಳಲ್ಲಿಯೂ ಸತ್ವಪ್ರಧಾನವಾದ, ಅಸದೃಶವಾದ ವಿಷ್ಣುಶಕ್ತಿಯು ಅಧಿಷ್ಠಾತೃ ದೇವತೆಯಾಗಿ ಜಗದ್ರಕ್ಷಣೆಗೆ ನಿಂತಿರುತ್ತದೆ. ಸ್ವಾಯಂಭುವ ಮನ್ವಂತರದಲ್ಲಿ ಯಜ್ಞನೆಂಬ ದೇವನು ಅಕೂತಿಯಲ್ಲಿ ಮಾನಸಪುತ್ರನಾಗಿ ಜನಿಸಿದನು. ನಂತರ ಸ್ವಾರೋಚಿಷ ಮನ್ವಂತರದಲ್ಲಿ ಆ ಯಜ್ಞದೇವನೇ ತುಷಿತೆಯಲ್ಲಿ ತುಷಿತ ದೇವತೆಗಳೊಡನೆ ಅಜಿತ ಎಂಬ ಹೆಸರಿನಿಂದ ಹುಟ್ಟಿದನು. ಉತ್ತಮ ಮನ್ವಂತರದಲ್ಲಿ ಆ ಅಜಿತನು ಸತ್ಯೆಯಲ್ಲಿ ಸತ್ಯರೆಂಬ ದೇವತೆಗಳೂಡನೆ ಸತ್ಯ ಎಂಬ ಹೆಸರಿನಿಂದ ಹುಟ್ಟಿದನು. ತಾಮಸ ಮನ್ವಂತರದಲ್ಲಿ ಮತ್ತೆ ಅವನು ಹರ್ಯೆಯಲ್ಲಿ ಹರಿ ಎಂಬ ದೇವತೆಗಳೊಡನೆ ಹರಿಯಾಗಿ ಅವತರಿಸಿದನು. ನಂತರ ರೈವತ ಮನ್ವಂತರದಲ್ಲಿ ಆ ಹರಿಯು ಸಂಭೂತಿಯಲ್ಲಿ ಆ ಕಾಲದ ದೇವತೆಗಳೊಡನೆ ಮಾನಸ ಎಂಬ ಹೆಸರಿನಿಂದ ಅವತರಿಸಿದನು. ಚಾಕ್ಷುಷ ಮನ್ವಂತರದಲ್ಲಿ ಪುರುಷೋತ್ತಮನಾದ ಹರಿಯು ವಿಕುಂಠೆಯ ಗರ್ಭದಲ್ಲಿ

ವೈಕುಂಠ ದೇವತೆಗಳೊಡನೆ ವೈಕುಂಠನೆಂಬ ಹೆಸರಿನಿಂದ ಹುಟ್ಟಿದನು. ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದಲ್ಲಿ ವಿಷ್ಣುವು ಅದಿತಿಯ ಗರ್ಭದಲ್ಲಿ ಕಶ್ಯಪನಿಂದ ವಾಮನನೆಂಬ ಹೆಸರಿನಿಂದ ಆವಿರ್ಭವಿಸಿದನು. ಈ ವಾಮನನಾದರೋ ಮೂರು ಹೆಜ್ಜೆಗಳಿಂದ ಲೋಕಗಳನ್ನು ಅಳೆದು ನಿಷ್ಕಂಟಕವಾದ ಲೋಕತ್ರಯವನ್ನು ಪುರಂದರನೆಂಬ ದೇವೇಂದ್ರನಿಗೆ ವಹಿಸಿಕೊಟ್ಟನು.

**ತ್ರಿಭಿಃ ಕ್ರಮೈರಿಮಾನ್ ಲೋಕಾನ್ ಜಿತ್ವಾಯೇನ ಮಹಾತ್ಮನಾ ।**

**ಪುರಂದರಾಯ ತ್ರೈಲೋಕ್ಯಂ ದತ್ತಂ ನಿಹತ ಕಂಟಕಮ್ ॥**

ಹೀಗೆ ಸಪ್ತ ಮನ್ವಂತರಗಳಲ್ಲಿ ವಿಷ್ಣುವು ಸಪ್ತ ಶರೀರಗಳನ್ನು ಧರಿಸಿ ಅವತರಿಸಿದ್ದಾನೆ. ಮೈತ್ರೇಯ 'ವಿಶ್' ಧಾತುವಿಗೆ ಪ್ರವೇಶ ಎಂದು ಅರ್ಥ. ಆ ಮಹಾತ್ಮನ ವೈಷ್ಣವೀ ಶಕ್ತಿಯು ವಿಶ್ವವನ್ನೇ ಪ್ರವೇಶ ಮಾಡಿರುವ ಕಾರಣ 'ವಿಷ್ಣು" ಎಂಬುದು ಆತನ ಹೆಸರಾಗಿದೆ. ಹೀಗೆ ಸಮಸ್ತ ದೇವತೆಗಳೂ, ಮನುಗಳೂ, ಸಪ್ತರ್ಷಿಗಳೂ, ಮನುಪುತ್ರರೂ, ದೇವೇಶ್ವರನಾದ ಇಂದ್ರನೂ ಎಲ್ಲರೂ ವಿಷ್ಣುವಿನ ವಿಭೂತಿಗಳೇ ಆಗಿದ್ದಾರೆ.

**ಸರ್ವೇ ಚ ದೇವಾ ಮನವಸ್ಸಮಸ್ತಾ ಸಪ್ತರ್ಷಯೋ ಯೇ ಮನುಸೂನವಶ್ಚ ।**

**ಇಂದ್ರಶ್ಚ ಯೋಽಯಂ ತ್ರಿದಶೇಶ ಭೂತೋ ವಿಷ್ಣೋರಶೇಷಾಸ್ತು ವಿಭೂತಯಸ್ತಾಃ ॥**

ವಿ.ಪು. ತೃತೀಯಾಂಶ 46ನೇ

ಶ್ಲೋಕ

ಈಗ ನಾವು ವೈವಸ್ವತ ಮನ್ವಂತರ ಪ್ರಥಮಪಾದದಲ್ಲಿದ್ದೇವೆ.

# ಸಾವರ್ಣಿ ಮನುವಿನ ಉತ್ಪತ್ತಿ

ಮುಂಬರುವ ಏಳು ಮನ್ವಂತರಗಳ ಮನುಗಳು, ಮನುಪುತ್ರರು, ಸಪ್ತರ್ಷಿಗಳು ಮತ್ತು ಇಂದ್ರ, ವರ್ಣನೆ, ಪರಾಶರರು ಮುಂದಿನ ಏಳು ಮನ್ವಂತರಗಳ ವಿಚಾರವನ್ನು ತಿಳಿಸಿದರು. ವಿಶ್ವಕರ್ಮನ ಮಗಳಾದ ಸಂಜ್ಞೆಯು ಸೂರ್ಯನ ಪತ್ನಿ. ಅವಳಿಗೆ ಶ್ರಾದ್ಧದೇವನೆಂಬ ವೈವಸ್ವತ ಮನು, ಯಮ, ಯಮಿ ಎಂಬ ಮೂವರು ಮಕ್ಕಳು ಹುಟ್ಟಿದರು. ಸಂಜ್ಞೆಯು ತನ್ನ ಪತಿಯಾದ ಸೂರ್ಯನ ತೇಜಸ್ಸನ್ನು ತಡೆದುಕೊಳ್ಳಲಾರದೆ ಛಾಯೆಯನ್ನು ಪತಿಯ ಸೇವೆಗಾಗಿ ನಿಯಮಿಸಿ ತಪಸ್ಸಿಗಾಗಿ ಅರಣ್ಯಕ್ಕೆ ಹೊರಟು ಹೋದಳು. ಸೂರ್ಯನು ಛಾಯೆಯನ್ನೇ ಸಂಜ್ಞೆಯೆಂದು ಭಾವಿಸಿ (ಏಕೆಂದರೆ ಇಬ್ಬರಿಗೂ ಒಂದೇ ರೂಪವಿದ್ದಿತು) ಅವಳೊಡನೆ ಸಂಪರ್ಕವಹಿಸಿದನು. ಹೀಗಾಗಿ ಛಾಯೆಯಲ್ಲಿ ಶನೈಶ್ಚರ, ಇನ್ನೊಬ್ಬ ಮನು ಮತ್ತು ತಪತೀ ಎಂಬ ಕನ್ಯೆ – ಹೀಗೆ ಮೂವರು ಮಕ್ಕಳನ್ನು ಪಡೆದನು. ಒಮ್ಮೆ ಸಂಜ್ಞಾರೂಪದಲ್ಲಿದ್ದ ಛಾಯೆಯು ಕುಪಿತಳಾಗಿ ಯಮನನ್ನು ಶಪಿಸಿದಳು. ಆಗ ಯಮನಿಗೂ, ಸೂರ್ಯನಿಗೂ ಅವಳು ಸಂಜ್ಞೆಯಲ್ಲವೆಂದೂ ಬೇರೊಬ್ಬಳೆಂದೂ ಗೊತ್ತಾಯಿತು. ಸಂಜ್ಞೆಯು ಅರಣ್ಯಕ್ಕೆ ಹೋಗಿದ್ದಾಳೆಂದು ಛಾಯೆಯೇ ಸೂರ್ಯನಿಗೆ ತಿಳಿಸಿದಳು. ಸೂರ್ಯನು ಇದನ್ನು ಖಾತ್ರಿ ಪಡಿಸಿಕೊಳ್ಳಲು ಸಮಾಧಿ ದೃಷ್ಟಿಯಿಂದ ನೋಡಿದನು. ಆಗ ಸಂಜ್ಞೆಯು ಹೆಣ್ಣು ಕುದುರೆಯ ರೂಪದಲ್ಲಿ ತಪೋನಿರತಳಾಗಿದ್ದುದನ್ನು ತಿಳಿದುಕೊಂಡನು. ಹೀಗಾಗಿ ಭಾಸ್ಕರನೇ ಸ್ವಯಂ ಗಂಡು ಕುದುರೆಯ ರೂಪವನ್ನು ಧರಿಸಿ ಸಂಜ್ಞೆಯನ್ನು ಭೋಗಿಸಿ ಇಬ್ಬರು ಅಶ್ವಿನೀ ದೇವತೆಗಳನ್ನು ಹಾಗೂ ರೇವಂತನೆಂಬ ಇನ್ನೊಬ್ಬ ಪುತ್ರನನ್ನೂ ಪಡೆದನು. ನಂತರ ಭಗವಾನ್ ಸೂರ್ಯನು ಸಂಜ್ಞೆಯನ್ನು ಪುನಃ ತನ್ನ ಬಳಿಗೆ ಕರೆ ತಂದನು. ನಂತರ ವಿಶ್ವಕರ್ಮನು ಸೂರ್ಯನ ತೇಜಸ್ಸನ್ನು ಕಡಿಮೆ ಮಾಡಿದನು. ಆತನು ಸೂರ್ಯನನ್ನು ಸಾಣೆಯ ಕಲ್ಲಿನ ಯಂತ್ರದ ಮೇಲಿಟ್ಟು ಸವೆಸಿ ಅಪ್ರತಿಮವಾದ ಆತನ ತೇಜಸ್ಸಿನಲ್ಲಿ ಎಂಟನೆಯ ಒಂದು ಭಾಗವನ್ನು ಮಾತ್ರ ಶಮನ ಮಾಡಿದನು. ವಿಶ್ವಕರ್ಮನು ಸೂರ್ಯನ ವೈಷ್ಣವ ತೇಜಸ್ವಿನ ಒಂದಂಶವನ್ನು ಹೀಗೆ ಕತ್ತರಿಸಲು ಅದು ಜಾಜ್ವಲ್ಯಮಾನವಾಗಿ ಬೆಳಗುತ್ತ ಭೂಮಿಯ ಮೇಲೆ ಬಿದ್ದಿತು. ವಿಶ್ವಕರ್ಮನು ಆ ತೇಜೋಂಶದಿಂದ ವಿಷ್ಣುವಿಗೆ ಸುದರ್ಶನ ಚಕ್ರವನ್ನು,

ಶಿವನಿಗೆ ತ್ರಿಶೂಲವನ್ನು, ಷಣ್ಮುಖನಿಗೆ ಶಕ್ತ್ಯಾಯುಧವನ್ನು ಹಾಗೆಯೇ ಇತರ ದೇವತೆಗಳಿಗೆ ಬೇರೆ ಬೇರೆ ಆಯುಧಗಳನ್ನು ನಿರ್ಮಿಸಿಕೊಟ್ಟನು. ಅದರ ವಿವರಣೆ ವಿಷ್ಣುಪುರಾಣದಲ್ಲಿ ಹೀಗೆ ಇದೆ.

**ಯತ್ತಸ್ಮಾದ್ವೈಷ್ಣವಂ ತೇಜಶ್ಶಾಕಿತಂ ವಿಶ್ವಕರ್ಮಣಾ ।**
**ಜಾಜ್ವಲ್ಯ ಮಾನಮಪತತ್ ತದ್ಭೂಮೌ ಮುನಿಸತ್ತಮ ॥**
**ತಷ್ಟೈವ ತೇಜಸಾ ತೇನ ವಿಷ್ಣೋಶ್ಚ ಕ್ರಮಕಲ್ಪಯತ್ ।**
**ತ್ರಿಶೂಲಂ ಚೈವ ಶರ್ವಸ್ಸ ಶಿಬಿಕಾಂ ಧನದಸ್ಯಚ ॥**
**ಶಕ್ತಿಂ ಗುಹಸ್ಯ ದೇನಾಮನ್ಯೇಷಾಂ ಚಯದಾಯುಧಮ್ ।**
**ತತ್ಸರ್ವಂ ತೇಜಸಾ ತೇನ ವಿಶ್ವಕರ್ಮಾ ವ್ಯವರ್ಧಯತ್ ॥**
**ಛಾಯಾ ಸಂಜ್ಞಾಸುತೋಯೋಸೌ ದ್ವಿತೀಯಃ ಕಥಿತೋಮನುಃ।**
**ಪೂರ್ವಜಸ್ಸ ಸರ್ವರ್ಣೋಸೌ ಸಾವರ್ಣಿಸ್ತೇನ ಕಥ್ಯತೇ ॥**

ವಿ.ಪು. ತೃತೀಯಾಂಶ ಅ 2. 10 ರಿಂದ 13ನೇ ಶ್ಲೋಕ

ಸಂಜ್ಞೆಯಂತೆಯೇ ಇದ್ದ ಛಾಯೆಗೆ ಮತ್ತೊಬ್ಬ ಮನು ಪುತ್ರನಾಗಿ ಜನಿಸಿದನೆಂದು ಹೇಳಿದೆನಷ್ಟೇ, ಆತನು ತನ್ನ ಅಗ್ರಜನಾದ ಮನುವಿಗೆ ಸವರ್ಣನಾದ್ದರಿಂದ (ಸಮಾನರೂಪ) 'ಸಾವರ್ಣಿ' ಎಂದು ಹೆಸರಾಯಿತು. ಆತನ ಅಧಿಪತ್ಯಕ್ಕೆ ಒಳಪಟ್ಟ ಎಂಟನೆಯ ಮನ್ವಂತರವು 'ಸಾವರ್ಣಿ' ಎಂದೆನಿಸಿಕೊಂಡಿದೆ.

8. ಸಾವರ್ಣಿಗೆ ಸುತಪ, ಅಮಿತಾಭ ಮುಖ್ಯ ಎಂಬ ಗಣಗಳು ದೇವತೆಗಳಾಗುತ್ತಾರೆ. ಒಂದೊಂದು ದೇವತಾಗಣವು ಇಪ್ಪತ್ತು ದೇವತೆಗಳಿಂದ ಕೂಡಿರುತ್ತದೆ. ಮುಂಬರುವ ಸಾವರ್ಣಿಯ ಮನ್ವಂತರದಲ್ಲಿ ಸಪ್ತರ್ಷಿಗಳು ಇರುತ್ತಾರೆ. ದೀಪ್ತಿಮಾನ್, ಗಾಲವ, ರಾಮ (ಜಾಮದಗ್ನ್ಯ) ಕೃಪ, ದ್ರೋಣಪುತ್ರನಾದ ಅಶ್ವತ್ಥಾಮ, ಪರಾಶರರ ಪುತ್ರನಾದ ವ್ಯಾಸ, ಋಷ್ಯಶೃಂಗ. ಪಾತಾಳ ಲೋಕವಾಸಿಯೂ ವಿರೋಚನ ಪುತ್ರನೂ ಆದ ಬಲಿ ಚಕ್ರವರ್ತಿಯು ವಿಷ್ಣುವಿನ ಅನುಗ್ರಹದಿಂದ ಆ ಮನ್ವಂತರದಲ್ಲಿ ದೇವೇಂದ್ರನಾಗುವನು,

ವಿರಸ, ಉರ್ವರೀವಾನ್ ನಿರ್ಮೋಕ (ಮನುಪುತ್ರರು) ಮೊದಲಾದವರು ರಾಜರಾಗುವರು.

9. ದಕ್ಷಸಾವರ್ಣಿಯು ಒಂಬತ್ತನೆಯ ಮನುವಾಗುವನು. ಪಾರ, ಮರೀಚಿಗರ್ಭ, ಸುಧರ್ಮ ಎಂಬ ಹನ್ನೆರಡು, ಹನ್ನೆರಡು ದೇವತೆಗಳುಳ್ಳ ಮೂರು ದೇವಗಣಗಳು ಆ ಕಾಲದ ದೇವತೆಗಳಾಗುವರು. ಮಹಾವೀರನಾದ ಅದ್ಭುತ ಎಂಬುವನು ಇಂದ್ರನಾಗುವನು. ಪವನ, ದ್ಯುತಿಮಾನ್, ಭವ್ಯ, ವಸು, ಮೇಧಾತಿಥಿ, ಜ್ಯೋತಿಷ್ಮಾನ್, ಸತ್ಯ ಎಂಬುವರು ಆ ಕಾಲದ ಸಪ್ತರ್ಷಿಗಳಾಗುವರು. ಧೃತಕೇತು, ದೀಪ್ತಿಕೇತು, ಪಂಚಹಸ್ತ, ನಿರಾಮಯ, ಪೃಥುಶ್ರವ ಮೊದಲಾದವರು ದಕ್ಷಸಾವರ್ಣಿಯ ಪುತ್ರರು ರಾಜರಾಗುವರು.

10. ಬ್ರಹ್ಮಸಾವರ್ಣಿಯು ಹತ್ತನೆಯ ಮನು. ಸುಧಾಮ, ವಿಶುದ್ಧ ಎಂಬ ನೂರು ನೂರು ಸಂಖ್ಯೆಯುಳ್ಳ ದೇವಗಣಗಳು ಆ ಕಾಲದ ದೇವತೆಗಳಾಗುವರು. ಶಾಂತಿ ಎಂಬ ಬಲಾಢ್ಯನು ದೇವೇಂದ್ರನಾಗುವನು. ಹವಿಷ್ಮಾನ್. ಸುಕೃತ, ಸತ್ಯ, ತಪೋಮೂರ್ತಿ, ನಾಭಾಗ, ಅಪ್ರತಿಮೌಜ, ಸತ್ಯಕೇತು ಎಂಬುವರು ಸಪ್ತರ್ಷಿಗಳಾಗುವರು. ಸುಕ್ಷೇತ್ರ, ಉತ್ತಮಂಜ ಭೂರಿಷೇಣ ಮೊದಲಾದ ಹತ್ತುಮಂದಿ ಬ್ರಹ್ಮಸಾವರ್ಣಿ ಪುತ್ರರು ರಾಜರಾಗಿ ಭೂಮಿಯನ್ನು ಪಾಲಿಸುವರು.

11. ಧರ್ಮಸಾವರ್ಣಿಯು ಹನ್ನೊಂದನೆಯ ಮನು. ಇವನ ಕಾಲದಲ್ಲಿ ವಿಹಂಗಮ, ಕಾಮಗಮ, ನಿರ್ವಾಣರತಿ ಎಂಬ ಮುಖ್ಯವಾದ ದೇವಗಣಗಳು ಇರುತ್ತವೆ. ಒಂದೊಂದು ಗಣದಲ್ಲಿ ಮೂವತ್ತು ದೇವತೆಗಳು. ವೃಷ ಎಂಬುವನು ಆಗ ದೇವೇಂದ್ರನಾಗುವನು. ನಿಃಸ್ವರ, ಅಗ್ನಿತೇಜ, ವಪುಷ್ಮಾನ್, ಘೃಣಿ, ಆರುಣಿ, ಹವಿಷ್ಮಾನ್, ಅನಘ, ಸಪ್ತರ್ಷಿಗಳಾಗಿರುವರು. ಸರ್ವತ್ರಗ, ಸುಧರ್ಮ, ದೇವಾನೀಕ, ಮೊದಲಾದ ಮನುಪುತ್ರರು ಆಗಿನ ರಾಜರಾಗುವರು.

12. ರುದ್ರಪುತ್ರನಾದ ಸಾವರ್ಣಿಯು ಹನ್ನೆರಡನೆಯ ಮನುವಾಗುವನು. ಋತುಧಾಮ ಎಂಬುವನು ಆ ಕಾಲದ ದೇವೇಂದ್ರನಾಗುವನು. ಹತ್ತು ಹತ್ತು

ದೇವತೆಗಳುಳ್ಳ ಹರಿತ, ರೋಹಿತ, ಸುಮನ, ಸುಕರ್ಮ, ಸುರಾಪ ಎಂಬ ಐದು ದೇವಗಣಗಳಿರುತ್ತವೆ. ತಪಸ್ವಿ, ಸಂತಪ, ತಪೋಮೂರ್ತಿ, ತಪೋರತಿ, ತಪೋಧೃತಿ, ದ್ಯುತಿ, ತಪೋದನ ಎಂಬುವರು ಸಪ್ತರ್ಷಿಗಳಾಗಿರುವರು. ದೇವವಾನ್, ಉಪದೇವ, ದೇವಶ್ರೇಷ್ಠ ಮೊದಲಾದವರು ರಾಜರಾಗುವರು.

13. ರುಚಿ ಎಂಬುವನು ಹದಿಮೂರನೆಯ ಮನುವಾಗುವನು. ಸುತ್ರಾಮ, ಸುಕರ್ಮ, ಸುಧರ್ಮ ಎಂಬ ದೇವಗಣಗಳಿತ್ತವೆ. ಒಂದೊಂದು ಗಣದಲ್ಲಿಯೂ ಮೂವತ್ತಮೂರು ದೇವತೆಗಳು. ಮಹಾವೀರನಾದ ದಿವಸ್ಪತಿಯು ದೇವೇಂದ್ರನಾಗುವನು. ನಿರ್ಮೋಹ, ತತ್ತ್ವದರ್ಶಿ, ನಿಷ್ಪ್ರಂಕಚ್ಯ, ನಿರುತ್ಸುಕ, ದ್ಯುತಿಮಾನ್ ಅವ್ಯಯ, ಸುತಪ ಎಂಬುವರು ಸಪ್ತರ್ಷಿಗಳಾಗುವರು. ಚಿತ್ರಸೇನ, ವಿಚಿತ್ರ, ರುಚಿ ಮನುವಿನ ಪುತ್ರರು. ಅವರು ರಾಜರಾಗುವರು.

14. ಭೌಮ ಎಂಬುವನು ಹದಿನಾಲ್ಕನೆಯ ಮನುವಾಗುವನು. ಶುಚಿ ಎಂಬುವನು ದೇವೇಂದ್ರ. ಆಗ ಐದು ದೇವಗಣಗಳಿರುತ್ತವೆ. ಚಾಕ್ಷುಷ, ಪವಿತ್ರ, ಕನಿಷ್ಠ, ಬ್ರಾಜಿಕ, ವಾಚಾವೃದ್ಧ ಎಂದು ಐದು ದೇವಗಣಗಳಿರುತ್ತವೆ. ಅಗ್ನಿಬಾಹು, ಶುಚಿ, ಶುಕ್ರ, ಮಾನದ, ಅಗ್ನಿದ್ರ ಯುಕ್ತ, ಜಿತ, ಎಂಬುವರು ಸಪ್ತರ್ಷಿಗಳಾಗುವರು. ಊರು, ಗಂಭೀರ, ಬುದ್ಧಿ ಮುಂತಾದ ಮನುಪುತ್ರರು ಆಗ ಭೂಮಿಯನ್ನು ಪಾಲಿಸುವರು. ಪ್ರತಿಯೊಂದು ಚತುರ್ಯುಗದ (ಅಂದರೆ ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ) ಕೊನೆಯಲ್ಲಿ ವೇದಗಳಿಗೆ ಲೋಪವಾಗುತ್ತದೆ. ಆಗ ಸಪ್ತರ್ಷಿಗಳು ದೇವಲೋಕದಿಂದ ಭೂಲೋಕಕ್ಕೆ ಬಂದು ವೇದಗಳನ್ನು ಪ್ರವರ್ತಿಸುವರು. ಪ್ರತಿಯೊಂದು ಕೃತಯುಗದಲ್ಲಿಯೂ ಧರ್ಮಶಾಸ್ತ್ರವನ್ನು ರಚಿಸತಕ್ಕ ಮನುವಿನ ಪ್ರಾದುರ್ಭಾವವಾಗುತ್ತದೆ. ಒಂದು ಮನ್ವಂತರ ಕಳೆಯುವವರೆಗೂ ಆಯಾ ದೇವತೆಗಳು ಯಜ್ಞದ ಹವಿರ್ಭಾಗವನ್ನು ಭುಂಜಿಸುವಾಗ ಇನ್ನು ಮನುಪುತ್ರರು ಯಾರಿದ್ದಾರೋ ಅವರು ಅವರ ವಂಶಜರೂ ಆ ಮನ್ವಂತರ ಕಳೆಯುವವರೆಗೂ ಈ ಭೂಮಿಯನ್ನು ಪರಿಪಾಲಿಸುತ್ತಾರೆ. ಹೀಗೆ ಹದಿನಾಲ್ಕು ಮನ್ವಂತರಗಳಿಂದ ಕೂಡಿ ಒಂದು ಸಾವಿರ ಚತುರ್ಯುಗ ಪರ್ಯಂತವಾದ ಕಾಲವು ಸಂಪೂರ್ಣವಾಗಿ ಒಂದು ಕಲ್ಪವೆನಿಸುತ್ತದೆ (ಇದೇ ಬ್ರಹ್ಮನ ಹಗಲು).

ನಂತರ ಅಷ್ಟೇ ಕಾಲ ಪರಿಣಾಮವುಳ್ಳ ರಾತ್ರಿಯಾಗುತ್ತದೆ. ಬ್ರಹ್ಮರೂಪ ಧರಿಸಿದ್ಧ ವಿಷ್ಣುವು ಆಗ ಪ್ರಳಯಕಾಲದಲ್ಲಿ ಜಲದಲ್ಲಿ ಆದಿಶೇಷನ ಮೇಲೆ ಪವಡಿಸುತ್ತಾನೆ. ಆದಿಕರ್ತನೂ ಸರ್ವವ್ಯಾಪಿಯೂ ಆದ ಜನಾರ್ದನನು ಹೀಗೆ ಮೂರು ಲೋಕಗಳನ್ನು ನುಂಗಿ ತನ್ನ ಮಾಯೆಯಲ್ಲಿ ಸೇರಿಕೊಂಡಿರುತ್ತಾನೆ. ಪ್ರಳಯರಾತ್ರಿ ಕಳೆದನಂತರ ಪುನಃ ಎಚ್ಚೆತ್ತು ರಜೋಗುಣವನ್ನು ಆಶ್ರಯಿಸಿ ಆ ಭಗವಂತನು ಸೃಷ್ಟಿಯನ್ನು ಮಾಡುತ್ತಾನೆ.

**ಏವಮೇತಜ್ಜಗತ್ಸರ್ವಂಕ ಶಶ್ವತ್ ಪಾತಿ ಕರೋತಿಚ ।**

**ಹಂತ ಚಾಂತೇಷ್ವನಂತತ್ಮಾ ನಾಸ್ಯಸ್ಮಾದ್ ವ್ಯತಿಶೀಕಯತ್ ॥**

**ಭೃತಂ ಭವ್ಯ ಭವಿಷ್ಯಂ ಚ ಸರ್ವಭೂತಾನ್ಮಹಾತ್ಮನಃ ।**

**ತದತ್ರಾನ್ನತೃವಾವಿಪು ಸದ್ಭಾವ ಕಥಿತಸ್ತವ ॥**

ವಿ.ಪು.ತೃತೀಯಾಂಶ 59–60ಶ್ಲೋಕ

ಹೀಗೆ ಅನಂತಾತ್ಮನಾದ ಶ್ರೀ ಹರಿಯು ಸರ್ವ ಜಗತ್ತನ್ನು ಪಾಲಿಸುತ್ತಾನೆ. ನಿರ್ಮಿಸುತ್ತಾನೆ. ಪ್ರಳಯ ಕಾಲಗಳಲ್ಲಿ ನಾಶಮಾಡುತ್ತಾನೆ. ಅವನಿಗಿಂತ ಬೇರೆ ಯಾವುದೂ ಈ ಲೋಕದಲ್ಲಾಗಲಿ, ಪರಲೋಕದಲ್ಲಾಗಲೀ ಇಲ್ಲ. ಹೀಗೆ ಅನಂತಾತ್ಮನಾದ ಶ್ರೀಹರಿಯು ಸರ್ವ ಜಗತ್ತನ್ನುಪಾಲಿಸುತ್ತಾನೆ ನಿರ್ಮಿಸಿ. ಪ್ರಳಯ ಕಾಲಗಳಲ್ಲಿ ನಾಶಮಾಡುತ್ತಾನೆ. ಸರ್ವಸ್ವರೂಪನೂ, ಮಹಾತ್ಮನೂ ಆದ ವಿಷ್ಣುವಿಗಿಂತ ಭಿನ್ನವಾದ ಭೂತ, ವರ್ತಮಾನ, ಭವಿಷ್ಯತ್ತಿನಲ್ಲಿ ಮತ್ತಾವ ವಸ್ತುವೂ ಇಲ್ಲ. 'ಸರ್ವಂ ವಿಷ್ಣುಮಯಂ ಜಗತ್' ಎಂಬುದನ್ನು ಹೀಗೆ ಪರಾಶರರು ಮೈತ್ರೇಯರಿಗೆ ದೃಢೀಕರಿಸಿದರು. ಹೀಗೆ ಕಾಲ ಚಕ್ರವು ಚಾಚೂತಪ್ಪದೆ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ.

ಕಾಲ ಸಂಬಂಧಿತವಾದ ಕೆಲವು ವಿಷಯಗಳು.

1 ಕ್ಷಣ (ರೆಪ್ಪೆ ಮಿಟಕುವಷ್ಟು ಕಾಲ = 1/210 ಸೆಕೆಂಡ್)

2 ಕ್ಷಣ = 1 ಲವ (1/135 ಸೆಕೆಂಡ್)

3 ಲವ = 1 ನಿಮಿಷ (2/135 ಸೆಕೆಂಡ್)

18 ನಿಮಿಷ= 1 ಕಾಷ್ಠಾ (4/15 ಸೆಕೆಂಡ್ )

30 ಕಾಷ್ಠಾ = 1 ಕಲಾ (8 ಸೆಕೆಂಡ್)

30 ಕಲಾ=(ಕ್ಷಣ) 240 ಸೆಕೆಂಡ್– 4 ನಿಮಿಷ)

12 ಕ್ಷಣ = 1 ಮುಹೂರ್ತ (48 ನಿಮಿಷ)

30 ಮುಹೂರ್ತ = 24 ಘಂಟೆಗಳ 1 ದಿನ

15 ದಿನ = 1 ಪಕ್ಷ

30 ದಿನ =1 ಮಾಸ

2 ಮಾಸ = 1 ಋತು

6 ಋತು ಅಥವಾ 12 ಮಾಸ = 1 ಸಂವತ್ಸರ

ಸಂವತ್ಸರವು ಚಾಂದ್ರ, ಸೌರ, ಸಾವನ, ನಾಕ್ಷತ್ರ, ಬಾರ್ಹಸ್ಪತ್ಯ ಎಂದು ಐದು ವಿಧಗಳಿವೆ. ಚಾಂದ್ರ = ಶುಕ್ಲ ಪಾಡ್ಯದಿಂದ ಅಮಾವಾಸ್ಯೆಯ ಪರ್ಯಂತ 1 ತಿಂಗಳು. ಹುಣ್ಣಿಮೆಯ ದಿನ ಚಿತ್ರಾ ನಕ್ಷತ್ರವಿದ್ದರೆ ಚೈತ್ರ. ವಿಶಾಖವಿದ್ದರೆ ವೈಶಾಖ. ಹೀಗೆ 12 ತಿಂಗಳಿಗೆ ಅಧಿಕ ಮಾಸವಿದ್ದರೆ 13 ತಿಂಗಳಿಗೆ 1 ಚಾಂದ್ರ. ಸಂವತ್ಸರಗಳಿಗೆ ಪ್ರಭವ ವಿಭವಾದಿಗಳು ಚಾಂದ್ರ ಸಂವತ್ಸರಗಳು ಕೃಷ್ಣಪಾಡ್ಯದಿಂದ ಹುಣ್ಣಿಮೆಯವರೆಗೆ 1 ತಿಂಗಳು ಎಂಬ ಗಣನೆಯು ಉಂಟು. ಇದು ದಕ್ಷಿಣ ಭಾರತದಲ್ಲಿ ಬಳಕೆಯಲ್ಲಿಲ್ಲ.

ಸೌರ = ಸೂರ್ಯನ ಗತಿಯನ್ನು ಅನುಸರಿಸಿ ಮೇಷಾದಿ 12 ಮಾಸಗಳು 365 ಅಥವಾ 366 ದಿನಗಳುಸಾವನ = ಸೂರ್ಯೋದಯದಿಂದ ಸೂರ್ಯೋದಯದವರೆಗೆ 1 ದಿನದಂತೆ 360 ದಿನಗಳು

ನಕ್ಷತ್ರ = ಚಂದ್ರನು ಒಂದು ನಕ್ಷತ್ರದಲ್ಲಿ ಸಂಚರಿಸುವ ಕಾಲ ಒಂದು ದಿನ,

27 ನಕ್ಷತ್ರಗಳನ್ನು ಒಂದು ಸಲ ಸಂಚರಿಸಿದರೆ 1 ನಕ್ಷತ್ರಮಾಸ ಇಂಥ 12 ಮಾಸಗಳಿಗೆ ಒಂದು ನಕ್ಷತ್ರ ವರ್ಷ ಇದರಲ್ಲಿ 324 ದಿನಗಳು.

**ಬಾರ್ಹಸ್ಪತ್ಯ** :– ಮೇಷ ಮುಂತಾದ ಒಂದೊಂದು ರಾಶಿಯಲ್ಲಿಯೂ ಬೃಹಸ್ಪತಿ ಇರುವ ಕಾಲ = 360 ದಿನ ಚಾಂದ್ರಮಾನದಲ್ಲಿ ಮನುಷ್ಯರ ಒಂದು ತಿಂಗಳು = ಪಿತೃಗಳಿಗೆ ಒಂದು ದಿನ (ಶುಕ್ಲಪಕ್ಷ, ಹಗಲಾಗಿರುತ್ತದೆ. ಕೃಷ್ಣಪಕ್ಷ ರಾತ್ರಿಯಾಗಿರುತ್ತದೆ. ಸೌರಮಾನದಲ್ಲಿ ಮನುಷ್ಯರ ಒಂದು ವರ್ಷ = ದೇವತೆಗಳಿಗೆ ಒಂದು ದಿನ. ಉತ್ತರಾಯಣ = ಹಗಲು, ದಕ್ಷಿಣಾಯನ = ರಾತ್ರಿ.

ಮನುಷ್ಯರ 360 ವರ್ಷ = 1 ದೇವವರ್ಷ

ಕಲಿಯುಗ ಪ್ರಮಾಣ = 4,32,000 ಮಾನುಷ ವರ್ಷ

ದ್ವಾಪರಯುಗ ಪ್ರಮಾಣ = 8,64,000 ಮಾನುಷ ವರ್ಷ

ತ್ರೇತಾಯುಗ ಪ್ರಮಾಣ =12,96,000 ಮಾನುಷ ವರ್ಷ

ಕೃತಯುಗ ಪ್ರಮಾಣ = 17,28,000 ಮಾನುಷ ವರ್ಷ

ಈ 4 ಯುಗಗಳು = 43,20,000 ಮಾನುಷ ವರ್ಷ

ಈ 4 ಯುಗಗಳು = ದೇವತೆಗಳಿಗೆ ಒಂದು ಯುಗ

(ದೇವಮಾನದಿಂದ 12000 ವರ್ಷ)

1000 ದೇವಯುಗ = ಬ್ರಹ್ಮನ ಒಂದು ಹಗಲು (ಪ್ರಾಣಿಗಳು ಜೀವಿಸಿರುವ ಕಾಲ)

1000 ದೇವಯುಗ = ಬ್ರಹ್ಮನು ಅಹೋರಾತ್ರಿ ಅಂದರೆ ಒಂದು ದಿನ ಬ್ರಹ್ಮನ ಒಂದು ಹಗಲು = ಕಲ್ಪ (ಮನುಷ್ಯರ 432 ಕೋಟಿ ವರ್ಷ ಅದೇ ಪ್ರಮಾಣದ ಅಂದರೆ 432 ಕೋಟಿವರ್ಷ ಬ್ರಹ್ಮನ ರಾತ್ರಿಯು ಒಂದು ಕಲ್ಪವೆನಿಸಿತ್ತದೆ.

71 ದೇವಯುಗ = 1 ಮನ್ವಂತರ

ಬ್ರಹ್ಮನ ಒಂದು ಹಗಲಿನಲ್ಲಿ 14 ಮನ್ವಂತರಗಳಿವೆ. ಈಗಾಗಲೇ ನಾವು 14 ಮನ್ವಂತರಗಳ ಬಗ್ಗೆ ತಿಳಿದಿದ್ದೇವೆ. ಈ ಲೆಕ್ಕದ ಪ್ರಕಾರ 994 ದೇವಯುಗಗಳಿಗೆ ಬ್ರಹ್ಮನ ಒಂದು ಹಗಲಾಗುತ್ತದೆ. ಆದರೆ 1000 ದೇವಯುಗಗಳಿಗೆ ಒಂದು ಹಗಲೆಂದು ಮೇಲೆ ಹೇಳಿದೆ. ಉಳಿದ 6 ದೇವಯುಗಗಳು ಸಂಧ್ಯಾ ಸಂಧ್ಯಾಂಶಗಳಲ್ಲಿ ಸೇರುತ್ತವೆ. ಮನ್ವಂತರದಲ್ಲಿ 30 ಕೋಟಿ, 85 ಲಕ್ಷ, 71 ಸಾವಿರ, 428 ವರ್ಷ, 6 ತಿಂಗಳು, 25 ದಿನ, 42 ಗಳಿಗೆ 51 ಚಿಲ್ಲರೆ ವಿಘಳಿಗೆಗಳು ಇರುತ್ತವೆಯೆಂದು ವ್ಯಾಖ್ಯಾನಕಾರನಾದ ಮುಕುಟನ ಅಭಿಪ್ರಾಯವಾಗಿದೆ (1 ಘಳಿಗೆ = 60 ವಿಘಳಿಗೆ)

ಈಗ ವೈವಸ್ವತವೆಂಬ 6ನೇ ಮನ್ವಂತರ ನಡೆಯುತ್ತಿದೆ. 864 ಕೋಟಿ ಮಾನುಷ ವರ್ಷಗಳಿಗೆ ಬ್ರಹ್ಮನ ಅಹೋರಾತ್ರಿ ಒಂದು ದಿನ = 360 ದಿನಗಳಿಗೆ ಒಂದು ವರ್ಷ. ಈ ರೀತಿಯಲ್ಲಿ 100 ವರ್ಷ ಬ್ರಹ್ಮನ ಆಯಸ್ಸು (864 ಕೋಟಿ ವರ್ಷ 360) ಈ ಆಯುಃ ಪ್ರಮಾಣಕ್ಕೆ ಪರ ಎಂದು ಹೆಸರು. ಇದರಲ್ಲಿ ಮೊದಲನೆಯ 50 ವರ್ಷ ಪ್ರಥಮ ಪರಾರ್ಧ. ನಂತರ ದ್ವಿತೀಯ ಪರಾರ್ಧ ನಡೆಯುತ್ತಿದೆ (ಸಂಕಲ್ಪ ಮಾಡುವಾಗ ಹೇಳುವುದನ್ನು ಗಮನಿಸಿರಬಹುದು) ಬ್ರಹ್ಮನಿಗೆ 50 ವರ್ಷ ಕಳೆದು 51ನೇ ವರ್ಷದ ಒಂದನೇ ತಿಂಗಳಲ್ಲಿ 26ನೇ ದಿನ. ಈ ದಿನವೇ ಶ್ವೇತವರಾಹಕಲ್ಪ ಎಂದು ಪರಿಗಣಿಸಲಾಗಿದೆ.

## ಮುಖ್ಯವಾಗಿ ತಿಳಿಯಬೇಕಾದ ಅಂಶಗಳು.

(ಅಯನ ಎಂದರೆ ಸಂಚಾರ. ಅಯನಗಳು 2.)

**ಸೂರ್ಯನ ಸಂಚಾರ** ವೈಜ್ಞಾನಿಕವಾಗಿ ಸೂರ್ಯ ಸಂಚರಿಸುವುದಿಲ್ಲ. ಭೂಮಿಯೇ ಸುತ್ತುತ್ತದೆ. ಅದರ ಪ್ರಕಾರ ಈ ಬದಲಾವಣೆ.

1. ಕಟಕ ಸಂಕ್ರಮಣ (ಆಡಿ) ದಿಂದ ಮೊದಲುಗೊಂಡು

ಮಕರ ಸಂಕ್ರಮಣ (ತೈ) ದವರೆಗೂ = ದಕ್ಷಿಣಾಯನ (ಜುಲೈ ಕೊನೆಯ ವಾರದಿಂದ ಜನವರಿ ಎರಡನೆಯ ವಾರದವರೆಗೂ

2. ಮಕರ ಸಂಕ್ರಮಣದಿಂದ (ತೈ) ಮೊದಲುಗೊಂಡು ಕಟಕ ಸಂಕ್ರಮಣ (ಆಡಿ) ಮಾಸದವರೆಗೂ ಉತ್ತರಾಯಣ (ಜನವರಿ ಎರಡನೆಯ ವಾರದಿಂದ ಜುಲೈ ಕೊನೆಯ ವಾರದವರೆಗೆ) ಈಗ ಸಂಸ್ಕೃತ ಮತ್ತು ತಮಿಳಿನಲ್ಲಿ ಹಾಗೂ ಕನ್ನಡ ಬಳಸಲ್ಪಡುವ ತಿಂಗಳುಗಳ ಹೆಸರುಗಳನ್ನು ತಿಳಿಯೋಣ (ತಿಂಗಳುಗಳು 12)

| **ಸಂಸ್ಕೃತ (ಕನ್ನಡ)** | **(ತಮಿಳು)** |
|---|---|
| ಮೇಷ ಮಾಸ | ಚಿತ್ತಿರೈ |
| ವೃಷಭ | ವೈಯಾಶಿ |
| ಮಿಥುನ | ಆಣಿ |
| ಕಟಕ | ಆಡಿ |
| ಸಿಂಹ | ಆವಣಿ |
| ಕನ್ಯಾ | ಪುರಟ್ಟಾಸಿ |
| ತುಲಾ | ಐಪಸಿ |
| ವೃಶ್ಚಿಕ | ಕಾರ್ತಿಗೈ |
| ಧನುಸ್ಸು | ಮಾರ್ಗಳಿ |
| ಮಕರ | ತೈ |
| ಕುಂಭ | ಮಾಶಿ |
| ಮೀನ | ಪಂಗುನಿ |

**ಪಕ್ಷಗಳು –2**

1. ಅಮಾವಾಸ್ಯೆಯಿಂದ ಹುಣ್ಣಿಮೆಯವರೆಗೂ = ಶುಕ್ಲಪಕ್ಷ

2. ಹುಣ್ಣಿಮೆಯಿಂದ ಅಮಾವಾಸ್ಯೆಯವರೆಗೂ = ಕೃಷ್ಣ ಪಕ್ಷ

## ವಾರಗಳು – 7

| (ಸಂಸ್ಕೃತ) | (ಕನ್ನಡ) |
|---|---|
| ಭಾನುವಾಸರೇ | ಭಾನುವಾರ |
| ಇಂದುವಾಸರೇ | ಸೋಮವಾರ |
| ಭೌಮವಾಸರೇ | ಮಂಗಳವಾರ |
| ಸೌಮ್ಯವಾಸರೇ | ಬುಧವಾರ |
| ಗುರುವಾಸರೆ | ಗುರುವಾರ |
| ಭೃಗುವಾಸರೇ | ಶುಕ್ರವಾರ |
| ಸ್ಥಿರವಾಸರೆ | ಶನಿವಾರ |

**ನಕ್ಷತ್ರಗಳು 27**

1. ಅಶ್ವಿನಿ
2. ಭರಣಿ
3. ಕೃತ್ತಿಕ
4. ರೋಹಿಣಿ
5. ಮೃಗಶಿರ
6. ಆರಿದ್ರಾ
7. ಪುನರ್ವಸು

8. ಪುಷ್ಯ

9. ಆಶ್ಲೇಷ

10. ಮಖ

11. ಪೂರ್ವಾಷಾಢ

12. ಉತ್ತರಷಾಢ

13. ಹಸ್ತ

14. ಚಿತ್ತ

15. ಸ್ವಾತಿ

16. ವಿಶಾಖ

17. ಅನೂರಾಧ

18. ಜೇಷ್ಠ

19. ಮೂಲ

20. ಪೂರ್ವಾಷಾಢ

21. ಉತ್ತರಾಷಾಢ

22. ಶ್ರವಣ

23. ಧನಿಷ್ಠ

24. ಶತಭಿಷ

25. ಪೂರ್ವಾಭಾದ್ರ

26. ಉತ್ತರಾಭಾದ್ರ

27. ರೇವತಿ

## ಋತುಗಳು 6

1. ಮೇಷ + ವೃಷಭ = ವಸಂತ ಋತು (ಚಿತ್ತಿರೈ + ವೈಯಾಶಿ)
2. ಮಿಥುನ + ಕಟಕ = ಗ್ರೀಷ್ಮ ಋತು (ಆಣಿ + ಆಡಿ)
3. ಸಿಂಹ + ಕನ್ಯಾ = ವರ್ಷ ಋತು (ಆವಣಿ + ಪುರಟ್ಟಾಸಿ)
4. ತುಲಾ + ವೃಶ್ಚಿಕ = ಶರದೃತು (ಐಪಸಿ + ಕಾರ್ತಿಗೈ)
5. ಧನಸ್ಸು + ಮಕರ = ಹೇಮಂತ ಋತು (ಮಾರ್ಗಳಿ + ತೈ)
6. ಕುಂಭ +ಮೀನ = ಶಿಶಿರ ಋತು (ಮಾಸಿ + ಪಂಗುನಿ)

**ತಿರ್ಯಗ್ಗಾಮಿ ಎಂದರೇನು ?**

ಈ ಹಿಂದೆ ಬ್ರಹ್ಮನ ಸೃಷ್ಟಿಯನ್ನು ವಿವರಿಸುವಾಗ ತಿರ್ಯಗ್ಗಾಮಿಗಳ ಸೃಷ್ಟಿಯಾಯಿತು ಎಂದು ನಾವು ತಿಳಿದೆವು. ಅದರ ಬಗ್ಗೆ ಸ್ವಲ್ಪ ವಿವರವಾಗಿ ತಿಳಿಯೋಣ. ತಿರ್ಯಗ್ಗಾಮಿ ಎಂದರೆ ತಿರ್ಯಕ್ = ಗಾಳಿಯಂತೆ ಅಡ್ಡಲಾಗಿ ಸಂಚಾರ ಇದ್ದುದರಿಂದ ಅದು ತಿರ್ಯಗ್ಗಾಮಿಯೆನಿಸುತ್ತದೆ.

**ಅಹಂಕೃತಾ ಅಹಮ್ಮಾನಾ ಅಷ್ಟಾವಿಂಶದ್ವಧಾತ್ಮಕಾಃ**
**ಅಂತಃ ಪ್ರಕಾಶಾಸ್ತೇ ಸರ್ವೇ ಆ ವೃತಾಶ್ಚ ಪರಸ್ಪರಮ್ ॥**

ವಿ.ಪು. ಪ್ರಥವನಾಂಶ ಅಧ್ಯಾಯ 5. 11 ನೇ ಶ್ಲೋಕ

ಇವು 'ನಾನು' ಎಂಬ ಅಹಂಕಾರವುಳ್ಳದ್ದು. ಇವು ಇಪ್ಪತ್ತೆಂಟು 'ವಧ' ಗಳಿಗೆ ಒಳಗಾದವು. ಇವು ಆಂತರಿಕವಾದ ಸುಖದುಃಖಗಳನ್ನು ಬಲ್ಲವು. ಈ ಇಪ್ಪತ್ತೆಂಟು ವಧಗಳ ಬಗ್ಗೆ ಸಾಂಖ್ಯಕಾರಿಕೆಯಲ್ಲಿ ವಿವರಣೆಯು ಇದೆ. ಅದರ ಬಗ್ಗೆ ಈಗ ತಿಳಿಯೋಣ.

**ಏಕಾದಶೇಂದ್ರಿಯವಧಾಃ ಸಹಬುದ್ಧಿ ವಧೈರಶಕ್ತಿರುದ್ಧಿಷ್ಟಾ ।**

**ಸಪ್ತದಶ ವಧಾ ಬುದ್ಧೇರ್ವಿಪರ್ಯಯಾತ್ ತುಷ್ಟಿಸಿದ್ಧೀನಾಮ್ ।**

ಇಲ್ಲಿ ಹನ್ನೊಂದು ಇಂದ್ರಿಯ ವಧಗಳು ಹದಿನೇಳು ಬುದ್ಧಿವಧಗಳು (ಒಟ್ಟು 28 ವಧಗಳು) ತಿಷ್ಟಿ ಮತ್ತು ಸಿದ್ಧಿಗಳ ವಿಪರ್ಯಯದಿಂದ ಬುದ್ಧಿವಧಗಳಾಗುತ್ತವೆ. ಈ ಎಲ್ಲ ವಧಗಳೂ ಬುದ್ಧಿಯ ಅಶಕ್ತಿ ಎಂದು ಪರಿಗಣಿಸಲಾಗಿದೆ. ನಮಗೆ ಪಂಚ ಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಮನಸ್ಸು ಸೇರಿ ಹನ್ನೊಂದು ಇಂದ್ರಿಯಗಳು ಇವೆ. ವದವೆಂದರೆ ಘಾತ, ವೈಗುಣ್ಯ, ದೋಷ ಎಂದರ್ಥ. ಇಂದ್ರಿಯ ದೋಷಗಳು ಪರ್ಯವಸಾನದಲ್ಲಿ ಬುದ್ಧಿಗೆ ಸಂಬಂಧಿಸಿ ಪರಂಪರೆಯಿಂದ ಬುದ್ಧಿವಧಗಳೇ ಆಗುತ್ತವೆ.

**ಬುದ್ಧಿವಧಗಳು ಯಾವುವೆಂದರೆ,**

**ಬಾಧಿರ್ಯಂ ಕೃಷ್ಠಿತಾಂಧತ್ವಂ ಜಡತಾಜಿಘ್ರತಾ ತಥಾ ।**
**ಮೂಕತಾ ಕೌಣ್ಯಪಂಗುತ್ವೇ ಕ್ಲೈ ಬ್ಯೋದಾವರ್ತ ಮಂದತಾಃ ॥**

1. ಬಾಧಿರ್ಯ = ಕಿವುಡು – ಶ್ರೋತ್ರೇಂದ್ರಿಯ ವಧ
2. ಕುಷ್ಠಿತಾ = ಸ್ಪರ್ಶಜ್ಞಾನವಿಲ್ಲದಿರುವುದು – ತ್ವಗಿಂದ್ರಿಯ ವಧ
3. ಅಂಧತ್ವ = ಕುರುಡು – ಚಕ್ಷುರಿಂದ್ರಿಯ ವಧ
4. ಜಡತಾ = ರುಚಿ ತಿಳಿಯದಿರುವಿಕೆ – ರಸನೇಂದ್ರಿಯ ವಧ
5. ಅಜಿಘ್ರತಾ = ವಾಸನೆ ಗೊತ್ತಾಗದಿರುವುದು – ಘ್ರಾಣೇಂದ್ರಿಯ ವಧ
6. ಮೂಕತಾ = ಮಾತನಾಡಲು ಬರದಿರುವುದು – ವಾಗೀಂದ್ರಿಯ ವಧ
7. ಕೌಣ್ಯ = ಕೈಗಳ ನ್ಯೂನತೆ – ಪಾಣೀಂದ್ರಿಯ ವಧ
8. ಪೌಂಗುತ್ವ = ಕುಂಟು – ಪಾದೇಂದ್ರಿಯ ವಧ

9. ಕ್ಲೈಬ್ಯ = ನಪುಂಸಕತೆ – ಉಪಸ್ಥೇಂದ್ರಿಯ ವಧ

10. ಉದಾವರ್ತ = ಮಲಮೂತ್ರ ಬದ್ಧತೆ – ಪಾಯ್ವಿಂದ್ರಿಯ ವಧ

11. ಮಂದತಾ = ಮಂಕು – ಮನಸ್ಸಿನ ವಧ

ಇನ್ನು ತುಷ್ಟಿಸಿದ್ಧಿಗಳಿಗೆ ವಿಪರೀತವಾದವು ಹದಿನೇಳು ಬುದ್ಧಿವಧಗಳು. ಇವುಗಳಲ್ಲಿ ತಿಷ್ಟಿಗಳು ಒಂಭತ್ತು ಇವೆ.

**ತುಷ್ಟಿ ಸಿದ್ಧಿಗಳು ಯಾವುವು? ಎಂಬುದನ್ನು ತಿಳಿಯೋಣ**

1. ಪ್ರಕೃತಿಯೇ ವಿವೇಕವನ್ನುಂಟುಮಾಡುತ್ತದೆ. ಅದಕ್ಕಾಗಿ ಪ್ರಯತ್ನಿಸಬೇಕಾದ್ದಿಲ್ಲ ಎಂಬುದು ಮನಸ್ಸಮಾಧಾನ ಪ್ರಕೃತಿ ತುಷ್ಟಿ ಎಂದು ಹೆಸರು.

2. ಪ್ರಕೃತಿಯಿಂದಲೇ ವಿವೇಕ ಹುಟ್ಟುವುದಾರೆ ಎಲ್ಲರಿಗೂ ಹುಟ್ಟಬೇಕಾಗುತ್ತದೆ. ಆದ್ದರಿಂದ ಸಂನ್ಯಾಸವನ್ನು ಸ್ವೀಕರಿಸಬೇಕು ಎಂಬ ಸಮಾಧಾನ ಉಪಾದಾನ ತುಷ್ಟಿ

3. ಸಂನ್ಯಾಸದಿಂದ ಮುಕ್ತಿಯಾಗುವುದಾದರೂ ಕಾಲವನ್ನು ಅಪೇಕ್ಷಿಸುತ್ತದೆ. ಕಾಲ ಬಂದಾಗ ಮುಕ್ತಿ ದೊರೆಯತ್ತದೆಯೆಂಬುದು ಕಾಲತುಷ್ಟಿ.

4. ಕಾಲದಿಂದಲೇ ಮುಕ್ತಿ ದೊರಕುವುದಿಲ್ಲ. ಅದಕ್ಕೆ ಭಾಗ್ಯಬೇಕು ಎಂಬ ನಂಬಿಕೆ ಭಾಗ್ಯತುಷ್ಟಿ

5. ಹಣವು ದುಃಖಕ್ಕೆ ಕಾರಣ ಎಂದು ತಿಳಿದು. ಧನದ ಆರ್ಜನೆಯನ್ನು ಬಿಟ್ಟಾಗ ಆಗುವ ಸಮಾಧಾನ ಪಾರತುಷ್ಟಿ

6. ಹಣವು ಎಂದಿದ್ದರೂ ವಿಪತ್ತಿಗೆ ಕಾರಣ, ಹಣವಿಲ್ಲದಿರವುದೇ ಮೇಲು ಎಂದು ತಿಳಿದು ಧನದ ರಕ್ಷಣ ಪ್ರಯತ್ನ

7. ಶ್ರಮದಿಂದ ಆರ್ಜಿಸಿದ ಧನವು ಭೋಗಿಸಿದರೆ ಕ್ಷಯಿಸುತ್ತದೆ. ಆದ್ದರಿಂದ ನನಗೆ ಭೋಗವೇ ಬೇಡ ಎಂಬ ಭಾವನೆ ಪಾರಾಪಾರತುಷ್ಟಿ.

8. ವಿಷಯ ಭೋಗವೆಲ್ಲವೂ ದುಃಖ ಜನಕವಾದದ್ದು. ಅದು ದೊರಕದೆ ಹೋದಾಗ ಕಷ್ಟವೆನಿದುತ್ತದೆ. ಆದ್ಧರಿಂದ ಯಾವ ಬಗೆಯ ವಿಷಯ ಸುಖವೂ ಬೇಡ ಎಂಬ ಸಮಾಧಾನವು ಅನುತ್ತಮಾಂಬ ಎಂಬ ತುಷ್ಟಿ.

9. ಪ್ರತಿಯೊಂದು ಭೋಗವೂ ಇನ್ನೊಬ್ಬರಿಗೆ ಹಿಂಸೆ ಕೊಡುವುದರಿಂದಲೇ ಉಂಟಾಗುತ್ತದೆ. ಯಾರಿಗೂ ಇದರಿಂದ ಹಿಂಸೆಯಾಗುವುದು ಬೇಡ ಎಂದು ಭೋಗವೆಲ್ಲವನ್ನು ತ್ಯಜಿಸಿರುವುದೇ ಉತ್ತಮಾಂಬ. ತುಷ್ಠಿ ಈ ಒಂಒತ್ತು ತುಷ್ಟಿಗಳು ಇಲ್ಲದೆ ಹೋದರೆ ಅದು ಒಂಬತ್ತು ತುಷ್ಠಿವಧಗಳೆನಿಸುತ್ತವೆ. ಇದು ಒಂದು ರೀತಿಯ ಚೈನ್ ರಿಯಾಕ್ಷನ್ ಎಂದೇ ತಿಳಿಯೋಣವೇ? ತುಷ್ಟಿಗೆ ವಿಪರೀತವಾದ ಬುದ್ಧಿಯೂ ತುಷ್ಟಿವಧ ಎನಿಸುತ್ತ

**ಅಷ್ಟಸಿದ್ಧಿಗಳು ಯಾವುವು ? ಎಂಬುದನ್ನು ತಿಳಿಯೋಣ.**

1. ಗುರು ಮುಖದಿಂದ ಅಧ್ಯಾತ್ಮಶಾಸ್ತ್ರದ ಪಠನ ಅಧ್ಯಯನಸಿದ್ಧಿ

2. ಕಲಿತ ಅಧ್ಯಾತ್ಮಶಾಸ್ತ್ರದ ಅರ್ಥಜ್ಞಾನ ಶಬ್ಧಸಿದ್ಧಿ

3. ಯುಕ್ತಿಯಿಂದ ಶಾಸ್ತ್ರಾರ್ಥದ ಪರೀಕ್ಷಣ ಊಹ

4. ಗುರು ಮತ್ತು ಸಹಾಧ್ಯಾಯಿಗಳೊಡನೆ ಚಿಂತನ ಸುಹೃತ್ ಪ್ರಾಪ್ತಿ

5. ಶಾಸ್ತ್ರಸಂಪಾದಿತ ತತ್ವಜ್ಞಾನದಲ್ಲಿ ಅಚಲನಿಷ್ಠೆ – ದಾನ, ದಾನ – ಶುದ್ಧಿ, ದೈಪ್– ಎಂಬುದು ಧಾತು. ದೈಪ ಎಂದರೆ ಶೋಧನೆ ಎಂದರ್ಥ

6. ಆಧ್ಯಾತ್ಮಿಕ ದುಃಖ ವಿಘಾತ

7. ಆದಿಭೌತಿಕ ದುಃಖ ವಿಘಾತ

8. ಆದೀಲೌಕಿಕ ದುಃಖ ವಿಘಾತ

**ಎಂಟು ಸಿದ್ಧಿಗಳ ವಿಪರ್ಯಯವೇ ಅಷ್ಟಸಿದ್ಧಿ ವಧಗಳು**

**ಅನುಗ್ರಹ ಎಂದರೇನು ?**

ಗ್ರಹ ಎಂದರೆ ಬುದ್ಧಿ. ಬುದ್ಧಿಯನ್ನು ಅನುಸರಿಸಿದ್ದು ಅನುಗ್ರಹ. ಇದನ್ನು ಪ್ರತ್ಯಯಸರ್ಗವೆಂದೂ ಸಾಂಖ್ಯಕಾರಿಕೆಯಲ್ಲಿ ಕರೆಯಲಾಗಿದೆ. ಪ್ರತ್ಯಯ ಸರ್ಗ ಎಂದರೆ ಬುದ್ಧಿಯ ದೃಷ್ಟಿ ಏಷ ಪ್ರತ್ಯಯ ಸರ್ಗೋಃ ವಿಪರ್ಯಯಾ ಶಕ್ತಿ ತುಷ್ಟಿ ಸಿದ್ಧ್ಯಾಖಃ ಎಂದು ಸಾಂಖ್ಯಕಾರಿಕೆಯಲ್ಲಿ ತಿಳಿಸಲಾಗಿದೆ. ವಿಪರ್ಯಯಾ ಶಕ್ತಿ ತುಷ್ಟಿಸಿದ್ಧ್ಯಾಖ್ಯಃ ( ಸಾಂಖ್ಯಕಾರಿಕೆ = 46ನೇ ಶ್ಲೋಕ)

**ವಿಪರ್ಯಯ ಎಂದರೇನು ?**

ಇದು ತಮಸ್ಸು, ಮೋಹ, ಮಹಾಮೋಹ, ತಾಮಿಸ, ಅಂಧತಾಮಿಸ್ರ – ಎಂದು ಐದು ವಿಧಗಳಿವೆ. ಯೋಗಶಾಸ್ತ್ರದಲ್ಲಿ ಇವುಗಳನ್ನು ಕ್ರಮವಾಗಿ ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ ಎಂದು ಕರೆಯುತ್ತಾರೆ. ಇವೆಲ್ಲದೆ ಅಶಕ್ತಿ, ತುಷ್ಟಿಸಿದ್ಧಿ, ಅಷ್ಟಸಿದ್ಧಿಗಳನ್ನು ಈಗಾಗಲೇ ವಿವರಿಸಲಾಗಿದೆ.

**ಕೌಮಾರ ಸರ್ಗ ಎಂದರೇನು ?**

ಶಿವನ ಇನ್ನೊಂದು ರೂಪವುಳ್ಳ ನೀಲಲೋಹಿತರುದ್ರ. ಸನತ್ಕುಮಾರ, ಸನಂದ, ಸನಕ, ಸನಾತನ. ಇವರ ಸೃಷ್ಟಿಯೇ ಕೌಮಾರ ಸರ್ಗ ಎಂದು ಹೆಸರು.

**ವಿಷ್ಣುಪುರಾಣದಲ್ಲಿ ಕಂಡುಬರುವ ಸೃಷ್ಟಿರಹಸ್ಯ ಭಾರತವರ್ಷದ ವರ್ಣನೆ ರಾಷ್ಟ್ರಪ್ರೇಮ.**

ವಿಷ್ಣು ಪುರಾಣದ ಸೃಷ್ಟಿಕ್ರಮದಲ್ಲಿ ಕಾಪಿಲ ಸಾಂಖ್ಯ ಮತ್ತು ವೇದಾಂತ ಪ್ರಕ್ರಿಯೆಗಳ ಸಂಮಿಶ್ರಣವನ್ನು ನಾವು ಕಾಣಬಹುದು. ಅವ್ಯಕ್ತ, ಮಹತ್, ಅಹಂಕಾರ, ಸೂಕ್ಷ್ಮಭೂತಗಳ ಈ ಕ್ರಮದಿಂದ ಸೃಷ್ಟಿಯಾಯಿತು ಎನ್ನುತ್ತದೆ

ವಿಷ್ಣುಪುರಾಣ. ಅಂದರೆ ಇದು ಕಪಿಲ ಮಹರ್ಷಿಗಳ ಅಭಿಪ್ರಾಯವಾಗಿದೆ. ಸಾಂಖ್ಯರು 24 ತತ್ವಗಳಿಗೆ ಮೂಲವಾಗಿ ಮಹಾ ಚೈತನ್ಯರೂಪವಾದ ಆತ್ಮವು ಇದೆ ಎಂಬುದನ್ನು ತಿಳಿಸುತ್ತಾರೆ. ವೇದಾಂತಿಗಳು ಈ ಆತ್ಮತತ್ವವನ್ನು ಒಪ್ಪಿದ್ದಾರೆ. ಒಂದೇ ಒಂದು ವ್ಯತ್ಯಾಸವೆಂದರೆ ಸಾಂಖ್ಯರು 'ಅವ್ಯಕ್ತ' ಶಬ್ದಕ್ಕೆ ಬದಲಾಗಿ ವೇದಾಂತಿಗಳ 'ಅವಿದ್ಯಾ' ಎಂದು ಬಳಸಿದ್ದಾರೆ. ಈ ಬ್ರಹ್ಮವು ಸತ್ಯ, ರಜಸ್ಸು, ತಮಸ್ಸು ಎಂಬ ಗುಣತ್ರಯಗಳಿಂದ ಕೂಡಿ ಬ್ರಹ್ಮ, ವಿಷ್ಣು, ರುದ್ರಾದಿ, ರೂಪವನ್ನು ಧರಿಸುವುದೆಂದು ಈ ಕೃತಿಯಲ್ಲಿ ನಾವು ಹಲವಾರು ಸ್ಥಳಗಳಲ್ಲಿ ನಾವು ಕಾಣಬಹುದು. ಈ ಬ್ರಹ್ಮ ನಿರ್ಗುಣವಾದರೂ ಅಗ್ನಿಯಲ್ಲಿ ಉಷ್ಣತೆ ಹೇಗೆ ಇರುತ್ತದೋ ಅಂತೆಯೇ ಅದರಲ್ಲಿ ಅಚಿಂತ್ಯವಾದ ಮಹಾಶಕ್ತಿಗಳು ಇರುತ್ತವೆ. ವಿಷ್ಣುವೇ ಇತರ ಸಗುಣಮೂರ್ತಿಗಳಲ್ಲಿ ಶ್ರೇಷ್ಠನಾದವನು ಎಂಬುದು ವಿಷ್ಣುಪುರಾಣದ ದೃಢವಾದ, ಮುಖ್ಯವಾದ ನಿಲುವು. ಬ್ರಹ್ಮ ಮತ್ತು ಶಿವ ಇವರೂ ಸಹ ಪರಬ್ರಹ್ಮದ ಸಗುಣ ಮೂರ್ತಿಗಳಿದ್ದರಿಂದ ಈ ತ್ರಿಮೂರ್ತಿಗಳು ಸಮಾನರೆಂದೂ ಅಭಿನ್ನರೆಂದೂ ಈ ಕೃತಿಯು ತಿಳಿಸುತ್ತದೆ. ನಾರಾಯಣನೇ ಬ್ರಹ್ಮನೆಂದು ಸ್ಪಷ್ಟಪಡಿಸುವಾಗ 'ಬ್ರಹ್ಮಾನಾರಾಯಣಾಖ್ಯೋಸೌ' (1–4–1) ಬ್ರಹ್ಮಸ್ವರೂಪಿಭಗವಾನ್ (1–4–4) ಸ್ವಯಂ ವಿಶ್ವೇಶ್ವರೋ ಹರಿ ಬ್ರಹ್ಮಾ ಭೂತ್ವಾ (1–2–61) ಬ್ರಹರೂಪಧರಃ ಶೇತೆ ಭಗನಾದಿ ಕ್ರತ್‌ಹರಿ (6–4–4) ಎಂಬ ವಾಕ್ಯಗಳಿಂದ ನಾರಾಯಣನೇ ಬ್ರಹ್ಮನೆಂದು ಸ್ಪಷ್ಟಪಡಿಸುತ್ತದೆ. ಅಷ್ಟೇ ಅಲ್ಲ ಸೃಷ್ಟಿಮಾಡುವಾಗ ಬ್ರಹ್ಮನೇ ತನ್ನ ದೇಹವನ್ನು ನಾನಾ ರೂಪವಾಗಿ ಪರಿವರ್ತಿಸಿದನೆಂದು ವರ್ಣಿಸಲಾಗಿದೆ. ಅವನೇ ಸ್ರಜ್ಯ, ಅವನೇ ಸೃಷ್ಟಿಕರ್ತ ಎಂದೂ ವರ್ಣಿಸಲಾಗಿದೆ. ಅಲ್ಲದೆ 'ನಿಮಿತ್ತ ಮಾತ್ರವೇವಾಸೌ' ಎಂದು ವರ್ಣಿಸಿ ಜಗಚ್ಚಸ ಎಂದು ಹೇಳಿರುವುದರಿಂದ ಪರಬ್ರಹ್ಮ ವಸ್ತುವೇ ಜಗತ್ತಿಗೆ ಕಾರಣವೆಂದು  ಅವನೇ ಉಪಾದಾನಕಾರಣವೆಂದೂ ಸ್ಪಷ್ಟಪಡಿಸುತ್ತದೆ. ಈ ಪ್ರಮೇಯವು ಬಾದರಾಯಣದ ಬ್ರಹ್ಮಸೂತ್ರದ ಪ್ರತ್ಯಥಿಃಕರಣದಲ್ಲಿ ಬರುವ ಸಿದ್ಧಾಂತವಾಗಿದೆ. (1–4–23) ಜಗತ್ ಸೃಷ್ಟಿಯ  ರಹಸ್ಯವನ್ನು ತಿಳಿಸುವಾಗ ವಿಷ್ಣುಪುರಾಣವು ಬಾದರಾಯಣನ ಬ್ರಹ್ಮಸೂತ್ರದ ಪೃತ್ಯಥಿಃ ಕರಣದಲ್ಲಿ ಬರುವ ಸಿದ್ಧಾಂತವಾಗಿದೆ (1–4–23) ಜಗತ್‌ಸೃಷ್ಟಿಯ ರಹಸ್ಯವನ್ನು ತಿಳಿಸುವಾಗ ವಿಷ್ಣುಪುರಾಣವು ಹೀಗೆ ವರ್ಣಿಸುತ್ತದೆ. ಜಗತ್ತನ್ನು ಸೃಷ್ಠಿಸಬೇಕೆಂದು

ಪರಮಾತ್ಮ ರಜೋಗುಣ ಸಮನ್ವಿತವಾಗಿ ಬ್ರಹ್ಮರೂಪವನ್ನು ಧರಿಸಿದ. ಆಗ ಅವಿದ್ಯೆಯ ಹುಟ್ಟಿತು. ಅದನ್ನೇ ಸಾಂಖ್ಯರು ಅವ್ಯಕ್ತರೆಂದು ಗುರುತಿಸಿದರು. ಕೆಲವು ಪುರಾಣಗಳಲ್ಲಿ ಮಹತ್ ತತ್ವಕ್ಕೆ ಬುದ್ಧಿ ಎಂದೂ, ಬ್ರಹ್ಮ ಎಂದೂ ಹೇಳಿರುವುದುಂಟು. ವಿಷ್ಣುಪುರಾಣದಲ್ಲಿ ಮಹತ್ತಿನ ಸೃಷ್ಟಿಯನ್ನು ಮೊತ್ತ ಮೊದಲ ಸೃಷ್ಟಿಯೆಂದೂ, ಅದರಿಂದ ಅಹಂಕಾರವೂ ಸೇರಿ ಪಂಚತನ್ಮಾತ್ರಗಳು ಸೂಕ್ಷ್ಮಭೂತಗಳು. ಇವುಗಳಿಂದ ಇಂದ್ರಿಯ ಗೋಚರಗಳಾದ ಸ್ಥೂಲಭೂತಗಳು, ಅಗೋಚರಗಳಾದ ಇಂದ್ರಿಯಗಳು ಹುಟ್ಟಿದವು. ನಂತರ ಮರಬಳ್ಳಿಗಳೇ ಮೊದಲಾದ ಸ್ಥಾವರಗಳ ಸೃಷ್ಟಿಯಾಯಿತು. ನಂತರ ಕ್ರಿಮಿ ಕೀಟಾದಿಗಳು ಹುಟ್ಟಿದುವು. ನಂತರ ದೇವತೆಗಳ ಸೃಷ್ಟಿಯಾಯಿತು. ಕಡೆಯಲ್ಲಿ ಹುಟ್ಟಿದವರೇ ಮನುಷ್ಯರು (1–5–19 ರಿಂದ 23) ದೇವತೆಗಳ ಸೃಷ್ಟಿಯು ಕಾರ್ಯ ಸಾಧಕವಲ್ಲ ಎಂದು ಬಗೆದು ಬ್ರಹ್ಮನು ಮನುಷ್ಯರನ್ನು ಸೃಷ್ಟಿಸಿದ. ಈ ಮನುಷ್ಯರಿಗೆ ಸತ್ವ, ರಜಸ್ಸು, ತಮಸ್ಸು ಈ ಮೂರು ಗುಣಗಳು ಅಧಿಕವಾಗಿವೆ. ಮನುಷ್ಯರಿಗೆ ಸುಖಕ್ಕಿಂತ ದುಃಖವೇ ಅಧಿಕವಾಗಿರುತ್ತದೆ. ಸಾಧಾರಣವಾಗಿ ಮನುಷ್ಯರೇ ಅತ್ಯಂತ ಕ್ರಿಯಾಶೀಲರು. ಈ ಮನುಷ್ಯರು ಬಾಹ್ಯ ಮತ್ತು ಆಂತರಿಕ ಜ್ಞಾನವುಳ್ಳವರು. ಆದ್ದರಿಂದ ಇವರೇ ಬಹುಮಟ್ಟಿಗೆ ಕಾರ್ಯಸಾಧಕರೆಂದು ತಿಳಿದು ಬ್ರಹ್ಮನಿಗೆ ಅಮಿತಾನಂದವಾಯಿತಂತೆ. ದೇವತೆಗಳಿಗಿಂತ ಮನುಷ್ಯರೇ ಅಧಿಕ ಭಾಗ್ಯಸಂಪನ್ನರು. ಏಕೆಂದರೆ ಈ ಮನುಷ್ಯರಿಗೆ ಸ್ವರ್ಗ ಮೋಕ್ಷಗಳೆರಡನ್ನು ಪಡೆದುಕೊಳ್ಳುವ ಸಾಮರ್ಥ್ಯವಿದೆ. ಎಲ್ಲಕ್ಕಿಂತ ಮಿಗಿಲಾಗಿ ದೇವತೆಗಳು ಭರತಖಂಡದ ಪ್ರಾಶಸ್ತ್ಯವನ್ನು ಈ ರೀತಿ ವರ್ಣಿಸಿದ್ದಾರೆ.

**ಗಾಯಂತಿ ದೇವಾಃ ಕಿಲ ಗೀತಾಕಾನಿ ಧನ್ಯಾಸ್ತುತೇ ಭಾರತ ಭೂಮಿಭಾಗೇ**
**ಸ್ವರ್ಗಾಪವರ್ಗಾಸ್ಪದ ಮಾರ್ಗಭೂತೇ ಭವಂತಿ ಭೂಯಃ ಪುರುಷಾ ಸುರತ್ವಾತ್**

(2–3–24)

**ಜಾನೀಮ ನೈತತ್ ಕ್ವವಯಂ ವಿಲೀನೇ ಸ್ವರ್ಗಪ್ರದೇ ಕರ್ಮಣಿ ದೇಹಬಂಧಮ್**

**ಪ್ರಾಪ್ಸ್ಯಾಮ ಧನ್ಯಾಃ ಖಲು ತೇಮನುಷ್ಯಾ ಯೇ ಭಾರತೇನೇಂದ್ರಿಯ ವಿಪ್ರಹೀನಾ**

(2–3–21)

**ಅತ್ರ ಜನ್ಮಸಹಸ್ರಾಣಾಂ ಸಹಸ್ರೈ ರಪಿಸತ್ತಮ**
**ಕದಾ ಚಿಲ್ಲಭತೇ ಜಂತುರ್ಮಾನುಷ್ಯಂ ಪುಣ್ಯಸಂಚಯಾತ್**

(2–4–23)

ಭರತಖಂಡದ ಎಲ್ಲೆಯನ್ನು ಹೀಗೆ ವರ್ಣಿಸಲಾಗಿದೆ.

**ಉತ್ತರಂ ಯತ್ ಸಮುದ್ರಸ್ಯಹಿಮಾ ದ್ರೇಶ್ಚೈವ ದಕ್ಷಿಣಮ್ ।**
**ವರ್ಷಂ ತದ್ ಭಾರತಂ ನಾಮ ಭಾರತೀ ಯತ್ರ ಸಂತತಿ**

(2–3–1)

ನಮ್ಮ ಭಾರತ ಪವಿತ್ರ ಭೂಮಿ, ಪುಣ್ಯಭೂಮಿ. ಇಲ್ಲಿ ದೇವಾನುದೇವತೆಗಳು, ಋಷಿವರ್ಯರು, ಸುಪ್ರಸಿದ್ಧ ರಾಜರು ಮಹಾನ್ ತಪಸ್ವಿಗಳು ನೆಲಸಿದ್ದರು. ಇಲ್ಲಿನ ಪರ್ವತಗಳು, ವನಗಳು, ನದಿಗಳು ತನ್ನದೇ ಆದ ಪಾವಿತ್ರ್ಯತೆಯನ್ನು ಪಡೆದುಕೊಂಡಿವೆ. ಭರತ ಭೂಮಿಯಲ್ಲಿ ಜನ್ಮ ಪಡೆಯುವುದೆಂದರೆ ಅದು ಸಾಮಾನ್ಯದ ವಿಷಯವಲ್ಲ. ಇದು ಸಹಸ್ರಾರು ವರ್ಷಗಳ ಪುಣ್ಯಸಂಚಯ. ಆದ್ದರಿಂದ ನಮ್ಮ ದೇಶದ ರಕ್ಷಣೆ, ದೇಶದ ಪ್ರಗತಿಯತ್ತ ಸಾಗೋಣ.

**ವಿಷ್ಣು ಪುರಾಣದಲ್ಲಿ ತಿಳಿಸಿರುವ ವಂಶಾವಳಿಯೇ**

ವಿಷ್ಣುಪುರಾಣದಲ್ಲಿ ಕ್ಷತ್ರಿಯರಾಜರ ವಂಶಾವಳಿಯೇ ಪ್ರಧಾನವಾಗಿ ಬಂದಿದೆ. ಬ್ರಾಹ್ಮಣ ವೈಶ್ಯಾದಿಗಳ ವಂಶ ಚರಿತೆಯು ಇಲ್ಲವೇ ಇಲ್ಲ. ಇದಕ್ಕೆ ಕಾರಣವು ನಮಗೆ ತಿಳಿಯುವುದಿಲ್ಲ. ಆಧುನಿಕ ಇತಿಹಾಸದಲ್ಲಿಯೂ ಸಹ ರಾಜರ ವಂಶವನ್ನೇ ಪ್ರಧಾನವಾಗಿ ವರ್ಣಿಸಲಾಗಿದೆ. ಪ್ರಕೃತ ವಿಷಯಕ್ಕೆ ಬರೋಣ. ಪರಮಾತ್ಮನಿಂದ ಪ್ರಜಾವರ್ಗವು ಸೃಷ್ಟಿಯಾಯಿತು. ಇದರಲ್ಲಿ ಪ್ರಮುಖವಾಗಿ ರಾಜ್ಯಾರ್ಹವಾದ ಕ್ಷತ್ರಿಯ ವಂಶವು ಸೂರ್ಯವಂಶ – ಚಂದ್ರವಂಶ ಎಂದು ಎರಡು ವಿಭಾಗವಾಯಿತು. ಸೂರ್ಯವಂಶ – ಚಂದ್ರವಂಶಗಳ

ಬಗ್ಗೆ ತಿಳಿದುಕೊಳ್ಳುವ ಮುನ್ನ ಹನುಮದ್ವಿರಚಿತ ರಾಮಸೀತಾ ಸ್ತೋತ್ರವನ್ನು ಒಮ್ಮೆ ಪಠಿಸೋಣ. ಇದೆಷ್ಟು ಸೊಗಸಾದ ಸ್ತೋತ್ರಮಾಲೆ ಎಂಬುದನ್ನು ಕೇಳಿ ಆನಂದಿಸೋಣ.

## ಶ್ರೀ ರಾಮ ಸೀತಾ ಸ್ತೋತ್ರ

ಅಯೋಧ್ಯಾಪುರ ನೇತಾರಂ ಮಿಥಿಲಾಪುರನಾಯಕೀಂ
ರಾಘವಾಣಾಂ ಅಲಂಕಾರಂ ವೈದೇಹಾಣಾಂ ಅಲಂಕ್ರಿಯಾಂ
ರಘೂಣಾಂ ಕುಲ ದೀಪಂಚ ನಿಮೀನಾಂ ಕುಲದೀಪಿಕಾಂ
ಸೂರ್ಯವಂಶ ಸಮುದ್ಭೂತಂ ಸೋಮವಂಶ ಸಮುದ್ಭವಾಂ
ಪುತ್ರಂ ದಶರಥ ಸ್ಯಾಪಿ ಪುತ್ರೀಂ ಜನಕಭೂಪತೇಃ
ವಸಿಷ್ಟಾನುಮತಾ ಚಾರಂ ಶತಾನಂದಮತಾನುಗಾಂ
ಕೌಸಲ್ಯಾ ಗರ್ಭಸಂಭೂತಂ ವೇಧಗರ್ಭೋದಿತಾಂಸ್ವಯಂ
ಪುಂಡರೀಕ ವಿಶಾಲಾಕ್ಷಂ ಸ್ಫುರದಿಂದೀವರೇಕ್ಷಣಾಂ
ಮತ್ತಮಾತಂಗ ಗಮನಂ ಮತ್ತಹಂಸವಧೂಗತಾಂ
ಚಂದನಾದ್ರ ಭುಜಮಧ್ಯಂ ಕುಂಕುಮಾಕ್ತ ಭುಜಾಂತರಾಂ
ಚಾಪಾಲಂಕೃತ ಹಸ್ತಾಭ್ಯಾಂ ಪದ್ಮಾಲಂಕೃಕ ಪಾಣಿಕಾಂ
ಸರ್ವಲೋಕ ವಿದಾತಾರಂ ಸರ್ವಲೋಕವಿಧಾಯಿನೀಂ
ಲೋಕಾಭಿರಾಮಂ ಶ್ರೀರಾಮಂ ಅಭಿರಾಮಾಂಚ ಮೈಥಿಲೀಂ
ದಿವ್ಯಸಿಂಹಾಸನಾಧಿರೂಢಂ ದಿವ್ಯಸ್ವರ್ಗಸ್ಥ ಭೂಷಣಾಮ್
ಅನುಕ್ಷಣಂ ಕಟಾ ಕ್ಷ್ಯಾಂಚ ಅನ್ಯೋನ್ಯೇಕ್ಷಣ ಕಾಂಕ್ಷಿಣೌ

**ಅನ್ಯೋನ್ಯ ಸದೃಶೌಏತೌ ತ್ರೈಲೋಕ್ಯಗೃಹದಂಪತೀಮ್**

**ಇಮೇಯುವಾಂ ಪ್ರಣಮ್ಯಾಹಂ ಭಜಾಮ್ಯತಿಕೃತಾರ್ಥತಃ**

**ಆನಮ್ರಃ ಸ್ತೌತಿಯಃಸ್ತುತ್ಯ ರಾಮಂ ಸೀತಾಂ ಚ ಭಕ್ತಿ ತಃ**

**ತಸ್ಯತೌ ತನುತಾಂ ಪ್ರೀತೌ ಸಂಪದಃ ಸಕಲಾಮಪಿ**

**ಇತೀದಂ ರಾಮಚಂದ್ರಸ್ಸ ಜನಕ್ಯಾಶ್ಚ ವಿಶೇಷತಃ**

**ಕೃತಂ ಹನುಮತಾಪುಣ್ಯಂ ಸ್ತೋತ್ರಂ ಸದ್ಯೋ ವಿಮುಕ್ತಿದಂ ಯ ಪಠೇತ್ ರಾಮಚರಿತಂ ಸರ್ವಪಾಪೈಃಪ್ರಮುಚ್ಯತೇ**

ಅತ್ಯಂತ ಗಮನಾರ್ಹವಾದ ವಂಶಪರಂಪರೆ ಸೂರ್ಯವಂಶ.

ವಿಷ್ಣು, ಬ್ರಹ್ಮ, ದಕ್ಷ, ವಿವಸ್ವಾನ್ (ಸೂರ್ಯ) ಇದು ಉಪಕ್ರಮ ವಿವಸ್ವತನಿಂದ ಮನು, ಮನುವಿನಿಂದ ಇಕ್ಷ್ವಾಕು ಮೊದಲಾದ ಹತ್ತು ಜನ ಪುತ್ರರು ಜನಿಸಿದರು. ಈ ವಂಶದಲ್ಲಿ ಮರುತ್ತ, ಮಾಂಧಾತಾ, ತ್ರಿಶಂಕು, ಹರಿಶ್ಚಂದ್ರ, ಸಗರ, ಭಗೀರಥ, ಋತುಪರ್ಣಮ, ದಶರಥ, ಶ್ರೀರಾಮ, ಅಗ್ನಿವರ್ಣ, ಶೀಘ್ರಗ, ಮರು– ಇವರು ಅತ್ಯಂತ ಸ್ಮರಣೀಯರಾದ ರಾಜರು. ಮಹಾರಾಜನು ಯೋಗಧಾರಣೆ ಮಾಡಿ ಇಂದಿಗೂ ಕಲಾಪಗ್ರಾಮನೆಂದೂ ಮುಂದಿನ ಕೃತಯುಗದಲ್ಲಿ ಸೂರ್ಯವಂಶವನ್ನು ಸ್ಥಾಪಿಸುವನೆಂದೂ ಹೇಳಲಾಗಿದೆ. ಇಕ್ಷ್ವಾಕು ವಂಶವು ಸುಮಿತ್ರನೆಂಬ ರಾಜನವರೆಗೆ ನಡೆಯುವುದೆಂದೂ ತಿಳಿಸಲಾಗಿದೆ. **'ಇಕ್ಷ್ವಾಕೂಣಾಂ ಮಯಂ ವಂಶಃ ಸುಮಿತ್ರಾಂತೂ ಭವಿಷ್ಯ'** ಎಂದು ವಿಷ್ಣು ಪುರಾಣದಲ್ಲಿ ಹೇಳಲಾಗಿದೆ (4–12–13)

ಈ ಸೂರ್ಯ ವಂಶದಲ್ಲಿ ಇಕ್ಷ್ವಾಕುವಿನಮಗ 'ನಿಮಿ' ಯಿಂದ ಇನ್ನೊಂದು ಕವಲು ಒಡೆಯುತ್ತದೆ. ಇದರಲ್ಲಿ ಜನಕ, ವೈದೇಹಿ, ಸೀತೆಯ ತಂದೆಯಾದ ಜನಕ ಮುಂತಾದ ರಾಜರು ಜನಿಸಿದ್ದಾರೆ. **'ಕೃತಿ'** ಎಂಬ ರಾಜನವರೆಗೆ ನಿಮಿ ವಂಶ ನಡೆಯುತ್ತದೆ ಎಂದು ತಿಳಿಸಲಾಗಿದೆ. ಶ್ರೀ ರಾಮ ಮತ್ತು ಜನಕರಾಜ ಇವರಿಬ್ಬರಿಗೂ ಇಕ್ಷ್ವಾಕುವೇ ಮೂಲಪುರುಷ ಎಂಬುದು ಗಮನಾರ್ಹ ಸಂಗತಿ.

**ಚಂದ್ರವಂಶ :** ಸೂರ್ಯವಂಶಕ್ಕಿಂತ ಚಂದ್ರವಂಶವು ವಿಸ್ತಾರವಾಗಿದೆ. ವಿಷ್ಣು, ಅತ್ರಿ, ಚಂದ್ರ, ಬುಧ, ಪುರೂರವ – ಇದು ಚಂದ್ರವಂಶದ ಉಪಕ್ರಮ. ಪುರೂರವನ ಜಹ್ನು (ವಿಶ್ವಾಮಿತ್ರರ ತಂದೆ) ಗಾಧಿ ಹೀಗೆ ಇವರ ಪರಂಪರೆ ಒಂದು ಶಾಖೆ.

ಪುರೂರವನ ಮಗ – ಆಯುವಿನಿಂದ ನಹುಷ

ಧನ್ವಂತರಿ – ಯಯಾತಿಯದು ಕಾರ್ತವೀರ್ಯ ಮೊದಲಾದವರ ಪರಂಪರೆ ಮತ್ತೊಂದು ಶಾಖೆ. ಆದರೆ ಧನ್ವಂತರಿ ದೇವತೆಯು ಸಮುದ್ರಮಥನ ಕಾಲದಲ್ಲಿ ಹುಟ್ಟಿದನೆಂದೂ ಇವನೇ ಆಯುರ್ವೇದ ಶಾಸ್ತ್ರದ ಪ್ರತಿಷ್ಠಾಪಕ ಎಂದಾಗ ಆ ಧನ್ವಂತರಿ ಇವನೇನಾ ಎಂಬ ಸಂದೇಹಕ್ಕೆ ಅ ವಂಶ ಮಾಡಿಕೊಡುತ್ತದೆ. ಹೇಗಾದರಾಗಲಿ ಹಿಂದಿನ ಕಾಲದಲ್ಲಿ ಒಂದೇ ಹೆಸರುಳ್ಳ ಅನೇಕ ರಾಜ ಪರಂಪರೆಯಿದ್ದಿತು ಎಂಬುದು ನಿಜವಾದ, ಸಮಾಧಾನದ ಸಂಗತಿ. ಈ ಯದುವಂಶದಲ್ಲಿ ಹುಟ್ಟಿದ ಶೂರಸೇನನ ಮಗ ವಸುದೇವ. ವಸುದೇವನ ತಾಯಿ ಮಾರಿಷಾ ಪೃಥಾ (ಕುಂತಿ) ಶ್ರುತದೇವಾ, ಶ್ರುತ ಶ್ರವಸ್ ಎಂಬುವರು ವಸುದೇವನ ಸೋದರಿಯರು. ಪೃಥೆಯನ್ನು ಕುಂತೀಭೋಜನಿಗೆ ದತ್ತುಪುತ್ರಿಯಾಗಿ ಕೊಟ್ಟಿದ್ದರಿಂದ ಅವಳಿಗೆ ಕುಂತಿ ಎಂದು ಹೆಸರು ಪ್ರಸಿದ್ಧಿಗೆ ಬಂದಿತು. ಕುಂತಿಯ ಮಕ್ಕಳು ಧರ್ಮರಾಯ, ಭೀಮ, ಅರ್ಜುನ ಎಂಬುವರು. ಅಷ್ಟೇ ಅಲ್ಲ ಸೂರ್ಯನ ವರಪ್ರಸಾದದಿಂದ ಜನಿಸಿದ ಕರ್ಣನು ಕುಂತಿಯ ಮಗನೇ ಸರಿ. ಮಾದ್ರಿಯ ಮಕ್ಕಳು ಅವಳಿ ಮಕ್ಕಳಾದ ನಕುಲ–ಸಹದೇವರು. ಇವಳ ಸೋದರಿಯಾದ ಶ್ರುತದೇವಾ ಎಂಬುವಳ ಮಗ ದಂತವಕ್ರ. ಶ್ರುತಶ್ರವಸ್ಸಿನ ಮಗ ಶಿಶುಪಾಲ. ಪಾಂಡವರೂ ಶಿಶುಪಾಲನೂ ಅಕ್ಕ ತಂಗಿಯರ ಮಕ್ಕಳಾಗುತ್ತಾರೆ. ಶ್ರೀ ಕೃಷ್ಣನಿಗೆ ಪಾಂಡವರೂ, ಶಿಶುಪಾಲನೂ ಸೋದರತ್ತೆಯ ಮಕ್ಕಳಾಗುತ್ತಾರೆ. ಮುಂದೆ ಶ್ರೀಕೃಷ್ಣನ ವಂಶವು ಪ್ರದ್ಯುಮ್ನ, ಅನಿರುದ್ಧ– ವಜ್ರ ಪ್ರತಿಬಾಹು, ಸುಚಾರು ಎಂಬುವವರೆಗೆ ನಡೆಯುತ್ತದೆ. ಯಯಾತಿಯ ಇನ್ನೊಬ್ಬ ಮಗನಾದ ಪುರುವಿನ ವಂಶದಲ್ಲಿ ದುಷ್ಯಂತನು ಜನಿಸುತ್ತಾನೆ. ದುಷ್ಯಂತನ ಮಗನೇ ಭರತ. ಈ ವಂಶದ 'ಹಸ್ತಿನ' ಎಂಬುವನಿಂದ ಸ್ಥಾಪಿತವಾದದ್ದು ಹಸ್ತಿನಾಪುರ. ಹಸ್ತಿನನ ಮಗ ಅಜಾಮೀಢ.

ಅವನ ಮಗ ದಿವೋದಾಸ. ಈ ದಿವೋದಾಸನ ಸೋದರಿ ರಾಮಾಯಣದಲ್ಲಿ ಬರುವ ಅಹಲ್ಯೆ ಎಂದರೆ ಆಶ್ಚರ್ಯದ ಸಂಗತಿ ಅಲ್ಲವೇ? ಆಶ್ಚರ್ಯ ಆದರೂ ಇದು ನಿಜ. ಅಹಲ್ಯೆಯ ಮಗವಾದ ಶತಾನಂದನ ಪುತ್ರ ಸತ್ಯಧೃತಿ ಎಂಬ ಬ್ರಾಹ್ಮಣನು ಧನುರ್ವೇದಜನಾಗಿದ್ದನು. ಈತನ ಮಗನೇ ಮಹಾಭಾರತದಲ್ಲಿ ಬರುವ ಕೃಪಾಚಾರ್ಯ. ಈ ದಿವೋದಾಸನ ವಂಶದಲ್ಲಿಯೇ ಕುರುರಾಜ ಹುಟ್ಟುತ್ತಾನೆ. ಅವನಿಂದ ಬ್ರಹದ್ರಥ, ಜರಾಸಂಧ ಮೊದಲಾವರ ಒಂದು ಶಾಖೆಯು ಬೆಳೆಯುತ್ತದೆ. ಇನ್ನೊಂದು ಶಾಖೆಯಲ್ಲಿ ಜಹ್ನು – ಶಂತನು, ಕೌರವ, ಪಾಂಡವರು ಮುಂತಾದವರ ಶಾಖೆ ಬೆಳೆಯುತ್ತದೆ. ಹೀಗಾಗಿ ಪಾಂಡವರಿಗೆ ಜರಾಸಂಧ ದಾಯಾದಿ ಬಂಧುವಾಗುತ್ತಾನೆ. ಈ ಪಾಂಡವ ವಂಶವು ಕ್ಷೇಮಕ ಎಂಬ ರಾಜನವರೆಗೆ ನಡೆದು ಸಮಾಪ್ತವಾಗುತ್ತದೆ. ಇತ್ತ ಜರಾಸಂಧನ ವಂಶವು ರಿಪುಂಜಯನೆಂಬ ರಾಜನವರೆಗೆ ನಡೆದು ಸಮಾಪ್ತವಾಗುತ್ತದೆ. ಅವನ ಅಮಾತ್ಯ ರಾಜನವರೆಗೆ ನಡೆದು ಸಮಾಪ್ತವಾಗುತ್ತದೆ. ಅವನ ಅಮಾತ್ಯ (ಮಂತ್ರಿ)ನಾದ ಸುನಿಕನು ರಿಪುಂಜಯನನ್ನು ಕೊಂದು ತನ್ನ ಮಗ ಪ್ರದ್ಯೋತನೆಂಬುವನಿಗೆ ಪಟ್ಟಕಟ್ಟುತ್ತಾನೆ. ತದನಂತರ ಮಗಧರ ರಾಜ್ಯವು ಬೇರೆ ಬೇರೆ ಆಡಳಿತಗಾರರಿಗೆ ಹಸ್ತಾಂತರಿತವಾಗಿ ಮಹಾಪದ್ಮ ಎಂಬ ರಾಜನವರೆಗೆ ಹೆಸರಿದ್ದಿತು. ಈತನು ಮಹಾ ಪರಾಕ್ರಮಿಯಾಗಿದ್ದು ಸಮಸ್ತ ರಾಜರನ್ನು ಸ್ವಾಧೀನಪಡಿಸಿಕೊಂಡಿದ್ದನು. ಈ ಮಹಾಪದ್ಮನ ತಂದೆ ಮಹಾನಂದಿ ಇವನ ತಾಯಿ ಶೂದ್ರಜಾತಿಯವಳು. ಈತನೂ ಈತನ ಎಂಟು ಮಂದಿ ಮಕ್ಕಳು ಸೇರಿ ನವನಂದರೆಂದು ಪ್ರಖ್ಯಾತರಾಗಿದ್ದರು. ಈ ನವನಂದರನ್ನು ಸಂಹರಿಸಿ ಚಾಣುಕ್ಯನು (ಕೌಟಿಲ್ಯ) ಚಂದ್ರಗುಪ್ತನಿಗೆ ಪಟ್ಟಾಭಿಷೇಕ ಮಾಡಿದನೆಂಬುದು ಇತಿಹಾಸ ಪ್ರಸಿದ್ಧವಾದ ಸಂಗತಿಯಾಗಿದೆ. ಯಾದವರೂ ಜರಾಸಂಧಾದಿಗಳು ಚಂದ್ರವಂಶೀಯರೇ. ಇಲ್ಲಿಯೂ ಸೂರ್ಯವಂಶದ ಮರುವಿನಂತೆ ಚಂದ್ರವಂಶದಲ್ಲಿ ದೇವಾಪಿ ಎಂಬ ರಾಜನು ಯೋಗಾರೂಢನಾಗಿ ಕಲಾಪ ಗ್ರಾಮದಲ್ಲಿ ನೆಲೆಸಿದ್ದು ಮುಂದೆ ಚಂದ್ರವಂಶದ ಕ್ಷತ್ರಿಯ ಕುಲವನ್ನು ಬೆಳೆಸುತ್ತಾನೆಂದು ವಿಷ್ಣು ಪುರಾಣದಲ್ಲಿ ತಿಳಿಸಲಾಗಿದೆ. ಮತ್ತೊಂದು ರೋಚಕವಾದ ಸಂಗತಿ ಏನೆಂದರೆ ಯಯಾತಿಯ ಪುತ್ರವಾದ 'ಅನು' ವಿನ ವಂಶದಲ್ಲಿ ದಿವಿರಥ, ಧರ್ಮರಥ, ಚಿತ್ರರಥ ಎಂಬುವರು

ಕ್ರಮವಾಗಿ ಜನಿಸುತ್ತಾರೆ. ಚಿತ್ರರಥನಿಗೆ ರೋಮಪಾದ ಎಂಬ ಮತ್ತೊಂದು ಹೆಸರಿತ್ತು. ಇವನಿಗೆ ಸಂತತಿ ಇರಲಿಲ್ಲ. ಆದ್ದರಿಂದ ಇವನ ಮಿತ್ರನಾದ ದಶರಥ (ಶ್ರೀರಾಮನ ತಂದೆ ತನ್ನ ಮಗಳಾದ ಶಾಂತಾ ಎಂಬುವಳನ್ನು ರೋಮಪಾದನಿಗೆ ದತ್ತು ಕೊಟ್ಟಿದ್ದನು ಎಂದು ಹೇಳಲಾಗಿದೆ. ವಿ.ಪು. 4–18–15 ರಿಂದ 18 ವರೆಗೆ). ಆದರೆ ಇದಕ್ಕೆ ವಿರುದ್ಧವಾದ ಹೇಳಿಕೆಯು ಹರಿವಂಶದಲ್ಲಿ ಕಂಡು ಬರುತ್ತದೆ. ಏನೇ ಇರಲಿ, ರಾಮಾವತಾರವಾಗಲಿ ಕೃಷ್ಣಾವತಾರವಾಗಲಿ ಎರಡೂ ವಿಷ್ಣುಪಾರಮ್ಯವನ್ನು ಸೂಚಿಸುವುದೇ ಪ್ರಮುಖ ಉದ್ದೇಶವಾಗಿದೆ.

## ಬಲರಾಮ

ವಿಷ್ಣುಪುರಾಣದ ಚತುರ್ಥಾಂಶದಲ್ಲಿ ಬಲರಾಮನ ವಿವಾಹದ ಬಗ್ಗೆ ವಿವರಿಸಲ್ಪಟ್ಟಿದೆ. ಬಲರಾಮನೂ ಸಹ ಭಗವಂತನ ಅವತಾರವೇ. ಜಗತ್ತಿನ ವ್ಯವಹಾರ ಪಾಲನೆಗಾಗಿ ಬಲರಾಮನೆಂದೂ ಶ್ರೀ ಕೃಷ್ಣನೆಂದು ಇಬ್ಬರು ವ್ಯಕ್ತಿಗಳಾಗಿ (ರೂಪವಾಗಿ) ಭಗವಂತನೇ ಅವತರಿಸಿದ್ದಾನೆ ಎಂದು ವಿಷ್ಣುಪುರಾಣವು ಖಚಿತಪಡಿಸಿದೆ. ಬಲರಾಮನು ರೈವತನ ಪುತ್ರಿಯಾದ ರೇವತಿ ಕನ್ಯೆಯನ್ನು ವರಿಸುತ್ತಾನೆ. ಈ ರೇವತಿಯನ್ನು ಸರಿಯಾದ ವರನಿಗೆ ಕೊಟ್ಟು ಮದುವೆ ಮಾಡಿಕೊಡಲು ಯಾರು ವರನಿದ್ದಾನೆ ಎಂದು ಕೇಳಲು ಬ್ರಹ್ಮಲೋಕಕ್ಕೆ ರೈವತನು ಹೋಗಿದ್ದನು ಎಂದು ಇಲ್ಲಿ ಪ್ರಸ್ತಾಪಿಸಲಾಗಿದೆ. ರೈವತನಿಗೆ ಕಕುದ್ಮಿಯೆಂಬ ಮತ್ತೊಂದು ಹೆಸರಿದ್ದಿತು. ಬ್ರಹ್ಮದೇವನು ರೈವತನನ್ನು ಕುರಿತು ಹೀಗೆ ಹೇಳಿದ್ದನು.

**ಕುಶಸ್ಥಲೀ ಯಾ ತವ ಭೂಪರಮ್ಯಾ ಪುರೀ ಪುರಾಭೂದಮಾರಾವತೀವ ।**
**ಸಾದ್ವಾರಕಾ ಸಂಪ್ರತಿ ತತ್ತಚಾಸ್ತೇ ಸಕೇಶವಾಂಶೋ ಬಲದೇವನಾಮಾ ॥**
**ತಸ್ಮೈ ತ್ವಮೇನಾಂ ತನಯಾಂ ನರೇಂದ್ರಃ ಪ್ರಯಚ್ಛ ಮಾಯಾಮನುಜಾಯ ಜಾಯಮ್**
**।ಶ್ಲಾಘ್ಯೋ ವರೋಸೌ ತನಯ ತವೇಯಂ ಸ್ತ್ರೀರತ್ನಭೂತಾ ಸದೃಶೋಹಿ ಯೋಗಃ ॥**

(ವಿ.ಪು. 2ನೆ ಸಂಪುಟ ಅ 1–91ನೇ ಶ್ಲೋಕ)

“ಎಲೈ ರೈವತನೇ ಹಿಂದೆ ಕುಶಸ್ಥಲೀ ಎಂಬ ಯಾವ ನಿನ್ನ ನಗರವು ಅಮರಾವತಿಯಂತೆ ರಮ್ಯವಾಗಿ ವಿರಾಜಿಸುತ್ತಿತ್ತೋ ಅದು ಈಗ ದ್ವಾರಕಾಪುರಿಯಾಗಿದೆ. ಕೇಶವನ ಅಂಶದಿಂದ ಅವತರಿಸಿದ ಅವನು ಬಲದೇವ ಎಂಬ ಹೆಸರನ್ನು ಪಡೆದಿದ್ದಾನೆ. “ಮಾಯಾ ಮನುಷ್ಯನಾಗಿ ಅವತರಿಸಿರುವ ಆ ಬಲದೇವನಿಗೆ ನರೇಂದ್ರ ನಿನ್ನ ಮಗಳನ್ನು ಪತ್ನಿಯಾಗಿ ಅರ್ಪಿಸು. ಬಲದೇವನು ಪ್ರಶಂಸನೀಯ ವರನಾಗಿದ್ದಾನೆ. ನಿನ್ನ ಈ ಮಗಳು ಸ್ತ್ರೀರತ್ನವಾಗಿದ್ದಾಳೆ” ಇವರಿಬ್ಬರ ಸಂಬಂಧವು ಅನುರೂಪವಾಗಿದೆ. ಬ್ರಹ್ಮ ಈ ರೀತಿ ಹೇಳಲಾಗಿ ರೈವತನು ಭೂಲೋಕಕ್ಕೆ ಹಿಂದಿರುಗಿ ರೇವತಿಯನ್ನು ಬಲರಾಮನಿಗೆ ಕೊಟ್ಟು ಮದುವೆ ಮಾಡಿದನು. ಈ ಮದುವೆಯ ಸಂಭ್ರಮವೇ ಬಹಳ ಸೊಗಸಾಗಿದೆ. ರೋಹಿಣಿ ಪುತ್ರ ಹಲಾಯುಧದರನಾದ ಬಲರಾಮನು ಸ್ಫಟಿಕ ಪರ್ವತದಂತೆ ವಿಶಾಲ ವಕ್ಷಸ್ಥಲವುಳ್ಳವನಾಗಿದ್ದನಂತೆ. ರೇವತಿಯೋ ಬಹಳ ಎತ್ತರವಾಗಿದ್ದಳಂತೆ. ಇವಳನ್ನು ಕಂಡ ಬಲರಾಮ ತನ್ನ ಹಲಾಯುಧದ ಅಗ್ರಭಾಗದಿಂದ ಕೆಳಗೆ ಜಗ್ಗಲಾಗಿ ಅವಳು ಇತರ ಸ್ತ್ರೀಯಂತೆ ಸರಿಯಾದ ಎತ್ತರವುಳ್ಳವಳಾದಳಂತೆ. (ಅಂದರೆ ಅವಳ ಎತ್ತರ ಕುಗ್ಗಿತಂತೆ) ನಂತರ ಬಲರಾಮನು ವಿಧಿವತ್ತಾಗಿ ಮದುವೆಯಾದನು.

**ಉಚ್ಚಪ್ರಮಾಣಾಮಿತಿ ತಾಮವೇಷ್ಯ ಸ್ಥಲಾಂಗಲಾಗ್ರೇಣ ಚತಾಲಕೇತುಃ**
**ವಿನಮ್ರಯಾಮಾಸ ತತಶ್ಚ ಸಾಪಿ ಬಭೂವ ಸದ್ಯೋ ವನಿತಾಯಥಾನ್ಯಾ ॥**

(ವಿ.ಪು. 2. ಚತುರ್ಥಾಂಶ ಶ ಅ.1.95
ಶ್ಲೋಕ )

ವಿವಾಹ ಮುಹೂರ್ತದಲ್ಲಿ ಪುರೋಹಿತರು ಮಂತ್ರಪೂರ್ವಕವಾಗಿ ಪುಟ್ಟಮರದ ನೊಗವನ್ನು ಹೆಣ್ಣಿನ ತಲೆಯ ಮೇಲಿಟ್ಟು ಅಕ್ಷತೆ ಹೂವುಗಳನ್ನು ಹಾಕಿ ಹಿರಿಯರು ಆಶೀರ್ವದಿಸುವ ಪದ್ಧತಿಯು ಇಂದಿಗೂ ಇದೆ. ಈ ಹಲಾಯುಧ ಹಾಗೂ ನೊಗಕ್ಕೂ ಏನಾದರೂ ಸಂಬಂಧವಿದೆಯೇ? ಇದು ಅವರವರ ಊಹೆಗೆ ಬಿಟ್ಟಿದ್ದು.

# ಪುರಂಜನ ಹಾಗೂ ಮಾಂದಾತೃ ಚರಿತ್ರೆ

ಅತ್ತ ರೈವತರಾಜನು ಬ್ರಹ್ಮಲೋಕಕ್ಕೆ ಹೋಗಿದ್ದಾಗ ಅದೇ ಸಮಯವನ್ನೇ ಕಾಯುತ್ತಿದ್ದ ಪುಣ್ಯಜನರೆಂಬ (ಇವರು ಅಪುಣ್ಯಜನರೆಂದು ಪ್ರತೀತಿ) ರಾಕ್ಷಸರು ರೈವತ ರಾಜ್ಯವನ್ನೆಲ್ಲಾ ಧ್ವಂಸ ಮಾಡಿದರು. ಆತನ ನೂರುಮಂದಿ ಸಹೋದರರು ದಿಕ್ಕಾಪಾಲಾಗಿ ಓಡಿದರು. ಮನುಪುತ್ರನಾದ ಧೃಷ್ಟನಿಗೂ ಧಾರ್ಷ್ಟಕ ಎಂಬು ಕ್ಷತ್ರಿಯ ಸಂತತಿಯುಂಟಾಯಿತು. ಅಂತೆಯೇ ನಾಭಾಗನಿಗೆ ನಾಭಾಗನೆಂಬ ಹೆಸರಿನ ಮಗನು ಜನಿಸಿದನು. ಅವನ ಮಗನೇ ಅಂಬರೀಷ. ಅಂಬರೀಷನಿಗೆ ವಿರೂಪನೆಂಬ ಮಗನು ಹುಟ್ಟಿದನು. ವಿರೂಪನಿಂದ ಪೃಷದಶ್ವನೂ ಅವನಿಂದ ರಥೀತರನು ಉತ್ಪನ್ನರಾದರು. ಇದಕ್ಕೆ ಸಂಬಂಧಪಟ್ಟಂತೆ ಪ್ರಸಿದ್ಧವಾದ ಶ್ಲೋಕವು ಇದೆ.

**ಏತೇ ಕ್ಷತ್ರಪ್ರಸೂತಾ ವೈ ಪುನಶ್ಚಾಂಗೀರಸಾಃ ಸ್ಮೃತಾ ।**

**ರಥೀತರಾಣಾಂ ಪ್ರವರಾಃ ಕ್ಷತ್ರೋ ಪೇತೋದ್ವಿಜಾತಯಃ ॥**

(ವಿ.ಪು. ದ್ವಿ. ಅ.ಅ.2 10ನೇ ಶ್ಲೋಕ)

ರಥೀತರನ ವಂಶಜರು ಕ್ಷತ್ರಿಯ ಸಂತಾನದವರಾಗಿದ್ದು ಮತ್ತೆ ಆಂಗೀರಸರೆನಿಸಿದರು. ಇವರು ಕ್ಷತ್ರಿಯತ್ವಸಹಿತರಾದ ಬ್ರಾಹ್ಮಣರೆನಿಸಿದರು. ಏಕೆಂದರೆ ರಥೀತರನ ಭಾರ್ಯೆಯಲ್ಲಿ ಅಂಗೀರಸ ಋಷಿಯಿಂದ ನಿಯೋಗ ವಿಧಿಯಿಂದ ಸಂತಾನವಾಯಿತೆಂದು ಹೇಳುತ್ತಾರೆ. ಆದ್ದರಿಂದ ಆ ಬ್ರಾಹ್ಮಣರು ಕ್ಷಾತ್ರಗುಣಗಳನ್ನು ಪಡೆದಿದ್ದರು. ಮನುವು ಶೀನುತ್ತಿರುವಾಗ ನಾಸಿಕದಿಂದ ಇಕ್ಷ್ವಾಕುವೆಂಬ ಪುತ್ರನು ಹುಟ್ಟಿದನು. ಆತನ ನೂರು ಮಂದಿ ಮಕ್ಕಳಲ್ಲಿ ವಿಕುಕ್ಷಿ, ನಿಮಿ, ದಂಡ ಎಂಬುವರು ಪ್ರಮುಖರು. ಶಕುನಿ ಮೊದಲಾದ ಐವತ್ತು ಮಂದಿ ಪುತ್ರರು ಉತ್ತರಪ್ರದೇಶಗಳಲ್ಲಿ ರಾಜ್ಯಭಾರ ಮಾಡಿದರು. ಅವರಲ್ಲಿ ನಲವತ್ತೆಂಟು ಜನರು ದಕ್ಷಿಣ ಪ್ರದೇಶಗಳಲ್ಲಿ ರಾಜರಾದರು. ಇಕ್ಷ್ವಾಕುವು ಒಮ್ಮೆ ಅಷ್ಟಕಾ ಶ್ರಾದ್ಧವನ್ನು ಮಾಡಲು ಉದ್ಧೇಶಿಸಿದರು. ಶ್ರಾದ್ಧಕ್ಕೆ ಬೇಕಾದ ಮಾಂಸವನ್ನು ತರುವಂತೆ ತನ್ನ ಮಗ ವಿಕುಷಿಗೆ ಆಜ್ಞಾಪಿಸಿದನು.

ಅವನು ಅದಕ್ಕೆ ಒಪ್ಪಿ ಧನುಸ್ಸನ್ನು ಹಿಡಿದು ಕಾಡಿಗೆ ಹೋದನು. ಅಲ್ಲಿ ಅನೇಕ ಮೃಗಗಳನ್ನು ಕೊಂದು ಬಹಳ ಆಯಾಸಗೊಂಡನು. ಆಗ ವಿಕುಷಿಗೆ ಬಹಳ ಹಸಿವೂ ಆಗಿದ್ದಿತು. ಆದ್ದರಿಂದ ಅವನು ಮೊಲವೊಂದನ್ನು ತಿಂದು ಮಿಕ್ಕಮಾಂಸವನ್ನು ತಂದು ತಂದೆಗೆ ಒಪ್ಪಿಸಿದನು. ಶ್ರಾದ್ಧಸಮಯದಲ್ಲಿ ಅದನ್ನು ಪ್ರೋಕ್ಷಿಸುವಂತೆ ಇಕ್ಷ್ವಾಕು ತನ್ನ ಕುಲಪುರೋಹಿತರಾದ ವಸಿಷ್ಠರಿಗೆ ಹೇಳಿದನು. ಆಗ ವಸಿಷ್ಠರು ಅಪವಿತ್ರವಾದ ಈ ಮಾಂಸ ಬೇಕಾಗಿಲ್ಲ. ನಿನ್ನ ಮಗ ಮೊಲವನ್ನು ತಿಂದು ಹಾಕಿ ಮಿಕ್ಕಮಾಂಸ (ಶೇಷ)ವನ್ನು ತಂದೊಪ್ಪಿಸಿದ್ದಾನೆ. ಇದು ಶ್ರಾದ್ಧಕ್ಕೆ ಯೋಗ್ಯವಲ್ಲ. ಗುರುವು ಹೀಗೆ ಹೇಳಿದ್ದರಿಂದ ಅವನಿಗೆ ಬಹಳ ಬೇಸರವಾಯಿತು. ಕೂಡಲೇ ಇಕ್ಷ್ವಾಕುವು ವಿಕುಕ್ಷಿಯನ್ನು ಪರಿತ್ಯಜಿಸಿದನು. ಮೊಲವನ್ನು ತಿಂದುದರಿಂದ ಇವನಿಗೆ ಶಶಾದ ಎಂಬ ಹೆಸರು ಬಂದಿತು. ಇಕ್ಷ್ವಾಕುವಿನ ಮರಣಾನಂತರ ಶಶಾದನು ರಾಜ್ಯವನ್ನು ಆಳಿದನು. ಅವನಿಗೆ ಪುರಂಜನ ಎಂಬ ಪುತ್ರನು ಜನಿಸಿದನು. ಪುರಂಜನನು ಶ್ರೀಮನ್ನಾರಾಯಣನ ಅಂಶವೆಂದು ಪ್ರತೀತಿ ಉಂಟು. ಅದು ಹೇಗೆ ಎಂಬುದನ್ನು ಈಗ ತಿಳಿಯೋಣ. ಹಿಂದೆ ತ್ರೇತಾಯುಗದಲ್ಲಿ ದೇವಾಸುರರ ನಡುವೆ ಘೋರವಾದ ಯುದ್ಧವು ನಡೆಯಿತು. ಆಗ ಅತ್ಯಂತ ಬಲಿಷ್ಠರಾದ ಅಸುರರಿಂದ ಪರಾಜಿತರಾದ ದೇವತೆಗಳು ಭಗವಾನ್ ವಿಷ್ಣುವಿನ ಮೊರೆಹೊಕ್ಕರು. ಆಗ ಆದ್ಯಂತರಹಿತನೂ, ಜಗದ್ರಕ್ಷಕನೂ ಆದ ಶ್ರೀಮನ್ನಾರಾಯಣನು ದೇವತೆಗಳಿಗೆ ಪ್ರಸನ್ನನಾಗಿ ಶಶಾದನಿಗೆ ಕ್ಷತ್ರಿಯೋತ್ತಮನಾದ ಪುರಂಜಯನೆಂಬ ಪುತ್ರನಿರುವನಷ್ಟೆ. ಆತನ ಶರೀರದಲ್ಲಿ ಅಂಶಮಾತ್ರದಿಂದ ನಾನೇ ಅವತರಿಸಿ ಸಮಸ್ತ ಅಸುರರನ್ನು ಸಂಹರಿಸುವೆನು. ಆದ್ದರಿಂದ ಪುರಂಜಯನು ಅಸುರ ವಧೆಗೆ ಉದ್ಯುಕ್ತನಾಗುವಂತೆ ಮಾಡಿರಿ ಎಂದು ಆಜ್ಞಾಪಿಸಿದನು. ಆಗ ದೇವತೆಗಳು ವಿಷ್ಣುವಿಗೆ ನಮಸ್ಕರಿಸಿ ಹೊರಟರು. ಇತ್ತ ಪುರಂಜನನ ಬಳಿ ಒಂದು ಅಸುರರನ್ನು ಸಂಹರಿಸಲು ಸಹಾಯ ಮಾಡಬೇಕೆಂದು ಕೇಳಿಕೊಂಡರು. ಅದಕ್ಕೆ ಪುರಂಜಯನು ಹೀಗೆಂದ. "ಶತಕ್ರತುವಾಗಿ ತ್ರಿಲೋಕೇಶ್ವರನೆನಿಸಿದ ನಿಮ್ಮ ಇಂದ್ರನಿದ್ದನಲ್ಲಾ ಅವರ ಹೆಗಲ ಮೇಲೆ ಕುಳಿತು ನಿಮ್ಮ ವೈರಿಗಳೊಡನೆ ಯುದ್ಧ ಮಾಡಲು ಅವಕಾಶವಾಗುವುದಾದರೆ ಆಗ ನಿಮಗೆ ಸಹಾಯ ಮಾಡಬಹುದು. ಈ ಮಾತಿಗೆ ಎಲ್ಲ ದೇವತೆಗಳೂ ಒಪ್ಪಿಕೊಂಡರು. ನಂತರ

ದೇವೇಂದ್ರನು ವೃಷಭರೂಪವನ್ನು ತಾಳಿದನು. ಪುರಂಜಯನು ಅದರ ಹಿಣಲ ಮೇಲೆ ಕುಳಿತನು. ಆಗ ಚರಾಚರದೊಡೆಯನಾದ ಭಗವಾನ್ ಅಚ್ಯುತನು ಪುರಂಜನನಲ್ಲಿ ಆವಿಷ್ಟನಾದನು. ನಂತರ ದೇವಾಸುರ ಸಂಗ್ರಾಮದಲ್ಲಿ ಅತ್ಯಂತ ರೋಷಾನ್ವಿತವಾಗಿ ಸಮಸ್ತ ಅಸುರರನ್ನು ಸಂಹರಿಸಿದನು. ಈ ಘಟನೆಯಿಂದಾಗಿ ಪುರಂಜಯನಿಗೆ ಕಕುತ್ಸ್ಥ ಎಂಬ ಹೆಸರಾಯಿತು. ಕಕ್ಸುತ್ಸಥಿನಿಗೆ ಅನೇನ ಎಂಬ ಮಗನು ಜನಿಸಿದನು. ಅವನ ಮಗ ಪೃಥು. ಪೃಥುವಿನ ಮಗ ವಿಷ್ವರಾಶ್ವ. ಇವನ ಮಗ ಚಾಂದ್ರ ಯುವನಾಶ್ವ. ಅವನ ಮಗ ಶಾವಸ್ತ. ಶಾವಸ್ತನ ಮಗ ಬೃಹದಶ್ವ. ಆತನ ಮಗ ಕುವಲಯಾಶ್ವ. ಇವನು ವೈಷ್ಣವ ತೇಜಸ್ಸಿನಿಂದ ಕೂಡಿ ತನ್ನ ಇಪ್ಪತ್ತೊಂದು ಸಾವಿರ ಪುತ್ರರೊಡನೆ ಕೂಡಿಕೊಂಡು ಉದಕನೆಂಬ ಮಹರ್ಷಿಗೆ ಅಪಕಾರ ಮಾಡಿದ ದುಂದು ಎಂಬ ದೈತ್ಯನನ್ನು ವಧಿಸಿದನು. ಈ ಕಾರಣದಿಂದಾಗಿ ಕುವಲಿಯಾಶ್ವನಿಗೆ ಧುಂಧುಮಾರನೆಂಬ ಹೆಸರಾಯಿತು. ಆದರೆ ಈತನ ಎಲ್ಲ ಮಕ್ಕಳು ಧುಂಧುವಿನ ಮುಖದಿಂದ ಹೊರಟ ಶ್ವಾನಾಗ್ನಿಯಿಂದ ದಗ್ಧರಾಗಿ ಸತ್ತುಹೋದರು. ಅವರಲ್ಲಿ ದೃಢಾಶ್ವನಿಂದ ಹರ್ಯಶ್ವನೂ ಅವನಿಂದ ನಿಕುಂಭನೂ ಅವನಿಂದ ಅಮಿತಾಶ್ವನೂ ಆತನಿಂದ ಕೃಶಾಶ್ವನೂ ಜನಿಸಿದರು. ಕ್ರಶಾಶ್ವನಿಂದ ಪ್ರಸೇನಜಿತ್, ಆತನಿಂದ ಕೃಶಾಶ್ಚನೂ ಜನಿಸಿದರು. ಕೃಶಾಶ್ವನೂ ಪ್ರಸೇನಜತ್ ಆತನಿಂದ ಯವನಾಶ್ವನೂ ಜನಿಸಿದನು. ಯುವನಾಶ್ವನಿಗೆ ಸಂತತಿ ಇರಲಿಲ್ಲ. ಆದ್ದರಿಂದ ಆತನು ಬಹಳ ಬೇಸರಗೊಂಡು ಮುನಿಗಳ ಆಶ್ರಮದಲ್ಲಿ ಇರತೊಡಗಿದನು. ಒಮ್ಮೆ ಕೃಶಾಶ್ವನಿಗೆ ಸಂತತಿಯಾಗಲೆಂದು ಒಂದು ಯಾಗವನ್ನು ಮಾಡಿದರು. ಮಧ್ಯರಾತ್ರಿಯ ಸಮಯದಲ್ಲಿ ಆ ಯಾಗವು ಮುಗಿಯಿತು. ಮಂತ್ರಪೂರಿತವಾದ ಜಲವನ್ನು ತುಂಬಿದ ಕಲಶವನ್ನು ವೇದಿಕೆಯಲ್ಲಿಟ್ಟು ಆ ಮುನಿಗಳು ನಿದ್ರಿಸಿದರು. ಎಲ್ಲರೂ ನಿದ್ರಿಸುತ್ತಿರುವಾಗ ಬಹಳ ಬಾಯಾರಿಕೆಯಿಂದ ಬಳಲುತ್ತ ಯುವನಾಶ್ವನು ಆಶ್ರಮದೊಳಗೆ ಬಂದನು. ಋಷಿಗಳಲ್ಲಾ ನಿದ್ರಿಸುತ್ತಿದ್ದುರಿಂದ ಅವರನ್ನು ಎಬ್ಬಿಸಲಿಲ್ಲ. ಅಪರಿಮಿತ ಮಹಿಮೆಯಿಂದ ಕೂಡಿದ ಜಲವನ್ನು ಆ ರಾಜನೇ ಕುಡಿದುಬಿಟ್ಟನು. ನಂತರ ಋಷಿಗಳು ಎಚ್ಚೆತ್ತು ಮಂತ್ರಪೂರಿತವಾದ ಆ ಜಲವನ್ನು ಯಾರು ಕುಡಿದರೆಂದು ವಿಚಾರಿಸಿದ. ಆ ಜಲವನ್ನು ಕುಡಿದರೆ

ಯುವನಾಶ್ವನ ಪತ್ನಿಯು ಮಹಾಬಲ ಪರಾಕ್ರಮಶಾಲಿಯಾದ ಪುತ್ರವನ್ನು ಪಡೆಯುತ್ತಿದ್ದಳು.

ಆ ಮಾತನ್ನು ಕೇಳಿ ಯುವಾನಾಶ್ವನು ಗೊತ್ತಿಲ್ಲದೆ ನಾನೇ ಆ ಮಂತ್ರಪೂರಿತವಾದ ಜಲವನ್ನು ಕುಡಿದುಬಿಟ್ಟೆನಲ್ಲಾ ಎಂದು ಪರಿತಪಿಸಿದನು. ಇದರಲ್ಲಿ ವಿಚಿತ್ರವೇನೆಂದರೆ ಯುವನೇಶ್ವನ ಹೊಟ್ಟೆಯಲ್ಲಿ ಗರ್ಭವು ಅಂಕುರಿಸಿ ಕ್ರಮವಾಗಿ ಬೆಳೆಯಿತು. ಆಶ್ಚರ್ಯವೇನೆಂದರೆ ಯುವನಾಶ್ವನ ಹೊಟ್ಟೆಯ ಬಲಭಾಗವನ್ನು ಸೀಳಿಕೊಂಡು ಗಂಡು ಮಗುವು ಹೊರಬಂದಿತು. ರಾಜನೇನೂ ಸಾಯಲಿಲ್ಲ. ಶಿಶುಹುಟ್ಟಿದಾಗ ಋಷಿಗಳು ಈ ಬಾಲಕನು ಯಾರ ಮೊಲೆಹಾಲನ್ನು ಕುಡಿದು ಬದುಕುವನು? ಎಂದು ಕೇಳಿದರಂತೆ. ಅದಕ್ಕೆ ದೇವೇಂದ್ರನು ಬಂದು ಮಾಂದಾಸ್ಯತಿ ನನ್ನನ್ನು ಕುಡಿದು ಬದುಕುವನು ಎಂದು ಹೇಳಿದನು. ದೇವೆಂದ್ರನು 'ಮಾಂದಾಸ್ಯತಿ' ಎಂದು ಹೇಳಿದ್ದರಿಂದ ಆ ಬಾಲಕನಿಗೆ 'ಮಾಂಧಾತೃ' ಎಂದು ಹೆಸರಾಯಿತು. ಮಗುವಿನ ಬಾಯಲ್ಲಿ ಇಂದ್ರನು ತನ್ನ ಹೆಬ್ಬೆಟ್ಟಿನ ಬೆರಳನ್ನು ಇಡಲಾಗಿ ಮಗು ಅದನ್ನು ಚೀಪತೊಡಗಿತು. ಆ ಬೆರಳು ಅಮೃತಸ್ರಾವಿಯಾಗಿದ್ದುದರಿಂದ ಮಗು ಅಮೃತವನ್ನೇ ಹೀರಿ ಒಂದು ಹಗಲಿನಲ್ಲಿಯೇ ಬೆಳೆಯಿತಂತೆ. ಮುಂದೆ ಆ ಮಾಂಧಾತನು ಚಕ್ರವರ್ತಿಯಾಗಿ ಸಪ್ತದ್ವೀಪ ಸಮೇತವಾದ ಪೃಥ್ವಿಯನ್ನೇ ಆಳಿದನು. 'ಮಾಂಧಾತ್ರವಿನ ಬಗ್ಗೆ ಒಂದು ಶ್ಲೋಕವೇ ಇದೆ.

**ಯಾವ ಉದೇತ್ಸಸ್ತಂ ಯಾವಚ್ಚ ಪ್ರತಿತಿಷ್ಠತಿ ।**

**ಸರ್ವಂ ತ್ಯೂರ್ಯ ದ್ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರ ಮುಚ್ಯತೇ ॥**

(ವಿ.ಪು. 2 ಸಂಪುಟ 2ನೇ ಅಧ್ಯಾಯ 65ನೇ ಶ್ಲೋಕ)

ಎಲ್ಲೆಲ್ಲಿ ಸೂರ್ಯನು ಹುಟ್ಟುವನೋ ಎಲ್ಲೆಲ್ಲಿ ಮುಳುಗುವನೋ ಆ ಪ್ರದೇಶವೆಲ್ಲವೂ ಯುವನಾಶ್ವ ಪುತ್ರನಾದ ಮಾಂಧಾತೃವಿನ ಆಡಳಿತಕ್ಕೆ ಸೇರಿದ ಸ್ಥಳ ಎಂದು ಹೇಳುತ್ತಿದ್ದರಂತೆ. ಈ ಮಾಂಧಾತನು ಶತಬಿಂದುವಿನ ಮಗಳಾದ ಬಿಂದುಮತಿಯೆಂಬ ಕನ್ಯೆಯನ್ನು ಮದುವೆಯಾದನು. ಅವಳಲ್ಲಿ ಪುರುಕುತ, ಅಂಬರೀಷ, ಮುಚುಕುಂದ ಎಂಬ ಮೂವರು ಪುತ್ರರನ್ನು ಪಡೆದನು. ಆ

ರಾಜನಿಗೆ ಇದಲ್ಲದೆ ಬಿಂದುಮತಿಯಲ್ಲಿಯೇ ಐವತ್ತು ಮಂದಿ ಹೆಣ್ಣು ಮಕ್ಕಳು ಹುಟ್ಟಿದರು. ಹೀಗಾಗಿ ಮಾಂಧಾತೃವಿಗೆ ಒಟ್ಟು ಐವತ್ತಮೂರು ಮಕ್ಕಳು ಜನಿಸಿದರು. ಒಟ್ಟಿನಲ್ಲಿ ಗಂಡಸಿಗೂ ಗರ್ಭಬೆಳೆದು ಶಿಶುವಿನ ಜನನವಾಯಿತು ಎಂಬ ಸಂಗತಿ ಆಶ್ಚರ್ಯಕರವಾದುದು. ಆಶ್ಚರ್ಯ...ಆದರೂ ನಿಜ... ಎಂಬುದನ್ನು ನಾವು ಒಪ್ಪೋಣವೇ ? ಇದೂ ಸಹ ಅವರವರ ನಂಬಿಕೆಗೆ ಬಿಟ್ಟದ್ದು.

# ಶ್ರೀ ಕೃಷ್ಣಾಷ್ಟಕಂ

**ವಸುದೇವಸುತಂ ದೇವಂ ಕಂಸ ಚಾಣೂರ ಮರ್ಧನಂ**
**ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ ॥ 1 ॥**
**ಅತಸೀಪುಷ್ಪ ಸಂಕಾಶಂ ಹಾರನೂಪುರ ಶೋಭಿತಂ**
**ರತ್ನ ಕಂಕಣ ಕೇಯೂರಂ ಕೃಷ್ಣಂ ವಂದೇ ಜಗದ್ಗುರುಂ ॥ 2 ॥**
**ಕುಟಿಲಾಲಕ ಸಂಯುಕ್ತಂ ಪೂರ್ಣ ಚಂದ್ರ ನಿಭಾನನಂ**
**ವಿಲಸತ್ಕುಂಡಲ ಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಂ ॥ 3 ॥**
**ಮಂದಾರ ಗಂಧಸಂಯುಕ್ತಂ ಚಾರುಹಾಸಂ ಚತುರ್ಭುಜಮ್**
**ಬರ್ಹಿಪಿಂಛಾವ ಚೂಡಾಂಗಂ ಕೃಷ್ಣಂ ವಂದೇ ಜಗುದ್ಗುರುಂ ॥ 4 ॥**
**ಉತ್ಫುಲ್ಲ ಪದ್ಮಪತ್ರಾಕ್ಷಂ ನೀಲ ಜೀಮೂತ ಸನ್ನಿಭಂ**
**ಯಾದವಾನಾಂ ಶಿರೋರತ್ನಂ ಕೃಷ್ಣಂ ವಂದೇ ಜಗದ್ಗುರು ॥ 5 ॥**
**ರುಕ್ಮಿಣೀ ಕೇಳಿ ಸಂಯುಕ್ತಂ ಪೀತಾಂಬರ ಸುಶೋಭಿತಂ**
**ಅವಾಪ್ತ ತುಳಸೀಗಂಧಂ ಕೃಷ್ಣಂ ವಂದೇ ಜಗುದ್ಗುರುಂ ॥ 6 ॥**
**ಗೋಪಿಕಾನಾಂ ಕುಚದ್ವಂದ್ವಂ ಕುಂಕುಮಾಂಕಿತ ವಕ್ಷಸಂ ।**
**ಶ್ರೀನಿಕೇತಂ ಮಹೇಷ್ವಾಸಂ ಕೃಷ್ಣಂ ವಂದೇ ಜಗದ್ಗುರುಂ ॥ 7 ॥**
**ಶ್ರೀವತ್ಸಾಂಕಂ ಮಹೋರಸ್ಕಂ ವನಮಾಲಾ ವಿಭೂಷಿತಂ (ವಿರಾಜಿತಂ)**
**ಶಂಖ ಚಕ್ರಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಂ ॥ 8 ॥**
**ಕೃಷ್ಣಾಷ್ಟಕಮಿದ ಪುಣ್ಯಂ ಪ್ರಾತರುತ್ಥಾಯ ಯಃ ಪಠೇತ್**
**ಕೋಟಿಜನ್ಮಕೃತಂಪಾಪಂ ಸ್ಮರಣೇನ ವಿನಶ್ಯತಿ**

# ಸೌಬರಿ ಮಹರ್ಷಿಯ ವೃತ್ತಾಂತ

**ಸೌಬರಿ** ಎಂಬುವನು ಮಹಾತಪಸ್ವಿ. ಋಗ್ವೇದಿಯಾದ ಈ ಸೌಬರಿಯು ನೀರಿನೊಳಗೆ ನಿಂತು ತಪಸ್ಸು ಮಾಡುತ್ತಿದ್ದನು. ಹೀಗೆಯೇ ಸುಮಾರು ಹನ್ನೆರಡು ವರ್ಷಗಳ ಕಾಲ ನೀರಿನಲ್ಲಿಯೇ ಇದ್ದನು. ಆ ನೀರಿನೊಳಗೆ ಸಂಮದನೆಂಬ ಬೃಹತ್ಕಾಯನಾದ ಮತ್ಸ್ಯರಾಜನು ತನ್ನ ಬಹುಮಂದಿ ಸಂತತಿಯೊಡನೆ ವಾಸಿಸುತ್ತಿದ್ದನು. ಈ ಮೀನಿನ ಪುತ್ರ, ಪೌತ್ರ, ದೌಹಿತ್ರಗಳು ಈ ಬೃಹದಾಕಾರದ ನೀರಿನ ಮೇಲೆ ಈಜುತ್ತಾ ಹೊರಳುತ್ತಾ ಪರಮಾನಂದದಿಂದ ವಿಹರಿಸುತ್ತಿದ್ದವು. ಇದನ್ನು ನೋಡಿದ ಸೌಬರಿ ಮುನಿಯು ತಾನೂ ಏಕೆ ಹೀಗಿರಬಾರದು ಎಂದು ಕೊಂಡು ತಪಸ್ಸನ್ನು ಬದಿಗೆ ತಳ್ಳಿ ತಾನೂ ಮದುವೆಯಾಗಿ ಮಕ್ಕಳು ಮೊಮ್ಮಕ್ಕಳು, ಮರಿ ಮಕ್ಕಳೊಡನೆ ಈ ಜೀವನವನ್ನು ಆನಂದದಿಂದ ಕಳೆಯುತ್ತೇನೆ ಎಂದುಕೊಂಡನು. ಸಂತಾನ ಗೃಹಸ್ಥಾಶ್ರಮವನ್ನು ಸ್ವೀಕರಿಸಲು ಅಪೇಕ್ಷಿಸಿ ಕನ್ಯಾರ್ಥಿಯಾಗಿ ಮಾಂದಾತೃ ರಾಜನ ಬಳಿಗೆ ಬಂದನು. ಮಾಂಧಾತೃ ರಾಜ ಮುನಿಯನ್ನು ಸತ್ಕರಿಸಿದನು. ಸೌಬರಿಮುನಿಯು ಪೀಠದಲ್ಲಿ ಕುಳಿತು ರಾಜನನ್ನು ಕುರಿತು ಹೀಗೆಂದನು, ನರೇಂದ್ರ ನಾನು ವಿವಾಹ ಮಾಡಿಕೊಳ್ಳಲು ಇಚ್ಛಿಸುತ್ತೇನೆ. ನಿನ್ನ ಕನ್ಯೆಯೊಬ್ಬಳನ್ನು ವಿವಾಹ ವಿಧಿಯಿಂದ ನನಗೆ ಕೊಡು. ಕಕುತ್ಸ್ಥವಂಶದಲ್ಲಿ ಕಾರ್ಯವಶದಿಂದ ಅರ್ಥಿಗಳಾಗಿ ಬಂದವರು ಎಂದಿಗೂ ವ್ಯರ್ಥವಾಗಿ ಹೋದದ್ದೇ ಇಲ್ಲ. ನಿನಗೆ ಐವತ್ತು ಮಂದಿ ಹೆಣ್ಣು ಮಕ್ಕಳು ಇದ್ದಾರೆ, ಅವರಲ್ಲಿ ಒಬ್ಬಳನ್ನು ನನಗೆ ಮದುವೆ ಮಾಡಿಕೊಡು. (ನನ್ನ ಪ್ರಾರ್ಥನೆಗೆ ಭಂಗವಾದೀತೆಂದು ಹೆದರುತ್ತ,) ಎಲೈ ರಾಜಶ್ರೇಷ್ಠನೇ ಅತಿ ದುಃಖದಿಂದ ನಾನು ನಿನ್ನನ್ನು ಕೇಳಿಕೊಳ್ಳುತ್ತಿದ್ದೇನೆ ಎಂದನು. ಮಾಂಧಾತೃವು ಪೇಚಾಟಕ್ಕೆ ಸಿಕ್ಕಿಕೊಂಡನು. ಏಕೆಂದರೆ ಸೌಬರಿ ಮುನಿಯ ದೇಹ ಮುಪ್ಪಿನಿಂದ ಜರ್ಝರಿತವಾಗಿದ್ದಿತು. ಇಂತಹ ಮುದುಕನನ್ನು ತನ್ನ ಮಕ್ಕಳಲ್ಲಿ ಯಾರು ತಾನೇ ಒಪ್ಪುತ್ತಾರೆ ? ಆತನ ದೇಹವನ್ನು ನೋಡಿ ಪ್ರಾರ್ಥನೆಯನ್ನು ನಿರಾಕರಿಸಬೇಕೆಂಬ ತವಕ ಒಂದು ಕಡೆ. ಋಷಿಯು ಎಲ್ಲಾದರೂ ಶಾಪ ಕೊಟ್ಟಾನೆಂಬ ಭಯ ಮತ್ತೊಂದು ಕಡೆ. ಹೀಗಾಗಿ ರಾಜನು ತಲೆತಗ್ಗಿಸಿ ಚಿಂತಾಕ್ರಾಂತನಾದನು. ಆಗ ಸೌಬರಿಯು ಎಲೈ ರಾಜನೇ ನೀನೇಕೆ

ಚಿಂತಾಕುಲನಾಗಿದ್ದೀಯೇ, ಸಹಿಸಲು ಅಶಕ್ಯವಾದ ಮಾತನ್ನು ನಾನು ಆಡಲಿಲ್ಲವಲ್ಲಾ, ಮಗಳನ್ನು ನೀನು ಯಾರಿಗಾದರೂ ಕೊಡಲೇ ಬೇಕಲ್ಲವೇ? ಎಂದನು. ಆಗ ಮಾಂದಾತೃನು ಭಗವನ್ ನಮ್ಮ ಕುಲಪದ್ಧತಿ ಹೀಗಿದೆ. ಸತ್ಕುಲಪ್ರಸೂತನಾದ ಯಾವ ವರನನ್ನು ಕನ್ಯೆಯು ಬಯಸುತ್ತಾಳೋ ಆತನಿಗೆ ಕೊಡುವುದು ನಮ್ಮ ಸಂಪ್ರದಾಯ. ಮಹರ್ಷಿಗಳಾದ ತಾವು ಯೋಚಿಸಿರುವುದು ನಮ್ಮ ಮನೋರಥವನ್ನು ಮೀರಿದ್ದು. ನಿಮಗೆ ಈ ಅಭಿಲಾಷೆ ಹೇಗೆ ಹುಟ್ಟಿತೋ ತಿಳಿಯದಾಗಿದೆ. ಏನು ಮಾಡಬೇಕೆಂದು ಚಿಂತಿಸುತ್ತಿದ್ದೇನೆ ಎಂದು ನುಡಿದನು. ಆಗ ಸೌಭರಿ ಮುನಿಯು ಇವನು ಮುದುಕ ಯಾವ ಕನ್ನಿಕೆ ತಾನೆ ಬಯಸುತ್ತಾಳೆ ಎಂದು ನಿರ್ಲಕ್ಷ್ಯದಿಂದ ಹೀಗೆ ಹೇಳಿದ್ದಾರೆ ಎಂದು ಮನಸ್ಸಿನಲ್ಲಿ ಅಂದುಕೊಂಡು. ರಾಜನಿಗೆ ಹೀಗೆ ಹೇಳಿದನು. ಹಾಗಾದರೆ ಕನ್ಯಾಂತ ಪುರದ ಕಾವಲುಗಾರನಾದ ಷಂಡನಿಗೆ ನಮ್ಮನ್ನು ಒಳಗೆ ಬಿಡುವಂತೆ ಆಜ್ಞೆಮಾಡು. ಅವರಲ್ಲಿ ಯಾರಾದರೊಬ್ಬ ಕನ್ಯೆಯು ನನ್ನನ್ನು ಬಯಸುವುದಾದರೆ ಮಾತ್ರ ನಾನು ಮದುವೆಯಾಗುತ್ತೇನೆ. ಇಲ್ಲದಿದ್ದರೆ ಈ ವಯಸ್ಸಿನಲ್ಲಿ ಕಾಲಮಿರಿದ ಈ ಉದ್ಯೋಗವೇ ಈ ಆಸೆಯೇ ನನಗೆ ಬೇಕಾಗಿಲ್ಲ ಎಂದನು. ಮಾಂಧಾತೃನು ಮುನಿಯು ತನಗೆ ಎಲ್ಲಿ ಶಾಪ ಕೊಡುವನೋ ಎಂದು ಹೆದರಿ ಅಂತೆಯೇ ಕನ್ಯಾಂತಃಪುರದ ಷಂಢನಿಗೆ ಆಜ್ಞೆ ಮಾಡಿದನು. ಸೌಭರಿಮುನಿಯು ಕಾವಲುಗಾರನೊಡನೆ ಕನ್ಯಾಂತಃಪುರವನ್ನು ಪ್ರವೇಶಿಸುತ್ತಿರುವಾಗ ಸಮಸ್ತ ಸಿದ್ಧಗಂಧರ್ವರಿಗಿಂತಲೂ ಅಧಿಕ ರಮಣೀಯವಾದ ದಿವ್ಯರೂಪವನ್ನು ಧರಿಸಿದನು. ಕಾವಲುಗಾರನಾದ ಷಂಡನು ಮುನಿಯನ್ನು ಒಳಗೆ ಕರೆದೊಯ್ದು ರಾಜಪುತ್ರಿಯರನ್ನು ಕರೆದು ಅವರನ್ನು ಕುರಿತು ಹೀಗೆ ಹೇಳಿದನು. ನಿಮ್ಮ ತಂದೆಯವರಾದ ಮಹಾರಾಜರು ಹೀಗೆಂದು ಆಜ್ಞಾಪಿಸಿದ್ದಾರೆ. ಈ ಬ್ರಹ್ಮರ್ಷಿಯು ಕನ್ಯಾರ್ಥಿಯಾಗಿ ನಮ್ಮ ಬಳಿಗೆ ಬಂದಿದ್ದಾನೆ. ಈ ನನ್ನ ಹೆಣ್ಣು ಮಕ್ಕಳಲ್ಲಿ ಯಾವ ಕನ್ಯೆಯಾದರೂ ಈ ಬ್ರಹ್ಮರ್ಷಿಯನ್ನು ವರಿಸುವುದಾದರೆ ಆ ಕನ್ಯೆಯಇಷ್ಟಾರ್ಥ ನಾನು ಅಡ್ಡ ಬರುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾನೆ. ಆಗ ಮುನಿಯನ್ನು ನೋಡಿದ ಎಲ್ಲ ಕನ್ಯೆಯರೂ ಅವನಲ್ಲಿ ಅನುರಕ್ತರಾದರು. ಹೆಣ್ಣಾನೆಗಳು ಸಲಗವನ್ನು ಬಯಸುವಂತೆ ಆ ಕನ್ಯೆಯರು ನನಗೆ ಬೇಕು ನನಗೆ ಬೇಕು ಎಂದು ಮುನಿಯನ್ನು ವರಿಸಿಬಿಟ್ಟರು. ಆ ಹೆಣ್ಣು ಮಕ್ಕಳಲ್ಲಿಯೇ ಮುನಿಯನ್ನು ನಾನು

ವರಿಸುತ್ತೇನೆ, ನಾನು ವರಿಸುತ್ತೇನೆ. ಇವನು ನಿನಗೆ ಅನುರೂಪನಲ್ಲ. ನನಗೇ ಗಂಡನಾಗಬೇಕೆಂದು ಬ್ರಹ್ಮನೇ ಇವನನ್ನು ಹುಟ್ಟಿಸಿದ್ದಾನೆ. ನಾನೇ ಇವನ್ನು ಮೊದಲು ಆರಿಸಿಕೊಂಡವಳು ಎಂದು ಈ ಪ್ರಕಾರವಾಗಿ ರಾಜಪುತ್ರಿಯರಲ್ಲಿ ಜಗಳವೇ ಆರಂಭವಾಯಿತು. ಹೀಗೆ ರಾಜಕನ್ಯೆಯರು ಮುನಿಯನ್ನು ಮನಸಾರೆ ವರಿಸಿದ ಈ ವಿಷಯವನ್ನು ಅಧಿಕಾರಿಯು ಮಹಾರಾಜನಿಗೆ ತಿಳಿಸಿದನು. ರಾಜನು ಈ ಸಂಗತಿಯನ್ನು ಕೇಳಿ ಅಚ್ಚರಿಗೊಂಡು ಸೌಭರಿಗೆ ಮದುವೆ ಮಾಡಿಕೊಡಲು ಒಪ್ಪಿಗೆಯನ್ನಿತ್ತನು. ಮಹರ್ಷಿಯು ವಿಧಿಪೂರ್ವಕವಾಗಿ ರಾಜಕುಮಾರಿಯರನ್ನು ಮದುವೆಯಾಗಿ ಅವರೆಲ್ಲರನ್ನು ತನ್ನ ಆಶ್ರಮಕ್ಕೆ ಕರೆದೊಯ್ದನು. ನಂತರ ಸುಪ್ರಸಿದ್ಧನಾದ ಶಿಲ್ಪಿ ವಿಶ್ವಕರ್ಮನನ್ನು ಕರೆದು ಎಲ್ಲ ರಾಜಪುತ್ರಿಯರಿಗೆ ಪ್ರತ್ಯೇಕವಾದ ಪ್ರಾಸಾದಗಳನ್ನು ನಿರ್ಮಿಸಲು ಆಜ್ಞೆಮಾಡಿದನು. ಆ ರಾಜಕುಮಾರಿಯರು ಸುಖಭೋಗಗಳೊಂದಿಗೆ ತಮ್ಮ ತಮ್ಮ ಪ್ರಾಸಾದಗಳಲ್ಲಿ ಜೀವಿಸುತ್ತಿದ್ದರು. ಒಮ್ಮೆ ಮಾಂಧಾತೃನು ಮಮತೆಯಿಂದ ತನ್ನ ಪುತ್ರಿಯರು ಕಷ್ಟದಲ್ಲಿದ್ದಾರೋ, ಸುಖದಲ್ಲಿದ್ದಾರೋ ಎಂದು ಚಿಂತಿಸುತ್ತಾ ಮಹರ್ಷಿಯ ಆಶ್ರಮಕ್ಕೆ ಹೋಗಿ ಅಲ್ಲಿದ್ದ ಒಂದು ಭವನದೊಳಗೆ ಹೋದಾಗ ಬಹುದಿನಗಳ ನಂತರ ಅಲ್ಲಿದ್ದ ತನ್ನ ಮಗಳನ್ನು ಕಂಡು. ಕಂಬನಿಗರೆದು "ನೀನು ಸುಖವಾಗಿರುವೆಯ ಮಹರ್ಷಿ ನಿನ್ನನ್ನು ಪ್ರೀತಿಸುವನೋ ಇಲ್ಲವೋ ? ನಮ್ಮ ಮನೆಯ ನೆನಪು ನಿನಗೆ ಬರುತ್ತದೆಯೇ ? ಎಂದು ಕೇಳಿದನು. ಅದಕ್ಕೆ ಆ ಮಗಳು ಅಪ್ಪಾ ಈ ಭವನವು ಅತ್ಯಂತ ರಮಣೀಯವಾಗಿದೆ. ಮನಸ್ಸಿಗೆ ಬೇಕಾದ ಭಕ್ಷ್ಯ ಭೋಜನಗಳಿವೆ. ಕಣ್ಣಿಗೆ ಆಕರ್ಷಣೆ ನೀಡುವ ವಸ್ತ್ರ ಭೂಷಣಗಳಿವೆ. ನನ್ನ ವಿವಾಹ ಜೀವನವೂ ತೃಪ್ತಿಕರವಾಗಿದೆ. ಆದರೂ ತವರುಮನೆಯ ನೆನಪು ಯಾರಿಗೆ ತಾನೇ ಬರುವುದಿಲ್ಲ? ನಿನ್ನ ಆಶೀರ್ವಾದಿಂದ ಇದೆಲ್ಲವೂ ಬಹಳ ಚೆನ್ನಾಗಿದೆ. ಆದರೂ ನನಗೆ ಒಂದೇ ಒಂದು ವ್ಯಥೆ. ಅದೇನೆಂದರೆ ನನ್ನ ಪತಿಯಾದ ಈ ಮಹರ್ಷಿಯು ಒಮ್ಮೆಯೂ ಮನೆಯಿಂದ ಹೊರಗೆ ಹೋಗುವುದೇ ಇಲ್ಲ. ನನ್ನ ಮೇಲಿನ ಅತಿ ಪ್ರೀತಿ ಪ್ರೇಮದಿಂದಾಗಿ ಯಾವಾಗಲೂ ನನ್ನ ಬಳಿಯಲ್ಲಿಯೇ ಇರುತ್ತಾನೆ. ಹೀಗಾಗಿ ನನ್ನ ಸೋದರಿಯರು ಅತ್ಯಂತ ದುಃಖಿತರಾಗಿದ್ದಾರೋ ಏನೋ ಎಂಬುದೇ ನನ್ನ ವ್ಯಥೆಗೆ ಕಾರಣವಾಗಿದೆ ಎಂದು ಹೇಳಿದಳು.

ಅನಂತರ ಮಾಂದಾತೃನು ಮತ್ತೊಂದು ಭವನಕ್ಕೆ ಹೋಗಿ ಅಲ್ಲಿದ್ದ ಇನ್ನೊಬ್ಬ ಮಗಳನ್ನು ಆಲಂಗಿಸಿಕೊಂಡು ಅದೇ ಪ್ರಶ್ನೆಯನ್ನು ಕೇಳಿದನು. ಅವಳು ಸಹ ದಿವ್ಯಭವನದಲ್ಲಿ ತಾನು ಅನುಭವಿಸುತ್ತಿದ್ದ ಸುಖಭೋಗಗಳನ್ನು ವಿವರಿಸಿ ಯಾವಾಗಲೂ ತನ್ನ ಪತಿ ತನ್ನ ಬಳಿಯಲ್ಲಿಯೇ ಇರುತ್ತಾನೆಂದೂ ತನ್ನ ಸೋದರಿಯರ ಬಳಿ ಹೋಗುವುದೇ ಇಲ್ಲ ಎಂದು ತಿಳಿಸಿದಳು. ತನ್ನ ಐವತ್ತು ಹೆಣ್ಣುಮಕ್ಕಳನ್ನು ಕೇಳಿದಾಗಲೂ ಅದೇ ಉತ್ತರ ಕೇಳಿ ಮಾಂಧಾತೃನು ಆನಂದಪರವಶನಾಗಿ ಆಶ್ಚರ್ಯಚಕಿತನಾದನು. ಕೊನೆಗೆ ಒಮ್ಮೆ ಏಕಾಂತದಲ್ಲಿ ಕುಳಿತಿದ್ದ ಸೌಬರಿ ಮುನಿಯ ಬಳಿಗೆ ಹೋಗಿ "ಭಗವನ್ ಇದು ಅದ್ಭುತಕರವಾದ ನಿಮ್ಮ ತಪಃಪ್ರಭಾವ ನಿಮ್ಮ ತಪಸ್ಸಿನ ಫಲ ಎಂದು ಹೇಳಿ ಆ ಋಷಿಯನ್ನು ಪೂಜಿಸಿದನು. ನಂತರ ಕೆಲವು ಕಾಲ ಸಂಭಾಷಣೆಯನ್ನು ನಡೆಸಿ ತನ್ನ ರಾಜಧಾನಿಗೆ ಹಿಂದಿರುಗಿದನು. ಕಾಲಕ್ರಮದಲ್ಲಿ ಸೌಭರಿ ಮುನಿಗೆ ಆ ರಾಜಕುಮಾರಿಯರಲ್ಲಿ ನೂರೈವತ್ತು ಮಂದಿ ಪುತ್ರರು ಜನಿಸಿದರು. ದಿನಕಳೆದಂತೆ ಮಕ್ಕಳಲ್ಲಿ ಪ್ರೀತಿಯು ಬೆಳೆಯುತ್ತಾ ಹೋಯಿತು. ಅತ್ಯಂತ ಮಮತೆಯಿಂದ ಮುನಿಯ ಹೃದಯವು ಮಕ್ಕಳಲ್ಲಿ ನೆಟ್ಟುಹೋಯಿತು.  ನನ್ನ ಈ ಪುತ್ರರು ತೊದಲುತ್ತಾ ಮಾತಾಡುವರಲ್ಲವೇ ?, ಪುಟ್ಟ ಪುಟ್ಟ ಹೆಜ್ಜೆಗಳಿಡುತ್ತಾ ನಡೆದಾಡುವರಲ್ಲವೇ?, ಇವರು ಮುಂದೆ ಯುವಕರಾಗಿ ಮದುವೆಯಾಗುವುದನ್ನು ನಾನು ಯಾವಾಗ ನೋಡಿವೆನು? ಇವರಿಗೆ ಮಕ್ಕಳು ಹುಟ್ಟುವರಲ್ಲವೇ ?, ಆ ಪುತ್ರರಿಗೂ ಪುತ್ರರು ಜನಿಸಿದಾಗ ಮಕ್ಕಳು ಮೊಮ್ಮಕ್ಕಳಿಂದ ಕೂಡಿದ ಇವರನ್ನು ನಾನು ನೋಡುವೆನಲ್ಲವೇ? ಹೀಗೆ ಮನೋರಥಗಳು ಒಂದರ ಮೇಲೊಂದು ಬೆಳೆಯುತ್ತಾ ಹೋದವು. ಕಾಲಕಳೆದಂತೆ ಈ ಮನೋರಥಗಳು ಹೆಚ್ಚುತ್ತಿರುವುದನ್ನು ಅರಿತು ಒಂದು ದಿನ ಸೌಭರಿ ಮುನಿಯು ಹೀಗೆ ಆಲೋಚಿಸಿದನು.

**ಮನೋರಥಾನಾಂ ನ ಸಮಾಸ್ತಿ ರಸ್ತಿ ವರ್ಷಾಯುತೇನಾಪಿ ತಥಾಬ್ದಲಕ್ಷೈಃ**
**ಪೂರ್ಣೇಷು ಪೂರ್ಣೇಷು ಮನೋರಥಾನಾ ಮುತ್ಪತ್ತಯಸ್ಸಂತಿ**
**ಪುನರ್ನವಾನಾಮ್**

(ವಿ.ಪು 2ನೇ ಸಂಪುಟ ಚತುರ್ಥಾಂಶ 2ನೇ ಅಧ್ಯಾಯ)

"ಥೂ ! ನನ್ನ ಮೋಹದ ವಿಸ್ತಾರವೆಷ್ಟು ! ಮನೋರಥಗಳಿಗೆ

ಕೊನೆಯೆಂಬುದೇ ಇಲ್ಲ. ಹತ್ತು ಸಾವಿರ ವರ್ಷಗಳಾಗಲಿ, ಲಕ್ಷ ವರ್ಷಗಳಾಗಲಿ ಇವು ಮುಗಿಯುವುದೇ ಇಲ್ಲ. ಇವು ನೆರವೇರುತ್ತ ಹೋದಂತೆ ಹೊಸ ಹೊಸ ಆಸೆಗಳು ಚಿಗುರುತ್ತಲೇ ಇರುತ್ತವೆ.

**ಸುತಾತ್ಮ ಜೈಸ್ತತ್ತನಯೈಶ್ಚ ಭೂಯೋ ಭೂಯಶ್ಚ ತೇಷಾಂ ಚ ಪರಿಗ್ರಹೇಣ**
**ವಿಸ್ತಾರ ಮೇಷ್ಯ ತ್ಯತಿ ದುಃಖ ಹೇತುಃ ಪರಿಗ್ರಹೋ ವೈ ಮಮತಾಭಿಧಾನಃ**
**ಚೀರ್ಣಂ ತಪೋ ಯತ್ತು ಜಲಾಶ್ರಯೇಣ ತಸ್ಸರ್ಧಿರೇಷಾ ತಪಸೋಂತರಾಯಃ**
**ಮತ್ಸ್ಯಸ್ಸ ಸಂಗಾದ ಭವಚ್ಚ ಯೋಮೇ  ಸುತಾದಿರಾಗೋ ಮುಷಿತೋಸ್ಮಿ ತೇನ**

(ವಿ.ಪು. 2ನೇ ಸಂಚತುರ್ಥಾಂಶ 2ನೇ 122– 12 ಶ್ಲೋಕ 123)

ಒಟ್ಟಿನಲ್ಲಿ ಈ ಮಮತಾಬಂಧವು ಅತ್ಯಂತ ಶೋಕಕ್ಕೆ ಕಾರಣವೇ ಸರಿ. ನೀರಲ್ಲಿ ನೆಲಸಿ ಯಾವ ತಪಸ್ಸನ್ನು ಆಚರಿಸಿದರೂ ವಿಘ್ನವಾಗಿ ಪರಿಣಮಿಸಿತು. ಮೀನಿನ ಸಹವಾಸದಿಂದ ನನಗೆ ಪುತ್ರಾದಿ ವ್ಯಾಮೋಹ ಉಂಟಾಗಿ ಅದರಿಂದ ನಾನು ಮೋಸ ಹೋದೆನು ಎಂದು ಪರಿತಪಿಸಿದನು.

**ನಿಸ್ಸಂಗತಾ ಮುಕ್ತಿ ಪದಂ ಯತೀನಾಂ ಸಂಗಾದ ಶೇಷಾಃ ಪ್ರಭವಂತಿ ದೋಷಾಃ**
**ಆರೂಡಯೋಗೋ ವಿನಿಪಾತ್ಯತೇದ ಸ್ಸಂಗೇನ ಯೋಗೀ ಕಿಮುತಾಲ್ಪ ಸಿದ್ಧಿಃ**

**ಸೋಹಂ ಚರಿಷ್ಯಾಮಿ ತಥಾತ್ಮನೋರ್ಥೇ ಪರಿಗ್ರಹ ಗ್ರಹಗ್ನಹೀತ ಬುದ್ಧಿಃ**
**ಯಥಾ ಹಿ ಭೂಯಃ ಪರಿಹೀನದೋಷೋ ಜನಸ್ಯ ದುಃಖೈರ್ಭವಿತಾ ದುಃಖೀ**

**ಸರ್ವಸ್ಯ ದಾತಾರ ಮಚಿಂತ್ಯರೂಪ ಮಣೋ ರಣೀಯಾಂಸಮತಿ ಪ್ರಮಾಣಮ್**
**ಸಿತಾಸಿತಂ ಚೇಶ್ವರ ಮೀಶ್ವರಾಣಾ ಮಾರಾಧಯಿಷ್ಯೇ ತಪಸೈವ ವಿಷ್ಣುಮ್**

**ತಸ್ಮಿನ್ನೆ ಶೇಷೌಜಸಿ ಸರ್ವರೂಪಿ ಣ್ಯ ವ್ಯಕ್ತ ವಿಸ್ಪಷ್ಟತನಾವತಂತೇ**
**ಮಮಾಚಲಂ ಚಿತ್ತಮಪೇತ ದೋಷಂ ಸದಾಸ್ತು ವಿಷ್ಣಾವಭವಾಯ ಭೂಯಃ**
**ಸಮಸ್ತ ಭೂತಾದಮಲಾದನಂತಾತ್ಸರ್ವೇಶ್ವರಾದನ್ಯದನಾದಿ ಮಧ್ಯಾತ್**

**ಯಸ್ಮಾನ್ನ ಕಿಂಚಿತ್ತಮಹಂ ಗುರುಣಾಂ ಪರಂ ಗುರುಂ ಸಂಶ್ರಯ ಮೇಮಿ ವಿಷ್ಣುಂ**

(ವಿ.ಪು.2ನೇ ಸಂ 124 ರಿಂದ 128)

ಯತಿಗಳಿಗೆ ಮುಕ್ತಿಯನ್ನು ಕೊಡತಕ್ಕದ್ದು. ಸಂಗರಾಹಿತ್ಯ ಸಂಗದಿಂದ ಸಮಸ್ತದೋಷಗಳು ಉದ್ಭವಿಸುತ್ತವೆ. ಯೋಗಾರೂಢನಾದವನೂ ಸಹ ವಿಷಯಸಂಗದಿಂದ ಕೆಳಗೆ ಉರುಳುತ್ತಾನೆ. ಇನ್ನು ಅಲ್ಪಸಿದ್ಧಿಯನ್ನು ಸಾಧಿಸಿದ ಯೋಗಿಯ ವಿಷಯವನ್ನು ಹೇಳಬೇಕಾದ್ದೇನು ? ಇದುವರೆಗೆ ವಿಷಯಸಂಗವೆಂಬ ಮೊಸಳೆ ನನ್ನನ್ನು ಹಿಡಿದುಬಿಟ್ಟಿತ್ತು. ಈಗ ನಾನು ಆತ್ಮಾರ್ಥವಾಗಿ ತಪಸ್ಸಿನಲ್ಲಿ ತೊಗುತ್ತೇನೆ. ಮಾಡಿದ ತಪ್ಪಿನಿಂದ ಕಳಚಿಕೊಳ್ಳುವೆ. ಭಾರ್ಯಾದಿ ಜನರ ದುಃಖಗಳಿಂದ ಮತ್ತೆ ನಾನು ದುಃಖಿಯಾಗಬಾರದು. ಸರ್ವಕಾರ್ಯಗಳಿಗೆ ವಿಧಾತೃವೂ ಅಚಿಂತ್ಯ ಸ್ವರೂಪ ಅಣೋರಣೀಯನೂ, ಮಹತೋ ಮಹೀಮನೂ, ಶುದ್ಧನೂ, ಶಬಲನೂ ಅಂದರೆ ಮಾಯಾಸಹಿತನೂ, ಈಶ್ವರನಿಗೆ ಈಶ್ವರನು ಆದ ಮಹಾವಿಷ್ಣುವನ್ನು ತಪಸ್ಸಿನಿಂದ ನಿಶ್ಚಯವಾಗಿಯೂ ಆರಾಧಿಸುವೆನು. ಸಂಪೂರ್ಣ ತೇಜೋಮಯನೂ, ಸರ್ವದಾ ಅವ್ಯಕ್ತನೂ, ವ್ಯಕ್ತನೂ, ಅನಂತನೂ ಆದ ಮಹಾವಿಷ್ಣುವಿನಲ್ಲಿಸ ನನ್ನ ಚಿತ್ತವು ಅಚಲವಾಗಿ ಮತ್ತೆ ನೆಲಸಲಿ. ಅದು ದೋಷರಹಿತವಾಗಿದ್ದು ಮುಕ್ತಿಗೆ ಕಾರಣವಾಗಲಿ ಸರ್ವಸ್ವರೂಪನು ನಿರ್ಮಲನು. ಅನಂತನೂ ಸರ್ವೇಶ್ವರನೂ, ಆದಿ, ಮಧ್ಯ, ಅಂತ್ಯ ರಹಿತನೂ ಆದ ವಿಷ್ಣುವಿಗಿಂತ ಬೇರೆ ಯಾವ ವಸ್ತುವೂ ಇಲ್ಲ. ಗುರುಗಳಿಗೇ ಪರಮ ಗುರುವಾದ ಆ ಮಹಾವಿಷ್ಣುವಿಗೆ ಶರಣಾಗುವೆನು ಎಂದು ಹೇಳಿ ಸೌಭರಮುನಿಯು ತಪೋನಿರತನಾದನು. ಈ ವೃತ್ತಾಂತದಿಂದ ನಮ್ಮಂಥ ಹುಲು ಮಾನವರಿಗೆ ದೊರಕುವ ಸಂದೇಶವಾದರೂ ಏನು? ಇದೂ ವಿವಿಧ ಪ್ರಕಾರಗಳಲ್ಲಿರಬಹುದು. ಕೆಲವರು ನಾವೂ ಸಹ ಎಲ್ಲ ಸುಖಭೋಗಗಳನ್ನು ಅನುಭವಿಸಿ ಕೊನೆಗೆ ವೃದ್ಧಾಪ್ಯದಲ್ಲಿ ದೇವರ ಧ್ಯಾನದ ಬಗ್ಗೆ ಚಿಂತಿಸೋಣ ಎಂದು ಹೇಳುವವರುಂಟು. ಮತ್ತೆ ಕೆಲವರು "ಅಂತೂ ಇಂತೂ ಕೆಟ್ಟ ಮೇಲೆ ಬುದ್ಧಿ ಬಂತಲ್ಲಾ ಎಂದು" ಅಪಹಾಸ್ಯ ಮಾಡುವವರುಂಟು. ಇನ್ನು ಹಲವರು ಈ ಸಂಗತಿಯಿಂದ ಈ ಲೋಕದಲ್ಲಿ ಯಾವುದೂ ಶಾಶ್ವತವಲ್ಲ. ಭಗವಂತನ ಧ್ಯಾನವೇ ಮುಕ್ತಿಮಾರ್ಗದತ್ತ ನಮ್ಮನ್ನು ಒಯ್ಯುವುದು ಎಂಬ

ಶುದ್ಧ ಸತ್ವಯುತವಾದ ಶುದ್ಧ ಸತ್ಯವನ್ನೇ ಮನಗಾಣಬಹುದು. ಏನಾದರಾಗಲಿ "ಭಿನ್ನರುಚಿರ್ಹಿಲೋಕಃ" ಅಲ್ಲವೇ ? ಒಟ್ಟಿನಲ್ಲಿ 'ಹರಿಚಿತ್ತ ಸತ್ಯ ನಮ್ಮ ನರಚಿತ್ತಕೆ ಬಂದರೂ ಲವಲೇಶ ನಡೆಯದು' ಎಂಬ ಪುರಂದರದಾಸರ ಮಾತು ಯಾವ ಕಾಲದಲ್ಲೂ ಶತಶಃ ಸತ್ಯ ಅಲ್ಲವೇ? ಇದೂ ಭಗವಂತನ ಲೀಲೆ. ಜಗನ್ನಾಟಕ ಸೂತ್ರಧಾರಿಯಾದ ಆ ಭಗವಂತನು ಇಂತಹ ಪಾತ್ರಗಳನ್ನು ಸೃಷ್ಟಿಸಿ ಅದರಿಂದ ನಮಗೆ ಪಾಠವನ್ನು ಕಲಿಸುವುದು ಅವನ ಲೀಲೆಯೇ ತಾನೇ? ಜಗವೆಲ್ಲಾ ಒಂದು ನಾಟಕರಂಗ. ಜನರೆಲ್ಲಾ ಪಾತ್ರಧಾರಿಗಳು ಎಂಬ ಶಾಶ್ವತ ಸತ್ಯವನ್ನು ಮನಗಂಡು ಸರಿದಾರಿ ತೋರಪ್ಪಾ ಸ್ವಾಮಿ ಎಂದು ಆ ಮಹಾವಿಷ್ಣುವಿನಲ್ಲೇ ಮೊರೆ ಹೋಗುವುದೊಂದೇ ನಮಗೆ ಉಳಿದಿರುವ ಮಾರ್ಗ. ಅಂತೆಯೇ ನಡೆಯೋಣ

**ಶ್ರೀಕೃಷ್ಣಾರ್ಪಣಮಸ್ತು**

## ಪುರುಕುತ್ಸ ಚರಿತ್ರೆ

ಮಾಂಧಾತೃವಿನ ಮಗ ಅಂಬರೀಷ. ಅಂಬರೀಷನಿಗೆ ಯುವನಾಶ್ವ ಎಂಬ ಮಗನು ಜನಿಸಿದನು. ಆತನ ಮಗನೇ ಹಾರೀತ. ಈತನಿಂದ ಹಾರೀತ ಆಂಗೀರಸವೆಂಬ ದ್ವಿಜಸಂತತಿ ಹುಟ್ಟಿತು.

(ಅಥ ಹಾರೀತಾನಾಂ ತ್ರಾರ್ಷ್ಯೆಯೂ ಆಂಗೀರಸಃ ಅಂಬರೀಷ ಯೌವನಾಶ್ವಃ ಎಂದು ಹಾರೀತ ಗೋತ್ರದವರು ಪ್ರವರವನ್ನು ಪಠಿಸುವ ಪರಿಪಾಠವಿದೆ. ಅಷ್ಟೇ ಅಲ್ಲದೆ ಭಾರದ್ವಾಜ ಗೋತ್ರದವರು ಆಂಗೀರಸ ಭಾರದ್ವಾಜ ಬಾರ್ಹಸ್ಪತ್ಯ ತ್ರಯಾಋಷಯ ಭಾರದ್ವಾಜ ಗೋತ್ರೋದ್ಭವಸ್ಯ ಮುಂತಾಗಿ ಪ್ರವರ ಹೇಳುವುದು ಉಂಟು. ಒಟ್ಟಿನಲ್ಲಿ ಹಾರೀತನ ಪತ್ನಿಯಲ್ಲಿ ಆಂಗಿರಸನಿಂದ ದ್ವಿಜಸಂತತಿ ಬೆಳದಿರಬಹುದೆಂದು ಹಿರಿಯರ ಅಭಿಪ್ರಾಯ. ಹೇಗಾದರಾಗಲಿ ಭಾರಧ್ವಾಜ ಆಂಗೀರಸ ಗೋತ್ರವೆಂದರೆ ದ್ವಿಜ ಸಂತತಿ ಎಂದೇ ಪ್ರಸಿದ್ದವಾಗಿದೆ. ಮತ್ತೊಂದು ರೋಚಕವಾದ ಪ್ರಸಂಗವನ್ನು ನೋಡೋಣ ರಸಾತಳದಲ್ಲಿ (ಅಧೋಲೋಕದ ಏಳು ಲೋಕದಲ್ಲಿ ಒಂದರಲ್ಲಿ ಮೌನೇಯರೆಂಬ ಗಂಧರ್ವರಿದ್ದರು. ಆ ಗಂಧರ್ವರು ಅಲ್ಲಿ ನಾಗಕುಲದವರ

ಪ್ರಧಾನರತ್ನಗಳನ್ನು, ಅಧಿಕಾರವನ್ನು ಕಿತ್ತುಕೊಂಡು ಹೋದರು. ಹೀಗೆ ಗಂಧರ್ವರಿಂದ ಪರಾಜಿತರಾದ ಸರ್ಪಾಧಿಪತಿಗಳು ಶ್ರೀಮನ್ನಾನಾರಾಯಣನ ಬಳಿ ಹೋಗಿ ಪ್ರಾರ್ಥಿಸಿದರು. ಜಲಶಯನದಲ್ಲಿ ನಿದ್ರಿಸುತ್ತಿದ್ದ ಭಗವಂತನು ನಾಗಕುಲದವರ ಸ್ತುತಿಯನ್ನು ಕೇಳಿ ಎಚ್ಚೆತ್ತನು. ಗಂಧರ್ವರಿಂದ ನಮ್ಮನ್ನು ಕಾಪಾಡಬೇಕೆಂದು ಪ್ರಾರ್ಥಿಸಿದರು. ಆಗ ಪುರುಷೋತ್ತಮ ಯುವನಾಶ್ವನ ಮಗನಾದ ಮಾಂಧಾತೃವಿಗೆ ಪುರುಕುತ್ಸ ಎಂಬ ಮಗ ಇದ್ದಾನೆ. ಆತನಲ್ಲಿ ನಾನು ಅನುಪ್ರವೇಶ ಮಾಡಿ ಆ ಗಂಧರ್ವರನ್ನೆಲ್ಲಾ ಮುಗಿಸುತ್ತೇನೆ ಎಂದು ಅಭಯವನ್ನಿತ್ತನು. ಆ ಮಾತನ್ನು ಕೇಳಿ ನಾಗಾಧಿಪತಿಗಳು ಭಗವಂತನಿಗೆ ನಮಸ್ಕರಿಸಿ ತಮ್ಮ ನಾಗಲೋಕಕ್ಕೆ ಹಿಂತಿರುಗಿದರು. ಅಷ್ಟೇ ಅಲ್ಲದೆ ಪುರುಕುತ್ಸನನ್ನು ಕರೆತರುವಂತೆ ನರ್ಮದೆಯನ್ನು ಪ್ರೇರಿಸಿದನು. (ಇವಳು ನರ್ಮದೆ ಎಂಬುವಳು ನಾಗಾಧಿಪತಿಗಳ ಸಹೋದರಿ. ಪುರುಕುತ್ಸನ ಪತ್ನಿ) ಪುರುಕುತ್ಸನು ರಸಾತಳಕ್ಕೆ ಬಂದು ಭಗವಂತನ ತೇಜಸ್ಸಿನಿಂದ ಆವಿಷ್ಟವಾದ ಸ್ವಪರಾಕ್ರಮವುಳ್ಳವನಾಗಿ ಸಕಲಗಂಧರ್ವರನ್ನು ಸಂಹರಿಸಿದನು. ಆಗ ಎಲ್ಲ ನಾಗಾಧಿಪತಿಗಳು ನರ್ಮದೆಗೆ "ಯಾರು ನಿನ್ನನ್ನು ಸ್ಮರಿಸುತ್ತ ನಿನ್ನ ನಾಮೋಚ್ಚಾರಣೆ ಮಾಡುತ್ತಾರೋ ಅವರಿಗೆ ಸರ್ಪ ವಿಷದಿಂದ ಯಾವ ಭಯವೂ ಉಂಟಾಗುವುದಿಲ್ಲ" ಎಂದು ವರವನ್ನಿತ್ತರು. ಇದಕ್ಕೆ ಒಂದು ಶ್ಲೋಕವೂ ಇದೆ.

**"ನರ್ಮದಾಯೈನಮಃ ಪ್ರಾತರ್ನಮದಾಯೈನಮೋಇತಿ**
**ನಮೋಸ್ತು ನರ್ಮದೇತು ಭ್ಯಂ ತ್ರಾಹಿಮಾಂ ವಿಷಸರ್ಪತಃ**

(ವಿ.ಪು.2.ಸಂ.ಚ.ಅಂ.ಅರ್ಧ್ಯಾಯ 13ನೇಶ್ಲೋಕ)

ಪ್ರಾತಃಕಾಲದಲ್ಲಿಯೂ ರಾತ್ರಿಯಲ್ಲಿಯೂ ಎಲೈ ನರ್ಮದೆ ನಿನಗೆ ನಮಸ್ಕಾರ. ವಿಷಸರ್ಪದಿಂದ ನನ್ನನ್ನು ರಕ್ಷಿಸು. ಇಂತೆಯೇ ಸರ್ಪಗಳ ವೈರಿ ಗರುಡ ಮಂತ್ರವೂ ಇದೆ. "ನಮಃ ಪನ್ನಗನದ್ಧಾಯ ವೈಕುಂಠವಶವರ್ತಿನೇ ಶ್ರುತಿಸಿಂಧು ಸುಧೋತ್ಪಾಥ ಮಂದರಾಯ ಗರುತ್ಮತೇ" ಎಂದು ಗರುಡಮಂತ್ರವನ್ನು ಜಪಿಸಿದರೂ ಸಹ ಸರ್ಪದ ಭಯವಿರುವುದಿಲ್ಲ ಎಂಬ ಅಚಲ ವಿಶ್ವಾಸ ಇಂದಿಗೂ ಜನರಲ್ಲಿದೆ. ನರ್ಮದೆಯನ್ನು ಸ್ಮರಿಸುತ್ತ ಊಟ ಮಾಡಿದರೆ ತಿಂದ ವಿಷವೂ ಘಾತಕವಾಗುವುದಿಲ್ಲ.

# ತ್ರಿಶಂಕು ಸ್ವರ್ಗ

ಪುರುಕುತ್ಸನ ಸಂತತಿಯು ಅನುಸ್ಯೂತವಾಗಿ ನಡೆಯಲೆಂದು ನಾಗಾಧಿಪತಿಗಳು ವರವನ್ನಿತ್ತರು. (ಅವಿಚ್ಛಿನ್ನ) ಪುರುಕುತ್ಸನು ನರ್ಮದೆಯಲ್ಲಿ ತ್ರಸದ್ದಸ್ಯು ಎಂಬ ಪುತ್ರನನ್ನು ಪಡೆದಳು. ತ್ರಸದ್ದಸ್ಯುವಿನಿಂದ ಅನರಣ್ಯನು ಜನಿಸಿದನು. ಅನರಣ್ಯನನ್ನು ರಾವಣನು ಕೊಂದನು. ಅನರಣ್ಯನಿಗೆ ಪ್ರಷದಶ್ವನೂ ಆತನಿಗೆ ಹರ್ಯಶ್ವನೆಂಬ ಮಗ ಜನಿಸಿದನು. ಹರ್ಯಶ್ವನ ಮಗ ಹಸ್ತ. ಅವನಿಗೆ ಸುಮನ ಎಂಬ ಮಗ ಜನಿಸಿದನು. ಸುಮನನಿಂದ ತ್ರಿಧನ್ಯನೂ ಆತನಿಗೆ ತ್ರಯಾರುಣಿಯೂ ಜನಿಸಿದರು. ತ್ರಯಾರುಣಿಗೆ ಸತ್ಯವ್ರತನು ಹುಟ್ಟಿದನು. ಈ ಸತ್ಯವ್ರತನಿಗೆ ತ್ರಿಶಂಕು ಎಂಬ ಹೆಸರು ಹೇಗೆ ಬಂದಿತು ಎಂಬುದನ್ನು ನೋಡೋಣ. ಈತನು ಚಂಡಾಲನಾದನು. ಸತ್ಯವ್ರತನು ಇನ್ನೊಬ್ಬನಿಗೆ ವಾಗ್ದತ್ತಳಾದ ಕನ್ಯೆಯನ್ನು ಅಪಹರಿಸಿದ್ದರಿಂದ ತಂದೆ ಇವನನ್ನು ಪರಿತ್ಯಜಿಸಿದ ನಂತರ ಇವನು ಶ್ವಪಚರೊಡನೆ ವಾಸವಾಗಿದ್ದನೆಂದೂ ಆದ್ದರಿಂದ ಚಂಡಾಲನಾದನೆಂದೂ ವಾಯುಪುರಾಣ, ಬ್ರಹ್ಮಪುರಾಣ ಹಾಗೂ ಲಿಂಗಪುರಾಣಗಳಲ್ಲಿದೆ. ಇದೇ ಸತ್ಯವ್ರತನು ವಸಿಷ್ಠರ ಪುತ್ರರ ಶಾಪದಿಂದ ಚಂಡಾಲನಾದನೆಂದು ರಾಮಾಯಣದಲ್ಲಿದೆ. ಈ ಸಂದರ್ಭದಲ್ಲಿ ರಾಜರ ವಂಶಾವಳಿಯಾಗಲಿ ಅವರ ಹೆಸರು, ಅನುಕ್ರಮಣಿಕೆ ಮುಂತಾದುವುಗಳಲ್ಲಿ ವಿಭಿನ್ನ ಅಭಿಪ್ರಾಯಗಳಿವೆ. ಸತ್ಯವ್ರತ ಚಂಡಾಲನಾದ ಬಗ್ಗೆ ಮತ್ತೊಂದು ಕಥೆ ಉಂಟು. ಒಮ್ಮೆ ಹನ್ನೆರಡು ವರ್ಷಗಳ ಕಾಲ ಅನಾವೃಷ್ಟಿ (ಬರಗಾಲ)ಯು ಬಂದಿತು. ಆಗ ಚಂಡಾಲನಾದ ಸತ್ಯವ್ರತನು ತಪಸಿನಲ್ಲಿದ್ದ ವಿಶ್ವಾಮಿತ್ರರ ಹೆಂಡತಿ ಮಕ್ಕಳನ್ನು ಪೋಷಿಸಿದನು. ತಾನು ಚಂಡಾಲನಾದ್ದರಿಂದ ಅವರು ಆಹಾರವನ್ನು ತನ್ನ ಕೈಯಿಂದ ಸ್ವೀಕರಿಸಲಾರರೆಂದು ಪ್ರತಿದಿನವೂ ಗಂಗಾತೀರದಲ್ಲಿದ್ದ ಒಂದು ಆಲದಮರಕ್ಕೆ ಜಿಂಕೆಯ ಮಾಂಸವನ್ನು ತಂದು ತೂಗುಹಾಕುತ್ತಿದ್ದನು. ತಪಸ್ಸಿನಿಂದ ಹಿಂತಿರುಗಿ ಬಂದ ವಿಶ್ವಾಮಿತ್ರರಿಗೆ ಈ ಸಂಗತಿ ತಿಳಿಯಿತು ಅವರು ಅತ್ಯಂತ ಸಂತುಷ್ಟರಾಗಿ ತ್ರಿಶಂಕುವನ್ನು ಸಶರೀರವಾಗಿ ಸ್ವರ್ಗಕ್ಕೆ ಏರಿಸಿದರು ಎಂಬ ಕಥೆ ಜನಜನಿತವಾಗಿದೆ. ಇದು ತ್ರಿಶಂಕು ಸ್ವರ್ಗವೆಂದೇ ಪ್ರಸಿದ್ಧವಾಯಿತು.

# ಸಗರ ಚರಿತ್ರೆ

ಈ ತ್ರಿಶಂಕುವಿನಿಂದ ಹರಿಶ್ಚಂದ್ರ. ಅವನಿಂದ ರೋಹಿತ ಅವನಿಂದ ಹರಿತ, ಹರಿತನಿಂದ ಚಂಚು, ಚಂಚುವಿನಿಂದ ವಿಜಯ ಮತ್ತು ವಸುದೇವ ಎಂಬುವರ ಜನ್ಮವಾಯಿತು. ಇವರಲ್ಲಿ ವಿಜಯನಿಗೆ ಗುರುಕನೂ, ಅವನಿಗೆ ವೃಕನೂ, ವೃಕನಿಗೆ ಬಾಹು ಎಂಬುವನು ಜನಿಸಿದನು. ಬಾಹುವು ಯುದ್ಧದಲ್ಲಿ ಹೈಹಯತಾಲಜಂಘ ಮೊದಲಾದವರಿಂದ ತನ್ನ ರಾಣಿಯ ಜೊತೆಗೆ ಕಾಡಿಗೆ ಹೋದನು. ರಾಣಿಯ ಸವತಿಯೊಬ್ಬಳು ಅವಳ ಗರ್ಭವನ್ನು ತಡೆಯಲು ಅವಳಿಗೆ ವಿಷವನ್ನಿತ್ತಳು. ವಿಷದೋಷದಿಂದಾಗಿ ರಾಣಿಯ ಗರ್ಭವು ಏಳು ವರ್ಷಗಳವರೆಗೆ ಉದರದಲ್ಲಿಯೇ ನಿಂತಿತು. ಇತ್ತ ಬಾಹುವು ವೃದ್ಧನಾದುದರಿಂದ ಔರ್ವ ಎಂಬ ಋಷಿಗಳ ಆಶ್ರಮದ ಹತ್ತಿರದಲ್ಲಿ ಮರಣಿಸಿದನು. ಆತನ ಪತ್ನಿಯು ಪತಿ ಬಾಹುವುವಿನೊಡನೆ ಸಹಗಮನ ಮಾಡಿಕೊಳ್ಳಲು ನಿಶ್ಚಯಿಸಿದಳು. ಆ ಸಮಯದಲ್ಲಿ ಭೂತ, ಭವಿಷ್ಯತ್, ವರ್ತಮಾನಗಳನ್ನು ಅರಿತ ಭಗವಾನ್ ಔರ್ವ ಮಹರ್ಷಿಯು ಆಶ್ರಮದಿಂದ ಹೊರಗೆ ಬಂದು ಸಹಮನ ಮಾಡಿಕೊಳ್ಳಬೇಡಮ್ಮ, ನಿನ್ನ ನಿರ್ಧಾರವನ್ನು ಕೈಬಿಡು. ನಿನ್ನ ಈ ತಪ್ಪುದಾರಿಯನ್ನು ಬಿಡು. ಅಖಿಲ ಭೂಮಂಡಲದ ಅಧಿಪತಿಯಾಗುವ ಬಹಳ ಪರಾಕ್ರಮಶಾಲಿಯಾದ ಹಲವಾರು ಯಜ್ಞಗಳನ್ನು ನಡೆಸತಕ್ಕವನೂ, ಶತ್ರು ವಿಧ್ವಂಸಕನೂ ಆಗುವ ಚಕ್ರವರ್ತಿಯು ನಿನ್ನ ಗರ್ಭದಲ್ಲಿದ್ದಾನೆ ಎಂದು ಹೇಳಿದನು. ಹೀಗಾಗಿ ಅವಳು ಸಹಗಮನವನ್ನು ನಿಲ್ಲಿಸಿದಳು. ನಂತರ ಮಹರ್ಷಿಯು ಆಕೆಯನ್ನು ತನ್ನ ಆಶ್ರಮಕ್ಕೆ ಕರೆದೊಯ್ದನು. ಕೆಲವು ದಿನಗಳ ನಂತರ ಅವಳಿಗೆ ಅತ್ಯಂತ ತೇಜಸ್ವಿಯಾದ ಬಾಲಕನು ರಾಣಿಯು ತಿಂದಿದ್ದ ಗರ (ವಿಷ)ದಿಂದ ಸಹಿತವಾಗಿಯೇ ಜನಿಸಿದನು. ಔರ್ವ ಮಹರ್ಷಿಯು ಆ ಮಗುವಿಗೆ ಜಾತಕರ್ಮ ನಾಮಕರಣ ಮುಂತಾದ ಸಂಸ್ಕಾರಗಳನ್ನು ನಡೆಸಿ ಸಗರ ಎಂಬ ಹೆಸರನ್ನು ಇಟ್ಟನು. ಕೆಲವು ವರ್ಷಗಳ ನಂತರ ಆ ಬಾಲಕನಿಗೆ ಉಪನಯನ ಮಾಡಿ ವೇದಶಾಸ್ತ್ರಗಳನ್ನು ಕಲಿಸಿ, ಭಾರ್ಗವ ಎಂಬ ಆಗ್ನೇಯಾಸ್ತ್ರ ವಿದ್ಯೆಯನ್ನು ಉಪದೇಶಿಸಿದನು. ಬಾಲಕನಿಗೆ ತಿಳಿವಳಿಕೆ ಬಂದ ಮೇಲೆ ಅವನು ಒಮ್ಮೆ ತಾಯಿಯನ್ನು ಕುರಿತು ಅಮ್ಮ ನಾವು ಈ ತಪೋವನದಲ್ಲಿ ಇರುವುದೇಕೆ ? ನಮ್ಮ ತಂದೆ ಯಾರು

? ಹೀಗೆ ಅನೇಕ ಪ್ರಶ್ನೆಗಳನ್ನು ಕೇಳಿದನು. ತಾಯಿಯು ಈ ಹಿಂದೆ ನಡೆದ ವೃತ್ತಾಂತವನ್ನೆಲ್ಲಾ ಹೇಳಿದಳು. ಅನಂತರ ತನ್ನ ತಂದೆಯ ರಾಜ್ಯವನ್ನು ಹೈಹಯತಾಲ ಜಂಘಾದಿಗಳು ಅಪಹರಿಸಿದರೆಂಬುದನು ತಿಳಿಸಿದಳು. ಆಗ ಸಗರನು ಕ್ರುದ್ಧನಾಗಿ ಈ ವೈರಿಗಳನ್ನು ವಧಿಸುತ್ತೇನೆಂದು ಅಲ್ಲಿಯೇ ಪ್ರತಿಜ್ಞೆ ಮಾಡಿದನು. ಅಂತೆಯೇ ಹೈಹಯ ತಾಲ ಜಂಘರನ್ನು ವಧಿಸಿದನು. ಶಕ, ಯವನ, ಕಾಂಭೋಜ, ಪಾರದ ಪಹ್ಲವರನ್ನು ಸಹ ಸಂಹರಿಸತೊಡಗಿದನು. ಆಗ ಅವರೆಲ್ಲ ಸಗರನ ಕುಲಗುರುಗಳಾದ ವಸಿಷ್ಠರ ಮೊರೆಹೊಕ್ಕರು. ಆಗ ವಸಿಷ್ಠರು ಶಕ, ಯವನ ಮುಂತಾದವರನ್ನು ಜೀವನ್ಮೃತರನ್ನಾಗಿ ಮಾಡಿ ಸಗರನನ್ನು ಕುರಿತು “ಎಲೈ ವತ್ಸ ಈ ಜೀವನ್ಮೃತರನ್ನು ಬೆನ್ನಟ್ಟಿಹೋಗುವುದು ಬೇಡ ನಿನ್ನ ಪ್ರತಿಜ್ಞೆಯ ಪ್ರಕಾರ ನಾನೇ ಇವರನ್ನು ನಿಜಧರ್ಮದಿಂದಲೂ ದ್ವಿಜರ ಸಂಸರ್ಗದಿಂದಲೂ ದೂರ  ಮಾಡಿದ್ದೇನೆ ಎಂದರು. ಸಗರನು ಹಾಗೆಯೇ ಆಗಲೆಂದು ವಸಿಷ್ಠರ ಆಜ್ಞೆಯನ್ನು ಮನ್ನಿಸಿದನು. ಅಷ್ಟೇ ಅಲ್ಲ ಶಕಾದಿಗಳು ತಮ್ಮ ವೇಷವನ್ನು ಬದಲಿಸುವಂತೆ ಆಜ್ಞೆ ಮಾಡಿದನು. ಇದೂ ಸಹ ಒಂದು ವಿಚಿತ್ರವಾದ ಆದರೂ ನಿಜವಾದ ಶಿಕ್ಷೆಯನ್ನು ಸಗರನು ನೀಡಿದನು. ಅದೇನೆಂದರೆ

1. ಯವನರು ಪೂರ್ತಿಯಾಗಿ ತಲೆ ಬೋಳಿಸಬೇಕು

2. ಪಾರದರು ಕ್ಷೌರ ಮಾಡಿಸದೆ ತಲೆಯ ಕೂದಲನ್ನು ಬಿಡಬೇಕು

3. ಪಹ್ಲವರು ಗಡ್ಡವನ್ನು ಬಿಡಬೇಕು

4. ಆ ಗುಂಪಿನ ಇತರ ಕ್ಷತ್ರಿಯರೂ ವೇದಾಧ್ಯಯನ ವಷಟ್‌ಕಾರಗಳನ್ನು ತ್ಯಜಿಸಬೇಕು ಎಂದು ಸಗರನು ಆದೇಶವಿತ್ತನು.

ಅವರೆಲ್ಲರನ್ನು ತಮ್ಮ ಧರ್ಮದಿಂದ ಚ್ಯುತರನ್ನಾಗಿ ಮಾಡಿ ಬ್ರಾಹ್ಮಣರಿಂದಲೂ ಪರಿತ್ಯಕ್ತರಾಗಿ ಮ್ಲೇಚ್ಛರಾದರು. ಸ್ವಧರ್ಮದಿಂದ ಭ್ರಷ್ಟರಾಗಿ ಗುರುಹಿರಿಯರಿಂದ ಬಹಿಷ್ಕತರಾದವರಿಗೆ ಜೀವನ್ಮೃತರೆಂದು ಹೆಸರಿದೆ. ಅವರೂ ಜೀವಿಸಿದ್ದೂ ಸಹ ಮೃತಪಟ್ಟವರಂತೇ ಲೆಕ್ಕ. ಇದನ್ನು

ಪೋಷಿಸಲು "ಯಃ ಸ್ವಧರ್ಮಾತ್ ಪರಿಬ್ರಷ್ಟೋ ವೃದ್ಧೈಶ್ಚೈವ ಬಹಿಷ್ಕೃತಃ ಸಜೀವನ್ನೇವ ಮೃತ ಇತ್ಯಭಿಧೀಯತೇ" ಎಂದು ಸ್ಮೃತಿ ವಾಕ್ಯವೂ ಉಂಟು. ಈ ಸಂದರ್ಭದಲ್ಲಿ "ಸ್ವಧರ್ಮೇ ನಿಧನಂ ಶ್ರೇಯಃ" ಎಂಬ ಗೀತಾಚಾರ್ಯನ ಮಾತನ್ನು ಸ್ಮರಿಸೋಣವೇ ? ಎಂಬ ಅಂದರೆ ಜಾತಿ ಭಷ್ಟರನ್ನಾಗಿ ಮಾಡುವುದು ಇದೆಲ್ಲಾ ಇರಲಿ ಈಗಿನ ಕಾಲದಲ್ಲಿ ತಲೆ ಬೋಳಿಸುವುದು ಅರ್ಧತಲೆ ಬೋಳಿಸುವುದು ತಲೆಯ ಕೂದಲನ್ನು ಮೆಟ್ಟಲು ಮೆಟ್ಟಲನ್ನಾಗಿ ಮಾಡುವುದು ಫ್ಯಾಷನ್ ಆಗಿದೆಯಲ್ಲಾ ! ಈಗಿನ ಕಾಲಕ್ಕೆ ಇದು ಶಿಕ್ಷೆ ಅಲ್ಲವೇ ಅಲ್ಲ ಅಲ್ಲವೇ? "ಲೋಕೋ ಭಿನ್ನ ರುಚಿಃ" ಅಲ್ಲವೇ ? ಒಟ್ಟಿನಲ್ಲಿ ಜಾತಿ ಭೃಷ್ಟರನ್ನಾಗಿ ಮಾಡುವುದು ಎಂಬ ಮಾತಂತೂ ಶತಷಃ ಸತ್ಯ. "ಕಾಲಾಯ ತಸ್ಮೈ ನಮಃ" ಹೇಗಾದರಾಗಲಿ ಇತ್ತ ಸಗರನ ವಿಷಯಕ್ಕೆ ಬರೋಣ

**"ಸಗರೋಪಿ ಸ್ವಮಧಿಷ್ಠಾನಮಾಗಮ್ಯಾಸ್ಖಲಿತ**

**ಚಕ್ರ ಸ್ಸಪ್ತದ್ವೀಪವತೀಮಿ ಮುರ್ವೀಂ ಪ್ರಶಶಾಸ"**

(ವಿ.ಪು.2ನೇ ಅಧ್ಯಾಯತಿ ಚತುರ್ಥಾಂಶ 49ನೇ ಶ್ಲೋಕ)

ಸಗರನು ಅಪ್ರತಿಹತ ಸೇನಾಸಮೇತನಾಗಿ ತನ್ನ ರಾಜಧಾನಿಯನ್ನು ಸೇರಿ ಸಪ್ತದ್ವೀಪ ಸಹಿತವಾದ ಭೂಮಂಡಲವನ್ನು ಆಳಿದನು. ಈ ಸಗರ ಚಕ್ರವರ್ತಿಗೆ ಇಬ್ಬರು ಪತ್ನಿಯರು ಇದ್ದರು. ಒಬ್ಬಳು ಕಾಶ್ಯಪನ ಮಗಳಾದ ಸುಮತಿ, ಮತ್ತೊಬ್ಬಳು ವಿದರ್ಭರಾಜನ ಪುತ್ರಿಯಾದ ಕೇಶಿನಿ. ಇವರಿಬ್ಬರೂ ಸಂತಾನಾರ್ಥವಾಗಿ ಅತ್ಯಂತ ಏಕಾಗ್ರತೆಯಿಂದ ಔರ್ವ ಮುನಿಯನ್ನು ಆರಾಧಿಸಿದರು. ಅದರಿಂದ ಸಂತಸಪಟ್ಟ ಔರ್ವ ಮುನಿಯು ಹೀಗೆ ವರವನ್ನಿತ್ತನು.

"ಒಬ್ಬಳು ವಂಶವನ್ನು ಮುಂದುವರಿಸುವ ಒಬ್ಬ ಪುತ್ರನನ್ನೂ, ಮತ್ತೊಬ್ಬಳು ಅರವತ್ತು ಸಾವಿರ ಮಕ್ಕಳನ್ನು ಬಯಸಿದಳು. ಯಾರಿಗೆ ಯಾವ ವರಬೇಕೋ ಅವರ ತಮ್ಮ ಇಷ್ಟದ ಪ್ರಕಾರ ಸ್ವೀಕರಿಸಬಹುದು ಎಂದನು. ಆಗ ಕೇಶಿನಿಯು ತನಗೆ ವಂಶವನ್ನು ಬೆಳೆಸುವ ಒಬ್ಬ ಮಗ ಬೇಕೆಂದು ಬಯಸಿದಳು. ಸುಮತಿಯು ಅರವತ್ತು ಸಾವಿರ ಪುತ್ರರು ತನಗೆ ಬೇಕೆಂದು ಬಯಸಿದಳು.

ಔರ್ವ ಮುನಿಯು 'ತಥಾಸ್ತು' ಎಂದನು. ಅಂತೆಯೇ ಕೆಲವು ದಿನಗಳ ನಂತರ ಕೇಶಿನಿಯು ಅಸಮಂಜಸನೆಂಬ ಮಗನನ್ನು ಹೆತ್ತಳು. ಕಾಶ್ಯಪ ಪುತ್ರಿಯಾದ ಸುಮತಿಗೆ ಅರವತ್ತು ಸಾವಿರ ಮಕ್ಕಳಾದರು. ಅಸಮಂಜಸನಿಗೆ ಅಂಶುಮಂತ ಎಂಬ ಕುಮಾರನು ಜನಿಸಿದನು. ಈ ಅಸಮಂಜಸನಾದರೋ ಬಾಲ್ಯದಿಂದಲೂ ಕೆಟ್ಟವನಾಗಿಯೇ ಇದ್ದನು. ಆದ್ದರಿಂದ ತಂದೆಯು ಅವನನ್ನು ಬಹಿಷ್ಕರಿಸಿದನು. ಸುಮತಿಯ ಮಕ್ಕಳಾದ ಅರವತ್ತು ಸಾವಿರ ಪುತ್ರರೂ ಸಹ ಅಸಮಂಜಸನ ನಡತೆಯನ್ನೇ ಅನುಸರಿಸಿದರು. ಹೀಗಾಗಿ ಸನ್ಮಾರ್ಗವೇ ನಷ್ಟವಾಯಿತು. ಆಗ ದೇವತೆಗಳೆಲ್ಲಾ ಒಂದಾಗಿ ಸೇರಿ ಭಗವಾನ್ ವಿಷ್ಣುವಿನ ಅಂಶರಾದ ಕಪಿಲ ಮಹರ್ಷಿಯ ಬಳಿಗೆ ಹೋಗಿ ನಮಸ್ಕರಿಸಿ ಇಂತೆಂದರು. "ಹೇ ಭಗವನ್ ಈ ಸಗರ ಪುತ್ರರೆಲ್ಲರೂ ಕೆಟ್ಟ ನಡತೆಯುಳ್ಳವರಾಗಿದ್ದಾರೆ. ಹೀಗೆಯೇ ಇದ್ದರೆ ಜನರ ಪರಿಸ್ಥಿತಿ ಏನಾಗುತ್ತದೆ ? ನೀವು ಈ ಜಗತ್ತನ್ನು ಕಷ್ಟದಿಂದ ಪಾರು ಮಾಡುವ ಸಲುವಾಗಿಯೇ ನಮ್ಮನ್ನು ಈ ಕಷ್ಟದಿಂದ ಪಾರು ಮಾಡುವ ಸಲುವಾಗಿಯೇ ಭಗವಾನ್ ವಿಷ್ಣುವಿನ ಅಂಶ ಸಂಭೂತರಾಗಿ ಅವತರಿಸಿರುವಿರಿ. ನಮ್ಮನ್ನು ಈ ಕಷ್ಟದಿಂದ ಪಾರುಮಾಡಿ. ಆಗ ಕಪಿಲ ಮಹರ್ಷಿಯು "ಸ್ವಲ್ಪದಿನಗಳಲ್ಲಿಯೇ ಅವರೆಲ್ಲರೂ ನಾಶವಾಗುವರು" ಎಂದು ತಿಳಿಸಿದರು. ಆ ಸಮಯದಲ್ಲಿ ಸಗರನು ಅಶ್ವಮೇಧಯಾಗದಲ್ಲಿ ತೊಡಗಿದನು. ಅವನ ಪುತ್ರರಿಂದ ಸಂರಕ್ಷಿತವಾದ ಅಶ್ವವನ್ನು ಯಾರೋ ಅಪಹರಿಸಿಕೊಂಡು ಪಾತಾಳಕ್ಕೆ (ಈ ಯಜ್ಞಾಶ್ವವನ್ನು ಇಂದ್ರನು ಅಪಹಸಿದನೆಂದು ಭಾಗವತದಲ್ಲಿದೆ) ಇಳಿದುಹೋದನು. ಆ ಕುದುರೆಯನ್ನು ಹುಡುಕಲು ಸಗರ ಪುತ್ರರು ಸನ್ನದ್ಧರಾದರು. ಒಬ್ಬೊಬ್ಬರೂ ಒಂದೊಂದು ಯೋಜನದಂತೆ ಭೂಮಿಯನ್ನು ಅಗೆದರು. ನಂತರ ಪಾತಾಳದಲ್ಲಿ ಸುತ್ತಾಡುತ್ತಿದ್ದ ಕುದುರೆಯನ್ನು ರಾಜಪುತ್ರರು ಕಂಡರು. ಸಮೀಪದಲ್ಲಿಯೇ ಭಗವಾನ್ ಕಪಿಲ ಮಹರ್ಷಿಗಳು ಮೋಡವಿಲ್ಲದ ಶರತ್ಕಾಲದಲ್ಲಿ ಬೆಳಗುವ ಸೂರ್ಯನಂತೆ ಮೇಲೆ ಕೆಳಗೆ ಸುತ್ತಲೂ ಸದಾಕಾಲವು ತೇಜಸ್ಸನ್ನು ಬೀರುತ್ತ ಬೆಳಗುತ್ತಿರುವುದನ್ನು ಸಗರಪುತ್ರರು ನೋಡಿದರು. ಆತನೇ ಕುದುರೆಯನ್ನು ಅಪಹರಿಸಿರಬಹುದೆಂದು ಭಾವಿಸಿ ಇವನೇ ಕುದುರೆಯ ಕಳ್ಳ. ಯಜ್ಞಾಶ್ವವನ್ನು ಕದ್ದು ಯಜ್ಞಕ್ಕೆ ಅಡ್ಡಿಯನ್ನು ಒಡ್ಡಿದವನು ಎಂದು ಅವನನ್ನು ಕೊಲ್ಲಿರಿ, ಕೊಲ್ಲಿರಿ

ಎನ್ನುತ್ತ ಧಾವಿಸಿದರು. ಆಗ ಭಗವಾನ್ ಕಪಿಲ ಮಹರ್ಷಿಗಳು ಕಣ್ಣನ್ನು ಸ್ವಲ್ಪ ಹೊರಳಿಸಿ ನೋಡಿದರು. ಆಗ ಸಗರಪುತ್ರರು ತಮ್ಮ ದೇಹದಿಂದಲೇ ಉದ್ಭವಿಸಿದ ಬೆಂಕಿಯಿಂದ ಸುಟ್ಟು ಭಸ್ಮರಾದರು. ಈ ಸಂಭವವು ಸಗರ ಚಕ್ರವರ್ತಿಗೆ ತಿಳಿಯಿತು. ಅವನು ತನ್ನ ಮಗ ಅಸಮಂಜಸನ ಪುತ್ರನಾದ ಅಂಶುಮಂತನನ್ನು ಯಜ್ಞಾಶ್ವವನ್ನು ತರುವುದಕ್ಕಾಗಿ ಕಳುಹಿಸಿದನು. ಅಂಶುಮಂತನಾದರೋ ಸಗರ ಪುತ್ರರು ಅಗೆದ ದಾರಿಯನ್ನೇ ಹಿಡಿದು ಹೋಗಿ ಕಪಿಲ ಮಹರ್ಷಿಗಳನ್ನು ಕಂಡು ಭಕ್ತಿ ನಮ್ರನಾಗಿ ಮಹರ್ಷಿಯ ಸ್ತೋತ್ರವನ್ನು ಮಾಡಿದನು. ಆಗ ಕಪಿಲ ಮಹರ್ಷಿಗಳು ಆತನನ್ನು ನೋಡಿ ಮಗು ಈ ಅಶ್ವವನ್ನು ತೆಗೆದುಕೊಂಡು ಹೋಗಿ ನಿನ್ನ ಅಜ್ಜ ಸಗರನಿಗೆ ಒಪ್ಪಿಸು. ನಿನ್ನ ಮೊಮ್ಮಗನು ಗಂಗೆಯನ್ನು ಸ್ವರ್ಗದಿಂದ ಭೂಮಿಗೆ ಇಳಿಸುವನು ಏನಾದರೂ ವರವನ್ನು ಕೇಳಿಕೋ ಎಂದರು. ಅದಕ್ಕೆ ಅಂಶುಮಂತನು ಬ್ರಾಹ್ಮಣ ಹನನಕ್ಕೆ ಉದ್ಯಮಿಸಿ ಹತನಾಗಿರುವ ನನ್ನ ಈ ಪಿತೃವರ್ಯರಿಗೆ ಸ್ವರ್ಗಪ್ರಾಪ್ತಿಯಾಗಿಲ್ಲ. ಅವರಿಗೆ ಸ್ವರ್ಗಪ್ರಾಪ್ತಿಯಾಗುವಂತೆ ಅನುಗ್ರಹಿಸಿ ಎಂದು ಪ್ರಾರ್ಥಿಸಿದನು. ಆ ಮಾತನ್ನು ಕೇಳಿ ಅದನ್ನು ಈಗಾಗಲೇ ನೀಡಿರುವೆನಲ್ಲಾ. ನಿನ್ನ ಮೊಮ್ಮೊಗನೇ ಸ್ವರ್ಗದಿಂದ ಗಂಗೆಯನ್ನು ಭೂಮಿಗೆ ತರುವನು. ಇವರ ಅಸ್ಥಿಭಸ್ಮಗಳಿಗೆ ಗಂಗಾಜಲದ ಸ್ಪರ್ಶವಾದಾಗ ಇವರೆಲ್ಲಾ ಸ್ವರ್ಗವನ್ನು ಸೇರುವರು" ಎಂದು ಕಪಿಲಮಹರ್ಷಿಗಳು ಹೇಳಿದರು. ಅಷ್ಟೇ ಅಲ್ಲ

**"ಭಗವದ್ವಿಷ್ಣು ಪಾದಾಂಗುಷ್ಠ ನಿರ್ಗತಸ್ಸಹಿ ಜಲಸ್ಯೈ ತನ್ಮಾಹಾತ್ಮ್ಯಮ್, ಯನ್ನ ಕೇವಲ ಮಭಿಸಂಧಿ ಪೂರ್ವಕಂ ಸ್ನಾನಾದ್ಯುಪಭೋಗೇಷೂಪಕಾರಕ ಮನಭಿ ಸಂಹಿತ ಮಪ್ಯಪೇತ ಪ್ರಾಣಸ್ಯಾಸ್ಥಿ ಚರ್ಮಸ್ನಾಯುಕೇಶಾದ್ಯುಪಸ್ಪೃಷ್ಟಂ ಶರೀರ ಜಮಪಿ ಪತಿತಂ ದಸೃಶ್ಪರೀರಣಂ ಸ್ವರ್ಗಂ ನಯತೀತ್ಯುಕ್ತಃ ಪ್ರಣಮ್ಯ ಭಗವತೇ ಅಶ್ವಮಾದಾಯ ಪಿತಾ ತ್ಯುಮಹಯಜ್ಞಮಾಜಗಾಮ.**

(ವಿ.ಪು 2ನೇ ಸಂಚ. ಅ.30, 31ನೇ ಶ್ಲೋಕ)

ಭಗವಾನ್ ಮಹಾವಿಷ್ಣುವಿನ ಪಾದಾಂಗುಷ್ಠದಿಂದ ಹೊರಬಂದ ಗಂಗಾಜಲಕ್ಕೆ ಅತ್ಯಂತ ಮಹಿಮೆಯುಂಟು. ಕಾಮನಾಪೂರ್ವಕವಾಗಿ ಗಂಗಾಸ್ನಾನ ಮಾಡಿದರೆ ಫಲೋಪಭೋಗಕ್ಕೆ ಕಾರಣವೆಂದಲ್ಲ. ಸತ್ತವನ

ಅಸ್ಥಿ, ಚರ್ಮ, ಸ್ನಾಯು, ಕೇಶ ಮೊದಲಾದದ್ದು ಉದ್ದೇಶವಿಲ್ಲದೆಯೇ ಗಂಗಾ ಜಲಸ್ಪರ್ಶವನ್ನು ಹೊಂದಿದರೂ, ಗಂಗಾಜಲದಲ್ಲಿ ಬಿದ್ದರೂ ಒಡನೆಯೇ ಆ ಜೀವಿಗೆ ಸ್ವರ್ಗಪ್ರಾಪ್ತಿಯಾಗುತ್ತದೆ ಎಂದು ನುಡಿದರು. ಅಂಶುಮಂತನು ಕಪಿಲ ಮಹರ್ಷಿಗಳ ಆಶೀರ್ವಾದ ಪಡೆದು ಅಶ್ವವನ್ನು ತೆಗೆದುಕೊಂಡು ತನ್ನ ಅಜ್ಜ ಸಗರನ ಯಜ್ಞಶಾಲೆಗೆ ಬಂದನು. ಸಗರನು ತನ್ನ ಯಜ್ಞವನ್ನು ಪೂರೈಸಿದನು. ತನ್ನ ಮಕ್ಕಳು ಅಗೆದು ಬೆಳೆಸಿದ್ದರಿಂದ ಸಮುದ್ರವನ್ನು ಪುತ್ರವಾತ್ಸಲ್ಯದಿಂದ ಕಂಡನು. ಆದ್ದರಿಂದ ಅವನು ಸಮುದ್ರಕ್ಕೆ 'ಸಾಗರ' ಎಂದು ಹೆಸರಿಟ್ಟನು. ಇಂದಿಗೂ ಮರಣಶಯ್ಯೆಯಲ್ಲಿರುವವರಿಗೆ ಕಾಶಿಯಿಂದ ತಂದ ಗಂಗೆ ನೀರನ್ನು ಬಾಯಿಗೆ ಬಿಡುವ ಹಾಗೂ ಮೃತನಾದ ನಂತರ 'ಅಸ್ಥಿಸಂಚಯನ' ಅಂದರೆ ಹತ್ತಿರದಲ್ಲಿರುವ ನದಿಗಳಲ್ಲಿ ಅಸ್ಥಿಯನ್ನು ಕರಗಿಸುವ ಪರಿಪಾಠ ಇಂದಿಗೂ ಹಿಂದೂ ಪದ್ಧತಿಯಲ್ಲಿದೆ. ನಮ್ಮ ಹಿಂದೂ ಧರ್ಮ ಅದೆಷ್ಟು ಸನಾತನವಾದುದು, ಪವಿತ್ರತಮವಾದದ್ದು ಎಂಬುದನ್ನು ನೆನಪಿಸಿಕೊಂಡರೇನೇ ಮೈಝುಮ್ಮೆನಿಸುತ್ತದೆ ಅಲ್ಲವೇ. ನಮ್ಮ ಭರತಭೂಮಿ ಅದೆಷ್ಟು ಪವಿತ್ರಳು ಇರಲಿ. ಮುಂದೆ ಅಂಶುಮಂತನಿಗೆ ದಿಲೀಪ ಎಂಬ ಮಗ ಜನಿಸಿದ. ಆ ದಿಲೀಪನ ಮಗನೇ ಭಗೀರಥ. ಆತನೇ ಗಂಗಾನದಿಯನ್ನು ಸ್ವರ್ಗದಿಂದ ಧರೆಗೆ ಇಳಿಸಿ ತಂದದ್ದರಿಂದ ಗಂಗೆಗೆ ಭಾಗೀರಥಿ ಎಂದು ಹೆಸರಾಯಿತು.

**ತಸ್ಯಾಂಶುಮತೋ ದಿಲೀಪ ಪುತ್ರೋಭವತ್ ದಿಲೀಪಸ್ಯ ಭಗೀರಥಃ**
**ಯೋಽಸೌ ಗಂಗಾ ಸ್ವರ್ಗಾದಿಹಾನೀಯ ಭಾಗೀರಥಿ ಸಂಜ್ಞಾಂ ಚಕಾರ ॥**

(ವಿ.ಪು. 2ನೇ ಸಂ ಚತುರ್ಥಾಂಶ 4ನೇ 35ನೇಶ್ಲೋಕ)

## ಗಂಗಾಸ್ನಾನಂ ಪಾಪವಿಮೋಚನಂ

ಭಗೀರಥನಿಂದ ಸುಹೋತ್ರ, ಸಹೋತ್ರನಿಂದ ಶ್ರುತ, ಅವನ ಮಗ ನಾಭಾಗ, ಆತನ ಮಗನೇ ಅಂಬರೀಷ, ಆತನ ಪುತ್ರ ಸಿಂಧುದ್ವೀಪ, ಅವನಿಂದ ಹುಟ್ಟಿದ ಮಗ ಅಯುತಾಯು, ಅವನ ಮಗ ಋತುಪರ್ಣ, ಇವನೇ ನಳರಾಜನ ಸಹಾಯದಿಂದ ಅಕ್ಷಹೃದಯ ಎಂಬ ಪಗಡೆಯಾಟದ

ವಿದ್ಯೆಯನ್ನು ಕಲಿತಿದ್ದನು. ಋತುಪರ್ಣನ ಮಗ ಸರ್ವಕಾಮ, ಅವನ ಮಗ ಸುದಾಸ, ಈ ಸುದಾಸನಿಂದ ಸೌದಾಸ ಎಂಬ ಪುತ್ರನು ಹುಟ್ಟಿದನು. ಈ ಸೌದಾಸ ಚರಿತ್ರೆಯೂ ಸಹ ವಿಚಿತ್ರವಾಗಿದೆ.

## ಸೌದಾಸ ಚರಿತ

ಸೌದಾಸನು ಒಮ್ಮೆ ಕಾಡಿನಲ್ಲಿ ಬೇಟೆಯಾಡುತ್ತಿದ್ದಾಗ ಎರಡು ಹುಲಿಗಳನ್ನು ಕಂಡನು. ಅವುಗಳು ಆ ಕಾಡಿನಲ್ಲಿ ಮಿಕ್ಕ ಮೃಗಗಳೇ ಇಲ್ಲದಿರುವಂತೆ ಮಾಡಿಬಿಡುತ್ತವೆ ಎಂದು ಭಾವಿಸಿ ಅವುಗಳಲ್ಲಿ ಒಂದನ್ನು ಕೊಂದನು. ಆ ಹುಲಿಯು ಸಾಯುವಾಗ ಭೀಕರಾಕೃತಿಯೂ, ಅತಿ ಕರಾಳಮುಖದಿಂದ ಕೂಡಿದ ರಾಕ್ಷಸನಾಯಿತು. ಎರಡನೆಯ ಹುಲಿಯಾದರೋ ನಿನ್ನ ಮೇಲೆ ನಾನು ಸೇಡು ತೀರಿಸಿಕೊಳ್ಳುವೆನು ಎಂದು ಅಂತರ್ಧಾನವಾಯಿತು. ಕೆಲವು ಕಾಲದ ನಂತರ ಸೌದಾಸನು ಒಂದು ಯಜ್ಞವನ್ನು ಮಾಡಿದನು. ಯಜ್ಞವು ಸಮಾಪ್ತವಾದ ನಂತರ ಆಚಾರ್ಯ ವಸಿಷ್ಠರು ಹೊರಗಡೆ ಹೋಗಿದ್ದಾಗ, ಆ ಎರಡನೆಯ ರಾಕ್ಷಸನು ವಸಿಷ್ಠರೂಪವನ್ನು ಧರಿಸಿ ಬಂದು ಸೌದಾಸನೊಡನೆ ಹೀಗೆಂದನು. ಯಜ್ಞವು ಸಮಾಪ್ತವಾಗುವುದರಿಂದ ಈಗ ನನಗೆ ನರ ಮಾಂಸದ ಭೋಜನವನ್ನು ನೀಡಬೇಕು. ಅಡಿಗೆಯನ್ನು ಮಾಡಿಸು. ಬೇಗನೆ ಬರುತ್ತೇನೆ ಎಂದು ಹೇಳಿ ರಾಕ್ಷಸ ಹೊರಟು ಹೋದನು. ಮತ್ತೆ ಆತನೇ ಅಡಿಗೆಯವನ ವೇಷದಲ್ಲಿ ಬಂದು ರಾಜನ ಆಜ್ಞೆಯನ್ನು ಪಡೆದು ನರಮಾಂಸವನ್ನು ಪಕ್ವಮಾಡಿ ರಾಜನಿಗೆ ಒಪ್ಪಿಸಿದನು. ಸೌದಾಸನಾದರೋ ಅದನ್ನು ಚಿನ್ನದ ಪಾತ್ರೆಯಲ್ಲಿಡಿಸಿ ವಸಿಷ್ಠರ ಬರುವಿಕೆಯನ್ನು ನಿರೀಕ್ಷಿಸುತ್ತ ಇದ್ದನು. ಕೆಲವು ಸಮಯ ಭಕ್ಷ್ಯವನ್ನು ನೋಡಿದಾಕ್ಷಣ ರಾಜನ ದೌರ್ಜನ್ಯವೆಷ್ಟಿರಬಹುದು. ನಮಗೇ ಮಾಂಸವನ್ನು ಬಡಿಸುತ್ತಾನಲ್ಲಾ ಎಂದು ಧ್ಯಾನಸ್ಥರಾಗಿ ಜ್ಞಾನದೃಷ್ಟಿಯಿಂದ ನೋಡಿದರು. ಕ್ರೋಧದಿಂದ ರಾಜನನ್ನು ಕುರಿತು "ನಮ್ಮಂತಹ ತಪಸ್ವಿಗಳು ಇದನ್ನು ತಿನ್ನುವುದಿಲ್ಲ. ಇದು ಅಭೋಜ್ಯವೆಂದು ತಿಳಿದಿದ್ದರೂ ನಮಗೆ ಇದನ್ನು ನೀಡಿರುವೆಯಲ್ಲಾ. ಇದರ

ಫಲವಾಗಿ ನೀನೂ ರಾಕ್ಷಸನಾಗು ಎಂದು ಶಪಿಸಿದರು. ಆಗ ಸೌದಾಸನು ಭಗವನ್ ನೀವೇ ಈ ಆಹಾರವು ಬೇಕೆಂದು ಹೇಳಿದರಲ್ಲಾ ಎಂದನು. ಅದಕ್ಕೆ ವಸಿಷ್ಠರು "ಏನು! ಏನು! ನಾನು ಹೇಳಿದೆನೇ? ಎಂದು ನುಡಿದು ಮತ್ತೆ ಧ್ಯಾನಸ್ಥರಾದರು. ಧ್ಯಾನದೃಷ್ಟಿಯಿಂದ ವಸಿಷ್ಠರಿಗೆ ನಡೆದ ಸಂಗತಿ ಹಾಗೂ ಸತ್ಯದ ಅರಿವಾಯಿತು. ಆಗ ವಸಿಷ್ಠರು ಕನಿಕರಿಸಿ "ಎಲೈ ರಾಜನೇ ಕಡೆಯ ತನಕ ಹೀಗಾಗುವುದು ಬೇಡ ಕೇವಲ ಹನ್ನೆರಡು ವರ್ಷಗಳ ಕಾಲ ನಿನಗೆ ನರಮಾಂಸ ಭಕ್ಷಣವೇ ಪ್ರಾಪ್ತವಾಗುತ್ತದೆ" ಎಂದರು.

ಆಗ ಸೌದಾಸನೂ ಒಂದು ಬೊಗಸೆ ನೀರನ್ನು ತೆಗೆದುಕೊಂಡು ವಸಿಷ್ಠ ಮುನಿಗಳಿಗೇ ಶಾಪವನ್ನೀಯಲು ಸನ್ನದ್ಧನಾದನು. ಅಷ್ಟರಲ್ಲಿ ಅವನ ಪತ್ನಿ ಮದಯಂತಿಯು ಅಡ್ಡ ಬಂದು ಇವರು ನಮ್ಮ ಕುಲಪುರೋಹಿತರು. ಇವರನ್ನು ಶಪಿಸಬಾರದೆಂದು ಬೇಡಿಕೊಂಡಳು. ಆಗ ರಾಜನು ಸಸ್ಯಾಂಬುದರ ಕ್ಷಣೆಗಾಗಿ ಶಾಪಾರ್ಥವಾದ ಬೊಗಸೆ ನೀರನ್ನು ನೆಲಕ್ಕೂ ಚೆಲ್ಲದೆ ಆಕಾಶಕ್ಕೂ ಎರಚದೆ ತನ್ನ ಕಾಲುಗಳ ಮೇಲೆಯೇ ಸುರಿದುಕೊಂಡನು. ಕ್ರೋಧಯುಕ್ತವಾದ ಆ ಜಲದ ಸ್ಪರ್ಶದಿಂದ ಸೌದಾಸನ ಪಾದಗಳು ಕಲ್ಮಾಷವರ್ಣ ಅಂದರೇ ಬಿಳಿಪುಮಿಶ್ರಿತವಾದ ಕಪ್ಪುವರ್ಣವಾಯಿತು. ಅದರಿಂದ ಸೌದಾಸನಿಗೆ ಕಲ್ಮಾಷಪಾದ ಎಂಬ ಹೆಸರಾಯಿತು. ಮುಂದೆ ಅವನು ನರಮಾಂಸ ಭಕ್ಷಕನಾಗಿ ಅಲೆದಾಡುತ್ತಿದ್ದ. ಇತ್ತ ಪುತ್ರಹೀನನಾಗಿದ್ದ ಮದಯಂತಿಯಲ್ಲಿ ವಸಿಷ್ಠರು (ನಿಯೋಗ ವಿಧಿಯಂತೆ) ಗರ್ಭಾದಾನ ಮಾಡಿದರು. ಏಳು ವರ್ಷಗಳು ಕಳೆದರೂ ಗರ್ಭವು ಹೊರಗೆ ಬರಲೇ ಇಲ್ಲ. ಆದ್ದರಿಂದ ಮದಯಂತಿಯು ಅಶ್ವದಿಂದ ಅಂದರೆ ಕಲ್ಲಿನಿಂದ ತನ್ನ ಗರ್ಭವನ್ನು ಕುಟ್ಟಿದಳು. ಆಗ ಪುತ್ರನೊಬ್ಬನು ಜನಿಸಿದನು. ಅವನಿಗೆ ಅಶ್ಮಕನೆಂದೇ ಹೆಸರಾಯಿತು. ಅಶ್ಮಕನಿಗೆ ಮೂಲಕನೆಂಬ ಪುತ್ರನು ಹುಟ್ಟಿದನು. ಈ ಸಂದರ್ಭದಲ್ಲಿ ಪರಶುರಾಮನು 21 ಸಲ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯ ವಂಶವನ್ನೇ ನಾಶಮಾಡುತ್ತೇನೆ ಎಂದು ಉದ್ಯುಕ್ತನಾಗಿ ಮೂಲಕನಿರುವತ್ತ ಬಂದನು. ಆಗ ಅಲ್ಲಿಯ ಸ್ತ್ರೀಯರು ನಗ್ನರಾಗಿ ಮೂಲಕನನ್ನು ಸುತ್ತುಗಟ್ಟಿ

ಕಾಪಾಡಿದರು. ಅಂದಿನಿಂದ ಮೂಲಕನು 'ನಾರೀಕವಚ'ನೆಂದು ಪ್ರಸಿದ್ಧನಾದನು. ಮೂಲಕನಿಂದ ದಶರಥ, ಅವನಿಂದ ಇಲವಿಲ, ಅವನಿಂದ ವಿಶ್ವಸಹ, ಅವನ ಮಗ ಖಟ್ವಾಂಗ, ಅವನ ಮಗ ದೀರ್ಘಬಾಹು, ಅವನ ಮಗ ರಘು. ರಘುವಿನ ಮಗ ಅಜ, ಅಜನಿಂದ ದಶರಥನು ಜನಿಸಿದನು.

## ಶ್ರೀರಾಮಾವತಾರ

ವಿಷ್ಣು ಭಗವಂತನಾದರೋ ಜಗತ್ತಿನ ಸ್ಥಿತಿಯನ್ನು ಪಾಲಿಸುವುದಕ್ಕಾಗಿ ತನ್ನ ಅಂಶದಿಂದ ರಾಮ, ಲಕ್ಷಣ, ಭರತ, ಶತ್ರುಘ್ನ ಎಂದು ನಾಲ್ಕು ವಿಭಾಗವಾಗಿ ದಶರಥ ಪುತ್ರನಾಗಿ ಅವತರಿಸಿದನು. ಶ್ರೀ ರಾಮನು ಬಾಲಕನಾಗಿದ್ದಾಗಲೇ ವಿಶ್ವಾಮಿತ್ರ ಮುನಿಗಳ ಯಾಗದ ರಕ್ಷಣೆಗಾಗಿ ಹೋಗುತ್ತಿರುವಾಗ ತಾಟಕೆಯೆಂಬ ರಾಕ್ಷಸನನ್ನು ಸಂಹರಿಸಿದನು. ಯಾಗಭೂಮಿಯಲ್ಲಿ ಮಾರೀಚನನ್ನು ಗಾಳಿಯ ವೇಗದ ಬಾಣದಿಂದ ಹಾರಿಸಿ ಸಮುದ್ರಕ್ಕೆ ತಳ್ಳಿದನು. ಸುಬಾಹು ಮುಂತಾದ ರಾಕ್ಷಸರನ್ನು ನಾಶಮಾಡಿದನು. ದರ್ಶನ ಮಾತ್ರದಿಂದಲೇ ಶಿವಧನಸ್ಸನ್ನು ಅನಾಯಾಸವಾಗಿ ಬಗ್ಗಿಸಿ ಮುರಿದನು. ಅಯೋನಿಜೆಯೂ, ಜನಕಸುತೆಯೂ ಆಗಿದ್ದ ವೀರ್ಯಶುಲ್ಕಳಾದ ಸೀತೆಯನ್ನು ಪಡೆದನು. ಇಡೀ ಹೈಹಯ ಕುಲಕ್ಕೇ ಧೂಮಕೇತು ಎನಿಸಿ ಸಕಲ ಕ್ಷತ್ರಿಯರನ್ನು ಧ್ವಂಸ ಮಾಡುತ್ತಿದ್ದ ಪರಶುರಾಮನ ವೀರ್ಯಬಲಗಳ ದರ್ಪವನ್ನು ನಿರ್ಮೂಲ ಮಾಡಿದನು. ನಂತರ ಶ್ರೀರಾಮ ಪಿತೃವಾಕ್ಯ ಪರಿ ಪಾಲನೆಗಾಗಿ ರಾಜ್ಯಾಭಿಲಾಷೆಯನ್ನು ಬದಿಗೊತ್ತಿ ತನ್ನ ತಮ್ಮ ಲಕ್ಷಣ, ಪತ್ನಿಯಾದ ಸೀತೆ ಇವರಿಂದೊಡಗೂಡಿ ಅರಣ್ಯವನ್ನು ಪ್ರವೇಶಿಸಿದನು. ಅರಣ್ಯದಲ್ಲಿ ವಿರಾಧ, ಖರ, ದೂಷಣಾದಿ ಹಾಗೂ ಕಬಂಧವಾಲಿ ಮುಂತಾದವರನ್ನು ಸಂಹರಿಸಿದನು. ನಂತರ ಶ್ರೀರಾಮನು ಸಮುದ್ರಕ್ಕೆ ಸೇತುವೆ ಕಟ್ಟಿ, ಕುಂಭಕರ್ಣ ಇಂದ್ರಜಿತ್ತು ಮುಂತಾದ ರಾಕ್ಷಸಕುಲವನ್ನೇ ನಾಶಮಾಡಿ ರಾವಣನನ್ನು ವಧಿಸಿದನು. ಆತನ ವಧೆಯಿಂದ ಸೀತೆಯ ಕಳಂಕವು ಪರಿಹಾರವಾಯಿತು. ಆದರೂ ಅಗ್ನಿಪ್ರವೇಶ ಮಾಡಿ ಶುದ್ಧಳಾದ ಮೇಲೆ ಅಖಿಲ ದೇವಗಣದಿಂದ ಸ್ತುತಿಸಲ್ಪಡುತ್ತಿದ್ದ ಶೀಲವತಿ ಜನಕರಾಜ ಕನ್ಯೆಯನ್ನು ಸ್ವೀಕರಿಸಿ ಅವಳನ್ನು ಅಯೋಧ್ಯೆಗೆ ಕರೆತಂದನು. ಅಯೋಧ್ಯೆಯಲ್ಲಿ ಸಕಲದೇವಾನುದೇವತೆಗಳ ಎದುರಲ್ಲಿ

ಪ್ರಜಾರಕ್ಷಣೆಗಾಗಿ ವಿಧಿಪೂರ್ವಕವಾಗಿ ರಾಮನಿಗೆ ಪಟ್ಟಾಭಿಷೇಕವಾಯಿತು. ಶ್ರೀರಾಮ ಹನ್ನೊಂದು ಸಾವಿರ ವರ್ಷಗಳವರೆಗೆ ರಾಜ್ಯಭಾರ ನಡೆಸಿದನು. ಭರತನು ಗಂಧರ್ವಲೋಕವನ್ನು ಗೆಲ್ಲವುದಕ್ಕಾಗಿ ಗಂಧರ್ವಲೋಕಕ್ಕೆ ಹೋಗಿ ಸಂಗ್ರಾಮದಲ್ಲಿ ಮೂರು ಕೋಟಿ ಗಂಧರ್ವರನ್ನು ಸಂಹರಿಸಿದನು. ಶತ್ರುಘ್ನನು ಅಸಾಧಾರಣ ಬಲಾಢ್ಯನಾಗಿದ್ದ ಮಧುಪುತ್ರನಾದ ಲವಣಾಸುರನನ್ನು ವಧಿಸಿ ಮಧುರಾನಗರವನ್ನು ಸ್ಥಾಪಿಸಿದನು. ಈ ಪ್ರಕಾರದಲ್ಲಿ ಬಲ ಪರಾಕ್ರಮ ವಿಕ್ರಮಗಳಿಂದ ದುರ್ಜನರನ್ನು ನಿರ್ಮೂಲ ಮಾಡಿ ಅಶೇಷ ಜಗತ್ತಿನ ಭದ್ರತಾ ವ್ಯವಸ್ಥೆಯನ್ನು ನಿರ್ವಹಿಸಿದ ರಾಮ, ಲಕ್ಷಣ, ಭರತ, ಶತ್ರುಘ್ನರು ಸ್ವರ್ಗಲೋಕವನ್ನು ಸೇರಿದರು. ಅಯೋಧ್ಯಾ ನಿವಾಸಿಗಳಾದ ಪ್ರಜೆಗಳು ಸಹ ಶ್ರೀರಾಮಾದಿಗಳಲ್ಲಿ ನೆಟ್ಟಮನಸ್ಸುಳ್ಳವರಾದ್ದರಿಂದ ಅವರೂ ಸಹ ಸಾಲೋಕ್ಯಮುಕ್ತಿಯನ್ನು ಹೊಂದಿದರು. ದುಷ್ಟರನ್ನು ಸಂಹರಿಸಿದ ಶ್ರೀರಾಮನಿಗೆ ಕುಶ–ಲವರೆಂಬ ಇಬ್ಬರು ಪುತ್ರರು ಜನಿಸಿದರು. ಲಕ್ಷ್ಮಣನಿಗೆ ಅಂಗದ – ಚಂದ್ರಕೇತು ಎಂಬ ಪುತ್ರರೂ ಭರತನಿಗೆ ತಕ್ಷ – ಪುಷ್ಕಲ ಎಂಬುವರೂ, ಶತ್ರುಘ್ನನಿಗೆ ಸುಬಾಹು – ಶೂರಸೇನರೆಂಬ ಪುತ್ರರು ಜನಿಸಿದರು. ಕುಶನಿಗೆ ಅತಿಥಿ, ಅತಿಥಿಗೆ ನಿಷಧ, ಅವನಿಗೆ ಅನಲ, ಆತನಿಗೆ ನಭ, ನಭನಿಗೆ ಪುಂಡರೀಕ ಎಂಬುವರು ಮಕ್ಕಳಾದರು. ಪುಂಡರೀಕನ ಮಗ ಕ್ಷೇಮಧನ್ವ, ಆತನ ಮಗ ದೇವಾನೀಕ, ಆತನ ಮಗ ಅಹೀನಕ, ಅವನಿಗೆ ರುರು ಎಂಬುವನೂ, ಆತನಿಗೆ ಪಾರಿಯಾತ್ರಕ ಎಂಬುವನೂ, ತನಯರು – ಪಾರಿಯಾತ್ರಕನ ಮಗ ದೇವಲ, ಅವನ ಮಗ ವಚ್ಚಲ, ಆತನ ಮಗ ಉತ್ಕ, ಉತ್ಕನಿಂಧ ವಜ್ರನಾಭ, ಅವನಿಂದ ಶಂಖಣನೂ, ಅವನಿಂದ ಯೂಷಿತಾಶ್ವನೂ, ಅವನಿಂದ ವಿಶ್ವಸಹನೂ ಹುಟ್ಟಿದರು. ವಿಶ್ವಸಹನ ಮಗ ಹಿರಣ್ಯನಾಭ. ಈತನು ಜೈಮಿನಿ ಶಿಷ್ಯನಾದ ಮಹಾಯೋಗೀಶ್ವರ ಯಾಜ್ಞವಲ್ಕ್ಯನಿಂದ ಯೋಗನಿದ್ರೆಯನ್ನು ಕಲಿತನು. ಹಿರಣ್ಯನಾಭನ ಮಗ ಪುಷ್ಯ, ಆತನ ಮಗ ಧ್ರುವಸಂಧಿ, ಅವನಿಂದ ಸುದರ್ಶನನೂ, ಆತನಿಂದ ಅಗ್ನಿವರ್ಣನೂ ಜನಿಸಿದರು. ಅಗ್ನಿವರ್ಣನ ಮಗ ಶೀಘ್ರಗ, ಆತನ ಮಗ ಮರು, ಅವನು ಈಗಲೂ ಯೋಗಸಮಾಧಿಯಲ್ಲಿ ಕಲಾಪ ಗ್ರಾಮದಲ್ಲಿರುವನು. ಮುಂದೆ ಬರುವ ಯುಗದಲ್ಲಿ ಇವನ್ನು ಸೂರ್ಯವಂಶದ

ಕ್ಷತ್ರಿಯ ಪ್ರವರ್ತಕನಾಗುವನು. ಅವನ ಮಗ ಪ್ರಸುಶ್ರುತ, ಆತನ ಮಗ ಸುಸಂಧಿ, ಅವನಿಗೆ ಅಮರ್ಷನ, ಆತನಿಗೆ ಸಹಸ್ವಂತ ಎಂಬ ಮಗನೂ, ಸಹಸ್ವಂತನ ಮಗ ವಿಶ್ವಭವ, ಅವನ ಮಗ ಬ್ರಹದ್ದಲ, ಈ ಬ್ರಹದ್ವಲನು ಮಹಾಭಾರತ ಯುದ್ಧದಲ್ಲಿ ಅರ್ಜುನನ ಪುತ್ರನಾದ ಅಭಿಮನ್ಯುವಿನಿಂದ ಹತನಾದನು. ಹೀಗೆ ಇವರೆಲ್ಲಾ ಇಕ್ಷ್ವಾಕುವಂಶದ ರಾಜ ಪರಂಪರೆ ಎಂದು ಪರಾಶರರು ಮೈತ್ರೇಯನಿಗೆ ತಿಳಿಸಿದರು.

## ನಿಮಿ ಚರಿತ್ರೆ

ನಿಮಿ ಎಂಬುವನು ಇಕ್ಷ್ವಾಕುವಿನ ಮಗ. ಒಮ್ಮೆ ಅವನು ಸಾವಿರ ವರ್ಷಗಳು ನಡೆಸಬೇಕಾದ ಒಂದು ಯಾಗವನ್ನು ಆರಂಭಿಸಿದನು. ವಸಿಷ್ಠರನ್ನು ಹೋತೃವಾಗಿರುವಂತೆ ಕೇಳಿಕೊಂಡನು. ಅದಕ್ಕೆ ವಸಿಷ್ಠರು "ನಾನು ಐದು ನೂರು ವರ್ಷಗಳ ಯಾಗಕ್ಕಾಗಿ ಈಗಾಗಲೇ ಮೊದಲೇ ದೇವೇಂದ್ರನಿಂದ ವ್ರತನಾಗಿದ್ದೇನೆ. ಅದಾದ ನಂತರ ಬಂದು ನಿನ್ನ ಯಾಗದಲ್ಲಿಯೂ ಋತ್ವಿಕ ಆಗುವೆನು. ಅಲ್ಲಿಯವರೆಗೆ ನೀನು ಕಾಯುತ್ತಿರು" ಎಂದು ಹೇಳಿದರು. ಅದಕ್ಕೆ ರಾಜನು ಏನನ್ನು ಹೇಳಲಿಲ್ಲ. ರಾಜನು ಇದಕ್ಕೆ ಒಪ್ಪಿದ್ದಾನೆ ಎಂದುಕೊಂಡು ಹೋಗಿ ವಸಿಷ್ಠರು ದೇವೇಂದ್ರನ ಯಾಗವನ್ನು ನಡೆಸಿದರು. ನಿಮಿಯಾದರೂ ಆ ಸಮಯದಲ್ಲಿಯೇ ಗೌತಮಾದಿ ಮಹರ್ಷಿಗಳನ್ನು ಕರೆಸಿಕೊಂಡು ಯಾಗವನ್ನು ನಡೆಸಿಬಿಟ್ಟನು. ಇಂದ್ರನ ಯಾಗವು ಮುಗಿದೊಡನೆ ವಸಿಷ್ಠರು ಈಗ ನಿಮಿರಾಜನ ಯಜ್ಞವನ್ನು ನಡೆಸಬೇಕೆಂದು ಬಹು ಬೇಗ ಆಗಮಿಸಿದರು. ಇತ್ತ ಗೌತಮರು ಹೋತೃವಿನ ಕೆಲಸವನ್ನು ಮಾಡುತ್ತಿದುದ್ದನ್ನು ವಸಿಷ್ಠರು ನೋಡಿದರು. ನಿಮಿರಾಜನು ಆಗ ನಿದ್ರಿಸುತ್ತಿದ್ದನು.

**ತತ್ಕರ್ಮಕರ್ತೃತ್ವಂ ಚ ಗೌತಮಸ್ಯ ದೃಷ್ಟ್ವಾಸ್ವಪತೇ ತಸ್ಮೈ ರಾಜ್ಞೇ ಮಾಂ ಪ್ರತ್ಯಾಖ್ಯಾಯೈ ತದನೇನ ಗೌತಮಾಯ ಕರ್ಮಾಂತರಂ ಸಮರ್ಪಿತಂ ಯಸ್ಮಾತ್ತದಯಂ ವಿದೇಹೋ ಭವಿಷ್ಯತೀತಿ ಶಾಪಂದದೌ ॥**

**ಯಸ್ಮಾನ್ಮಾಮ ಸಂಭಾಷ್ಯಾಜ್ಞಾನತ ಏವ ಶಯಾನಸ್ಯ ಶಾಪೋತ್ಸರ್ಗಮಸೌ**

ದುಷ್ಟಗುರುಶ್ಚಕಾರ ತಸ್ಮಾತ್ತಸ್ಯಾಪಿ ದೇಹಃ ಪತಿಷ್ಯತೀತಿ ಶಾಪಂ ದತ್ವಾ ದೇಹಮತ್ಯಜತ್

(ವಿ.ಪು. 2ನೇಸಂ ಚತುರ್ಥಾಂಶ ಅ.5 8–9ನೇಶ್ಲೋಕ)

ಈತನು ನನ್ನನ್ನು ತಿರಸ್ಕರಿಸಿ ಗೌತಮನಿಗೆ ಹೋತೃವಿನ ಕರ್ತವ್ಯವನ್ನು ವಹಿಸಿದ್ದರಿಂದ ಈ ರಾಜನು ವಿದೇಹ (ದೇಹ ರಹಿತ)ನಾಗಿ ಹೋಗಲಿ ಎಂದು ವಸಿಷ್ಠರು ಶಪಿಸಿದರು. ಆ ಮೇಲೆ ನಿಮಿರಾಜನು ನಿದ್ದೆಯಿಂದೆದ್ದು "ಏನೂ ಗೊತ್ತಿಲ್ಲದೆ ನಾನು ಮಲಗಿರುವಾಗ ನನ್ನೊಡನೆ ಮಾತನಾಡದೆಯೇ ಈ ದುಷ್ಟನಾದ ಗುರು ಶಾಪವನ್ನಿತ್ತಿದ್ದಾನೆ. ಆದ್ದರಿಂದ ಆತನ ದೇಹವು ಬಿದ್ದುಹೋಗಲಿ" ಎಂದು ಶಾಪವನ್ನು ಕೊಟ್ಟು ತನ್ನದೇಹ ತ್ಯಜಿಸಿದನು. ಹೀಗೆ ರಾಜನ ಶಾಪವಶದಿಂದ ದೇಹವನ್ನು ತ್ಯಜಿಸಿದ ವಸಿಷ್ಠರ ಲಿಂಗದೇಹವು ಮಿತ್ರಾವರುಣರ ವೀರ್ಯದಲ್ಲಿ ಸೇರಿಕೊಂಡಿತು. ಒಮ್ಮೆ ಊರ್ವಶಿಯನ್ನು ಮಿತ್ರಾವರುಣರ ವೀರ್ಯವು ಸ್ಖಲಿತವಾಗಲು ವಸಿಷ್ಠರು ದೇಹಾಂತರವನ್ನು ಪಡೆದರು. ಇತ್ತ ನಿಮಿಯ ದೇಹವನ್ನು (ರಾಜಪರಿವಾರದವರು) ಮನೋಹರವಾದ ಗಂಧ ತೈಲಾದಿಗಳಿಂದ ಸಂಸ್ಕರಿಸುತ್ತಿರಲಾಗಿ ದೇಹವು ಕೊಳೆಯಲಿಲ್ಲ. ಕೆಡಲಿಲ್ಲ. ಆಗ ತಾನೇ ಜೀವ ಹೋದಂತೆ ದೇಹವು ಇದ್ದಿತು. ಯಜ್ಞದ ಸಮಾಪ್ತಿಯಲ್ಲಿ ಹವಿರ್ಭಾಗವನ್ನು ಸ್ವೀಕರಿಸಲು ಬಂದ ದೇವತೆಗಳನ್ನು ಕುರಿತು ಋತ್ವಿಜರು ಯಜಮಾನನಾದ ನಿಮಿರಾಜನಿಗೆ ಬದುಕುವಂತೆ ವರವನ್ನು ಕೊಡಬೇಕು ಎಂದು ಕೇಳಿಕೊಂಡರು. ಅಂತೆಯೇ ದೇವತೆಗಳು ಪ್ರೇರಿಸಲಾಗಿ ನಿಮಿಯು "ಸಕಲ ಸಂಸಾರ ದುಃಖವನ್ನು ಪರಿಹರಿಸತಕ್ಕ ಮಹಾತ್ಮರೇ, ಶರೀರ – ಜೀವಾತ್ಮರಿಗೆ ವಿಯೋಗವಾಗುವಾಗ ಆಗುವ ದುಃಖಕ್ಕೆ ಎಣೆಯಾದದ್ದು ಮತ್ತೊಂದಿಲ್ಲ. ಆದ್ದರಿಂದ ಸಕಲ ಜೀವಿಗಳ ಕಣ್ಣುಗಳಲ್ಲಿ ನೆಲಸಬೇಕೆಂದು ಬಯಸುತ್ತೇನೆ. ಪುನಃ ಈ ಶರೀರ ಸಂಬಂಧವು ನನಗೆ ಬೇಡ ಎಂದನು. ಆಗ ದೇವತೆಗಳು ನಿಮಿಯನ್ನು ಸಕಲ ಜೀವಿಗಳ ಕಣ್ಣಿನ ರೆಪ್ಪೆಗಳಲ್ಲಿ ಸ್ಥಾಪಿಸಿದರು. ಅನಂತರ ಜೀವಿಗಳು ನಿಮೇಷೋನ್ಮೇಷಗಳನ್ನು ಅಂದರೆ (ರೆಪ್ಪೆಹೊಡೆಯುವುದಕ್ಕೆ) ಪ್ರಾರಂಭಿಸಿದರು. ರಾಜನು ಪುತ್ರ ಹೀನನಾದ್ದರಿಂದ ರಾಜ್ಯವು ಅರಾಜಕವಾದೀತೆಂದು ಮುನಿಗಳು ಭಯಪಟ್ಟು ಆತನ ಶರೀರವನ್ನು ಅರಣಿಯಿಂದ ಮಥಿಸಿದರು. ಆಗ ಒಬ್ಬ ಕುಮಾರನು ಹುಟ್ಟಿದನು. ಹೀಗೆ ಅರಣಿಯಿಂದ ಹುಟ್ಟಿದ್ದುರಿಂದ

ಅವನಿಗೆ ‘ಜನಕ’ ಎಂದು ಹೆಸರಾಯಿತು. ಆ ಕುಮಾರನ ತಂದೆ (ನಿಮಿ) ವಿದೇಹನಾಗಿದ್ದರಿಂದ ಈತನಿಗೆ ವೈದೇಹನೆಂದು ಮತ್ತೊಂದು ಹೆಸರಾಯಿತು. ಅರಣಿಯ ಮಥದಿಂದ ಜನಿಸಿದ್ದರಿಂದ ಈತನಿಗೆ ಮಿಥಿ ಎಂದು ಹೆಸರು ಬಳಕೆಗೆ ಬಂದಿತು. ಆ ಜನಕನಿಗೆ ಉದಾವಸು ಎಂಬ ಪುತ್ರನು ಹುಟ್ಟಿದನು. ಉದಾವಸುವಿಗೆ ನಂದಿವರ್ಧನ, ಅವನಿಗೆ ಸುಕೇತು, ಅವನಿಗೆ ದೇವರಾತ, ಆತನಿಗೆ ಬ್ರಹದು, ಅವನಿಗೆ ಸುಧೃತಿ ಎಂಬುವರು ಕ್ರಮವಾಗಿ ಮಕ್ಕಳಾದರು. ಸುಧೃತಿಯ ಮಗ ದೃಷ್ಟಕೇತು, ಆತನ ಮಗ ಹರ್ಯಷ್ವ, ಅವನ ಮಗ ಮನು, ಮನುವಿನಿಂದ ಪ್ರತೀಕ, ಪ್ರತೀಕನಿಂದ ಕೃತರಥ, ಅವನಿಂದ ದೇವಮೀಡನೂ ಹುಟ್ಟಿದರು. ದೇವಮೀಡನ ತನಯ ವಿಬುಧ, ಆತನ ಮಗ ಮಹಾಧೃತಿ, ಅವನಿಂದ ಕೃತರಾತ, ಅವನಿಂದ ಮಹಾರೋಮ, ಮಹಾರೋಮನಿಂದ ಸುವರ್ಣರೋಮ, ಅವನ ಮಗ ಹ್ರಸ್ವರೋಮ, ಅವನ ಮಗ ಸೀರಧ್ವಜ, ಈತನು ಪುತ್ರಾರ್ಥವಾಗಿ ಯಾಗವನ್ನು ಮಾಡಬೇಕೆಂದು ಉಳುತ್ತಿರುವಾಗ ನೇಗಿಲಿನ ಅಗ್ರಭಾಗದಲ್ಲಿ ಸೀತೆ ಕಾಣಿಸಿಕೊಂಡು ಸೀರಧ್ವಜನಿಗೆ ಮಗಳಾದಳು. ಸಾಂಕಾಶ್ಯ ದೇಶಕ್ಕೆ ಅಧಿಪತಿಯಾದ ಕುಶಧ್ವಜನು ಈ ಸೀರಧ್ವಜನ ಸೋದರ. ಸೀರಧ್ವಜನ ಮಗ ಭಾನುಮಂತ ಎಂಬುವನು, ಶುಚಿಗೆ ಊರ್ಜ ಎಂಬ ಕುಮಾರನು ಜನಿಸಿದನು. ಊರ್ಜನ ಮಗ ಶತಧ್ವಜ (ಮುಂದೆ ಈ ಜನಕ ವಂಶದಲ್ಲಿ ತಂದೆ ಮಕ್ಕಳ ಸಂತತಿ ಕ್ರಮ ಹೀಗಿದೆ) ಕೃತಿ, ಅಂಜನ, ಕುರುಜಿತ್, ಅರಿಷ್ಠನೇಮಿ, ಶ್ರುತಾಯು, ಸುಪಾರ್ಶ್ವ, ಸೃಂಜಯ, ಕ್ಷೇಮಾವಿ, ಅನೇನಸ್, ಭೌಮರಥ, ಸತ್ಯರಥ, ಉಪಗು, ಉಪಗುಪ್ತ, ಸ್ವಾಗತ, ಸ್ವಾನಂದ, ಸುವರ್ಚ, ಸುಪಾಶ್ವ, ಸುಭಾಷ, ಸುಶ್ರುತ, ಜಯ, ವಿಜಯ, ಋತು, ಸುನಯ, ವೀತಹವ್ಯ, ಧೃತಿ, ಬಹುಲಾಶ್ವ, ಕೃತಿ ಹೀಗೆ ಕೃತಿಯೆಂಬುವನಲ್ಲಿಗೆ ಈ ಜನಕವಂಶವು ಸಮಾಪ್ತವಾಗುತ್ತದೆ. ಇವರೆಲ್ಲರೂ ಮೈಥಿಲರೆಂದು ಪ್ರಖ್ಯಾತರಾಗಿದ್ದಾರೆ. ಬಹುಶಃ ಈ ಮೈಥುಲರೆಲ್ಲರೂ ಅಧ್ಯಾತ್ಮ ವಿದ್ಯೆಯಲ್ಲಿ ಪರಿಣತರಾಗಿದ್ದಿರಬಹುದು. ನಿಮಿ ಚರಿತ್ರೆಯಿಂದ ನಾವು ಸಕಲ ಜೀವಗಳ ಕಣ್ಣಿನರೆಪ್ಪೆಯು ಹೇಗೆ ಉಂಟಾಯಿತು ಎಂಬುದನ್ನು ತಿಳಿದುಕೊಂಡುದಲ್ಲದೆ ಅಂದಿನ ಕಾಲದಲ್ಲಿ ಪರಹಿತಕ್ಕಾಗಿ ಎಂತೆಂತಹ ಸತ್ಕಾರ್ಯಗಳನ್ನು ಮಾಡುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

# ಸೋಮವಂಶದ ವರ್ಣನೆ

ಮೈತ್ರೇಯರು ಪರಾಶರರನ್ನು ಕುರಿತು ಹೀಗೆಂದರು. ಇದುವರೆಗೂ ಸೂರ್ಯವಂಶದ ಕಥೆಯನ್ನು ಕೇಳಿದ್ದಾಯಿತು. ಈಗ ಚಂದ್ರವಂಶದ ಬಗ್ಗೆ ತಿಳಿಸಬೇಕು ಎಂದು ಪ್ರಾರ್ಥಿಸಿದನು. ಪರಾಶರರು ಅದನ್ನು ಸಹ ಹೇಳಲು ಪ್ರಾರಂಭಿಸಿದರು.

ಚಂದ್ರವಂಶವೂ ಅತ್ಯಂತ ಪ್ರಖ್ಯಾತಿ ಪಡೆದ ವಂಶ. ಅಲ್ಲಿಯೂ ಸಹ ಅತ್ಯಂತ ಬಲಶಾಲಿಗಳಾದ ಕೀರ್ತಿವಂತರಾದ, ಪ್ರಖ್ಯಾತರಾದ ಅನೇಕ ರಾಜರು ಜನಿಸಿದರು. ಅವರಲ್ಲಿ ನಹುಷ, ಯಯಾತಿ, ಕಾರ್ತ ವೀರ್ಯಾರ್ಜುನ ಎಂಬುವರು ಪ್ರಖ್ಯಾತರು.

ಅಖಿಲ ಜಗತ್ತನ್ನು ಸೃಷ್ಟಿಸಿದ ಶ್ರೀಮನ್ನಾರಾಯಣನ ನಾಭಿಕಮಲದಲ್ಲಿ ಬ್ರಹ್ಮನು ಜನಿಸಿದನು. ಆ ಬ್ರಹ್ಮನ ಪತ್ರ ಅತ್ರಿಮಹರ್ಷಿ ಅತ್ರಿಯಿಂದ ಚಂದ್ರನು ಜನಿಸಿದನು. ಭಗವಾನ್ ಬ್ರಹ್ಮನು ಸಕಲ ಔಷಧಗಳಿಗೂ ದ್ವಿಜರಿಗೂ, ನಕ್ಷತ್ರಗಳಿಗೂ ಅಧಿಪತಿಯನ್ನಾಗಿ ಮಾಡಿ ಪಟ್ಟಾಭಿಷೇಕ ಮಾಡಿದನು. ಚಂದ್ರನಿಗೋ ತಾನು ಶ್ರೇಷ್ಠವಾದ ಆಧಿಪತ್ಯವನ್ನು ವಹಿಸಿರುವೆನೆಂದು ಅಹಂಕಾರ ಉಂಟಾಯಿತು. ಅದರ ಸೊಕ್ಕಿನಿಂದ ಅವನು ದೇವಗುರುವಾದ ಬ್ರಹಸ್ಪತಿಯ ಪತ್ನಿಯಾದ ತಾರೆಯನ್ನು ಅಪಹರಿಸಿದನು. ಬ್ರಹಸ್ಪತಿಯ ಪ್ರಾರ್ಥನೆಯಂತೆ ಬ್ರಹ್ಮದೇವ, ಸಕಲ ದೇವರ್ಷಿಗಳು ಬೇಡಿಕೊಂಡರೂ ಚಂದ್ರನು, ಅವಳನ್ನು ಬಿಟ್ಟು ಕೊಡಲೇ ಇಲ್ಲ. ಈ ಸಂದರ್ಭದಲ್ಲಿ ಬ್ರಹಸ್ಪತಿಯ ಮೇಲೆ ದ್ವೇಷವಿದ್ದುದರಿಂದ ಶುಕ್ರಾಚಾರ್ಯರು ಚಂದ್ರನ ನೆರವಿಗೆ ನಿಂತರು. ಅಂಗೀರಸನಿಂದ ವಿದ್ಯೆಯನ್ನು ಕಲಿತಿದ್ದರಿಂದ ಭಗವಾನ್ ರುದ್ರನು ಅಂಗೀರಸನ ಮಗ ಬ್ರಹಸ್ಪತಿಯ ನೆರವಿಗೆ ನಿಂತನು. ಶುಕ್ರಾಚಾರ್ಯರು ಇದರಲ್ಲಿ ಪಕ್ಷವಹಿಸಿದ್ದರಿಂದ ಜಂಭ – ಕುಂಬ ಮುಂತಾದ ಸಮಸ್ತ ದೈತ್ಯ ದಾನವರೂ ಚಂದ್ರನ ಪಕ್ಷವನ್ನೇ ಸೇರಿ ಮಹತ್ತರವಾದ ಸಮರೋದ್ಯಮವನ್ನು ನಡೆಸಿದರು. ಇತ್ತ ದೇವೇಂದ್ರನು ಸಕಲ ದೇವತಾ ಸಹಿತರಿಂದ ಬೃಹಸ್ಪತಿಯ ಪಕ್ಷವನ್ನು ವಹಿಸಿದನು. ಹೀಗಾಗಿ ತಾರಾನಿಮಿತ್ತವಾಗಿ ದೇವಾಸುರರಿಗೆ ತಾರಕಾಮಯವೆಂಬ ಘೋರ ಯುದ್ಧವೇ

ನಡೆಯಿತು. ಹೀಗೆ ದೇವಾಸುರ ಸಂಗ್ರಾಮದಲ್ಲಿ ತಲ್ಲಣಿಸಿ ಹೋದ ಜನರು ಬ್ರಹ್ಮನಲ್ಲಿ ಶರಣಾದರು. ಆಗ ಬ್ರಹ್ಮದೇವನು ಶುಕ್ರಾಚಾರ್ಯ ಮತ್ತು ರುದ್ರರನ್ನು ದೇವಾಸುರರನ್ನು ತಡೆದು ಯುದ್ಧವನ್ನು ನಿಲ್ಲಿಸಿ ಬ್ರಹಸ್ಪತಿಗೆ ತಾರೆಯನ್ನು ಕೊಡಿಸಿದನು. ಈ ಸಂದರ್ಭದಲ್ಲಿ ತಾರೆಯು ಗರ್ಭಿಣಿಯಾಗಿರುವ ವಿಷಯ ಬೃಹಸ್ಪತಿಗೆ ತಿಳಿಯಿತು. ನನ್ನ ಕ್ಷೇತ್ರದಲ್ಲಿ ನೀನು ಇನ್ನೊಬ್ಬನ ಮಗನನ್ನು ಧರಿಸಿಕೂಡದು. ಅದನ್ನು ಹೊರತಳ್ಳು ಎಂದನು. ಆಗ ತಾರೆಯು ತನ್ನ ಗರ್ಭವನ್ನು ನೊರಜುಹುಲ್ಲುಗಳ (ತಮಿಷೀಕಾಸ್ತಂಭ) ನಡುವೆ ಅದನ್ನು ವಿಸರ್ಜಿಸಿದಳು. ಕೆಲವು ದಿನಗಳ ನಂತರ ಅಲ್ಲಿಯೇ ಮಗುವು ಕಂಗೊಳಿಸಿತು. ಅಲ್ಲಿ ಹುಟ್ಟಿದ ಮಗು ಅತ್ಯಂತ ತೇಜಸ್ವಿಯಾಗಿದ್ದಿತು. ಈ ಮಗುವನ್ನು ಕಂಡು ದೇವತೆಗಳಿಗೆ ಬೃಹಸ್ಪತಿಗೂ, ಚಂದ್ರನಿಗೂ ಆಸೆಯುಂಟಾಯಿತು. ಅದನ್ನು ಕಂಡು ದೇವತೆಗಳಿಗೆ ಸಂದೇಹ ಉಂಟಾಗಿ ಈ ಮಗುವು ಬೃಹಸ್ಪತಿಯ ಮಗುವೋ ಅಥವಾ ಚಂದ್ರನ ಮಗುವೋ ಎಂದು ತಾರೆಯನ್ನೇ ಕೇಳಿದರು. – ತಾರೆ ಪ್ರತ್ಯುತ್ತರ ನೀಡಲಿಲ್ಲ. ಕೊನೆಗೆ ಆ ಬಾಲಕನಿಗೆ ಕೋಪ ಬಂದಾಗ ಚಂದ್ರನ ಪುತ್ರ ಎಂಬ ನಿಜಾಂಶವನ್ನು ತಾರೆಯು ಅರುಹಿದಳು. ಚಂದ್ರನು ಅತ್ಯಂತ ಸಂತುಷ್ಟನಾಗಿ ನೀನು ಪ್ರಾಜ್ಞ (ಬುದ್ಧಿವಂತ) ಎಂದು ನುಡಿದು ಆ ಬಾಲಕನಿಗೆ ಬುಧ ಎಂದು ನಾಮಕರಣ ಮಾಡಿದರು.

## ಪುರೂರವ ಚರಿತ್ರೆ

ಬುಧ ಮತ್ತು ಇಳೆಯ ಪುತ್ರ ಪುರೂರವ. ಈತನು ಅತ್ಯಂತ ದಾನಶೀಲನೂ, ತೇಜಸ್ವಿಯೂ, ಯಜನಶೀಲನೂ ಆಗಿದ್ದ. ಅಷ್ಟೇ ಅಲ್ಲದೆ ಸತ್ಯವಾದಿ, ಬುದ್ಧಿವಂತ, ಅತ್ಯಂತ ಸುಂದರನೂ ಆಗಿದ್ದನು. ಒಮ್ಮೆ ಮಿತ್ರಾವರುಣರ ಶಾಪದಿಂದ ಭೂಲೋಕದಲ್ಲಿ ವಾಸಿಸುವುದಕ್ಕಾಗಿ ಬಂದಿದ್ದ ಊರ್ವಶಿ ಪುರೂರನವನ್ನು ನೋಡಿದಳು. ಆತನನ್ನು ನೋಡಿದಾಕ್ಷಣ ಊರ್ವಶಿಯು ಅಭಿಮಾನವನ್ನು ತೊರೆದು, ಸ್ವರ್ಗಸುಖದ ಅಭಿಲಾಷೆಯನ್ನು ಬದಿಗೊತ್ತಿ ಪುರೂರವನ ಬಳಿ ಬಂದಳು. ಊರ್ವಶಿಯ ಅಸಾಮಾನ್ಯವಾದ ಸೌಂದರ್ಯವನ್ನು ನೋಡಿ ಪುರೂರವನ ಮನಸ್ಸು ಆಕರ್ಷಿತವಾಯಿತು. ಪುರೂರವನು ಊರ್ವಶಿಯ ಬಳಿ ಬಂದು "ಸುಂದರಿ ನಾನು ನಿನ್ನನ್ನು

ಬಯಸುತ್ತೇನೆ. ನನ್ನನ್ನು ಸ್ವೀಕರಿಸು" ಎಂದನು. ಊರ್ವಶಿಯು ನಾಚುತ್ತಾ ಮೆಲ್ಲಗೆ "ಆಗಲಿ ಆದರೆ ನಾನು ಕೊಡುವ ನಿಯಮವನ್ನು ಪಾಲಿಸುವುದಾದರೆ ನಾನು ನಿನ್ನೊಡನೆ ಇರುವೆ ಎಂದು ತನ್ನ ಮಾತನ್ನು ಮುಂದುವರಿಸುತ್ತಾ "ನನ್ನ ಈ ಎರಡು ಕುರಿಮರಿಗಳು ಶಯನ ಸಮೀಪದಲ್ಲಿರುತ್ತವೆ. ಇವುಗಳನ್ನು ದೂರಿಕರಿಸಬಾರದು ಬೆತ್ತಲೆಯಾಗಿ ನೀನು ನನಗೆ ಕಾಣಿಸಿಕೊಳ್ಳಬಾರದು. ತುಪ್ಪವನ್ನು ಮಾತ್ರ ನಾನು ಆಹಾರವನ್ನಾಗಿ ಸೇವಿಸುತ್ತೇನೆ. ಇದಿಷ್ಟು ನನ್ನ ನಿಯಮ ಎಂದಳು. ಅದಕ್ಕೆ ರಾಜನು "ಹಾಗೆಯೇ ಆಗಲಿ" ಎಂದನು. ಅನಂತರ ಪುರೂರವನು ಊರ್ವಶಿಯೊಡನೆ ಅಲಕಾನಗರದ ಅತಿ ರಮಣೀಯವಾದ ಚೈತ್ರರಥಾದಿ ಪುಷ್ಪವನಗಳಲ್ಲಿಯೂ ಅರಳಿದ ತಾವರೆಗಳಿಂದ ಕೂಡಿದ ಮಾನಸಸರೋವರ ಮುಂತಾದ ಅನೇಕಸರಸ್ಸುಗಳಲ್ಲಿ ವಿಹರಿಸುತ್ತಾ ಅನುದಿನವೂ ಅತ್ಯಾನಂದವನ್ನು ಅನುಭವಿಸುತ್ತಾ ಅರವತ್ತು ಸಾವಿರ ವರ್ಷಗಳ ಕಾಲ ಕಳೆದನು. ಊರ್ವಶಿಗೂ ಗಂಧರ್ವಲೋಕದ ನೆನಪೇ ಬರಲಿಲ್ಲ. ಈ ಮಧ್ಯೆ ವಿಶ್ವಾವಸು ಎಂಬ ಗಂಧರ್ವನಿಗೆ ಊರ್ವಶಿ ಪುರೂರವರ ನಡುವೆ ಇದ್ದ ಒಪ್ಪಂದ ತಿಳಿಯಿತು. ಆತನು ಗಂಧರ್ವರೊಡನೆ ಒಮ್ಮೆ ಒಂದು ರಾತ್ರಿ ಬಂದು ಪುರೂರವನ ಶಯನದ ಬಳಿಯಿದ್ದ ಕುರಿಮರಿಗಳಲ್ಲಿ ಒಂದನ್ನು ಅಪಹರಿಸಿದನು. ಆಕಾಶದಲ್ಲಿ ಎಳೆದು ಒಯ್ಯುತ್ತಿರುವಾಗ ಆ ಕುರಿಮರಿಯು ಕಿರಿಚಿತು. ಆ ಶಬ್ದ ಊರ್ವಶಿಗೆ ಕೇಳಿಸಿತು. ಅವಳು 'ಅಯ್ಯೋ ನಾನು ಅನಾಥೆಯಾದೆ. ನನ್ನ ಮಗುವನ್ನು ಯಾರೋ ಕರೆದುಕೊಂಡು ಹೋಗುತ್ತಿದ್ದಾರೆ ನಾನು ಯಾರಿಗೆ ಶರಣಾಗಲಿ ಎಂದು ಕೇಳಿಕೊಂಡಳು. ಊರ್ವಶಿಯು ಕಿರುಚುತ್ತಿದ್ದರೂ ಪುರೂರವನು ಅವಳ ಮಾತಿಗೆ ಕಿವಿಗೊಡಲಿಲ್ಲ. ತಾನು ಬೆತ್ತಲೆಯಾಗಿರುವುದನ್ನು ಊರ್ವಶಿಯು ನೋಡಿಬಿಟ್ಟಾಳೆಂದು ಅವನು ಎಣಿಸಿದನು. ಸ್ವಲ್ಪ ಹೊತ್ತಿನಲ್ಲಿಯೇ ಗಂಧರ್ವರು ಮತ್ತೊಂದು ಕುರಿಮರಿಯನ್ನು ಹಾರಿಸಿಕೊಂಡು ಹೋದರು. ಎಳೆದೊಯ್ಯುವಾಗ ಅದೂ ಸಹ ಆಕಾಶದಲ್ಲಿ ಜೋರಾಗಿ ಕಿರುಚಿಕೊಂಡಿತು. ಮತ್ತೆ ಊರ್ವಶಿಯು ಇದೆಂತಹಾ ಹೇಡಿಯನ್ನು ಆಶ್ರಯಿಸಿದ್ದೇನೆ. ನಾನು ಅನಾಥೆ ಎಂದು ಕೂಗಿಕೊಂಡಳು ರಾಜನು ಕ್ರುದ್ಧನಾಗಿ ದಿಗ್ಗನೆ ಮೇಲೆದ್ದು ಹೇಗಿದ್ದರೂ ಕತ್ತಲಾಗಿದೆ. ಊರ್ವಶಿಗೆ ನಾನು ಕಾಣಿಸುವುದಿಲ್ಲ ಎಂದುಕೊಂಡು

ಖಡ್ಗವನ್ನು ಸೆಳೆದು ಅರೇ ದುಷ್ಟ, ಕಿಡಿಗೇಡಿ ನೀನು ಸತ್ತೆ ಎನ್ನುತ್ತ ಗಂಧರ್ವನತ್ತ ಧಾವಿಸಿದನು. ಅಷ್ಟರಲ್ಲಿ ಗಂಧರ್ವರು ಉಜ್ವಲವಾದ ಕಾಂತಿಯುಳ್ಳ ಮಿಂಚನ್ನು ಮಿಂಚಿಸಿದರು. ಆ ಮಿಂಚಿನ ಪ್ರಭೆಯಲ್ಲಿ ಊರ್ವಶಿಯು ಬೆತ್ತಲೆಯಾದ ರಾಜನ್ನು ಕಂಡಳು. ತನ್ನ ನಿಯಮವು ಮುರಿಯಿತೆಂದು ಒಡನೆಯೇ ಅವಳು ಅಲ್ಲಿಂದ ಹೊರಟುಹೋದಳು. ಇತ್ತ ಗಂಧರ್ವರು ಎರಡು ಕುರಿಮರಿಗಳನ್ನು ಪರಿತ್ಯಜಿಸಿ ಸುರಲೋಕಕ್ಕೆ ಹಿಂದಿರುಗಿದರು. ರಾಜಾಪುರೂರವನು ಆ ಕುರಿಗಳನ್ನು ಹಿಡಿದುಕೊಂಡು ಅತ್ಯಾನಂದದಿಂದ ತನ್ನ ಶಯನಸ್ಥಳಕ್ಕೆ ಬಂದನು. ಅಲ್ಲಿ ಊರ್ವಶಿ ಕಾಣಿಸಲಿಲ್ಲ. ಹುಚ್ಚನಂತಾಗಿ ವಸ್ತ್ರಹೀನನಾಗಿಯೇ ಊರ್ವಶಿಯನ್ನು ಹುಡುಕುತ್ತಾ ಅಲೆದನು. ಹೀಗೆ ಅಲೆಯುತ್ತ ಬಂದು ಕುರುಕ್ಷೇತ್ರದಲ್ಲಿ ಒಮ್ಮೆ ಕಮಲಸರೋವರದಲ್ಲಿ ಬೇರೆ ನಾಲ್ವರು ಅಪ್ಸರೆಯರೊಡನೆ ಇದ್ದ ಊರ್ವಶಿಯನ್ನು ಕಂಡನು. ಅವಳನ್ನು ಕಂಡೊಡನೆ ನನ್ನ ಭಾರ್ಯೆ ಕೊಂಕುಮಾತಿನವಳೇ ನಿಲ್ಲು ಎಂದು ಹುಚ್ಚೆದ್ದು ಅವಳತ್ತ ಧಾವಿಸಿದನು. ಆಗ ಊರ್ವಶಿಯು ಮಹಾರಾಜ ಈ ಅವಿವೇಕದ ಚೇಷ್ಠೆಯನ್ನು ಬಿಟ್ಟುಬಿಡು. ನಾನು ಗರ್ಭಿಣಿಯಾಗಿದ್ದೇನೆ. ಇನ್ನು ಒಂದು ವರ್ಷದ ನಂತರ ನೀನು ಈ ಸ್ಥಳಕ್ಕೆ ಬಾ. ನಿನಗೆ ಒಬ್ಬ ಪುತ್ರನು ದೊರಕುವನು. ಒಂದು ರಾತ್ರಿ ಮಾತ್ರ ನಿನ್ನೊಡನೆ ನಾನಿರುವೆ ಎಂದಳು. ರಾಜನು ಅತ್ಯಂತ ಸಂತುಷ್ಟನಾಗಿ ಹಿಂದಿರುಗಿದನು. ಊರ್ವಶಿಯು ತನ್ನೊಡನೆ ಬಂದ ಅಪ್ಸರೆಯರಿಗೆ ಪೂರ್ವ ವೃತ್ತಾಂತವನ್ನೆಲ್ಲಾ ತಿಳಿಸಿದಳು. ಅಪ್ಸರೆಯರೂ ಸಹ ಅವನ ಸೌಂದರ್ಯಕ್ಕೆ ಮಾರುಹೋದರು. ಒಂದು ವರ್ಷ ಕಳೆಯಲಾಗಿ ರಾಜ ಪುರೂರವನು ಕುರುಕ್ಷೇತ್ರದ ಅದೇ ಸರಸ್ಸಿನತ್ತ ಧಾವಿಸಿದನು. ಊರ್ವಶಿಯು 'ಆಯು' ಎಂಬ ಹೆಸರಿನ ಕುಮಾರನನ್ನು ಅವನಿಗೆ ಒಪ್ಪಿಸಿದಳು. ಅವಳು ಒಂದು ರಾತ್ರಿ ಪುರೂರವನೊಡನೆ ಇದ್ದು ಐದು ಮಕ್ಕಳು ಹುಟ್ಟುವಂತಹ ಗರ್ಭವನ್ನು ಧರಿಸಿದಳು. ರಾಜನನ್ನು ಕುರಿತು ಪ್ರೀತಿಯಿಂದ " ಎಲೈ ಮಹಾರಾಜ ಎಲ್ಲ ಗಂಧರ್ವರು ನಿನಗೆ ವರವನ್ನು ಕೊಡಲು ಮುಂದೆ ಬಂದಿದ್ದಾರೆ. ವರವನ್ನು ಕೇಳಿಕೋ ಎಂದಳು. ಅದಕ್ಕೆ ರಾಜನು ನಾನು ಸಕಲವೈರಿಗಳನ್ನು ಜಯಿಸಿದ್ದೇನೆ. ನನ್ನ ಎಲ್ಲ ಇಂದ್ರಿಯಗಳೂ ಸಮರ್ಥವಾಗಿದೆ. ನನಗೆ ಬಂಧುಗಳಿದ್ದಾರೆ. ಅಪಾರವಾದ ಸೇನೆ ನನ್ನೊಡನೆ ಇದೆ. ಭಂಡಾರವಿದೆ. ನನಗೆ ಊರ್ವಶಿಯ

ಸಹವಾಸಕ್ಕಿಂತ ಮತ್ತಾವುದೂ ಬೇಡ. ನಾನೂ ಊರ್ವಶಿಯೊಡನೆ ನನ್ನ ಕಾಲವನ್ನು ಕಳೆಯುಲು ಬಯಸುತ್ತೇನೆ ಎಂದು ಹೇಳಿದನು. ಗಂಧರ್ವರು ಪುರೂರವನಿಗೆ ಅಗ್ನಿ ಇರುವ ಸ್ಥಾಲಿಯನ್ನು ಕೊಟ್ಟು ಈ ಅಗ್ನಿಯನ್ನು ವೈದಿಕವಿಧಿಯಂತೆ ಮೂರು ವಿಭಾಗ ಮಾಡು (ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ) ಊರ್ವಶಿಯ ಸಾಲೋಕ್ಯ ಬರಲೆಂಬ ಮನೋರಥವನ್ನು ಇಟ್ಟುಕೊಂಡು ಕ್ರಮಬದ್ಧವಾಗಿ ಯಾಗವನ್ನು ಮಾಡು ಎಂದು ನುಡಿದರು. ರಾಜನು ಆ ಅಗ್ನಿಸ್ಥಾಲಿಯನ್ನು ತೆಗೆದುಕೊಂಡು ಹೊರಟನು. ದಾರಿಯಲ್ಲಿ ಒಂದು (ಅಗ್ನಿಸ್ಥಾಲಿ ಎಂದರೆ ಅಗ್ನಿಸ್ಥಾಪನೆಯನ್ನು ಮಾಡುವ ಪಾತ್ರೆ) ಅಡವಿಯ ನಡುವೆ ನಿಂತು " ಅಯ್ಯೋ ಎಂತಹ ಮೂರ್ಖತನ ನನ್ನದು. ಊರ್ವಶಿಯನ್ನು ಬಿಟ್ಟು ಅಗ್ನಿಸ್ಥಾಲಿಯನ್ನು ತಂದೆನಲ್ಲ ಎಂದು ಚಿಂತಿಸಿ ಅ ಅಗ್ನಿಸ್ಥಾಲಿಯನ್ನು ಅಲ್ಲಿಯೇ ಬಿಟ್ಟು ತನ್ನ ರಾಜಧಾನಿಗೆ ಹೋದನು. ಈ ಸಂದರ್ಭದಲ್ಲಿ ತನ್ನ ಜೊತೆಯಲ್ಲಿ ಊರ್ವಶಿ ಬಂದಿದ್ದಾಳೆ ಎಂಬ ಬುದ್ಧಿ ವ್ಯಾಮೋಹ ಅವನಿಗೆ ಉಂಟಾಯಿತು. ನಿದ್ರೆಯಿಲ್ಲದೆ ಅರ್ಧರಾತ್ರಿ ಕಳೆಯತು. ಮತ್ತೊಂದು ಯೋಚನೆ ಅವನ ಮನದಲ್ಲಿ ಹುಟ್ಟಿತು. ಅಯ್ಯೋ ನಾನೆಂಥಹ ಕೆಲಸಮಾಡಿದೆ. ಊರ್ವಶಿಯ ಸಾಲೋಕ್ಯವು ಪ್ರಾಪ್ತವಾಗಲೆಂದು ಗಂಧರ್ವರು. ಅಗ್ನಿಸ್ಥಾಲಿಯನ್ನು ನನಗೆ ಕೊಟ್ಟಿದ್ದರಲ್ಲ. ಅದನ್ನೇ ಅಡವಿಯಲ್ಲಿ ಬಿಟ್ಟು ಬಂದೆನಲ್ಲಾ, ಅದನ್ನು ತರುವುದಕ್ಕಾಗಿ ನಾನು ಮತ್ತೆ ಅಲ್ಲಿಗೇ ಹೋಗುವೆನು ಎಂದು ಆಲೋಚಿಸಿ ಮತ್ತೆ ಕಾಡಿಗೆ ಹೊರಟನು. ಅಲ್ಲಿ ಅಗ್ನಿಸ್ಥಾಲಿ ಕಾಣಲಿಲ್ಲ.

**ತದಹಂ ತತ್ರ ತದಾಹರಣಾಯ ಯಾದ್ಯಾಮೀತ್ಯುತ್ಥಾಯ**

**ತತ್ರಾಪ್ಯಪಗತೋ ನಾಗ್ನಿಸ್ಥಾಲಿಮಪಶ್ಯತ್ ।**

**ಶಮೀಗರ್ಭಂ ಚಾಶ್ವತ್ಥಮಗ್ನಿ ಸ್ಥಾಲೀದ್ಥಾನೇ ದೃಷ್ಟಾ ಅಚಿಂತಯತ್ ॥**

**ಮಯಾ ಅತ್ರ ಅಗ್ನಿಸ್ಥಾಲೀ ನಿಕ್ಷಿಪ್ತಾಸಾ ಚಾಶ್ವತ್ಥ ಶ್ಯಮೀಗರ್ಭೋಭೂತ್ ॥**

**ತದೇನ ಮೇವಾಹ ಮಗ್ನಿ ರೂಪ ಮಾದಾಯ ಸ್ವಪುರಮಭಿಮ್ಯಾರಣಿಂ**

**ಕೃತ್ವಾ ತದುತ್ಪನ್ನಾಗ್ನೇರುಪಾಸ್ತಿಂ ಕರಿಷ್ಯಾಮೀತಿ ॥**

**ಏವಮೇವ ಸ್ವಪುರಮಭಿಗಮ್ಯಾರಣಿಂ ಚಕಾರ ॥**

**ತತ್ಪ್ರಮಾಣಂ ಚಾಂಗುಲೈಃ ಕುರ್ವನ್ ಗಾಯತ್ರೀ ಮಪಠತ್ ॥**

**ಪಠತಶ್ಚಾಕ್ಷರ ಸಂಖ್ಯಾನ್ಯೇ ವಾಂಗುಲಾರಣ್ಯ ಭವತ್ ॥**

**ತತ್ರಗ್ನಿಂ ನಿರ್ಮಥ್ಯಾಗ್ನಿ ತ್ರಯ ಮಾಮ್ನಾಯೂನುಸಾರೀ ಭೂತ್ವಾ ಜುಗಾವ ।**

**ಊರ್ವಶಿ ಸಾಲೋಕ್ಯಂ ಫಲಮಭಿಸಂಹಿತವಾನ್ ॥**

**ತೇನೈವ ಚಾಗ್ನಿವಿದಿನಾ ಬಹುವಿಧಾನ್ ಯಜ್ಞಾನಿಷ್ಟ್ವಾ ಗಾಂಧವ**

**ಲೋಕಾನವಾಪೋರ್ವಶ್ಯಾ ಸಹವಿಯೋಗ ಮವಾಪ ॥**

**ಐಕೋಗ್ನಿರಾದಾಭಚದ್ ಐಕೇನ ತ್ವತ್ರ ಮನ್ವಂತರೇ ತ್ರೇಧಾ ಪ್ರವರ್ತಿತಾಃ ॥**

(ವಿ.ಪು. 2ನೇಸಂ. ಚತುರ್ಥಾಂಶ ಅಧ್ಯಾಯ6 ಶ್ಲೋ84 ರಿಂದ)

ಆಶ್ಚರ್ಯವೇನೆಂದರೆ ಅಗ್ನಿಸ್ಥಾಲಿಯನ್ನು ಬಿಟ್ಟದ್ದ ಸ್ಥಳದಲ್ಲಿ ಶಮೀಸಹಿತವಾದ ಅಶ್ವತ್ಥ ವೃಕ್ಷವಿರುವುದನ್ನು ಕಂಡನು. ಇಲ್ಲಿ ನಾನು ಅಗ್ನಿಸ್ಥಾಲಿಯನ್ನಿಟ್ಟಿದ್ದೆ. ಅದು ಈಗ ಶಮೀ ಸಹಿತವಾದ ಅಶ್ವತ್ಥವಾಗಿದೆ. ಅಗ್ನಿರೂಪವಾದ ಇದನ್ನೇ ತೆಗೆದುಕೊಂಡು ನನ್ನ ಪಟ್ಟಣಕ್ಕೆ ಹೋಗಿ ಅರಣಿಯನ್ನು ಮಾಡಿ ಅದರಿಂದ ಉತ್ಪನ್ನವಾದ ಅಗ್ನಿಯಿಂದ ಉಪಾಸನೆ ಮಾಡುವೆ" ಎಂದು ಆಲೋಚಿಸಿದನು. ಅದೇ ಪ್ರಕಾರ ಅಶ್ವತ್ಥವನ್ನು ತೆಗೆದುಕೊಂಡು ನಗರಕ್ಕೆ ಹಿಂದಿರುಗಿದನು. ಅದರಿಂದ ಅರಣಿಯನ್ನು ನಿರ್ಮಿಸಿದನು. ಅರಣಿಯ ಪ್ರಮಾಣವನ್ನು ತನ್ನ ಅಂಗುಲಿಗಳಿಂದ ಅಳೆಯುತ್ತಾ ಗಾಯತ್ರೀ ಮಂತ್ರವನ್ನು ಪಠಿಸುತ್ತಿದ್ದನು. ಹಾಗೆ ಪಠಿಸುತ್ತಿರುವಾಗ ಗಾಯತ್ರೀ ಮಂತ್ರದಲ್ಲಿರುವ ಅಕ್ಷರಗಳಷ್ಟೇ ಇಪತ್ತನಾಲ್ಕು ಅಂಗುಲ ಪ್ರಮಾಣದ ಅರಣಿಯು ನಿರ್ಮಿತವಾಯಿತು. ಹೀಗೆ ಉತ್ಪಾದಿಸಿದ ಅರಣಿಯಿಂದ ವೈದಿಕ ವಿಧಿಯಂತೆ ಹವನ ಮಾಡಿದನು. ಊರ್ವಶಿಯ ಸಾಲೋಕ್ಯ ತನಗೆ ಲಭಿಸಲೆಂದು ಫಲದ ಸಂಕಲ್ಪವನ್ನು ಮಾಡಿದನು. ಅನಂತರ ಅದೇ ಪ್ರಕಾರದ ಅಗ್ನಿವಿಧಿಯಿಂದ ನಾನಾ ಬಗೆಯ ಯಜ್ಞವನ್ನು ಮಾಡಿ ಗಂಧರ್ವ ಲೋಕವನ್ನೇ ಸೇರಿದನು. ವಿಯೋಗವಿಲ್ಲದಂತೆ ಊರ್ವಶಿಯೊಡನೆ. ಸೇರಿಕೊಂಡನು. ಹೀಗಾಗಿ ಪೂರ್ವಕಾಲದಲ್ಲಿ ಒಂದೇ ಅಗ್ನಿ ಇತ್ತು. ಈ ವೈವಸ್ವತ ಮನ್ವಂತರದಲ್ಲಿ ಅದು ಮೂರು ಪ್ರಕಾರವಾಯಿತು. ಈ ಅರಣಿತ (ಇಪ್ಪತ್ತು ನಾಲ್ಕು ಅಂಗುಲ ಉದ್ದವಿರಬೇಕೆಂದು ಇದರಿಂದ ಸೂಚಿತವಾಗಿದೆ) ಇದನ್ನು ತ್ರೇತಾಗ್ನಿಯೆಂದು ಕರೆಯುವುದುಂಟು.

(ಅರಣಿಯೆಂದರೆ ಒಣಗಿದ ಅಶ್ವತ್ಥ ಮರದ ಕೊಂಬೆ. ಈ ಎರಡು ಅರಣಿಗಳನ್ನು ಉಜ್ಜಿದಾಗ ಬೆಂಕಿ ಉತ್ಪತ್ತಿಯಾಗುತ್ತದೆ.)

ಈ ಪುರೂರವ ಊರ್ವಶಿಯರ ಕಥೆ ಋಗ್ವೇದದಲ್ಲಿ ಬಂದಿದೆ. ವಿಷ್ಣುಪುರಾಣದಲ್ಲಿರುವ 'ಸೂಕ್ತ' ಶಬ್ದದಿಂದ ಹೇಜಾಯೇ ಮನಸಾತಿಷ್ಠ – ಇತ್ಯಾದಿ ಹದಿನೆಂಟು ಸೂಕ್ತಗಳು ಸೂಚಿತವಾಗುತ್ತದೆ. ಈ ಕಥೆಯು ಮಹಾಭಾರತದಲ್ಲಿ ಭಾಗವತ, ವಾಯುಪುರಾಣ, ಮತ್ಸ್ಯಪುರಾಣ, ಪದ್ಮಪುರಾಣಗಳಲ್ಲಿ ಇದೆ. ಪುರೂರವನ ಕಥೆಯಿಂದ ಯಜ್ಞಯಾಗಾದಿಗಳ ಅವಶ್ಯಕತೆ ಮೇಲೋಕದಲ್ಲಿರುವರ ವಿಚಿತ್ರವಾದ ಆಟ ಗಾಯತ್ರೀ ಮಂತ್ರದ ಮಹಿಮೆ ಮುಂತಾದುವು ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಗಾಯತ್ರೀ ಮಂತ್ರದ ಮಹಿಮೆ ಅಪಾರವಾದದು ಎಂಬ ನಂಬಿಕೆ ಇಂದಿಗೂ ಜನಮನದಲ್ಲಿ ನಿಂತಿದೆ.

## ಗಾಯತ್ರೀ ಮಂತ್ರ

**ಓಂ ಭೂರ್ಭುವಸ್ಸುವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ**

**ಧೀಃಮಹಿ ಧಿಯೋಯೋನಃ ಪ್ರಚೋದಯಾತ್**

**ಗಾಯತ್ರೀ ದೇವಿಯು ಇಡೀ ಜಗತ್ತಿಗೇ ಸನ್ಮಂಗಳವನ್ನುಂಟುಮಾಡಲಿ ಎಂದು ನಾವೆಲ್ಲಾ ಅನವರತ ಪ್ರಾರ್ಥಿಸೋಣ.**

**ಲೋಕಾಃ ಸಮಸ್ತಾ ಸ್ಸುಖಿನೋ ಭವಂತು ಸಮಸ್ತ ಸನ್ಮಂಗಳಾನಿ ಭವಂತು**

ಈಗ ಸ್ಥಾಲಿಯ ಬಗ್ಗೆ ತಿಳಿದುಕೊಳ್ಳೋಣ. ಅಗ್ನಿಸ್ಥಾಲಿಯೆಂದರೆ ಅಗ್ನಿಸ್ಥಾಪನೆ ಮಾಡುವ ಪಾತ್ರೆ. ಊರ್ವಶಿಯ ನಿರ್ದೇಶನದಂತೆ ಪುರೂರವನು ಊರ್ವಶಿಯ ಸಾಯುಜ್ಯವನ್ನು ಪಡೆಯುವುದಕ್ಕಾಗಿ ಗಂಧರ್ವರನ್ನು ಸ್ತುತಿಸಿದನು. ಆಗ ಗಂಧರ್ವರು ಪುರೂರವನ ಮೇಲೆ ಪ್ರಸನ್ನರಾಗಿ ಅಗ್ನಿಸ್ಥಾಲಿಯನ್ನು ಅವನಿಗೆ ನೀಡಿದರು. ರಾಜನು ಆ ಸ್ಥಾಲಿಯನ್ನೇ ಊರ್ವಶಿಯೆಂದು ಭ್ರಮಿಸಿ ಅದನ್ನು ತೆಗೆದುಕೊಂಡು ಒಂದು ವನದಿಂದ ಮತ್ತೊಂದು ವನಕ್ಕೆ ಹೋಗುತ್ತಿದ್ದನು. ಒಮ್ಮೆ ಹೀಗೆಯೆ ಬುದ್ಧಿ ವಿಕಲ್ಪವಾದವನಂತೆ ಗಂಧರ್ವರು ನೀಡಿದ ಅಗ್ನಿಸ್ಥಾಲಿಯನ್ನು ಅಲ್ಲಿಯೇ ಬಿಟ್ಟು ನಂತರ ತನ್ನ ಅರಮನೆಗೆ ಬಂದನು.

ಹೀಗೆಯೇ ಊರ್ವಶಿಯ ಧ್ಯಾನ ಮಾಡುತ್ತಾ ಇರುವಾಗಲೇ ತ್ರೇತಾಯುಗವು ಆರಂಭವಾಯಿತು. ಆ ಸಂದರ್ಭದಲ್ಲಿ ಅರಮನೆಯಿಂದ ಹೊರಟು ತನಗೆ ನೀಡಿದ್ದ ಅಗ್ನಿಸ್ಥಾಲಿಯನ್ನು ಮರೆತು ಅಲ್ಲಿ ಕಾಡಿನಲ್ಲಿಯೇ ಬಿಟ್ಟು ಬಂದೆನಲ್ಲಾ ಎಂದು ಅದನ್ನು ತರಲು ಮತ್ತೊಮ್ಮೆ ಅದೇ ಜಾಗಕ್ಕೆ ಹೋದನು. ಆದರೆ ಅಲ್ಲಿ ಗಂಧರ್ವರು ನೀಡಿದ ಸ್ಥಾಲಿಯು ಇರಲಿಲ್ಲ. ಆ ಸ್ಥಾನದಲ್ಲಿಯೇ ಶಮಿವೃಕ್ಷದ ಬಳಿ ಒಂದು ಅಶ್ವತ್ಥ ಮರವು ಬೆಳೆದು ನಿಂತಿತ್ತು. ಅದನ್ನು ನೋಡಿ ಪುರೂರವನು ಶಮಿ ಮತ್ತು ಅಶ್ವತ್ಥ ಮರದ ಒಣಗಿದ ಕೊಂಬೆಗಳನ್ನು ತೆಗೆದುಕೊಂಡು ಮಂಥನ ಕಾಷ್ಠವನ್ನಾಗಿ ಮಾಡಿಕೊಂಡು ಅವುಗಳನ್ನು ಉಜ್ಜಿ ಅಗ್ನಿಯನ್ನು ಸ್ಥಾಪಿಸಿದನು. ನಂತರ ಊರ್ವಶಿಯ ಲೋಕವನ್ನು ಧ್ಯಾನಿಸುತ್ತಾ ಅರಣಿಯ ಕೆಳಗಿನ ಭಾಗವನ್ನು ಊರ್ವಶಿಯೆಂದೇ ಧ್ಯಾನಿಸುತ್ತಾ ಅರಣಿಯ ಮೇಲ್ಭಾಗವನ್ನು ತಾನೆಂದು(ಪುರೂರವನೆಂದೂ) ಮಧ್ಯದ ಕಾಷ್ಠಭಾಗವನ್ನು ಪುತ್ರರೂಪದಂತೆ ಚಿಂತಿಸುತ್ತಾ ಅಗ್ನಿಯನ್ನು ಪ್ರಜ್ವಲಗೊಳಿಸುವ ಮಂತ್ರಗಳಿಂದ ಉಜ್ಜಿದನು (ಮಂಥನಮಾಡಿದನು). ಇದರಿಂದಾಗಿ 'ಜಾತವೇದ' ಎಂಬ ಅಗ್ನಿ ಪ್ರಕಟವಾಯಿತು. ರಾಜ ಪುರೂರವನು ಅಗ್ನಿದೇವತೆಯನ್ನು ತ್ರಯೀ ವಿದ್ಯೆಗಳ ಮೂಲಕ ಅಂದರೆ ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿ ಎಂದು ವಿಭಾಗ ಮಾಡಿ ಪುತ್ರರೂಪದಲ್ಲಿ ಸ್ವೀಕರಿಸಿದನು. ನಂತರ ಊರ್ವಶಿ ಲೋಕಕ್ಕೆ ಮರಳಲು ಈ ಮೂರು ಅಗ್ನಿಗಳಿಂದ ಅರ್ವದೇವ ಸ್ವರೂಪನಾದ, ಇಂದ್ರಿಯಾತೀತ ಯಜ್ಞಪತಿ ಭಗವಾನ್ ಶ್ರೀಹರಿಯನ್ನು ಕುರಿತು ಯಜ್ಞಮಾಡಿದನು. ನಂತರ ಊರ್ವಶಿ ಲೋಕಕ್ಕೆ ಪುರೂರವನನ್ನು ಭಗವಾನ್ ಶ್ರೀಹರಿಯು ಕಳುಹಿಸಿಕೊಟ್ಟನು. ಹೀಗಾಗಿ ತ್ರೇತಾಯುಗದ ಹಿಂದೆ ಅಂದರೆ ಸತ್ಯಯುಗದಲ್ಲಿ ಏಕಮಾತ್ರ ಪ್ರಣವ ಅಂದರೆ " ಓಂ ಕಾರವು ವೇದವಾಗಿದ್ದಿತು. 'ನಾರಾಯಣ' ಎಂಬ ಒಂದೇ ದೈವವಿದ್ದಿತ್ತು. ಮತ್ತಾರೂ ಇರಲಿಲ್ಲ. ಅಗ್ನಿಯೂ ಮೂರಿರಲಿಲ್ಲ. ಒಂದೇ ಇದ್ದಿತ್ತು. ವರ್ಣವೂ (ಬಣ್ಣ) ಸಹ ಏಕಮಾತ್ರ ಹಂಸ ಅಂದರೆ ಬಿಳಿಯ ಬಣ್ಣವಿದ್ದಿತು.

**ಏಕ ಏಕ ಪುರಾ ವೇದಃ ಪ್ರಣವಃ ಸರ್ವ ವಾಙ್ಮಯಃ ।**
**ದೇವೋ ನಾರಾಯಣೋ ನಾನ್ಯಃ ಏಕೋಗ್ನಿರ್ವರ್ಣ ಏವಚ ॥**

(ವಿ.ಪು. 2ನೇಸಂ ಚತುರ್ಥಂಶ 6ನೇಅಧ್ಯಾಯ ಕೊನೆಯ2 ಶ್ಲೋಕ)

ಹೀಗಾಗಿ ಈ ವೈವಸ್ವತ ಮನ್ವಂತರದಲ್ಲಿ ತ್ರೇತಾಗ್ನಿ ಉಂಟಾದುವು. ಇಂದಿಗೂ ಯಜ್ಞಯಾಗಾದಿ ತ್ರೇತಾಗ್ನಿಯನ್ನು ಸ್ಥಾಪಿಸುವ ಪರಿಪಾಠವಿದೆ.

## ಪುರೂರವನ ವಂಶದಲ್ಲಿ ಜಹ್ನುವಿನ ಉತ್ಪತ್ತಿ

ರಾಜಾ ಪುರೂರವನಿಗೆ ಆಯು. ಅಮಾವಸು, ವಿಶ್ವಾವಸು, ಶ್ರುತಾಯು, ಶತಾಯು, ಆಯುತಾಯು ಎಂಬ ಆರು ಮಂದಿ ಪುತ್ರರು ಜನಿಸಿದರು. ಅಮಾವಸುವಿಗೆ ಭೀಮನೆಂಬ ಪುತ್ರ ಜನಿಸಿದನು. ಭೀಮನಿಗೆ ಕಾಂಚನನೆಂಬುವನೂ, ಅವನಿಗೆ ಸುಹೋತ್ರನೆಂಬ ಪುತ್ರನೂ, ಸುಹೋತ್ರನಿಗೆ ಜಹ್ನುವು ಜನಿಸಿದನು. ಈ ಜಹ್ನುವೇ (ಭಗೀರಥನು ತಂದಿದ್ದ) ಗಂಗಾಜಲದಿಂದ ತನ್ನ ಯಜ್ಞಶಾಲೆಯು ತುಳುಕಿ ಹೋದುದನ್ನು ಕಂಡು ಕೋಪಾವಿಷ್ಟನಾಗಿ ಭಗವಾನ್ ಯಜ್ಞಪುರುಷನನ್ನೇ ಪರಮ ಸಮಾಧಿಯಿಂದ ತನ್ನಲ್ಲಿ ಆವಾಹಿಸಿಕೊಂಡು ಸಮಸ್ತ ಗಂಗಾಜಲವನ್ನು ಕುಡಿದುಬಿಟ್ಟನು. ನಂತರ ದೇವರ್ಷಿಗಳು ಜಹ್ನು ಮಹರ್ಷಿಯನ್ನು ಸಮಾಧಾನಪಡಿಸಿ ಗಂಗೆಯು ಆತನ ಪುತ್ರಿಯಂತೆ ಆಗಲೆಂದು ವ್ಯವಸ್ಥೆ ಮಾಡಿದರು. ಆದ್ದರಿಂದ ಗಂಗೆಗೆ ಜಾಹ್ನವಿ ಎಂಬ ಹೆಸರಾಯಿತು. ಸುಮಂತುವಿಗೆ ಅಜಕ, ಅಜಕನಿಗೆ ಬಲಾಕಶ್ಯ, ಬಲಾಕಶ್ಯನಿಗೆ ಕುಶನೆಂಬ ಪುತ್ರ, ಕುಶನಿಗೆ ಕುಶಾಂಬ, ಕುಶನಾಭ, ಅಧೂರ್ತ, ರಜವಸು ಎಂಬ ನಾಲ್ವರು ಮಕ್ಕಳು ಜನಿಸಿದರು. ಇವರಲ್ಲಿ ಕುಶಾಂಬು ಎಂಬುವನು ತನಗೆ ದೇವೇಂದ್ರ ಸಮಾನನಾದ ಪುತ್ರನು ಜನಿಸಲೆಂದು ತಪಸ್ಸು ಮಾಡಿದನು. ಅವನ ಉಗ್ರವಾದ ತಪಸ್ಸನ್ನು ಪರ್ಯಾಲೋಚಿಸಿದ ದೇವೇಂದ್ರನು ನಮಗೆ ಸಮಾನರಾದ ಇನ್ನೊಬ್ಬ ವೀರನೇ ಇರಬಾರದು ಎಂದು ನಿಶ್ಚಯಿಸಿ ತಾನೇ ಆತನಿಗೆ ಮಗನಾಗಿ ಅವತರಿಸಿದನು. ಆತನೇ ಗಾಧಿ. ಕುಶವಂಶದಲ್ಲಿ ಜನಿಸಿದುದರಿಂದ ಇವನು ಕೌಶನೆಂದು ಪ್ರಖ್ಯಾತನಾದನು. ಈ ಗಾದಿಯು ಸತ್ಯವತಿ ಎಂಬ ಮಗಳನ್ನು ಪಡೆದನು. ಸತ್ಯವತಿಯು ವಿಶ್ವಾಮಿತ್ರರ ಅಕ್ಕ. ಭೃಗುವಂಶದ ಋಚೀಪನೆಂಬ ಬ್ರಾಹ್ಮಣನು ಸತ್ಯವತಿಯನ್ನು ಮದುವೆಯಾಗಲು ಇಚ್ಛಿಸಿದನು. ಆದರೆ ಆ ಋಚೀಕನಾದರೋ ಅತ್ಯಂತ ಕೋಪಿಷ್ಠನೂ, ವೃದ್ಧನೂ ಆಗಿದ್ದರಿಂದ ಬ್ರಾಹ್ಮಣನ ಶಾಪಕ್ಕೆ ಒಳಗಾಗುವುದು ಅವನಿಗೆ ಇಷ್ಟವಿರಲಿಲ್ಲ. ಆದ್ದರಿಂದ

ಒಂದು ಷರತ್ತನ್ನು ಒಡ್ಡಿದನು. ಅದೇನೆಂದರೆ ಚಂದ್ರನಂತೆ ಬಿಳುಪಾದ ಮೈಬಣ್ಣ, ವಾಯುವಿನಂತೆ ವೇಗಶಾಲಿಯಾದ ಒಂದು ಕಿವಿ ಮಾತ್ರ ಕಪ್ಪಾಗಿರುವ ಒಂದು ಸಾವಿರ ಕುದುರೆಗಳನ್ನು ಕನ್ಯಾಶುಲ್ಕವಾಗಿ ಕೊಡಬೇಕೆಂದು ಕೇಳಿದನು. ಆಗ ಋಚೀಕ ಮುನಿಯು ಅಶ್ವತೀರ್ಥದಲ್ಲಿ ಉದ್ಭವಿಸಿದ ಅಂತಹ ಸಾವಿರ ಕುದುರೆಗಳನ್ನು ವರುಣದೇವನಿಂದ ಪಡೆದುಕೊಟ್ಟು ಗಾಧಿಯ ಪುತ್ರಿ ಸತ್ಯವತಿಯನ್ನು ವರಿಸಿದನು. ನಂತರ ಸತ್ಯವತಿಗೆ ಸಂತಾನವಾಗಲೆಂದು ಮಂತ್ರಪೂರಿತವಾದ ಒಂದು ಚರುವನ್ನು ಅಭಿಮಂತ್ರಿಸಿ ಸಿದ್ಧಪಡಿಸಿದನು. ಅಂತೆಯೇ ಮತ್ತೊಂದು ಚರುವನ್ನು ಸತ್ಯವತಿಯ ತಾಯಿಗೋಸ್ಕರ ಸಿದ್ದಪಡಿಸಿದನು. ಕಾರಣವೇನೆಂದರೆ ಅವಳಿಗೆ ಪುತ್ರ ಸಂತಾನವಿರಲಿಲ್ಲ. ಸತ್ಯವತಿಯೇ ತನ್ನ ತಾಯಿಗೆ ಪುತ್ರಸಂತಾನವಾಗಲೆಂದು ಚರುವನ್ನು ಅಭಿಮಂತ್ರಿಸಿ ಕೊಡಬೇಕೆಂದು ಪ್ರಾರ್ಥಿಸಿದಳು. ಅವಳ ಬೇಡಿಕೆಗೆ ತಕ್ಕಂತೆ ಅವಳ ತಾಯಿಗೆ ಕ್ಷತ್ರಿಯೋತ್ತಮನಾದ ಪುತ್ರನು ಲಭಿಸಲೆಂದು ಋಚೀಕನು ಮತ್ತೆ ಚರುವನ್ನು ಸಿದ್ಧಪಡಿಸಿ "ಈ ಚರುವನ್ನು ನೀನೂ, ಮತ್ತೊಂದು ಚರುವನ್ನು ನಿನ್ನ ತಾಯಿಯೂ ಶ್ರದ್ಧೆಯಿಂದ ಸೇವಿಸಬೇಕು" ಎಂದು ಹೇಳಿ ತನ್ನ ಮಡದಿ ಸತ್ಯವತಿಗೆ ತಿಳಿಸಿ ಕಾರ್ಯ ನಿಮಿತ್ತವಾಗಿ ಕಾಡಿಗೆ ಹೋದನು. ಇತ್ತ ವಿಪರ್ಯಾಸ ಒಂದು ಕಾದಿದ್ದಿತು. ಹೆಂಗಸರು ಯಾವಾಗಲೂ ಕಿತಾಪತಿ ಬುದ್ಧಿಯುಳ್ಳವರು ಅಲ್ಲವೇ? ಆ ಎರಡು ಚರುಗಳನ್ನು ಸೇವಿಸುವ ಸಮಯದಲ್ಲಿ ತಾಯಿಯು ಸತ್ಯವತಿಯನ್ನು ಕುರಿತು "ಎಲೈ ಎಲ್ಲರೂ ತಮ್ಮ ಮಗ ಗುಣಶಾಲಿಯಾಗಲೆಂದು ಬಯಸುವರು. ತಮ್ಮ ಹೆಂಡತಿಯ ಸಹೋದರ ಗುಣಗಳ ವಿಷಯದಲ್ಲಿ ಅವರಿಗೆ ಅಷ್ಟು ಅಕ್ಕರೆ, ಆದರ ಇರುವುದಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. (ಸತ್ಯವತಿಯು ವಿಶ್ವಾಮಿತ್ರರ ಅಕ್ಕ ಎಂದು ಈಗಾಗಲೇ ತಿಳಿಸಲಾಗಿದೆ) ಆದ್ದರಿಂದ ನಿನ್ನ ಚರುವನ್ನು ನನಗೆ ಕೊಡು ಹುಟ್ಟಿದ ಮಗನಿಗೆ ಅಖಿಲ ಭೂಮಂಡಲವನ್ನು ಪಾಲಿಸುವ ಹೊಣೆಗಾರಿಕೆ ಇರುತ್ತದೆ. ಬ್ರಾಹ್ಮಣನಿಗೆ ಬಲ, ಶೌರ್ಯ, ವೀರ್ಯ ಸಂಪತ್ತುಗಳಿಂದ ಏನು ಪ್ರಯೋಜನ?. ಆದ್ದರಿಂದ ನಾನು ನಿನಗೆ ಕೊಟ್ಟ ಚರುವನ್ನು ಸೇವಿಸುತ್ತೇನೆ ಅದನ್ನು ಕೊಡು ಎಂದು ಕೇಳಿದಳು. ಸತ್ಯವತಿಯು ತಾಯಿಯ ಮಾತಿಗೆ ಒಪ್ಪಿ ತಾನು ಸೇವಿಸಬೇಕಾದ

ಚರುವನ್ನು ತಾಯಿಗೆ ಕೊಟ್ಟು ತಾಯಿಗೆ ಅಭಿಮಂತ್ರಿಸಿ ಕೊಟ್ಟಿದ್ದ ಚರುವನ್ನು ತಾನೇ ಕುಡಿದಳು. ಋಷಿಯು ನೋಡಿದರು. ಕ್ಷಣಮಾತ್ರದಲ್ಲಿ ಎಲ್ಲವು ಅರ್ಥವಾಯಿತು. ಪತ್ನಿಯನ್ನು ದಿಟ್ಟಿಸಿ ನೋಡಿ "ಎಲೈ ಪಾಪಿಷ್ಠೆ, ಇದೆಂತಹ ಆಭಾಸದ ಕೆಲಸವಾಗಿ ಹೋಯಿತು. ನಿನ್ನ ದೇಹವು ಅತ್ಯಂತ ಭೀಕರವಾಗಿ ಗೋಚರಿಸುತ್ತಿದೆ. ನಿನ್ನ ತಾಯಿಗೋಸ್ಕರ ಸಿದ್ಧಪಡಿಸಿದ ಚರುವನ್ನು ನೀನೇ ಸೇವಿಸಿರಬೇಕು. ಇದು ತಪ್ಪು. ನಿನ್ನ ತಾಯಿಯ ಚರುವಿನಲ್ಲಿ ನಾನು ಸಮಸ್ತ ಐಶ್ವರ, ಶೌರ್ಯ, ವೀರ್ಯ, ಬಲ ಸಂಪತ್ತುಗಳನ್ನು ಸಮಾವೇಶಗೊಳಿಸಿದ್ದೆ. ನಿನ್ನ ಚರುವಿನಲ್ಲಿ ಬ್ರಾಹ್ಮಣ ಯೋಗ್ಯವಾದ ಶಾಂತಿ, ಜ್ಞಾನ ತಿತಿಕ್ಷಾ ಮುಂತಾದ ಸಾತ್ವಿಕ ಗುಣ ಸಂಪತ್ತುಗಳನ್ನು ಸಮಾವೇಶಗೊಳಿಸಿದ್ದೆ. ಇದನ್ನು ತಲೆಕೆಳಗು ಮಾಡಿಬಿಟ್ಟೆಯೆಲ್ಲಾ ಪಾಪಿ ಎಂದನು. ಅಷ್ಟೇ ಅಲ್ಲ ಜಗತ್ತನ್ನೇ ಆಳುವ ಸಮರ್ಥನೂ, ಕ್ಷತ್ರಿಯೋಚಿತ ಸ್ವಭಾವದವನೂ ಆದ ಪುತ್ರನು ನಿನಗೆ ಜನಿಸುವನು. ನಿನ್ನ ತಾಯಿಗೆ ಉಪಶಾಂತನೂ ಆಚಾರನಿಷ್ಠನೂ ಆದ ಪುತ್ರನು ಜನಿಸುವನು ಎಂದು ಋಚೀಕಮುನಿ ಹೇಳಿದನು. ಈ ಮಾತನ್ನು ಕೇಳಿದೊಡನೆಯೇ ಗಂಡನ ಕಾಲಿಗೆ ಅಡ್ಡಬಿದ್ದು ನಮಸ್ಕರಿಸಿ ಅಜ್ಞಾನದಿಂದ ಈ ಕಾರ್ಯ ನಡೆದುಹೋಯಿತು. ನನ್ನ ಮಗ ಕ್ಷತ್ರಿಯಗುಣಯುಕ್ತನಾಗುವುದು ಬೇಡ. ಬೇಕಾದರೆ ಮೊಮ್ಮಗನು ಅಂತಹವನಾಗಲಿ ಎಂದು ಪ್ರಾರ್ಥಿಸಿದಳು. ಅದಕ್ಕೆ ಋಚೀಕಮುನಿಯು "ತಥಾಸ್ತು" ಎಂದು ನುಡಿದನು. ಋಷಿವಾಕ್‌ನಂತೆ ಸತ್ಯವತಿಯು ಜಮದಗ್ನಿಯೆಂಬ ಪುತ್ರವನ್ನು ಪಡೆದಳು. ಅವಳ ತಾಯಿಗೆ ವಿಶ್ವಾಮಿತ್ರನು ಪುತ್ರನಾಗಿ ಜನಿಸಿದನು. ಮುಂದೆ ಸತ್ಯವತಿಯೂ ಕೌಶಿಕಿಯೆಂಬ ನದಿಯಾದಳು. ಮುಂದೆ ಜಮದಗ್ನಿಯು ಇಕ್ಷ್ವಾಕು ವಂಶದಲ್ಲಿ ಜನಿಸಿದ ರೇಣುವಿನ ಮಗಳಾದ ರೇಣುಕೆಯನ್ನು ವಿವಾಹವಾದನು. ಅವಳಲ್ಲಿಯೇ ಸಮಸ್ತ ಕ್ಷತ್ರಿಯ ವಿಧ್ವಂಸಕನೂ ಸಕಲಲೋಕ ಗುರುವಾದ ಶ್ರೀಮನ್ನಾರಾಯಣನ ಅಂಶಸಂಭೂತನೂ ಆದ ಪರಶುರಾಮನು ಜಮದಗ್ನಿಯಲ್ಲಿ ಜನಿಸಿದನು. ಇತ್ತ ಭೃಗುವಂಶ ಸಂಭೂತನಾದ ಶುನಃಶ್ಶೇಪ ಎಂಬುವನು ವಿಶ್ವಾಮಿತ್ರನಿಗೆ ಪುತ್ರನಾಗಿ ದೇವತೆಗಳಿಂದ ದತ್ತವಾದನು. ಆದ್ದರಿಂದ ಅವನಿಗೆ ದೇವರಾತ ಎಂಬ ಹೆಸರಾಯಿತು. ಅವನಲ್ಲದೆ ವಿಶ್ವಾಮಿತ್ರನಿಗೆ ಮಧುಚ್ಛಂದ, ಧನಂಜಯ, ಕೃತದೇವ, ಅಷ್ಟಕ, ಕಚ್ಛಪ, ಹಾರೀತಕ ಎಂಬ ಔರಸಪುತ್ರರೂ ಇದ್ದರು.

ಮುಂದೆ ವಿಶ್ವಾಮಿತ್ರ ಹಾಗೂ ಜಮದಗ್ನಿಯ ಬಗ್ಗೆ ತಿಳಿದುಕೊಳ್ಳೋಣ. ಶುನಃಶ್ಶೇಪನು ಹೇಗೆ ದೇವರಾತನಾದನು ಎಂಬುದನ್ನು ಸಹ ತಿಳಿಯೋಣ.

## ಯಯಾತಿಯ ಚರಿತ್ರೆ

ನಹುಷ ಆಯುವಿನ ಪುತ್ರ, ಅವನಿಗೆ ಯತಿ, ಯಯಾತಿ, ಸಂಯಾತಿ, ಆಯಾತಿ, ವಿಯಾತಿ, ಕೃತಿ ಎಂಬ ಆರು ಮಂದಿ ಪುತ್ರರಿದ್ದರು. ಅವರೆಲ್ಲಾ ಬಹಳ ಬಲಶಾಲಿಗಳೂ ಪರಾಕ್ರಮಿಗಳೂ ಆಗಿದ್ದರು. ಅವರಲ್ಲಿ ಯತಿಯು ರಾಜ್ಯವನ್ನು ಅಪೇಕ್ಷಿಸಲಿಲ್ಲ. ಆದ್ದರಿಂದ ಯಯಾತಿಯು ರಾಜನಾದನು. ಶುಕ್ರನ ಪುತ್ರಿಯಾದ ದೇವಯಾನಿಯನ್ನು ವೃಷಪರ್ವನ ಮಗಳಾದ ಶರ್ಮಿಷ್ಠೆಯನ್ನು ಅವನು ಮದುವೆಯಾದನು.

**ಯದುಂ ಚತುರ್ವಸುಂ ಚೈವ ದೈವಯಾನೀ ವ್ಯಜಾಯತ ।**

**ದ್ರುಹ್ಯುಂ ಚಾನುಂಚ ಪೂರುಂಚ ಶರ್ಮಿಷ್ಠಾ ವಾರ್ಷಪರ್ವಣಿ ॥**

(ವಿ.ಪು.ಸ.2 ಚತುರ್ಥಾಂಶ ಅ.10 6ನೇ ಶ್ಲೋಕ)

ದೇವಯಾನಿಯು ಯದು ಮತ್ತು ತುರ್ವಸು ಎಂಬ ಪುತ್ರರನ್ನು ಪಡೆದಳು. ವೃಷಪೂರ್ವನ ಮಗಳಾದ ಶರ್ಮಿಷ್ಠೆಯು ದ್ಯುಹ್ನು, ಅನು, ಪುರು ಎಂಬುವರನ್ನು ಪಡೆದಳು. ಯಯಾತಿಯು ಶರ್ಮಿಷ್ಠೆಯಲ್ಲಿ ಹೆಚ್ಚು ಪ್ರೀತಿಯನ್ನು ತೋರಿಸುತ್ತಿದ್ದನು. ಆದರೆ ದೇವಯಾನಿಯನ್ನು ಪ್ರೀತಿಸುತ್ತಿರಲಿಲ್ಲವೆಂದು ಮಗಳೇ ತನ್ನ ತಂದೆಗೆ (ಶುಕ್ರ) ದೂರು ಹೇಳುತ್ತಿದ್ದಳು. ಇದನ್ನು ಕೇಳಿ ಶುಕ್ರನು ಯಯಾತಿಗೆ ಮುಪ್ಪು ಬರಲಿ ಎಂದು ಶಪಿಸಿದನು. ಯಯಾತಿಯು ಬೇಡಿಕೊಂಡ ನಂತರ ಆ ಮುಪ್ಪನ್ನು ಇನ್ನೊಬ್ಬರಿಗೆ ಕೊಟ್ಟು ಯೌವನವನ್ನು ಪರಿವರ್ತಿಸಿಕೊಳ್ಳಬಹುದೆಂದು ಶಾಪಕ್ಕೆ ಪರಿಹಾರವನ್ನು ನೀಡಿದನು. ಅಂತೂ ಶುಕ್ರನ ಶಾಪದಿಂದ ಯಯಾತಿಗೆ ಅಕಾಲದಲ್ಲಿಯೇ ಮುಪ್ಪು ಬಂದಿತು. ಅನಂತರ ಪ್ರಸನ್ನನಾದ ಶುಕ್ರನ ವಚನದಂತೆ ತನ್ನ ಮುಪ್ಪನ್ನು ಹಿರಿಯ ಮಗನಾದ ಯದುವಿಗೆ ಕೊಟ್ಟು ಪರಿವರ್ತಿಸಿಕೊಳ್ಳಲು

ಯದುವನ್ನು ಕೇಳಿದನು. ಆದರೆ ಯದುವು ಇದಕ್ಕೆ ಒಪ್ಪಲಿಲ್ಲ ಆಗ ತಂದೆಯು ಎಲೈ ಯದುವೇ "ನಿನ್ನ ಸಂತತಿಯು ರಾಜಪದವಿಯನ್ನು ಅನುಭವಿಸಲು ಅರ್ಹವಾಗದೇ ಹೋಗಲಿ ಎಂದು ಶಪಿಸಿದನು. ಇನ್ನಿತರ ಮಕ್ಕಳಾದ ತುರ್ವಸು, ದ್ರುಹ್ಯ, ಅನು ಇವರನ್ನು ಕುರಿತು ಯೌವನವನ್ನು ಕೊಟ್ಟು ತನ್ನ ಮುಪ್ಪನ್ನು ಸ್ವೀಕರಿಸಬೇಕೆಂದು ಕೇಳಿಕೊಂಡನು. ಅವರೆಲ್ಲರೂ ತಂದೆಯ ಕೋರಿಕೆಯನ್ನು ತಿರಸ್ಕರಿಸಿದರು. ಅವರೆಲ್ಲರನ್ನು ಯಯಾತಿಯು ಶಪಿಸಿದನು. ಅನಂತರ ಶರ್ಮಿಷ್ಠೆಯ ಮಗನಾದ ಎಲ್ಲರಿಗಿಂತ ಕಿರಿಯವನಾದ ಪುರುವನ್ನು ಕಂಡು ಹಿಂದಿನಂತೆಯೇ ತನ್ನ ಬೇಡಿಕೆಯನ್ನು ಮುಂದಿಟ್ಟನು. ಪುರುವೋ ಅತ್ಯಂತ ವಿನಯಶಾಲಿಯಾಗಿದ್ದನು. ಇದು ನನಗೆ ಅನುಗ್ರಹಿಸಿದ ದೊಡ್ಡ ಪ್ರಸಾದವೇ ಸರಿ ಎಂದು ಹೇಳಿ ತಂದೆಯ ಮುಪ್ಪನ್ನು ಸ್ವೀಕರಿಸಿದನು. ಇದೆಂತಹ ವಿಚಿತ್ರ ನೋಡಿ ಇದನ್ನು ಭಗವಂತನ ಲೀಲೆಯೆಂದೇ ಭಾವಿಸೋಣವೇ? ಯಯಾತಿಯು ಪುರುವಿನ ತಾರುಣ್ಯ ಪಡೆದು. ವಿಷಯ ಭೋಗಗಳನ್ನು ಯಥೇಚ್ಛವಾಗಿ ಅನುಭವಿಸಿದನು. ಪ್ರಜಾಪಾಲನೆಯ ಕಾರ್ಯವನ್ನು ದಕ್ಷತೆಯಿಂದ ನಡೆಸಿದನು. ವಿಶ್ವಾಚಿಯೆಂಬ ಅಪ್ಸರೆಯೊಡನೆಯೂ, ದೇವಯಾನಿಯೊಡನೆಯೂ. ಸೇರಿ ನಾನಾ ಭೋಗಗಳನ್ನು ಅನುಭವಿಸುತ್ತ ಇಂದು ನನ್ನ ಆಸೆಗಳನ್ನು ಮುಗಿಸಿಬಿಡುತ್ತೇನೆ ಎಂದುಕೊಂಡು ಭೋಗಸುಖಕ್ಕಾಗಿ ಹಾತೊರೆಯುತ್ತಿದ್ದನು. ಭೋಗವನ್ನು ಅನುಭವಿಸುತ್ತಲೇ ಈ ಕಾಮಸುಖವು ಅತಿರಮ್ಯವೆಂದು ತಿಳಿಯುತ್ತ ಹೋದನು. ಹೀಗಿರಲಾಗಿ ಒಮ್ಮೆ ಅವನ ಮನದಲ್ಲಿ ಯೋಚನಾತರಂಗಗಳು ಏಳಲು ಆರಂಭಿಸಿದವು. ಮನಃ ಪರಿವರ್ತನೆಯ ಕಾಲ ಸನ್ನಿಹಿತವಾಯಿತು.

**ನ ಜಾತು ಕಾಮಃ ಕಾಮಾನಾಮುಪ ಭೋಗೇನ ಶಾಮ್ಯ ತಿ**

**ಹವಿಷಾ ಕೃಷ್ಣ ವರ್ತ್ಮೇವ ಭೂಯ ಏವಾಭಿವೃದ್ಧತೇ**

**ಯತ್ಪೃಥಿವಾ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯ**

**ಏಕಸ್ಯಾಪಿ ನಪರ್ಯಾಪ್ತಂ ತಸ್ಮಾತೃಷ್ಣಾಂ ಪರಿತ್ಯಜೇತ್**

**ಯಾದಾನ ಕುರುತೇ ಭಾವಂ ಸರ್ವಭೂತೇಷು ಪಾಪಕಮ್**

**ಸಮದೃಷ್ಟೇಸ್ತದಾ ಪುಂಸಃ ಸರ್ವಾಸ್ಸು ಖಮಯಾದಿಶ**

**ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ**

**ತಾಂ ತೃಷಾಂ ಸಂತ್ಯಜೇತ್ ಪ್ರಾಜ್ಞಸ್ಸುಖೇನೈವಾಭಿಪೂರ್ಯತೇ**

**ಜೀರ್ಯಂತಿ ಜೀರ್ಯತಃ ಕೇಶಾ ದಂತಾ ಜೀಯಂತಿ ಜೀರ್ಯತಃ**

**ಧನಾಶಾ ಜೀವಿತಾಶಾ ಚ ಜೀರ್ಯತೋಪಿ ನ ಜೀರ್ಯತಿ**

(ವಿ.ಪು. 2ಸಂ ಚ ಅಂ ಅಧ್ಯಾರ್ಯ 10ನೇ ಶ್ಲೋಕ 23 ರಿಂದ)

ಆಸೆಗಳ ಉಪಭೋಗದಿಂದ ಎಂದೆಂದಿಗೂ ಈ ಆಸೆಯು ಶಾಂತವಾಗುವುದಿಲ್ಲ. ಬೆಂಕಿಗೆ ತುಪ್ಪವನ್ನು ಸುರಿದಂತೆ ಇದು ಮತ್ತೆ ಮತ್ತೆ ಬೆಳೆಯುತ್ತಲೇ ಹೋಗುತ್ತದೆ. ಈ ಜಗತ್ತಿನಲ್ಲಿರುವ ಎಲ್ಲ ಭತ್ತ, ಗೋಧಿ, ಕಾಳುಕಡ್ಡಿ, ಚಿನ್ನ, ಪಶು, ಸ್ತ್ರೀ ಇವೆಲ್ಲವೂ ಒಬ್ಬನಿಗೆ ಇದ್ದರೂ ಸಹ ತನಗೆ ಸಾಲದು ಎಂದು ಭಾವಿಸುತ್ತಾನೆ. ಆದ್ದರಿಂದ ಆಸೆಯನ್ನು ತೊರೆಯಬೇಕು. ಯಾವಾಗ ಮಾನವನು ಸಕಲ ಭೂತಗಳಲ್ಲಿ ಒಳ್ಳೆಯ ಭಾವನೆಯನ್ನು ತಳೆಯುವನೋ ಆಗ ಸಮದೃಷ್ಟಿಯುಳ್ಳವನಾಗುತ್ತಾನೆ. ಆತನಿಗೆ ಸಕಲ ದಿಕ್ಕುಗಳು ಸುಖಮಯವಾಗಿ ಪರಿಣಮಿಸುತ್ತದೆ. ಆಸೆಯನ್ನು ತೊರೆದವನು ಸುಖದಿಂದ ಪರಿಪೂರ್ಣನಾಗುತ್ತಾನೆ. ವಯಸ್ಸಾದಂತೆ ತಲೆಕೂದಲುಗಳು ಜೀರ್ಣವಾಗಿ ಉದುರುತ್ತವೆ, ಹಲ್ಲುಗಳು ಸಡಿಲವಾಗುತ್ತವೆ. ದೇಹವೂ ಜೀರ್ಣವಾದರೂ ಹಣದ ಆಸೆ, ಬದುಕುವ ಆಸೆ ಇವೆರಡೂ ಮಾತ್ರ ಜೀರ್ಣವಾಗುವುದಿಲ್ಲ ಎಂದು ತನ್ನ ಬಗ್ಗೆಯೇ ತಾನು ನಿಂದಿಸಿಕೊಳ್ಳುತ್ತಾನೆ. ಇದು ಇತರರಿಗೂ ಉಪದೇಶ ವಾಕ್ಯಗಳೇ ಆಗುತ್ತದೇ ಅಲ್ಲವೇ ಈ ಸಂದರ್ಭದಲ್ಲಿ. "ಆರು ಹಿತವರು ನಿನಗೆ ಈ ಮೂವರೊಳಗೆ ನಾರಿಯೋ ಧಾರುಣಿಯೋ, ಬಲುಧನದ ಸಿರಿಯೋ" ಎಂಬ ಪುರಂದರದಾಸರ ಅನುಭವವಾಣಿ ನೆನಪಿಗೆ ಬರುತ್ತದೆ ಅಲ್ಲವೇ? ಹೀಗೆಲ್ಲಾ ಯೋಚಿಸಿ ಯಯಾತಿಯು "ನಾನು ಈ ಆಸೆಯನ್ನು ಒದ್ದೋಡಿಸಿ ಭಗವಂತನಲ್ಲಿ ಮನಸ್ಸನ್ನು ನೆಲೆಗೊಳಿಸುತ್ತೇನೆ. ಸುಖದುಃಖಾದಿ ದ್ವಂದ್ವಗಳಿಂದ ದೂರನಾಗಿ, ಮಮಕಾರವನ್ನು ಪರಿತ್ಯಜಿಸಿ ಕಾಡಿನಲ್ಲಿ ಮೃಗಗಳ ಜೊತೆಯಲ್ಲಿಯೇ ಕಾಲಕಳೆಯುವೆನು ಎಂದು ನಿಶ್ಚಯಿಸಿದನು. ಅನಂತರ ಪುರುವಿನಿಂದ ಮುಪ್ಪನ್ನು ಹಿಂದಕ್ಕೆ ತೆಗೆದುಕೊಂಡು ತಾರುಣ್ಯವನ್ನು ಅವನಿಗೆ ಒಪ್ಪಿಸಿ

ಪುರುವಿಗೆ ತನ್ನ ರಾಜ್ಯವನ್ನು ಕೊಟ್ಟು ಪಟ್ಟಾಭಿಷೇಕ ಮಾಡಿ ವನವಾಸಕ್ಕೆ ಹೊರಟುಹೋದನು. ಹೀಗೆ ವಿಷಯ ಲಂಪಟನಾದ ಯಯಾತಿಯು ಭಗವಧ್ಯಾನಪರನಾದನು. ಭಗವಂತನ ಧ್ಯಾನವೇ ಮುಕ್ತಿಗೆ ಸಾಧನವಲ್ಲವೇ

## ಶುನಃಶೇಪ ದೇವರಾತನಾದ ಬಗೆ

### ಅಂಬರೀಷನ ನರಯಜ್ಞ ವಿಶ್ವಾಮಿತ್ರರು ಶುನಃಶೇಪನನ್ನು ರಕ್ಷಿಸಿದುದು.

ನಮ್ಮೆಲ್ಲರಿಗೂ ಮಹಾಭಕ್ತನಾದ ಅಂಬರೀಷನ ಕಥೆ ತಿಳಿದೇ ಇದೆ. ಅಂಬರೀಷ ಶ್ರೀರಾಮಚಂದ್ರನ ಪೂರ್ವಜ. ಒಮ್ಮೆ ದೂರ್ವಾಸರು ರಾಜನ ದ್ವಾದಶಿ ಪಾರಣೆಯ ವೇಳೆಗೆ ಬಂದು ಆತನಿಗೆ ಏಕಾದಶಿ ವ್ರತಭಂಗ ಮಾಡಲು ಯತ್ನಿಸಿದಾಗ ಸುದರ್ಶನ ಚಕ್ರವು ಅವರನ್ನು ಬೆನ್ನಟ್ಟಿ ಕೊನೆಗೆ ಅವರು ಮಹಾವಿಷ್ಣುವನ್ನು ಶರಣಾಗಬೇಕಾಯಿತು ಎಂಬ ಕಥೆ ಜನಜನಿತವಾಗಿದೆ.

**ಈಗ ಅಂಬರೀಷನು ನರಮೇಧಯಾಗವನ್ನು ಮಾಡಿದ ಪ್ರಸಂಗವನ್ನು ತಿಳಿಯೋಣ ಇದು ಶ್ರೀಮದ್ರಾಮಾಯಣದಲ್ಲಿ ಬರುತ್ತದೆ**

(ರಾಮಾಯಣ ಬಾಲಕಾಂಡ 61,62 ನೇ ಸರ್ಗ). ಒಮ್ಮೆ ವಿಶ್ವಾಮಿತ್ರರು ಪಶ್ಚಿಮ ದಿಕ್ಕಿನತ್ತ ಹೋಗಿ ಅಲ್ಲಿದ್ದ ಪುಷ್ಕರತೀರ್ಥ ಎಂಬಲ್ಲಿ ತಂಗಿ ತಪೋನಿರತರಾದರು. ಇದೇ ಸಮಯದಲ್ಲಿ ಅಯೋಧ್ಯಾಧಿಪತಿಯಾದ ಅಂಬರೀಷನು ಒಂದು ಯಾಗವನ್ನು ಆರಂಭಿಸಿದನು. ಅವನ ಯಜ್ಞವನ್ನು ಹಾಳುಮಾಡಲು ಯಜ್ಞಪಶುವನ್ನು ಇಂದ್ರನು ಅಪಹರಿಸಿದನು. ಆಗ ಪುರೋಹಿತರು "ಯಜ್ಞಪಶುವನ್ನು ಯಾರೋ ಅಪಹರಿಸಿದ್ದಾರೆ. ಇದಕ್ಕೆ ನಿನ್ನ ಅಜಾಗರೂಕತೆಯೇ ಕಾರಣ ಎಂದು ರಾಜನನ್ನು ದೂಷಿಸಿ ಇದಕ್ಕೆ ಬಹಳ ದೊಡ್ಡ ಪ್ರಾಯಶ್ಚಿತ್ತವಾಗಬೇಕಾಗಿದೆ. ಕರ್ಮಕಾಲಕ್ಕೆ ಸರಿಯಾಗಿ ಆ ಯಜ್ಞಪಶು ಸಿಗದಿದ್ದಲ್ಲಿ ನರಪಶುವನ್ನಾದರೂ ನೀನು ತರಬೇಕು ಎಂದು ಹೇಳಿದರು. ಆಗ ಅಂಬರೀಷನು ಸಾವಿರಾರು ಗೋವುಗಳಿಗೆ ಪ್ರತಿಯಾಗಿ ಯಜ್ಞ ಪಶುವಾಗಲು ಒಬ್ಬ ಮನುಷ್ಯನನ್ನು ಪಡೆಯಲು ಸಾಧ್ಯವೇ ಎಂದು ಹುಡುಕುತ್ತಾ ಹೊರಟನು. ಅವನು ನಾನಾ ದೇಶಗಳನ್ನು, ನಗರಗಳನ್ನು, ಅರಣ್ಯಗಳನ್ನು, ಪುಣ್ಯಾಶ್ರಮಗಳನ್ನು ಅರಸುತ್ತಾ ಭೃಗುತುಂಗ ಎಂಬ ಪರ್ವತ

ಶಿಖರಕ್ಕೆ ಬಂದನು. ಅಲ್ಲಿ ಋಚೀಕನೆಂಬ ಬ್ರಹ್ಮರ್ಷಿ ತಪಸ್ಸನ್ನು ಆಚರಿಸುತ್ತಿದ್ದ. ಋಷಿಗಳಿಗೆ ತಾನು ಬಂದ ಉದ್ದೇಶವನ್ನು ತಿಳಿಸಿದನು. ಅವರನ್ನು ಕುರಿತು ಎಲ್ಲ ದೇಶಗಳಲ್ಲಿ ಹೋಗಿ ನೋಡಿದರೂ ಯಜ್ಞಪಶು ಸಿಗಲಿಲ್ಲ. ನೀವು ನಿಮ್ಮ ಪುತ್ರರಲ್ಲಿ ಯಾರನ್ನಾದರೂ ಮಾರುವುದಾದರೆ ಒಂದು ಲಕ್ಷ ಗೋವುಗಳನ್ನು ಕೊಡುತ್ತೇನೆ ಎಂದನು. ಆಗ ಋಚೀಕ ಮುನಿಯು 'ಮಹಾರಾಜ ನಾನು ಹಿರಿಯ ಮಗನನ್ನು ವಿಕ್ರಯಿಸಲಾರೆ (ಮಾರುವುದಿಲ್ಲ) ಎಂದನು. ಅಷ್ಟರಲ್ಲಿ ಋಚೀಕ ಪತ್ನಿಯು ನಾನು ಕಿರಿಯ ಮಗನನ್ನು ಮಾರುವುದಿಲ್ಲವೆನ್ನುತ್ತಾಳೆ. ಆಗ ಮಧ್ಯಮ ಪುತ್ರನಾದ ಶುನಃಶೇಪನು ತಾನಾಗಿಯೇ ಮುಂದೆ ಬಂದು "ಮಹಾರಾಜ ನನ್ನ ತಂದೆಯು ಹಿರಿಯ ಮಗನನ್ನು ಮಾರುವುದಿಲ್ಲ ಎನ್ನುತ್ತಾನೆ. ನನ್ನ ತಾಯಿಯು ಕಿರಿಯ ಮಗನನ್ನು ಮಾರುವುದಿಲ್ಲ ಎನ್ನತ್ತಾಳೆ. ನಡುವಿನ ಮಗನಾದ ನನ್ನನ್ನು ಇವರು ಒಟ್ಟಿನಲ್ಲಿ ಮಾರಿದರೆಂದೇ ನಾನು ತಿಳಿಯುತ್ತೇನೆ. ರಾಜ ನನ್ನನ್ನು ಕರೆದುಕೊಂಡು ಹೋಗು ಎಂದನು. ನಂತರ ಅಂಬರೀಷನು ಋಚೀಕ ಮಹರ್ಷಿಗೆ ಬಂದು ಲಕ್ಷ ಗೋವುಗಳನ್ನು ಹಾಗೂ ಒಂದು ಕೋಟಿ ಸುವರ್ಣ ನಾಣ್ಯಗಳನ್ನು, ರತ್ನ ರಾಶಿಗಳನ್ನು ಸಮರ್ಪಿಸಿದನು. ಅವನು ಶುನಃಶೇಪನನ್ನು ರಥದ ಮೇಲೆ ಕುಳ್ಳಿರಿಸಿಕೊಂಡು ತನ್ನ ನಗರದತ್ತ ಪಯಣಿಸಿದನು. ಹೀಗೆ ಕರೆದುಕೊಂಡು ಹೋಗುವಾಗ ರಾಜನು ಮಾರ್ಗಮಧ್ಯದ ಪುಷ್ಕರ ಕ್ಷೇತ್ರದಲ್ಲಿ ಒಂದು ಮಧ್ಯಾಹ್ನದಲ್ಲಿ ವಿಶ್ರಮಿಸಿಕೊಂಡನು. ಅಲ್ಲಿ ಶುನಃಶೇಪನಿಗೆ ವಿಶ್ವಾಮಿತ್ರ ಮುನಿಗಳ ದರ್ಶನವಾಯಿತು. (ವಿಶ್ವಾಮಿತ್ರರು ಶುನಃಶ್ಶೇಪನ ಸೋದರಮಾವ) ಅವರನ್ನು ಕಂಡಾಕ್ಷಣ ಶುನಃಶೇಪನಿಗೆ ದುಃಖ ಉಮ್ಮಳಿಸಿ ಅವನು ಬದುಕುವ ಹಂಬಲದಿಂದ ವಿಶ್ವಾಮಿತ್ರರ ಬಳಿಬಂದು ಮುನಿಗಳೇ ನನ್ನ ಪಾಲಿಗೆ ತಾಯಿ ಇಲ್ಲ. ತಂದೆ ಇಲ್ಲ. ಬಂಧು ಬಳಗವಿಲ್ಲ. ನೀವು ನನ್ನನ್ನು ಧರ್ಮದೃಷ್ಟಿಯಿಂದ ಕಾಪಾಡಬೇಕು. ಶರಣಾಗತರನ್ನು ರಕ್ಷಿಸುವವರು ನೀವೇ ತಾನೆ?. ಈ ಅಂಬರೀಶ ರಾಜನ ಕಾರ್ಯವೂ ನೆರವೇರಬೇಕು. ನನ್ನ ರಕ್ಷಣೆಯೂ ಆಗಿ ದೀರ್ಘಾಯುವಾಗಬೇಕು. ನಾನು ಬದುಕಿದ್ದರೆ ಶ್ರೇಷ್ಠವಾದ ತಪಸ್ಸನ್ನು ಆಚರಿಸಿ ಸದ್ಗತಿಯನ್ನು ಕಂಡುಕೊಳ್ಳುತ್ತೇನೆ. ದಿಕ್ಕಿಲ್ಲದ ನನಗೆ ನೀವೇ ದಿಕ್ಕು ಎಂದು ಪ್ರಾರ್ಥಿಸಿದನು. ನಿಮ್ಮ ಮಗನೆಂದು ತಿಳಿದು ನನ್ನನ್ನು ವಿಪತ್ತಿನಿಂದ ಪಾರುಮಾಡಿರಿ ಎಂದು ಗೋಳಾಡಿದನು.

**ತಸ್ಯತದ್ವಚನಂ ಶ್ರುತ್ವಾ ವಿಶ್ವಾಮಿತ್ರೋ ಮಹಾತಪಾ ಸಾಂತಯಿತ್ವಾ ಬಹುವಿಧಂ ಪುತ್ರಾನಿದ ಮುವಾಚಹ ಯತ್ಕೃತೇ ಪಿತರಃ ಪುತ್ರಾನ್ ಜನಯಂತಿಶುಭಾರ್ಥಿನಃ ಪರಲೋಕಹಿತಾರ್ಥಾಯ ತಸ್ಯ ಕಾಲೋಯಮಾಗತಃ ಅಯಂ ಮುನಿಸುತೋ ಬಾಲೋ ಮತ್ತಃ ಶರಣಮಿಚ್ಛತಿ ಅಸ್ಯ ಜೀವತ ಮಾತ್ರೇಣ ಪ್ರಿಯಂಕುರುತ ಪುತ್ರಕಾಃ ಸರ್ವೇ ಸುಕೃತಕರ್ಮಾಣ ಸರ್ವೇ ಧರ್ಮಪರಾಯಣಾಃ ಪಶುಭೂತಾ ನರೇಂದ್ರಸ್ಯ ತೃಪ್ತಿಮರ್ಗ್ನೇಃ ಪ್ರಯಚ್ಛತ**

(ರಾಮಾಯಣ ಬಾಲ ಸರ್ಗ 62 8 ರಿಂದ 11)

ಆಗ ವಿಶ್ವಾಮಿತ್ರ ಮುನಿಗಳು ಅವನಿಗೆ ಬಹುವಿಧದಿಂದ ಸಮಾಧಾನವನ್ನು ಹೇಳಿ ತಮ್ಮ ಮಕ್ಕಳನ್ನು ಕರೆದು "ಪುತ್ರರೇ ತಂದೆ ತಾಯಿಗಳು ಪರಲೋಕಹಿತಕ್ಕಾಗಿ ಸಂತಾನವನ್ನು ಬಯಸುತ್ತಾರೆ. ಅಂಥ ಸಂದರ್ಭ ಈಗ ಒದಗಿ ಬಂದಿದೆ. ಈ ಹುಡುಗ ಒಬ್ಬ ಮುನಿಪುತ್ರ ಈತನು ನನ್ನನ್ನು ಮೊರೆಹೊಕ್ಕಿದ್ದಾನೆ. ಮಕ್ಕಳೇ ಇವನಿಗೋಸ್ಕರ ಪ್ರಾಣವನ್ನು ಕೊಟ್ಟ ನನ್ನ ಮಾತನ್ನು ನಡೆಸಿಕೊಡಿ.

**ನಾಥವಾಂಶ್ಚ ಶುನಃ ಶೇಪೋ ಯಜ್ಞಶ್ವಾವಿಘ್ನಿತೋ ಭವೇತ್**
**ದೇವತಾಸ್ತರ್ಪಿತಾಶ್ಚ ಸ್ಯುರ್ಮಮ ಚಾಪಿಕೃತಂ ವಚ**

ರಾಮಾಯಣ ಬಾಲ 62 12ನೇ ಪದ್ಯ

**ಮುನೇಸ್ತುವಚನಂ ಶ್ರುತ್ವಾ ಮಧುಷ್ಯಂದಾಧಯಃ ಸುತಾಃ**
**ಸಾಭಿಮಾನಂ ನರ ಶ್ರೇಷ್ಠ ಸಲೀಲಮಿದ ಮಬ್ರುವನ್**

13ನೇ ಪದ್ಯ

ನೀವೆಲ್ಲರೂ ಪುಣ್ಯವಂತರು, ಧರ್ಮಪಾರಾಯಣರು, ನೀವು ಅಂಬರೀಷನ ಯಾಗದಲ್ಲಿ ಪಶುಗಳಾಗಿ ಅಗ್ನಿದೇವನನ್ನು ತೃಪ್ತಿಗೊಳಿಸಿರಿ. ಶುನಃಶೇಪನಿಗೆ ಅಭಯವನ್ನು ಕೊಟ್ಟು ರಕ್ಷಿಸತಕ್ಕವರು ಇದ್ದಾರೆ ಎಂದಾಗಲಿ, ಯಜ್ಞವೂ ನಿರ್ವಿಘ್ನವಾಗಿ ನೆರವೇರಲಿ. ದೇವತೆಗಳು ತೃಪ್ತರಾಗುವರು ಎಂದು ವಿಶ್ವಾಮಿತ್ರರು ಹೇಳಿದರು. ಈ ಮಾತನ್ನು ಕೇಳಿ ಮದುಷ್ಯಂದ

ಮುಂತಾದ ಅವರ ಪುತ್ರರು ಅಹಂಕಾರದಿಂದ ಗೇಲಿಮಾಡುತ್ತ ಸ್ವಾಮಿ ನಿಮ್ಮ ಮಕ್ಕಳನ್ನು ಬಲಿಕೊಟ್ಟು ಇನ್ನೊಬ್ಬರ ಮಗನನ್ನು ಕಾಪಾಡುತ್ತೀರಾ, ಇದು ಹೇಗೆಂದರೆ ಒಳ್ಳೆಯ ಆಹಾರವು ಕಣ್ಣುಮುಂದಿರುವಾಗ ಅದನ್ನು ಬಿಟ್ಟು ನಾಯಿ ಮಾಂಸವನ್ನು ತಿಂದಹಾಗೆ" ಎಂದು ಹೇಳಿಬಿಟ್ಟರು. ಅವರ ಮಾತನ್ನು ಕೇಳಿ ವಿಶ್ವಾಮಿತ್ರರು ನನ್ನೆದುರಿಗೆ ನಿರ್ಭಯವಾಗಿ ಇಂತಹ ಮಾತನ್ನಾಡುತ್ತೀರಾ, ನನ್ನ ಮಾತನ್ನು ಮೀರುವುದು ಧರ್ಮಬಾಹಿರ ಅಷ್ಟೇ ಅಲ್ಲ ಅಹಂಕಾರಿಗಳಾಗಿರುವಿರಿ ಎಂದು ವಿಶ್ವಾಮಿತ್ರರು ತಮ್ಮ ಮಕ್ಕಳಿಗೆ ಹೀಗೆ ಶಪಿಸಿದರು.

**ಶ್ವಮಾಂಸ ಭೋಜನಃ ಸರ್ವೇ ವಾಸಿಷ್ಠಾ ಇವ ಜಾತಿಷು**
**ಪೂರ್ಣಂ ವರ್ಷಸಹಸ್ರಂತು ಪ್ರಥಿವ್ಯಾ ಮನುವತ್ಸ್ಯಥ**

(ರಾಮಾಯಣ ಬಾಲ 62ನೇ ಸರ್ಗ 17ನೇ ಶ್ಲೋಕ)

ನೀವೂ ಆ ವಸಿಷ್ಠರ ಮಕ್ಕಳಂತೆ ಶ್ವಪಚರಾಗಿ ಒಂದು ಸಾವಿರ ವರ್ಷ ನಾಯಿ ಮಾಂಸವನ್ನು ತಿನ್ನುತ್ತಿರಿ ಎಂದು ಶಪಿಸಿ ದುಃಖಿತನಾದ ಶುನಃಶೇಪನಿಗೆ ಸಕಲ ಕಷ್ಟಗಳನ್ನು ಪರಿಹರಿಸುವ ಮಂತ್ರರಕ್ಷೆಯನ್ನು ಉಪದೇಶಮಾಡಿ ಮನು ಅಂಬರೀಷನ ಯಜ್ಞದಕಾಲದಲ್ಲಿ ನಿನಗೆ ಕೆಂಪುಮಾಲೆಯನ್ನು ಹಾಕಿ, ಕೆಂಪುಗಂಧವನ್ನು ಹಚ್ಚಿ ಪವಿತ್ರಪಾಶಗಳಿಂದ ವೈಷ್ಣವಯಾಪಸ್ತಂಭಕ್ಕೆ ನಿನ್ನನ್ನು ಕಟ್ಟುತ್ತಾರೆ. ಆ ಸಮಯದಲ್ಲಿ ನೀನು ಅಗ್ನಿಗೆ ಅಭಿಮುಖವಾಗಿ ನಿಂತು ಈ ಎರಡು ದಿವ್ಯ ಮಂತ್ರಗಳನ್ನು ಜಪಿಸು ನಿನಗೆ ಒಳ್ಳೆಯದಾಗುತ್ತದೆ ಎಂದು ಹೇಳಿದರು. ಕೂಡಲೆ ಶುನಃಶ್ಶೇಪನು ಅಂಬರೀಷನೊಡನೆ ಧೈರ್ಯವಾಗಿ ಯಜ್ಞ ಸದಸ್ಸಿಗೆ ಹೋದನು. ಋತ್ವಿಜರ ಒಪ್ಪಿಗೆಯಂತೆ ಶುನಃಶ್ಶೇಪನು ಯಜ್ಞಪಶುವಾದನು. ರಾಜನು ಅವನಿಗೆ ಕೆಂಪು ಬಟ್ಟೆಯನ್ನುಡಿಸಿ ಪವಿತ್ರ ದರ್ಭೆಗಳಿಂದ ಯೂಪಸ್ತಂಭಕ್ಕೆ ಕಟ್ಟಿದನು. ಆಗ ಆ ಮುನಿಪುತ್ರನು ವಿಶ್ವಾಮಿತ್ರರು ಹೇಳಿ ಕೊಟ್ಟ ಎರಡು ರಹಸ್ಯ ಮಂತ್ರಗಳನ್ನು ಸ್ತುತಿಸುತ್ತಿದ್ದನು. ಆಗ ಶುನಃಶ್ಶೇಪನ ಪ್ರಾರ್ಥನೆಗೆ ಮೆಚ್ಚಿ ಇಂದ್ರನು ಪ್ರಸನ್ನನಾದನು. ಇಂದ್ರನು ಶುನಃಶೇಪನಿಗೆ ದೀರ್ಘವಾದ ಆಯುಸ್ಸನ್ನು ಅನುಗ್ರಹಿಸಿದನು. ಅಂಬರೀಷನು ಸಾಂಗವಾಗಿ ಯಜ್ಞವನ್ನು ನೆರವೇರಿಸಿದನು. ಇದರಿಂದ ಶುನಃಶೇಪನು ದೇವಾರಾತ ಎಂದು ಪ್ರಸಿದ್ಧನಾದನು.

# ಯದುವಂಶ – ಕಾರ್ತ್ಯವೀರ್ಯಾರ್ಜುನನ ಚರಿತ್ರೆ

ಯಯಾತಿಯ ಬಗ್ಗೆ ನಾವು ಈಗಾಗಲೇ ತಿಳಿದಿದ್ದೇವೆ. ಯಯಾತಿಯ ಜೇಷ್ಠಪುತ್ರ ಯದು. ಈ ವಂಶದಲ್ಲಿಯೇ ಅನಾದಿಯೂ ಅನಂತನೂ ಆದ ಭಗವಾನ್ ವಿಷ್ಣುವು ಅಪರಿಮಿತ ಮಹತ್ವಶಾಲಿಯಾದ ಅಂಶದಿಂದ ಶ್ರೀಕೃಷ್ಣನಾಗಿ ಅವತರಿಸಿದನು. ಅವನೇ ಸಮಸ್ತ ಲೋಕಗಳಿಗೆ ಆಧಾರನು. ಮನುಷ್ಯ, ಸಿದ್ಧ, ಗಂಧರ್ವ, ಯಕ್ಷ, ರಾಕ್ಷಸ, ಗುಹ್ಯಕ, ಕಿಂಪುರುಷ, ಅಪ್ಸರೆ, ಉರಗ, ವಿಹಗ, ದೈತ್ಯ, ದಾನವ, ಆದಿತ್ಯ, ರುದ್ರ, ವಸು, ಅಶ್ವಿನೀ ದೇವತೆಗಳು, ಮರುತ್ತು ದೇವತೆ, ಋಷಿಗಳು ಹಾಗೂ ವಿಪತ್ತಿನಿಂದ ಬಿಡುಗಡೆಯನ್ನು ಬಯಸುವವರಿಂದಲೂ, ಅಭೀಷ್ಟ ಫಲದಾಯಕನೂ ಆಗಿ ಸರ್ವದಾ ಸ್ತುತಿಸಲ್ಪಡುವವನು. ಈ ಬಗ್ಗೆ ಒಂದು ಶ್ಲೋಕವೇ ಇದೆ.

**ಯದೋರ್ವಂಶಂ ನರಃ ಶ್ರುತ್ವಾ ಸರ್ವಪಾಪೈ ಪ್ರಮುಚ್ಯತೇ ।**
**ಯತ್ರಾವತೀರ್ಣಂ ಕೃಷ್ಣಾಖ್ಯಂ ಪರಂಬ್ರಹ್ಮ ನಿರಾಕೃತಿ ॥**

(ವಿ.ಪು. 2ನೇ ಚತುರ್ಥಾಂಶ ಲಿ ॥ ಶ್ಲೋಕ 4)

ಮಾನವನು ಯದುವಂಶದ ಚರಿತ್ರೆಯನ್ನು ಕೇಳಿದರೆ ಸರ್ವಪಾಪ ಶಮನವಾಗುತ್ತದೆ. ಏಕೆಂದರೆ ಈ ವಂಶದಲ್ಲಿ ಆಕಾರವಿಲ್ಲದಿರುವ ಪರಬ್ರಹ್ಮವು 'ಕೃಷ್ಣ' ಎಂಬ ಹೆಸರಿನಿಂದ ಅವತರಿಸಿತು.

ಯದುವಿಗೆ ಸಹಸ್ರಜಿತ್, ಕ್ರೋಷ್ಟು, ನಲ, ನಹು ಎಂಬ ನಾಲ್ವರು ಮಕ್ಕಳಾದರು. ಸಹಸ್ರಜಿತ್‌ನ ಮಗ ಶತಜಿತ್, ಅವನಿಗೆ ಹೈಹಯ, ಹೇಹಯ, ವೇಣುಹಯ ಎಂಬ ಮೂವರು ಮಕ್ಕಳಾದರು. ಹೈಹಯನ ಪುತ್ರಧರ್ಮ. ಅವನ ಮಗ ಧರ್ಮನೇತ್ರ. ಅವನ ಪುತ್ರ ಕುಂತಿ ಎಂಬುವನು. ಕುಂತಿಯ ಮಗ ಅಹಜಿತ್. ಅವನ ಮಗ ಮಹಿಷ್ಮಾನ ಎಂಬುವನು. ಇವನು ಮಾಹಿಷ್ಮತೀ ಎಂಬ ನಗರವನ್ನು ಕಟ್ಟಿಸಿದನು. ಮಹಿಷ್ಮಂತನಿಂದ, ಭದ್ರಶ್ರೇಣ್ಯನೂ, ಅವನಿಂದ ದುರ್ದಮನೂ, ಅವನಿಂದ ಧನಕನೂ ಜನಿಸಿದನು. ಧನಕನಿಗೆ ಕೃತವೀರ, ಕೃತಾಗ್ನಿ, ಕೃತಧರ್ಮ, ಕೃತೌಜ ಎಂಬ ನಾಲ್ವರು ಪುತ್ರರಾದರು. ಸಪ್ತದ್ವೀಪಗಳಿಗೆ ಅಧಿಪತಿಯೂ ಸಹಸ್ರಬಾಹುವೂ

ಆದ ಅರ್ಜುನ ಎಂಬುವನು ಕೃತವೀರ್ಯನಿಂದ ಜನಿಸಿದನು. ಇವನೇ ಸುಪ್ರಸಿದ್ಧ ಕಾರ್ತ್ಯವೀರ್ಯಾರ್ಜುನ ಭಗವದಂಶದಿಂದ ಜನಿಸಿದವನು. ಇವನು ಅತ್ರಿಕುಲದಲ್ಲಿ ಅವತರಿಸಿದ ಶ್ರೀದತ್ತಾತ್ರೇಯನನ್ನು (ಅನಸೂಯಳ ಪುತ್ರ) ಆರಾಧಿಸಿ, ಆತನಿಂದ ಸಾವಿರ ತೋಳುಗಳು, ಅಧರ್ಮಾಚರಣ ನಿವಾರಣೆ, ಸ್ವಧರ್ಮಾಚರಣೆ, ರಣರಂಗದಲ್ಲಿ ವಿಶ್ವಜಯ, ಧರ್ಮದಿಂದ ರಾಜ್ಯ ಪರಿಪಾಲನೆ, ಶತ್ರುಗಳಿಗೆ ಸೋಲದೆ ಇರುವುದು, ವಿಶ್ವವಿಖ್ಯಾತನಾದ ಮಹಾಪುರುಷನಿಂದ ಮರಣವನ್ನು ಅಪ್ಪಬೇಕು ಎಂಬ ವರಗಳನ್ನು ಪಡೆದಿದ್ದನು. ಅಂತೆಯೆ ಕಾರ್ತ್ಯವೀರ್ಯಾರ್ಜುನನು ಸಮಸ್ತದ್ವೀಪಸಹಿತವಾದ ಈ ಪೃಥ್ವಿಯನ್ನು ಉತ್ತಮ ರೀತಿಯಿಂದ ಆಳಿದನು. ಹತ್ತು ಸಾವಿರ ಯಾಗಗಳನ್ನು ನಡೆಸಿದನು. ಇವನ ಬಗ್ಗೆಯು ಒಂದು ಶ್ಲೋಕವಿದೆ.

**ನನೂನಂ ಕಾರ್ತವೀರ್ಯಸ್ಯ ಗತಿಂ ಯಾಸ್ಯಂತಿ ಪಾರ್ಥಿವಾಃ**

**ಯಜ್ಞೈರ್ದಾನೈಸ್ತಪೋಭಿರ್ವಾ ಪ್ರಶ್ರಯೇಣ ಶ್ರುತೇನ ಚ**

ವಿ.ಪು. 2ನೇಸಂ ಚತುರ್ಥಾಂಶ ಅ॥ ಶ್ಲೋ16

ಯಜ್ಞ, ದಾನ, ತಪಸ್ಸುಗಳಲ್ಲಾಗಲಿ, ವಿದ್ಯಾ ವಿನಯಗಳಲ್ಲಾಗಲಿ ಯಾವ ರಾಜನೂ ಕಾರ್ತ್ಯವೀರ್ಯಾರ್ಜುನನಿಗೆ ಸಮಾನರಾಗಲು ಸಾಧ್ಯವೇ ಇಲ್ಲ. ಆತನ ರಾಜ್ಯದಲ್ಲಿ ಯಾವುದೇ ಒಂದು ಪದಾರ್ಥವು ಕಳೆದುಹೋಯಿತೆಂದು ಇಲ್ಲ. (ಇಂದಿಗೂ ಯಾವುದಾದರೂ ವಸ್ತುವು ಕಳೆದುಹೋದರೂ ಕಾರ್ತ್ಯವೀರ್ಯಾರ್ಜುನಾಯ ನಮಃ ಎಂದರೆ 108 ಸಲ ಸ್ಮರಿಸಿದರೆ ಕಳೆದುಹೋದ ವಸ್ತುವು ನಮಗೆ ಸಿಗುತ್ತದೆ ಎಂಬ ನಂಬಿಕೆ ಜನಮನದಲ್ಲಿದೆ.) ಆರೋಗ್ಯ, ಸಂಪತ್ತು, ಬಲ, ಪರಾಕ್ರಮಗಳಿಗೆ ಯಾವುದೇ ಅಡೆತಡೆಯಿಲ್ಲದಂತೆ ಅವನು ಎಂಬತ್ತೈದು ಸಾವಿರ ವರ್ಷಗಳವರೆಗೆ ರಾಜ್ಯಭಾರ ಮಾಡಿದನು. ಹೀಗಿರುವಲ್ಲಿ ಒಮ್ಮೆ ರಾವಣನು ದಿಗ್ವಿಜಯಕ್ಕಾಗಿ ಮಾಹಿಷ್ಮತಿ ನಗರಕ್ಕೆ ಬಂದನು. ರಾವಣನಾದರೋ ಸಮಸ್ತ ದೇವ, ದೈತ್ಯ, ಗಂಧರ್ವ ರಾಜರನ್ನು ಜಯಿಸಿ ಗರ್ವೋದ್ರಿಕ್ತನಾಗಿದ್ದನು. ಈ ಸಂದರ್ಭದಲ್ಲಿ ಕಾರ್ತ್ಯವೀರ್ಯನೂ ನರ್ಮದಾ ಜಲದಲ್ಲಿ ಕ್ರೀಡಿಸುತ್ತಾ ಮದ್ಯಪಾನದಿಂದ ಮದೋನ್ಮತ್ತನಾಗಿದ್ದನು. ಆಗ ಕಾರ್ತ್ಯವೀರ್ಯನು ಯುದ್ಧಾಪೇಕ್ಷೆಯಿಂದ

ಬಂದ ರಾವಣನನ್ನು ತೃಣಮಾತ್ರವೂ ಲೆಕ್ಕಿಸದೆ ಅವನು ಒಂದು ಪಶುವೋ ಎಂಬಂತೆ ಹೆಡೆಮುರಿಗೆ ಕಟ್ಟಿ ಎಳೆದೊಯ್ದು ನಗರ ಪ್ರದೇಶದಲ್ಲಿ ಬಂಧಿಯಾಗಿ ಇರಿಸಿದ್ದನು. ಈ ಕಾರ್ತ್ಯವೀರ್ಯಾರ್ಜುನನು 85 ಸಾವಿರ ವರ್ಷಗಳಾದ ನಂತರ ಶ್ರೀಮನ್ನಾರಾಯಣನ ಅಂಶದಿಂದಲೇ ಅವತರಿಸಿದ ಪರಶುರಾಮನಿಂದ ಹತನಾದನು. ಈತನ ನೂರುಮಂದಿ ಮಕ್ಕಳಲ್ಲಿ ಶೂರ, ಶೂರಸೇನ, ವೃಷಸೇನ, ಮಧು, ಜಯಧ್ವಜ ಎಂಬ ಐವರು ಪ್ರಮುಖರಾದವರು. ಇವರಲ್ಲಿ ಜಯಧ್ವಜನ ಮಗ ತಾಲಜಂಘ. ತಾಲಜಂಘನಿಗೆ ಪ್ರಸಿದ್ಧರಾದ ನೂರು ಮಕ್ಕಳಿದ್ದರು. ಇವರಲ್ಲಿ ಜೇಷ್ಠ ಪುತ್ರನು ವೀತಿಹೋತ್ರ ಎಂಬುವನು. ಇನ್ನೊಬ್ಬರ ಹೆಸರು ಭರತ. ಭರತನಿಂದ ವೃಷನೂ ವೃಷನಿಂದ ಮಧುವೂ ಹುಟ್ಟಿದರು. ಮಧುವಿಗೆ ವೃಷ್ಣಿ ಮೊದಲಾದ ನೂರುಮಂದಿ ಮಕ್ಕಳಿದ್ದರು. ವೃಷ್ಣಿಯಿಂದಾಗಿ ಇವರ ವಂಶಕ್ಕೆ ವೃಷ್ಣಿ ಎಂದು ಹೆಸರಾಯಿತು. ಇದೆ ರೀತಿ ಮಧುವಿನಿಂದಾಗಿ ಮಧುವಂಶವೆಂದಾಯಿತು. ಯದುವಿನಿಂದಾಗಿ ಯಾದವರೆನಿಸಿ ಯದುಕುಲ ತಿಲಕನಾದನು

**ಶ್ರೀಕೃಷ್ಣನಿಗೆ ನಮೋ ನಮಃ.**

## ಜ್ಯಾಮಘನ ಕಥೆ

ಭಗವಾನ್ ಶ್ರೀಮನ್ನಾರಾಯಣ ಜಗನ್ನಾಟಕ ಸೂತ್ರಧಾರಿ. ಅವನು ತನ್ನಿಚ್ಛೆಯಂತೆ ಈ ವಿಶ್ವದಲ್ಲಿ ವಿಚಿತ್ರ ರೀತಿಯ ಪಾತ್ರಗಳನ್ನು ಸೃಷ್ಟಿಸುವುದರಲ್ಲಿ ಬಹಳ ನಿಸ್ಸೀಮ. ಇಂತಹ ಪ್ರಸಂಗಗಳನ್ನು ಸೃಷ್ಟಿಸಿ ನಗುತ್ತಾನೋ ಏನೋ? ಅದನ್ನು ಯಾರು ಬಲ್ಲರು? ಅದೂ ಅವನ ಲೀಲೆಯೇ. ಒಟ್ಟಿನಲ್ಲಿ ಸೃಷ್ಟಿಕಾರ್ಯದಲ್ಲಾಗಲಿ, ಮನುಷ್ಯ ಮನೋವ್ಯಾಪಾರಗಳಲ್ಲಾಗಲಿ ಆ ದೇವನ ಕೈವಾಡ ಮಹತ್ತರವಾಗಿರುತ್ತದೆ ಎಂಬುವುದಂತೂ ಸತ್ಯ. ಇಷ್ಟೆಲ್ಲಾ ಆದರೂ ಎಲ್ಲವೂ ಪ್ರತಿಯೊಬ್ಬರ  ಕರ್ಮಾನುಸಾರವಾಗಿ ನಡೆಯುತ್ತದೆ ಎಂದು ಹೇಳಿ ತಾನು ಯಾವುದಕ್ಕೂ ಜವಾಬ್ದಾರನಲ್ಲ ಎಂದು ಕೈ ತೊಳೆದುಕೊಳ್ಳುವುದರಲ್ಲಿಯೂ ಭಗವಂತನು ನಿಸ್ಸೀಮ. ಹೇಗಾದರಾಗಲಿ **"ಯದಿಹಾಸ್ತಿ ತದನ್ಯತ್ರ, ಯನ್ನೇಹಾಸ್ತಿ ನತತ್‌ಕ್ವಚಿತ್"** ಎಂಬ ಹೇಳಿಕೆಯನ್ನು

ದೃಢವಾಗಿ ನಾವೆಲ್ಲಾ ನಂಬೋಣ. ಆ ದೇವನನ್ನು ಸ್ಮರಣ ಮಾತ್ರದಿಂದಲೇ ವಶಪಡಿಸಿಕೊಳ್ಳೋಣ. ಈಗ ಅತ್ಯಂತ ವಿಚಿತ್ರವಾದ ಪಾತ್ರ ಜ್ಯಾಮಘನ ಬಗ್ಗೆ ತಿಳಿಯೋಣ.

ಜ್ಯಾಮಘ ಯದುಪುತ್ರನಾದ ಕ್ರೋಷ್ಟುವಿನ ವಂಶದಲ್ಲಿ ಹುಟ್ಟಿದವನು. ಜ್ಯಾಮಘನು ಪರಾವೃತ ಎಂಬುವನ ಮಗ. ಇವನ ಬಗ್ಗೆ ಒಂದು ಶ್ಲೋಕವೇ ಇದೆ. ಇವನು ಹೆಂಡತಿಗೆ ಹೆದರುವವನು. ಪುರುಷ ಎಂಬುವುದಕ್ಕೆ ಸರಿಯಾಗಿ ಪೌರುಷದಿಂದ ನಡೆದುಕೊಳ್ಳದೆ ಹೆದರು ಪುಕ್ಕಲನಂತೆ ಹೆಂಡತಿಯ ಮುಂದೆ ಕೈಕಟ್ಟಿ ನಿಲ್ಲುವ ವಿಚಿತ್ರವಾದ ಗುಣವುಳ್ಳವನು. ಇಂದಿಗೂ ಇದೇ ರೀತಿಯ ಕೆಲವು ಹೆಣ್‌ಪೆಕ್ಡುಗಳು ನಮ್ಮಲ್ಲಿ ಇದ್ದಾರೆ. ಆದರೆ ಬಹುತೇಕ ಪುರುಷರು ತಮ್ಮ ಪೌರುಷವನ್ನು ತೋರ್ಪಡಿಸಿಕೊಳ್ಳುವುದೇ ಹೆಚ್ಚು **"ಉದ್ಯೋಗಂ ಪುರುಷ ಲಕ್ಷಣಂ"** ಎನ್ನುವಂತೆ **"ಪೌರುಷಂ ಪುರುಷ ಲಕ್ಷಣಂ"** ಎಂದಿದ್ದರೇನೇ ಒಳ್ಳೆಯದು ಅಲ್ಲವೇ? ಈ ಜ್ಯಾಮಘನ ಬಗ್ಗೆ ಒಂದು ಶ್ಲೋಕವೇ ಇದೆ.

**ಭಾರ್ಯಾವಶ್ಯಾಸ್ತು ಯೇ ಕೇಚಿದ್ಭವಿಷ್ಯಂತ್ಯಥವಾ ಮೃತಾಃ**

**ತೇಷಾಂತು ಜ್ಯಾಮಘಃ ಶ್ರೇಷ್ಠ ಶೈ್ಬ್ಯಾಪತಿ ರಭೂನ್ನೃಪಃ**

ವಿ.ಪು. 2ನೇದಂ ಚತುರ್ಥಾಂಶ ಅ12 13ನೇ ಶ್ಲೋಕ

ಈ ಜಗತ್ತಿನಲ್ಲಿ ಹೆಂಡತಿಗೆ ಅಧೀನರಾದವರು ಯಾರು ಯಾರು ಮುಂದೆ ಹುಟ್ಟುವರೋ ಅಥವಾ ಹಿಂದೆ ಗತಿಸಿ ಹೋಗಿರುವರೋ ಅವರಲ್ಲಿ ಶೈಬ್ಯೆಯ ಗಂಡನಾದ ಜ್ಯಾಮಘರಾಜನೇ ಸರ್ವ ಶ್ರೇಷ್ಠನು ಎಂದು ಈ ಶ್ಲೋಕದಲ್ಲಿ ತಿಳಿಸಲಾಗಿದೆ. 'ಮನೆಯ ಹೊರಗೆ ಹುಲಿ ಮನೆಯೊಳಗೆ ಇಲಿ' ಎಂಬ ಜನಪದ ಮಾತನ್ನು ನೆನಪಿಸಿಕೊಳ್ಳೋಣ.

ಜ್ಯಾಮಘನ ಹೆಂಡತಿಯಾದ ಶೈಬ್ಯೆಗೆ ಮಕ್ಕಳಿರಲಿಲ್ಲ. ಅವನಿಗೆ ಮಕ್ಕಳು ಬೇಕೆಂಬ ಹಂಬಲವಿದ್ದರೂ ಹೆಂಡತಿಗೆ ಹೆದರಿ ಅವನು ಇನ್ನೊಬ್ಬಳನ್ನು ಮದುವೆಯಾಗಲಿಲ್ಲ. ಜ್ಯಾಮಘನು ಅತಿ ಪರಾಕ್ರಮಿ. ಅವನು ಒಮ್ಮೆ ಅಸಂಖ್ಯಾತವಾದ ರಥತುರಗ ಗಜ ಸಂಘಟನೆಗಳೊಂದಿಗೆ ಅತಿಭೀಕರವಾದ ಸಂಗ್ರಾಮದಲ್ಲಿ ತೊಡಗಿ ಸಮಸ್ತ ಶತ್ರುಸೇನೆಯನ್ನು ಸೋಲಿಸಿದನು. ಆ

ಶತ್ರುಗಳು ತಮ್ಮ ಮಕ್ಕಳು, ಮಡದಿ, ಬಂಧು, ಕೋಶಗಳನ್ನು ಪರಿತ್ಯಜಿಸಿ ದಿಕ್ಕಾಪಾಲಾಗಿ ಓಡಿಹೋದರು. ಈ ಸಂದರ್ಭದಲ್ಲಿ ಒಬ್ಬ ಭಯವಿಹ್ವಲಿತಳಾದ ಸುಂದರ ರಾಜಕುಮಾರಿಯ ಆರ್ತಧ್ವನಿಯನ್ನು ಕೇಳಿ ಅವಳತ್ತ ಬಂದನು. ಅವಳನ್ನು ಸಮಾಧಾನಪಡಿಸಿದ ನಂತರ ಅವಳ ಮೇಲೆ ಅವನಿಗೆ ಅನುರಾಗ ಉತ್ಪನ್ನವಾಯಿತು. ಹೇಗಿದ್ದರೂ ನಾನು ಬಂಜೆಗೆ ಪತಿಯಾಗಿದ್ದೇನೆ ಸಂತತಿಗಾಗಿ ದೈವವೇ ಈ ಕನ್ಯಾರತ್ನವನ್ನು ನನ್ನ ಬಳಿಗೆ ಕಳುಹಿಸಿತೋ ಏನೋ ಎಂದುಕೊಂಡನು. ಅಷ್ಟೇ ಅಲ್ಲ ಅವಳನ್ನು ರಥದ ಮೇಲೆ ಕುಳ್ಳಿರಿಸಿಕೊಂಡು ರಾಜಧಾನಿಗೆ ಕರೆದೊಯ್ಯುತ್ತೇನೆ. ನನ್ನ ರಾಣಿಯಾದ ಶೈಬ್ಯೆಯ ಒಪ್ಪಿಗೆಯನ್ನು ಪಡೆದುಕೊಂಡೇ ವಿವಾಹವಾಗುತ್ತೇನೆ ಎಂದು ನಿಶ್ಚಯಿಸಿ ಅವಳನ್ನು ರಥದ ಮೇಲೆ ಕೂರಿಸಿಕೊಂಡು ನಗರಕ್ಕೆ ಹಿಂದಿರುಗಿದನು. ವಿಜಯಶಾಲಿಯಾಗಿ ಬರುತ್ತಿದ್ದ ರಾಜನನ್ನು ಎದುರುಗೊಳ್ಳಲು ಅನೇಕ ಮಂತ್ರಿಗಳು ಪೌರ ಪರಿಜನರು ಬಂದರು. ಅಲ್ಲಿಗೆ ಶೈಭ್ಯೆಯೂ ಆಗಮಿಸಿದಳು. ರಾಜನ ಎಡಭಾಗದಲ್ಲಿದ್ದ ಆ ರಾಜಕುಮಾರಿಯನ್ನು ಕಂಡು ಹೆಂಡತಿ ಕೋಪೋದ್ರಿಕ್ತಳಾದಳು. ಅವಳು ರಾಜನನ್ನು ಕುರಿತು 'ಎಲ್ಲವೋ ಚಪಲಚಿತ್ತ, ರಥದಲ್ಲಿ ಏರಿಸಿಕೊಂಡಿರುವೆಯಲ್ಲಾ ಯಾರಿವಳು?' ಎಂದು ಕೇಳಿದಳು. ಅವನು ಹೆದರಿ ಕಂಗಾಲಾಗಿ 'ಇವಳು ನನ್ನ ಸೊಸೆ' ಎಂದುಬಿಟ್ಟನು. ಅದಕ್ಕೆ ಶೈಬ್ಯೆಯು ನನಗೆ ಯಾವ ಮಗನೂ ಇಲ್ಲ, ನಿನಗೆ ಇನ್ನೊಬ್ಬ ಹೆಂಡತಿಯೂ ಇಲ್ಲ, ಯಾವ ಪುತ್ರನ ಮೂಲಕ ಇವಳು ಸೊಸೆಯಾದಳೋ? ಎಂದು ಕೇಳಿದಳು. ತಾನು ಭಯದಿಂದ ಆಡಿದ ತಪ್ಪನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ನಿನಗೆ ಗಂಡು ಮಗನು ಹುಟ್ಟುವನು. ಹುಟ್ಟುವುದಕ್ಕೆ ಮೊದಲೇ ಅವನಿಗೆ ಇವಳನ್ನು ಮಡದಿಯಾಗಿ ಗೊತ್ತು ಮಾಡಿದ್ದೇನೆ ಎಂದನು. ಅದನ್ನು ಕೇಳಿ ಶೈಬ್ಯೆಯು ಮೆಲ್ಲಗೆ ನಕ್ಕು 'ಆಗಲಿ' ಎಂದಳು. ಅನಂತರ ರಾಜನೊಡನೆ ರಾಜಧಾನಿಯನ್ನು ಪ್ರವೇಶಿಸಿದಳು. ಅವಳು ಅತ್ಯಂತ ಶುಭಕರವಾದ ಲಗ್ನ 'ಹೋರಾ' ಅಂಶ ಅವಯವಗಳುಳ್ಳ ಸುಮುಹೂರ್ತದಲ್ಲಿ ಪುತ್ರಜನ್ಮವಾಗುವುದೆಂದು ಹೇಳಿದ್ದರ ಪರಿಣಾಮವಾಗಿ, ಶೈಬ್ಯೆಗೆ ಸಾಕಷ್ಟು ವಯಸ್ಸಾದರೂ ಸ್ವಲ್ಪ ದಿನಗಳಲ್ಲಿ ಗರ್ಭಿಣಿಯಾದಳು. (ಹೋರಾ ಎಂದರೆ ರಾಶಿಯ ಅರ್ಧ ಅಂಶ – ನವಾಂಶ ಲಗ್ನ = ಮೇಷಾದಿಗಳ ರಾಶಿಯ ಉದಯಕಾಲ ಆಮ ವಯ = ದ್ವಾದಶಾಂಶ ಮತ್ತು

ತ್ರಿಂಶಾಂಶ, ಶುಭಮುಹೂರ್ತದಲ್ಲಿ ರಾಜರು ಪುತ್ರಲಾಭವಾಗುವುದೆಂದೂ ಅವನ ಹೆಂಡತಿಯು 'ತಥಾಸ್ತು' ಎಂದು ಹೇಳಿದ್ದರಿಂದ ಶುಭಫಲವಾಯಿತು. ಹೀಗೆಯೇ ಜನರು ಒಳ್ಳೆಯದನ್ನೋ ಅಥವಾ ಕೆಟ್ಟದನ್ನೋ ಹೇಳಿದಾಗ 'ಅಸ್ತು' ಎಂದು ಹೇಳುವ ಅಸ್ತು ದೇವತೆಗಳಿದ್ದಾರಂತೆ. ಆ ದೇವತೆಗಳು 'ಅಸ್ತು' ಎಂದು ಬಿಟ್ಟರೆ ಆ ಕಾರ್ಯವು ಸಫಲವಾಗುವುದುದೆಂದು ಹೇಳಲಾಗಿದೆ. ಆದ್ದರಿಂದ ನಾವು ಯಾವಾಗಲೂ ಒಳ್ಳೆಯ ಮಾತನ್ನೇ ಆಡಬೇಕು. ಅಂತೆಯೇ ಜ್ಯಾಮಘನು ಗಂಡುಮಗು ಹುಟ್ಟುವನು ಎಂದಾಗ ಆ ದೇವತೆಗಳು 'ಅಸ್ತು' ಎಂದು ಹೇಳಿದರು. ಅದರಂತೆ ಶೈಬ್ಯೆಯು ಗಂಡು ಮಗುವಿಗೆ ಜನ್ಮವಿತ್ತಳು. ಮಗುವಿಗೆ ವಿದರ್ಭ ಎಂದು ಹೆಸರಿಟ್ಟನು. ರಾಜನು ತನ್ನ ಸೊಸೆಯೆಂದು ಹೇಳಿದ್ದ ಆ ಕನ್ಯೆಯನ್ನೇ ವಿದರ್ಭ ಮುಂದೆ ಮದುವೆಯಾದನು. ವಿದರ್ಭನಿಗೆ ಕೃಥ, ಕೌಶಿಕ, ರೋಮಪಾಲ ಎಂಬ ಮಕ್ಕಳು ಜನಿಸಿದರು. ರೋಮಪಾದನು ನಾರದ ಮಹರ್ಷಿಗಳಿಂದ ಉಪದೇಶವನ್ನು ಪಡೆದು ಪರಮಜ್ಞಾನಿಯಾದನು. ಜ್ಯಾಮಘನ ಸೊಸೆಯ ಮಗನಾದ ಕ್ರಥನಿಗೆ ಕುಂತಿ ಎಂಬುವನು ಪುತ್ರನಾದನು. ಹೀಗೆ ಜ್ಯಾಮಘನೂ ಸಹ ಭಾರ್ಯಾವಶನಾಗಿಯೇ ಸುಪ್ರಸಿದ್ಧನಾದನು.

## ಸತ್ರಾಜಿತನಿಗೆ ಸ್ಯಮಂತಕ ಮಣಿಯ ಪ್ರಾಪ್ತಿ ಸ್ಯಮಂತಕೋಪಾಖ್ಯಾನ

ಸತ್ರಾಜಿತನು ಸತ್ವತನ ಸಂತತಿಯಲ್ಲಿ ಹುಟ್ಟಿದವನು. ಇವನ ತಂದೆ ನಿಘ್ನ ಎಂಬುವನು. ಸತ್ರಾಜಿತನಿಗೆ ಪ್ರಸೇನ ಎಂಬ ಸೋದರನೂ ಇದ್ದನು. ಅವನಿಗೆ ಭಗವಾನ್ ಸೂರ್ಯದೇವನು ಪ್ರಿಯನಾಗಿದ್ದನು. ಒಮ್ಮೆ ಸತ್ರಾಜಿತನು ಕಡಲಿನ ದಡವನ್ನು ಆಶ್ರಯಿಸಿ ಸೂರ್ಯದೇವನ ಸ್ತೋತ್ರವನ್ನು ಮಾಡುತ್ತಿದ್ದನು. ಏಕಾಗ್ರತೆಯಿಂದ ಧ್ಯಾನಿಸುತ್ತಾ ಇದ್ದ ಸತ್ರಾಜಿತನ ಎದುರಿಗೆ ಸೂರ್ಯದೇವನು ಪ್ರತ್ಯಕ್ಷನಾದನು. ಆತನ ಮೂರ್ತಿಯು ಅಸ್ಪಷ್ಟವಾಗಿದ್ದಿತು. ಅದನ್ನು ಕಂಡು ಸತ್ರಾಜಿತನು ಸೂರ್ಯನನ್ನು ಉದ್ದೇಶಿಸಿ "ಆಕಾಶದಲ್ಲಿ ನೀನು ಬೆಂಕಿಯ ಮುದ್ದೆಯಂತೆ ಇರುವುದನ್ನು ನಾನು ನೋಡಿದ್ದೇನೆ. ಎದುರಿಗೆ ಬಂದು ನಿಂತರೂ ಹಾಗೆಯೇ ಕಾಣಿಸುತ್ತಿರುವೆ. ನೀನು ನನ್ನನ್ನು ಅನುಗ್ರಹಿಸಿದ

ವಿಶೇಷವಾದರೂ ಏನೂ” ಎಂದು ಕೇಳಿದನು. ಆಗ ಸೂರ್ಯದೇವನು ತನ್ನ ಕೊರಳಿನಿಂದ ‘ಸ್ಯಮಂತಕ’ ಎಂಬ ಮಹಾರತ್ನವನ್ನು ತೆಗೆದು ಒಂದು ಕಡೆ ಇಟ್ಟನು. ಆಗ ಥಳಥಳಿಸುವ ರಕ್ತವರ್ಣನೂ, ಹ್ರಸ್ವದೇಹದವನು, ಕಿಂಚಿತ್ ಪಿಂಗಳನೇತ್ರನೂ ಆದ ಆದಿತ್ಯನನ್ನು ಸತ್ರಾಜಿತನು ಕಂಡನು. ಸತ್ರಾಜಿತನು ಆತನಿಗೆ ಸಾಷ್ಟಾಂಗ ಪ್ರಣಾಮ ಮಾಡಿ ಸ್ತುತಿಸಿದಾಗ ಸೂರ್ಯದೇವನು ‘ನಿನಗೆ ಇಷ್ಟವಾದ ವರವನ್ನು ಕೇಳಿಕೋ’ ಎಂದನು. ಸತ್ರಾಜಿತ ಸೂರ್ಯನ ಬಳಿಯಲ್ಲಿದ್ದ ಸ್ಯಮಂತಕ ಮಣಿಯನ್ನೇ ಕೇಳಿದನು. ಸೂರ್ಯನು ತಕ್ಷಣವೇ ಅದನ್ನು ಸತ್ರಾಜಿತನಿಗೆ ಕೊಟ್ಟು ಅಂತರಿಕ್ಷದಲ್ಲಿ ತನ್ನ ಸ್ಥಾನಕ್ಕೆ ಬಂದು ಸೇರಿದನು. ಇತ್ತ ಸತ್ರಾಜಿತನು ಆ ಸ್ಯಮಂತಕ ಮಣಿಯನ್ನು ಕಂಠದಲ್ಲಿ ಧರಿಸಿ ಸೂರ್ಯನಂತೆ ಸಕಲ ದಿಕ್ಕುಗಳನ್ನು ದಿವ್ಯ ತೇಜಸ್ಸಿನಿಂದ ಬೆಳಗಿಸುತ್ತಾ ದ್ವಾರಕೆಗೆ ಬಂದನು. ಅವನನ್ನು ನೋಡಿದ ಜನರು ಸಾಕ್ಷಾತ್ ಸೂರ್ಯನೇ ಮನುಷ್ಯ ರೂಪವನ್ನು ಧರಿಸಿರುವನೆಂದೂ ಅವನು ತಮ್ಮಲ್ಲಿಗೆ ಬರುತ್ತಿರುವನೆಂದು ಶ್ರೀಕೃಷ್ಣನ ಬಳಿ ಬಂದು ಹೇಳಿದರು.  ಅದಕ್ಕೆ ಶ್ರೀಕೃಷ್ಣನು ಅವನು ಸೂರ್ಯದೇವನಲ್ಲ, ಸತ್ರಾಜಿತ ಎಂದು ಹೇಳಿದನು. ಅಂತೆಯೇ ಅವರು ಸತ್ರಾಜಿತನನ್ನು ತದೇಕ ದೃಷ್ಟಿಯಿಂದ ನೋಡತೊಡಗಿದರು. ಸತ್ರಾಜಿತನು ಆ ಸ್ಯಮಂತಕಮಣಿಯು ಪ್ರತಿದಿನವೂ ಪ್ರತಿದಿನವೂ ಎಂಟುಭಾರ ಚಿನ್ನವನ್ನು ಕೊಡುತ್ತಿತ್ತು. (ಭಾರ = ಎಂದರೆ ಹಿಂದಿನ ಕಾಲದಲ್ಲಿದ್ದ ತೂಕ) 30 ತುಲಾ ಅಥವಾ 3000 ಫಲ ಎಂದು ಹೇಳುವುದುಂಟು. ಅದರ ಮಹಿಮೆಯಿಂದಾಗಿ ಸಂಪೂರ್ಣ ರಾಷ್ಟ್ರದಲ್ಲಿ ರೋಗ, ಅನಾವೃಷ್ಠಿ, ಕಳ್ಳ ಕಾಕರಭಯ, ಬೆಂಕಿ, ಕಾಡುಮೃಗಗಳ ಕಾಟ, ದುರ್ಭಿಕ್ಷ ಮುಂತಾದುವುಗಳು ಇರಲಿಲ್ಲ. ಇಡೀ ರಾಷ್ಟ್ರವೇ ಸುಭಿಕ್ಷವಾಗಿದ್ದಿತು. ಶ್ರೀಕೃಷ್ಣನಿಗೆ ಆ ದಿವ್ಯರತ್ನದ ಬಗ್ಗೆ ತಿಳಿದಿದ್ದಿತು. ಆ ಮಣಿಯು ರಾಜನಾದ ಉಗ್ರಸೇನನಿಗೆ ಯೊಗ್ಯವಾದುದ್ದೆಂದು ಅಭಿಪ್ರಾಯವಿದ್ದಿತು. ತಾನು ಅದನ್ನು ಧರಿಸಲು ಸರ್ಮರ್ಥನಾಗಿದ್ದರೂ ವಂಶದಲ್ಲಿ ವೃಥಾ ವೈಮನಸ್ಸು ಉಂಟಾಗುವುದೆಂದು ಆ ರತ್ನವನ್ನು ಕೃಷ್ಣ ಬಲಾತ್ಕಾರವಾಗಿ ಕಿತ್ತುಕೊಳ್ಳಲಿಲ್ಲ. ಸತ್ರಾಜಿತನೋ ಆ ಸ್ಯಮಂತಕ ಮಣಿಯನ್ನು ಕೊಡು ಎಂದು ಕೃಷ್ಣ

ಕೇಳಬಹುದು ಎಂದುಕೊಂಡು ಅದನ್ನು ತನ್ನ ಸೋದರನಾದ ಪ್ರಸೇನನಿಗೆ ಕೊಟ್ಟನು. ಆ ರತ್ನವನ್ನು ಶುಚಿಯಾಗಿಯೇ ಧರಿಸಬೇಕು. ಆಗಲೇ ಅದು ಸುವರ್ಣೋತ್ಪಾದನೆ ಮುಂತಾದ ಮಹಿಮೆಯನ್ನು ಪ್ರಕಟಿಸುವುದು. ಇಲ್ಲದಿದ್ದರೆ ಧರಿಸಿದವನನ್ನೇ ಅದು ಕೊಂದು ಹಾಕುತ್ತದೆ ಎಂಬ ವಿಷಯವೇ ಪ್ರಸೇನನಿಗೆ ತಿಳಿದಿರಲಿಲ್ಲ. ಹೀಗಾಗಿ ಪ್ರಸೇನನ್ನು ಒಮ್ಮೆ ಸ್ಯಮಂತಕ ಮಣಿಯನ್ನು ಕಂಠದಲ್ಲಿ ಧರಿಸಿ ಕುದುರೆಯನ್ನೇರಿ ಬೇಟೆಗಾಗಿ ಕಾಡಿಗೆ ಹೋದನು. ಅಲ್ಲಿ ಒಂದು ಸಿಂಹವು ಪ್ರಸೇನನನ್ನು ಕೊಂದು ಹಾಕಿತು. ಅಷ್ಟೇ ಅಲ್ಲ ಆ ಮಣಿರತ್ನವನ್ನು ಬಾಯಲ್ಲಿ ಕಚ್ಚಿಕೊಂಡು ಹೋಯಿತು. ಅಷ್ಟರಲ್ಲಿ ಋಕ್ಷರಾಜನಾದ ಜಾಂಬವಂತನು ಅದನ್ನು ನೋಡಿ ಸಿಂಹವನ್ನು ಕೊಂದು ಸ್ಯಮಂತಕಮಣಿಯನ್ನು ತೆಗೆದುಕೊಂಡು ಹೋಗಿ ತನ್ನ ಗುಹೆಯನ್ನು ಪ್ರವೇಶಿಸಿದನು. ಸುಕುಮಾರನೆಂಬ ತನ್ನ ಬಾಲಕನಿಗೆ ಆಟದ ವಸ್ತುವನ್ನಾಗಿ ಆ ರತ್ನವನ್ನು ಕೊಟ್ಟನು. ಇತ್ತ ಪ್ರಸೇನನು ನಗರಕ್ಕೆ ವಾಪಸ್ಸು ಬರದೆ ಇದ್ದುದನ್ನು ಕಂಡು ಎಲ್ಲ ಯಾದವರೂ ತಮ್ಮ ತಮ್ಮಲ್ಲಿಯೇ ಹೀಗೆ ಮಾತನಾಡಿಕೊಂಡರು "ಕೃಷ್ಣನಿಗೆ ಆ ಮಣಿರತ್ನದ ಮೇಲೆ ಬಯಕೆ ಇತ್ತು. ಅವನೇ ಅದನ್ನು ಕಿತ್ತುಕೊಂಡಿರಬೇಕು" ಇದು ಶ್ರೀಕೃಷ್ಣನದೇ ಕೆಲಸ ಎಂದು ಹೇಳಿಕೊಳ್ಳುತ್ತಾ ಒಮ್ಮೊಮ್ಮೇ ಗುಸುಗುಟ್ಟುತ್ತಾ ಇದ್ದರು. ಭಗವಂತನಾದ ಶ್ರೀಕೃಷ್ಣನಿಗೆ ಈ ಲೋಕಾಪವಾದ ವೃತ್ತಾಂತ ತಿಳಿಯಿತು. ಅವನು ಸಮಸ್ತ ಯದು ಪರಿವಾರ, ಯದುಸೇನೆ ಸಹಿತ ಪ್ರಸೇನನ ಕುದುರೆಯು ಹೋದ ದಾರಿಯನ್ನು ಹಿಡಿದು ಹುಡುಕುತ್ತ ಹೊರಟನು. ಮುಂದೆ ಅಶ್ವದೊಡನೆ ಪ್ರಸೇನನು ಸಿಂಹದಿಂದ ಹತನಾಗಿ ಬಿದ್ದಿರುವುದನ್ನು ಕಂಡನು. ಅಂತೂ ಶ್ರೀಕೃಷ್ಣ ಸಮಸ್ತ ಜನರ ಮಧ್ಯದಲ್ಲಿ ಸಿಂಹದ ಹೆಜ್ಜೆಯನ್ನು ಅನುಸರಿಸಿ ಹೋಗಿ ಹೆಜ್ಜೆಯ ಗುರುತನ್ನು ಕಂಡು ಲೋಕಾಪವಾದದಿಂದ ಮುಕ್ತನಾದನು. ಅಷ್ಟಕ್ಕೆ ಬಿಡದೆ ಸಿಂಹದ ಹೆಜ್ಜೆಯನ್ನು ಅನುಸರಿಸಿ ಮುಂದೆ ಹೋದನು. ಸ್ವಲ್ಪ ದೂರದಲ್ಲಿಯೇ ಋಕ್ಷರಾಜನಿಂದ ಸಿಂಹವು ಹತವಾಗಿ ನೆಲದ ಮೇಲೆ ಬಿದ್ದಿರುವುದು ಗೋಚರಿಸಿತು. ರತ್ನವು ಅತ್ಯಂತ ಮಹತ್ತಾದದ್ದರಿಂದ ಆ

ಕರಡಿಯ ಗುರುತುಗಳನ್ನೇ ಅನುಸರಿಸಿ ಹೋದನು. ಬೆಟ್ಟದ ಕಿಬ್ಬದಿಯಲ್ಲಿ ಶ್ರೀಕೃಷ್ಣ ತನ್ನ ಎಲ್ಲ ಯದು ಸೈನ್ಯವನ್ನು ನಿಲ್ಲಿಸಿ ಕರಡಿಯ ಹೆಜ್ಜೆಯನ್ನು ಅನುಸರಿಸಿ, ಋಕ್ಷರಾಜನಾದ ಜಾಂಬವಂತನ ಗುಹೆಯನ್ನು ಪ್ರವೇಶಿಸಿದನು. ಗುಹೆಯೊಳಗೆ ಹೋದ ಶ್ರೀಕೃಷ್ಣನಿಗೆ ಸುಕುಮಾರಕನನ್ನು ಜೋಗುಳ ಹಾಡಿ ಲಾಲಿಸುತ್ತಿದ್ದ ಈ ಮಾತು ಕೇಳಿಸಿತು.

**ಸಿಂಹಃ ಪ್ರಸೇನ ಮವಧೀತ್ ಸಿಂಹೋ ಜಾಂಬವತಾ ಹತಃ**

**ಸುಕುಮಾರಕ ಮಾರೋಧಿಸ್ತವ ಹ್ಯೇಷ ಸ್ಯಮಂತಕಃ**

ವಿ.ಪು. ಅಧ್ಯಾಯ ಚತುರ್ಥಾಂಶ (2ನೇಸಂ) 42ನೇ ಶ್ಲೋಕ

ಇದರ ಅರ್ಥಹೀಗಿದೆ.

**ಪ್ರಸೇನನನ್ನು ಸಿಂಹ ಒಂದು ಕೊಂದುಬಿಟ್ಟಿತು । ಆ ಸಿಂಹವನ್ನು ಜಾಂಬವಂತ ಮುಗಿಸಿಬಿಟ್ಟನು । ಅಳಬೇಡ ಸುಕುಮಾರಕ, ನಿನ್ನದಯ್ಯ ಈ ಸ್ಯಮಂತಕ ।**

ಈ ಶ್ಲೋಕವನ್ನು 'ಗಣೇಶ ಚತುರ್ಥಿ' ಯಂದು ಹೇಳುವ ಸುಪ್ರಸಿದ್ಧವಾದ ಬಹು ಮುಖ್ಯವಾದ ಶ್ಲೋಕ. ಯಾವುದೇ ವೃಥಾಪವಾದ ನಮಗೆ ಬಂದಿದ್ದರೂ ಅದು ಶ್ಲೋಕ ಪಠನದಿಂದ ದೂರವಾಗುತ್ತದೆ ಎಂಬ ನಂಬಿಕೆ ಜನಮನದಲ್ಲಿ ಇಂದಿಗೂ ಆಳವಾಗಿ ಬೇರೂರಿದೆ. ಇದನ್ನು ಕೇಳಿದೊಡನೆ ಶ್ರೀಕೃಷ್ಣ ಸ್ಯಮಂತಕವು ಪತ್ತೆಯಾಯಿತೆಂದು ಇನ್ನು ಒಳಗೆ ಹೋದನು. ಅಲ್ಲಿ ಬಾಲಕನಿಗೆ ಆಟಿಕೆಯಾಗಿ ದಾದಿಯ ಕೈಯಲ್ಲಿ ತೇಜೋರಾಶಿಯಿಂದ ಮಿರಮಿರನೆ ಮಿರುಗುತ್ತಿದ್ದ ಸ್ಯಮಂತಕವನ್ನು ಶ್ರೀಕೃಷ್ಣ ಕಂಡನು. ಆಗಂತುಕನನ್ನು ಕಂಡೊಡನೆ ದಾದಿಯು 'ತ್ರಾಹಿತ್ರಾಹಿ' ಎಂದು ಕೂಗಿಕೊಂಡಳು. ಅವಳ ಆರ್ತಸ್ವರವನ್ನು ಕೇಳಿದೊಡನೆ ಜಾಂಬವಂತನು ಕ್ರೋಧಾವಿಷ್ಟನಾದನು. ಶ್ರೀ ಕೃಷ್ಣನನ್ನು ನೋಡಿ ಕೋಪವು ಉದ್ವಿಗ್ನವಾಯಿತು. ಇಬ್ಬರಿಗೂ ಸತತವಾಗಿ ಇಪ್ಪತ್ತೊಂದು ದಿನಗಳವರೆಗೆ ಯುದ್ಧ ನಡೆಯಿತು. ಇತ್ತ ಗುಹೆಯ ಹೊರಗಡೆಯಿದ್ದ ಯಾದವ ಸೈನಿಕರು ಏಳೆಂಟು ದಿನಗಳವರೆಗೆ ಶ್ರೀಕೃಷ್ಣ ಹೊರಗೆ ಬರುತ್ತಾನೋ ಏನೋ ಎಂದು ಕಾದು ನೋಡಿದನು. ಶ್ರೀ ಕೃಷ್ಣ ಹೊರಗೆ ಬರಲೇ ಇಲ್ಲ.

**ತೇಚ ಯದುಸೈನಿಕಾಸ್ತತ್ರ  ಸಪ್ತಾಷ್ಟದಿನಾನಿ ತನ್ನಿಷ್ಕ್ರಾನ್ತಿ ಮುದೀಕ್ಷಮಾಣಾಸ್ತಂಸ್ಥುಃ ಅನಿಷ್ಕ್ರಮಣೇ ಚ ಮಧುರಿಪುರ ಸಾವವಶ್ಯ ಮತ್ರ ಬಿಲೇತ್ಯಂತಂ ನಾಶಮವಾಪ್ತೋ ಭವಿಷ್ಯತ್ಸನ್ಯಥಾ ತಸ್ಯ ಜೀವತಃ ಕಥ ಮೇತಾವಂತಿ ದಿನಾನಿ ಶತ್ರುಜಯೇ ವ್ಯಾಕ್ಷೇಪೋ ಭವಿಷ್ಯತೀತಿ ಕೃತಾ ಧ್ಯವಸಾಯಾ ದ್ವಾರಕಾ ಗಮ್ಸಹತಃ ಕೃಷ್ಣ ಇತಿ ಕಥಯಾಮಾಸುಃ ತತ್ ಬಾಂಧವಾಶ್ಚ ತತ್ಕಾಲೋಚಿತ ಮಖಿಲ ಮತ್ತ ಕ್ರಿಯಾಕಲಾಪಂ ಚಕ್ರುಃ**

ವಿ.ಪು. 2ನೇಸಂ ಅ13 ಚತುರ್ಥಾಂಶ ಶ್ಲೋ47ರಿಂದ

ಶ್ರೀ ಕೃಷ್ಣನು ಈ ಗುಹೆಯೊಳಗೆ ಖಂಡಿತವಾಗಿಯೂ ಮೃತನಾಗಿರಬೇಕು. ಹಾಗಲ್ಲದೆ ಅವನು ಬದುಕಿದ್ದರೆ ಶತ್ರುವನ್ನು ಜಯಿಸಿದರು ಇಷ್ಟು ಕಾಲಬೇಕೇ? ಎಂದು ನಿಶ್ಚಯಿಸಿ ಅವರು ದ್ವಾರಕೆಗೆ ಹಿಂತಿರುಗಿ ಬಂದು "ಕೃಷ್ಣನು ಹತನಾದನು" ಎಂದು ಹೇಳಿದರು. ಅದನ್ನು ಕೇಳಿ ಶ್ರೀ ಕೃಷ್ಣನ ಬಾಂಧವರು ಕಾಲೋಚಿತವಾದ ಎಲ್ಲ ಔರ್ಧ್ವದೈಹಿಕ ಕ್ರಿಯೆಗಳನ್ನು ನಡೆಸಿಬಿಟ್ಟರು. ಸೃಷ್ಟಿಸ್ಥಿತಿ ಲಯಕರ್ತನಾದ ಭಗವಂತನ ಲೀಲೆಗೆ ಕೊನೆ ಮೊದಲೇ ಇಲ್ಲ. ಅದಿರಲಿ ಅವರು ಅತ್ಯಂತ ಶ್ರದ್ಧೆಯಿಂದ ಯೋಗ್ಯಪಾತ್ರರಾದ ವೈದಿಕರಿಗೆ ಅರ್ಪಿಸಿದ ಅನ್ನಜಲಾದಿಗಳಿಂದ ಇತ್ತಲಾಗಿ ಯುದ್ಧ ಮಾಡುತ್ತಿದ್ದ ಶ್ರೀಕೃಷ್ಣನ ಬಲ ಮತ್ತು ಪ್ರಾಣಗಳಿಗೆ ಅತ್ಯಂತ ಆಪ್ಯಾಯಮಾನವಾಯಿತು. ಜಾಂಬವಂತನಿಗಾದರೆ ಶ್ರೀಕೃಷ್ಣನಿಂದ ಬಲವಾದ ಹೊಡೆತ ತಿಂದು ತಿಂದು ಶರೀರದ ಬಲವು ಕ್ಷೀಣಿಸಿತು. ಕೊನೆಗೆ ಭಗವಂತನಿಗೆ ಜಾಂಬವಂತನು ಅಡ್ಡಬಿದ್ದು ಹೀಗೆಂದನು.

**"ಸುರಾಸುರ ಗಂಧರ್ವ ಯಕ್ಷರಾಕ್ಷಸಾದಿಭಿರಪ್ಯಖಿಲೈರ್ಭವಾನ್ನ ಜೇತಂ ಶಕ್ಯಃ ಕಿಮುತಾವನಿ ಗೋಚರೈರಲ್ಪ ವೀರ್ಯೈರ್ನರೈರ್ನರಾವಯವ ಭೂತೈಶ್ಚ ತಿರ್ಯಗ್ಯೋನ್ಯನು ಸೃತಿಭಿಃ ಕಿಂಪುನರಸ್ಮದ್ವಿಧೈರವಶ್ಯಂ ಭವತಾಸ್ಮತ್ಸ್ವಾಮಿನಾ ರಾಮೇಣೇವ ನಾರಾಯಣಸ್ಯ ಸಕಲ ಜಗತ್ಪರಾಯಣಸ್ಸಾಂಶೇನ ಭಗವತಾ ಭವಿತವ್ಯ ಮಿತ್ಯುಕ್ತಸ್ತಸ್ಮೈ ಭಗವಾನಖಿಲಾವನಿಭಾರಾ ವತರಣಾರ್ಥ ಮವತರಣಮಾಚಚಕ್ಷೇ । ಪ್ರೀತ್ಸಭಿವ್ಸಂಜಿತ ಕರತಲ ಸ್ಪರ್ಶನೇನ ಚೈನಮಪಗತ ಯುದ್ಧ ಖೇದಂ ಚಕಾರ ಸಚಪುಣಿಪತ್ಯ ಪುನರಪ್ಯೇನಂ ಪ್ರಸಾದ್ಯ ಜಾಂಬವತೀಂ ನಾಮ ಕನ್ಯಾಂ**

**ಗೃಹಾಗತಾಯರ್ಘ್ಯಭೂತಾಂ**

**ಗ್ರಾಹಯಾಮಾಸ ಸ್ಸಮಂತಕ ಮಣಿರತ್ನಮಕ್ಷಿ ಪ್ರಣಿಪತ್ಯತಸ್ಮೈ ಪ್ರದದೌ**

(ವಿ.ಪು. 2ನೇಸಾ ಚತುರ್ಥಾಂಶ ಅಧ್ಯಾಯ 13 ಶ್ಲೋಕ 54,55,56)

ಹೇ ಪರಾಕ್ರಮಿ, ಸಕಲ ಸುರಾಸುರ ಗಂಧರ್ವಯಕ್ಷ ರಾಕ್ಷಸಾದಿಗಳಿಂದಲೂ ನಿನ್ನನ್ನು ಗೆಲ್ಲಲು ಸಾಧ್ಯವೇ ಇಲ್ಲ. ಇನ್ನು ಭೂಲೋಕದಲ್ಲಿರುವ ಅಲ್ಪ ವೀರ್ಯರಾದ ಮಾನವರಿಂದ ಗೆಲ್ಲಲು ಸಾಧ್ಯವೇ? ಮಹಿಮಾನ್ವಿತನಾದ ನೀನು ನನ್ನ ಸ್ವಾಮಿಯ ಶ್ರೀರಾಮನಂತೆ ನಿಖಿಲ ಜಗತ್ತಿಗೆ ಪರಮಗತಿಯಾದ ಶ್ರೀಮನ್ನಾರಾಯಣನ ಅಂಶಾವತಾರಿಯಾಗಿರಬೇಕು ಎಂದನು. ಆಗ ಅಚ್ಯುತನು ಸಕಲ ಭೂಭಾರವನ್ನಿಳಿಸುವುದಕ್ಕಾಗಿ ತಾನು ಅವತರಿಸಿದ್ದೇನೆಂದು ಜಾಂಬವಂತನಿಗೆ ತಿಳಿಸಿದನು. ಅಷ್ಟೇಅಲ್ಲ ಪ್ರೀತಿಪೂರ್ವಕವಾಗಿ ಜಾಂಬವಂತನ್ನು ತನ್ನ ಕೈಗಳಿಂದ ನೇವರಿಸಿ ಆತನ ಯುದ್ಧಶ್ರಮವನ್ನು ಹೋಗಲಾಡಿಸಿದನು. ಜಾಂಬವಂತನು ಮತ್ತೊಮ್ಮೆ ನಮಸ್ಕರಿಸಿ ಆತನನ್ನು ಪ್ರಸನ್ನಗೊಳಿಸಿ ತನ್ನ ಮಗಳಾದ ಜಾಂಬವತಿಯೆಂಬ ಕನ್ಯೆಯನ್ನು ವಿವಾಹಮಾಡಿಕೊಟ್ಟನು. ಅಲ್ಲದೆ ಸ್ಯಮಂತಕ ಮಣಿರತ್ನವನ್ನು ಪ್ರಣಾಮಪೂರ್ವಕವಾಗಿ ಸಮರ್ಪಿಸಿದನು. ವಾಸ್ತವವಾಗಿ ಶ್ರೀಕೃಷ್ಣನಿಗೆ ಆ ಸ್ಸಮಂತಕಮಣಿಯನ್ನು ಸ್ವೀಕರಿಸಲು ಇಷ್ಟವಿರಲಿಲ್ಲ. ತನಗೆ ಬಂದ ಕೆಟ್ಟ ಹೆಸರನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ಅದನ್ನು ಸ್ವೀಕರಿಸಿದನು. ನಂತರ ಜಾಂಬವತಿಯೊಡನೆ ದ್ವಾರಕೆಗೆ ಹಿಂತಿರುಗಿದನು. ಶ್ರೀ ಕೃಷ್ಣ ಬಂದನೆಂಬುದನ್ನು ತಿಳಿದು ದ್ವಾರಕಾವಾಸಿಗಳೆಲ್ಲಾ ಹಿರಿಹಿರಿ ಹಿಗ್ಗಿದರು. ಶ್ರೀಕೃಷ್ಣನು ನಡೆದ ಸಂಗತಿಯನ್ನೆಲ್ಲಾ ವಿವರವಾಗಿ ಪುರಜನರಿಗೆ ವಿವರಿಸಿದನು. ಸ್ಯಮಂತಕಮಣಿಯಿಂದಾಗಿ ಅಪಕೀರ್ತಿ ದೂರವಾಯಿತು. ನಂತರ ಸ್ಯಮಂತಕ ಮಣಿಯನ್ನು ಸತ್ರಾಜಿತನಿಗೆ ಕೊಟ್ಟನು. ಇತ್ತ ಸತ್ರಾಜಿತನಿಗೆ ಎಂದೂ ಇಲ್ಲದ ಕಳಂಕವನ್ನು ಶ್ರೀಕೃಷ್ಣನ ಮೇಲೆ ಹೊರೆಸಿದೆನೆಂದು ಹೆದರಿಕೆಯುಂಟಾಯಿತು. ಅದಕ್ಕಾಗಿ ತನ್ನ ಪುತ್ರಿಯಾದ ಸತ್ಯಭಾಮೆಯನ್ನು ಶ್ರೀಕೃಷ್ಣನಿಗೆ ಕೊಟ್ಟು ವಿವಾಹ ಮಾಡಿದನು. ಅಕ್ರೂರ, ಕೃತವರ್ಮ, ಶತಧನ್ವ ಮುಂತಾದ ಯಾದವರು ಅದಕ್ಕೆ ಮೊದಲೇ ಸತ್ಯಭಾಮೆಯನ್ನು ತಮಗೆ ಕೊಡಬೇಕೆಂದು ಯಾಚಿಸಿದ್ದರು. ಈಗ ಅವಳನ್ನು ಶ್ರೀಕೃಷ್ಣನಿಗೆ ಕೊಟ್ಟಿದ್ದರಿಂದ ತಮಗೆ ಇದು ಅಪಮಾನವಾಯಿತೆಂದು ಬಗೆದು

ಸತ್ರಾಜಿತನ ಮೇಲೆ ವೈರವನ್ನು ಬೆಳಸಿದರು. ಸತ್ರಾಜಿತನನ್ನು ಕೊಂದು ಹಾಕಬೇಕೆಂದು ಎಣಿಸಿದರು. ಶತಧನ್ವನು ಸತ್ರಾಜಿತನನ್ನು ಕೊಲ್ಲಲು ಮುಂದೆ ಬಂದನು. ಅಷ್ಟರಲ್ಲಿ ಶ್ರೀಕೃಷ್ಣನಿಗೆ ಪಾಂಡವರು ಅರಗಿನ ಮನೆಯಲ್ಲಿ ಸುಟ್ಟುಹೋದರೆಂಬ ಸುದ್ಧಿ ಬಂದಿತು. ಶ್ರೀಕೃಷ್ಣನಿಗೆ ಪರಮಾರ್ಥವೇನೆಂಬುದು ಅಂದರೆ ಪಾಂಡವರು ಬದುಕಿದ್ದಾರೆಂಬ ನೈಜ ಸಂಗತಿಯು ತಿಳಿದಿದ್ದರೂ ದುರ್ಯೋಧನನು ದ್ವೇಷಸಾಧನೆಗಾಗಿ ಮಾಡಬಹುದಾದ ಪ್ರಯತ್ನಗಳನ್ನು ಸಡಿಲಗೊಳಿಸಬೇಕೆಂದೂ ತಾನು ತನ್ನ ಬಂಧುಕೃತ್ಯವನ್ನು ಪಾಲಿಸಬೇಕೆಂದೂ ವಾರಣಾವರ್ತಕ್ಕೆ ಶ್ರೀಕೃಷ್ಣ ಹೋದನು. ಇತ್ತ ಆ ಸಮಯವನ್ನೇ ಕಾಯುತ್ತಿದ್ದ ಶತಧನ್ವನು ನಿದ್ರಿಸುತ್ತಿದ್ದ ಸತ್ರಾಜಿತನನ್ನು ಕೊಂದು ಸ್ಯಮಂತಮಣಿಯನ್ನು ತೆಗೆದುಕೊಂಡು ಹೋದನು, ಪಿತೃವಧೆಯಿಂದ ಅತ್ಯಂತ ಕ್ರುದ್ಧಳಾದ ಸತ್ಯಭಾಮೆಯು ಒಡನೆಯ ರಥವನ್ನೇರಿ ವಾರಣಾವರ್ತಕ್ಕೆ ಧಾವಿಸಿದಳು. ಅಲ್ಲಿ ಶ್ರೀಕೃಷ್ಣನನ್ನು ಕಂಡು ಭಗವಾನ್ ನನ್ನ ತಂದೆ ನನ್ನನ್ನು ನಿನಗೆ ಮದುವೆ ಮಾಡಿಕೊಟ್ಟನೆಂಬ ಹೊಟ್ಟೆ ಕಿಚ್ಚಿನಿಂದ ಶತಧನ್ವನು ನನ್ನ ತಂದೆಯನ್ನು ಕೊಂದು ಸ್ಯಮಂತಕ ಮಣಿಯನ್ನು ಕೊಂಡೊಯ್ದಿದ್ದಾನೆ. ಮೂರುಲೋಕದ ಕತ್ತಲೆಯನ್ನು ತನ್ನ ಪ್ರಕಾಶದಿಂದ ಅಡಗಿಸುತ್ತಿದ್ದ ಶ್ರೇಷ್ಠವಾದ ರತ್ನವು ಅದು. ಇದೇ ನಿನಗೆ ಮಾಡಿದ ಅಪಮಾನ ಇದನ್ನು ಪರ್ಯಾಲೋಚಿಸಿ ಯಾವುದು ನಿನಗೆ ಯೋಗ್ಯವೆನಿಸುತ್ತದೆಯೋ ಅಂತೆಯೇ ಮಾಡು ಎಂದು ಪ್ರಚೋದಿಸಿದಳು. ಕೃಷ್ಣನಿಗೆ ಇದನ್ನು ಕೇಳಿ ಒಳಗೊಳಗೇ ಸಂತಸವಾಯಿತೆಂದು ತೋರುತ್ತದೆ. ಏಕೆಂದರೆ ಶತಧನ್ವಾದಿಗಳನ್ನು ದಂಡಿಸಲು ಇದೊಂದು ಸದವಕಾಶ ದೊರಕಿದಂತಾಯಿತು. ಈಗಾಗಲೇ ಶತಧನ್ವಾದಿಗಳು ಕೃಷ್ಣನ ಪರಾಕ್ರಮಕ್ಕೆ ಬೆಂದು ಸತ್ಯಭಾಮೆಯ ನಿಮಿತ್ತವಾಗಿ ಬಹಳಷ್ಟು ದ್ವೇಷಿಸುತ್ತಿದ್ದರು. ಸತ್ಯಭಾಮೆಯ ಮಾತುಗಳನ್ನು ಕೇಳಿ ಶ್ರೀಕೃಷ್ಣನು ರಕ್ತನೇತ್ರನಾಗಿ ಸತ್ಯಭಾಮೆಯನ್ನು ಕುರಿತು ಇಂತೆಂದನು, "ಸತ್ಯಭಾಮಾ ಇದು ನನಗೆ ಮಾಡಿದ ಅವಮಾನವೇ ಸರಿ. ಆ ದುರಾತ್ಮನ ಈ ವರ್ತನೆಯನ್ನು ನಾನು ಸಹಿಸಲಾರೆ" ಎಂದು ಹೇಳಿ ಲೀಲಾ ವಿನೋದನಾದ ಶ್ರೀಕೃಷ್ಣ ಬಲರಾಮನ ಬಳಿಗೆ ಬಂದು ಅಣ್ಣ ಬೇಟೆಗಾಗಿ ಹೋಗಿದ್ದ ಪ್ರಸೇನನನ್ನು ಅಡವಿಯಲ್ಲಿ ಸಿಂಹವು ಕೊಂದು ಹಾಕಿತು. ಈಗ ಸತ್ರಾಜಿತನನ್ನು ಸಹ

ಶತಧನ್ವನು ವಧಿಸಿದ್ದಾನೆ. ಅವರಿಬ್ಬರೂ ಸತ್ತು ಹೋಗಿದ್ದರಿಂದ ಆ ಮಣಿರತ್ನವು ಈಗ ನಮ್ಮಿಬ್ಬರಿಗೂ ಸಮಾನವಾಗಿ ಸೇರತಕ್ಕುದಾಗಿದೆ. ಆದ್ದರಿಂದ ಏಳು ರಥವನ್ನೇರು ಶತಧನ್ವದ ಸಂಹಾರಕ್ಕಾಗಿ ಪ್ರಯತ್ನಿಸು ಎಂದನು. ಅದನ್ನು ಕೇಳಿ ಬಲರಾಮನು ಆಗಲೆಂದು ಸಮ್ಮತಿಸಿದನು. ಹೀಗೆ ಬಲರಾಮ ಶ್ರೀ ಕೃಷ್ಣರಿಬ್ಬರೂ ಯುದ್ಧ ಸನ್ನದ್ಧರಾಗಿರುವ ವಿಷಯ ಶತಧನ್ವನಿಗೆ ತಿಳಿಯಿತು. ಅವನು ಕೃತವರ್ಮ, ಅಕ್ರೂರ ಮುಂತಾದವರ ಬಳಿ ಹೋಗಿ ಯುದ್ಧಕ್ಕೆ ತನ್ನ ಬೆಂಬಲವಾಗಿ ನಿಲ್ಲಬೇಕೆಂದು ಕೇಳಿಕೊಂಡನು ಆದರೆ ಶ್ರೀಕೃಷ್ಣನ ಪರಾಕ್ರಮವನ್ನು ಚೆನ್ನಾಗಿ ಬಲ್ಲ ಅವರು ಶತಧನ್ವನಿಗೆ ಬೆಂಬಲಿಗರಾಗಿ ನಿಲ್ಲಲು ಒಪ್ಪಿಕೊಳ್ಳಲಿಲ್ಲ. ಆದರೆ ಶತಧನ್ವನು ಅಷ್ಟಕ್ಕೇ ಬಿಡಲಿಲ್ಲ. ಅಕ್ರೂರನನ್ನು ಕುರಿತು 'ಈ ಮಣಿಯನ್ನಾದರೂ ತೆಗೆದುಕೊಂಡು ರಕ್ಷಿಸು ಎಂದನು. ಅದಕ್ಕೆ ಅಕ್ರೂರನು ನೋಡು ಕಡೆಗಾಲ ಬಂದರೂ ಈ ವಿಷಯವನ್ನು ಯಾರ ಯಾರಿಗೂ ತಿಳಿಸಕೂಡದು ಹಾಗಾದರೆ ಮಾತ್ರ ನಾನು ತೆಗೆದುಕೊಳ್ಳುವೆನು ಎಂದನು. ಶತಧನ್ವನು ಅದಕ್ಕೆ ಒಪ್ಪಲಾಗಿ ಅಕ್ರೂರನು ಸ್ಯಮಂತಕ ಮಣಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ನಂತರ ಶತಧನ್ವನು ಅಸಾಧಾರಣವಾದ ವೇಗಶಾಲಿಯಾದ ಒಂದು ಹೆಣ್ಣು ಕುದುರೆಯನ್ನೇರಿ ದ್ವಾರಕೆಯಿಂದ ಓಡಿಹೋದನು. ಅದನ್ನರಿತು ಬಲದೇವ ವಾಸುದೇವರಿಬ್ಬರೂ ಶೈಬ್ಯ, ಸುಗ್ರೀವ, ಮೇಘಪುಷ್ಪ, ಬಲಾಹಕ ಎಂಬ (ಇವು ಕುದುರೆಗಳ ಹೆಸರು) ನಾಲ್ಕು ಕುದುರೆಗಳನ್ನು ಹೂಡಿದ ರಥವನ್ನೇರಿ ಶತಧನ್ವನನ್ನು ಅಟ್ಟಿಸಿಕೊಂಡು ಹೋದರು. ಶತಧನ್ವನ ಕುದುರೆಯು ನೂರು ಯೋಜನಗಳ ದೂರವನ್ನು ದಾಟಿತು. ಆದರೂ ಇನ್ನು ಮುಂದೆಯೂ ಓಡಿಸಿದ್ದರಿಂದ ಮಿಥಿಲಾ ದೇಶದ ಒಂದು ಅರಣ್ಯದಲ್ಲಿ ಪ್ರಾಣವನ್ನು ಬಿಟ್ಟಿತು. ಶತಧನ್ವನು ಅದನ್ನು ತ್ಯಜಿಸಿ ಬರಿಗಾಲಿನಿಂದಲೇ ಓಡತೊಡಗಿದನು. ಆಗ ಶ್ರೀಕೃಷ್ಣನು ಬಲರಾಮನನ್ನು ರಥದಲ್ಲಿಯೇ ಕುಳಿತಿರುವಂತೆ ಹೇಳಿ ಓಡುತ್ತಿರುವ ಶತಧನ್ವನನ್ನು ಕೊಲ್ಲಲು ಹಿಂಬಾಲಿಸಿದನು. ಸುಮಾರು ಕ್ರೋಶಗಳಷ್ಟು ದೂರ ನೆಲದಲ್ಲಿ ಓಡುತ್ತಾ ಹೋಗಿ ದೂರದಲ್ಲಿ ಕಂಡ ಶತಧನ್ವದ ಮೇಲೆ ಚಕ್ರವನ್ನು ಪ್ರಯೋಗಿಸಿ ಅವನ ತಲೆಯನ್ನು ಕತ್ತರಿಸಿದನು. ಸ್ಯಮಂತಕಮಣಿಯನ್ನು ಹುಡುಕಿದನು. ದೇಹ ವಸ್ತ್ರಾದಿಗಳನ್ನು ಎಷ್ಟು ಶೋಧಿಸಿದರೂ ಶ್ರೀಕೃಷ್ಣನಿಗೆ ಸ್ಯಮಂತಕ ಮಣಿಯು ಸಿಗಲಿಲ್ಲ.

ಆಗ ಶ್ರೀ ಕೃಷ್ಣ ಬಲರಾಮನ ಬಳಿ ಬಂದು “ಅಣ್ಣಾ ನಾವು ವ್ಯರ್ಥವಾಗಿ ಶತನ್ವನನ್ನು ಕೊಂದೆವು. ಸಕಲ ಜಗತ್‌ಸಾರಭೂತವಾದ ಸ್ಯಮಂತಕ ಮಣಿಯು ಮಾತ್ರ ದೊರೆಯಲಿಲ್ಲ ಎಂದನು. ಶ್ರೀಕೃಷ್ಣ ಆಣೆ ಪ್ರಮಾಣಗಳಿಂದ ಯಥಾಸ್ಥಿತಿಯನ್ನು ವಿವರಿಸಿದನು. ಅದನ್ನು ಕೇಳಿ ಬಲಭದ್ರನ ಕೋಪ ಇಮ್ಮಡಿಸಿತು. ಅವನು ಶ್ರೀ ಕೃಷ್ಣನನ್ನು ನೋಡಿ “ಧಿಕ್ಕಾರ ನಿನಗೆ ! ನೀನು ಅದೆಷ್ಟು ಧನಲೋಭಿಯಾಗಿರುವೆ! ನೀನು ನನ್ನ ಸಹೋದರನೆಂಬುದಕ್ಕಾಗಿ ಕ್ಷಮಿಸಿದ್ದೇನೆ. ಇದೋ ಈ ದಾರಿಯನ್ನು ಹಿಡಿದು ನೀನು ಸ್ವೇಚ್ಛೆಯಾಗಿ ಹೋಗು ! ದ್ವಾರಕೆಯಿಂದ ನನಗೆ ಆಗಬೇಕಾದುದ್ದು ಏನೂ ಇಲ್ಲ ನನ್ನೆದುರಿಗೆ ಮತ್ತೆ ಮತ್ತೆ ಸುಳ್ಳು ಆಣೆ ಹಾಕುವುದನ್ನು ನಿಲ್ಲಿಸು ಎಂದು ಕೂಗಾಡಿದನು. ಶ್ರೀ ಕೃಷ್ಣನ ಪ್ರಾರ್ಥನೆಯನ್ನು ಲೆಕ್ಕಿಸದೆ ಬಲರಾಮನು ವಿದೇಹನಗರಕ್ಕೆ ಹೊರಟುಹೋದನು. ಅಲ್ಲಿ ಜನಕ ರಾಜನು ಅರ್ಘ್ಯಪಾದಾದಿಗಳಿಂದ ಬಲರಾಮನಾನ್ನು ಸತ್ಕರಿಸಿದನು.

ಇತ್ತ ಶ್ರೀಕೃಷ್ಣ ದ್ವಾರಕೆಗೆ ಬಂದನು. ಬಲರಾಮನು ಜನಕರಾಜನ ಗೃಹದಲ್ಲಿದ್ದಾಗ ಬಂದು ಗಧಾಯುದ್ಧದಲ್ಲಿ ಶಿಕ್ಷಣವನ್ನು ಪಡೆದನು. ಮೂರು ವರ್ಷ ಕಳೆಯಿತು. ಶ್ರೀ ಕೃಷ್ಣನು ಸ್ಯಮಂತಕವನ್ನು ಅಪಹರಿಸಿಲ್ಲವೆಂಬುದು ಉಗ್ರಸೇನ, ಬಭ್ರು ಮುಂತಾದವರಿಗೆ ತಿಳಿಯಿತು. ಅವರೆಲ್ಲರೂ ಸೇರಿ ವಿದೇಹನಗರಕ್ಕೆ ಹೋಗಿ ಈ ವಿಷಯವನ್ನು ಬಲರಾಮನಿಗೆ ಹೇಳಿ ದೃಢಪಡಿಸಿದರು. ಹೀಗೆ ಪೂರ್ಣ ವಿಶ್ವಾಸ ಉಂಟಾದ ನಂತರ ಬಲರಾಮನು ದ್ವಾರಕೆಗೆ ಬಂದನು. ಅಬ್ಬಾ ! ಸ್ಯಮಂತಕ ಮಣಿಯ ಸಹವಾಸ ಸಾಕಪ್ಪಾ! ಇಲ್ಲ, ಇಲ್ಲ ಇನ್ನೂ ಮುಗಿದಿಲ್ಲ. ಮಣಿಯ ಅವಾಂತರ ಕೇಳೋಣ.

ಇತ್ತ ಅಕ್ರೂರನು ಸದಾ ಭಗವಂತನ ಧ್ಯಾನಮಾಡುತ್ತಾ ಮಣಿರತ್ನದಿಂದ ದೊರಕುವ ಸುವರ್ಣದಿಂದ ಅವಿರತವಾಗಿ ಯಜ್ಞಗಳನ್ನು ನಡೆಸುತ್ತಿದ್ದನು. ಯಜ್ಞದೀಕ್ಷೆಯಲ್ಲಿರುವ ಕ್ಷತ್ರಿಯನನ್ನಾಗಲಿ, ವೈಶ್ಯನನ್ನಾಗಲಿ ಕೊಂದರೆ ಬ್ರಹ್ಮಹತ್ಯಾ ದೋಷ ಬರುತ್ತದೆ ಎಂಬ ವಿಷಯ ಅಕ್ರೂರನಿಗೆ ತಿಳಿದಿದ್ದಿತು. ಆದ್ದರಿಂದ ಅವನು ಸದಾ ಕಾಲವು ಯಜ್ಞದೀಕ್ಷೆಯೆಂಬ ಕವಚವನ್ನು ತೊಟ್ಟುಕೊಂಡೇ ಇರುತ್ತಿದ್ದನು. ಈ ಸ್ಯಮಂತಕಮಣಿ ಪ್ರಭಾವದಿಂದ ದ್ವಾರಕೆಯಲ್ಲಿ ಅರವತ್ತೆರಡು

ವರ್ಷ ರೋಗ ದುರ್ಭಿಕ್ಷ, ಮಾರಿಕಾ (ಮಾರಿಬೇನೆ) ಮುಂತಾದ ಅಕಾಲ ಮರಣ ಸಂಭವಿಸಲಿಲ್ಲ. ಹೀಗಿರುವಲ್ಲಿ ಅಕ್ರೂರಪಕ್ಷದವರಾದ ಭೋಜರು ಸಾತ್ವತನ ಪ್ರಪೌತ್ರ (ಮೊಮ್ಮಗನ ಮಗ ಮರಿಮಗ) ಶತ್ರುಘ್ನನನ್ನು ವಧಿಸಿದರು. ಆಗ ಭೋಜ ಸಂತತಿಯವರೊಡನೆ ಅಕ್ರೂರನೂ ದ್ವಾರಕೆಯನ್ನು ತ್ಯಜಿಸಿ ದೂರ ಹೋಗಬೇಕಾದ ಪ್ರಸಂಗವೊಂದು ಬಂದಿತು. ಆಶ್ಚರ್ಯವೇನೆಂದರೆ ಅಕ್ರೂರನು ದ್ವಾರಕೆಯನ್ನು ಬಿಟ್ಟು ಹೋದ ದಿನದಿಂದ ದ್ವಾರಕೆಯಲ್ಲಿ ರೋಗ, ದುರ್ಭಿಷ, ಸರ್ಪ ಅನಾವೃಷ್ಟಿ, ಮಾರಿಕಾಬೇನೆ  ಮುಂತಾದ ಉಪದ್ರವಗಳು ಕಾಣಿಸಿಕೊಂಡವು. ಆಗ ಶ್ರೀಕೃಷ್ಣ ಯಾದವರೊಡನೆಯೂ ಬಲರಾಮ ಉಗ್ರಸೇನರೊಡನೆ ಸೇರಿ ಮಂತ್ರಾಲೋಚನೆಯನ್ನು ನಡೆಸಿದನು. ಇದರ ಬಗ್ಗೆ ಶ್ರೀಕೃಷ್ಣನಿಗೆ ಅಕ್ರೂರನ ಮೇಲೆ ಹೆಚ್ಚಿನ ಸಂದೇಹವಿದ್ದಿತು. ಏಕೆಂದರೆ ಅಕ್ರೂರನು ಹೊರಟುಹೋದ ಮೇಲೆ ಇಷ್ಟೊಂದು ಉಪದ್ರವಗಳು ಬಂದೊದಗಿವೆ ಎಂದು ಊಹಿಸಿಕೊಂಡನು. ಇದರ ಬಗ್ಗೆ ಪ್ರಸ್ತಾಪಿಸುವಾಗ ಅಂಧಕ ಎಂಬ ಯದುವೃದ್ಧನು ಹೀಗೆಂದನು. “ಈ ಅಕ್ರೂರನಿದ್ದಾನಲ್ಲಾ ಇವನ ತಂದೆ ಹೆಸರು ಶ್ವಪಲ್ಯ ಎಂದು ಅವನು ಎಲ್ಲಿರುತ್ತಿದ್ದನೋ ತಾಯಿ ಗಾಂದಿನಿ ಇವನ ಮಕ್ಕಳ ಹೆಸರು ದೇವಾವಾನ್, ಉಪದೇವ ಎಂದು ಅಲ್ಲಿ ಸುಭಿಕ್ಷ ತುಂಬಿ ತುಳುಕುತ್ತಿದ್ದಿತು. ಒಮ್ಮೆ ಕಾಶಿರಾಜನ ರಾಜ್ಯದಲ್ಲಿ ಅನಾವೃಷ್ಟಿಯಾದಾಗ ಶ್ವಪಲ್ಯನನ್ನು ಅಲ್ಲಿಗೆ ಕರೆದುಕೊಂಡು ಹೋದರಂತೆ. ಆ ಕ್ಷಣದಲ್ಲಿಯೆ ಮಳೆ ಬಂದಿತಂತೆ. ಅಂತಹ ಮಹಾ ಮಹಿಮ ಶ್ವಪಲ್ಯ. ಕಾಶೀರಾಜನ ಪತ್ನಿಯ ಗರ್ಭದಲ್ಲಿನ ಒಂದು ಕನ್ಯಾರತ್ನವು ಆವಿರ್ಭವಿಸಿತು. ಪ್ರಸವ ಕಾಲವು ಪೂರ್ಣವಾದರೂ ಮಗುವು ಗರ್ಭದಿಂದ ಹೊರ ಬರಲೇ ಇಲ್ಲ. ಹೀಗೆ ಗರ್ಭದಿಂದ ಹೊರಗೆ ಬರದೆ 12 ವರ್ಷಗಳು ಕಳೆದವು. ಆಗ ಕಾಶೀರಾಜನು ಗರ್ಭದಲ್ಲಿದ್ದ ಮಗಳನ್ನು ಕುರಿತು, ಎಲೈ ಮಗಳೇ ನೀನೇಕೆ ಹುಟ್ಟಿ ಬರುವುದಿಲ್ಲ. ಈಚೆಗೆ ಬಾಮ್ಮಾ ಎಂದಾಗ ಶಿಶಾವು ಗರ್ಭದಲ್ಲಿದ್ದುಕೊಂಡೇ “ಅಪ್ಪಾ ನೀನು ಪ್ರತಿದಿನವೂ ಒಂದೊಂದು ಗೋವನ್ನು ಬ್ರಾಹ್ಮಣರಿಗೆ ದಾನ ಮಾಡುತ್ತಾ ಹೋಗುವೆಯಾದರೆ ಮುಂದಿನ ವರ್ಷಗಳಲ್ಲಿ ನಾನು ಗರ್ಭದಿಂದ ಹೊರಗೆ ಬರುವೆನು ಎಂದು ಹೇಳಿತಂತೆ. ಈ ಮಗುವಿನ ಶರತ್ತನ್ನು ತಂದೆಯು ನಡೆಸಿಕೊಟ್ಟನು. ನಂತರ ಮಗುವಿಗೆ ‘ಗಾಂದಿನೀ’ ಎಂದು

ಹೆಸರಿಟ್ಟನು (ಗೋವನ್ನು ದಿನವೂ ದಾನ ಮಾಡಿದ್ದರಿಂದ ಆ ಮಗುವಿಗೆ 'ಗಾಂಧಿನಿ' ಎಂದು ಹೆಸರು ಬಂದಿತು) ಆದ್ದರಿಂದ ಮಹಾತ್ಮನಾದ ಶ್ವಫಲ್ಕನ ಮಗನೇ ಈ ಅಕ್ರೂರ. ಅವನೂ ಸಹ ದಾನಶೂರನೇ ಆಗಿದ್ದನು. ಆದ್ದರಿಂದ ಅಕ್ರೂರನನ್ನು ಮತ್ತೆ ದ್ವಾರಕೆಗೆ ಕರೆತರಬೇಕೆಂದುಕೊಂಡು ನಿಶ್ಚಯಿಸಿದರು. ಅಂತೆಯೇ ಅವನನ್ನು ಕರೆತಂದಾಕ್ಷಣ ದ್ವಾರಕನಗರವು ಸುಭಿಕ್ಷವಾಯಿತು. ಮತ್ತೊಮ್ಮೆ ಕೃಷ್ಣನು ಅಕ್ರೂರನನ್ನು ಕುರಿತು "ನನ್ನ ಅಣ್ಣ ಬಲರಾಮನಿಗೆ ಸ್ಯಮಂತಕಮಣಿ ನನ್ನ ಹತ್ತಿರ ಇದೆ ಎಂಬ ಶಂಕೆಯುಂಟಾಗಿದೆ. ಆದ್ದರಿಂದ ಒಮ್ಮೆ ಅದನ್ನು ನನ್ನ ಅಣ್ಣನಿಗೆ ತೋರಿಸಿಬಿಡು ಎಂದನು. ಆಗ ಅಕ್ರೂರನು " ಈ ಮಣಿಯನ್ನು ಶತಧನ್ವನು ನನಗೆ ಕೊಟ್ಟಿದ್ದನು. ಅವನು ಮೃತನಾದ ಮೇಲೆ ನೀನು ಮುಂದೊಂದು ದಿನ ಎಂದಾದರೂ ಅದನ್ನು ನೀನು ಕೇಳುತ್ತಿಯೆಂದು ನನಗೆ ಗೊತ್ತಿತ್ತು. ಇಷ್ಟು ದಿನ ಇದನ್ನು ಬಹು ಕಷ್ಟದಿಂದ ರಕ್ಷಿಸಿಕೊಂಡು ಬಂದೆ. ಇದೋ ಈ ಸ್ಯಮಂತಕ ಮಣಿ ತೆಗೆದುಕೋ ಯಾರಿಗೆ ಬೇಕಾದರೂ ಕೊಡು ಎಂದನು. ನಂತರ ಚಿಕ್ಕ ಸಂಪುಟದಲ್ಲಿಟ್ಟಿದ್ದ ಸ್ಯಮಂತಕ ಮಣಿಯನ್ನು ಹೊರಗೆ ತೆಗೆದು ಯಾದವ ಸಭೆಯ ಮುಂದಿಟ್ಟನು. ಇದರಿಂದ ಆಸ್ಥಾನ ಮಂಟಪವು ಉಜ್ವಲಕಾಂತಿಯಿಂದ ಬೆಳಗಿತು. ಅದನ್ನು ನೋಡಿ ಅಚ್ಚರಿಗೊಂಡ ಸಕಲ ಯಾದವರು ಆಶ್ಚರ್ಯಚಕಿತರಾಗಿ 'ಸಾಧು ಸಾಧು' ಎಂದು ಉದ್ಗರಿಸಿದರು. ಆ ಮಣಿಯನ್ನು ನೋಡಿ ಬಲಭದ್ರನು ನನಗೆ ಇದು ಸೇರಬೇಕಾದ್ದು. ಕೃಷ್ಣನೇ ಇದು ನಮ್ಮಿಬ್ಬರಿಗೂ ಸಮಾನವಾಗಿರತಕ್ಕದೆಂದು ಹೇಳಿದ್ದಾನೆ ಎಂದನು. ಸತ್ಯಭಾಮೆಯಾದರೋ "ಇದು ನನಗೇ ಸಲ್ಲಬೇಕು ಇದು ನನಗೆ ಪಿತೃಧನ" ಎಂದು ಹೇಳಿ ರತ್ನವನ್ನು ಬಯಸಿದಳು. ಶ್ರೀ ಕೃಷ್ಣ ಈ ಸಂದರ್ಭದಲ್ಲಿ ಉಭಯ ಸಂಕಟಕ್ಕೆ ಒಳಗಾದನು. ಈ ಸಂದರ್ಭದಲ್ಲಿ ಅಕ್ರೂರನನ್ನು ಕುರಿತು ಸಕಲ ಯಾದವರೆದುರಿಗೆ ಹೀಗೆ ಹೇಳಿದನು. "ನಾನು ನನ್ನ ಆತ್ಮಶುದ್ಧಿಯನ್ನು ವ್ಯಕ್ತಪಡಿಸಲು ಈ ಯಾದವರ ಎದುರಿಗೆ ಮಣಿರತ್ನವನ್ನು ತೋರಿಸಿದ್ದೇನೆ. ಈ ರತ್ನದ ಮೇಲೆ ನನಗೂ, ನನ್ನ ಅಣ್ಣ ಬಲರಾಮನಿಗೂ ಅಧಿಕಾರವು ಸಮಾನವಾದ್ದು. ಸತ್ಯಭಾಮೆಗೆ ಪಿತೃಧನವಾಗಿದೆ ನಾವು ಮೂವರನ್ನು ಬಿಟ್ಟು ಬೇರಾರಿಗೂ ಇದರ ಮೇಲೆ ಅಧಿಕಾರವಿಲ್ಲ. ಆದರೆ ಒಂದು ವಿಷಯ

ಈ ರತ್ನವನ್ನು ಧರಿಸತಕ್ಕವನು ಸರ್ವಕಾಲದಲ್ಲಿ ಶುಚಿಯಾಗಿ ಬ್ರಹ್ಮಚರ್ಯಾದಿ ಗುಣಗಳನ್ನು ಪಾಲಿಸತಕ್ಕವನಾಗಿರಬೇಕು. ಆಗಲೇ ಇದು ಸಮಸ್ತ ರಾಷ್ಟ್ರಕ್ಕೂ ಶುಭವನ್ನುಂಟುಮಾಡುತ್ತದೆ. ಹಾಗಲ್ಲದೆ ಅಶುಚಿಯಾದವರು ಇದನ್ನು ಧರಿಸಿದರೆ, ಧರಿಸಿದವರನ್ನೇ ನಾಶಪಡಿಸುತ್ತದೆ. ನಾನು ಇದನ್ನು ಧರಿಸಲು ಶಕ್ಯನಲ್ಲ, ಏಕೆಂದರೆ ಹದಿನಾರು ಸಾವಿರ ಹೆಂಡತಿಯರನ್ನು ಕಟ್ಟಿಕೊಂಡವನು ನಾನು. ಸತ್ಯಭಾಮೆಯಾಗಲಿ ಇದನ್ನು ಹೇಗೆ ಸ್ವೀಕರಿಸಿ ಧರಿಸಿಯಾಳು? ನನ್ನ ಹೆಂಡತಿ ತಾನೇ? ಅಣ್ಣನಾದ ಬಲರಾಮನೋ ಮದ್ಯಪಾನಾದಿಗಳನ್ನು ಸಕಲಭೋಗಗಳನ್ನು ತ್ಯಜಿಸಬೇಕಾಗುತ್ತದೆ. ಬಲರಾಮನಿಂದ ಅದೂ ಅಸಾಧ್ಯವಾದದು. ಆದ್ದರಿಂದ ಇದಾವುದೂ ಬೇಡ. ಈ ಯಾದವರು ಈ ಬಲಭದ್ರ, ನಾನು, ಸತ್ಯಭಾಮೆ ಎಲ್ಲರೂ ನಿನ್ನನ್ನು ಪ್ರಾರ್ಥಿಸಿಕೊಳ್ಳುತ್ತೇನೆ ಅಕ್ರೂರನೇ ಇದನ್ನು ಧರಿಸಲು ನೀನೇ ಸಮರ್ಥ. ನೀನು ಧರಿಸಿದರೆ ಇಡೀ ರಾಷ್ಟ್ರಕ್ಕೆ ಉಪಕಾರವಾಗುತ್ತದೆ ರಾಷ್ಟ್ರದ ಹಿತಕ್ಕಾಗಿ ನೀನೇ ಇದನ್ನು ಧರಿಸು ಎಂದು ಹೇಳಿದನು. ಇದರ ಬಗ್ಗೆ ಯಾವುದೇ ಮರುಮಾತಾಡಬಾರದೆಂದನು. ಆಗ ದಾನಪತಿ ಅಕ್ರೂರನು ಹಾಗೆಯೇ ಆಗಲೆಂದು ಆ ಮಹಾರತ್ನವನ್ನು ಸ್ವೀಕರಿಸಿ ತನ್ನ ಕೊರಳಲ್ಲಿ ಧರಿಸಿಕೊಂಡನು. ಹೀಗೆ ಅಕ್ರೂರನು ಸೂರ್ಯನಂತೆ ಜಾಜ್ವಲ್ಯಮಾನವಾಗಿ ಪ್ರಜ್ವಲಿಸಿದನು. ದೇಶವೆಲ್ಲಾ ಸುಭಿಕ್ಷದಿಂದ ತುಳುಕಾಡಿತು.

## ಅನಮಿತ್ರ ಮತ್ತು ಅಂಧಕರ ವಂಶದ ವೃತ್ತಾಂತ

ಪರಾಶರರು ಮೈತ್ರೇಯರಿಗೆ ಅನಮಿತ್ರ ಹಾಗೂ ಅಂಧಕರ ವಂಶ ತಿಳಿಸಿದರು. ಯದುವಂಶದಲ್ಲಿ ಹುಟ್ಟಿದ ವೃಷ್ಣಿಗೆ ನೂರು ಮಕ್ಕಳಿದ್ದರು. ವೃಷ್ಣಿಯ ಮಗನಾದ ಅನಮಿತ್ರನಿಗೆ ಪ್ರಸೇನ ಮತ್ತ ಸತ್ರಾಜಿತರೆಂಬ ಮೊಮ್ಮಕ್ಕಳು. ಸತ್ರಾಜಿತನ ಬಳಿ ಸ್ಯಮಂತಕ ಮಣಿಯಿದ್ದಿತು ಎಂದು ಈ ಹಿಂದಿನ ಅಧ್ಯಾಯದಲ್ಲಿ ನಾವು ತಿಳಿದಿದ್ದೇವೆ. ಈ ಅನಮಿತ್ರನಿಗೆ ಶಿನಿಯೆಂಬ ಮಗನಿದ್ದನು. ಅವನ ಮಗ ಸತ್ಯಕ. ಈ ಸತ್ಯಕನಿಗೆ ಸಾತ್ಯಕಿ ಹುಟ್ಟಿದನು.

(ಈ ಸಾತ್ಯಕಿಗೆ ಯುಯುಧಾನ ಎಂಬ ಮತ್ತೊಂದು ಹೆಸರಿತ್ತು) ಸಾತ್ಯಕಿಗೆ ಸಂಜಯನೂ, ಅವನಿಗೆ ಕುಣಿಯೂ, ಕುಣಿಗೆ ಯುಗಂಧರ ಎಂಬುವನೂ ಪುತ್ರನು. ಇವರು ಶೈನೇಯರೆನಿಸಿಕೊಂಡರು. ಅನಮಿತ್ರನ ಇನ್ನೊಂದು ಪೀಳಿಗೆಯಲ್ಲಿ ಪ್ರಶ್ನಿಯು ಅವನಿಂದ ಶ್ವಫಲ್ಕನೂ ಹುಟ್ಟಿದನು. (ಶ್ವಪಲ್ಯನ ಬಗ್ಗೆ ಈಗಾಗಲೇ ತಿಳಿದಿದ್ದೇವೆ) ಈ ಶ್ವಪಲ್ಕನಿಗೆ ಚಿತ್ರಕ ಎಂಬ ತಮ್ಮನೊಬ್ಬನಿದ್ದನು. ಶ್ವಫಲ್ಕನಿಂದ ಅಕ್ರೂರನು ಗಾಂದಿನಿಯೆಂಬ ಪತ್ನಿಯಲ್ಲಿ ಜನಿಸಿದನು. ಅದಲ್ಲದೆ ಶ್ವಫಲ್ಕನಿಗೆ ಇನ್ನೊಬ್ಬ ಪತ್ನಿಯಲ್ಲಿ ಉಪಮದ್ಗು, ಮೃದಾಮೃದ, ವಿಶ್ವ, ಅರಿಮೇಜಯ ಗಿರಿಕ್ಷತ್ರ, ಗಂಧಮೋಜ, ವಾಹ ಮತ್ತು ಪ್ರತಿವಾಹ ಎಂಬ ಪುತ್ರರೂ ಸುತಾರಾ ಎಂಬ ಪುತ್ರಿಯೂ ಜನಿಸಿದರು. ದೇವವಾನ್, ಉಪದೇವ ಎಂಬುವರು ಅಕ್ರೂರನ ಮಕ್ಕಳು ಶ್ವಫಲ್ಕನ ತಮ್ಮನಾದ ಚಿತ್ರಕನಿಗೆ ಪೃಥು, ವಿಪೃಥು ಮುಂತಾದ ಅನೇಕ ಪುತ್ರರಿದ್ದರು. ಸಾತ್ವತನ ಮಗನಾದ ಅಂಧಕನಿಗೆ ಕುಕುರ, ಭಜಮಾನ, ಶುಚಿಕಂಬಲ, ಬರ್ಹಿಷ ಎಂಬ ನಾಲ್ವರು ಪುತ್ರರು ಇದ್ದರು. ಕುಕುರನಿಂದ ಧೃಷ್ಟನೂ, ಅವನಿಂದ ಕಪೋತರೋಮನೂ, ಅವನಿಂದ ವಿಲೋಮನೂ, ವಿಲೋಮನಿಂದ ಅನು ಎಂಬುವನು ಜನಿಸಿದನು. ಅನು ಎಂಬುವನು ತುಂಬುರುವಿನ ಸ್ನೇಹಿತ. ಅನುವಿನಿಂದ ಆನಕದುಂದುಭಿ ಅವನಿಂದ ಅಭಿಜಿತ್, ಅವನಿಂದ ಪುನರ್ವಸು ಎಂಬುವರು ಹುಟ್ಟಿದ್ದರು. ಪುನರ್ವಸುವಿಗೆ ಆಹುಕನೆಂಬ ಮಗನೂ, ಆಹುಕಿ ಎಂಬ ಮಗಳೂ ಇದ್ದರು. ಆಹುಕನಿಗೆ ದೇವಕ, ಉಗ್ರಸೇನ ಎಂಬ ಇಬ್ಬರು ಮಕ್ಕಳು. ದೇವಕನಿಗೆ ದೇವವಾನ್ ಉಪದೇವ, ಸಹದೇವ, ದೇವರಕ್ಷತ ಎಂಬ ನಾಲ್ವರು ಪುತ್ರರಾದರು. ಅಲ್ಲದೆ ಈ ನಾಲ್ವರಿಗೆ ವೃಕದೇವಾ, ಉಪದೇವಾ, ದೇವರಕ್ಷಿತಾ, ಶ್ರೀದೇವಾ ಶಾಂತಿದೇವಾ, ಸಹದೇವಾ ಮತ್ತು ದೇವಕಿ ಎಂಬ ಏಳು ಮಂದಿ ಸಹೋದರಿಯರಿದ್ದರು. ಆ ಏಳು ಮಂದಿ ಕನ್ನಿಕೆಯರನ್ನು ವಸುದೇವನು ಮದುವೆಯಾದನು. ಉಗ್ರಸೇನನಿಗೂ ಸಹ ಕಂಸ, ನ್ಯಗ್ರೋದ, ಸುನಾಮ, ಆನಕಾಹ್ವ, ಶಂಕು, ಸುಭೂಮಿ, ರಾಷ್ಟ್ರಪಾಲ, ಯುದ್ಧ ತುಷ್ಠಿ ಮತ್ತು ಸಂತುಷ್ಟಿಮಾನ್ ಎಂಬ ಪುತ್ರರಿದ್ದರು. ಅಲ್ಲದೆ ಕಂಸಾ, ಕಂಸವತೀ, ಸುತನು, ರಾಷ್ಟ್ರಪಾಲಿಕಾ ಎಂಬ ಪುತ್ರಿಯರೂ ಉಗ್ರಸೇನನಿಗೆ ಇದ್ದರು.

ಸಾತ್ವತ ವಂಶದ ಸತ್ವತ ಪುತ್ರನಾದ ಭಜಮಾನನಿಗೆ ವಿದೂರಥನೆಂಬ

ಪುತ್ರನು ಹುಟ್ಟಿದನು. ವಿದೂರಥನಿಂದ ಶೂರನಿಂದ ಶಮಿಯೂ, ಆತನಿಂದ ಪ್ರತಿಕ್ಷತ್ರನೂ, ಅವನಿಂದ ಸ್ವಯಂಭೋಜನೂ, ಆತನಿಂದ ಹೃದಿಕನಿಗೆ ಕೃತವರ್ಮ, ಶತಧನು ದೇವಾರ್ಹ, ದೇವಗರ್ಭ ಮುಂತಾದ ಹಲವರು ಪುತ್ರರು ಹುಟ್ಟಿದರು. ದೇವಗರ್ಭನ ಮಗ ನೇಶೂರ. ಶೂರನಿಗೆ ಮಾರಿಷಾ ಎಂಬ ಪತ್ನಿಯಿದ್ದಳು. ಶೂರನು ಅವಳಲ್ಲಿ ವಸುದೇವನೇ ಮೊದಲಾದ ಹತ್ತು ಪುತ್ರರನ್ನು ಪಡೆದನು. ವಸುದೇವನು ಹುಟ್ಟಿದಾಗ ಮುಂದೆ ಆತನ ಗೃಹದಲ್ಲಿ ಭಗವಂತ ಶ್ರೀಮನ್ನಾರಾಯಣನು ಅಂಶಾವತಾರ ಮಾಡುವನೆಂಬುದನ್ನು ದಿವ್ಯ ದೃಷ್ಟಿಯಿಂದ ಅರಿತು ದೇವತೆಗಳು  ಆನಕ, ದುಂದುಭಿಗಳೆಂಬ ದಿವ್ಯ ವಾದ್ಯಗಳನ್ನು ಮೊಳಗಿಸಿದರು. ಆದ್ದರಿಂದ ವಸುದೇವನಿಗೆ ಆನಕ ದುಂದುಭಿ ಎಂಬ ಮತ್ತೊಂದು ಹೆಸರೂ ಉಂಟು. ಈ ವಸುದೇವನಿಗೆ ದೇವಭಾಗ ದೇವಶ್ರವ, ಅಷ್ಟಕ, ಕಕುಚ್ಚಕ್ರ, ವತ್ಸಧಾರಕ, ಸೃಂಜಯ, ಶ್ಯಾಮ, ಶಮಿಕ ಮತ್ತು ಗಂಡೂಷ ಎಂಬ ಒಂಬತ್ತು ಸಹೋದರರಿದ್ದರು. ಅಲ್ಲದೆ  ಪೃಥಾ, ಶ್ರುತದೇವಾ, ಶ್ರುತಕೀರ್ತಿ, ಶ್ರುತಶ್ರವಸ್ಸು, ರಾಜಾಧಿದೇವಿ ಎಂಬ ಐವರು ಸಹೋದರಿಯರು ವಸುದೇವನೇ ಮೊದಲಾದವರಿಗೆ ಇದ್ದರು. ಶೂರನಿಗೆ ಕುಂತಿ ಎಂಬ ಮಿತ್ರನಿದ್ದನು. ಆತನಿಗೆ ಸಂತಾನವಿಲ್ಲದುದರಿಂದ ಶೂರನು ತನ್ನ ಪೃಥೆಯನ್ನುದತ್ತಕ ವಿಧಿಯಿಂದ ಕೊಟ್ಟನು ಆ  ಮಗಳಾದ ಪೃಥೆಯನ್ನೇ ಪಾಂಡುರಾಜನು ಮದುವೆಯಾದನು. ಪೃಥೆಯಲ್ಲಿ (ಕುಂತಿ) ಯಮಧರ್ಮ. ವಾಯು, ಇಂದ್ರರು ಕ್ರಮವಾಗಿ ಯುಧಿಷ್ಠಿರ, ಭೀಮಸೇನ, ಅರ್ಜುನ ಎಂಬ ಪುತ್ರರನ್ನು ಉತ್ಪಾದಿಸಿದರು. ಕುಂತಿಯು ಮದುವೆಯಾಗುವ ಮೊದಲೇ ಭಗವಾನ್ ಸೂರ್ಯದೇವನಿಂದ ಕರ್ಣನೆಂಬ ಮಗನು ಹುಟ್ಟಿದನು. ಪೃಥೆಯು ಕನ್ಯೆಯಾಗಿದ್ದಾಗ ಜನಿಸಿದ್ದರಿಂದ ಕರ್ಣನು ಕಾನೀನ ಎಂದೆನಿಸಿಕೊಂಡನು. ಪೃಥೆಗೆ ಮಾದ್ರಿ ಎಂಬ ಸವತಿಯಿದ್ದಳು. ಅವಳಲ್ಲಿ ನಾಸತ್ಯ, ದಸ್ರ ಎಂಬ ಅಶ್ವಿನೀ ದೇವತೆಗಳಿಂದ ಪಾಂಡುಪುತ್ರರಾದ ನಕುಲ, ಸಹದೇವರು ಜನಿಸಿದರು. ಇತ್ತ ಶ್ರುತದೇವಳನ್ನು ಕಾರೂಷಾದಿ ಪತಿಯಾದ ವೃದ್ಧಧರ್ಮನು ವಿವಾಹವಾದನು. ಅವಳಲ್ಲಿ ದಂತವಕ್ರನೆಂಬ ಮಹಾಸುರನು ಹುಟ್ಟಿದನು. ಶ್ರುತಕೀರ್ತಿಯನ್ನು ಕೇಕಯ ರಾಜನು ಮದುವೆಯಾದನು. ಅವಳಲ್ಲಿ ಕೇಕಯ ರಾಜನಿಗೆ ಸಂತರ್ಧನನೇ ಮೊದಲಾದ ಐವರು ಪುತ್ರರು

ಜನಿಸಿದರು. ಅವಂತಿ ರಾಜನಿಗೆ ರಾಜಾದಿದೇವಿಯಲ್ಲಿ ವಿಂದ, ಅನುವಿಂದ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಚೇದಿರಾಜನಾದ ದಮಘೋಷನು ಶ್ರುತಶ್ರವಸ್ಸನ್ನು ವಿವಾಹವಾದನು. ಅವಳಲ್ಲಿ ದಮಘೋಷನಿಗೆ ಶಿಶುಪಾಲನು ಜನಿಸಿದನು. ಈ ಶಿಶುಪಾಲನು ಪೂರ್ವಜನ್ಮದಲ್ಲಿ ಮಹಾಪರಾಕ್ರಮಿಯಾದ ಹಿರಣ್ಯಕಶಿಪುನಾಗಿದ್ದನು. ಆ ಹಿರಣ್ಯಕಶಿಪುವನ್ನು ಸಕಲಲೋಕ ಗುರುವಾದ ಭಗವಂತನು ನರಸಿಂಹಾವತಾರದಿಂದ ಸಂಹರಿಸಿದ್ದನು. ಆ ಹಿರಣ್ಯಕಶಿಪುವೇ ಮುಂದೆ ರಾವಣನಾಗಿ ಜನಿಸಿದನು. ಬಹುಕಾಲದ ಪುಣ್ಯದ ಫಲವನ್ನು ಅನುಭವಿಸಿ ರಾವಣನೂ ಶ್ರೀ ರಾಮಾವತಾರವನ್ನು ತಾಳಿದ ಭಗವಂತನಿಂದ ಹತನಾದನು. ಮತ್ತೆ ಶಿಶುಪಾಲನೆಂಬ ಹೆಸರಿನಿಂದ ಆತನೇ ಚೇದಿರಾಜನಾದ ದಮಘೋಷನ ಪುತ್ರನಾಗಿ ಹುಟ್ಟಿದನು. ಶಿಶುಪಾಲನಾಗಿ ಹುಟ್ಟಿದಾಗಲೂ ಆತನು ಭೂಭಾರವನ್ನಿಳಿಸಲು ಅವತರಿಸಿದ ಶ್ರೀಕೃಷ್ಣನಲ್ಲಿ ಅತ್ಯಂತ ದ್ವೇಷಬುದ್ಧಿಯನ್ನು ತಳೆದಿದ್ದನು. ಕಡೆಗೆ ಭಗವಂತನಿಂದ ಅವನು ಹತನಾದನು. ಇಷ್ಟು ದ್ವೇಷ ಮಾಡಿದರೂ ಆ ಪರಮಾತ್ಮನ ಸಾಯುಜ್ಯವನ್ನು ಪಡೆದನು. ಭಗವಂತನ ಲೀಲೆ ಏನೆಂದರೆ

**ಭಗವಾನ್ ಯದಿ ಪ್ರಸನ್ನೋಽಯಥಾಭಿಲಷಿತಂ ದದಾತಿ ತಥಾ**

**ಅಪ್ರಸನ್ನೋಽಪಿ ನಿಘ್ನನ್ ದಿವ್ಯ ಮನು ಪಮಂ ಸ್ಥಾನಂ ಪ್ರಯಿಚ್ಛತಿ**

ಭಗವಂತನು ಪ್ರಸನ್ನನಾದರೆ ಹೇಗೆ ಅಭೀಷ್ಟವನ್ನು ದಯಪಾಲಿಸುತ್ತಾನೋ ಅಂತೆಯೇ ಕ್ರುದ್ಧನಾಗಿ ಕೊಂದರೂ ಸಹ ದಿವ್ಯವೂ ಅನುಪಮವಾದ ಉತ್ತಮ ಸ್ಥಾನವನ್ನು ಅನುಗ್ರಹಿಸುತ್ತಾನೆ. "ರಕ್ಷಿ ಶ್ಯತಿ ಇತಿ ವಿಶ್ವಾಸ" ಎಂಬ ಅಚಲ ನಂಬಿಕೆಯನ್ನು ಇಟ್ಟುಕೊಂಡು ನಮ್ಮೆಲ್ಲರ ರಕ್ಷಣಾಭಾರವನ್ನು ಅವನ ಮೇಲೆಯೆ ಹಾಕಿ ಇಹದಲ್ಲಿ ಸಾಧ್ಯವಾದಷ್ಟು ಒಳ್ಳೆಯದನ್ನೇ ಮಾಡುತ್ತಾ ಕಾಲ ಕಳೆಯೋಣ.

# ಶಿಶುಪಾಲನ ಸಾಯುಜ್ಯಕ್ಕೆ ಕಾರಣ

ಪರಾಶರರು ಮೈತ್ರೇಯರಿಗೆ ಶಿಶುಪಾಲನಿಗೆ ಮಾತ್ರ ಸಾಯುಜ್ಯವು (ಅಂದರೆ ಭಗವಂತನಲ್ಲಿ ಲೀನವಾಗುವ ಯೋಗ) ಹೇಗೆ ದೊರಕಿತು ಎಂಬ ವಿವರಣೆಯನ್ನು ನೀಡುತ್ತಾರೆ.

**ಹಿರಣ್ಯ ಕಶಿಪುತ್ವೇಚ ರಾವಣತ್ವೇ ಚ ವಿಷ್ಣುನಾ**

**ಅವಾಪ ನಿಹತೋ ಭೋಗಾನಪ್ರಾಪ್ಯಾನಮರೈರಪಿ**

**ನಲಯಂ ತತ್ರ ತೇನೈವನಿಹತಃ ಸಕಥಂಪುನಃ ಸಂಪ್ರಾಪ್ತ**

**ಶಿಶು ಪಾಲತ್ವೇ ಸಾಯುಜ್ಯಂ ಶಾಶ್ವತೇಹರೌ**

(ವಿ.ಪು.ಸ. 15ನೇ ಭತುರ್ಧಾಂಶ 1–2ನೇ ಪದ್ಯ)

ಮೈತ್ರೇಯರು ಒಮ್ಮೆ ಪರಾಶರರನ್ನು ಪ್ರಶ್ನಿಸಿದರು. ಹಿರಣ್ಯಕಶಿಪುವಿನ ಸಂಹಾರಕ್ಕಾಗಿ ಸಕಲ ಲೋಕ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಕರ್ತನಾದ ಶ್ರೀ ಹರಿಯು ಸಿಂಹರೂಪವನ್ನು ಪ್ರಕಟಿಸಿದನು. ಆ ಸಮಯದಲ್ಲಿ ಹಿರಣ್ಯಕಶಿಪುವಿಗೆ ಈತನು ವಿಷ್ಣು ಎಂಬುದೇ ಮನಸ್ಸಿಗೆ ಹೊಳೆಯಲಿಲ್ಲ. “ನಿರತಿಶಯ ಪುಣ್ಯ ಸಮುದ್ಭೂತ ಮೇತತ್ಸತ್ವ ಜಾತಮಿತಿ” ನಿರತಿಶಯವಾದ ಪುಣ್ಯದಿಂದ ಉದ್ಧವಿಸಿದ ಒಂದು ಪ್ರಾಣಿ ಇದು” ಎಂದು ಹಿರಣ್ಯ ಕಶಿಪು ಭಾವಿಸಿದನು.

**ನತು ಸತಸ್ಮಿನ್ನ ನಾದಿನಿಧನೇ ಪರಬ್ರಹ್ಮಭೂತೇ ಭಗವತ್ಸನಾಲಂಬನಿ ಕೃತೇ ಮನಸಸ್ತಲಯಮವಾಪ । ಏವಂ ದಶಾನನತ್ವೇ ಪ್ಯನಂಗ ಪರಾಧೀನತಯಾ ಜಾನಕೀ ಸಮಾಸ್ತ ಚೇತಸೋ ಭಗವತಾ ದಾಶರಥಿರೂಪಧಾರಿಣಾ ಹತಸ್ಯ ತದ್ರೂಪ ದರ್ಶನ ಮೇವಾಸೀತ್ ನಾಯಮಚ್ಯುತ ಇತ್ಯಾಸಕ್ತಿರ್ವಿಪದ್ಯತೋಂತಃ ಕರಣೇ ಮಾನುಷ ಬುದ್ಧಿರೇವ ಕೇವಲಮಸ್ಸಾಭುತ್ ಪುನರಪ್ಯಚ್ಯುತವಿನಿಪಾತ ಮಾತ್ರಫಲಮಖಿಲ ಭೂಮಂಡಲ ಶ್ಲಾಘ್ಯ ಚೇದಿರಾಜಕುಲೇ ಜನ್ಮ**

**ಅವ್ಯಾಹತೈಶ್ವರ್ಯಂ ಶಿಶುಪಾಲತ್ವೇಪ್ಯವಾಪ। ತತ್ರತ್ವಖಿಲಾನಾಮೇವಸ ಭಗವನ್ನಾಮ್ನಾಂ ತ್ಯಂಕಾರ ಕಾರಣಮಭವತ್. ತತಶ್ಚ ತತ್ಕಾಲ ಕೃತಾನಾಂ ತೇಷಾಮಶೇಷಾಣಾ ಮೇವಾಚ್ಯುತ ವಿನಿಪಾತ ಮಾತ್ರ ಫಲ ಮಖಿಲ ಭೂಮಂಡಲ ಶ್ಲಾಗ್ಯ ಚೇದಿರಾಜಕುಲೇ ಜನ್ಮ ಅವ್ಯಾಹ ತೈಶ್ವರ್ಯಂ ಶಿಶುಪಾಲತ್ವೇಪ್ಯವಾದ। ತತ್ರ ತ್ವಖಿಲಾನಾಮೇವ ಸಭಗವನ್ನಾಮ್ನಾಂ ತ್ವಂಕಾರ ಕಾರಣಮಭವತ್।**

**ತತಶ್ಚ ತತ್ಕಾಲಕೃತಾನಾಂ ತೇಷಾಮಸೇಷಾಣಾಮೇವಾ ಚ್ಯುತನಾಮ್ನೊ ಮನವರತ ವರ್ಧಿತ ವಿದ್ವೇಷಾನುಬಂದಿ ಚಿತ್ತೋ ವಿನಿನ್ದನ ಸನ್ತ ರ್ಜನಾದಿಷೂ ಚ್ಚಾರಣಮಕರೋತ್। ತಚ್ಚ ರೂಪ ಮುತ್ಪುಲ್ಲಿ ಪದ್ಮದಲಾಮಲಾಕ್ಷಮ ತ್ಯುಜ್ವಲ ಪೀತವಸ್ತ್ರಧಾರ್ಯಮಲ ಕಿರೀಟ ಕೇಯೂರ ಹಾರ ಕಟಕಾದಿ ಶೋಭಿತ ಮುದಾರ ಚತುರ್ಬಾಹು ಶಂಖ ಚಕ್ರಗಧಾದರ ಮತಿಪ್ರರೂಢ ವೈರಾನುಭಾವದಟನ ಭೋಜನ ಸ್ನಾನಾಸನ ಶಯನಾದಿಷ್ವ ಶೇಷಾವಸ್ಥಾನಂತರೇಷು ತ್ರೋಷಯ ಯಾವಸ್ಯ ಚೇತಸ ।**

(ವಿ.ಪು. 2ನೇ ಚತುರ್ಥಾಂಶ ಅ.15 ಶ್ಲೋಕ 7ರಿಂದ 13)

ಅನಾದಿನಿಧನನೂ ಪರಬ್ರಹ್ಮನೂ ಆದ ಭಗವಂತನಲ್ಲಿ ಹಿರಣ್ಯಕಶಿಪುವಿನ ಮನಸ್ಸು ನೆಲಸದೆ ಹೋದುದ್ದರಿಂದ ಭಗವಂತನಲ್ಲಿ ಸಾಯುಜ್ಯವು ಅವನಿಗೆ ಲಭಿಸಲಿಲ್ಲ.

ಇಂತೆಯೇ ದಶಕಂಠನಾಗಿ ಜನಿಸಿದಾಗಲೂ ಅವನು ಜಾನಕಿಯಲ್ಲಿ ಆಸಕ್ತಿಯನ್ನು ತಳೆದಿದ್ದನು. ಆದ್ದರಿಂದ ಭಗವಂತನು ದಶರಥ ಪುತ್ರನ ರೂಪವನ್ನು ಧರಿಸಿ ಬಂದು ಸಂಹರಿಸಿದಾಗ ರಾವಣನಿಗೆ ಇವನು ದಶರಥ ಪುತ್ರನೆಂದೂ ಮನುಷ್ಯನೆಂದೂ ಬುದ್ದಿ ಇದ್ದಿತೇ ವಿನಹ ಅವನ ಅಂತಃಕರಣದಲ್ಲಿ ಶ್ರೀರಾಮನು ಕೇವಲ ಮನುಷ್ಯನೆಂಬ ಬುದ್ಧಿಯೇ ಇದ್ದಿತು.

ನಂತರ ಶಿಶುಪಾಲನಾಗಿ ಈ ಹಿಂದೆ ಅಚ್ಯುತನ ಕೈಯಿಂದ ಸಂಹಾರವಾದುದರ ಫಲವಾಗಿ ಚೇದಿರಾಜ ಕುಲದಲ್ಲಿ ಹುಟ್ಟಿ ಅಖಂಡ

ವಿಶ್ವವನ್ನು ಪಡೆದನು. ಆ ಜನ್ಮದಲ್ಲಿ ಭಗವಂತನ ಸಕಲ ನಾಮಾವಳಿಗಳಲ್ಲಿಯೂ ತುಚ್ಛತೆಯ ಮನೋಭಾವವನ್ನು ತಳೆದನು. ಅಚ್ಯುತನ ವಿಷಯವಾಗಿ ಅನೇಕ ಜನ್ಮಗಳಿಂದ ವಿದ್ವೇಶದ ಭಾವವು, ಸಂಸ್ಕಾರವು ಶಿಶುಪಾಲನ ಚಿತ್ತದಲ್ಲಿ ನೆಲೆಸಿತ್ತು. ಅಚ್ಯುತನಿಗೆ ಆ ಸಮಯದಲ್ಲಿ **ಅಚ್ಯುತಾಯ ನಮಃ ಪೂತನಾ ಜೀವಿತ ಹರಾಯನಮಃ** ಮುಂತಾದ ನಾಮಾವಳಿಗಳಲ್ಲಿ ಒಂದು ರೀತಿಯ ನಿಕೃಷ್ಟಭಾವನೆ (ತುಚ್ಛ)ಯನ್ನು ತಳೆದನು. ಅವನನ್ನು ಬೈಯುವಾಗ, ತೆಗಳುವಾಗ ಅದೇ ನಾಮಗಳನ್ನು ಉಚ್ಛರಿಸುತ್ತಿದ್ದನು. ಅವನಿಗೆ ಶ್ರೀಕೃಷ್ಣನ ಮೇಲೆ ಅತಿಯಾದ ದ್ವೇಷವು ರೂಡಿಸಿಹೋಗಿದ್ದರಿಂದ ತಾನು ತಿರುಗಾಡುವಾಗ, ಊಟಮಾಡುವಾಗ, ಸ್ನಾನಮಾಡುವಾಗ, ಕುಳಿತಾಗ, ಮಲಗುವಾಗ ಹೀಗೆ ಎಲ್ಲ ಸಂದರ್ಭಗಳಲ್ಲಿಯು ಅವನ ಮನಸ್ಸಿಗೆ ಶ್ರೀಕೃಷ್ಣನ ರೂಪವೇ ಅವನ ಕಣ್ಣಿಗೆ ಕಟ್ಟಿ ನಿಂತಂತೆ ಇತ್ತು. ಹೀಗಾಗಿ ಶ್ರೀಕೃಷ್ಣನಲ್ಲದೆ ಇನ್ನೊಂದು ವಸ್ತು ಅವನ ಮನಸ್ಸಿಗೆ ಸುಳಿಯುತ್ತಿರಲಿಲ್ಲ. ಹೀಗೆ ಅನವರತವೂ ಬಯ್ಯುವಾಗ ಅಚ್ಯುತನ ನಾಮಗಳನ್ನೇ ಉಚ್ಚರಿಸುತ್ತ ಅವನನ್ನೇ ಹೃದಯದಲ್ಲಿ ನೆನೆಯುತ್ತ ವೈರಾನು ಬಂಧದಿಂದ ಇದ್ದಾಗ ಭಗವಂತನು ಚಕ್ರವನ್ನು ಎತ್ತಿದನು. ಆಗ ಶಿಶುಪಾಲನು ಚಕ್ರದ ತೇಜೋಮಾಲೆಯಿಂದ ಉಜ್ವಲನೂ, ಅಕ್ಷಯತೇಜ ಸ್ವರೂಪನೂ, ದ್ವೇಷಾದಿರಹಿತನೂ, ಪರಬ್ರಹ್ಮನೂ ಆಗ ಸಾಕ್ಷಾತ್ ಭಗವಂತನನ್ನು ಕಂಡನು. ಒಡನೆಯೇ ಭಗವಂತನ ಚಕ್ರದಿಂದ ಹತನಾದನು. ಅಚ್ಯುತನನ್ನು ನಿರಂತರವಾಗಿ ಧ್ಯಾನಿಸುತ್ತಾ ಇದ್ದರಿಂದ ಸಕಲ ಪಾಪರಾಶಿಯೂ ಸುಟ್ಟು ಬೂದಿಯಾಯಿತು. ಭಗವಂತನಿಂದ ಮರಣವಾದುದ್ದರಿಂದ ಅವನಲ್ಲಿಯೇ ಶಿಶುಪಾಲನು ಲಯವನ್ನು ಪಡೆದನು. ಹೀಗಾಗಿ ದ್ವೇಷದಿಂದಾದರೂ ಭಗವಂತನನ್ನು ಸ್ಮರಿಸಿದರೆ ಸಮಸ್ತ ಸುರಾಸುರರಿಗೂ ದುರ್ಲಭವಾದ ಫಲವನ್ನು ಭಗವಂತನು ಅನುಗ್ರಹಿಸುತ್ತಾನೆ. ಹೀಗಿರುವಾಗ ಆತನ ಅಂತರಂಗ ಭಕ್ತರ ವಿಷಯವಾಗಿ ಹೇಳತಕ್ಕ ವಿಷಯವೇನಿದೆ? ಸದಾಕಾಲವು ಆ ಭಗವಂತನನ್ನೇ ಧ್ಯಾನಿಸುತ್ತಾ ನಾವೂ ಸಹ ಕಾರ್ಯನಿರತರಾಗೋಣ.

# ವಸುದೇವನ ಸಂತತಿ

ಮಾರಿಶಾಶೂರನ ಮಗ ವಸುದೇವ. ವಸುದೇವನು ಜನಿಸಿದಾಗ ಆತನ ಗೃಹದಲ್ಲಿ ಮುಂದೆ ಭಗವಂತ ಶ್ರೀಮನ್ನಾರಾಯಣನ ಅಂಶಾವತಾರ ಮಾಡುವನೆಂಬದನ್ನು ಅರಿತು ದೇವಾನುದೇವತೆ ಆನಕ, ದುಂಧುಬಿ ಮೊದಲಾದ ವಾದ್ಯಗಳನ್ನು ಬಾರಿಸಿ ವಸುದೇವನನ್ನು ಇಹಲೋಕಕ್ಕೆ ಆಹ್ವಾನಿಸಿದರಂತೆ. ಆದ್ದರಿಂದ ವಸುದೇವನಿಗೆ ಆನಕ, ದುಂದುಭಿ ಎಂಬ ಹೆಸರುಂಟು. ಇವನಿಗೆ ಪೌರವಿ, ರೋಹಿಣಿ, ಮದಿರಾ, ಭದ್ರಾ, ದೇವಕಿ ಮುಂತಾದ ಹಲವು ಪತ್ನಿಯರಿದ್ದರು. ರೋಹಿಣಿಯಲ್ಲಿ ಆತನು ಬಲಭದ್ರ, ಶಠ, ಸಾರಣ, ದುರ್ಮದ ಮುಂತಾದ ಪುತ್ರರನ್ನು ಪಡೆದನು. ಅವರಲ್ಲಿ ಬಲದೇವನು ರೇವತಿಯಲ್ಲಿ ವಿಶಠ, ಉಲ್ಮುಕ ಎಂಬ ಇಬ್ಬರು ಪುತ್ರನನ್ನು ಪಡೆದರು. ಸಾರಣನಿಗೆ ಸಾರ್ಷ್ಟಿ, ಮಾರ್ಷ್ಟಿ, ಶಿಶು, ಸತ್ಯ, ದೃತಿ ಮೊದಲಾದ ಪುತ್ರರಾದರು. ಭದ್ರಾಶ್ವ, ಭದ್ರಬಾಹು, ದುರ್ದಮ, ಭೂತ ಮುಂತಾದವರು ಸಹ ರೋಹಿಣಿಯ ಕುಲದಲ್ಲಿ ಜನಿಸಿದರು. ನಂದ, ಉಪನಂದ, ಕೃತಕ ಮೊದಲಾದವರು ಮದಿರೆಯ ಮಕ್ಕಳು. ಉಪನಿದಿ, ಗದ ಮೊದಲಾದವರು ಭದ್ರೆಯ ಮಕ್ಕಳು. ವೈಶಾಲಿಯಲ್ಲಿ ವಸುದೇವನು ಕೌಶಿಕನೆಂಬ ಒಬ್ಬ ಮಗನನ್ನು ಮಾತ್ರ ಪಡೆದನು. ಆನಕ, ದುಂದುಭಿಗೇ (ವಸುದೇವ) ದೇವಕಿಯಲ್ಲಿ ಕೀರ್ತಮಾನ್, ಸುಕ್ಷೇಣ, ಉದಾಯುಸ ಭದ್ರಸೇನ, ಋಜುದಾಸ ಮತ್ತು ಭದ್ರದೇವ ಎಂಬ ಆರುಮಂದಿ ಪುತ್ರರು ಜನಿಸಿದರು. ಅವರೆಲ್ಲರನ್ನು ಕಂಸನು ಕೊಂದು ಹಾಕಿದನು. ಅನಂತರ ಸಂಭವಿಸಿದ ದೇವಕಿಯ ಏಳನೆಯ ಗರ್ಭವನ್ನು ಭಗವಂತನಿಂದ ಪ್ರೇರಿತಳಾದ ಯೋಗನಿದ್ರೆಯು ಸೆಳೆದುಕೊಂಡು ಹೋಗಿ ರೋಹಿಣಿಯ ಉದರದಲ್ಲಿ ಸೇರಿಸಿದಳು. ಹೀಗೆ ಸೆಳೆದಿದ್ದರಿಂದ (ಕರ್ಷಣಮಾಡಿದ್ದರಿಂದ) ಆ ಗರ್ಭದಲ್ಲಿ ಜನಿಸಿದ ಬಲಭದ್ರನು ಸಂಕರ್ಷಣ ಎಂಬ ಹೆಸರನ್ನು ಪಡೆದನು. ತರುವಾಯ ಆದಿಮಧ್ಯಾಂತ ರಹಿತವಾದ ಆದ ಭಗವಾನ್ ವಾಸುದೇವನು ದೇವಕಿಯ ಗರ್ಭವನ್ನು ಪ್ರವೇಶಿಸಿದನು. ಈ ಮರ್ತ್ಯಲೋಕದಲ್ಲಿ ಅವತರಿಸಿದ ಭಗವಂತನಿಗೆ ಹದಿನಾರು ಸಾವಿರದ ನೂರೊಂದು ಪತ್ನಿಯರಿದ್ದರು. ಇವರಲ್ಲಿ ರುಕ್ಮಿಣಿ, ಸತ್ಯಭಾಮಾ, ಜಾಂಬವತೀ, ಕಾಳಿಂದೀ, ಮಿತ್ರವಿಂದ, ಸತ್ಯೆ, ಭದ್ರೆ, ಲಕ್ಷ್ಮಣೆ ಎಂಬುವರು ಶ್ರೀಕೃಷ್ಣನ

ಅಷ್ಟಮಹಿಷಿಯರೆಂದು ಪ್ರಸಿದ್ಧರಾಗಿದ್ದಾರೆ. ವಾಸುದೇವನು ಅವತರಿಸಿ ಸಕಲ ಜಗತ್ತನ್ನು ಸನ್ಮಾರ್ಗವರ್ತಿಯನ್ನಾಗಿ ಮಾಡಿದನು. ವಿಶ್ವಮೂರ್ತಿಯಾದ ಆ ಭಗವಂತ ಕೃಷ್ಣನು ಎಲ್ಲ ಪತ್ನಿಯರಲ್ಲಿ ಒಟ್ಟು ಒಂದು ಲಕ್ಷದ ಎಂಬತ್ತು ಸಾವಿರ ಮಕ್ಕಳನ್ನು ಪಡೆದನು. ಅವರಲ್ಲಿ ಪ್ರದ್ಯುಮ್ನ ಚಾರುದೇಷ್ಣ, ಸಾಂಬ ಮೊದಲಾದ ಹದಿಮೂರು ಜನರು ಮುಖ್ಯರು. ಪ್ರದ್ಯುಮ್ನನು, ರುಕ್ಮಿಯ ಮಗಳಾದ ರುಕ್ಮವತಿಯೆಂಬುವಳನ್ನು ವಿವಾಹವಾದನು. ಅವಳಲ್ಲಿ ಅನಿರುದ್ಧನೆಂಬ ಮಗನು ಹುಟ್ಟಿದನು. ಅನಿರುದ್ಧನು ಅದೇ ರುಕ್ಮಿಯ ಮಗನ ಮಗಳಾದ ಸುಭದ್ರೆ ಎಂಬುವಳನ್ನು ವಿವಾಹವಾದನು. ಅವಳಲ್ಲಿ ಈತನಿಗೆ ವಜ್ರ ಎಂಬ ಪುತ್ರನು ಜನಿಸಿದನು. ವಜ್ರನ ಮಗ ಪ್ರತಿಬಾಹು. ಆತನ ಮಗ ಸುಚಾರು, ಹೀಗೆ ಲಕ್ಷ ಗಟ್ಟಲೆ ಪುರುಷರಿದ್ದ ಯದುಕುಲದವರ ಪುತ್ರರ ಸಂಖ್ಯೆಯನ್ನು ಹೀಗೆ ನೆನೆಪಿನಲ್ಲಿಡೋಣ

**ತಿಸ್ರಃ ಕೊಟ್ಯ ಸಹಸ್ರಾಣಾಮಷ್ಟಾ ಶೀತಿಶತಾನಿಚ ಕುಮಾರಾಣಾಂ**

**ಗೃಹಾ ಚಾರ್ಯಾಶ್ಚಾಪಯೋಗೇಷಾ ಯೇ ರತಾ**

**ಸಂಖ್ಯಾನಂಯಾದವಾನಾಂ ಕಃ ಕರಿಷ್ಯತಿ ಮಹಾತ್ಮನಾಮ್**

**ಯತ್ರಾಯುತಾನಾಮಯುತ ಲಕ್ಷೇಣಾಸ್ತೇ ಸದಾಹುಕಃ**

**ದೇವಾಸುರೇ ಹತಾಯೇತು ದೈತೇಯಾಸ್ತು ಮಹಾಬಲಾ**

**ಉತ್ಪನ್ನಾಸ್ತೆ ಮನುಷ್ಯೇಷು ಜನೋಪದ್ರವಕಾರಿಣಃ**

**ತೇಷಾಮುತ್ಸಾದನಾರ್ಥಾಯ ಭುವಿದೇವಾ ಯದೋಃ ಕುಲೇ**

**ಅವತೀರ್ಣಾಃ ಕುಲಶತಂ ಯತ್ರೈಕಾಭ್ಯಧಿಕಂ ದ್ವಿಜ**

(ವಿ.ಪು. 2ಸಂ ಚತುರ್ಧಾಂಶ ಅ.15 ಶ್ಲೋಕ ರಿಂದ 48)

ಯಾದವ ಕುಮಾರರಿಗೆ ಧನುರ್ವಿದ್ಯೆಯನ್ನು ಕಲಿಸತಕ್ಕ ಗೃಹಾಚಾರ್ಯರ ಸಂಖ್ಯೆ ಮೂರು ಕೋಟಿ ಎಂಬತ್ತೆಂಟು ಲಕ್ಷವಾಗಿದ್ದಿತು. ಯಾದವ ರಾಜನಾದ ಉಗ್ರಸೇನನು ಕೋಟಿ ಕೋಟಿ ಸಂಖ್ಯೆಯಲ್ಲಿದ್ದ ಯಾದವರೊಡನೆ ಸದಾ ವಿರಾಜಿಸುತ್ತಾನೆ. ಹಿಂದೆ ದೇವಸಂಗ್ರಾಮದಲ್ಲಿ ಹತರಾದ ಬಲಾಢ್ಯ ಜನರಿಗೆ ಉಪದ್ರವ ಕೊಡುತ್ತಾ ಮನುಷ್ಯ ಜನ್ಮದಲ್ಲಿ ಜನಿಸಿದ್ದರು. ಅವರನ್ನು

ಸಂಹರಿಸಲು ದೇವತೆಗಳು ಯದುಕುಲದಲ್ಲಿ ಜನಿಸಿದರು. ಶ್ರೀಮಹಾವಿಷ್ಣುವೇ ಅವರೆಲ್ಲರಿಗೂ ಪ್ರಮಾಣಭೂತನಾಗಿಯೂ, ನಿಯಂತ್ರಕನಾಗಿಯೂ ಇದ್ದನು.

## ತುರ್ವಸುವಿನ ವಂಶ

ತುರ್ವಸುವಿನ ಮಗ ವಹ್ನಿ, ವಹ್ನಿಯ ಮಗ ಭಾರ್ಗ, ಅವನಿಗೆ ಭಾನು ಎಂಬುವನು ಜನಿಸಿದನು. ಭಾನುವಿನಿಂದ ತ್ರಯೀಸಾನುವೂ, ಅವನಿಂದ ಕರಂದಮನೂ, ಆತನಿಂದ ಮರುತ್ತನೂ ಹುಟ್ಟಿದನು. ಮರುತ್ತನಿಗೆ ಸಂತಾನವಿರಲಿಲ್ಲ. ಆದ್ದರಿಂದ ಅವನು ಪುರುವಂಶದ ದುಶ್ಯಂತನನ್ನು ಪುತ್ರನನ್ನಾಗಿ ಸ್ವೀಕರಿಸಿದನು. ಹೀಗೆ ಯಯಾತಿಯ ಶಾಪದಿಂದ ತುರ್ವಸುವಿನ ವಂಶವು ಪುರುವಂಶವನ್ನೇ ಆಶ್ರಯಿಸಿತು. (ಈ ಹಿಂದೆ ಯಯಾತಿಯ ಶಾಪವನ್ನು ವರ್ಣಿಸಲಾಗಿದೆ).

## ದ್ರುಹ್ಯುವಿನ ವಂಶ

ಇನ್ನು (ಯಯಾತಿಯ ಪತ್ನಿ) ಶರ್ಮಿಷ್ಠೆಯ ಮಕ್ಕಳ ವಂಶದ ಬಗ್ಗೆ ಪರಾಶರರು ವಿವರಿಸಿದ್ದರು. ದ್ರುಹ್ಯುವಿನ ಮಗ ಬಭ್ರು. ಅವನ ಮಗ ಸೇತು. ಆರಬ್ದನು ಸೇತುವಿನ ಮಗ. ಅವನ ಮಗ ಗಾಂಧಾರ. ಗಾಂಧರನ ಮಗ ಧರ್ಮ. ಅವನ ತನಯ ಘೃತ. ಘೃತನಿಂದ ದುರ್ದಮನೂ, ಅವನಿಂದ ಪ್ರಚೇತಸನೂ ಹುಟ್ಟಿದನು. ಪ್ರಚೇತಸನ ಮಗ ಶತಧರ್ಮ. ಅವನು ಉತ್ತರ ದೇಶದಲ್ಲಿದ್ದ. ಅನೇಕ ಮಂದಿ ಮ್ಲೇಚ್ಛರ ಮೇಲೆ ಒಡೆತನವನ್ನು ನಡೆಸುತ್ತಿದ್ದನು.

## ಅನುವಿನ ವಂಶ

ಅನು ಎಂಬುವನು ಯಯಾತಿಯ ನಾಲ್ಕನೆಯ ಮಗ. ಈ ಅನುವಿಗೆ ಸಭಾನಲ, ಚಕ್ಷು, ಪರಮೇಷು ಎಂಬ ಮೂವರು ಮಕ್ಕಳಾದರು. ಸಭಾನಲನ ಮಗ ಕಾಲಾನಲ. ಆತನ ಮಗ ಸೃಜಯ. ಸೃಜಯನ ಮಗ ಪುರಂಜಯ. ಅವನಿಂದ ಜನಮೇಜಯನು ಅವನಿಂದ ಮಹಾಶಾಲನು, ಆತನಿಂದ ಮಾಹಾಮಾನನೂ ಜನಿಸಿದನು. ಈ ಮಹಾಮಾನನಿಂದ ಉಶೀನರ,

ತಿತಿಕ್ಷು ಎಂಬ ಇಬ್ಬರು ಪುತ್ರರು ಹುಟ್ಟಿದರು. ಉಶೀನರನಿಗೆ ಶಿಭಿ, ನೃಗ, ನರ, ಕೃಮಿ, ವರ್ಮ ಎಂಬ ಐವರು ಮಕ್ಕಳಿದ್ದರು. ಪೃಷದರ್ಭ, ಸುವೀರ, ಕೇಕಯ, ಮದ್ರಕ ಎಂಬ ನಾಲ್ವರು ಶಿಬಿಯ ಪುತ್ರರು. ತಿತಿಕ್ಷುವಿಗೆ ರುಶದ್ರಥ. ಆತನಿಗೆ ಹೇಮ. ಅವನಿಗೆ ಸುತಪ ಆತನಿಗೆ ಬಲಿಯೂ ಹುಟ್ಟಿದರು. ಬಲಿಯ ಮಡದಿಯಲ್ಲಿ ದೀರ್ಘ ತದುಸ್ಯೆಂಬ ಋಷಿಯಿಂದ ಅಂಗ, ವಂಗ, ಕಲಿಂಗ, ಸುಹ್ಮ, ಪೌಂಡ್ರ ಎಂಬ ಹೆಸರಿನ ಕ್ಷತ್ರಿಯರು ಹುಟ್ಟಿದರು. ಬಲಿಯು ಕ್ಷೇತ್ರಜಾತರಾದ್ದರಿಂದ ಇವರನ್ನು ಬಾಲೆಯರು ಎಂದು ಕರೆಯುತ್ತಿದ್ದರು. ಅಂತೆಯೇ ಈ ಸಂತತಿಯವರ ಹೆಸರಾದ ಅಂಗ, ವಂಗ, ಕಲಿಂಗ, ಮೊದಲಾದ ನಾಮಧೇಯವುಳ್ಳ (ಅವರು ವಾಸಮಾಡುತ್ತಿದ್ದ) ಐದು ರಾಜ್ಯಗಳು ಉಂಟಾದುವು. ಅಂಗನಿಂದ ಅನಪಾನನು. ಅವನಿಂದ ದಿವಿರಥನೂ. ಅವನಿಂದ ಧರ್ಮರಥನು ಹುಟ್ಟಿದರು. ಧರ್ಮರಥನ ಮಗ ಚಿತ್ರರಥ. (ಆತನಿಗೆ ರೋಮಪಾದ ಎಂಬ ಹೆಸರಿತ್ತು) ಅಜನ ಮಗನಾದ ದಶರಥನು ಸಂತಾನವಿಲ್ಲದ ಈ ರೋಮಪಾದನಿಗೆ ಶಾಂತಾ ಎಂಬ ಕನ್ಯೆಯನ್ನು ಮಗಳನ್ನಾಗಿ ದತ್ತು ಕೊಟ್ಟಿದ್ದನು. ರೋಮಪಾದನಿಂದ ಚತುರಂಗನೂ ಅವನಿಂದ ಪೃಥುಲಾಕ್ಷನೂ. ಅವನಿಂದ ಚಂಪನೂ ಜನಿಸಿದರು. ಈ ಚಂಪನು ಚಂಪೆಯೆಂಬ ನಗರಿಯನ್ನು ನಿರ್ಮಿಸಿದನು. ಅವನ ಮಗ ಹರ್ಯಂಗ ಅವನಿಂದ ಭದ್ರರಥನು ಅವನಿಂದ ಬೃಹದ್ರಥನೂ ಅವನಿಂದ ಬೃಹತ್ಕರ್ಮನು. ಆತನಿಂದ ಬೃಹದ್ಭಾನುವು ಜನಿಸಿದರು. ಬೃಹದ್ಭಾನುವಿನಿಂದ ಬ್ರಹ್ಮನ್ಮನ. ಆತನ ಮಗ ಜಯದ್ರಥ. ಈ ಜಯದ್ರಥನು ಬ್ರಾಹ್ಮಣ ಕ್ಷತ್ರಿಯರ ಸಾಂಕರ್ಯದಿಂದ ಜನಿಸಿದ. ಮಡದಿಯಲ್ಲಿ ವಿಜಯನೆಂಬ ಪುತ್ರನನ್ನು ಪಡೆದನು. ವಿಜಯ ಧೃತಿಯೆಂಬುವನನ್ನೂ ಅವನಿಗೆ ಧೃತನ್ನತ, ಅವನ ಮಗ ಸತ್ಯವತಿ, ಸತವರ್ಮನ ಮಗ ಅತಿರಥ ಎಂಬುವನು. ಇವನೇ ಗಂಗಾನದಿಗೆ ಹೋಗಿದ್ದಾಗ, ಕುಂತಿಯಿಂದ ಒಂದು ಪೆಟ್ಟಿಗೆಯಲ್ಲಿಟ್ಟು ಪರಿತ್ಯಕ್ತನಾಗಿದ್ದ ಕರ್ಣನನ್ನು ಪುತ್ರನೆಂದು ಸ್ವೀಕರಿಸಿದನು. ಕರ್ಣನಿಂದ ವೃಷಸೇನನು ಹುಟ್ಟಿದನು. ಹೀಗೆ ಅಂಗರಾಜರ ಅಂಗವಶೀಯರ ಬಗ್ಗೆ ತಿಳಿದಿದ್ದಾಯಿತು.

# ಪುರುವಂಶದ ಚರಿತ್ರೆ

ಪರಾಶರ ಪುರುವಂಶದ ಬಗ್ಗೆ ಮೈತ್ರೇಯನಿಗೆ ತಿಳಿಸಲು ಆರಂಭಿಸಿದರು. ಪುರುವಿನ ಮಗ ಜನಮೇಜಯ. ಅವನಿಗೆ ಪ್ರಚಿನ್ವಂತ ಎಂಬುವನು. ಅವನಿಗೆ ಪ್ರವೀರನೂ, ಅವನ ಮಗ ಮನಸ್ಯು, ಅವನಿಗೆ ಅಭಯದನು ಪುತ್ರರಾದರು. ಅಭಯದನ ಮಗ ಸುದ್ಯು. ಆತನ ಮಗ ಬಹುಗತ, ಅವನಿಂದ ರೌದ್ರಾಶ್ವನೂ ಹುಟ್ಟಿದರು. ರೌದ್ರಾಶ್ವನಿಗೆ ಋತೇಷು, ಕಷೇಷು, ಸ್ಥಂಡಿಲೇಷು, ಕೃತೇಷು, ಜಲೇಷು ಧರ್ಮೇಷು, ಧೃತೇಷು, ಸ್ಥಲೇಷು, ಸನ್ನತೇಷು ಮತ್ತು ವನೇಷು ಎಂಬ ಹತ್ತು ಮಂದಿ ಮಕ್ಕಳಾದರು. ಋತೇಷುವಿನ ಮಗ ಅಂತಿನಾರ. ಅಂತಿನಾರನಿಗೆ ಸುಮತಿ, ಅಪ್ರತಿರಥ ಮತು ಧ್ರುವ ಎಂಬ ಮೂರು ಮಕ್ಕಳಾದರು ಈ ಮೇದಾತಿಥಿಯಿಂದ ಕಾಣ್ವಾಯನರೆಂಬ ಬ್ರಾಹ್ಮಣರ ಸಂತತಿಯುಂಟಾಯಿತು. ಅಪ್ರತಿರಥನಿಗೆ ಐಲೀನ ಎಂಬ ಮತ್ತೊಬ್ಬ ಮಗನಿದ್ದನು. ಐಲೀನನಿಗೆ ದುಷ್ಯಂತನೆ ಮೊದಲಾದ ನಾಲ್ವರು ಮಕ್ಕಳು ಇದ್ದರು. ಈ ದುಷ್ಯಂತನಿಗೆ ಭರತ ಚಕ್ರವರ್ತಿ ಹುಟ್ಟಿದನು. ಇವನಿಗೆ ಭರತ ಎಂಬ ಹೆಸರು ಹೇಗೆ ಬಂದಿತು ಎಂಬುದಕ್ಕೆ ಪ್ರಸಿದ್ಧವಾದ ಶ್ಲೋಕವಿದೆ.

**ಮಾತಾ ಭಸ್ತ್ರಾ ಪಿತುಃ ಪುತ್ರೋ ಯೇನ ಜಾತಃ ಸ ಏವಸ ।**

**ಭರಸ್ವಂ ಪುತ್ರಂ ದುಶ್ಯಂತ ಮಾವ ಮಂಸ್ಥಾಶಕುಂತಲಾಮ್ ॥**

**ರೇತೋದಾಃ ಪುತ್ರೋ ನಯತಿ ನರದೇವ ಯಮಷಯಾತ್ ತ್ವ**

**ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಲಾ**

ಈ ಶ್ಲೋಕವನ್ನು ದೇವತೆಗಳೇ ಹೇಳಿದರಂತೆ. ಈ ಎರಡೂ ಶ್ಲೋಕಗಳು ಮಹಾಭಾರತದ ಆದಿಪರ್ವದಲ್ಲಿದೆ. ಅದರ ಅರ್ಥ ಹೀಗಿದೆ. 'ಎಲೈ ದುಷ್ಯಂತ ತಾಯಿಯು ಚರ್ಮದ ಚೀಲವಿದ್ದಂತೆ. ಅಂದರೆ ರಕ್ಷಣೆ ಮಾಡುವವಳು. ಪುತ್ರನು ಪಿತೃವಿಗೆ ಸೇರತಕ್ಕವನು. ಯಾರಿಂದ ಅವನು ಹುಟ್ಟಿರುತ್ತಾನೋ ಆ ತಂದೆಯ ಸ್ವರೂಪನೇ ಅವನು. ಪುತ್ರನನ್ನು ಭರಿಸು (ಸ್ವೀಕರಿಸು ಪೋಷಿಸು) ಶಕುಂತಲೆಗೆ ಅವಮಾನ ಮಾಡಬೇಡ. ತನ್ನ ವೀರ್ಯದಿಂದ ಜನಿಸಿದ ಪುತ್ರನು ಅವನನ್ನು ಯಮಲೋಕದಿಂದ ದೇವಲೋಕಕ್ಕೆ ಒಯ್ಯುತ್ತಾನೆ. ಎಲೈ ರಾಜ

ಶಕುಂತಲೆಗೆ ಗರ್ಭಾದಾನ ಮಾಡಿದವನು ನೀನು. ಶಕುಂತಲೆಯು ಸತ್ಯವನ್ನೇ ಹೇಳುತ್ತಿದ್ದಾಳೆ. ಈ ಸಂದರ್ಭದ ಶಕುಂತಲೆಯ ಪೂರ್ವವೃತ್ತಾಂತವನ್ನು ನಾವು ತಿಳಿಯಬೇಕಾಗುತ್ತದೆ. ವಿಶ್ವಾಮಿತ್ರ ಮೇನಕೆಯರ ಪುತ್ರಿಯಾಗಿ ಜನಿಸಿದವಳು ಶಕುಂತಲಾ. ಈಕೆಯು ತಂದೆ ತಾಯಿಯರಿಂದ ಪರಿತ್ಯಕ್ತಳಾಗಿ ಕಣ್ವರ ಆಶ್ರಮದಲ್ಲಿ ಅವರ ಆಶ್ರಯದಲ್ಲಿ ಬೆಳೆಯುತ್ತಾಳೆ. ಒಮ್ಮೆ ಅವಳನ್ನು ರಾಜ ದುಷ್ಯಂತನು ನೋಡಿದನು. ಬಬ್ಬರಿಗೊಬ್ಬರು ಮನಸೋತರು. ಅದು ಎಷ್ಟರಮಟ್ಟಿಗೆ ಎಂದರೆ ಪರಸ್ಪರ ಸಲ್ಲಾಪದಲ್ಲಿ ಮಗ್ನರಾಗಿದ್ದವರು ಅಲ್ಲಿಗೆ ಬಂದ ದುರ್ವಾಸರನ್ನೂ ಗಮನಿಸಲಿಲ್ಲ. ಒಡನೆಯೇ ಅತಿ ಕೋಪಿಷ್ಠರಾದ ದುರ್ವಾಸರು ಅವರಿಗೆ ಶಾಪವನ್ನಿತ್ತರು. ಈ ದುಷ್ಯಂತನು ಶಕುಂತಲೆಯನ್ನು ಮರೆತು ಹೋಗಲಿ. ಎಂದು, (ಈಗಾಗಲೇ ದುಷ್ಯಂತನು ಶಕುಂತಲೆಗೆ ತನ್ನ ನೆನಪಿನ ಕಾಣಿಕೆಯಾಗಿ ಉಂಗುರವನ್ನಿತ್ತಿದ್ದನು.) ತನ್ನ ಅಜಾಗರೂಕತೆಗೆ ಪರಿತಪಿಸಿದ ದುಷ್ಯಂತನು ಮುನಿಗಳ ಬಳಿ ಪರಿಪರಿಯಾಗಿ ಬೇಡಿಕೊಂಡನು. ತನ್ನನ್ನು ಕ್ಷಮಿಸುವಂತೆ ಅಂಗಲಾಚಿದನು. ಆಗ ದುರ್ವಾಸ ಮುನಿಯು ಶಾಂತಚಿತ್ತರಾಗಿ ಆ ಉಂಗುರವು ದೊರಕಿದಾಗಲೇ ನಿನಗೆ ಶಕುಂತಲೆಯ ನೆನಪು ಬರುತ್ತದೆ ಎಂದರು. ಈ ಘಟನೆಯ ನಂತರ ದುಷ್ಯಂತ ತನ್ನ ರಾಜ್ಯಕ್ಕೆ ಹಿಂತಿರುಗಿದನು. ಕೆಲವು ದಿನಗಳ ನಂತರ ಶಕುಂತಲೆಯು ದುಷ್ಯಂತನ ರಾಜ್ಯಕ್ಕೆ ಬಂದಳು. ಆ ಸ್ಥಾನಕ್ಕೆ ಬಂದರೂ ಅವಳ ನೆನಪು ದುಷ್ಯಂತನಿಗೆ ಎಳ್ಳಷ್ಟೂ ಬರಲಿಲ್ಲ. ಶಕುಂತಲೆ ತುಂಬು ಗರ್ಭಿಣಿಯಾಗಿದ್ದಳು. ನೀನು ನನ್ನ ಪತ್ನಿಯಲ್ಲ ಎಂದು ಹೇಳಿ ಧಿಕ್ಕರಿಸಿದನು ದುಶ್ಯಂತ. ಶಕುಂತಲೆಯು ಬೇರೆ ದಾರಿಕಾಣದೆ ಕಣ್ವಾಶ್ರಮಕ್ಕೆ ಬಂದು ಸೇರಿದಳು. ಕೆಲವು ದಿನಗಳ ನಂತರ ಅವಳು ಭರತನಿಗೆ ಜನ್ಮವಿತ್ತಳು. ಒಮ್ಮೆ ಮೀನುಗಾರನು ಬಂದು ದುಷ್ಯಂತನ ಬಳಿಗೆ ಒಂದು ಉಂಗುರವನ್ನು ಕೊಟ್ಟನು. ಅದನ್ನು ನೋಡಿದಾಕ್ಷಣ ತಾನು ಆ ಉಂಗುರವನ್ನು ಶಕುಂತಲೆಗೆ ಕೊಟ್ಟ ನೆನಪಾಯಿತು. ಅವಳನ್ನು ಕರೆತರಲು ಕಣ್ವಾಶ್ರಮಕ್ಕೆ ಬಂದನು. ಅಲ್ಲಿ ನೋಡಿದಾಗ ಭರತನು ಹುಲಿಯ ಜೊತೆ ಆಟವಾಡುತ್ತಿದ್ದನು. ಅವನನ್ನು ಕಂಡು ದುಷ್ಯಂತನು ಆನಂದಭರಿತನಾದನು. ಹೀಗೆ ದುಶ್ಯಂತ ಶಕುಂತಲೆಯ ಪುನರ್ಮಿಲನವಾಯಿತು.

ಭರತನಿಗೆ ಮೂವರು ಮಡದಿಯರಿದ್ದರು. ಅವರಲ್ಲಿ ಆತನಿಗೆ ಒಂಬತ್ತು

ಮಕ್ಕಳು ಹುಟ್ಟಿದರು. ಆದರೆ ಈ "ಮಕ್ಕಳು ಹೋಲಿಕೆಯಲ್ಲಿ ನನಗೆ ಅನುರೂಪರಾದವರಲ್ಲ" ಎಂದು ಭರತನು ಹೇಳಿದನು. ಅದನ್ನು ಕೇಳಿ ಪತಿಯು ತಮ್ಮನ್ನೂ ತ್ಯಜಿಸಿ ಬಿಟ್ಟಾನೆಂಬ ಭಯದಿಂದ ಆ ತಾಯಂದಿರು ತಮ್ಮ ಮಕ್ಕಳನ್ನು ಕೊಂದುಬಿಟ್ಟರು. ಹೀಗೆ ಭರತನಿಗೆ ಪುತ್ರಜನ್ಮವು (ವಿತಥ) ವಿಫಲವಾಯಿತು. ಆಗ ಪುತ್ರಾರ್ಥಿಯಾದ ಭರತನು ಮರುತ್ಸೋಮವೆಂಬ ಯಾಗವನ್ನು ಮಾಡಿದನು. ಆಗ ಮರುತ್ತುಗಳು ಭರತನಿಗೆ 'ಭರದ್ವಾಜ' ಎಂಬುವನನ್ನು ಪುತ್ರನೆಂದು ಅನುಗ್ರಹಿಸಿದರು. ಈ ಭರಧ್ವಾಜನು ಉತಥ್ಯನ ಭಾರ್ಯೆಯಾದ ಮಮತೆಯಲ್ಲಿ ಬೃಹಸ್ಪತಿಯ ವೀರ್ಯದಿಂದ ಹುಟ್ಟಿದನು. ಈ ಸಮಯದಲ್ಲಿ ಮಮತೆಯ ಗರ್ಭದಲ್ಲಿಯೇ ಇದ್ದ ಇನ್ನೊಂದು ಶಿಶುವಾದ ದೀರ್ಘತಮಸ್ ಎಂಬುವನು ಈತನನ್ನು ಪಕ್ಕದಿಂದ ತಿವಿದು ಗರ್ಭದಿಂದ ಹೊರಕ್ಕೆ ತಳ್ಳಿದನು.

**ಮೂಢೇ ಭರದ್ವಾಜ ಮಿಮಂ ಭರಧ್ವಾಜಂ ಬೃಹಸ್ಪತೇ**

**ಯಾತೌ ಯದುಕ್ತ್ವಾ ಪಿತರೌ ಭರಧ್ವಾಜಸ್ತ ತಸ್ತ್ವಯಮ್**

(ವಿ.ಪು. ಸಂ.2 ಚತುರ್ಥಾಂಶ 19 ಅ.18 ನೇಶ್ಲೋಕ)

ಎಲೌ ಮೂಡೇ ದ್ವಾಜಂ = ನಮ್ಮಿಬ್ಬರಿಂದ ಹುಟ್ಟಿದ ಈತನನ್ನು ಭರ = ಪೋಷಿಸು. ಆಗ ಮಮತೆ ಹೇಳುತ್ತಾಳೆ ಬೃಹಸ್ಪತಿಯೇ ಭರದ್ವಾಜಂ = ಈ ದ್ವಾಜವನ್ನು ನೀನೇ ಭರಿಸು. ಹೀಗೆ ಪರಸ್ಪರ ವಿವಾದ ಮಾಡಿ ತಂದೆ ತಾಯಿಗಳು ಹೊರಟು ಹೋದುದ್ದರಿಂದ ಈತನಿಗೆ 'ಭರದ್ವಾಜ' ಎಂಬ ಹೆಸರಾಯಿತು. ಭರತ ಚಕ್ರವರ್ತಿಯ ಪುತ್ರ ಜನ್ಮವು ವಿತಥವಾದಾಗ ಮರುದ್ದೇವತೆಗಳು ಭರದ್ವಾಜನನ್ನು ಕೊಟ್ಟ ಕಾರಣ ವಿತಥನೆಂದು ಹೆಸರು ಪಡೆದನು. ವಿತಥನ ಮಗ ಮನ್ಯು. ಮನ್ಯುವಿಗೆ ಬೃಹತ್ ಕ್ಷೇತ್ರ ಮಹಾವೀರ್ಯ, ನರ ಮತ್ತು ಗರ್ಗ ಎಂಬ ಪುತ್ರರಾದರು. ನರನ ಮಗ ಸಂಕೃತಿ. ಇವನಿಗೆ ಗುರು ಪ್ರೀತಿ-ರಂತಿದೇವ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಗರ್ಗನಿಂದ ಶಿನಿಯು ಹುಟ್ಟಿದನು. ಶಿನಿಯಿಂದ ಗಾರ್ಗ್ಯರು ಶೈನ್ಯರು ಎಂಬ ಕ್ಷತ್ರಿಯರು ಉದಸಿ ಬ್ರಾಹ್ಮಣರಾದರು. ಮಹಾವೀರ್ಯನಿಂದ ದುರುಕ್ಷಯನೆಂಬುವನು ಹುಟ್ಟಿದನು. ಆತನಿಗೆ ತ್ರಯ್ಯಾರುಣಿ, ಪುಷ್ಕರಿಣ್ಯ ಮತ್ತು ಕಪಿ ಎಂಬ ಮೂವರು

ಪುತ್ರರಾದರು. ಈ ಮೂವರೂ ಸಹ ಕಾಲಾಂತರದಲ್ಲಿ ಬ್ರಾಹ್ಮಣ್ಯವನ್ನು ಪಡೆದರು. ಬೃಹತ್ ಕ್ಷತ್ರನ ಮಗ ಸುಹೋತ್ರ. ಸುಹೋತ್ರನ ಮಗ ಹಸ್ತಿ. ಈ ಹಸ್ತಿಯೇ, ಹಸ್ತಿನಾಪುರ ನಗರವನ್ನು ಸ್ಥಾಪಿಸಿದನು. ಅಜಮೀಡ, ದ್ವಜಮೀಡ, ಪುರುಮೀಡ ಎಂಬ ಮೂವರು ಹಸ್ತಿಯ ಮಕ್ಕಳು. ಅಜಾಮೀಡನಿಂದ ಕಣ್ವನೂ. ಕಣ್ವನಿಂದ ಮೇದಾತಿಥಿಯು ಹುಟ್ಟಿದನು. ಮೇಧಾತಿಥಿಯಿಂದ ಕಾಣ್ವಾಯಾನರೆಂಬ ಬ್ರಾಹ್ಮಣರ ಸಂತತಿ ಹುಟ್ಟಿತು. ಅಜಮೀಡನ ಇನ್ನೊಬ್ಬ ಮಗ ಬೃಹದಿಷು. ಅವನಿಂದ ಬೃಹದ್ದದನು. ಅವನಿಂದ ಬೃಹತ್‌ಕರ್ಮನೂ, ಅವನಿಂದ ಜಯದ್ರಥನು ಹುಟ್ಟಿದನು. ಜಯದ್ರಥನಿಂದ ವಿಶ್ವಜಿತ್, ಆತನ ಮಗ ಸೇನಜಿತ್, ರುಚಿರಾಶ್ವ, ಕಾಶ್ಯ, ದೃಡಹ, ವತ್ಸಹ ಎಂಬುವರು ಜನಿಸಿದರು. ರುಚಿರಾಶ್ವನ ಮಗ ಪೃಥಸೇನ. ಆತನಿಂದ ಪಾರ. ಅವನಿಂದ ನೀಲನೆಂಬುವರು ಹುಟ್ಟಿದನು. ನೀಲನಿಗೆ ನೂರುಮಂದಿ ಪುತ್ರರು ಇದ್ದರು. ಅವರಲ್ಲಿ ಕಾಂಪಿಲ್ಯನಗರದ ಅಧಿಪತಿಯಾದ ಸಮರನು ಪ್ರಮುಖನು. ಸಮರನಿಗೆ, ಪಾರ, ಸುಪಾರ, ಸದಶ್ವ ಎಂಬ ಮೂವರು ಮಕ್ಕಳಿದ್ದರು. ಸುಪರನಿಂದ ಪೃಥು. ಅವನಿಂದ ಸುಕೃತಿ. ಅವನಿಂದ ವಿಭ್ರಾಜ, ಅವನಿಗೆ ಅಣುಹನು ಜನಿಸಿದನು. ಅಣುಹನು ಶುಕಮುನಿಯ ಪುತ್ರಿಯಾದ ಕೀರ್ತಿ ಎಂಬುವಳನ್ನು ಮದುವೆಯಾದನು. ಅಣುಹನಿಂದ ಬ್ರಹ್ಮದತ್ತನೂ, ಅವನಿಂದ ವಿಷ್ವಕ್ಸೇನನೂ, ಆತನಿಂದ ಉದಕ್ಸೇನನೂ ಹುಟ್ಟಿದನು. ಭಲ್ಲಾಭನು ಉದಕ್ಸೇನನ ಮಗ ದ್ವಿಜಮೀಡನ ಮಗ ಯವೀನರ ಎಂಬುವನು, ಆತನ ಮಗ ಧೃತಿಮಾನ್, ಅವನಿಂದ ಸತ್ಯಧೃತಿಯೂ, ಆತನಿಂದ ದೃಢನೇಮಿಯೂ, ಆತನಿಂದ ಸುಪಾರ್ಶ್ವನು ಹುಟ್ಟಿದನು. ದುಪಾರ್ಶ್ವನಿಂದ ಸುಮತಿ, ಅವನಿಂದ ಸನ್ನತಿಮಾನ್, ಅವನಿಂದ ಕೃತ ಎಂಬುವರು ಜನಿಸಿದರು. ಕೃತನಿಗೆ ಹಿರಣ್ಯನಾಭನು ಯೋಗವಿದ್ಯೆಯಲ್ಲಿ ಶಿಕ್ಷಣವನ್ನಿತ್ತನು. ಅಲ್ಲದೆ ಈ ಕೃತನು ಪೂರ್ವದೇಶದ ಸಾಮಗರು ಅಧ್ಯಯನ ಮಾಡುವ ಇಪ್ಪತ್ತನಾಲ್ಕು ಸಾಮವೇದ ಸಂಹಿತೆಗಳನ್ನು ರಚಿಸಿದನು. ಕೃತನಿಂದ ಉಗ್ರಾಯುಧನು ಹುಟ್ಟಿದನು. ಇವನು ಪ್ರಮುಖವಾಗಿ ನೀಪರೆಂಬ ಕ್ಷತ್ರಿಯರನ್ನು ಸೋಲಿಸಿದನು. ಉಗ್ರಾಯುಧನಿಂದ ಕ್ಷೇಮ್ಯನೂ, ಅವನಿಂದ ಸುಧೀರನೂ, ಆತನಿಂದ ರಿಪುಂಜಯನೂ, ಅವನಿಂದ ಬಹುರಥ ಎಂಬುವನೂ ಜನಿಸಿದರು. ಇವರೆಲ್ಲರು ಪುರು ವಂಶದ

ಪೌರವರು. ಇನ್ನು ಹಸ್ತಿಯ ಮಗನಾದ ಅಜಮೀಡನಿಗೆ ನಳಿನೀ ಎಂಬ ಪತ್ನಿಯಿದ್ದಳು. ಅವಳಲ್ಲಿ ನೀಲನೆಂಬ ಮಗನು ಹುಟ್ಟಿದನು. ಅವನಿಂದ ಶಾಂತಿ ಎಂಬುವನು, ಶಾಂತಿಯಿಂದ ಸುಶಾಂತಿಯು, ಅವನಿಂದ ಪುರಂಜಯನೂ, ಪುರಂಜಯನಿಂದ ಋಕ್ಷನೂ ಹುಟ್ಟಿದರು. ಋಕ್ಷನಿಂದ ಹರ್ಯಶ್ವ, ಇವನಿಂದ ಮುದ್ಗಲ, ಸೃಂಜಯ, ಬೃಹದಿಷು, ಯವೀನರ, ಕಾಂಪಿಲ್ಲ ಎಂಬ ಐವರು ಮಕ್ಕಳು ಜನಿಸಿದರು.

**ತಸ್ಮಾನ್ಮುದ್ಗುಲ ಸೃಂಜಯ ಬೃಹದಿಷು ಯಾವೀನರ ಕಾಂಪಿಲ್ಯಸಂಜ್ಞಾಃ**

**ಪಂಚಾನಾಮೇವ ತೇಷಾಂ ವಿಷಯಾಣಾಂ**

**ರಕ್ಷಣಾಯಾಲ ಮೇತೇ ಮತ್ಪುತ್ರಾ ಇತಿ ಪಿತ್ರಾಬಿಹಿತಾಃ ಪಾಂಚಾಲಾಃ**

(ವಿ.ಪು. 2ನೇ ಚತುರ್ಥಾಂಶ 19 ಅ. 59ನೇಶ್ಲೋಕ)

ತಂದೆಯಾದ ಹರ್ಯಶ್ವನು ಹೀಗೆ ಹೇಳಿದನು. ಈ ನನ್ನ ಪುತ್ರರು ನನಗೆ ಪಂಚದೇಶಗಳನ್ನು ರಕ್ಷಿಸಲು ‘ಅಲಂ’ ಎಂದರೆ ಸಮರ್ಥರು ಎಂದು ಹೇಳುತ್ತಿದ್ದನು. ಆದ್ದರಿಂದಲೇ ಇವರು ಪಾಂಚಾಲರೆನಿಸಿದ ಮುದ್ಗಲನಿಂದ ಮುಂದೆ ಜನಿಸಿದ ಮೌದಲ್ಯರು ಕ್ಷತ್ರಿಯರಾಗಿದ್ದೂ ಬ್ರಾಹ್ಮಣರಾದರು. ಮುದ್ಗಲನಿಂದ ಬೃಹದಶ್ವನು ಹುಟ್ಟಿದನು. ಆತನಿಗೆ ದಿವೋದಾಸನೆಂಬ ಮಗನೂ ಅಹಲ್ಯಾ ಎಂಬ ಮಗಳು ಜನಿಸಿದಳು. ಶರದ್ವತನಿಂದ ಅಹಲ್ಯಾ ಎಂಬ ಮಗಳು ಜನಿಸಿದಳು. ಶರದ್ವತನಿಂದ (ಗೌತಮನಿಂದ) ಅಹಲ್ಯೆಯಲ್ಲಿ ಶತಾನಂದನು ಹುಟ್ಟಿದನು. ಧನುರ್ವೇದದಲ್ಲಿ ಪಾರಂಗತನಾದ ಸತ್ಯಧೃತಿಯು ಶತಾನಂದನ ಮಗ.

ಒಮ್ಮೆ ಶ್ರೇಷ್ಠ ಅಪ್ಸರೆಯಾದ ಊರ್ವಶಿಯನ್ನು ನೋಡಿದಾಗ ಸತ್ಯಧೃತಿಯ ವೀರ್ಯವು ಸ್ಖಲನವಾಗಿ ‘ಶರ’ ಎಂಬ ಹುಲ್ಲಿನ ಪೊದೆಯಲ್ಲಿ ಬಿದ್ದಿತು. ಅದು ಎರಡು ವಿಭಾಗವಾಗಿ ಒಬ್ಬ ಕುಮಾರನೂ, ಇನ್ನೊಬ್ಬ ಕನ್ಯೆಯು ಉತ್ಪನ್ನರಾದರು, ಬೇಟೆಯಾಡಲು ಬಂದಿದ್ದ ಶಂತನು ಮಹಾರಾಜನು ಅವರಿಬ್ಬರನ್ನು ಕಂಡು ಕೃಪೆಯಿಂದ ಸ್ವೀಕರಿಸಿ ಕರೆದುಕೊಂಡು ಹೋದನು, ಈ ಕುಮಾರನೇ ಮುಂದೆ ಕೃಪಾಚಾರ್ಯನಾದನು, ಹೆಣ್ಣು ಕೃಪೀ ಎಂಬ ಹೆಸರಿನಿಂದ ದ್ರೋಣಾಚಾರ್ಯರ ಪತ್ನಿಯಾದಳು. ಇವರಿಬ್ಬರಿಗೂ ಅಶ್ವತ್ಥಾಮನೆಂಬ ಪುತ್ರನು ಜನಿಸಿದನು.

ದಿವೋದಾಸನ ತನಯ ಮಿತ್ರಾಯು, ಆತನ ಮಗ ಚ್ಯವನನೆಂಬ ರಾಜ. ಚ್ಯವನನಿಂದ ಸುದಾಸನೂ, ಆತನಿಂದ ಸೌದಾಸನೂ, ಆತನಿಂದ ಸಹದೇವನೂ, ಉತ್ಪನ್ನರಾದರು. ಸಹದೇವನ ಪುತ್ರ ಸೋಮಕ, ಸೋಮಕನಿಗೆ ನೂರು ಮಂದಿ ಪುತ್ರರಿದ್ದರು. ಅವರಲ್ಲಿ ಜಂತು ಎಂಬುವನು ಜೇಷ್ಠಪುತ್ರ. ಪೃಷತ ಎಂಬುವನು ಎಲ್ಲರಿಗಿಂತ ಕಿರಿಯ. ಪೃಷತನಿಂದ ದ್ರುಪದನೂ, ಅವನಿಂದ ದೃಷ್ಟದ್ಯುಮ್ನನೂ, ಅವನಿಂದ ದೃಷ್ಟಕೇತುವೂ ಉತ್ಪನ್ನರಾದರು. ಅಜಮೀಡನಿಗೆ ಋಕ್ಷ ಎಂಬ ಹೆಸರಿನ ಇನ್ನೊಬ್ಬ ಪುತ್ರನಿದ್ದನು. ಅವನ ಮಗ ಸಂವರಣ ಈ ಸಂವರಣನಿಂದ ಕುರು ಎಂಬುವನು ಹುಟ್ಟಿದನು. ಈತನಿಗೆ ಧರ್ಮಕ್ಷೇತ್ರವೆನಿಸಿದ ಕುರುಕ್ಷೇತ್ರದ ಸ್ಥಾಪಕ ಸುಧನು ಜಹ್ನು, ಪರೀಕ್ಷಿತ್ ಮುಂತಾದವರು ಕುರುವಿನ ಪುತ್ರರು. ಸುಧನುವಿನ ಮಗ ಸುಹೋತ್ರ, ಅವನಿಂದ ಚ್ಯವನನೂ, ಅವನಿಂದ ಕೃತಕನೂ ಜನಿಸಿದರು. ಕೃತಕನ ಮಗ ಉಪಚರನೆಂಬ ಈ ವಸುವಿಗೆ ಬೃಹದ್ರಥ, ಪ್ರತ್ಯಗ್ರ, ಕುಶಾಂಬು, ಕುಚೇಲನಿಂದ ಕುಶಾಗ್ರ, ಆತನಿಂದ ವೃಷಭ, ಅವನಿಂದ ಪುಷ್ಪವಂತ, ಅವನಿಂದ ಸತ್ಯಹಿತ, ಸತ್ಯಹಿತನಿಂದ ಸುಧನ್ವ ಇವರ ಜನ್ಮವಾಯಿತು. ಸುಧನ್ವನ ಮಗ ಜತು. ಬೃಹದ್ರಥನಿಗೆ ಇನ್ನೊಬ್ಬ ಮಗ ನಿದ್ದನ ಆತನ ದೇಹದ ಎರಡು ಭಾಗಗಳನ್ನು ಜರಾ ಎಂಬುವಳು ಜೋಡಿಸಿದ ಪ್ರಯುಕ್ತ ಜೀವಿಸಿದ್ದರಿಂದ  ಆತನಿಗೆ 'ಜರಾಸಂಧ' ಎಂದು ಹೆಸರಾಯಿತು. ಜರಾಸಂಧನಿಂದ ಸಹದೇವನೂ, ಅವನಿಂದ ಸೋಮಾಪನು, ಅವನಿಂದ ಶ್ರುತಶ್ರವಸ್ ಎಂಬುವರು ಉತ್ಪನ್ನರಾದರು. ಇವರೆಲ್ಲರೂ ಮಗಧ ದೇಶದ ರಾಜರು.

## ಕುರುವಂಶದ ವರ್ಣನೆ

ಪರಾಶರರು ಮೈತ್ರೇಯರಿಗೆ ಕುರುವಂಶದ ಬಗ್ಗೆ ವರ್ಣಿಸಲು ಉದ್ಯುಕ್ತರಾದರು. ಕುರುವಿನ ಇನ್ನೊಬ್ಬ ಪುತ್ರನಾದ ಪರೀಕ್ಷಿತನಿಗೆ ಜನಮೇಜಯ ಶ್ರುತಸೇನ, ಉಗ್ರಸೇನ, ಭೀಮಸೇನ ಎಂಬ ನಾಲ್ವರು ತನಯರಿದ್ದರು. ಇನ್ನೊಬ್ಬ ಕುರುಪುತ್ರನಾದ ಜಹ್ನುವಿಗಾದರೋ ಸುರಥನೆಂಬ ಮಗನಿದ್ದನು. ಸುರಥನ ಮಗ ವಿದೂರಥ ಆತನಿಂದ ಸಾರಭೌಮನೂ, ಅವನಿಂದ ಜಯತ್ಸೇನ, ಆತನಿಂದ ಆರಾಧಿತನೂ. ಆತನಿಂದ ಆಯುಕಾರಿಯುವೂ,

ಅವನಿಂದ ಅಕ್ರೋಧನನೂ ಹುಟ್ಟಿದನು. ಆತನ ಮಗ ದೇವಾತಿಥಿ, ಅವನಿಗೆ ಇನ್ನೊಬ್ಬ ಮಗ ಋಷನೆಂಬುವನು (ಅಜಮೀಢನ ಮಗ ಋಷನಿಗಿಂತ ಭಿನ್ನನಾದವ) ಹುಟ್ಟಿದನು. ಋಷನಿಂದ ಭೀಮಸೇನ, ಅವನಿಂದ ದಿಲೀಪ, ಅವನಿಂದ ಪ್ರತೀಪನಿಗೆ ದೇವಾಪಿ, ಶಂತನು, ಬಾಹ್ಲೀಕ ಎಂಬ ಹೆಸರಿನ ಮೂವರು ಪುತ್ರರಾದರು. ದೇವಾಪಿಯು ಬಾಲಕನಾಗಿದ್ದಾಗಲೇ ವಿರಕ್ತನಾಗಿ ಅರಣ್ಯಕ್ಕೆ ಹೋದನು. ಆಗ ಶಂತನು ರಾಜನಾದನು. ಈ ಶಂತನುವಿನ ಮಹಿಮೆ ಹೇಗಿತ್ತು ಎಂಬುದರ ಬಗ್ಗೆ ಒಂದು ಶ್ಲೋಕವಿದೆ.

**ಯಂ ಯಂ ಕರಾಭ್ಯಾಂ ಸ್ಪೃಶತಿ ಜೀರ್ಣಂ ಯೌವನಮೇತಿ ಸಃ**

**ಶಾಂತಿಂ ಚಾಪ್ನೋತಿ ಯೇನಾಗ್ರ್ಯಾಂ ಕರ್ಮಣಾ ಶಂತನು**

(ವಿ.ಪು. 2ನೇಸಂ ಲಿ.ಅ.20 ಶ್ಲೋಕ13)

ಶಂತನು ಮಹಾರಾಜನು ಯಾವ ಯಾವ ವೃದ್ಧರನ್ನು ಕೈಗಳಿಂದ ಮುಟ್ಟುವನೋ ಅವರಿಗೆ ಯೌವನಪ್ರಾಪ್ತವಾಗುತ್ತದೆ. ಆತನ ಸ್ಪರ್ಶದಿಂದ ಮನುಷ್ಯನು ಜೀವನದಲ್ಲಿ ಸಮೃದ್ಧವಾದ ಶಾಂತಿಯನ್ನು ಪಡೆಯುತ್ತಾನೆ. ಹೀಗೆ ಮಾಡುವುದರಿಂದ ಅವನು ಶಂತನು ಎಂದು ಪ್ರಸಿದ್ಧನಾಗಿರುವನು. ಇಂತಹ ಶಂತನುವಿನ ರಾಜ್ಯದಲ್ಲಿ ಒಮ್ಮೆ ಹನ್ನೆರಡು ವರ್ಷಗಳವರೆಗೆ ಮಳೆಗರೆಯಲಿಲ್ಲ. ಇದಕ್ಕೆ ಕಾರಣವೇನೆಂಬುದನ್ನು ಶಂತನುವು ಬ್ರಾಹ್ಮಣರಲ್ಲಿ ಕೇಳಿದನು "ರಾಜ ನಿನ್ನ ಅಣ್ಣನಾದ ದೇವಾಪಿಗೆ ಸೇರ ಬೇಕಾದದ್ದು ಈ ರಾಜ್ಯ. ಆದರೆ ಇದನ್ನು ನೀನು ಆಳುತ್ತಿದ್ದೀಯಾ ಹೀಗಾಗಿ ನೀನು ಪರಿವೇತೃವಾದೆ. ಹಾಗೆಂದರೆ ಅಣ್ಣನು ಮದುವೆಯಾಗದಿರುವಾಗ ಮದುವೆ ಮಾಡಿಕೊಂಡ ತಮ್ಮನು ಪರಿವೇತ್ರ ಎನಿಸಿಕೊಳ್ಳುವನು. ಅದಕ್ಕೆ ಶಂತನುವು ಈಗ ನಾನೇನು ಮಾಡಬೇಕು ? ಎಂದು ಕೇಳಿದನು. ಅದಕ್ಕೆ ಬ್ರಾಹ್ಮಣರು ಈ ರಾಜ್ಯವನ್ನು ನಿನ್ನ ಅಣ್ಣನಿಗೆ ಕೊಟ್ಟುಬಿಡು ಎಂದರು. ಈ ಸಂದರ್ಭದಲ್ಲಿ ದೇವಾಪಿಯು ಅರಣ್ಯದಲ್ಲಿದ್ದನು. ಅವನೊಡನೆ ವೇದ ವಾದ ವಿರೋಧಿಗಳಾಗಿ ಮಾತನಾಡಬಲ್ಲ ಕೆಲವು ತಪಸ್ವಿಗಳನ್ನು ಕಳುಹಿಸಿಕೊಟ್ಟನು. ರಾಜಪುತ್ರನಾದ ದೇವಾಪಿಯಾದರೋ ಅತ್ಯಂತ ಸರಳ ಸ್ವಭಾವದವನು. ಆ ತಪಸ್ವಿಗಳು ಅವನ ಬುದ್ಧಿಯನ್ನು ತಿರುಗಿಸಿ ವೇದಸಿದ್ಧಾಂತಕ್ಕೆ ವಿರುದ್ಧವಾದ

ಪ್ರವೃತ್ತಿಯನ್ನುಂಟುಮಾಡಿದರು. ಶಂತನುವೋ ಆ ಬ್ರಾಹ್ಮಣರ ನುಡಿಗಳನ್ನು ಕೇಳಿ ಶೋಕಾಕುಲನಾಗಿ ಗೋಳಾಡುತ್ತಿದ್ದನು. ಅವನು ಆ ಬ್ರಾಹ್ಮಣರನ್ನೇ ಮುಂದು ಮಾಡಿಕೊಂಡು ಅಣ್ಣನಿಗೆ ರಾಜ್ಯವನ್ನು ಕೊಡುವುದಕ್ಕಾಗಿ ಅರಣ್ಯಕ್ಕೆ ಹೋದನು. ಆ ಬ್ರಾಹ್ಮಣರು ದೇವಾಪಿಯ ಆಶ್ರಮಕ್ಕೆ ಹೋಗಿ ದೇವಾಪಿ ಯನ್ನು ಕಂಡು ಅಣ್ಣನಾದವನೇ ರಾಜ್ಯಪಾಲನೆ ಮಾಡಬೇಕು. ಅವನು ವೇದಸಿದ್ಧಾಂತಕ್ಕೆ ಅನುಗುಣವಾಗಿ ಮಾತನಾಡಿದ. ಆಗ ದೇವಾಪಿ ವೇದ ವಾದಕ್ಕೆ ವಿರುದ್ಧವಾದ ಹಲವಾರು  ಮಾತುಗಳನ್ನು ಆಡಿದನು. ಆಗ ಬ್ರಾಹ್ಮಣರು ಶಂತನುವನ್ನು ಕುರಿತು 'ರಾಜ ನಾವು ಇಲ್ಲಿಂದ ಹೋಗೋಣ. ಈಗ ಅನಾವೃಷ್ಟಿ ದೋಷವು ಶಾಂತವಾಯಿತು. ಈತನನ್ನು ಹೆಚ್ಚಾಗಿ ನಿರ್ಬಂಧಿಸುವುದು ಬೇಡ' ಎಂದು ಹೇಳಿದರು. ಅನಾದಿಕಾಲದಿಂದಲೂ ವೇದವಾಕ್‌ಗಳಿಗೆ ಮಾನ್ಯತೆ ಇದೆ. ನಿನ್ನ ಅಣ್ಣ ಅದನ್ನು ಅನುಮತಿಸುತ್ತಿದ್ದಾನೆ. ವೇದವಾದ ವಿರೋಧವಾದ ಮಾತನ್ನಾಡಿ ದೇವಾಪಿಯು ಪಾತಿತ್ಯದೋಷದಿಂದ ಲಿಪ್ತನಾದನು.  ಆದ್ದರಿಂದ ಹಿರಿಯಣ್ಣನಿದ್ದರೂ ಶಂತನುವಿನ ರಾಜ್ಯದಲ್ಲಿ ಭಗವಾನ್ ಪರ್ಜನ್ಯನು ಮಳೆಸುರಿಸಿ ಸಸ್ಯಸಮೃದ್ಧಿ ಉಂಟಾದವು. ಹೀಗೆ ಮತ್ತೆ ಶಂತನುವೇ ರಾಜ್ಯಾಧಿಕಾರವನ್ನು ವಹಿಸಿದನು.

ಶಂತನುವಿನ ಸೋದರ ಬಾಹ್ಲೀಕನಿಂದ ಸೋಮದತ್ತನೆಂಬ ಪುತ್ರ ಜನಿಸಿದನು. ಅವನಿಗೆ ಭೂರಿ, ಭೂರಿಶ್ರವಸ್ಸು, ಶಲ್ಯ ಎಂಬ ಮೂರು ಮಕ್ಕಳಾದರು. ಶಂತನುವಿಗೆ ದೇವನದಿಯಾದ  ಗಂಗೆಯಲ್ಲಿ ಅತ್ಯಂತ ಕೀರ್ತಿಶಾಲಿಯಾದ ಸಕಲ ಶಾಸ್ತ್ರಪಾರಂಗತನಾದ ಭೀಷ್ಮನು ಪುತ್ರನಾಗಿ ಜನಿಸಿದನು. ಇವನು ಗಾಂಗೇಯನೆಂದೇ ಪ್ರಸಿದ್ಧನಾದನು. ಅಷ್ಟೇ ಅಲ್ಲದೆ ಶಂತನು ಸತ್ಯವತಿಯಲ್ಲಿ ಚಿತ್ರಾಂಗದ, ವಿಚಿತ್ರವೀರ್ಯ ಎಂಬ ಇಬ್ಬರು ಮಕ್ಕಳನ್ನು ಪಡೆದನು. ಅವರಲ್ಲಿ ಚಿತ್ರಾಂಗದನು ಚಿಕ್ಕವನಿರುವಾಗಲೇ ಚಿತ್ರಾಂಗದ ಎಂದೇ ಹೆಸರಿದ್ದ ಗಂಧರ್ವನಿಂದ ಯುದ್ಧದಲ್ಲಿ ಹತನಾದನು. ವಿಚಿತ್ರವೀರ್ಯನು ಕಾಶೀರಾಜನ ಪುತ್ರಿಯರಾದ ಅಂಬಿಕಾ, ಅಂಬಾಲಿಕಾ ಎಂಬ ಇಬ್ಬರನ್ನು ಮದುವೆಯಾದನು. ಅವರೊಡನೆ ಅತಿಯಾದ ಭೋಗದಲ್ಲಿವ್ಯಗ್ರನಾದ ಪ್ರಯುಕ್ತ ಕ್ಷಯರೋಗಕ್ಕೆ ತುತ್ತಾಗಿ ವಿಚಿತ್ರವೀರ್ಯನು ಸತ್ತು ಹೋದನು. ಆ ನಂತರ ಸತ್ಯವತಿಯ ಆಜ್ಞೆಯಂತೆ ಮೈತ್ರೇಯನ ಮಗನಾದ ಕೃಷ್ಣದ್ವೈಪಾಯನ

ತಾಯಿಯ ಮಾತನ್ನು ಉಲ್ಲಂಘಿಸಬಾರದೆಂದು ತಿಳಿದು ವಿಚಿತ್ರವೀರ್ಯನ ಪತ್ನಿಯರಲ್ಲಿ ಧೃತರಾಷ್ಟ್ರ, ಪಾಂಡು ಎಂಬುವರನ್ನು ನಂತರ ಅವರು ಕಳುಹಿಸಿದ್ದ ದಾಸಿಯಲ್ಲಿ ವಿಧುರನನ್ನು ಉತ್ಪಾದಿಸಿದನು. ಧೃತರಾಷ್ಟ್ರನು ಗಾಂಧಾರಿಯಲ್ಲಿ ದುರ್ಯೋಧನ, ದುಃಶ್ಯಾಸನ ಮುಂತಾದ ನೂರು ಮಂದಿ ಮಕ್ಕಳನ್ನು ಪಡೆದನು. ಪಾಂಡುರಾಜನು ವನದಲ್ಲಿ ಬೇಟೆಯಾಡುವಾಗ ಋಷಿಶಾಪಕ್ಕೆ ಒಳಗಾಗಿ ಸಂತಾನೋತ್ಪತ್ತಿಯಲ್ಲಿ ಅಸಮರ್ಥನಾದನು. ಅನಂತರ ಆತನ ಪತ್ನಿಯಾದ ಕುಂತಿಯಲ್ಲಿ ಯಮಧರ್ಮ, ವಾಯು, ಇಂದ್ರರಿಂದ ಕ್ರಮವಾಗಿ ಯುಧಿಷ್ಠಿರ, ಭೀಮಸೇನ, ಅರ್ಜುನನು ಜನಿಸಿದರು. ಅಶ್ವಿನೀ ದೇವತೆಗಳಿಂದ ಮಾದ್ರಿಯಲ್ಲಿ ನಕುಲ, ಸಹದೇವರು ಜನಿಸಿದರು. ಹೀಗೆ ಪಾಂಡುರಾಜನ ಮಕ್ಕಳು ಐವರು. ಆ ಐವರಿಗೂ ದ್ರೌಪದಿಯಲ್ಲಿ ಐವರು ಮಕ್ಕಳಾದರು. ಯುಧಿಷ್ಠಿರನಿಂದ ಪ್ರತಿಹಿಂದ್ಯನೂ, ಭೀಮಸೇನನಿಂದ ಶ್ರುತಸೇನುವೂ, ಅರ್ಜುನನಿಂದ ಶ್ರುತಕೀರ್ತಿಯೂ, ನಕುಲನಿಂದ ಶ್ರುತಾನೀಕನೂ, ಸಹದೇವನಿಂದ ಶ್ರುತಕರ್ಮರೂ ಜನಿಸಿದರು. ಇವರಲ್ಲದೆ ಪಾಂಡವರಿಗೆ ಇನ್ನೂ ಕೆಲವು ಆತ್ಮಜರಿದ್ದರು. ಯುಧಿಷ್ಠಿರನಿಂದ ಯೌಧೇಯಿಯು ದೇವಕನೆಂಬ ಪುತ್ರನನ್ನು ಪಡೆದಳು. ಹಿಡಂಬೆಯು ಭೀಮಸೇನನಿಂದ ಘಟೋತ್ಕಚನನ್ನು ಪಡೆದಳು. ಭೀಮಸೇನಂದಲೇ ಕಾಶಿಯು ಸರ್ವಗನೆಂಬ ಮಗನನ್ನು ಪಡೆದಳು. ಸಹದೇವನಿಂದ ವಿಜಯಾ ಎಂಬುವಳು ಸುಹೋತ್ರನೆಂಬ ಮಗನನ್ನು ಪಡೆದಳು. ನಕುಲನು ರೇಣುಮತಿಯಲ್ಲಿ ನಿರಮಿತ್ರನೆಂಬ ಪುತ್ರನನ್ನು ಪಡೆದನು. ಅರ್ಜುನನಿಗೆ ಪುತ್ರಿಕಾಧರ್ಮದಿಂದ ಬಬ್ರುವಾಹನ ಎಂಬ ಪುತ್ರನನ್ನು ಪಡೆದನು. (ಇಲ್ಲಿ ಪ್ರಮುಖವಾದ ವಿಷಯ ಪುತ್ರಿಕಾಧರ್ಮ ಎಂದರೆ ಕನ್ಯಾಪಿತೃವಿಗೆ ಗಂಡು ಸಂತತಿ ಇಲ್ಲದಾಗ ಈ ಕನ್ಯೆಯಲ್ಲಿ ಹುಟ್ಟುವ ಪುತ್ರನು 'ನನ್ನ ಪುತ್ರನಂತೆ ಇರತಕ್ಕದ್ದು' ಎಂಬ ಕರಾರಿನಿಂದ ವಿವಾಹ ಮಾಡಿಕೊಡುವುದು

**'ಅಭ್ರಾತಕಾಂ ಪ್ರದಾಸ್ಯಾಮಿ ತುಭ್ಯಂ ಕನ್ಯಾಮಲಂಕೃತಾಂ ।**
**ಅಸ್ಯಾಂ ಯೋಜಾಯತೇ ಪುತ್ರ ಸಮೇ ಪುತ್ರೋ ಭವೇದಿತಿ'** ॥

ಎಂದಿದೆ. ಬಾಲಕನಾಗಿದ್ದರೂ ಯಾವಾತನು ಅತ್ಯಂತ ಬಲಾಢ್ಯನೂ,

ಪರಾಕ್ರಮಿಯೂ ಆಗಿದ್ದ, ವೈರಿಗಳ ಸಮಸ್ತ ಅತಿರಥರನ್ನು ಸದೆ ಬಡಿದನೋ ಆ ಅಭಿಮನ್ಯುವು ಅರ್ಜುನನಿಗೆ ಸುಭದ್ರೆಯಲ್ಲಿ ಜನಿಸಿದನು. ಮೈತ್ರೇಯ ಅಭಿಮನ್ಯುವಿಗೆ ಉತ್ತರೆಯಲ್ಲಿ ಪರೀಕ್ಷಿತ್ ಮಹಾರಾಜನು ಹುಟ್ಟಿದನು. ಕುರುವಂಶವೇ ನಾಶವಾಗುತ್ತಿದ್ದ ಸಂದರ್ಭದಲ್ಲಿ ಅಶ್ವತ್ಥಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ ಈತನು ಗರ್ಭದಲ್ಲಿರುವಾಗಲೇ ದಗ್ಧನಾಗಿದ್ದನು. ಆ ಸಮಯದಲ್ಲಿ ಸಕಲಸುರಾಸುರ ವಂದಿತನಾದ ಭಗವಾನ್ ಶ್ರೀಕೃಷ್ಣನ ಮಹಿಮೆಯಿಂದ ಆತನ ಇಚ್ಛಾನುಸಾರವಾಗಿ ಪರೀಕ್ಷಿತನು ಮತ್ತೆ ಜೀವಿತವನ್ನು ಪಡೆದನು. ಪರೀಕ್ಷಿತನು ಈಗ ರಾಜ್ಯವಾಳುತ್ತಿದ್ದಾನೆ. ಹೀಗೆ ಈ ವಂಶಾವಳಿಯೇ ಅತ್ಯಂತ ರೋಚಕವಾದುದ್ದಾಗಿದೆ.

## ಭವಿಷ್ಯತ್ತಿನಲ್ಲಿ ಆಗುವ ಕುರುವಂಶದ ರಾಜರು

ಪರಾಶರ ಮುನಿಗಳು ಮೈತ್ರೇಯನಿಗೆ ಹೀಗೆ ಹೇಳಿದರು. ಈಗ ಪ್ರಕೃತದಲ್ಲಿ ಪರೀಕ್ಷಿತ್ ಮಹಾರಾಜನು ರಾಜ್ಯವನ್ನು ಆಳುತ್ತಿದ್ದಾನೆ. ಈತನಿಗೆ ಜನಮೇಜಯ ಶ್ರುತಸೇನ, ಉಗ್ರಸೇನ, ಭೀಮಸೇನ ಎಂಬ ನಾಲ್ವರು ಪುತ್ರರು ಜನಿಸುವರು. ಜನ ಮೇಜಯನಿಗೆ ಶತಾನೀಕ ಎಂಬುವನು ಪುತ್ರನಾಗುವನು. ಅವನು ಯಾಜ್ಞವಲ್ಕ್ಯರಿಂದ ವೇದಾಧ್ಯಯನವನ್ನು ಮಾಡಿ ಕೃಪಾಚಾರ್ಯರಿಂದ ಅಸ್ತ್ರವಿದ್ಯೆಯನ್ನು ಕಲಿಯುವನು. ಆಗ ಶೌನಕರ ಉಪದೇಶದಿಂದ ಆತ್ಮಜ್ಞಾನದಲ್ಲಿ ಪ್ರವೀಣನಾಗಿ ಪರಮನಿರ್ವಾಣವನ್ನೈದುವನು. ಶತಾನೀಕ ಅಶ್ವಮೇಧ ದತ್ತ ಎಂಬ ಪುತ್ರನು ಹುಟ್ಟಿರುವನು. ಅವನ ಮಗ ಅಧಿಸೀಮ ಕೃಷ್ಣ, ಆತನ ಮಗ ನಿಚಕ್ನು. ಗಂಗಾನದಿಯಿಂದ ಹಸ್ತಿನಾಪುರವು ತೇಲಿಹೋಗುತ್ತದೆ. ಆಗ ನಿಚಕ್ನುವು ಕೌಶಾಂಬಿಯಲ್ಲಿ ನೆಲೆಸುವನು. ನಿಚಕ್ನುವಿಗೆ ಉಷ್ಣನೆಂಬ ಮಗ ಜನಿಸಿರುವನು. ಉಷ್ಣನಿಗೆ ಚಿತ್ರರಥನೂ, ಅವನಿಗೆ ಶುಚಿರಥನೂ ಪುತ್ರರಾಗುವರು. ಶುಚಿರಥನಿಂದ ವೃಷ್ಣಿಮಂತ, ಅವನಿಂದ ಸುಷೇಣನೂ, ಅವನಿಂದ ಸುನೀಥಿ ಎಂಬುವನೂ ಜನಿಸಿವರು. ಸುನೀತನಿಗೆ ನೃಪಚಕ್ಷು, ಅವನಿಗೆ ಸುಖಾವಲ, ಅವನಿಗೆ ಪಾರಿಪೂವ, ಅವನಿಗೆ ಸುನಯ, ಸುನಯನಿಗೆ ಮೇಧಾವಿ ಎಂಬುವರು ಪುತ್ರರಾಗಿ ಜನಿಸಿದರು. ಮೇಧಾವಿಯ ಮಗ ರಿಪುಂಜಯ, ಅವನ ಮಗ ಮೃದು, ಆತನಿಂದ ತಿಗ್ಮನೂ, ಅವನಿಂದ

ಬೃಹದ್ರಥನೂ, ಬೃಹದ್ರಥನಿಂಧ ವಸುದಾನ ಎಂಬುವನು ಜನಿಸುವರು. ವಸುದಾನನಿಂದ ಇನ್ನೊಬ್ಬ ಅಹೀನರ, ಅವನಿಂದ ದಂಡಪಾಣಿ. ಆತನಿಂದ ನಿರಮಿತ್ರ. ಎಂಬುವರು ಜನಿಸುವರು. ನಿರಮಿತ್ರನ ಮಗ ಕ್ಷೇಮಕ. ಈ ವಿಷಯವಾಗಿ ಒಂದು ಶ್ಲೋಕವಿದೆ.

**ಬ್ರಹ್ಮಕ್ಷತ್ರಸ್ಯ ಯೋ ಯೋನಿರ್ವಂಶೋ ರಾಜರ್ಷಿಸತ್ಕೃತಃ**

**ಕ್ಷೇಮಕಂ ಪ್ರಾಪ್ಯ ರಾಜಾನಂ ಸಂಸ್ಥಾನಂ ಪ್ರಾಪ್ಸ್ಯತೇಕಲೌ**

(ವಿ.ಪು.2ನೇಸಂ ಚ.ಅಂ ಲಿ.21–18ನೇಶ್ಲೋಕ)

ಯಾವ ವಂಶವೂ ಬ್ರಾಹ್ಮಣರ ಮತ್ತು ಕ್ಷತ್ರಿಯರ ಉತ್ಪತ್ತಿಗೆ ಕಾರಣವಾಗಿತ್ತೊ ಮತ್ತು ರಾಜರ್ಷಿಗಳಿಂದ ಗೌರವವನ್ನು ಪಡೆದಿತ್ತೊ ಆ ಕುರುವಂಶವು ಕಲಿಯುಗದಲ್ಲಿ  ಕ್ಷೇಮಕ ರಾಜನವರೆಗೆ ನಡೆದು ಸಮಾಪ್ತಿಯನ್ನೈದುವುದು ಎಂದು ಹೇಳಿದರು. ಪರಾಶರರ ತ್ರಿಕಾಲ ಜ್ಞಾನ ಅದ್ಭುತವಾದುದು. ಪರಾಶರ ಮಹರ್ಷಿಗಳಿಗೆ ನಮೋ ನಮಃ

## ಭವಿಷ್ಯದಲ್ಲಿ ಆಗುವ ಇಕ್ವಾಕು ವಂಶದ ರಾಜರ ವರ್ಣನೆ

ವಿಶ್ವಭವನ ಮಗನಾದ ಬೃಹದ್ಬಲನನ್ನು ಮಹಾಭಾರತ ಯುದ್ಧದಲ್ಲಿ ಅಭಿಮನ್ಯುವು ಸಂಹರಿಸಿದನೆಂದು ಈಗಾಗಲೇ ಹಿಂದಿನ (4ನೇ) ಅಧ್ಯಾಯದಲ್ಲಿ ನೋಡಿದ್ದೇವೆ. ಈ ಬೃಹದ್ಬಲನ ಮಗ ಬೃಹತ್ಕ್ಷಣ, ಅವನಿಂದ ಉರುಕ್ಷಯ, ಅವನಿಂದ ವತ್ಸವ್ಯೂಹ ಅವನಿಂದ ಪುತಿವ್ಯೋಮ. ಆತನಿಂದ ದಿವಾಕರ ಎಂಬುವರು ಜನಿಸುವರು. ದಿವಾಕರನಿಂದ ಸಹದೇವನೂ, ಸಹದೇವನಿಂದ ಬೃಹದಶ್ವ ಜನಿಸುವರು. ಬೃಹದಶ್ವನ ಮಗ ಭಾನುರಥ, ಅವನ ಮಗ ಪುತೀಶಾಶ್ವ ಆತನ ಮಗಳು ಸುಪ್ರತೀಕ, ಆತನ ಮಗ, ಮರುದೇವನಿಂದ ಸುನಕ್ಷತ್ರಾನು, ಆತನಿಂದ ಕಿನ್ನರ, ಅವನಿಂದ ಅಂತರಿಕ್ಷ, ಅವನಿಂದ ಸುಪರ್ಣ, ಅವನಿಂದ ಅಮಿತ್ರಜಿತ್, ಅವನಿಂದ ಬೃಹದ್ರಾಜ ಎಂಬಾತನೂ, ಅವನಿಂದ ಧರ್ಮಿಯೂ ಧರ್ಮಿಯಿಂದ ಕೃತಂಜಯನು ಜನಿಸುವರು. ಕೃತಂಜಯನ ಮಗ ರಣಂಜಯ, ರಣಂಜಯನಿಂದ ಸಂಜಯ, ಅವನಿಂದ ಶಾಕ್ಯ ಶಾಕ್ಯನಿಂದ ಶುದ್ಧೋದನ, ಅವನಿಂದ ರಾಹುಲ,

ಆತನಿಂದ ಪ್ರಸೇನಜಿತ್ ಎಂಬುವರು ಹುಟ್ಟಿವರು. (ಇದರಲ್ಲಿ ಪ್ರಮುಖವಾದ ವಿಷಯವೇನೆಂದರೆ ಶುದ್ಧೋದನನ ಮಗ ಸಿದ್ದಾರ್ಥ (ಬುದ್ಧ) ನೆಂದೂ, ಅವನ ಮಗ ರಾಹುಲನೆಂದೂ ಇತಿಹಾಸದಲ್ಲಿದೆ. ಹೀಗಾಗಿ ಬೌದ್ಧರೂ ಸಹ ಸಿದ್ದಾರ್ಥನನ್ನು ಇಕ್ಷ್ವಾಕುವಂಶೀಯನೆಂದು ಹೇಳುತ್ತಾರೆ. ಪ್ರಸೇನಜಿತ್ತಿನಿಂದ ಕ್ಷುದ್ರಕ, ಅವನಿಂದ ಕುಂಡಕ, ಆತನಿಂದ ಸುರಥ ಎಂಬುವರು ಜನಿಸುವರು. ಸುರಥನ ಮಗ ಸುಮಿತ್ರ ಇವರು ಬೃಹದ್ವಲನ ಕುಲದಲ್ಲಿ ಜನಿಸಿದ ಇಕ್ಷ್ವಾಕುವಂಶೀಯರು. ಈ ಇಷ್ವಾಕುವಂಶವು ಸುಮಿತ್ರನವರೆಗೆ ನಡೆಯುವುದು ಎಂದು ಭವಿಷ್ಯತ್ತನ್ನೇ ಪರಾಶರರು ನುಡಿದಿದ್ದಾರೆ.

**ಇಕ್ಷ್ವಾಕೂಣಾ ಮಯಂ ವಂಶಸ್ಸುಮಿತ್ರಾನ್ತೋಭವಿಷ್ಯತಿ**
**ಯತಸ್ತಂ ಪ್ರಾಪ್ಯ ರಾಜಾನಂ ಸಂಸ್ಥಾ ಪ್ರಾಪ್ಸ್ಯವೈಕಲೌ**

**ಶ್ರೀಕೃಷ್ಣಾರ್ಪಣಮಸ್ತು**

## ಮಗದ ವಂಶದ ಭವಿಷ್ಯತ್ತಿನ ರಾಜರು

ಎಲೈ ಮೈತ್ರೇಯ, ಇನ್ನು ಬೃಹದ್ರಥನ ವಂಶೀಯರಾದ ಮಗಧರಾಜರ ಅನುಕ್ರಮವನ್ನು ಹೇಳುವೆನು ಕೇಳು ಎಂದರು. ಈ ವಂಶದಲ್ಲಿ ಜರಾಸಂಧ ಅತ್ಯಂತ ಪರಾಕ್ರಮಶಾಲಿಯಾದ ದೊರೆ ಎಂಬುದನ್ನು ಈಗಾಗಲೇ ತಿಳಿದಿದ್ದೇವೆ. ಜರಾಸಂಧನ ಮಗ ಸಹದೇವ, ಸಹದೇವನ ಮಗ ಸೋಮಪ, ಅವನ ಮಗ ಶ್ರೂತಶ್ರವ, ಆತನ ಮಗ ಅಯತಾಯು, ಅವನ ಮಗ ನಿರಮಿತ್ರ, ಅವನ ಮಗ ಸುನೇತ್ರ, ಅವನಿಗೆ ಬೃಹತ್ಕರ್ಮ ಅವನ ಮಗ ಸೇನಜಿತ್, ಆತನಿಂದ ಶ್ರುಂಜಯ, ಆತನಿಂದ ವಿಪ್ರ ಎಂಬುವನು ಹುಟ್ಟುವರು. ವಿಪ್ರನಿಗೆ ಶುಚಿ, ಅವನ ಮಗ ಕ್ಷೇಮ್ಯ, ಅವನ ಮಗ ಸುವ್ರತ, ಸುವ್ರತನಿಂದ ಧರ್ಮನೂ, ಅವನಿಂದ ಸುಶ್ರವ ಎಂಬುವನು ಜನಿಸುವರು. ಸುಶ್ರವನ ಪುತ್ರ ದೃಢಸೇನ. ಅವನಿಂದ ಸಖಲ. ಅವನಿಂದ ಸುನೀತನು

ಜನಿಸುವನು. ಸುನೀತನ ಮಗ ಸತ್ಯಜಿತ್, ಅವನ ಮಗ ವಿಶ್ವಜಿತ್, ವಿಶ್ವಜಿತ್ತಿಗೆ ರಿಪುಂಜಯನೆಂಬುವನು ಹುಟ್ಟಿದನು. ಬೃಹ, ದ್ರಥನ ವಂಶದ ಈ ರಾಜರು ಒಂದು ಸಾವಿರ ವರ್ಷದವರೆಗೆ ರಾಜ್ಯವಾಳುವರು. ಪರಾಶರರು ಮುಂದಿನ ಭವಿಷ್ಯತ್ತಿನ ರಾಜನ ಸಂತತಿಯನ್ನು ವಿವರಿಸುತ್ತಾ ಮುಂದೆ ಹೇಳಿದರು. ಮೈತ್ರೇಯ ಬೃಹದ್ರಥ ವಂಶದಲ್ಲಿ ಅಂತಿಮ ರಾಜನಾಗಿ ರಿಪುಂಜಯ ಎಂಬುವನು ಹುಟ್ಟುವನು. ಅವನಿಗೆ ಸುನಿಕನೆಂಬ ಮಂತ್ರಿ ಇರುವನು. ಅವನು ತನ್ನ ಪ್ರಭುವನ್ನು ವಧಿಸಿ ತನ್ನ ಮಗನಾದ ಪ್ರದ್ಯೋತನೆಂಬುವನಿಗೆ ಪಟ್ಟಕಟ್ಟವನು ಅವನಿಗೆ ಬಲಾಕನೆಂಬ ಪುತ್ರನು ಹುಟ್ಟುವನು. ಅವನಿಂದ ವಿಶಾಖ ಯೂಪ, ಆತನ ಮಗ ಜನಕ, ಜನಕ ಮಗ ನಂದಿವರ್ಧನ, ಅವನ ಮಗ ನಂದಿ ಈ ಐದು ಜನ ಪ್ರದ್ಯೋತ ವಂಶಿಯರು. ಇವರು ನೂರ ಮುವತ್ತೆಂಟು ವರ್ಷಗಳ ಕಾಲ ಪೃಥ್ವಿಯನ್ನು ಪಾಲಿಸುವರು. ನಂತರ ಶಿಶುನಾಗ ಎಂಬುವನು ರಾಜನಾಗುವನು. ಅವನಿಗೆ ಕಾಕವರ್ಣ ಎಂಬ ಮಗನು ಹುಟ್ಟುವನು. ಆತನ ಮಗ ಕ್ಷೇಮ ಧರ್ಮ. ಅವನ ಮಗ ಕ್ಷತೌಜ, ಅವನ ಮಗ ವಿಧಿಸಾರ, ವಿಧಿಸಾರನ ಪುತ್ರ ಅಜಾತಶತ್ರು ಅವನಿಂದ ಅರ್ಭಕ, ಅವನಿಂದ ಉದಯನ, ಅವನಿಂದ ನಂದಿವರ್ಧನನು ಹುಟ್ಟುವನು. ನಂದಿವರ್ಧನ ಮಗ ಮಹಾನಂದಿ. ಈ ರೀತಿಯಲ್ಲಿ ಶಿಶುನಾಭ ವಂಶೀಯರು ಮುನ್ನೂರ ಅರವತ್ತೆಂಟು ವರ್ಷಗಳವರೆಗೆ ರಾಜ್ಯವನ್ನಾಳುವರು. ಮಹಾನಂದಿಗೆ ಶೂದ್ರ ಸ್ತ್ರೀ ಗರ್ಭದಲ್ಲಿ ಬಲಾಢ್ಯನಾದ ಮಹಾಪದ್ಮನೆಂಬ ನಂದನು ಪುತ್ರನಾಗುವನು. ಅವನು ಕಡುಲೋಭಿ. ಅವನು ಪರಶುರಾಮನಂತೆ ಸಕಲ ಕ್ಷತ್ರಿಯರ ನಾಶಕ್ಕೆ ಕಾರಣನಾಗುವನು. ಅಲ್ಲಿಂದ ಮುಂದೆ ಶೂದ್ರರು ಭೂಪಾಲರಾಗುವರು. ಮಹಾಪದ್ಮನು ಏಕಚಕ್ರಾಧಿಪತಿಯಾಗಿ ಯಾರೂ ತನ್ನ ಆಜ್ಞೆಯನ್ನು ಮೀರದಂತೆ ನೋಡಿಕೊಂಡು ಭೂಮಿಯನ್ನಾಳುವನು. ಅವನಿಗೆ ಸುಮಾಲಿ ಮೊದಲಾದ ಎಂಟು ಮಕ್ಕಳು ಇರುವರು. ಅವರು ಸುಮಾರು ನೂರುವರ್ಷಗಳ ಕಾಲ ರಾಜ್ಯವನ್ನು ಆಳುವರು. ಈ ಒಂಬತ್ತು ಮಂದಿ ನಂದರನ್ನು ಕೌಟಿಲ್ಯ (ಚಾಣಕ್ಯ) ಎಂಬ ಬ್ರಾಹ್ಮಣನು ಧ್ವಂಸ ಮಾಡುವನು. ಈ ನಂದರ ಅವಸಾನವಾದ ಮೇಲೆ ಮೌರ್ಯರು ರಾಜ್ಯಭಾರವನ್ನು ನಡೆಸುವರು. ಕೌಟಿಲ್ಯನು ನಂದನ

ಹೆಂಡತಿ ಮುರಾ ಎಂಬುವಳಲ್ಲಿ ಹುಟ್ಟಿದ ಚಂದ್ರಗುಪ್ತನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡುವನು. ಚಂದ್ರಗುಪ್ತನ ರಾಜ್ಯಭಾರ ಕಿ.ಪೂ. 310ರಿಂದ ಇದ್ದಿತ್ತು ಎಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಈತನು ಕಿ.ಪೂ. 305ರಲ್ಲಿ ಗ್ರೀಕ್ ರಾಯಭಾರಿ ಸೆಲ್ಯುಕಸ್‌ನೊಂದಿಗೆ ಒಂದು ರಾಜಕೀಯ ಒಪ್ಪಂದವನ್ನು ಮಾಡಿಕೊಂಡನು. ಚಂದ್ರಗುಪ್ತನಿಗೆ ಬಿಂದುಸಾರನೆಂಬ ಮಗನು ಜನಿಸುವನು. ಬಿಂದುಸಾರನ ಮಗನೇ ಅಶೋಕವರ್ಧನ, ಅವನಿಂದ ಸುಯಶನೂ, ಅವನಿಂದ ದಶರಥನು ಹುಟ್ಟುವನು. ದಶರಥನೆಂಬುವನಿಗೆ ಸಂಯುತ, ಆತನ ಮಗ ಶಾಲಿಶೂಕ, ಅವನ ಮಗ ಸೋಮಶರ್ಮ, ಅವನ ಮಗ ಶತಧನ್ವನಿಗೆ ಬೃಹದ್ರಥ ಎಂಬುವನು ಹುಟ್ಟುವನು. ಹೀಗೆ ಮೌರ್ಯವಂಶದ ಹತ್ತು ಮಂದಿ ರಾಜರು ಒಂದು ನೂರ ಎಪ್ಪತ್ತುಮೂರು ವರ್ಷಗಳು ಆಳುವರು. ಅವರ ನಂತರ ಹತ್ತು ಮಂದಿ ಶುಂಗವಂಶಿಯರು ಭೂಮಿಯನ್ನಾಳುವರು. ಅವರಲ್ಲಿ ಮೊದಲನೆಯವನಾಗಿ ಪುಷ್ಯಮಿತ್ರ ಎಂಬ ಸೇನಾಧಿಪತಿಯು ತನ್ನ ರಾಜನಾದ ಬೃಹದ್ರಥನನ್ನು ವಧಿಸಿ ರಾಜ್ಯಭಾರ ನಡೆಸುವನು. ಪುಷ್ಯಮಿತ್ರನ ಮಗ ಅಗ್ನಿಮಿತ್ರ, ಅವನ ಮಗ ಸುಜ್ಯೇಷ್ಠ, ಆತನ ಮಗ ವಸುಮಿತ್ರ, ಅವನ ಮಗ ಉದಂಕ ವಜ್ರಮಿತ್ರ, ಅವನಿಂದ ಭಾಗವತ ಎಂಬುವನೂ ಜನಿಸುವನು. ಭಾಗವತನ ಮಗ ದೇವಭೂತಿ ಹೀಗೆ ಶುಂಗ ವಂಶೀಯರು 112 ವರ್ಷಗಳ ಕಾಲ ರಾಜ್ಯ ಆಳುವರು.

ಇವರಾದ ನಂತರ ರಾಜ್ಯವು ಕಣ್ವ ರಾಜರ ವಶಕ್ಕೆ ಬರುವುದು. ಶುಂಗರಾಜನಾದ ದೇವಭೂತಿಯು ಕೆಟ್ಟಹವ್ಯಾಸಿಯಾಗಿರುವನು. ಹೀಗಾಗಿ ಅವನ ಅಮಾತ್ಯನಾದ (ಮಂತ್ರಿ) ಕಣ್ವವಂಶದ ವಸುದೇವ ಎಂಬುವನು ದೇವಭೂತಿಯನ್ನು ಸಂಹರಿಸಿ ತಾನೇ ರಾಜನಾಗುವನು. ವಸುದೇವನ ಮಗ ಭೂಮಿತ್ರ, ಅವನ ಮಗ ನಾರಾಯಣ, ಅವನ ಮಗ ಸುಶರ್ಮ ಈ ಕಣ್ವವಂಶದ ನಾಲ್ವರು ರಾಜರುಗಳು ನಲವತ್ತೈದು ವರ್ಷಗಳವರೆಗೆ ರಾಜ್ಯವನ್ನಾಳುವರು. ಕಣ್ವವಂಶದ ಶರ್ಮನಿಗೆ ಬಲಿಪುಚ್ಛಕನೆಂಬ ಆಂಧ್ರಜಾತಿಯವನು ಸೇವಕನಾಗಿರುವನು. ಅವನು ಸುಶರ್ಮನನ್ನು ಕೊಂದು ತಾನೇ ಭೂಮಿಯನ್ನಾಳುವನು. ನಂತರ ಅವನ ತಮ್ಮ ಕೃಷ್ಣ, ಅವನ ಮಗ ಶಾತಕರ್ಣಿ, ಅವನ ಮಗ ಪೂರ್ಣೋತ್ಸಂಗ, ಅವನ ಮಗ ಶಾತಕರ್ಣಿ,

ಅವನ ಮಗ ಲಂಭೋದರ, ಹೀಗೆ ಮೂವತ್ತು ಮಂದಿ ಆಂಧ್ರಭೃತ್ಯ ವಂಶೀಯರು 456 ವರ್ಷಗಳವರೆಗೆ ಈ ಭೂಮಿಯನ್ನು ಆಳುವರು.

## ನಾನಾ ವಂಶೀಯರ ಆಡಳಿತ ರಾಜ್ಯಗಳ ಅವನತಿ

ಅನಂತರ ನಾನಾ ವಂಶೀಯರು ರಾಜರಾಗಿ ಭೂಮಿಯನ್ನು ಆಳುವರು. ಅವರಲ್ಲಿ ಅಭೀರರು ಏಳು ಮಂದಿ ಗರ್ದಬಿಲರು ಹತ್ತುಮಂದಿ, ಶಕರು ಹದಿನಾರು ಮಂದಿ, ಆಮೇಲೆ ಎಂಟು ಯವನರು, ಹದಿನಾಲ್ಕು ತುರುಷ್ಕರೂ, ಹದಿಮೂರು ಮಂದಿ ಮುಂಡರು, ಹನ್ನೊಂದು ಮೌನರೂ ಕ್ರಮವಾಗಿ ರಾಜ್ಯಭಾರವನ್ನು ನಡೆಸುವರು, ಒಟ್ಟು ಒಂದು ಸಾವಿರದ ತೊಂಬತ್ತು (1090) ವರ್ಷಗಳ ಕಾಲ ಈ ನಾನಾ ವಂಶೀಯರು ಆಳ್ವಿಕೆ ನಡೆಯುವುದು. ಕಡೆಯಲ್ಲಿ ಈ ಹನ್ನೊಂದು ಮಂದಿ ಮೌನರೆಂಬ ರಾಜರು ಮುನ್ನೂರು ವರ್ಷ ರಾಜ್ಯಭಾರ ಮಾಡುವರು. ಅವರ ನಂತರ ಕೈಂಕಿಲಾ ನಗರದಲ್ಲಿ ಯವನರು ರಾಜರಾಗುವರು. ಈ ರಾಜ್ಯಭಾರದಲ್ಲಿ ಕ್ಷತ್ರಿಯರು ಮಾತ್ರವಲ್ಲದೆ ವ್ರಾತ್ಯ, ದ್ವಿಜ, ಆಭೀರ ಶೂದ್ರಾದಿ ಜಾತಿಯವರೂ ಆಳುವರು. ಈ ರೀತಿಯ ರಾಜರುಗಳು ಎಲ್ಲೆಡೆಯಲ್ಲಿಯೂ ಹರಡಿಕೊಂಡಿರುತ್ತಾರೆ. ಒಂದು ಆಶ್ಚರ್ಯದ ಸಂಗತಿ ಎಂದರೆ ಇದುವರೆಗೂ ಭವಿಷ್ಯದಲ್ಲಿ ಯಾವ ಯಾವ ರಾಜರು ಆಳುತ್ತಾರೆ ಎಂಬುದನ್ನು ತ್ರಿಕಾಲಜ್ಞಾನಿಗಳಾದ ಪರಾಶರರು ವಿವರಿಸುತ್ತಿದ್ದರು. ಅದರ ಬಗ್ಗೆ ನಾವೆಲ್ಲಾ ತಿಳಿದುಕೊಂಡೆವು. ಈಗ ಅವರ ಗುಣಗಳು ಲೋಪ ದೋಷಗಳನ್ನು ಸಹವಿವರಾಗಿ ಭವಿಷ್ಯನ ನುಡಿದಿದ್ದಾರೆ ಸಬೆಲ ರಾಷ್ಟ ನಮ್ಮ ಭಾರತವು ಏಕೆ ಬಲಹೀನವಾಯಿತು. ಎಂಬುದಕ್ಕೂ ಕಾರಣಗಳನ್ನು ತಿಳಿಸಿದ್ದಾರೆ. ಅವುಗಳ ಬಗ್ಗೆ ಈಗ ನೋಡೋಣ ವಿವಿಧ ಜಾತಿ ಪಂಗಡಗಳಿಗೆ ಸೇರಿದ ಈ ರಾಜರುಗಳಿಗೆ ಕೋಪ ಮಾತ್ರ ಅಧಿಕವಾಗಿರುತ್ತದೆ. ಇವರು ಸದಾ ಸುಳ್ಳು ಹೇಳುವುದರಲ್ಲಿಯೂ ಅಧರ್ಮಕಾರ್ಯದಲ್ಲಿಯೂ ಆಸಕ್ತರಾಗಿರವರು. ಸ್ತ್ರೀಯರನ್ನು ಬಾಲಕರನ್ನು ಗೋವುಗಳನ್ನು ಲಕ್ಷಿಸದೆ ಕೊಲ್ಲುವವರಾಗಿರುತ್ತಾರೆ. ಪರರ ಸ್ವತ್ತನ್ನು ಅಪಹರಿಸುವುದರದಲ್ಲಿ ಸದಾ ಆಸಕ್ತರಾಗಿರುತ್ತಾರೆ. ಈ ರಾಜರೂ ನಿಃಸತ್ವರೂ ತಮೋಗುಣದವಶೂ ಆಗಿರುತ್ತಾರೆ. ಬಹುಬೇಗನೆ ಬೆಳೆದು ಅಭಿವೃದ್ಧಿ ಹೊಂದಿ ಹಾಗೆಯೇ

ಅಡಗಿಹೋಗತಕ್ಕವರಾಗಿರುತ್ತಾರೆ. ಅಲ್ಪಾಯುಷಿಗಳು, ಮಹತ್ತರವಾದ ಆಸೆಯನ್ನಿಟ್ಟುಕೊಂಡವರೂ, ಅಲ್ಪಪುಣ್ಯರು ಕಡುಲೋಭಿಗಳು ಆಗಿರುತ್ತಾರೆ. ಅವರ ಜೊತೆಗೆ ಬೇರೆ ಬೇರೆ ಕಡೆಯಿಂದ ಬಂದು ಸೇರಿಕೊಂಡ ಜನರೂ ಸಹ ಅವರಂತೆಯೇ ದುಃಶೀಲರಾಗಿ ನಡೆದುಕೊಳ್ಳುತ್ತಾರೆ. ರಾಜಾಶ್ರಯದಿಂದ ದುರಹಂಕಾರಿಗಳಾಗಿ ಮ್ಲೇಚ್ಛಾಚಾರಗಳಿಂದ ಕೂಡಿರುವರು, ತಮ್ಮ ವಿಪರೀತವಾದ ನಡವಳಿಕೆಯಿಂದ ಪ್ರಜೆಗಳನ್ನು ಹುರಿದು ತಿನ್ನುವರು. ಆಗ ದಿನದಿನವೂ ಧರ್ಮಾರ್ಥಗಳು ಕ್ಷೀಣವಾಗತೊಡಗುತ್ತದೆ. ಇದರಿಂದಾಗಿ ಜಗತ್ತೇ ವಿನಾಶದತ್ತ ಸರಿಯುತ್ತದೆ. ಆ ಸಮಯದಲ್ಲಿ ಧನವೇ ಮಾನಧನ, ದೊಡ್ಡತನಕ್ಕೆ ಕಾರಣವಾಗುತ್ತದೆ. ಬಲವೊಂದೇ ಸಮಸ್ತಧರ್ಮವನ್ನು ನಿರ್ಣಯಿಸುವುದಕ್ಕೆ ಕಾರಣವಾಗುತ್ತದೆ. ಪರಸ್ಪರ ಅಭಿರುಚಿಯೊಂದೇ ಮದುವೆಯಾಗಿ ದಂಪತಿಗಳಾಗಲು ಯೋಗ್ಯಕಾರಣವಾಗುತ್ತದೆ. ಹೆಣ್ಣುತನವೊಂದೇ ಅವಳನ್ನು ಭೋಗಿಸುವುದಕ್ಕೆ ಪ್ರವೃತ್ತಿ ಹೇತುವಾಗಿರುತ್ತದೆ. ವ್ಯವಹಾರದಲ್ಲಿ ಜಯಿಸಲು ಸುಳ್ಳು ಹೇಳುವುದೇ ಸಾಧನ. ಒಂದು ದೇಶವನ್ನು ವಶಪಡಿಸಿಕೊಳ್ಳಬೇಕಾದರೆ ಆ ದೇಶದಲ್ಲಿ ಜಲಸಮೃದ್ಧಿ ಇದೆಯೋ ಎಂದು ಮಾತ್ರ ನೋಡುತ್ತಾರೆ. ಜನಿವಾರ ಒಂದೇ ಬ್ರಾಹ್ಮಣ್ಯಕ್ಕೆ ನಿಮಿತ್ತವಾಗುತ್ತದೆ. ಧನಕನಕವೇ ಒಬ್ಬರನ್ನು ಪರೀಕ್ಷಿಸುವ ಅಳತೆಗೋಲಾಗಿರುತ್ತದೆ. ರತ್ನಧಾರಣೆ ಮಾಡಿಕೊಂಡರೆ ಮಾತ್ರ ಪ್ರಶಂಸೆಗೆ ಪಾತ್ರನಾಗಲು ಸಾಧ್ಯ. ಬ್ರಹ್ಮಚರ್ಯ ಗೃಹಸ್ಥ ಮುಂತಾದ ಆಶ್ರಮಗಳಿಗೆ ಬಾಹ್ಯ ಚಿಹ್ನವನ್ನು ಧರಿಸಿದರೇನೇ ಸಾಕು. ಜೀವನ ವೃತ್ತಿಗೆ ಅನ್ಯಾಯವೇ ಸಾಧನವಾಗುವುದು. ಉದ್ಯೋಗವನ್ನು ಕಳೆದುಕೊಳ್ಳಲು ದೌರ್ಬಲ್ಯ ಒಂದೇ ನಿಮಿತ್ತವಾಗುತ್ತದೆ. ನಿರ್ಭಯವಾಗಿ ಗಟ್ಟಿಯಾಗಿ ಮಾತಾಡುವುದೇ ಪಾಂಡಿತ್ಯದ ಚಿಹ್ನೆಯಾಗುವುದು. ಸಾಧುವಾಗಿರಲು ಬಡತನವೇ ಕಾರಣವಾಗಿರುತ್ತದೆ. ಸ್ನಾನ ಒಂದೇ ಶುದ್ಧತೆಗೆ ಸಾಧನವಾಗಿರುತ್ತದೆ. ದಾನ ಒಂದೇ ಧರ್ಮಕ್ಕೆ ಕಾರಣವಾಗಿರುತ್ತದೆ. ಅಂದರೆ ಇತರ ವೈದಿಕ ಕರ್ಮಗಳು ಬೇಕಾಗಿರುವುದಿಲ್ಲ. ಸ್ವೀಕಾರ ಒಂದೇ ಮದುವೆಯ ಸಾಂಗತ್ಯಕ್ಕೆ ಕಾರಣವೆನಿಸುತ್ತದೆ. ಅಗ್ನಿಸಾಕ್ಷಿಯಾಗಿ ಮದುವೆಯಾಗಬೇಕೆಂಬ ಶಾಸ್ತ್ರೀಯ ವಿಧಿವಿಧಾನಗಳು ಬೇಕಾಗಿಲ್ಲ. ಆಡಂಬರ ವೇಷ ಧರಿಸಿದವನೇ ಸತ್ಪಾತ್ರನಾಗುವನು. ದೂರದೇಶದ ಜಲವೇ ತೀರ್ಥವೆನಿಸುವುದು. ಅಂದರೆ

ಹೊರದೇಶಕ್ಕೆ ಹೋದರೇನೆ ಗೌರವ ಹೆಚ್ಚಾಗುತ್ತದೆ ಎಂಬ ಮೂಢನಂಬಿಕೆ. ಕಪಟವೇಷ ಧರಿಸಿದವನೇ ಗೌರವಕ್ಕೆ ಪಾತ್ರನಾಗುವನು. ಹೀಗೆ ನಾನಾ ದೋಷಗಳಿಂದ ತುಂಬಿಹೋದ ಭೂಮಂಡಲದಲ್ಲಿ ಯಾವ ವರ್ಣದವನೇ ಆಗಿರಲಿ ಬಲಶಾಲಿಯಾದವನು ಭೂಪತಿಯಾಗುತ್ತಾನೆ. ರಾಜರ ಈ ದುಷ್ಪ್ರವೃತ್ತಿಯನ್ನು ಸಹಿಸಿಕೊಳ್ಳಲಾರದೆ ಜನರು ಬೆಟ್ಟಗುಡ್ಡ ಕಂದರ ಪ್ರದೇಶಗಳನ್ನು ಆಶ್ರಯಿಸುತ್ತಾರೆ. ಜೇನು, ಸಸ್ಯ, ಬೇರು, ಹಣ್ಣು, ಎಲೆ, ಹೂ ಮುಂತಾದುವುಗಳನ್ನು ತಿನ್ನುತ್ತಾ ವಾಸಿಸುತ್ತಾರೆ. ಜನರಿಗೆ ಮಕ್ಕಳ ಸಂಖ್ಯೆಯೂ ಹೆಚ್ಚಾಗಿ ಬೇರೆ ದಾರಿಯಿಲ್ಲದೆ ಮರಗಳ ತೊಗಟೆ, ಎಲೆ, ಚಿಂದಿಗಳಿಂದ ತಮ್ಮ ದೇಹವನ್ನು ಮುಚ್ಚಿಕೊಂಡು ಶೀತವಾತ ಬಿಸಿಲು ಮಳೆಗಳನ್ನು ಹೇಗೋ ಸಹಿಸಿಕೊಳ್ಳುತ್ತಾರೆ. ಯಾವನೂ ಇಪ್ಪತ್ತು ಮೂರು ವರ್ಷಗಳ ಮೇಲೆ ಬದುಕುವುದಿಲ್ಲ.

ಈ ಕಲಿಯುಗದಲ್ಲಿ ಜನರೆಲ್ಲರೂ ಸದಾ ಕ್ಷಯಿಸುತ್ತಾ ಹೋಗುವರು. ಕಡೆಗೆ ಕಲಿಯುಗದಲ್ಲಿ ಶ್ರೌತಸ್ಮಾರ್ತ ಧರ್ಮಗಳು ಸಂಪೂರ್ಣವಾಗಿ ನಾಶಹೊಂದಿ ಕಲಿಯುಗದ ಅವಧಿಯ ಮುಗಿಯುತ್ತಾ ಬರುತ್ತದೆ. ಆಗ ಶಂಬಲಗ್ರಾಮ ವಾಸಿಯಾದ ಬ್ರಾಹ್ಮಣೋತ್ತಮನೂ ಆದ ವಿಷ್ಣುಯಶಸ್ ಎಂಬಾತನ ಗೃಹದಲ್ಲಿ ಅಷ್ಟೈಶ್ವರ್ಯ ಸಂಪನ್ನನಾದ ಕಲ್ಕಿಯ ಅವತರಿಸುವನು. ಆತನು ಅಖಿಲ ಜಗತ್ತಿಗೆ ಸೃಷ್ಟಿಕರ್ತನೂ ಚರಾಚರ ಗುರುವೂ ಆದಿಮಧ್ಯಾಂತ ರಹಿತನೂ ಆಗಿರುವನು ಬ್ರಹ್ಮ ಸ್ವರೂಪನೂ ಪರಮಾತ್ಮನೂ ಆದ ಭಗವಾನ್ ವಾಸುದೇವನ ಅಂಶಾವತಾರವಾಗಿ ಕಲ್ಕಿಯು ಜನಿಸುವನು.

**ಶ್ರೌತೇ ಸ್ಮಾರ್ತೇ ಚ ಧರ್ಮೇ ವಿಪ್ಲವ ಮತ್ಯಂತ ಮುಪಗತೇ**

**ಕ್ಷೀಣ ಪ್ರಾಯೇ ಚ ಕಲಾವಶೇಷ ಜಗತ್ಸುಷ್ಟಶ್ಚರಾ ಚರ**

**ಗುರೋ ರಾದಿ ಮದ್ಯಾಂತ ರಹಿತಸ್ಯ ಬ್ರಹ್ಮಮಯಸ್ಸಾತ್ಮ**

**ರೂಪಿಣೇ ಭಗವತೋ ವಾಸುದೇವಸ್ಸಾಂಶಶ್ಯಂಬಲ ಗ್ರಾಮ**

**ಪ್ರಧಾನ ಬ್ರಾಹ್ಮಣಸ್ಯ ವಿಷ್ಣುಯಶಸೋ ಗೃಹೇಷ್ಟಗುಣರ್ಧಿ**

**ಸಮನ್ವಿತ ಕಲ್ಕಿರೂಪೀ ಜಗತ್ಯಾತ್ರಾವತೀರ್ಯ**

**ಸಕಲ ಮ್ಲೇಚ್ಛದಸ್ಸು ದುಷ್ಟಾಚರಣ ಚೇತಸಾಮಶೇಷಾಣಾಂ**

**ಅಪರಿಚ್ಛಿನ್ನ ಶಕ್ತಿ ಮಾಹಾತ್ಮ್ಯಃ ಕ್ಷಯಂ ಕರಿಷ್ಯತಿ**

**ಸ್ವಧರ್ಮೇಷು ಚಾಖಿಲಮೇವ ಸಂಸ್ಥಾಪಯಿಷ್ಯತಿ॥**

**ಅನಂತರಂ ಚಾಶೇಷ ಕಲೇರವ ಸಾನೇ ನಿಶಾವಸಾನೇ**

**ವಿಬುದ್ಧಾನಾಮಿದ ತೇಷಾಮೇವ ಜನಪದಾ ನಾಮ ಮಲ**

**ಸ್ಫಟಿಕ ವಿಶುದ್ಧಾಮತಯೋ ಭವಿಷ್ಯಂತಿ॥**

**ತೇಷಾಂ ಬೀಜಭೂತಾನಾಮಶೇಷ ಮನುಷ್ಯಾಣಾಂ**

**ಪರಿಣತಾನಾಮಪಿ ತತ್ಕಾಲಕೃತಾ ಪತ್ಯ ಪ್ರಸೂತಿ ರ್ಭವಿಷ್ಯತಿ ॥**

**ತಾನಿ ಚ ತದಪತ್ಯಾನಿ ಕೃತಯುಗಾನು ಸಾರಿಣ್ಯೇವ ಭವಿಷ್ಯಂತಿ**

(ವಿ.ಪು . 2ನೇ ಸಂ ಚತು, ಅಂಶ ಅ.24 ಶ್ಲೋಕ 98 ರಿಂದ)

ಅಪರಿಮಿತವಾದ ಶಕ್ತಿ ಮಾಹಾತ್ಮ್ಯಗಳಿಂದ ಕೂಡಿದ ಆತನು ಸಕಲ ಮ್ಲೇಚ್ಛರನ್ನು ದಸ್ಯುಗಳನ್ನು ದುರ್ಬುದ್ಧಿಯವರನ್ನು ಧ್ವಂಸ ಮಾಡಿ ಸರ್ವರೂ ಸ್ವಸ್ವಧರ್ಮಗಳಲ್ಲಿ ನಡೆಯವಂತೆ ನಿಯೋಜಿಸುವನು. (ಸ್ವಧರ್ಮೇ ನಿಧನಂ ಶ್ರೇಯಃ) (ಭಗೀತಾ ವಾಕ್ಯ) ಅನಂತರ ಕಲಿಯುಗವು ಪೂರ್ತಿಯಾಗಿ ಮುಗಿಯಲು ರಾತ್ರಿ ಕಳೆಯಲಾಗಿ ಜಾಗೃತರಾದವರಿಗೆ ಆಗುವಂತೆ ಇರುವ ಪ್ರಜೆಗಳ ಬುದ್ಧಿಗಳು ಸ್ವಚ್ಛಸ್ಫಟಿಕದಂತೆ ಪರಿಶುದ್ಧವಾಗುತ್ತವೆ. ಮುಂದಿನ ಪ್ರಜೆಗಳಿಗೆ ಬೀಜಸ್ವರೂಪವಾದ ಆ ಮನುಷ್ಯನಿಗೆ ವಯಸ್ಸಾಗಿದ್ದರೂ ಆ ಸಮಯದಲ್ಲಿ ಸಂತಾನಶಕ್ತಿ ಲಭಿಸುವುದು ಅವರ ಮಕ್ಕಳು ಕೃತಯುಗಕ್ಕೆ ಸರಿಯಾಗಿ ಧರ್ಮವನ್ನು ಪಾಲಿಸತಕ್ಕವರಾಗುವರು. ಈ ವಿಷಯದ ಬಗ್ಗೆಯೂ ಇಲ್ಲಿ ಪ್ರಸ್ತಾಪಿಸಲಾಗಿದೆ.

**ಯದಾ ಚಂದ್ರಶ್ಚ ಸೂರ್ಯಶ್ಚ ತಥಾತಿಷ್ಯೋ ಬೃಹಸ್ಪತಿಃ**

**ಏಕರಾಶೌ ಸಮೇಶ್ಯಂತಿ ತದಾ ಭವತಿ ವೈಕೃತಮ್**

**ಅತೀತಾ ವರ್ತಮಾನಾಶ್ಚ ತಥೈವಾನಾಗತಾಶ್ಚಯೇ**

**ಏತೇ ವಂಶೇಷು ಭೂಪಾಲಾಃ ಕಥಿತಾ ಮುನಿಸತ್ತಮ**

**ಯಾವತ್ಪರೀಕ್ಷಿತೋ ಜನ್ಮ ಯಾವನ್ನನ್ದಾಭಿಷೇಚನಂ**

**ಏತ ದ್ವರ್ಷ ಸಹಸ್ರಂ ತು ಜ್ಞೇಯಂ ಪಂಚಶತ್ತೋತ್ತರಂ**

**ಸಪ್ತರ್ಷೀಣಾಂ ತುಯೌ ಪೂರ್ವೌ ದೃಶ್ಯೇತೇ ಹ್ಯುದಿತೌದಿವಿ**

**ತಯೋಸ್ತು ಮಧ್ಯೇ ನಕ್ಷತ್ರಂ ದೃಶ್ಯೇತೆ ಯತ್ಸಮಂ ನಿಶಿ**

**ತೇನ ಸಪ್ತರ್ಷಯೋ ಯುಕ್ತಾ ಸ್ತಿಷ್ಠನ್ತ್ಯ ಬ್ದಶತಂ ನೃಣಾಮ್**

**ತೇತು ಪಾರೀಕ್ಷಿತೇ ಕಾಲೇ ಮಘಾಸ್ವಾಸನ್ ದ್ವಿಜೋತ್ತಮ**

**ಯದೈವ ಭಗವಾನ್ ವಿಷ್ಣೋ ರಂಶೋ ಯಾತೋ ದಿವಂ**

**ದ್ವಿಜ ವಸುದೇವ ಕುಲೋದ್ಭೂತಸ್ತ ದೈವಾತ್ರಾಗತಃ ಕಲಿಃ**

**ಯಾವತ್ಸ ಪಾದ ಪದ್ಮಾ ಭ್ಯಾಂ ಪಸ್ಪರ್ಶೇಮಾಂ ವಸುಂಧರಾಮ್**

**ತಾವತ್ಪೃಥ್ವೀ ಪರಿಷ್ವಂಗೇ ಸಮರ್ಥೋ ನಾಭವತ್ಕಲಿಃ**

ಈ ಸಂದರ್ಭದಲ್ಲಿ ಪರಾಶರರು ಗ್ರಹಗತಿಗಳ (ಜ್ಯೋತಿಶ್ಶಾಸ್ತ್ರ) ಬಗ್ಗೆಯು ವಿವರಿಸುತ್ತಾರೆ. ಚಂದ್ರ, ಸೂರ್ಯ, ಬೃಹಸ್ಪತಿಗಳು ಒಟ್ಟಿಗೆ ರಾಶಿಯಲ್ಲಿ ಪುಷ್ಯ ನಕ್ಷತ್ರವನ್ನು ಯಾವಾಗ ಒಟ್ಟಿಗೆ ಪ್ರವೇಶಿಸುವರೋ ಆಗ ಕೃತಯುಗದ ಆರಂಭವಾಗುತ್ತದೆ. ಸಾಮಾನ್ಯವಾಗಿ ಹನ್ನೆರಡು ವರ್ಷಗಳಿಗೊಮ್ಮೆ ಬೃಹಸ್ಪತಿಯು ಕರ್ಕಾಟಕ ರಾಶಿಯಲ್ಲಿ ಇದ್ದಾಗ ಚಂದ್ರ ಸೂರ್ಯ, ಬೃಹಸ್ಪತಿಗಳು ಒಂದೇ ರಾಶಿಯಲ್ಲಿ ಪುಷ್ಯ ನಕ್ಷತ್ರದಲ್ಲಿ ಅಮಾವಾಸ್ಯೆಯ ದಿನ ಆಗುತ್ತಲೇ ಇರುತ್ತದೆ. ಆದರೆ 'ಸಮೇಷ್ಯತಿ' ಎಂದು ಹೇಳಿದ್ದರ ಅರ್ಥವೇನೆಂದರೆ ಏಕ ಕಾಲದಲ್ಲಿ ಈ ಮೂರೂ ಗ್ರಹಗಳು ಪುಷ್ಯ ನಕ್ಷತ್ರವನ್ನು ಪ್ರವೇಶಿಸಿದಾಗ ಕೃತಯುಗದ ಆರಂಭವಾಗುತ್ತದೆ. ಎಂದು ಅಭಿಪ್ರಾಯ. ಏಕಕಾಲದಲ್ಲಿ ಪ್ರವೇಶವು ಕೃತಯುಗದಲ್ಲಿ ಆರಂಭದಲ್ಲಿ ಮಾತ್ರ ಎಂದು ಜ್ಯೋತಿಶಾಸ್ತ್ರದವರು ಗುರುತಿಸಿದ್ದಾರೆ. ಪರೀಕ್ಷಿತ ಮಹಾರಾಜನ ಜನ್ಮದಿನದಿಂದ ನಂದನ ಪಟ್ಟಾಭಿಷೇಕದವರೆಗೆ ಒಂದು ಸಾವಿರದ ಐನೂರು ವರ್ಷಗಳು ಆಗುತ್ತವೆ ಎಂದು ಅಂದೇ ಭವಿಷ್ಯ ನುಡಿದಿದ್ದಿತು.

ರಾತ್ರಿಯ ಹೊತ್ತು ಸಪ್ತರ್ಷಿಮಂಡಲದಲ್ಲಿ ಮೊದಲು ಕಾಣಿಸಿಕೊಳ್ಳತಕ್ಕ ಎರಡು ನಕ್ಷತ್ರಗಳು (ಪುಲಹ ಕ್ರತು) ಎಂದು ಸಪ್ತರ್ಷಿ ಮಂಡಲವು ಆ ನಕ್ಷತ್ರದಿಂದ ಯುಕ್ತವಾಗಿರುವುದು. ಮನುಷ್ಯ ಮಾನದಿಂದ ಒಂದು ನೂರು ವರ್ಷ. ಪರೀಕ್ಷಿತನ ಕಾಲದಲ್ಲಿ ಸಪ್ತರ್ಷಿ ಮಂಡಲವು ಮಘಾ ನಕ್ಷತ್ರದಿಂದ ಕೂಡಿದ್ದಿತು. ಆ ಸಮಯದಲ್ಲಿ (ದೇವಮಾನದಿಂದ) ಹನ್ನೆರಡು ನೂರು ವರ್ಷಗಳ ಕಲಿಯುಗವು ಪ್ರವೃತ್ತವಾಯಿತು. ಎಲೈ ಮೈತ್ರೇಯ ವಸುದೇವನ ಕುಲದಲ್ಲಿ ಅವತರಿಸಿದ ವಿಷ್ಣುವಿನ ಅಂಶಾವತಾರವಾದ ಭಗವಾನ್ ಶ್ರೀಕೃಷ್ಣನು ಯಾವಾಗ ದಿವ್ಯ ಲೋಕಕ್ಕೆ ಹೋದನೋ ಆಗಲೇ ಕಲಿಯು ಮುಂದಕ್ಕೆ ಆಗಮಿಸಿದನು. ಎಲ್ಲಿಯವರೆಗೆ ಶ್ರೀಕೃಷ್ಣ ತನ್ನ ಪಾದಕಮಲಗಳಿಂದ ಭೂಮಿಯ ಸ್ಪರ್ಶವನ್ನು ಮಾಡುತ್ತಿದ್ದನೋ ಅಲ್ಲಿಯವರೆಗೆ ಈ ಭೂಮಿಯನ್ನು ವ್ಯಾಪಿಸಲು ಕಲಿಗೆ ಸಾಮರ್ಥ್ಯವಿರಲಿಲ್ಲ. ಭಗವಾನ್ ಶ್ರೀವಿಷ್ಣುವಿನ ಅಂಶವು ಭೂಮಿಯಿಂದ ದಿವ್ಯಲೋಕವನ್ನು ಸೇರಿದಮೇಲೆ, ಧರ್ಮಪುತ್ರನಾದ ಯುಧಿಷ್ಠಿರನು ತನ್ನ ಸಹೋದರರೊಡನೆ ರಾಜ್ಯವನ್ನು ಪರಿತ್ಯಜಿಸಿದನು. ಶ್ರೀಕೃಷ್ಣನು ಲೋಕಾಂತರವನ್ನೈದಲು ಕಲಿಸಂಬಂಧಿಯಾದ ವಿಪರೀತ ಲಕ್ಷಣಗಳನ್ನು ಯುಧಿಷ್ಠಿರನು ಕಂಡನು. ಕೂಡಲೇ ಯುಧಿಷ್ಠಿರನು ಪರೀಕ್ಷಿತನಿಗೆ ಪಟ್ಟಾಭಿಷೇಕ ಮಾಡಿದನು. ಪರೀಕ್ಷಿತನ ಜನ್ಮಕಾಲದಿಂದ ನಂದರಾಜನವರೆಗೆ ಶುದ್ಧ ಕ್ಷತ್ರಿಯ ವಂಶದ ರಾಜರು ರಾಜ್ಯವಾಳಿದರು. "ನಂದಾಂತಂ ಕ್ಷತ್ರಿಯ ಕಲಂ" ಎಂದು ಹೇಳುವುದುಂಟು. ನಂದನೆಂದರೆ ಮಹಾನಂದ. ಇವನು ಎಂಟು ಮಕ್ಕಳು ಸೇರಿ ನವನಂದರೆಂದು ಪ್ರಸಿದ್ಧ. ಹೀಗೆ ಪರೀಕ್ಷಿತನ ಜನ್ಮ ದಿನದಿಂದ ನಂದನ ಪಟ್ಟಾಭಿಷೇಕದವರೆಗೆ 1500 ವರ್ಷಗಳು ಕಳೆದಿವೆ ಎಂದು ವಿಷ್ಣುಪುರಾಣದಲ್ಲಿ ಗುರುತಿಸಲಾಗಿದೆ. ನಂದರ ತರುವಾಯ ಚಂದ್ರಗುಪ್ತಮೌರ್ಯ ರಾಜನಾದನು. ಚಂದ್ರಗುಪ್ತ ರಾಜ್ಯಕ್ಕೆ ಬಂದ ಕಾಲದ ವಿಷಯದಲ್ಲಿಯೂ ಇತಿಹಾಸಕಾರರ ಭಿನ್ನಾಭಿಪ್ರಾಯವಿದೆ. ಹೇಗಿದ್ದರೂ 'ಪಂಚಶತೋತ್ತರಂ' ಎಂಬ ವಿಷ್ಣುಪುರಾಣದ ಪ್ರಕಾರ ಲೆಕ್ಕಮಾಡಿದರೆ ಇಂದಿಗೆ ಸುಮಾರು 4030 ವರ್ಷಗಳ ಹಿಂದೆ ಭಾರತಯುದ್ಧ ನಡೆಯಿತೆಂದು ಹೇಳಬಹುದು. ಆಗ ಕಲಿಯುಗದ ಪ್ರಾರಂಭವಾಗಿತ್ತೆಂದು ಮಹಾಭಾರತದಲ್ಲಿ ಸೂಚಿಸಲ್ಪಟ್ಟಿದೆ.

**ಪ್ರಾಪ್ತಂ ಕಲಿಯುಗಂ ವಿದ್ಧಿ ಪ್ರತಿಜ್ಞಾಂ ಪಾಂಡವಸ್ಯಚ**

**ಆನೃಣ್ಯಂ ಯಾತು ವೈರಸ್ಯ ಪ್ರತಿಜ್ಞಾಯಾಶ್ಚ ಪಾಂಡವೈ**

ಎಂದು ಶ್ರೀಕೃಷ್ಣನು ಬಲರಾಮನಿಗೆ ಹೇಳಿದ್ದಾನೆ. ಆದರೆ ಪಂಚಾಂಗಗಳಲ್ಲಿ ಈ ಕಲಿಯುಗದಲ್ಲಿ 5120 ವರ್ಷಗಳು ಕಲಿಯುಗವು ಕಳೆದುಹೋಗಿವೆಯೆಂದು ಹೇಳುತ್ತವೆ. ಹೇಗಾದರಾಗಲಿ, ಕಲಿಯುಗದ ಪ್ರಮಾಣ 4,32,000 ಮಾನುಷ ವರ್ಷಗಳು ಎಂದು ಪರಿಗಣಿಸಲಾಗಿದೆ. ಅದರಲ್ಲಿ ಈಗ ನಾವು ಮಿಕ್ಕ 4,26,880 ವರ್ಷಗಳಲ್ಲಿ ಅದೆಷ್ಟು ಜನ್ಮಗಳನ್ನು ಎತ್ತುವೆವೋ ನೋಡೋಣ. ಇಷ್ಟರಲ್ಲಿ ಭೂ ಪ್ರಳಯವಾಗಲಿ, ಜಲ ಪ್ರಳಯುವಾಗಲಿ, ಅಗ್ನಿ ಪ್ರಳಯವಾಗಲಿ, ರೋಗರುಜಿನಗಳಿಂದ ಆಗುವ ಪ್ರಳಯವಾಗಲಿ, ಕೆಲವು ಕಡೆ ಅಂದರೆ ಭಾಗಶಃ ಆಗುತ್ತದೆಯೇ ವಿನಹ ಪೂರ್ಣಯ ಪ್ರಳಯವಾಗುವುದಿಲ್ಲ ಎಂದು ಅನೇಕರ ಅಭಿಪ್ರಾಯವಿದೆ.

ಕಲಿಯುಗದ ರಾಜರಾಗಲಿ, ಸಾಮಾನ್ಯ ಜನರಾಗಲಿ ಹೇಗಿರುವರೆಂಬುದನ್ನು ಅಂದೇ ಅಂದರೆ ಪುರಾಣಕಾಲದಲ್ಲಿಯೇ ಸೂಚಿಸಿದ್ದಾರೆ. ತ್ರಿಕಾಲ ಜ್ಞಾನಿಗಳ ಪರಾಶರರ ದಿವ್ಯದೃಷ್ಟಿ. ಅತ್ಯದ್ಭುತವಾದದ್ದು ಪರಾಶರ ಮಹರ್ಷಿಗಳಿಗೆ ನಮೋ ನಮಃ

## ಶ್ರೀ ಕೃಷ್ಣನು ದಿವ್ಯಧಾಮಕ್ಕೆ ಹಿಂದಿರುಗಿದುದು ಮತ್ತು ಅದರ ಪರಿಣಾಮ

ಈಗಾಗಲೇ ತಿಳಿಸಿದಂತೆ ಶ್ರೀಕೃಷ್ಣ ತನ್ನ ಪರಂಧಾಮವನ್ನೈದಿದನು. ಪಾಂಡವರೂ ಸಹ ಪರೀಕ್ಷಿತ್ ಮಹಾರಾಜನಿಗೆ ರಾಜ್ಯಾಭಿಷೇಕವನ್ನು ಮಾಡಿ ದಿವ್ಯಧಾಮಕ್ಕೆ ತಲುಪಿದರು. ಅಂದಿನಿಂದ ಕಲಿಯುಗವು ಆರಂಭವಾಯಿತು.

**ಯಸ್ಮಿನ್ ಕೃಷ್ಣೋ ದಿವ್ಯಯಾತ ಸ್ತಸ್ಮಿನ್ನೇವ ತದಾಹನಿ**

**ಪ್ರತಿಪನ್ನಂ ಕಲಿಯುಗಂ ತಸ್ಯ ಸಂಖ್ಯಾಂ ನಿಭೋದಮೇ**

**ತ್ರೀಣಿ ಲಕ್ಷಾಣಿ ವರ್ಷಾಣಿ ದ್ವಿಜ ಮಾನುಷ್ಯಸಂಖ್ಯಯಾ**

**ಪುಷ್ಟಿಶ್ಚೈವ ಸಹಪ್ರಾಣಿ ಭವಿಷ್ಯ ತ್ಯೇಷ ವೈಕಲಿ:**
**ಶತಾನಿ ತಾನಿ ದಿವ್ಯಾನಾ ಸಪ್ತಪಂಚ ಚ ಸಂಖ್ಯಯಾ**
**ನಿಶ್ಶೇಷೇಣ ಗತೇ ತಸ್ಮಿನ ಭವಿಷ್ಯತಿ ಪುನಃ ಕೃತಮ್**

(ವಿ.ಪು. 2ನೇಸಾ ಚಅ. ಅ124 ಶ್ಲೋಕ)

ಪರಾಶರು ಮೈತ್ರೇಯರಿಗೆ ವಿವರಿಸುತ್ತಾ ಹೀಗೆಂದರು. ಯಾವ ದಿನ ಶ್ರೀಕೃಷ್ಣನು ತನ್ನ ದಿವ್ಯಧಾಮಕ್ಕೆ ಹೋದನೋ ಆ ದಿನ ಕಲಿಯುಗವು ಈ ಭೂಮಿಯಲ್ಲಿ ಉಪಸ್ಥಿತವಾಯಿತು. ಮನುಷ್ಯರ ಕಾಲಗಣನೆಯ ಪ್ರಕಾರ 3,60,000 ವರ್ಷಗಳವರೆಗೆ (ಎರಡು ಸಂದ್ಯಾಂಶ ಕಾಲವನ್ನು ಬಿಟ್ಟು) ಮೇಲೆ ಎಂದರೆ ದಿವ್ಯವರ್ಷಗಣನೆ (ಎರಡು ಸಂಧ್ಯಾಂಶಗಳೂ ಸೇರಿ) ಹನ್ನೆರಡು ನೂರು (1200) ದಿವ್ಯವರ್ಷಗಳು ಕಳೆದ ಮೇಲೆ (ಅಂದರೆ ಸುಮಾರು 4,26,880 ವರ್ಷಗಳ ನಂತರ) ಮತ್ತೆ ಕೃತಯುಗವು ಪ್ರಾರಂಭವಾಗುತ್ತದೆ. ಪುರುವಂಶನ ದೇವಾಪಿ ಎಂಬ ರಾಜನೂ ಇಕ್ಷ್ವಾಕುವಂಶದ ಮರು ಎಂಬ ರಾಜನೂ ಮಹಾಯೋಗ ಬಲಸಂಪನ್ನರಾಗಿ ಕಲಾಪಗ್ರಾಮದಲ್ಲಿ ವಾಸವಾಗಿರುತ್ತಾರೆ. ಕೃತಯುಗ ಬಂದಾಗ ಮತ್ತೆ ಅವರು ಇಲ್ಲಿಗೆ ಬಂದು ಕ್ಷತ್ರಿಯವಂಶಕ್ಕೆ ಪ್ರವರ್ತಕರಾಗುವರು. ಆಗಾಮಿಯಾದ ಮನುವಂಶಕ್ಕೆ ಬೀಜ ಸ್ವರೂಪರಾಗಿರುವರು ಮೈತ್ರೇಯ ಮತ್ತೆ ಈ ಕ್ರಮವನ್ನು ಅನುಸರಿಸಿ ಮನುಪುತ್ರರಾದ ಕ್ಷತ್ರಿಯರು ತ್ರೇತಾ, ದ್ವಾಪರ ಯುಗಗಳಲ್ಲಿ ಭೂಮಿಯನ್ನು ಪಾಲಿಸುತ್ತಾರೆ. ಮತ್ತೆ ಕಲಿಯುಗವು ಬಂದಾಗ ಅವರಲ್ಲಿಯೇ ಕೆಲವು ಕ್ಷತ್ರಿಯರು ಈಗ ದೇವಾಪಿ ಮರುಗಳಂತೆ ಬೀಜಭೂತರಾಗಿ ಉಳಿದುಕೊಂಡಿರುತ್ತಾರೆ. ಹೀಗೆಯೇ ಕಾಲಚಕ್ರ ಉರುಳುತ್ತಾ ಇರುತ್ತದೆ. ಹೇಯವಾದ ಈ ಶರೀರದಲ್ಲಿ ಮೋಹಿತರಾಗಿ ಸದಾ ಅಹಂಕಾರ ಮಮಕಾರಗಳನ್ನು ಬೆಳೆಸಿಕೊಂಡ ಈ ರಾಜರೂ ಇವರಂತಹವರೂ ಭೂಮಂಡಲದಲ್ಲಿ ಅಸಂಖ್ಯಾತರಾಗಿದ್ದಾರೆ. ಅವರ ಯೋಚನೆ ಯೋಜನಗಳೇ ವಿಚಿತ್ರವಾದದ್ದು. ಈ ಭೂಮಿಯು ನನಗೆ ಸ್ಥಿರವಾಗಿ ಹೇಗೆ ಉಳಿದೀತು. ನನ್ನ ಮಗನಿಗೆ ಹೇಗೆ ಲಭಿಸೀತು ನನ್ನ ವಂಶಕ್ಕೆ ಹೇಗೆ ದಕ್ಕೀತು ಎಂಬ ಚಿಂತೆಯಿಂದ ಕೊರಗುತ್ತಲೇ ಇವರೆಲ್ಲರೂ ಸತ್ತುಹೋದರು. ಇದೇ ರೀತಿ ಚಿಂತೆಯಿಂದ ಕನವರಿಸುತ್ತ ಇವರಿಗಿಂತ

ಹಿಂದಿನವರೂ, ಮುಂದಿನವರು, ನಂತರದವರೂ ಗತಿಸಿದರು. ಭವಿಷ್ಯದಲ್ಲಿ ಬರತಕ್ಕವರೂ ಅವರ ಅನಂತರದವರೂ ಹೀಗೆಯೇ ಕನವರಿಸುತ್ತಾ ಸತ್ತು ಹೋಗುವರು. ಹೀಗೆ ತನ್ನನ್ನು ಜಯಿಸಬೇಕೆಂದು ವಿಜಯಯಾತ್ರೆಗೆ ಸನ್ನದ್ಧರಾಗುವ ಭೂಪತಿಗಳನ್ನು ಅವರ ಮರುಳುತನವನ್ನು ಕಂಡು ಭೂಮಾತೆಯು ನಗುತ್ತಾಳಂತೆ. ಅವರನ್ನು ಕಂಡು ಭೂಮಾತೆ ಹೀಗೆ ಹೇಳುತ್ತಾಳಂತೆ. ಪೃಥಿವ್ಯುವಾಚ

**ಕಥಮೇಷ ನರೇಂದ್ರಾಣಾಂ ಮೋಹೋ ಬುದ್ಧಿ ಮತಾಮಪಿ**
**ಯೇನ ಫೇನಸ ಧರ್ಮಾಣೋ ಪ್ಯತಿ ವಿಶ್ವಸ್ತ ಚೇತಸಃ**
**ಪೂರ್ವ ಮಾತ್ಮಜಯಂ ಕೃತ್ವಾ ಜೇತುಮಿಚ್ಛನ್ತಿ ಮಂತ್ರಿಣಃ**
**ತತೋ ಭೃತ್ಯಾಶ್ಚ ಪೌರಾಂಶ್ಚ ಜಗೀಷಂತೇ ತಥಾರಿಪೂನ್**
**ಕ್ರಮೇಣಾನೇನ ಜೇಷ್ಯಾಮೋ ವಯಂ ಪೃಥ್ವಿ ಸಸಾಗರಾಮ್**
**ಇತ್ಯಾಸಕ್ತಧಿಯೋ ಮೃತ್ಯುಂ ನಪಶ್ಯಂತವಿದೂರ ಗಮ್**
**ಸಮುದ್ರಾವರಣಂ ಯಾತಿ ಭೂಮಂಡಲ ಮಥೋವಶಮ್**
**ಕಿಯದಾತ್ಮಜಯಸ್ಯೈ ತನ್ಮುಕ್ತಿರಾತ್ಮಜಯೋ ಫಲಮ್**
**ಉತ್ಸೃಜ್ಯ ಪೂರ್ವಜಾ ಯಾತಾಯಾಂ ನಾದಾಯಗತಃ ಪಿತಾ**
**ತಾಂ ಮಾಮತೀವ ಮೂಢತ್ವಾ ಜ್ಜೇತು ಮಿಚ್ಛಂತ ಪಾರ್ಥಿವಾಃ**
**ಮತ್ಕತೇ ಪಿತೃ ಪುತ್ರಾಣಾಂ ಭ್ರಾತೃಣಾಂ ಚಾಪಿ ವಿಗ್ರಹಃ**
**ಜಾಯತೇ ತ್ಯನ್ತ ಮೋಹೇನ ಮಮತ್ವಾ ದೃಪ್ತ ಚೇತಸಾಮ್**

(ವಿ.ಪು. 2ನೇಸಂ ಚ. ಅಂ. ಶ್ಲೋ128.133)

ಭೂಮಾತೆ ಹೀಗೆ ಹೇಳಿದಳು. ಒಳ್ಳೆಯ ಧೀಮಂತರಾದ ರಾಜರಿಗೂ ಸಹ ಬುದ್ಧಿಗೇಡಿತನ ಹೇಗೆ ಬಂದಿರಬಹುದು. ತಾವು ನೀರಿನ ನೊರೆಯಂತೆ ಜೊಳ್ಳುಗಳಾದರೂ ಈ ದೇಹವು ಶಾಶ್ವತವೆಂದು ನಂಬಿಕೊಂಡಿದ್ದಾರಲ್ಲ,

ಮೊದಲು ಇಂದ್ರಿಯಗಳನ್ನು ಜಯಿಸಿ ನಂತರ ಮಂತ್ರಿಗಳನ್ನು ಜಯಿಸಬೇಕು. ಅನಂತರ ಭೃತ್ಯರನ್ನು ಪೌರರನ್ನೂ ವೈರಿಗಳನ್ನು ಕ್ರಮವಾಗಿ ಜಯಿಸಬೇಕು. ಇಷ್ಟಾದ ಮೇಲೆ ಸಾಗರಾಂತವಾದ ಪೃಥ್ವಿಯನ್ನೇ ಜಯಿಸುತ್ತೇವೆ ಎಂದು ಸಂಕಲ್ಪಿಸುತ್ತಾರೆ. ಸಮೀಪದಲ್ಲಿ ಮೃತ್ಯು ಕಾದಿದೆಯಲ್ಲಾ ಎಂಬುದನ್ನೇ ಅವರು ಕಾಣುವುದಿಲ್ಲ. ಒಂದು ವೇಳೆ ಸಮುದ್ರ ಪರ್ಯಂತವಾದ ಭೂಮಂಡಲವೇ ವಶವಾದರೂ ಅದು ಇಂದ್ರಿಯ ಜಯಕ್ಕೆ ಯಾವ ಫಲವನ್ನು ನೀಡುತ್ತದೆ?. ಇಂದ್ರಿಯ ಜಯಕ್ಕೆ ಮುಕ್ತಿವೊಂದೇ ಫಲವಲ್ಲವೇ?. ಇವರ ಪೂರ್ವಜರೆಲ್ಲರೂ ನನ್ನನ್ನು (ಪೃಥ್ವಿ)ಯನ್ನು ಇಲ್ಲಿಯೇ ಬಿಟ್ಟು ಸಾಗಿದರು. ಇವರ ತಂದೆಯೂ ನನ್ನನ್ನು ಜೊತೆಗೆ ಕರೆದುಕೊಂಡು  ಹೋಗಲಿಲ್ಲ. ಈಗ ಈ ರಾಜನು ನನ್ನನ್ನು ಜಯಿಸಲು ಬಯಸುತ್ತಿದ್ದಾರೆ. ಅವರೆಲ್ಲ ಅತ್ಯಂತ ಮೂಢರು ನಾನು ನನ್ನದೆಂದು ಸೊಕ್ಕಿನ ಮನಸ್ಸುಳ್ಳ ಈ ಜನರಲ್ಲಿ ತಂದೆ ಮಕ್ಕಳಿಗೂ ಅಣ್ಣ ತಮ್ಮಂದಿರಿಗೂ ನನಗೋಸ್ಕರ ಹೊಡೆದಾಟ ನಡೆಯುತ್ತದೆ. ಇದೆಂತಹ ವಿಪರ್ಯಾಸ ಎಂದು ಭೂಮಾತೆಯೇ ಪರಿತಪಿಸುತ್ತಾಳೆ. ಇದು ನನ್ನ ರಾಜ್ಯ ಇದನ್ನು ತ್ಯಜಿಸಿಹೋಗಬೇಕು ಎಂದು ಯಾವ ರಾಜರುಗಳು ತಮ್ಮ ದೂತರ ಮೂಲಕ ಶತ್ರುಗಳಿಗೆ ಹೇಳುತ್ತಾರೋ ಅವರನ್ನು ನೋಡಿ ನನಗೆ ಬಹಳ ನಗು ಬರುತ್ತದೆ. ಮತ್ತೆ ಅವರ ಮೇಲೆ ಕನಿಕರ ಹುಟ್ಟುತ್ತದೆ ಎಂದು ಭೂಮಾತೆ ಹೇಳಿದಳು. ಪರಾಶರರು ಮೈತ್ರೇಯರಿಗೆ ವರ್ಣಿಸುತ್ತಾ ಹೀಗೆ ಹೇಳಿದರು. ಇಕ್ಷ್ವಾಕು, ಜಹ್ನು, ಮಾಂಧಾತೃ, ಸಗರ, ಯಯಾತಿ, ನಹುಷ ಮುಂತಾದ ರಾಜರು ಮಹಾಬಲಾಢ್ಯರಾಗಿದ್ದರು, ಮಹಾವೀರರಾಗಿದ್ದರು, ಅನಂತ ಧನರಾಶಿಯುಳ್ಳವರಾಗಿದ್ದರು. ಇವರೆಲ್ಲ ಬಲವತ್ತರನಾದ ಕಾಲನಿಗೆ ವಶರಾಗಿ ಮೃತರಾದರು, ಕಥಾಶೇಷರಾದರು. ಈ ಸುನತಿಗಳನ್ನು ಕೇಳಿದ ಮೇಲೆ ವಿವೇಕಿಯಾದ ಯಾವ ಮನುಷ್ಯನೂ ಹೆಂಡತಿ ಮಕ್ಕಳಲ್ಲಾಗಲಿ, ಮನೆ, ಹೊಲ, ಗದ್ದೆಗಳಲ್ಲಾಗಲಿ ಧನಾದಿಗಳಲ್ಲಾಗಲಿ ಮಮತ್ವವನ್ನು ಇಟ್ಟುಕೊಳ್ಳುವುದಿಲ್ಲ. ಎಂತೆಂತಹ ಪುರುಷಶ್ರೇಷ್ಠರು ಸಾವಿರಾರು ವರ್ಷಗಳವರೆಗೆ ಕೈಗಳನ್ನೆತ್ತಿ ಹಿಡಿದು ಕಠೋರವಾದ ತಪಶ್ಚರ್ಯೆಯಲ್ಲಿ  ತೊಡಗಿದ್ದರೋ ನಾನಾ

ಯಜ್ಞಗಳನ್ನು ಆಚರಿಸಿ ಬಲಾಢ್ಯರೆನಿಸಿದರೋ ಅವರನ್ನು ಕಾಲವು ಕಥಾಶೇಷರನ್ನಾಗಿ ಮಾಡಿಬಿಟ್ಟಿತು. ಎಲೈ ಮೈತ್ರೇಯ ಸಾಂಪ್ರತದಲ್ಲಿ ವೀರರೆನಿಸಿಕೊಂಡ ಯಾವ ಭೂಪಾಲರು ಇದ್ದರೋ ಭವಿಷ್ಯದಲ್ಲಿ ಆಗುವ ಯಾರನ್ನು ನಾನು ಹೇಳಿದನೋ ಅವರು ಹಾಗೆಯೇ ರಾಜರೆನಿಸಿಕೊಳ್ಳುವ ಮುಂದಿನವರು ಯಾರು ಇರುವರೋ ಅವರೆಲ್ಲರೂ ಹಿಂದಿನವರ ಗತಿಯನ್ನೇ ಪಡೆಯುವರು. ಇಷ್ಟೆಲ್ಲಾ ತಿಳಿದಮೇಲೆ ಮಗ, ಮಗಳು, ಹೊಲ, ಬಂಧುಗಳು ಮುಂತಾದವುಗಳ ಮೇಲೆ ಮಮತಾಭಾವವನ್ನು ಇಡುವುದಿಲ್ಲ ಎಂದರು. ಹೀಗೆ ಈ ಜೀವನ ಅದೆಷ್ಟು ಅಶಾಶ್ವತವಾದದ್ದು ಎಂಬುದನ್ನು ಪರಾಶರರು ಮೈತ್ರೇಯರಿಗೆ ವಿವರಿಸಿದರು. ಇದನ್ನು ತಿಳಿದುಕೊಂಡ ಮೇಲಾದರೂ ನಾವು ಬ್ರಹ್ಮಸತ್ಯ, ಜಗನ್ಮಿಥ್ಯ ಎಂಬುದನ್ನು ನಂಬೋಣ.

## ಶ್ರೀಕೃಷ್ಣಾವತಾರ

ಮೈತ್ರೇಯರು. ರಾಜರುಗಳ ವಂಶಾನುಚರಿತೆಯನ್ನು ಪರಾಶರರಿಂದ ಕೇಳಿದ ನಂತರ ಮಹಾವಿಷ್ಣುವು ಯದುವಂಶದಲ್ಲಿ ಅಂಶಾವತಾರ ಮಾಡಿದ ವಿಷಯವನ್ನು ವಿಸ್ತಾರವಾಗಿ ಕೇಳಬಯಸಿದರು. ಅದಕ್ಕೆ ತಕ್ಕಂತೆ ಪರಾಶರರು ಶ್ರೀಕೃಷ್ಣ ಚರಿತಾಮೃತದ ಧಾರೆಯನ್ನೇ ಹರಿಸಿದರು. ವಿಷ್ಣುವಿನ ಅಂಶಾವತಾರದ ಚರಿತೆಯು ನಿಜವಾಗಿಯೂ ಜಗತ್ತಿಗೆ ಕಲ್ಯಾಣಕರವಾದದ್ದು ಅಲ್ಲವೇ? ಅದನ್ನು ಕೇಳಿ ಧನ್ಯರಾಗೋಣ. ವಸುದೇವನ ಬಗ್ಗೆ ಈ ಹಿಂದೆ ತಿಳಿದಿದ್ದೇವೆ. ಆ ವಸುದೇವನು ದೇವಕನ ಪುತ್ರಿಯೂ ಭಾಗ್ಯಶಾಲಿನಿಯಾದ ದೇವಕಿಯನ್ನು ವಿವಾಹವಾದನು. ಈ ದೇವಕನೆಂಬುವನು ಕಂಸನ ತಂದೆಯಾದ ಉಗ್ರಸೇನನ ಸೋದರ. ಈ ಹಿಂದೆಯೇ ಹೇಳಿದಂತೆ ದೇವಕಿಯು ಕಂಸನ ತಂಗಿಯೂ ಹೌದು. ಅವರಿಬ್ಬರಿಗೆ ಮದುವೆಯಾದಾಗ ಆ ದಂಪತಿಗಳನ್ನು ಮಂಗಳಕರವಾದ ರಥವನ್ನು ಕಂಸನು ಸೂತ ಸಾರಥಿಯಾಗಿ ನಡೆಸತೊಡಗಿದನು. ಆ ಸಂದರ್ಭದಲ್ಲಿ ಒಂದು ಆಕಾಶವಾಣಿಯು ಅಂತರಿಕ್ಷದಲ್ಲಿ ಕಂಸನನ್ನು ಸಂಭೋಧಿಸಿ ಹೀಗೆ ನುಡಿಯಿತು "ಎಲೌ ಮೂಢ, ಪತಿಯೊಡನೆ ಕುಳಿತಿರುವ ಯಾವ ಸ್ತ್ರೀಯನ್ನು ನೀನು ರಥದಲ್ಲಿ ಕರೆದೊಯ್ಯುತ್ತಿರುವೆಯೋ ಅವಳ

ಎಂಟನೆಯ ಗರ್ಭವು ನಿನ್ನ ಪ್ರಾಣವನ್ನು ಸೆಳೆದೊಯ್ಯುವುದು ಎಂದಿತು. ಆ ಮಾತನ್ನು ಕೇಳಿ ಒಡನೆಯೇ ಬಲಾಢ್ಯನಾದ ಕಂಸನು ತನ್ನ ಖಡ್ಗವನ್ನು ಹಿರಿದು ದೇವಕಿಯನ್ನು ಸಂಹರಿಸಲು ಉದ್ಯುಕ್ತನಾದನು. ಆಗ ವಸುದೇವನು ಕಂಸನನ್ನು ಕುರಿತು ಹೇ ಮಹಾಭಾಗಾ ಪುಣ್ಯಾತ್ಮ, ನೀನು ದೇವಕಿಯನ್ನು ಕೊಲ್ಲುವುದು ತರವಲ್ಲ. ನಾನೇ ಇವಳ ಗರ್ಭದಲ್ಲಿ ಹುಟ್ಟಿದವರೆಲ್ಲರನ್ನೂ ನಿನಗೇ ಸಮರ್ಪಿಸುವೆನು ಎಂದನು. ಆಗ ಕಂಸನು ಹಾಗೆಯೇ ಆಗಲೆಂದು ಹೇಳಿದನು. ವಸುದೇವನ ಮೇಲೆ ಅವನಿಗೆ ಅಪಾರ ಗೌರವವಿದ್ದಿತು. ಆದ್ದರಿಂದ ಅವನು ದೇವಕಿಯನ್ನು ಸಂಹರಿಸಲಿಲ್ಲ. ವಸುದೇವನು ಕೊಟ್ಟ ಮಾತಿಗೆ ಸಮ್ಮತಿಸಿದನು. ಆ ಸಮಯದಲ್ಲಿ ಅತಿಭಾರದಿಂದ ಪೀಡಿತಳಾಗಿದ್ದ ಪೃಥ್ವಿಯು ಸುಮೇರು  ಪರ್ವತವನ್ನೇರಿ ಗೋ ರೂಪದಿಂದ ದೇವತೆಗಳ ಸಭೆಗೆ ಹೋದಳು. ಭೂಮಾತೆಯು ಬ್ರಹ್ಮಾದಿ ಸಕಲ ದೇವತೆಗಳಿಗೂ ನಮಸ್ಕರಿಸಿ ವಿಷಣ್ಣತೆಯಿಂದ ದೀನಸ್ವರದಿಂದ ಹೀಗೆಂದಳು.

"ಸುವರ್ಣಕ್ಕೆ ಅಗ್ನಿಯೂ ಕಿರಣರಾಶಿಗಳಿಗೆ ಸೂರ್ಯನೂ ಹೇಗೆ ಪರಮಗುರುವೋ ಹಾಗೆಯೇ ಸಮಸ್ತ ಲೋಕಗಳಿಗೂ ಗುರುವಾದ ಶ್ರೀಮನ್ನಾರಾಯಣನೇ ಪ್ರಜಾಪತಿಗಳಿಗೆ ಪತಿಯೂ, ಪೂರ್ವಜನೂ ಆದ ಬ್ರಹ್ಮನೂ ಕಲಾ, ಕಾಷ್ಠ ನಿಮೇಷಾತ್ಮಕವೂ ಅವ್ಯಕ್ತವೂ ಆದ ಕಾಲವು ನಿಮ್ಮೆಲ್ಲರ ಸಮೂಹವೂ ಆ ನಾರಾಯಣ ಅಂಶವೇ ಆದಿತ್ಯರು ಮರುತ್ತುಗಳು, ಸಾಧ್ಯರು, ರುದ್ರರು, ವಸುಗಳು, ಅಶ್ವಿನೀ ದೇವತೆಗಳು ಅಗ್ನಿ, ಪಿತೃದೇವತೆಗಳು, ಜಗತ್ತಿನ ಸೃಷ್ಟಿಕರ್ತರಾದ ಅತ್ರಿಮೊದಲಾದ ಪ್ರಜಾಪತಿಗಳು ಇವರೆಲ್ಲರೂ ಸಹ ವಿಷ್ಣುವಿನ ರೂಪವೇ ಆಗಿದ್ದಾರೆ. ಗ್ರಹ, ನಕ್ಷತ್ರ, ತಾರಕೆಗಳೂ ಇವುಗಳಿಂದ ಚಿತ್ರಿತವಾದ ಗಗನವೂ ಅಗ್ನಿ, ಜಲ, ವಾಯು ನಾನು ಅಂದರೆ (ಭೂಮಿ) ಶಬ್ಧಾದಿ ವಿಷಯಗಳು ಒಟ್ಟಿನಲ್ಲಿ ಈ ಸಮಸ್ತ ವಿಶ್ವವೇ ವಿಷ್ಣುಮಯವಾಗಿದೆ. ಇವೆಲ್ಲವೂ ಅನೇಕ ರೂಪನಾದ ವಿಷ್ಣುವಿನ ರೂಪಗಳೇ ಆಗಿದ್ದರೂ ಸಮುದ್ರದಲ್ಲಿರುವ ಅಲೆಗಳಂತೆ (ಸಮುದ್ರದ ಅಲೆಗಳು ಪರಮಾರ್ಥದಲ್ಲಿ ಒಂದೇ ವಸ್ತುವಾಗಿದ್ದರೂ ಒಂದನ್ನೊಂದು ಅಪ್ಪಳಿಸುತ್ತಾ ವಿರೋಧ ಪಡೆದಿರುವಂತೆ ಜೀವನೂ ಪರಸ್ಪರ ವಿರೋಧಿಗಳಾಗಿದ್ದಾರೆ ಎಂಬರ್ಥ) ಯಾವಾಗಲೂ ಬಾಧ್ಯ ಬಾಧಕ ಭಾವವನ್ನು ಹೊಂದಿದೆ. ಈ ಹಿಂದೆ ಭೂಲೋಕದಲ್ಲಿ

ವ್ಯಾಪಿಸಿ ರಾತ್ರಿ ಹಗಲು ಪ್ರಜೆಗಳನ್ನು ಪೀಡಿಸುತ್ತಿದ್ದ ಕಾಲನೇಮಿಯನ್ನು ಮಹಾವಿಷ್ಣುವೇ ಸಂಹರಿಸಿದನಷ್ಟೆ. ಆದರೆ ಮತ್ತೆ ಈಗ ಆ ಮಹಾಸುರನೇ ಉಗ್ರಸೇನನಿಗೆ ಮಗನಾಗಿ ಕಂಸನೆಂಬ ಹೆಸರಿನಿಂದ ಹುಟ್ಟಿದ್ದಾನೆ. ಅರಿಷ್ಟ, ಧೇನುಕ, ಕೇಶಿ, ಪ್ರಲಂಭ, ನರಕ, ಸುಂದ, ಬಾಣಾಸುರ ಮೊದಲಾದ ಮಹಾವೀರರಾದ ದೈತ್ಯರು ಬೇರೆಬೇರೆ ಕಡೆಗಳಲ್ಲಿ ಇದ್ದು ನನಗೆ (ಭೂದೇವಿ) ಕಿರುಕುಳವನ್ನು ಕೊಡುತ್ತಿದ್ದಾರೆ. ಇಂತಹ ಭಾರದ ಪೀಡೆಗಳಿಂದ ನಾನು ಬಳಲಿ ಹೋಗಿದ್ದೇನೆ ನಾನು ಹೊತ್ತಿರುವ ಈ ಭಾರವನ್ನು ಇಳಿಸಿ ಎಂದು ಪ್ರಾರ್ಥಿಸಿದಳು. ಆಗ ಬ್ರಹ್ಮನು ಮತ್ತಿತರ ದೇವತೆಗಳೊಡನೆ ಸಮಾಲೇಚನೇ ಮಾಡಿ ಎಲ್ಲರೂ ಮತ್ತಿಕರ ದೇವತೆಗಳೊಡನೆ ಸಮಾಲೋಚನೆ ಮಾಡಿ ಎಲ್ಲರೂ ಮಹಾವಿಷ್ಣುವಿನಲ್ಲಿ ಮೊರೆಯಿಟ್ಟರು. ಬ್ರಹ್ಮನು ಶ್ರೀಮಹಾವಿಷ್ಣುವಿನ ಸರ್ವವ್ಯಾಪಿತ್ವನ್ನು ಪ್ರಶಂಸಿಸಿ ಜಗತ್ತಿನ ಸೃಷ್ಟಿ, ಲಯಗಳಿಗೆ ಕರ್ತನಾದವನು ನೀನೇ ಎಂದು ಹೊಗಳಿ ಭೂ ಭಾರವನ್ನು ಇಳಿಸಬೇಕೆಂದು ಪ್ರಾರ್ಥಿಸಿದನು. ಅಷ್ಟೇ ಅಲ್ಲದೆ ಕೇವಲ ಧರ್ಮರಕ್ಷಣೆಗಾಗಿ ನೀನು ಶರೀರವನ್ನು ಧರಿಸಿ ಅವತರಿಸುತ್ತೀಯೇ ಎಂದು ಹೇಳಿ ಮತ್ತೆ ಅವತಾರವನ್ನು ಎತ್ತಬೇಕೆಂದು ಬ್ರಹ್ಮನು ಕೇಳಿಕೊಂಡನು. ಆಗ ಭಗವಂತನು ಬ್ರಹ್ಮನಿಗೆ ಸುಪ್ರೀತನಾಗಿ ವಿಶ್ವರೂಪದಿಂದ ದರ್ಶನವನ್ನಿತ್ತು "ಭೋ ಬ್ರಹ್ಮದೇವ ಈ ದೇವತೆಗಳೊಡನೆ ಬಂದು ನನ್ನಿಂದ ನೀನು ಬಯಾಸುವುದು ಏನನ್ನು? ಎಲ್ಲವನ್ನು ತಿಳಿಸು, ಅದು ನೆರವೇರಿತೆಂದೇ ತಿಳಿ ಎಂದು ಅಭಯದ ಮಾತುಗಳನ್ನು ಮಹಾವಿಷ್ಣುವು ಆಡಿದನು. ದೇವತೆಗಳು ಮತ್ತೆ ಮತ್ತೆ ವಿಷ್ಣುವನ್ನು ಸ್ತುತಿಸುತ್ತಾ ಇದ್ದರು. ಅವರು ವಿಶ್ವರೂಪವನ್ನು ನೋಡಿ ಭಯದಿಂದ ತತ್ತರಿಸಿ ಹೋದರು. ಪರಾಶರರು ಕಥೆಯನ್ನು ಮುಂದುವರಿಸುತ್ತಾ ಮೈತ್ರೇಯರಿಗೆ ಹೀಗೆ ದೇವಾನುದೇವತೆಗಳು ಸ್ತುತಿಸುತ್ತಿರಲಾಗಿ ಭಗವಾನ್ ಸರ್ವೇಶ್ವರನು ಬೆಳ್ಳಗಿರುವ ಒಂದು, ಕಪ್ಪಾಗಿರುವ ಇನ್ನೊಂದು ಹೀಗೆ ತನ್ನ ಎರಡು ಕೇಶಗಳನ್ನು ಕಿತ್ತುಹಾಕಿ ಇಂತೆಂದನು,

**ಉವಾಚ ಚ ಸುರಾನೇತೌ ಮತ್ತೇಶೌ ವಸುಧಾತಲೇ**
**ಅವತೀರ್ಯ ಭುವೋ ಭಾರಕ್ಲೇಶ ಹಾನಿಂ ಕರಿಷ್ಯತಃ**
**ಸುರಾಶ್ಚ ಸಕಲಾಸ್ಸಾಂಶೈ ರವತೀರ್ಯ ಮಹೀತಲೇ**

**ಕುರ್ವಂತು ಯುದ್ಧಮುನ್ಮತ್ತೈಃ ಪೂರ್ವೋತ್ಪನ್ನೈ ಮಹಾಸುರೈ**

**ತತಃ ಕ್ಷಯಮಶೇಷಾಸ್ತೇ ದೈತೇಯಾಧರಣೀತಲೇ**

**ಪ್ರಯಾಸ್ಯಂತಿ ನ ಸಂದೇಹೋ ಮದ್‌ದೃಕ್ಪಾತ ವಿಚೂರ್ಣಿತಾಃ**

**ವಸುದೇವಸ್ಯ ಯಾ ಪತ್ನೀ ದೇವಕೀ ದೇವತೋಪ ಮಾ**

**ತತ್ರಾಯಮಷ್ಟಮೋ ಗರ್ಭೋ ಮತ್ತೇಶೋ ಭವಿತಾ ಸುರಃ**

**ಅವತೀರ್ಯ ಚತತ್ರಾಯಂ ಕಂಸ ಘಾತಯಿತಾ ಭುವಿ**

**ಕಾಲನೇಮಿಂ ಸಮುದ್ಭೂತಮಿತ್ಯುಕ್ತಾನ್ತರ್ದಧೇ ಹರಿಃ**

(ವಿ.ಪು. ಸಂ ಪಂಚಮಾಂಶ ಲಿ.1 ಶ್ಲೋಕ 60 ರಿಂದ 64)

ನನ್ನ ಈ ಎರಡು ಕೂದಲುಗಳ ಭೂಮಿಯಲ್ಲಿ ಅವತರಿಸಿ ಭೂ ಭಾರದಿಂದ ಉಂಟಾದ ಕಷ್ಟವನ್ನು, ಹಾನಿಯನ್ನು ಪರಿಹರಿಸುತ್ತದೆ. ಎಲ್ಲ ದೇವತೆಗಳೂ ತಮ್ಮ ತಮ್ಮ ಅಂಶಗಳಿಂದ ಭೂಲೋಕದಲ್ಲಿ ಅವತರಿಸಿ ಉನ್ಮತ್ತರಾದ ಮಹಾದೈತ್ಯರೊಡನೆ ಯುದ್ಧವನ್ನು ಮಾಡತಕ್ಕದ್ದು. ಇದರಿಂದ ಭೂಲೋಕದಲ್ಲಿರುವ ಸಕಲ ದೈತ್ಯರು ನಿರ್ನಾಮವಾಗುವರು. ಇದರಲ್ಲಿ ಸಂದೇಹವೇ ಇಲ್ಲ, ನನ್ನ ದೃಷ್ಟಿಪಾತದಿಂದಲೇ ಅವರು ಬಳಲಿ ಬೆಂಡಾಗುತ್ತಾರೆ. ವಸುದೇವನಿಗೆ ದೇವತಾ ಸದೃಶಳಾದ ದೇವಕಿಯೆಂಬ ಪತ್ನಿ ಇದ್ದಾಳಷ್ಟೆ. ಎಲೈ ದೇವತೆಗಳೇ ನನ್ನ ಈ ಕೂದಲು (ಕಪ್ಪಾದದ್ದು) ಅವಳಲ್ಲಿ ಅಷ್ಟಮ ಗರ್ಭವಾಗಿ ಅವತರಿಸಿ ಕಂಸನನ್ನು ಸಂಹರಿಸುತ್ತದೆ. ಕಾಲನೇಮಿಯೇ ಕಂಸನಾಗಿ ಹುಟ್ಟಿದ್ದಾನೆ ಎಂದು ಶ್ರೀವಿಷ್ಣುವು ಅದೃಶ್ಯನಾದನು.

ಪ್ರಕೃತ ಭಗವಂತನು ತನ್ನ ಅವತಾರದ ಬಗ್ಗೆ ಹೇಳುತ್ತಾ ಕೂದಲನ್ನು ಏಕೆ ತೋರಿಸಿದ ಎಂಬ ಸಂಶಯ ನಮ್ಮಲ್ಲಿ ಉಂಟಾಗುತ್ತದೆ. ಅದು ಮತ್ತಾವುದು ಅಲ್ಲ ತನ್ನ ಪಾಲಿಗೆ ಭೂ ಭಾರವನ್ನು ಇಳಿಸುವುದು. ಅತಿ ಸುಲಭವಾದದ್ದು, ಲೀಲಾಮಾತ್ರವಾದದ್ದು ಎಂಬುದಕ್ಕೆ ಸೂಚ್ಯವಾಗಿ ಕೂದಲನ್ನು ತೋರಿಸಿದನು, ಇತರ ದೇವತೆಗಳ ಅವತಾರವೂ ಸಹ ಲೀಲೆಗಾಗಿ ಮಾತ್ರ ಸಹಾಯಕ್ಕಾಗಿ ಅಲ್ಲ ಎಂಬುದನ್ನು ಸೂಚಿಸುತ್ತದೆ.

ಕಪ್ಪು ಕೂದಲು, ಬಿಳಿಯ ಕೂದಲುಗಳು ಶ್ರೀಕೃಷ್ಣ, ಬಲರಾಮರ

ಅವತಾರವೆಂದು ಇಂಗಿತವಾಗಿ ತಿಳಿದುಕೊಳ್ಳುವುದು ಸೂಕ್ತವೆನಿಸುತ್ತದೆ. ಶ್ರೀಕೃಷ್ಣನಾಗಲಿ, ಬಲರಾಮನ ಅವತಾರವಾಗಲಿ ಎರಡೂ ಭಗವಾನ್ ವಿಷ್ಣುವಿನ ಅಂಶಾಂಶಸಂಭೂತವಾದದ್ದು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಭಗವಂತನಿಗೆ ಮತ್ತೊಮ್ಮೆ ದೇವತೆಗಳಲ್ಲಿ ನಮಸ್ಕರಿಸಿ ತಮ್ಮ ಸುಮೇರುಪರ್ವತಕ್ಕೆ ತೆರಳಿದರು. ಅನಂತರ ತಮ್ಮ ತಮ್ಮ ಅಂಶಗಳಿಂದ ಭೂಲೋಕದಲ್ಲಿ ಅವತರಿಸಿದರು. ಇಷ್ಟೆಲ್ಲಾ ಆಯಿತಲ್ಲಾ ನಾರದರು ಸುಮ್ಮನಿರಬಹುದಾಗಿತ್ತಲ್ಲಾ ! ಹಾಗಿರಲಿಲ್ಲ ಕಂಸವಧೆಗೆ ವೇದಿಕೆ ತಯಾರಾಗಬೇಕಾಗಿತ್ತು ಅಲ್ಲವೇ? ಆದ್ದರಿಂದಲೇ ಏನೋ ಎಂಬಂತೆ ತ್ರಿಲೋಕ ಸಂಚಾರಿ ನಾರದರು ಕಂಸನ ಬಳಿಗೆ ಬಂದು ಈ ಭೂಲೋಕ ರಕ್ಷಣೆಗಾಗಿ ಮಹಾವಿಷ್ಣುವು ಎಂಟನೆಯ ಗರ್ಭದಲ್ಲಿ ಅವತರಿಸುವನೆಂದು ಹೇಳಿದರು.

**ಕಂಸಾಯ ಚಾಷ್ಟಮೋ ಗರ್ಭೋ ದೇವಕ್ಯಾ ಧರಣೀಧರ**
**ಭವಿಷ್ಯತೀತ್ಯಾಚ ಚಷೇ ಭಗವನ್ನಾರದೋಮುನಿಃ**
**ಕಂಸೋಪಿ ತದುಪಶ್ರುತ್ಯ ನಾರದಾತ್ಕುಪಿತಸ್ತತಃ**
**ದೇವಕಿಂ ವಸುದೇವಂ  ಚಗೃಹೇ ಗುಪ್ತಾವಧಾರಯತ್**
**ವಸುದೇವೇನ ಕಂಸಾಯ ತೇನೈವೋಕ್ತಂ ಯಥಾಪುರಾ**
**ತಥೈವ ವಸುದೇವೋಪಿ ಪುತ್ರಮರ್ಪಿವಾನ್ ದ್ವಿಜಃ**
**ಹಿರಣ್ಯಕಶಿಪೋ ಪುತ್ರಾಕ್ಷಡ್ಗರ್ಭಾ ಇತಿ ವಿಶ್ರುತಾಃ**
**ವಿಷ್ಣುಪ್ರಯುಕ್ತಾ ತಾನ್ನಿದ್ರಾ ಕ್ರಮಾದ್ಗರ್ಭಾನಯೋಜಯತ್**

(ವಿ.ಪು.2ನೇಸಂ ಪಂಚಮಾಂಶ ಅ.1 ಶ್ಲೋಕ 66 ರಿಂದ 69)

ಕಂಸನು ಆ ಮಾತನ್ನು ನಾರದರಿಂದ ಕೇಳಿದೊಡನೆಯೇ ಅತ್ಯಂತ ಕೋಪಾವಿಷ್ಟನಾಗಿ ದೇವಕಿಯನ್ನು ವಸುದೇವನನ್ನೂ ಕಾರಾಗೃಹದಲ್ಲಿ ಬಂಧಿಸಿಟ್ಟನು. ವಸುದೇವನು ಈ ಹಿಂದೆ ಕಂಸನಿಗೆ ಏನು ಹೇಳಿದ್ದನೋ ಅದೇ ಪ್ರಕಾರ ದೇವಕಿಯಲ್ಲಿ ಜನಿಸಿದ್ದ ಪ್ರತಿಯೊಬ್ಬ ಪುತ್ರನನ್ನೂ ಕಂಸನಿಗೆ ಒಪ್ಪಿಸುತ್ತಿದ್ದನು. ಅದುವರೆಗೆ ದೇವಕಿಗೆ ಹುಟ್ಟಿದ ಆರು ಮಕ್ಕಳು ಹಿಂದಿನ ಜನ್ಮದಲ್ಲಿ ಹಿರಣ್ಯಕಶಿಪುವಿನ ಪುತ್ರರಾಗಿದ್ದರೆಂದು ತಿಳಿದು ಬರುತ್ತದೆ.

ಇದರ ಬಗ್ಗೆ ಹರಿವಂಶದಲ್ಲಿ ಪೂರ್ವಕಥೆಯು ಒಂದಿದೆ. ಕಾಲನೇಮಿಗೆ ಷಡ್ಗರ್ಭರೆಂಬ ಆರು ಮಕ್ಕಳಿದ್ದರು. ಅವರು ಒಮ್ಮೆ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ದೇವಾದಿಗಳಿಂದ ತಮಗೆ ಮರಣವಾಗದಂತೆ ವರವನ್ನು ಪಡೆದುಕೊಂಡು ಇದರಿಂದ ಅವರ ತಂದೆ ಹಿರಣ್ಯಕಶಿಪುವಿಗೆ ಕೋಪಬಂದು ಅವರನ್ನು ಶಪಿಸಿದನು. ಎಲೈ ಮಕ್ಕಳೇ ನನ್ನನ್ನು ಅತಿಕ್ರಮಿಸಿ ನನಗೆ ಶತ್ರುವಾದ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದ್ದೀರಿ. ಷಡ್ಗರ್ಭರೆಂದು ನಿಮಗೆ ನಾಮಕರಣ ಮಾಡಿದ ನಿಮ್ಮ ತಂದೆಯೇ ನಿಮ್ಮನ್ನು ಕೊಂದು ಹಾಕಲಿ ಎಂದು (ಹರಿವಂಶ 2.2 23) ಈ ಆರು ಜನ ದೈತ್ಯರು ಸಮುದ್ರದಲ್ಲಿ ಜಲಶಾಯಿಗಳಾಗಿದ್ದರು. ಯೋಗಮಾಯೆಯು ಅವರನ್ನು ಒಬ್ಬೊಬ್ಬರನ್ನಾಗಿ ದೇವಕೀ ಗರ್ಭಕ್ಕೆ ತಂದು ಕ್ರಮವಾಗಿ ಸೇರಿಸಿದಳು. ಕಂಸನು ಪೂರ್ವಜನ್ಮದಲ್ಲಿ ಹೀಗಾಗಿ ಹಿರಣ್ಯಕಶಿಪುವಿನ ಶಾಪದ ಪ್ರಯುಕ್ತ ಕಂಸನು ಗರ್ಭಸ್ಥರಾದ ಆರು ಮಂದಿಯನ್ನು ಕೊಂದನು. ಇತ್ತ ವಿಷ್ಣುವಿನಿಂದ ಪ್ರೇರಿತಳಾದ ಯೋಗಮಾಯಾ ಯೋಗನಿದ್ರಾ ಯಾರಿವಳು ಎಂಬುದನ್ನು ನಾವು ತಿಳಿಯೋಣ. ಯೋಗ ನಿದ್ರೆಯೆಂದರೆ ವಿಷ್ಣುವಿನ ಮಹಾಮಾಯೆಯೆಂಬ ಶಕ್ತಿ ಅವಳನ್ನು ಅವಿದ್ಯಾ ಎಂದು ಕರೆಯುವುದುಂಟು. ಅವಳಿಂದಲೇ ಸಕಲ ಜಗತ್ತು ಅಜ್ಞಾನದಲ್ಲಿ ಸಿಕ್ಕಿತೊಳಲಾಡುತ್ತಿದೆ. ಆ ಯೋಗ ನಿದ್ರೆಯನ್ನು ಕುರಿತು ಭಗವಾನ್ ಶ್ರೀಹರಿಯು ಹೀಗೆಂದನು.

**ನಿದ್ರೇ ಗಚ್ಛ ಮಮಾದೇ ಶಾತ್ಪಾತಾಲ ತಲ ಸಂಶ್ರಯಾನ್**
**ಏಕೈಕ ತ್ವೇನ ಷಡ್‌ಗರ್ಬಾನ್ ದೇವಕೀ ಜಠರಂನಯ ॥**
**ಹತೇಷು ತೇಷು ಕಂಸೇನ ಶೇಷಾಖ್ಯೋಂ ಶಸ್ತತೋಮಮ ।**
**ಅಂಶಾಂಶೇನೋದರೇ ತಸ್ಯಾಸ್ಸಪ್ತಮಃ ಸಂಭವಿಷ್ಯತಿ ॥**
**ಗೋಕುಲೇ ವಸುದೇವಸ್ಯ ಭಾರ್ಯಾನ್ಯಾ ರೋಹಿಣೀಸ್ಥಿತಾ ।**
**ತಸ್ಯಾಸ್ಯ ಸಂಭೂತಿಸಮಂ ದೇವಿ ನೇಯ ಸ್ತ್ವಯೋದರಂ ॥**
**ಸಪ್ತಮೋ ಭೋಜರಾಜಸ್ಯ ಭಯಾದ್ರೋದೋಪರೋಧತಃ ।**
**ದೇವಕ್ಯಾಃ ಪತಿತೋ ಗರ್ಭ ಇತಿ ಲೋಕೋ ವಧಿಷ್ಯತಿ**
**ಗರ್ಭಸಂಕರ್ಷಣಾತ್ಸೊಂಥಲೋಕೆ ಸಂಕರ್ಷಣೇತಿವೈ**

ಸಂಜ್ಞಾಮವಾಪ್ಸ್ಯತೇ ವೀರಶ್ವೇತಾದ್ರಿ ಶಿಖರೋಪಮಃ
ತತೋಹಂ ಸಂಭವಿಷ್ಯಾಮಿ ದೇವಕೀ ಜಠರೇ ಶುಭೇ
ಗರ್ಭೇ ತ್ವಯಾ ಯಶೋಧಾಯಾಗಂತವ್ಯಮ ವಿಲಂಬಿತಮ್
ಪ್ರಾವೃಟ್ಕಾಲೇಚ ನಭಸಿ ಕೃಷ್ಣಾಷ್ಟ ಮ್ಯಾಮಹಂನಿಶಿ
ಉತ್ಪತ್ಸ್ಯಾಮಿ ನಮಮ್ಯಾಮತು ಪ್ರಸೂತಿಂ ತ್ವಮವಾಪ್ಸ್ಯಸಿ
ಯಶೋದಾಶಯನೇ ಮಾಂತು ದೇವಕ್ಯಾಸ್ತ್ವ ಮನಿಂದತೇ
ಮತ್ಶಕ್ತಿ ಪ್ರೇರಿತ ಮತಿರ್ವಸುದೇವೋ ನಯಿಷ್ಯತಿ
ಕಂಸಶ್ಚ ತ್ವಾಮುಪಾದಾಯ ದೇವಿ ಶೈಲಶಿಲಾತಲೇ
ಪ್ರಕ್ಷೇಪ್ಸ್ಯತ್ಯನ್ತರಿಷೇ ಚ ಸಂಸ್ಥಾನಂ ತ್ವಮವಾಪ್ಸ್ಯಸಿ
ತತಸ್ತ್ವಾಂ ಶತದೃಕ್ ವಕ್ರಃ ಪಣಮ್ಯ ಮಮಗೌರವಾತ್
ಪ್ರಣಿಪತಾನತಶಿರಾ ಭಗಿನೀತ್ವೇ ಗೃಹೀಷ್ಯತಿ
ತ್ವಂ ಚ ಶುಮ್ಭುಮನಿಶು ಮ್ಖಾದೀನ್ ಹತ್ವಾ ದೈತ್ಯಾನ್ಯ ಹಸ್ರಶಃ
ಸ್ಥಾನೈರನೇಕೈ ಪೃಥಿವೀಮಶೇಷಾಂ ಮಂಡಯಿಷ್ಯಸಿ
ತ್ವಂ ಭೂತಿಃ ಸನ್ನತಿ ಷಾಂತಿ ಕಾಂತಿರ್ದ್ಯೌಃ ಪೃಥಿವೀಧೃತಿಃ
ಲಜ್ಜಾ ಪುಷ್ಠರುಷಾಯಿತು ಕಾಚಿದನ್ಯಾ ತ್ವಮೇವಸಾ ॥
ಯೇ ತ್ವಾಮಾರ್ಯೇ ದುರ್ಗೇತಿ ವೇದ ಗರ್ಭಾಂತೇತಿಚ
ಭದ್ರೇತಿ ಭದ್ರಕಾಲೀತಿ ಕ್ಷೇಮ ಭಾಗ್ಯದೇತಿ ಚ ॥
ಪ್ರಾತಶ್ಚವಾಪರಾಹ್ಣೇ ಚ ಸ್ತೋಷ್ಯನ್ನ್ಯಾ ನಮ್ರಮೂರ್ತಯಃ
ತೇಷಾಂ ಹಿ ಪ್ರಾರ್ಥಿತಂ ಸರ್ವಂ ಮತ್ಪ್ರ ಸಾದಾದ್ಭವಿಷ್ಯತಿ ॥

(ವಿ.ಪು. 2ನೇಸಂ ಪಂಚಮಾಂಶ ಅ.1ಶ್ಲೋಕ 71 ರಿಂದ 84)

ಯೋಗನಿದ್ರೆಯನ್ನು ಕುರಿತು ಭಗವಾನ್ ವಿಷ್ಣು ಹೀಗೆಂದು “ ಎಲೈ ಯೋಗಮಾಯಾ ಪಾತಾಳದಲ್ಲಿರುವ ಆರು ಗರ್ಭಗಳನ್ನು ಒಂದೊಂದಾಗಿ ದೇವಕಿಯ ಉದರಕ್ಕೆ ಸೇರಿಸು. ಅವರೆಲ್ಲರೂ ಕಂಸನಿಂದ ಹತರಾದ ಮೇಲೆ ಶೇಷನೆಂಬ ನನ್ನ ಅಂಶಪುರುಷನು ತನ್ನ ಅಂಶಾಂಶ ದೇವಕಿಯ ಏಳನೆಯ

ಗರ್ಭವಾಗಿ ಸೇರುವನು. ವಸುದೇವನ ಮತ್ತೊಬ್ಬ ಮಡದಿ ರೋಹಿಣಿಯು ಗೋಕುಲದಲ್ಲಿದ್ದಾಳೆ. ದೇವಿ ನೀನು ಈ ಏಳನೆಯ ಗರ್ಭವನ್ನು ರೋಹಿಣಿಗೆ ಗರ್ಭವಾದ ರೀತಿಯಲ್ಲಿ ಅವಳ ಉದರಕ್ಕೆ ಸೇರಿಸಬೇಕು. ಭೋಜ ರಾಜನಾದ ಕಂಸನು ಕಾರಾಗೃಹದಲ್ಲಿ ಬಂಧಿಸಿ ಪೀಡಿಸಿದ್ದರಿಂದ ಭಯವಾಗಿ ದೇವಕಿಗೆ ಗರ್ಭಸ್ರಾವವಾಯಿತೆಂದು (ಆಕರ್ಷಣದಿಂದ) ಆ ಶೇಷನು ಸಂಕರ್ಷಣನೆಂಬ ಹೆಸರನ್ನು ಪಡೆಯುವನು. ಆ ಮಹಾವೀರನು ಶ್ವೇತಪರ್ವತಕ್ಕೆ ಸದೃಶನಾಗಿ ಕಾಣುತ್ತಾನೆ. ಅನಂತರ ನಾನು ದೇವಕಿಯ ಗರ್ಭದಲ್ಲಿ ಯಶೋದೆಯ ಗರ್ಭವನ್ನು ಪ್ರವೇಶಿಸಿಬೇಕು. ವರ್ಷಕಾಲದ ಶ್ರಾವಣ ಬಹುಳ ಅಷ್ಟಮಿ ಜನಿಸುವೆ. ಹೇ ಗುಣಶಾಲಿನಿ ನೀನು. ನನ್ನ ಪ್ರೇರಣೆಯಂತೆ ವಸುದೇವನು ನನ್ನನ್ನು ದೇವಕಿಯ ಬಳಿಯಿಂದ ಕರೆದೊಯ್ದು ಯಶೋದೆಯ ಹಾಸಿಗೆಯಲ್ಲಿ ಮಲಗಿಸಿ ನಿನ್ನನ್ನು ತಂದು ದೇವಕಿಯ ಹಾಸಿಗೆಯಲ್ಲಿ ಮಲಗಿಸುವನು. ಅನಂತರ ಕಂಸನು ಬಂದು ನಿನ್ನನ್ನು ಎತ್ತಿ ಶೈಲಶಿಲಾತಲದ ಮೇಲೆ ಬಡಿಯಲು ಯತ್ನಿಸಿದಾಗ ಹೇ ದೇವಿ, ನೀನು ಅಂತರಿಕ್ಷವನ್ನು ಸೇರಿ ನಿಲ್ಲುವೆ. ಆಗ ಸಹಸ್ರಾಕ್ಷನಾದ ದೇವೇಂದ್ರನು ನನ್ನ ಮೇಲಿನ ಗೌರವದಿಂದಾಗಿ ನಿನಗೆ ತನ್ನ ಸೋದರಿಯೆಂದೇ ಸ್ವೀಕರಿಸುವಾಗ ಇಂದಿಗೂ  ಯೋಗಮಾಯೆ ದುರ್ಗಾ ಮಾತೆಯನ್ನು ವಿಷ್ಣುವಿನ ಸೋದರಿಯೆಂದು ಅನಂತರ ನೀನು ಶುಂಭ ನಿಶುಂಬ ಮೊದಲಾದ ಸಾವಿರಾರು ದೈತ್ಯರನ್ನು ಸಂಹರಿಸುವೆಯಲ್ಲದೆ ಅನೇಕ ಸ್ಥಳಗಳಲ್ಲಿ ನೆಲೆಸಿ ಸಮಸ್ತ ಪೃಥ್ವಿಯನ್ನು ಪಾವನಗೊಳಿಸುವೆ. ಭೂತಿ, ಲಜ್ಜಾ, ಸನ್ನತಿ, ಕ್ಷಾಂತಿ, ಕಾಂತಿ, ಅಂತರಿಕ್ಷ, ಪೃಥಿವೀ, ಧೃತಿ, ಪುಷ್ಠಿ, ಉಷಾ – ನೀನೇ ಅಲ್ಲವೇ? ಇನ್ನಾವ ಸ್ತ್ರೀ ದೇವತೆ ಉಂಟೋ ಅದೆಲ್ಲವೂ ನೀನೇ.

**ಯೇತ್ವಾಮಾರ್ಯೇತಿ ದುರ್ಗೇತಿ ವೇದಗರ್ಭಾಂಬಿಕೇತಿಚ**
**ಭದ್ರೇತಿ ಭದ್ರಕಾಲೀತಿ ಕ್ಷೇಮದಾ ಭಾಗ್ಯದೇತಿಚ**
**ಪ್ರಾತಶ್ಚೈವಾಪರಾಹ್ಣೇಚ ಸ್ತೋಷ್ಯಂತಾನಮ್ರಮೂರ್ತಯಃ**
**ತೇಷಾಂ ಪ್ರಾರ್ಥಿತಂ ಸರ್ವ ಮತ್ಪ್ರಸಾದಾದ್ಭವಿಷ್ಯತಿ**
**ತೇಸರ್ವೇ ಸರ್ವದಾ ಭದ್ರೇ ಮತ್ಪ್ರಸಾದಾದ ಸಂಶಯಮ್**

**ಅಸಂದಿಗ್ಧಾ ಭವಿಷ್ಯಂತಿ ಗಚ್ಛ ದೇವಿ ಯಥೋದಿತಮ್**

(ವಿ.ಪು. 2ನೇಸಂ ಪಂ.ಅ. ಪೃಥುಮೋಧ್ಯಾಯ ಶ್ಲೋಕ83,84,8)

ಯಾರು ಯಾರು ನಿನ್ನನ್ನು ಆರ್ಯೆಯೆಂದೂ, ವೇದಗರ್ಭೆಯೆಂದೂ, ಅಂಬಿಕೆಯೆಂದೂ ಹಾಗೆಯೇ ಭದ್ರಾ, ಭದ್ರಕಾಲ, ಕ್ಷೇಮದಾ, ಭಾಗ್ಯಾದಾ ಎಂದು ನಮ್ರತೆಯಿಂದ ತಲಾಬಾಗಿ ಪ್ರಾತ ಸಂಧ್ಯಾಕಾಲಗಳಲ್ಲಿ ಸ್ತುತಿಸುತ್ತಾರೋ ಅವರ ಸಮಸ್ತ ಇಷ್ಟಾರ್ಥವು ನನ್ನ ಅನುಗ್ರಹದಿಂದ ಕೈಗೂಡವುದು. ಹೇಭದ್ರೆ (ನಿನ್ನ ಮೂಲಕ ನನಗೆ ಸೇರುವ) ಆ ಎಲ್ಲ ಕಾಮನೆಗಳೂ ನಿಃಸಂಶಯಾಗಿ ಸರ್ವದಾ ನೆರವೇರುವುವು. ಇದರಲ್ಲಿ ಯಾವ ಸಂದೇಹ ಇಲ್ಲ ಎಂದು ವಿಷ್ಣು ದುರ್ಗೆಗೆ ಹೇಳಿದನು (ಭಗವಂತನ ಮಾತಿನಂತೆ ಇಡೀ ಭಾರತದಲ್ಲಿ ಅಷ್ಟೇಕೆ ಪ್ರಪಂಚದ ಹಲವಾರು ಕಡೆ ಶ್ರೀಕೃಷ್ಣನ ಹಾಗೂ ದುರ್ಗೆಯ ದೇವಾಲಯಗಳು ಅಸಂಖ್ಯಾತ ಇವೆ ಅಲ್ಲವೇ) ದೇವಿ ನಾನು ಹೇಳಿದಂತೆ ನಿನ್ನ ಕರ್ತವ್ಯದ ಸ್ಥಳಕ್ಕೆ ಹೊರಡು ಎಂದನು ವಿಷ್ಣು ಮುಂದೆ ಯೋಗಮಾಯೆಯು ವಿಷ್ಣುವು ಹೇಳಿದಂತೆ ಮಾತನ್ನು ಚಾಚೂ ತಪ್ಪದೆ ತನ್ನ ಕಾರ್ಯವನ್ನು ನೆರವೇರಿಸಲು ಉದ್ಯುಕ್ತಳಾಗುತ್ತಾಳೆ ಭಗವಾನ್ ವಿಷ್ಣುವಿನ ಆದೇಶದಂತೆ ಜಗನ್ಮಾತೆಯಾದ ಯೋಗನಿದ್ರೆಯ ಆರು ಗರ್ಭಗಳನ್ನು ದೇವಕಿಯ ಗರ್ಭದಲ್ಲಿ ಕ್ರಮವಾಗಿ ಸೇರಿಸಿದಳು. ಏಳನೆಯ ಗರ್ಭದ ಆಕರ್ಷಣೆಯನ್ನೂ ಸಹ ಮಾಡಿದಳು. (ಬಲರಾಮ) ಏಳನೆಯ ಗರ್ಭವು ರೋಹಿಣಿಯ ಉದರವನ್ನು ಸೇರಲಾಗಿ ತ್ರಿಲೋಕಗಳ ಉಪಕಾರಕ್ಕಾಗಿ ಶ್ರೀಹರಿಯ ದೇವಕಿಯ ಗರ್ಭವನ್ನು ಪ್ರವೇಶಿಸಿದನು. ಭಗವಂತನ ಆಜ್ಞೆಯಂತೆ ಅದೇ ದಿನವೇ ಯೋಗನಿದ್ರೆಯೂ ಸಹ ಯಶೋದೆಯ ಗರ್ಭವನ್ನು ಪ್ರವೇಶಿಸಿದನು. ಈ ಪ್ರಕಾರವಾಗಿ ವಿಷ್ಣುವಿನ ಅಂಶವು ಭೂಲೋಕಕ್ಕೆ ಬರಲಾಗಿ ಗ್ರಹಗಳೆಲ್ಲ ತಮ್ಮ ಕ್ರಮವರಿತು ಸಂಚರಿಸತೊಡಗಿದವು. ಋತುಗಳು ಶುಭಕರವಾಗಿ ಪ್ರವೃತ್ತವಾದವು. ಆ ಸಮಯದಲ್ಲಿ ದೇವಕಿಯು ಪ್ರಖರವಾದ ತೇಜಸಿನಿಂದ ಪ್ರಜ್ವಲಿಸತೊಡಗಿದಳು. ಅಲ್ಲಿದ್ದ ಪುರುಚರಿಯಾಗಿ ಸ್ತ್ರೀಯರಿಗೆ ಗೋಚರಿಸದಂತೆ ದೇವತೆಗಳು ಅದೃಶ್ಯವಾಗಿ ಬಂದು ನಿಂತು ಭಗವಂತನನ್ನು ಸ್ತುತಿಸುತ್ತಿದ್ದರು. ಈ ಪ್ರಕಾರವಾಗಿ ದೇವತೆಗಳಿಂದ ಸ್ತುತಿಸಲ್ಪಟ್ಟ ದೇವಕಿಯು ಜಗದ್ರಕ್ಷಕನಾದ ಪುಂಡರೀಕಾಕ್ಷನನ್ನು ತನ್ನ ಗರ್ಭದಲ್ಲಿ ಧರಿಸಿದಳು. ಅನಂತರ ಜಗತ್ತೆಂಬ ಕಮಲವನ್ನು ಅರಳಿಸುವುದಕ್ಕಾಗಿ ಮಹಾತ್ಮನಾದ ಅಚ್ಯುತನೆಂಬ

ಭಗವಂತನೇ ಅವತರಿಸಲಾಗಿ ಸಜ್ಜನರಿಗೆ ಅತ್ಯಾನಂದ ಉಂಟಾಯಿತು. ಚಂಡಮಾರುತಗಳು ಶಾಂತವಾದವು ನದಿಗಳು ತಿಳಿಯಾದುವು. ಸಮುದ್ರಗಳು ತಮ್ಮ ಘೋಷದಿಂದ ಮನೋಹರವಾದ ವಾದ್ಯವನ್ನು ನುಡಿಸಿದವು ಗಂಧರ್ವರಾಜರು ಹಾಡಿದರು ಅಪ್ಸರೆಯರು ಕುಣಿದರು ದೇವತೆಗಳು ಅಂತರಿಕ್ಷದಲ್ಲಿ ನಿಂತು ಭೂಮಿಯ ಮೇಲೆ ಹೂಮಳೆಗರೆದರು. ಅರಳಿದ ತಾವರೆಯ ದಳದಂತೆ ಕಾಂತಿಯುತನಾದವನು ಚತುರ್ಬಾಹುಯುತನಾಗಿ ವಕ್ಷಸ್ಥಳದಲ್ಲಿ ಶ್ರೀವತ್ಸ ಚಿಹ್ನವನ್ನು ಧರಿಸಿದವನೂ ಆದ ಶಿಶುವನ್ನು ನೋಡಿ ವಸುದೇವನು ಹೀಗೆಂದನು

ವಸುದೇವ ಉವಾಚ

**ಜಾತೋಸಿ ದೇವದೇವೇಶ ಶಂಖ ಚಕ್ರ ಗದಾಧರಮ್**

**ದಿವ್ಯರೂಪಮಿದಂ ದೇವ ಪ್ರಸಾದೇನೋಪಸಂಹಾರ**

**ಅದ್ಯೈವ ದೇವ ಕಂಸೋಽಯಂ ಕುರುತೇ ಮಮಘಾತನಮ್**

**ಅವತೀರ್ಣ ಇತಿಜ್ಞಾತ್ವಾ ತ್ವಮಸ್ಮಿನ್ ಮಮ ಮಂದಿತರೇ**

**ದೇವಕ್ಯುವಾಚ ಯೋಽನನ್ತರೂಪೋಽ ಖಿಲ ವಿಶ್ವರೀಪೋ**

**ಗರ್ಭೇಽಪಿ ಲೋಕಾನ್ವಪುಷಾಬಿಬರ್ಷಿ**

**ಪ್ರಸೀದತಾ ಮೇಷಸ ದೇವ ದೇವೋ**

**ಯೋಽ ಮಾಯಯಾ ವಿಷ್ಕೃತ ಬಾಲರೂಪಃ**

**ಉಪಸಂಹರ ಸರ್ವಾತ್ಮನ್ ರೂಪಮೇತಚ್ಚತುರ್ಭುಜಂ**

**ಜಾನಾತು ಮಾವತಾರಂ ತೇ ಕಂಸೋಽಯಂ ದಿತಿಜನ್ಮಜಃ**

(ವಿ.ಪು. 2ನೇಸಂ ಪಂಚಮಾಂಶ ಅ.3. ಶ್ಲೋ10 ರಿಂದ13)

ಹೇ ದೇವ ದೇವೇಶ ನೀನು ಪ್ರಕಟನಾಗಿರುವೆ. ಆದರೆ ಶಂಖಚಕ್ರ ಗಧಾದಾರಿಯಾದ ಈ ದಿವ್ಯರೂಪವನ್ನು ನನ್ನ ಮೇಲೆ ಅನುಗ್ರಹಿಸಿ ನಂತರ ಉಪಸಂಹರಿಸು. ನನ್ನ ಮನೆಯಲ್ಲಿ ನೀನು ಅವತರಿಸಿದೆಯೆಂಬುದನ್ನು ತಿಳಿದರೆ ಕಂಸನು ಈ ದಿನವೇ ನನ್ನನ್ನು ಸಾಯಿಸಿಬಿಡುತ್ತಾನೆ ಎಂದು

ದೇವಕಿಯು ಶ್ರೀಕೃಷ್ಣನಲ್ಲಿ ಹೀಗೆ ಪ್ರಾರ್ಥಿಸಿದಳು ಗರ್ಭದಲ್ಲಿದ್ದರೂ ಸಕಲ ಲೋಕಗಳನ್ನು ರಕ್ಷಿಸುವವನು ನೀನು. ಅನಂತನೂ ವಿಶ್ವರೂಪನೂ ಆದ ಸ್ವಾಮಿ ಪ್ರಸನ್ನ. ನಾನು ಮಾಯೆಯಿಂದ ಬಾಲಕ ರೂಪವನ್ನು ಧರಿಸಿದ ಹೇ ಸ್ವಾಮಿ ಪ್ರಸನ್ನ ನಾನು ಹೇ ಸರ್ವಾತ್ಮಾ ಚತುರ್ಭುಜವುಳ್ಳ ಈ ರೂಪವನ್ನು ಉಪಸಂಹರಿಸು ಎಂದು ಆಗ ಭಗವಂತನು ದೇವಿ ನಾನು ಪುತ್ರನಾಗಬೇಕೆಂದು ಪುತ್ರಾರ್ಥಿನಿಯಾಗಿ ನೀನು ಪೂರ್ವಜನ್ಮದಲ್ಲಿ (ಅದಿತಿ–ಕಶ್ಯಪ) ನನ್ನನ್ನು ಭಜಿಸಿದ್ದೆ. ಅದೀಗ ಸಫಲವಾಯಿತು. ನಿನ್ನ ಉದರದಿಂದ ನಾನು ಜಯಿಸಿದೆ ಎಂದನು. ಹೀಗೆ ನುಡಿದು ಭಗವಂತನು ತನ್ನ ದಿವ್ಯರೂಪವನ್ನು ಉಪಸಂಹರಿಸಿದನು. ವಸುದೇವನಾದರೋ ಆ ಮಗುವನ್ನು ಎತ್ತಿಕೊಂಡು ರಾತ್ರಿಯಲ್ಲಿಯೇ ಹೊರಗೆ ಹೊರಟನು. ವಸುದೇವನು ಹೋಗುವಾಗ ಬಂದೀಖಾನೆಯ ಕಾವಲುಗಾರರೂ ಮಥುರಾ ನಗರದ ದ್ವಾರಪಾಲಕರೂ ಸಹ ಯೋಗನಿದ್ರೆಯಿಂದ ಮೋಹಿತರಾಗಿ ನಿದ್ರಾಪರವಶರಾದರು. ಆ ರಾತ್ರಿ ಮೋಡಗಳು ಜಾಸ್ತಿಯಾಗಿದ್ದು ಮಳೆಗರೆಯುತ್ತಿತ್ತು. ಆದಿಶೇಷನು ತನ್ನ ಹೆಡೆಗಳನ್ನು ಬಿಚ್ಚಿ ವಸುದೇವನ ಮೇಲೆ ಹಿಡಿದು ನೀರನ್ನು ತಡೆಯುತ್ತ ವಸುದೇವನನ್ನು ಹಿಂಬಾಲಿಸಿದನು. ವಿಷ್ಣುವನ್ನು ಎತ್ತಿಕೊಂಡು ಗೋಕುಲಕ್ಕೆ ಹೋಗುತ್ತಿದ್ದ ವಸುದೇವನು ದಾಟಿಹೋಗಬೇಕಿತ್ತು. ಯಮುನೆ ಯಮುನಾನದಿಯನ್ನು ಬಹಳ ಆಳವಾಗಿಯೂ ನೂರಾರು ಸುಳಿಗಳಿಂದ ಕೂಡಿದ್ದಿತು. ತಲೆಯ ಮೇಲೆ ವಿಷ್ಣುವನ್ನು ಎತ್ತಿಕೊಂಡು ಬರುತ್ತಿದ್ದ ವಸುದೇವನಿಗೆ ಮೊಣಕಾಲು ಮಟ್ಟದವರೆಗೆ ನೀರು ಬಂದಿತು. ಅಂತೂ ಭಗವಂತನ ಕೃಪೆಯಿಂದ ವಸುದೇವನು ನದಿಯನ್ನು ದಾಟಿ ಬಂದನು. ಅದೇ ಸಮಯದಲ್ಲಿ ಯೋಗ ನಿದ್ರೆಯಿಂದ ಮೋಹಿತಳಾದ ಯಶೋದೆಯು ಸಹ ನಿದ್ರಾವಶರಾಗಿರಲಾಗಿ ಅದೇ ಯೋಗನಿದ್ರೆಯೆಂಬ ಕನ್ಯೆಯನ್ನು ಪ್ರಸವಿಸಿದಳು. ತೇಜಸ್ವಿಯಾದ ವಸುದೇವನು ಅಲ್ಲಿಗೆ ಹೋಗಿ ಈ ಮಗುವನ್ನು ಅಲ್ಲಿ ಮಲಗಿಸಿ, ಯಶೋದೆಯ ಹಾಸಿಗೆಯಿಂದ ಆ ಹೆಣ್ಣು ಮಗುವನ್ನು ಎತ್ತಿಕೊಂಡು ಬೇಗ ಬೇಗನೇ ಹೊರಟು ಬಂದನು. ಎಚ್ಚರವಾದ ಮೇಲೆ ಯಶೋದೆಯ ನೀಲೋತ್ಪಲದಲ್ಲಿ ಶ್ಯಾಮನಾದ ಪುತ್ರನು ಹುಟ್ಟಿರುವುದನ್ನು ನೋಡಿ ಬಹಳ ಸಂತುಷ್ಟಳಾದಳು. ಇತ್ತ ವಸುದೇವನು ಆ ಹೆಣ್ಣುಮಗುವನ್ನು ತನ್ನ ವಾಸಗೃಹಕ್ಕೆ ಕರೆತಂದು ದೇವಕಿಯ ಹಾಸಿಗೆಯಲ್ಲಿ ಮಲಗಿಸಿ ಮೊದಲಿನಂತೆ ಇದ್ದುಬಿಟ್ಟನು.

ಈ ಮಧ್ಯೆ ಶಿಶುವು ರೋಧಿಸಿತು. ಆ ರೋಧನವನ್ನು ಕೇಳಿ ಕಾವಲುಗಾರರಿಗೆ ಥಟ್ಟನೆ ಎಚ್ಚರವಾಯಿತು. ದೇವಕಿಯು ಪ್ರಸವಿಸಿದಳೆಂದು ಅವರು ಕಂಸನಿಗೆ ಅರಿಕೆ ಮಾಡಿದರು. ಒಡನೆಯೇ ಕಂಸನು ಬಂದು ಆ ಬಾಲಿಕೆಯನ್ನು ಹಿಡಿದೆತ್ತಿದನು. ದೇವಕಿಯು ಗದ್ಗದ ಕಂಠದಿಂದ **ಬಿಡು–ಬಿಡು ಅಣ್ಣಾ** ಎಂದು ತಡೆದರೂ ಕೇಳದೆ ಕಂಸನು ಆ ಮಗುವನ್ನು ಕಲ್ಲು ಬಂಡೆಯ ಮೇಲೆ ಅಪ್ಪಳಿಸಿದನು. ಅಷ್ಟರಲ್ಲಿ ಆ ಬಾಲಿಕೆಯು ಕೈಯಿಂದ ನುಣಿಚಿ ಆಕಾಶವನ್ನಡರಿ ನಿಂತಳು. ಅಷ್ಟೇ ಅಲ್ಲದೆ ಆಯುಧಗಳನ್ನು ಹಿಡಿದು ಅಷ್ಟಮಹಾಭುಜಗಳಿಂದ ಕೂಡಿದ ಬೃಹದಾಕಾರವನ್ನು ತಾಳಿದಳು. ಅವಳು ಅಟ್ಟಹಾಸದಿಂದ ಗಟ್ಟಿಯಾಗಿ ನಕ್ಕು ಕಂಸನನ್ನು ಕುರಿತು "ಎಲೈ ಕಂಸ, ನನ್ನನ್ನು ಅಪ್ಪಳಿಸಿದರೆ ಏನು ಪ್ರಯೋಜನ ? ನಿನ್ನನ್ನು ಯಾವನು ವಧಿಸುವನೋ ಅವನು ಮೊದಲೇ ಜನಿಸಿಬಿಟ್ಟಿದ್ದಾನೆ" ಎಂದಳು. ಹೀಗೆ ಕಂಸನು ನೋಡುನೋಡುತ್ತಿರುವಾಗಲೇ ಆ ದೇವಿಯು ಸಿದ್ಧಪುರುಷರಿಂದ ಸ್ತುತಿಸಲ್ಪಟ್ಟು ಆಕಾಶಮಾರ್ಗದಲ್ಲಿಯೇ ಹೊರಟುಹೋಗಿ ಅಂತರ್ಧಾನಳಾದಳು.

## ಕಂಸನ ಸ್ವಪ್ರಶಂಸೆ

ಕಂಸನು ಯೋಗಮಾಯೆಯ ಭವಿಷ್ಯವಾಣಿಯನ್ನು ಕೇಳಿ ಚಿಂತಾಕುಲನಾಗಿದ್ದರೂ, ಗದ್ಗದಿತನಾಗಿದ್ದರೂ ಅದನ್ನು ತೋರ್ಪಡಿಸಿಕೊಳ್ಳದೆ ಉದ್ವಿಗ್ನಚಿತ್ತನಾಗಿ ತನ್ನ ಪರಾಕ್ರಮವನ್ನು ತಾನೇ ವರ್ಣಿಸಿಕೊಳ್ಳುತ್ತಾನೆ. ಈ ವಿಷಯವನ್ನು ಪರಾಶರರು ಮೈತ್ರೇಯನಿಗೆ ವಿವರಿಸಿದರು. ಕಂಸನು ಪ್ರಲಂಭಾಸುರ, ಕೇಶಿ, ಧೇನುಕ, ಪೂತನಿ ಮುಂತಾದ ಅಸುರರನ್ನು ಕುರಿತು ಹೀಗೆ ರಾಜಸಭೆಯಲ್ಲಿ ಆರ್ಭಟಿಸಿದನು. ಎಲೈ ವೀರರೇ ದುರಾತ್ಮರಾದ ದೇವತೆಗಳು ನನ್ನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದಾರೆ. ವೀರನಾದ ನಾನು ಇವರನ್ನು ಲೆಕ್ಕಿಸುವುದಿಲ್ಲ. ಬಲಹೀನನಾದ ಆ ಇಂದ್ರನಿಂದ ನನಗೆ ಏನಾದೀತು? ಒಂಟಿಯಾಗಿ ಅಲೆದಾಡುತ್ತಿರುವ ಆ ಹರನಿಂದ ಆಗುವುದೇನು? ನಾವು ಎಚ್ಚರಗೆಟ್ಟಿದಾಗ ಛಿದ್ರಾನ್ವೇಷಣೆ ಮಾಡಿ ಅಸುರರನ್ನು ಸಂಹರಿಸುವ ಆ ವಿಷ್ಣುವಿನಿಂದ ಏನು ತಾನೇ ಮಾಡಲು ಸಾಧ್ಯ. ಆದಿತ್ಯರಾಗಲಿ, ವಸುಗಳಾಗಲಿ, ಅಗ್ನಿಗಳಾಗಲಿ, ಇತರ ದೇವತೆಗಳಾಗಲಿ ಏನು ಮಾಡಲು ಸಾಧ್ಯ ? ಆ ದೇವೇಂದ್ರನಾದರೋ ನನ್ನೊಡನೆ ಯುದ್ಧ ಮಾಡಲು

ಬಂದು ಬೆನ್ನಿಗೆ ಬಾಣಗಳನ್ನು ಬಿಗಿಸಿಕೊಳ್ಳುತ್ತಾ ಓಡಿ ಹೋದನು. ಎದೆಗೆ ಬಾಣವನ್ನು ಹೊಡೆಸಿಕೊಳ್ಳಲಿಲ್ಲ ನನ್ನ ರಾಜ್ಯದಲ್ಲಿ ಮಳೆ ಸುರಿಸಬಾರದೆಂದು ಇಂದ್ರನು ಅಂದುಕೊಂಡಿದ್ದ. ಆದರೆ ನಾನು ಬಾಣಪ್ರಯೋಗ ಮಾಡಲಾಗಿ ಮೇಘಗಳೇ ಬೇಕಾದಷ್ಟು ಮಳೆಯನ್ನು ಸುರಿಸಿದವು. ಈ ಪೃಥ್ವಿಯಲ್ಲಿರುವ ಭೂಪಾಲರೆಲ್ಲರೂ ನನ್ನ ಪರಾಕ್ರಮಕ್ಕೆ ಅಂಜಿ ನನ್ನಲ್ಲೇ ಶರಣಾಗಲಿಲ್ಲವೇ ? ನನ್ನ ಗೌರವಕ್ಕೆ ಪಾತ್ರನಾದ ನನ್ನ ಮಾವ ಜರಾಸಂಧನನ್ನು ಬಿಟ್ಟು ಸರ್ವರೂ ನನ್ನಲ್ಲೇ ಶರಣಾದರು. ಎಲೈ ವೀರರೇ ಅವರು ನನ್ನ ಸಂಹಾರಕ್ಕೆ ಯತ್ನಿಸಿದ್ದಾರೆಂಬುದನ್ನು ಕೇಳಿ ನನಗೆ ನಗು ಬರುತ್ತದೆ. ಆದರೂ ಸಹ ಎಲೈ ದೈತ್ಯ ಶ್ರೇಷ್ಠರೇ ದುರ್ಜನರೂ ದುರಾತ್ಮರೂ ಆದ ಆ ದೇವತೆಗಳಿಗೆ ನಾವು ಇನ್ನು ಹೆಚ್ಚಿನ ತೊಂದರೆಯನ್ನು ಮಾಡಲು ಪ್ರಯತ್ನಿಸಬೇಕು. ಈ ಪೃಥ್ವಿಯಲ್ಲಿ ದೇವತೆಗಳಿಗಾಗಿ ದಾನಮಾಡುತ್ತಾ ಕೀರ್ತವಂತರಾಗಿದ್ದಾರೋ ಯಾರು ಯಾರು ಯಜ್ಞಗಳನ್ನು ಆಚರಿಸುತ್ತಾರೋ ಅವರೆಲ್ಲರನ್ನೂ ದೇವತೆಗಳಿಗೆ ಅಪಕಾರ ಮಾಡುವ ಉದ್ದೇಶದಿಂದ ಕೊಂದುಹಾಕಬೇಕು.

**ಉತ್ಪನ್ನಶ್ಚಾಪಿ ಮೇ ಮೃತ್ಯುರ್ಭೂತಪೂರ್ವಸ್ಯ ವೈ ಕಿಲ**

**ಇತ್ಯೇತದ್ದಾರಿಕಾ ಪ್ರಾಹ ದೇವಕೀಗರ್ಭಸಂಭವಾ**

**ತಸ್ಮಾದ್ಬಾಲೇಷು ಚಪರೋ ಯತ್ನಃ ಕಾರ್ಯೋ ಮಹೀತಲೇ**

**ಯತ್ರೋದ್ರಿಕ್ತಂ ಬಲಂ ಬಾಲೇ ಸ ಹಂತವ್ಯಃ ಪ್ರಯತ್ನತಃ**

**ಇತ್ಯಾಜ್ಞಾಪ್ಯಾಸುರಾನ್ಯಂಸಃ ಪ್ರವಿಶ್ಯಾಶುಗೃಹಂ ತತಃ**

**ಮಮೋಚ ವಸುದೇವಂ ಚ ದೇವಕೀ ಚ ನಿರೋಧತಃ**

(ವಿ.ಪು. 2ಸಂ. ಪಂಚಮಾಂಶಃ ಅಧ್ಯಾಯ 4 ಶ್ಲೋ12 ರಿಂದ 14)

ದೇವಕಿಯ ಗರ್ಭದಿಂದ ಜನಿಸಿದ ಆ ಬಾಲಿಕೆಯು 'ನನಗೆ ಮೃತ್ಯುವಾದವನು ಆಗಲೇ ಹುಟ್ಟಿಬಿಟ್ಟಿದ್ದಾನೆ' ಎಂದು ಹೇಳಿದ್ದಾಳೆ. ಆದ್ದರಿಂದ ಈ ಭೂತಳದಲ್ಲಿರುವ ಪ್ರತಿಯೊಬ್ಬ ಬಾಲಕರ ವಿಷಯವಾಗಿಯೂ ನಾವು ಬಹಳ ಎಚ್ಚರಿಕೆಯಿಂದ ವರ್ತಿಸಬೇಕಾಗಿದೆ. ಯಾವ ಬಾಲಕನಲ್ಲಾದರೂ ವಿಲಕ್ಷಣವಾದ ಬಲಾತಿಶಯ ಕಂಡುಬಂದರೆ ತಪ್ಪದೆ ಅವನನ್ನು ಕೊಂದು

ಹಾಕಿರಿ" ಎಂದು ಕಂಸನು ಆಜ್ಞಾಪಿಸಿದನು. ಹೀಗೆ ನಂತರ ಅವನು ಕಾರಾಗೃಹದೊಳಗೆ ಹೋಗಿ ವಸುದೇವನನ್ನೂ, ದೇವಕಿಯನ್ನೂ ಸೆರೆಯಿಂದ ಬಿಡಿಸಿದನು. ಅವರನ್ನು ಕುರಿತು "ವೃಥಾ ನಾನು ನಿಮ್ಮ ಮಕ್ಕಳನ್ನು ಕೊಂದುಹಾಕಿದೆ. ನನ್ನ ನಾಶಕ್ಕಾಗಿ ಬೇರೆ ಯಾವನೋ ಒಬ್ಬ ಹುಡುಗನು ಹುಟ್ಟಿರುವನಂತೆ. ಇದಕ್ಕಾಗಿ ನೀವು ದುಃಖಿಸಬೇಡಿ. ಆ ಮಕ್ಕಳಿಗೆ ಆ ರೀತಿಯಾದ ಪ್ರಾಪ್ತಿ ಇತ್ತು ಎಂದು ಕಾಣಿಸುತ್ತದೆ. ನಿಮ್ಮ ಪ್ರಾರಬ್ಧಕರ್ಮದಿಂದ ಆ ಮಕ್ಕಳ ಆಯಸ್ಸು ಹುಟ್ಟಿದಾಕ್ಷಣ ಕೊನೆಗೊಂಡಿತು ಎಂದು ವಸುದೇವ ದೇವಕಿಯರಿಗೆ ಸಮಾಧಾನ ಹೇಳಿ, ಶಂಕಾಕುಲನಾಗಿಯೇ ತನ್ನ ಅಂತಃಪುರವನ್ನು ಪ್ರವೇಶಿಸಿದ.

## ಪೂತನಿಯ ಉದ್ಧಾರ

ಕಂಸನಿಗೆ ಕಪ್ಪವನ್ನು ಕೊಡುವುದಕ್ಕಾಗಿ ಗಾಡಿಗಳಲ್ಲಿ ಸರಕುಗಳನ್ನು ತುಂಬಿಕೊಂಡು ನಂದ ಗೋಪಾದಿಗಳು ಮಥುರೆಗೆ ಬಂದಿದ್ದರು. ಮಥುರೆಗೆ ಬಂದ ಮೇಲೆ ಯಶೋದೆಯ ಗಂಡುಮಗು ಪ್ರಸವಿಸಿದಳೆಂಬ ಸುದ್ಧಿ ನಂದನಿಗೆ ತಲುಪಿತು. ನಂದನು ಮಥುರೆಗೆ ಬಂದದು ವಸುದೇವನಿಗೆ ತಿಳಿಯಿತು. ಕಂಸನಿಂದ ಮಗುವಿಗೆ ತೊಂದರೆಯಾದಿತೆಂದು ಶಂಕಿಸಿ, ವಸುದೇವನು ನಂದನನ ಬಳಿಗೆ ಬಂದನು. ನಂದನನ್ನು ಕಂಡು ಅವನಿಗೆ ಅಭಿನಂದಿಸಿ ಹೀಗೆಂದನು "ಕಡೆಗೆ ಈಗಲಾದರೂ ನಿನಗೆ ಪುತ್ರಸಂತಾನವಾಯಿತು ಅಲ್ಲವೇ ? ನೀವೆಲ್ಲರೂ ಈ ವರ್ಷ ಕಪ್ಪವನ್ನು ರಾಜನಿಗೆ ಸಲ್ಲಿಸಿದ್ದಾಯಿತು. ಇಲ್ಲಿ ಧನವಂತನು ಹೆಚ್ಚುಕಾಲ ಇರುವುದು ಸರಿಯಲ್ಲ. ನಿಮ್ಮ ಕೆಲಸವು ಮುಗಿದನಂತರ ಸುಮ್ಮನೆ ಇಲ್ಲಿ ಏಕೆ ಇದ್ದೀರಿ. ಬೇಗನೇ ಗೋಕುಲಕ್ಕೆ ಹೊರಡಿರಿ. ರೋಹಿಣಿಯ ಗರ್ಭದಲ್ಲಿ ಜನಿಸಿದ ನನ್ನ ಪುತ್ರನೂ ಇದ್ದಾನಷ್ಟೆ. ಎಲೈ ನಂದ ಆತನನ್ನು ನಿನ್ನ ಮಗನಂತೆ ಪಾಲಿಸಬೇಕು" ಎಂದನು. ಹೀಗೆ ಬಲಾಢ್ಯರಾದ ನಂದಾದಿ ಗೋಪಾಲರು ಬಂಡಿಗಳಲ್ಲಿ ಹೇರಿದ್ದ ದವಸಧಾನ್ಯಗಳನ್ನು ರಾಜನಿಗೆ ಕಪ್ಪವನ್ನಾಗಿ ಸಲ್ಲಿಸಿ ಗೋಕುಲಕ್ಕೆ ಹೊರಟುಹೋದರು. ಹೀಗೆ ಗೋಕುಲದಲ್ಲಿ ವಾಸಿಸುತ್ತಿರಲಾಗಿ ಪುಟ್ಟ ಮಕ್ಕಳನ್ನು ಸುಲಭವಾಗಿ ಕೊಲ್ಲುವ ಬಾಲಘಾತಿನಿಯಾದ ಪೂತನಿಯು ಒಂದು ರಾತ್ರಿ ಬಂದು ಮಲಗಿದ್ದ ಕೃಷ್ಣನನ್ನು ಎತ್ತಿಕೊಂಡು ಅವನಿಗೆ

ಸ್ತನ್ಯಪಾನವನ್ನು ಮಾಡಿಸಿದಳು. ಆ ರಾತ್ರಿಯಲ್ಲಿ ನಂದಗೋಕುಲದಲ್ಲಿ ಯಾವ ಯಾವ ಮಗುವಿಗೆ ಪೂತನಿಯು ಸ್ತನ್ಯಪಾನ ಮಾಡಿಸುತ್ತ ಹೋಗಿದ್ದಳೋ ಆ ಮಗು ಕ್ಷಣಮಾತ್ರದಲ್ಲಿ ಸಾವನ್ನು ಅಪ್ಪಿದ್ದಿತ್ತು. ಕ್ರೋಧಾಕುಲನಾದ ಕೃಷ್ಣನಾದರೋ ಅವಳ ಮೊಲೆಯನ್ನು ಎರಡು ಕೈಗಳಿಂದ ಗಟ್ಟಿಯಾಗಿ ಹಿಸುಕಿ ಅವಳ ಪ್ರಾಣವನ್ನೇ ಹೀರಿಬಿಟ್ಟನು.

**ಕೃಷ್ಣಸ್ತು ತತ್‌ಸ್ತನಂ ಗಾಢಂ ಕರಾಭ್ಯಾಮತಿಪೀಡಿತಮ್ ।**
**ಗೃಹಿತ್ವಾ ಪ್ರಾಣಸಹಿತಂ ಪಪೌ ಕ್ರೋಧ ಸಮನ್ವಿತಃ ॥**
**ಸಾತಿಮುಕ್ತಮಹಾರಾಮ ವಿಚ್ಛಿನ್ನಸ್ನಾಯುಬಂಧನಾ ।**
**ಪಪಾತಪೂತನಾ ಭೂಮೌ ಮ್ರಿಯ ಮಾಣಾತಿ ಭೀಷಣಾ॥**
**ತನ್ನಾದಶ್ರುತಿ ಸಂತ್ರಸ್ತಾಃ ಪ್ರಬುದ್ಧಾಸ್ತೇ ವ್ರಜೌಕಸಃ ।**
**ದದೃಶುಃ ಪೂತನೋತ್ತಂಗೇ ಕೃಷ್ಣ ತಾಂ ಚ ನಿಪಾತಿತಮ್ ॥**

(ವಿ.ಪು–2ನೇ ಸಂ ಪಂಚಮಾಂಶ ಅ.5 ಶ್ಲೋ 9ರಿಂದ 11)

ಪೂತನಿಯು ಗಟ್ಟಿಯಾಗಿ ಕಿರುಚುತ್ತಾ ಇದ್ದಳು. ನರನಾಡಿಗಳೆಲ್ಲಾ ಸಡಿಲವಾಯಿತು. ಅತ್ಯಂತ ಘೋರರೂಪಿಯಾಗಿ ನೆಲದ ಮೇಲೆ ಸತ್ತು ಒರಗಿದಳು. ಅವಳ ಘೋರ ಧ್ವನಿಗೆ ಗೋಪರೆಲ್ಲರೂ ಹೆದರಿ ನಿದ್ರೆಯಿಂದ ಎದ್ದು ಬಂದು ಪೂತನಿಯ ಮಡಿಲಲ್ಲಿದ್ದ ಕೃಷ್ಣನನ್ನು ಅವಳು ಉರುಳಿಬಿದ್ದಿರುವುದನ್ನು ಕಂಡರು. ಯಶೋದೆಯು ಗಾಬರಿಯಿಂದ ಕೃಷ್ಣನನ್ನು ಎತ್ತಿಕೊಂಡು ಗೋವಿನ ಬಾಲವನ್ನು ಅವನಿಗೆ ನಿವಾಳಿಸಿ ಬಾಲಗ್ರಹದ ದೋಷವನ್ನು ನಿವಾರಿಸಿದಳು. ನಂದಗೋಪನೂ ಸಹ ಗೋಮಯವನ್ನು (ಸಗಣಿ) ತಂದು ಕೃಷ್ಣನ ತಲೆಗೆ ಸವರಿ ಈ ರೀತಿ ಪಠಿಸುತ್ತಾ ರಕ್ಷಾಬಂಧವನ್ನು ಮಾಡಿದನು. ಇಂದಿಗೂ ಗೋವಿನ ಪಂಚಗವ್ಯವನ್ನು ಪರಮಪವಿತ್ರವಾದುದು ಎಂಬ ನಂಬಿಕೆ ನಮ್ಮಲ್ಲಿ ಇದೆ.

**ನಂದಗೋಪ ಉವಾಚ :**

**ರಕ್ಷತು ತ್ವಾಮಶೇಷಾಣಾಂ ಭೂತಾನಾಂ ಪ್ರಭವೋ ಹರಿಃ ।**
**ಯಸ್ಯ ನಾಭಿಸಮುದ್ಭೂತ ಪಂಕಜಾದಭವಜ್ಜಗತ್ ॥**
**ಯೇನ ದಂಷ್ಟ್ರಾಗ್ರ ವಿಧೃತಾ ಧಾರಯತ್ಯವನಿರ್ಜಗತ್ ।**

ವರಾಹ ರೂಪ ಧೃಗ್ದೇವಸ್ತ ತ್ವಾಂ ರಕ್ಷತು ಕೇಶವಃ ॥

ನಖಾಂಕುರ ವಿನಿರ್ಭಿನ್ನ ವೈಂ ವಕ್ಷಸ್ಥಲೋ ವಿಭುಃ ।

ನೃಸಿಂಹ ರೂಪೀ ಸರ್ವತ್ರ ರಕ್ಷತು ತ್ವಾಂ ಜನಾರ್ಧನಃ ॥

ವಾಮನೋ ರಕ್ಷತು ಸದಾ ಭವಂತಂ ಯಃ ಕ್ಷಣಾದಭೂತ್ ।

ತ್ರಿವಿಕ್ರಮಃ ಕ್ರಮಾಕ್ರಾನ್ತತ್ರೈಲೋಕ್ಯಃ ಸ್ಫುರದಾಯುಧಃ ॥

ಶಿರಸ್ತೇ ಪಾತು ಗೋವಿಂದಃ ಕಂಠಂ ರಕ್ಷತು ಕೇಶವಃ ।

ಗುಹ್ಯಂ ಚ ಜಠರಂ ವಿಷ್ಣುರ್ಜಂಘೇ ಪಾದೌ ಜನಾರ್ಧನಃ ॥

ಮುಖಂ ಬಾಹೂ ಪ್ರಬಾಹು ಚ ಮನಃ  ಸರ್ವೇಂದ್ರಿಯಾಣಿ ಚ ।

ರಕ್ಷತ್ವ ವ್ಯಾಹತೈಶ್ವರ್ಯಸ್ತವ ನಾರಾಯಣೋವ್ಯಯಃ ॥

ಶಾರ್ಙ್ಗ ಚಕ್ರ ಗಧಾಪಾಣೇಶ್ಶಂಬ ನಾದ ಹತಾಃ ಕ್ಷಯಮ್ ।

ಗಚ್ಛಂತುಪ್ರೇತಕೂಷ್ಮಾಂಡ ರಾಕ್ಷಸಾಯೇತವಾಹಿತಾಃ ॥

ತ್ವಾಪಾತು ದಿಕ್ಷು ವೈಕುಂಠೋ ವಿದಿಕ್ಷು ಮಧುಸೂದನಃ ।

ಹೃಷೀಕೇಶೋಂಬರೇ ಭೂಮೌ ರಕ್ಷತು ತ್ವಾಂ ಮಹೀಧರಃ ॥

(ವಿ.ಪು.2ಸಂ. ಪಂಚಮಾಂಶ ಅ, 5 ಶ್ಲೋ 17ರಿಂದ 21)

ಈ ಶ್ಲೋಕಗಳ ಅರ್ಥ ಹೀಗಿದೆ. ನಂದಗೋಪನು ಶ್ರೀಕೃಷ್ಣನಿಗೆ ದೃಷ್ಟಿ ತಾಗದಿರಲಿ ಎಂದು ರಕ್ಷಾಬಂಧನವನ್ನು ಇಟ್ಟು ಈ ರೀತಿ ಸ್ತುತಿಸುತ್ತಾನೆ.

ಯಾರ ನಾಭಿಯಿಂದ ಪ್ರಕಟವಾದ ಪದ್ಮದಿಂದ ಈ ಜಗತ್ತು ಜನಿಸಿತೋ ಯಾರು ಸಮಸ್ತ ಭೂತಗಳಿಗೂ ಮೂಲ ಕಾರಣನೋ ಆ ಶ್ರೀಹರಿಯು ನಿನ್ನನ್ನು ರಕ್ಷಿಸಲಿ. ವರಾಹರೂಪಿಯಾದ ಯಾವ ದೇವನ ದಂಷ್ಟ್ರಾಗ್ರದಲ್ಲಿ ದೃಢವಾದ ಧರಣಿಯು ಈ ಜಗತ್ತನ್ನು ಧರಿಸಿದ್ದಳೋ ಆ ಕೇಶವನು ನಿನ್ನನ್ನು ರಕ್ಷಿಸಲಿ. ಯಾವ ಸ್ವಾಮಿಯು ನಖಾಗ್ರದಿಂದ ವೈರಿಯ ವಕ್ಷಸ್ಥಳವನ್ನು ಸೀಳಿ ಹಾಕಿದನೊ ನೃಸಿಂಹರೂಪಿಯಾದ  ಆ ಜನಾರ್ಧನನು ನಿನ್ನನ್ನು ರಕ್ಷಿಸಲಿ. ಯಾವಾತನು ಒಂದು ಕ್ಷಣದಲ್ಲಿ ಮೂರು ಲೋಕಗಳನ್ನು ತನ್ನ ಹೆಜ್ಜೆಗಳಿಂದ ಆಕ್ರಮಿಸಿ ತ್ರಿವಿಕ್ರಮನೆನೆಸಿದನೋ ಆ ವಾಮನನು ಸದಾ ನಿನ್ನನ್ನು ರಕ್ಷಿಸಲಿ. ವಿಷ್ಣುವು ಗುಹ್ಯಸ್ಥಾನವನ್ನು ಉದರವನ್ನು ರಕ್ಷಿಸಲಿ, ಜನಾರ್ಧನನು ನಿನ್ನ

ಪಾದ ತೊಡೆಗಳನ್ನು ರಕ್ಷಿಸಲಿ. ಅಖಂಡೈಶ್ವರ್ಯ ಸಂಪನ್ನನೂ ಅವಿನಾಶಿಯೂ ಆದ ಶ್ರೀಮನ್ನಾರಾಯಣನು ನಿನ್ನ ಮುಖವನ್ನೂ, ಬಾಹುಗಳನ್ನೂ ಮೊಳಕೈಗಳನ್ನೂ ಮನಸ್ಸು ಮತ್ತು ಸರ್ವೇಂದ್ರಿಯಗಳನ್ನು ರಕ್ಷಿಸಲಿ. ಶಂಖ ಚಕ್ರ ಗಧಾಪಾಣಿಯಾದ ವಿಷ್ಣುವಿನ ಶಂಖ ಧ್ವನಿಯಿಂದ ಅಹಿತರಾದ ಭೂತ, ಪ್ರೇತ, ಕುಷ್ಮಾಂಡ ರಾಕ್ಷಸರು ಹತರಾಗಿ ನಾಶವಾಗಿ ಹೋಗಲಿ. ಸಮಸ್ತ ದಿಕ್ಕುಗಳಲ್ಲಿ ಭಗವಾನ್ ವೈಕುಂಠನು, ದಿಙ್ಮಧ್ಯಗಳಲ್ಲಿ ಮಧುಸೂದನನೂ ಆಕಾಶದಲ್ಲಿ ಹೃಷೀಕೇಶನೂ ಭೂಮಿಯಲ್ಲಿ ಮಹೀದರನಾದ ಅನಂತನೂ ನಿನ್ನನ್ನು ರಕ್ಷಿಸಲಿ" ಎಂದು ವಸುದೇವನು ಪ್ರಾರ್ಥಿಸಿದನು.

ಮಕ್ಕಳಿಗೆ ಕೆಟ್ಟ ದೃಷ್ಟಿಗಳು ದೂರವಾಗಲಿ ಎಂದು ದೃಷ್ಟಿ ತೆಗೆಯುವ ಪದ್ಧತಿ ಅನೂಚಾನವಾಗಿ ಬಂದಿರುವುದು ತಿಳಿದು ಬಂದಿದೆ. ಇಂದಿಗೂ ದೃಷ್ಟಿ ಪರಿಹಾರವಾಗಲಿ ಎಂದು ಆ ಭಗವಂತನನ್ನೇ ಪ್ರಾರ್ಥಿಸಿ ಮಕ್ಕಳಿಗೆ ರಕ್ಷಾಕವಚ ಸ್ತೋತ್ರವನ್ನು ಹೇಳುವ ಪರಿಪಾಠ ಇಂದಿಗೂ ಬಳಕೆಯಲ್ಲಿದೆ. ಇದೇ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ನಮ್ಮ ಸಂಸ್ಕೃತಿಯನ್ನು ಉಳಿಸೋಣ, ಬೆಳೆಸೋಣ.

ಪೂತನಿಗೆ – ಶ್ರೀಕೃಷ್ಣನ ಸಾಮಿಪ್ಯವೇ ಪೂರ್ವಜನ್ಮಕೃತ ಪುಣ್ಯ ವಿಶೇಷವೇ ಸರಿ. ಅದರಲ್ಲೂ ಸ್ತನ್ಯಪಾನ ಮಾಡಿಸುವುದು ವಿಷದ ಹಾಲನ್ನು ಉಣಿಸುವುದು ನಮ್ಮೆಲ್ಲರ ದೃಷ್ಟಿಯಲ್ಲಿ ಅಸಭ್ಯ ವರ್ತನೆ, ನೀಚಕೃತ್ಯ ಎನಿಸುವುದು ಸಹಜ. ಆದರೆ ಆ ಕೃಷ್ಣಪರಮಾತ್ಮನ ದೃಷ್ಟಿಯಲ್ಲಿ ಇದೂ ಒಂದು ಲೀಲೆಯೇ ಸರಿ. ಅಷ್ಟೇ ಅಲ್ಲ ಪಾಪಿಗೂ ಮೋಕ್ಷವುಂಟು ಎಂಬ ಹೇಳಿಕೆಯನ್ನು ಸಾಬೀತುಪಡಿಸಿ ಪೂತನಾ ಸಂಹಾರ ಎಂದು ಹೇಳದೆ ಪೂತನಾ ಉದ್ಧಾರ ಎಂದು ಹೇಳಿರುವುದು ಇಲ್ಲಿ ಸೂಕ್ತವೆನಿಸುತ್ತದೆ.

**ಪೂತನಾ ಜೀವಿತ ಹರಾಯ ನಮಃ**

## ಶಕಟಾಸುರ ಭಂಜನ, ಯಮಳಾರ್ಜುನರ ಉದ್ಧಾರ

ಪರಾಶರ ಮುನಿಗಳು ಮೈತ್ರೇಯರಿಗೆ ಶ್ರೀ ಕೃಷ್ಣನ ಲೀಲಾ ವಿನೋದಗಳನ್ನು ವರ್ಣಿಸುತ್ತಾ ಹೀಗೆಂದರು. ಒಂದು ದಿನ ಶ್ರೀಕೃಷ್ಣನು (ಶಕಟನ) ಬಂಡಿಯ

ಕೆಳಗೆ ಮಲಗಿದ್ದನು. ಇದ್ದಕ್ಕಿದ್ದಂತೆ ಅವನಿಗೆ ಹಸಿವಾಯಿತು. ತನಗೆ ಮೊಲೆಹಾಲು ಉಣಿಸಬೇಕೆಂದು ಅಳುತ್ತಾ ತನ್ನ ಪಾದಗಳನ್ನು ಎತ್ತಿ ಬಂಡಿಯನ್ನು ಒದ್ದನು. ಅವನ ಪಾದ ಪ್ರಹಾರದಿಂದ ಬಂಡಿಯು ಹಾರಿ ತಲೆಕೆಳಗಾಗಿ ಉರುಳಿಬಿದ್ದಿತು. ಬಂಡಿಯಲ್ಲಿದ್ದ ಗಡಿಗೆ ಮಡಿಕೆಗಳೆಲ್ಲವೂ ಚೂರು ಚೂರಾದವು. ಹೊರಗೆ ಜೋರಾದ ಶಬ್ದವುಂಟಾದುದರಿಂದ ಗೋಪ, ಗೋಪಿಯರು ಓಡಿಬಂದು ಬಾಲಕನು ಅಂಗಾತ ಬಿದ್ದಿರುವುದನ್ನು ಕಂಡರು. ಈ ಶಕಟವನ್ನು ಯಾರು ಉರುಳಿಸಿದರು ಎಂದು ಗೋಪರು ವಿಚಾರಿಸಿದರು. ಆಗ ಅಲ್ಲಿಯೇ ಬದಿಯಲ್ಲಿದ್ದ ಹುಡುಗರು ಪುಟ್ಟ ಮಗುವಿನ ಕಡೆಗೆ ಬೆರಳು ತೋರಿಸಿದರು. "ಇವನೇ ಅಳುತ್ತಾ ಕಾಲುಗಳನ್ನು ಮೇಲಕ್ಕೆ ಎತ್ತಿ ಚಿಮ್ಮಲಾಗಿ ಈ ಬಂಡಿಯು ಹಾರಿ ಉರುಳಿ ಬಿದ್ದುದನ್ನು ನಾವು ನೋಡಿದೆವು. ಇದು ಮತ್ತಾರ ತುಂಟತನವೂ ಅಲ್ಲ" ಎಂದು ದೂರಿತ್ತರು. ಆ ಗೋಪ ಗೋಪಿಯರು ಮತ್ತೆ ಮನಸ್ಸಿನಲ್ಲಿಯೇ ಆಶ್ಚರ್ಯಪಟ್ಟರು. ನಂದಗೋಪನೂ ಸಹ ಆಶ್ಚರ್ಯಚಕಿತನಾಗಿ ಮಗುವನ್ನು ಎತ್ತಿಕೊಂಡನು. ಯಶೋದೆಯು ಶಕಟ ಮತ್ತು ಶಕಟದಲ್ಲಿದ್ದ ಒಡೆದ ಮಡಕೆಯ ಚೂರುಗಳನ್ನು ಒಂದು ಕಡೆ ಇಟ್ಟು ಮೊಸರು, ಹೂವು, ಹಣ್ಣು ಅಕ್ಷತೆ ಮುಂತಾದವುಗಳಿಂದ ಪೂಜಿಸಿದಳು. ಪ್ರತಿಯೊಂದು ವಸ್ತುವಿನಲ್ಲಿಯೂ ದೈವೀಕ ಭಾವನೆಯನ್ನು ಪೂಜ್ಯ ಭಾವನೆಯನ್ನು ಇಟ್ಟಿದ್ದ ಯಶೋದೆಯ ಸಹಜಗುಣವು ಅತ್ಯಂತ ಪ್ರಶಂಸನೀಯವಾದದ್ದು. ಕೃಷ್ಣನು ಮಹಾಮಹಿಮನು ಎಂದು ಯಶೋದೆಗೆ ತಿಳಿದಿದ್ದರೂ ಕೃಷ್ಣ ತನ್ನ ಮಗ ಎಂಬ ಮಾನವ ಸಹಜವಾದ ಗುಣ. ಮಮತೆ, ಮಾತೃ ವಾತ್ಸಲ್ಯ, ಅವಳಲ್ಲಿಯೂ ಉಕ್ಕಿ ಬರುವುದನ್ನು ಹೆಜ್ಜೆಹೆಜ್ಜೆಗೂ ನಾವು ಕಾಣಬಹುದು.

ನಂತರ ವಸುದೇವನ ಆದೇಶದಂತೆ ಪುರೋಹಿತನಾದ ಗರ್ಗನು ಗೋಕುಲಕ್ಕೆ ಬಂದು ತಾನು ಯಾರೆಂದು ಗೋಪರಿಗೂ ತಿಳಿಸದೆ, ಆ ಬಾಲಕರಿಬ್ಬರಿಗೂ ದ್ವಿಜೋಚಿತವಾದ ಶಾಸ್ತ್ರ ಸಂಸ್ಕಾರಗಳನ್ನು ಮಾಡಿ

ನಾಮಕರಣ ಶಾಸ್ತ್ರವನ್ನು ಮಾಡಿದನು. ಮಹಾಪ್ರಾಜ್ಞನಾದ ಗರ್ಗನು ರೋಹಿಣಿಯ ಪುತ್ರನಾದ ಹಿರಿಯನಿಗೆ ಬಲರಾಮನೆಂದು, ಕಿರಿಯನಿಗೆ ಶ್ರೀಕೃಷ್ಣನೆಂದು ನಾಮಕರಣ ಮಾಡಿದನು.

## ಶ್ರೀಕೃಷ್ಣ ಬಲರಾಮರ ಚೇಷ್ಟಿತಗಳು

ಪರಾಶರರು ಶ್ರೀಕೃಷ್ಣ ಬಲರಾಮರ ಚೇಷ್ಟಿತಳನ್ನು ಮೈತ್ರೇಯಿರಿಗೆ ವಿವರಿಸುತ್ತಾ ಹೀಗೆಂದರು. ಬಾಲಕರು ದಿನಕಳೆದಂತೆ ಬಲಶಾಲಿಗಳಾದರು. ಅವರಿಬ್ಬರೂ ನಂದವ್ರಜದಲ್ಲಿ ಅಂಬೆಗಾಲಿಡುತ್ತಾ ಆಚೀಚೆ ಸುಳಿದಾಡಿದರು. ಗೋಶಾಲೆಯಲ್ಲಿ ಹೋಗಿ ಸುಳಿದಾಡುವುದರಿಂದ ಬೆರಣಿಗಳ ಬೂದಿಯಿಂದ ಲಿಪ್ತರಾದರು. ಅಲ್ಲಿಂದಿಲ್ಲಿಗೆ ಯಾವಾಗಲೂ ಸುತ್ತುತ್ತಿರುವುದರಿಂದ ಮನೆಯಲ್ಲಿ ಗಲೀಜಾಗುತ್ತಿತ್ತು. ಅವರನ್ನು ಹಿಡಿಯಲು ಯಶೋದೆಗಾಗಲಿ, ರೋಹಿಣಿಗಾಗಲಿ ಸಾಧ್ಯವಾಗುತ್ತಿರಲಿಲ್ಲ. ಒಮ್ಮೆ ಗೋವುಗಳ ಕೊಟ್ಟಿಗೆಯಲ್ಲಿ ಆಡುತ್ತಿದ್ದರೆ, ಮತ್ತೊಂದು ಕ್ಷಣದಲ್ಲಿ ಕರುಗಳ ಹಿಂಡಿನ ಮಧ್ಯದಲ್ಲಿ ಇರುತ್ತಿದ್ದರು. ಆ ದಿನವೇ ಹುಟ್ಟಿದ ಎಳೆಗರುವಿನ ಬಾಲವನ್ನು ಹಿಡಿದೆಳೆಯಲು ತೊಡಗುತ್ತಿದ್ದರು. ಅತ್ಯಂತ ಚಂಚಲಚಿತ್ತರಾದ ಈ ಬಾಲಕರ ಚೇಷ್ಟೆಯನ್ನು ತಡೆಯಲು ಯಶೋದೆಗೆ ಸಾಧ್ಯವಾಗಲೇ ಇಲ್ಲ. ಆಗ ಅವಳು ಲೀಲೆಯಿಂದ ತುಂಟತನ ಮಾಡುತ್ತಿದ್ದ ಕೃಷ್ಣನ ಸೊಂಟಕ್ಕೆ ಹಗ್ಗವನ್ನು ಕಟ್ಟಿ ಒಂದು ಒರಳುಕಲ್ಲಿಗೆ ಬಂಧಿಸಿದಳು. ಅಷ್ಟೇ ಅಲ್ಲ ಸಿಟ್ಟಿನಿಂದ ಎಲೈ ತುಂಟ ಶಕ್ತಿ ಇದ್ದರೆ ಈಗ ಮುಂದಕ್ಕೆ ಹೋಗು" ಎಂದು ಹೇಳಿ ತಾನು ಅಡಿಗೆ ಕೆಲಸದಲ್ಲಿ ಉದ್ಯುಕ್ತಳಾದಳು. ಇತ್ತ ಕೃಷ್ಣನಾದರೋ ಆ ಒರಳು ಕಲ್ಲನ್ನು ಎಳೆಯುತ್ತಾ ಸಮೀಪದಲ್ಲಿದ್ದ ಯಮಳಾರ್ಜುನಗಳ ಜೋಡಿಯಾದ ಅತ್ತಿಮರಗಳ ನಡುವೆ ತೂರಿಕೊಂಡು ಹೋದನು.

**ವ್ಯಗ್ರಾಯಾಮಥ ತಸ್ಯಾ ಸ ಕರ್ಷಮಾಣ ಉಲೂಖಲಮ್**

**ಯಮಾಲಾರ್ಜುನ ಶಾಖಾಗ್ರೌ ತೇನ ತೌ ಯಮಲಾರ್ಜುನೌ**

**ತತಃ ಕಟಕಟಾಶಬ್ದ ಸಮಾಕರ್ಣ್ಯನ ತತ್ಪರಃ**

**ಆಜಗಾಮ ವ್ರಜಜನೋ ದದರ್ಶಚ ಮಹಾದ್ರುಮೌ**

**ನವೋದ್ಗತಾಲ್ಪ ದಂತಾಂಶುಸಿತಹಾಸಂ ಚ ಬಾಲಕಮ್**

**ತಯೋರ್ಮಧ್ಯಗತಂ ದಾಮ್ನಾಂ ಬದ್ಧಂ ಗಾಢಂ ತತೋದರೇ**

**ತತಶ್ಚ ದಾಮೋದರತಾಂ ಸಯಯೌ ದಾಮ ಬಂದನಾತ್**

(ವಿ.ಪು. 2ನೇ ಸಂ ಪಂಚಮಾಂಶ ಅಧ್ಯಾಯ 6 ಶ್ಲೋ 16ರಿಂದ 20)

ಕೃಷ್ಣನು ಅಡ್ಡಲಾಗಿ ಇಟ್ಟಿದ್ದ ಒರಳುಕಲ್ಲನ್ನು ಆ ವೃಕ್ಷಗಳ ಮಧ್ಯದಲ್ಲಿ ಜಗ್ಗಿ ಎಳೆದನು. ಇದರಿಂದಾಗಿ ಎತ್ತರೆತ್ತರವಾದ ಶಾಖೆಗಳಿದ್ದ ಆ ಯಮಾಳಾರ್ಜುನಗಳು ಮುರಿದುಬಿದ್ದವು. ಅವು ಬಿದ್ದಾಗ ಘೋರವಾದ ಕಟಕಟ ಶಬ್ದ ಕೇಳಿಸಿತು. ಇದರಿಂದ ಭೀತರಾದ ವ್ರಜವಾಸಿಗಳು ಓಡಿಬಂದು ಮುರಿದು ಬಿದ್ದಿದ್ದ ಆ ಮಹಾವೃಕ್ಷಗಳನ್ನು ನೋಡಿದರು. ಹಾಗೆಯೇ ಹೊಸದಾಗಿ ಹುಟ್ಟಿದ ಚಿಕ್ಕ ಚಿಕ್ಕ ಹಲ್ಲುಗಳಿಂದ ಶುಭ್ರವಾದ ನಗೆಯನ್ನು ಬೀರುತ್ತ ಕೃಷ್ಣನು ನಿಂತಿದ್ದನು. ಆ ಬಾಲಕನು ಆ ಮರಗಳ ನಡುವೆ ನಿಂತಿರುವುದನ್ನು ಗೋಪ ಗೋಪಿಯರು ನೋಡಿದರು. ಉದರದಲ್ಲಿ ದಾಮದ (ಹಗ್ಗದ) ಬಂಧನಕ್ಕೆ ಒಳಗಾದ ಪ್ರಯುಕ್ತ ಅಂದಿನಿಂದ ಶ್ರೀಕೃಷ್ಣನನ್ನು 'ದಾಮೋದರ' ಎಂದು ಕರೆಯಲ್ಪಟ್ಟನು. ಭೀಕರವಾದ ಮರಗಳ ಶಬ್ದವನ್ನು ಕೇಳಿ ನಂದಗೋಪ ಮೊದಲಾದ ಹಿರಿಯರು ಯಾವುದೇ ಮಹೋತ್ಪಾತಗಳಾಗುತ್ತಿವೆಯೆಂದು ಅತ್ಯಂತ ಭಯಭೀತರಾಗಿ ಒಂದು ಸಮಾಲೋಚನೆಯನ್ನೇ ಮಾಡಿದರು. ಈ ಸ್ಥಳದಲ್ಲಿ ನಾವೇಕೆ ಇರಬೇಕು? ಈ ಊರಿಂದ ನಮಗೇನಾಗಬೇಕಾಗಿದೆ.

"ಪೂತನಿ ಸಂಹಾರ, ಶಕಟವು (ಬಂಡಿ) ತಲೆಕೆಳಗಾಗಿ ಉರುಳಿಬಿದ್ದದ್ದು ಯಾವುದೇ ಗಾಳಿ, ಬಿರುಗಾಳಿ ಇಲ್ಲದೆ ಈ ಮಹಾವೃಕ್ಷಗಳು ಮುರಿದುಬಿದ್ದದ್ದು ಇವೆಲ್ಲ ಉತ್ಪಾತಗಳೇ ಸರಿ. ಆದ್ದರಿಂದ ನಾವು ಈ ಸ್ಥಳದಿಂದ ವೃಂದಾವನಕ್ಕೆ ಹೋಗೋಣ. ಇನ್ನುಮುಂದೆ ಭೂಕಂಪಾದಿ ಮಹೋತ್ಪಾತಗಳು ಈ ವ್ರಜಭೂಮಿಯನ್ನು ಅಸ್ತವ್ಯಸ್ತಗೊಳಿಸಿತು. ಆದ್ದರಿಂದ ಆದಷ್ಟು ಬೇಗ ಗೋಕುಲವನ್ನು ಬಿಡೋಣ" ಎಂದು ನಿರ್ಧರಿಸಿದರು. ಕೂಡಲೇ ಗೋಪಾಲರೂ ಕರುಗಳನ್ನು ನೋಡಿಕೊಳ್ಳತಕ್ಕ ಗೋಪಾಲಕರೊಡನೆ

ತಮ್ಮ ತಮ್ಮ ಶಕಟಗಳೊಡನೆ, ಗೋವುಗಳೊಡನೆಯೂ, ಗೋವುಗಳನ್ನು ಮೇಯಿಸುತ್ತ ಗುಂಪುಗುಂಪಾಗಿ ಪ್ರಯಾಣ ಮಾಡಿದರು. ಹೀಗಾಗಿ ಗೋಕುಲವೇ ಬೆಂಗಾಡಾಗಿಹೋಯಿತು. ಇತ್ತ ಲೀಲಾವಿನೋದನಾದ ಶ್ರೀಕೃಷ್ಣನು ಗೋ ದನಗಳಿಗೆ ಗೋಪಾಲಕರಿಗೆ ಶುಭಸಮೃದ್ಧಿಯನ್ನು ಬಯಸಿ, ಅವರೆಲ್ಲರೂ ಹೋಗಿ ಬೃಂದಾವನದಲ್ಲಿ ನೆಮ್ಮದಿಯಾದ ಬಾಳುವೆಯನ್ನು ನಡೆಸಲೆಂದು ಮನಸ್ಸಿನಲ್ಲೇ ಧ್ಯಾನಿಸಿದನು. ಅವನ ಧ್ಯಾನಮಾತ್ರದಿಂದಲೇ ಆಗ ಬೇಸಿಗೆಯಾಗಿದ್ದರೂ ಎಲ್ಲೆಲ್ಲೂ ಹಸಿರು ಹುಲ್ಲು ಬೆಳೆಯಿತು ಇದರಿಂದ ಬೃಂದಾವನದ ಜನರು ಹರ್ಷದಿಂದ ಉಬ್ಬಿ, ಇದೆಲ್ಲವೂ ಶ್ರೀಕೃಷ್ಣ ಕೃಪೆಯೇ ಎಂದು ತಿಳಿದುಕೊಂಡರೂ ಗೋಪಾಲರೆಲ್ಲರೂ ಸುತ್ತಲೂ ಅರ್ಧಚಂದ್ರಾಕಾರವಾಗಿ ತಮ್ಮ ಶಕಟಗಳನ್ನು ನಿಲ್ಲಿಸಿ ನಡುವೆ ಬಿಡಾರ ಮಾಡಿದರು. ಈ ಗೊಲ್ಲರಹಳ್ಳಿಗೆ ಬಲರಾಮ ಕೃಷ್ಣರು ಜೊತೆಯಾಗಿ ಬಂದು ತಮ್ಮ ಬಾಲಲೀಲೆಗಳನ್ನು ನಡೆಸುತ್ತಿದ್ದರು. ಸಕಲ ಜಗತ್ಪಾಲಕರಾದ ಅವರು ಕರುಗಳನ್ನು ಕಾಯುವ ಏಳುವರ್ಷದ ಹುಡುಗರಾದರು. ಗೋಪಾಲರೊಡನೆ ತುಂಬಿದ ಮಹಾವನದಲ್ಲಿ ಬಲರಾಮ ಕೃಷ್ಣರು ನಲಿವಿನಿಂದ ನಲಿಯುತ್ತಿದ್ದರು. ಒಮ್ಮೆ ಹಸುಗಳೊಡನೆ ರಮ್ಯವಾಗಿ ಹಾಡುತ್ತಾ ತಂಪಾದ ನೆರಳಿರುವ ಮರಗಳ ಬುಡದಲ್ಲಿ ಕುಳಿತುಕೊಳ್ಳುತ್ತಿದ್ದರು. ಒಮ್ಮೊಮ್ಮೆ ಇಬ್ಬರೂ ನಿದ್ರೆ ಮಾಡಲು ಎಲೆಗಳ ಹಾಸಿಗೆಯಲ್ಲಿಯೇ ಮಲಗುತ್ತಿದ್ದರು. ನವಿಲುಗಳ ಕೇಕಾಧ್ವನಿಯನ್ನು ಅನುಕರಿಸಿ ಕೊಳಲನ್ನು ಊದುತ್ತಿದ್ದರು. ಹೀಗೆ ರಾಮಕೃಷ್ಣರಿಬ್ಬರೂ ತಮ್ಮ ಗೆಳೆಯರೊಡನೆ ಸಂತೋಷದಿಂದ ಕ್ರೀಡಿಸುತ್ತಿದ್ದರು. ಬಲಾಢ್ಯರಾದ ಬಲರಾಮ ಕೃಷ್ಣರು ಗೋಪಾಲರ ಗುಂಪಿನೊಡನೆ ಸೇರಿ ವಿಹರಿಸುತ್ತಾ ಸಂಜೆಯಾದಾಗ ಗೋವುಗಳೊಡನೆ ಎಂದಿನಂತೆ ವ್ರಜಕ್ಕೆ ಹಿಂತಿರುಗುತ್ತಿದ್ದರು.

## ಕಾಳಿಂಗ ಸರ್ಪದ ನಿಗ್ರಹ

ಪರಾಶರರು ಮೈತ್ರೇಯರಿಗೆ ಶ್ರೀಕೃಷ್ಣ ಚರಿತಾಮೃತವನ್ನು ಸವಿಸುತ್ತಾ ಹೀಗೆಂದರು ಒಂದು ಸಲ ಶ್ರೀಕೃಷ್ಣನು ಅಣ್ಣ ಬಲರಾಮನನ್ನು ಬಿಟ್ಟು ತಾನು ಬೃಂದಾವನಕ್ಕೆ ಹೋಗಿ ಗೋಪರೊಡನೆ ಸುತ್ತಾಡುತ್ತಿದ್ದನು. ಹಾಗೆಯೇ ಹೊಯ್ದಾಡುವ ಅಲೆಗಳಿಂದ ತುಂಬಿದ ಯಮುನಾ ನದಿಯ ಬಳಿಗೆ

ಹೋದನು. ಆ ನದಿಯಲ್ಲಿ ವಿಶಾಲವಾದ ಒಂದು ಮಡುವನ್ನು ಶ್ರೀಕೃಷ್ಣನು ಕಂಡನು. ಮಡುವಿನಲ್ಲಿ ಕಾಳಿಯ ಸರ್ಪವು ವಾಸವಾಗಿತ್ತು. ಅದರ ವಿಷಾಗ್ನಿಯಿಂದ ನೀರು ತುಂಬಿದ್ದ ಆ ಮಡು ಅತ್ಯಂತ ಭೀಕರವಾಗಿದ್ದಿತು. ಕಾಳಿಯ ವಿಷಾಗ್ನಿಯಿಂದ ಸುತ್ತಮುತ್ತಲು ಇರುವ ತೀರದಲ್ಲಿದ್ದ ಮರಗಳು ಸುಟ್ಟುಹೋಗಿದ್ದವು. ಗಾಳಿ ಬೀಸಿದಾಗ ಮಡುವಿನ ನೀರು ಹಾರಿ ತಾಗಿದ್ದರಿಂದ ಹಕ್ಕಿಗಳು ಸುಟ್ಟು ಕರಕಲಾಗಿದ್ದವು. ಈ ದೃಶ್ಯವು ಶ್ರೀಕೃಷ್ಣನಿಗೆ ಮೃತ್ಯುವಿನ ಮತ್ತೊಂದು ಮುಖವೋ ಎಂಬಂತೆ ಕಾಣಿಸಿತು. ಅದನ್ನು ನೋಡಿ ಭಗವಾನ್ ಮಧುಸೂದನನು ಇಂತು ಚಿಂತಿಸಿದನು. "ದುರಳನೂ ವಿಷಾಯುಧನೂ ಆದ ಕಾಳಿಯನು ಇಲ್ಲಿಯೇ ನೆಲಸಿದ್ದಾನೆ. ಹಿಂದೆ ನನ್ನಿಂದ ಪರಾಜಿತನಾದ ಈ ದುಷ್ಟನು ಕಡಲನ್ನು ಪರಿತ್ಯಜಿಸಿ ಓಡಿ ಬಂದಿದ್ದಾನೆ. ಸಾಗರ ಗಾಮಿನಿಯಾದ ಯಮುನೆಯನ್ನು ಈತನು ಕಲುಷಿತಗೊಳಿಸಿದ್ದಾನೆ. ಬಳಲಿ ಬಾಯಾರಿಕೆಯಿಂದ ಬಂದ ಮನುಜರಾಗಲಿ, ಹಸುಗಳಾಗಲಿ, ಮೃಗ ಪಕ್ಷಿಗಳಾಗಲಿ ಇದನ್ನು ಸೇವಿಸುವಂತಿಲ್ಲ. ಆದ್ದರಿಂದ ಈ ನಾಗರಾಜನನ್ನು ನಿಗ್ರಹಿಸಲೇಬೇಕು. ವ್ರಜವಾಸಿಗಳೆಲ್ಲಾ ನಿರ್ಭಯರಾಗಿ ಸುಖವಾಗಿ ಬಾಳಬೇಕು. ಇಂತಹ ಈ ದುರಾತ್ಮರನ್ನು ನಿಗ್ರಹಿಸುವುದಕ್ಕಾಗಿಯೇ ಅಲ್ಲವೇ ನಾನು ಈ ಭೂಲೋಕದಲ್ಲಿ ಅವತರಿಸಿರುವುದು. ಆದ್ದರಿಂದ ಸಮೀಪದಲ್ಲಿರುವ ಉನ್ನತವಾದ ಈ ಕದಂಬವೃಕ್ಷವನ್ನು ಹತ್ತಿ ಈ ಸರ್ಪರಾಜನಿರುವ ಹ್ರದಕ್ಕೆ (ಮಡುವಿಗೆ) ಧುಮುಕುತ್ತೇನೆ" ಎಂದು ಹೇಳಿ ಶ್ರೀಕೃಷ್ಣನು ತನ್ನ ಪರಿಕರವನ್ನು ಬಿಗಿದು ಕಟ್ಟಿ ಕಾಳಿಯನ ಮಡುವಿಗೆ ರಭಸದಿಂದ ಧುಮುಕಿದನು. ಧುಮುಕಿದ ವೇಗಕ್ಕೆ ಆ ಮಹಾಹ್ರದದಿಂದ ಹುಟ್ಟಿದ ಜಲಬಿಂದುಗಳು ದೂರದಲ್ಲಿದ್ದ ಮರಗಳಿಗೆ ಎರಚಿದವು. ಸರ್ಪದ ದುಷ್ಟ ವಿಷಜ್ವಾಲೆಯಿಂದ ತಪ್ತವಾದ ನೀರು ಮತ್ತು ಗಾಳಿಯೊಡನೆ ಆ ಮರಗಳು ಸೋಂಕಿ ಎಲ್ಲೆಡೆ ಜ್ವಾಲೆಯನ್ನು ಹರಡುತ್ತಾ ಧಗಧಗ ಎಂದು ಉರಿದವು. ಸರ್ಪದ ಮಡುವಿನಲ್ಲಿ ಕೃಷ್ಣ ತನ್ನ ಭುಜವನ್ನು ಕುಣಿಸಿದನು.

ಆ ಶಬ್ದವನ್ನು ಕೇಳಿದೊಡನೆ ಕಾಳಿಯನು ಮೇಲೆದ್ದು ಬಂದನು. ಸಿಟ್ಟಿನಿಂದ ಅವನ ಕಣ್ಣುಗಳು ಕೆಂಪಾಗಿದ್ದವು. ಅವನು ಬಾಯಿಂದ ವಿಷಜ್ವಾಲೆಯನ್ನು

ಉಗುಳುತ್ತಿದ್ದನು. ಕಾಳಿಯ ಜೊತೆಯಲ್ಲಿ ವಿಷಯುಕ್ತನಾದ ಅನೇಕ ಸರ್ಪಗಳು ಇದ್ದವು. ಕಾಳಿಯ ಜೊತೆ ನಾಗಪತ್ನಿಯರೂ ಬಂದರು. ಆ ಸರ್ಪಗಳು ತಮ್ಮ ದೇಹಗಳಿಂದ ಕೃಷ್ಣನನ್ನು ಸುತ್ತಿ ಬಿಗಿದು ವಿಷಜ್ವಾಲೆಗಳಿಂದ ತುಂಬಿದ ಮುಖಗಳಿಂದ ಮತ್ತೆ ಮತ್ತೆ ಕಚ್ಚಿದವು. ಅನಂತರ ಕೃಷ್ಣ ಇದನ್ನೆಲ್ಲ ನೋಡುತ್ತಾ ನಿಂತಿದ್ದ ಕೃಷ್ಣನ ಸ್ನೇಹಿತರು ಗೋಪಾಲರು ಶೋಕವ್ಯಾಕುಲರಾಗಿ ವ್ರಜಕ್ಕೆ ಓಡಿಹೋಗಿ ಗಟ್ಟಿಯಾಗಿ ಅಳತೊಡಗಿದರು. "ಕೃಷ್ಣನು ಕಾಳಿಯ ಮಡುವಿಗೆ ಧುಮುಕಿ ಎಚ್ಚರತಪ್ಪಿದ್ದಾನೆ. ಸರ್ಪರಾಜನು ಅವನನ್ನು ತಿಂದು ಬಿಡುತ್ತಾನೆ. ಬೇಗ ಬನ್ನಿ, ನೋಡಿರಿ, ನೋಡಿರಿ" ಎಂದು ಕೂಗಿಕೊಂಡರು. ಆ ಮಾತನ್ನು ಕೇಳಿ ಗೋಪ ಗೋಪಿಯರು ಯಶೋದೆ–ನಂದಗೋಪ ಮೊದಲಾದವರು ಮಡುವಿನ ಬಳಿಗೆ ಓಡಿ ಹೋದರು. ಅತ್ಯಂತ ಪರಾಕ್ರಮಿಯಾದ ಕೃಷ್ಣನ ಅಣ್ಣ ಬಲರಾಮನೂ ಮಡುವಿನತ್ತ ಧಾವಿಸಿದನು.

ಅಲ್ಲಿ ಹೋಗಿ ಅವರು ಸರ್ಪರಾಜನಿಗೆ ವಶನಾಗಿದ್ದ ಕೃಷ್ಣನನ್ನು ಕಂಡರು. ಸರ್ಪಗಳು ಅವನನ್ನು ಬಿಗಿದಿದ್ದವು. ಕೃಷ್ಣನು ಅಲ್ಲಾಡದೆ ನಿಶ್ಚೇಟಿತನಾಗಿದ್ದನು. ಗೋಪಿಯರೆಲ್ಲಾ ಶೋಕಾರ್ತರಾಗಿ ಅಳುತ್ತಾ ಈಗ ನಾವೆಲ್ಲರೂ ಯಶೋದೆಯೊಡನೆ ಸರ್ಪರಾಜನ ಈ ಮಡುವಿನಲ್ಲಿಯೇ ಹಾರಿಬಿಡೋಣ. ಕೃಷ್ಣನಿಲ್ಲದ ವ್ರಜಕ್ಕೆ ನಾವು ಹೋಗುವುದಿಲ್ಲ ಎಂದು. ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು. ಆದರೆ ಆಶ್ಚರ್ಯವೆಂದರೆ ಸರ್ಪರಾಜನ ದೇಹವು ಕೃಷ್ಣನನ್ನು ಸುತ್ತುಗಟ್ಟಿ ಬಿಗಿದಿದ್ದರೂ ಅವನು ಯಾವುದೇ ಭಯವಿಲ್ಲದೆ ಗೋಪಿಯರತ್ತ ಮುಗುಳ್ನಗೆಯನ್ನು ಬೀರುತ್ತಿದ್ದನು. ಇದನ್ನು ನೋಡಿದ ಬಲರಾಮನು ಕೃಷ್ಣನನ್ನು ಕುರಿತು ಹೇ ದೇವೇಶ್ವರ, ಏನಿದು ಹೀಗೆ ಸಾಧಾರಣ ಮನುಷ್ಯನಂತೆ ನೀನು ವರ್ತಿಸುತ್ತಿದ್ದೀಯಾ ? ನೀನು ಅನಂತ ಎಂಬುವುದು ತಿಳಿದಿಲ್ಲವೇ ? ಬಂಡಿಯ ಅರೆಕಾಲುಗಳಿಗೆ ಅಚ್ಚು ಇದ್ದಂತೆ ಈ ಸಮಸ್ತ ಜಗತ್ತಿಗೂ ನೀನು ಆಶ್ರಯನಾದವನು. ತ್ರಯೀಮಯನಾದ ನೀನು ಲೋಕತ್ರಯದ ಕರ್ತನೂ ವಿಧ್ವಂಸಕನೂ ಹೌದು. ರಕ್ಷಕನೂ ಹೌದು. ಹೇ ಅಚಿಂತ್ಯಾತ್ಮನೇ ನೀನು ಇಂದ್ರ ರುದ್ರ ಅಗ್ನಿ ವಸುಗಳಿಂದಲೂ ಆದಿತ್ಯರಿಂದಲೂ ಮರುತ್ತುಗಳಿಂದಲೂ ಅಶ್ವಿನೀ ದೇವತೆಗಳಿಂದಲೂ ಸಮಸ್ತ

ಯೋಗಿಗಳಿಂದಲೂ ಧ್ಯಾನಿಸಲ್ಪಡತಕ್ಕವನು. ಹೇ, ಜಗನ್ನಾಥ ಈ ಪೃಥ್ವಿಯ ಭಾರವನ್ನು ಇಳಿಸುವುದಕ್ಕಾಗಿ ನೀನು ಮನುಷ್ಯರ ನಡುವೆ ಅವತರಿಸಿದ್ದೀಯೆ ಅಲ್ಲವೇ ? ನಿನಗೆ ಅಣ್ಣನಾದ ನಾನು ನಿನ್ನ ಒಂದಂಶವಾಗಿದ್ದೇನೆ. ಹೇ ಭಗವಾನ್ ಮನುಷ್ಯ ಲೀಲೆಯನ್ನು ನಟಿಸುತ್ತಿರುವ ನನ್ನೊಡನೆ ದೇವತೆಗಳೂ ನಿನ್ನ ಲೀಲೆಯನ್ನು ಅನುಕರಿಸುತ್ತಾ ಇದ್ದಾರೆ. ಹೇ ಶಾಶ್ವತನೇ ನಿನ್ನ ಕ್ರೀಡೆಗಾಗಿ ಅಪ್ಸರಸ್ತ್ರೀಯರನ್ನು ಮೊದಲೇ ಗೋಕುಲದಲ್ಲಿ ಅವತಾರ ಮಾಡಿಸಿ ನಂತರ ನೀನು ಅವತರಿಸಿದ್ದೀಯೆ. ಎಲೈ ಕೃಷ್ಣ ಇಲ್ಲಿ ಅವತರಿಸುವ ಗೋಪ ಗೋಪಿಯರೇ ನಮಗೆ ಬಾಂಧವರಾಗಿದ್ದಾರೆ. ಇಷ್ಟೊಂದು ಶೋಕಿಸುತ್ತಿರುವ ಈ ಬಂಧುಗಳನ್ನು ಏಕೆ ಸುಮ್ಮನೆ ಉಪೇಕ್ಷಿಸುತ್ತಿರುವೆ. ಮನುಷ್ಯರ ನಡವಳಿಕೆಯನ್ನು ನೀನು ತೋರಿಸಿದ್ದಾಯಿತು. ಬಾಲಕರ ಚಾಪಲ್ಯವನ್ನು ಮೆರಿಸಿದ್ದಾಯಿತು. ಇನ್ನು ಈ ದುಷ್ಟಾತ್ಮಾನಾದ ಕಾಳಿಯನ್ನು ದಮನಮಾಡು" ಎಂದನು. (ಹಿಂದೆ ರಾಮಾಯಣದಲ್ಲಿ ಬಂದಿರುವ ಸಮುದ್ರಲಂಘನಕ್ಕಾಗಿ ಆಂಜನೇಯನ ಪರಾಕ್ರಮವನ್ನು ಜಾಂಬವಂತನು ನೆನಪು ಮಾಡಿಕೊಟ್ಟ ಪ್ರಸಂಗ ನಮಗೆ ನೆನಪಿಗೆ ಬರುತ್ತದೆ ಅಲ್ಲವೇ ?

ಹೀಗೆ ನಿಜಸ್ವರೂಪವನ್ನು ನೆನಪು ಮಾಡಿಕೊಡಲಾಗಿ ಕೃಷ್ಣನು ಮೆಲ್ಲಗೆ ತುಟಿಯನ್ನು ತೆರೆದು ನಕ್ಕು ಮೈಯನ್ನು ಒಮ್ಮೆ ಕೊಡವಿ ಸರ್ಪ ಬಂಧನದಿಂದ ತನ್ನ ದೇಹವನ್ನು ಬಿಡಿಸಿಕೊಂಡನು. ನಂತರ ಅತಿಪರಾಕ್ರಮಿಯಾದ ಕೃಷ್ಣನು ತನ್ನ ಎರಡು ಕೈಗಳಿಂದ ಸರ್ಪರಾಜನ ನಡುವಿನ ಹೆಡೆಯನ್ನೆಳೆದು ಬಗ್ಗಿಸಿ ಅದರ ಮೇಲೆ ಹತ್ತಿ ನಿಂತು ನರ್ತನ ಮಾಡತೊಡಗಿದನು.

**ಶ್ರೀಪರಾಶರ ಉವಾಚ :**

**ಇತಿ ಸಂಸ್ಮಾರಿತಃ ಕೃಷ್ಣಃ ಸ್ಮಿತ ಭಿನ್ನೋಷ್ಠಸಂಪುಟಃ**
**ಆಸ್ಫೋಟ್ಯ ಮೋಚಯಾಮಾಸ ಸ್ವದೇಹಂ ಭೋಗಿ ಬಂಧನಾತ್**
**ಆಗಮ್ಯ ಚಾಪಿ ಹಸ್ತಾಭ್ಯಾ ಮುಭಾಭ್ಯಾಂ ಮಧ್ಯಮಂ ಶಿರಃ**
**ಆರುಹ್ಯ ಭುಗ್ನ ಶಿರಸಃ ಪ್ರಣನರ್ತೋರು ವಿಕ್ರಮಃ**
**ಪ್ರಾಣಾಃ ಫಣೇಭವಂಶ್ಚಾಸ್ಯ ಕೃಷ್ಣ ಸ್ವಾಂಘ್ರಿ ನಿಕುಟ್ಟನೈಃ**

**ಯತ್ರೋನ್ನತ್ನಂಚ ಕುರುತೇ ನನಾಮಾಸ್ಯ ತತಶ್ಶಿರಃ**

**ಮೂರ್ಜ್ವಾಮುಪಾಯಯೌ ಭ್ರಾಂತ್ಯಾನಾಗಃ ಕೃಷ್ಣಸ್ಯ ರೇಚಕೈಃ**

**ದಂಡಪಾತ ನಿಪಾತೇನ ವವಾಮ ರುಧಿರಂ ಬಹು ॥**

**ತಂ ವಿಭುಗ್ರ ಶಿರೋಗ್ರೀವ ಮಸ್ಯೇಭ್ಯಃ ಸ್ರುತಶೋಣಿತಮ್**

**ವಿಲೋಕ್ಯ ಶರಣಂ ಜಗ್ಮುಸ್ತತ್ಪತ್ನ್ಯೋ ಮಧುಸೂಧನಮ್**

(ವಿ.ಪು. 2ನೇ ಸಂ ಅ. 7 ಶ್ಲೋ 43 ರಿಂದ 47)

ಕೃಷ್ಣನ ಪಾದಗಳ ಕುಟ್ಟುವಿಕೆಯಿಂದಾಗಿ ಕಾಳಿಯನ ಪ್ರಾಣಗಳು ಫಣೆಗೆ ಬಂದವು. ಕಾಳಿಯನು ಯಾವ ಶಿರಸ್ಸನ್ನು ಮೇಲೆತ್ತುವನೋ ಅದನ್ನು ಕೃಷ್ಣನು ತುಳಿದು ಬಗ್ಗಿಸಿದನು. ಶ್ರೀಕೃಷ್ಣ ಭ್ರಮಣ, ರೇಚಕ ದಂಡನಿಪಾತಗಳೆಂಬ (ನೃತ್ಯಭಂಗಿ) ನೃತ್ಯಗತಿಗಳಿಂದ ನಾಗರಾಜನಿಗೆ ಮೂರ್ಛೆಯೇ ಬಂದುಬಿಟ್ಟಿತು. ಕೂಡಲೇ ನಾಗರಾಜನು ರಕ್ತವನ್ನು ಕಕ್ಕಿದನು. ಆತನ ತಲೆಗಳೂ ಕುತ್ತಿಗೆಗಳೂ ಬಗ್ಗಿಹೋದವು. ಇಂತಹ ಕರುಣಾಜನಕ ಸ್ಥಿತಿಯನ್ನು ಕಂಡು ಕಾಳಿಯನ ಪತ್ನಿಯರು ಮಧುಸೂದನನಲ್ಲಿ ಶರಣಾದರು. ಕೃಷ್ಣನ ಗುಣಾತಿಗುಣಗಳನ್ನು ವರ್ಣಿಸುತ್ತಾ ನಾಗರಾಜನನ್ನು ಕ್ಷಮಿಸಬೇಕೆಂದು ಜೀವದಾನ ನೀಡಬೇಕೆಂದು ಪರಿಪರಿಯಾಗಿ ಪ್ರಾರ್ಥಿಸಿದರು. ನಾಗರಾಜನೂ ಸಹ ಶ್ರೀಕೃಷ್ಣನಲ್ಲಿ ಪ್ರಾಣಭಿಕ್ಷೆಯನ್ನು ಬೇಡಿದನು. ತನ್ನ ಸೊಕ್ಕನ್ನು ಅಡಗಿಸಿದ್ದಿಯೇ, ನನ್ನಲ್ಲಿ ಉಳಿದಿರುವ ಪ್ರಾಣವನ್ನು ಹಾಗೆಯೇ ಉಳಿಸಿ ನಾನೇನು ಮಾಡಲಿ ಎಂದು ನೀನೇ ನನಗೆ ಆಜ್ಞಾಪಿಸು ಎಂದು ನಾಗರಾಜನು ಪ್ರಾರ್ಥಿಸಿದನು. ಆಗ ಭಗವಂತನು "ಎಲೈ ಸರ್ಪರಾಜನೇ ಈ ಯಮುನಾ ಜಲದಲ್ಲಿ ನೀನು ಎಂದಿಗೂ ಇರಬಾರದು. ಪತ್ನಿ ಪುತ್ರ, ಪರಿವಾರ ಸಮೇತನಾಗಿ ನೀನು ಸಮುದ್ರ ಜಲದತ್ತ ಹೊರಟುಹೋಗಿ. ಎಲೈ ಸರ್ಪನೇ ನಿನ್ನ ತಲೆಯ ಮೇಲೆ ಮಾಡಿರುವ ನನ್ನ ಪಾದ ಚಿಹ್ನೆಗಳನ್ನು ನೋಡಿ ಸರ್ಪವೈರಿಯಾದ ಗರುಡನು ನಿನ್ನ ಮೇಲೆ ಆಕ್ರಮಣ ಮಾಡುವುದಿಲ್ಲ" ಎಂದನು. ಶ್ರೀ ಕೃಷ್ಣನ ಆಜ್ಞೆಯಂತೆ ನಾಗರಾಜನು ತನ್ನ ಪರಿವಾರ ಸಹಿತ ಮಡುವನ್ನು ತ್ಯಜಿಸಿ ಸಮುದ್ರದತ್ತ ಹೊರಟುಹೋದನು. ಕಾಳಿಯ ಸರ್ಪವು ಹೊರಟು ಹೋಗಲಾಗಿ ಗೋಪಾಲಕರು ಶ್ರೀಕೃಷ್ಣನನ್ನು ಅಪ್ಪಿಕೊಂಡರು. ಈ

ಸಂದರ್ಭವನ್ನು ನಮ್ಮ ಕರ್ನಾಟಕದ ದಾಸಶ್ರೇಷ್ಠರೆನಿಸಿದ ಪುರಂದರದಾಸರು ಅತ್ಯಂತ ಮನೋಜ್ಞವಾಗಿ ವರ್ಣಿಸಿದ್ದಾರೆ. ಅದರ ಸವಿಯನ್ನು ಸಹ ನಾವು ಸವಿಯೋಣ. ಕಾಳಿಂಗ ನರ್ತನವೆಂಬುದೇ ಸೊಗಸಾದ ನರ್ತನಭಂಗಿ ಎಂದು ಪ್ರಸಿದ್ಧಿ.

**ಆಡಿದನೋ ರಂಗ ಅದ್ಭುತದಿಂದಲಿ ಕಾಳಿಂಗನ ಫಣೆಯಲಿ । ಪಾಡಿದವರಿಗೆ ಬೇಡಿದ ವರಗಳ ನೀಡುತಲಿ ನಲಿದಾಡುತಲಿ, ಕುಣಿದಾಡುತಲಿ ಆಡಿದನೋ ಕೃಷ್ಣ । ಪಣೆಯ ಮೆಟ್ಟಿ ಬಾಲ ಕೈಯಲ್ಲಿ ಪಿಡಿದು, ಫಳ ಫಳಿಸುತ ನಾಟ್ಯವನಾಡೆ ಕಾಲಂದಿಗೆ ಗೆಜ್ಜೆ ಘಲು ಘಲುರೆನ್ನುತ, ಉಡುಗೆಜ್ಜೆ ಘಂಟಗಳಾಡೆ ದುಷ್ಟ ಕಾಳಿಂಗನ ಮೆಟ್ಟಿ ಪಾದದಿಂದ ಪುಟ್ಟಪಾದವು ಇಟ್ಟು ಶ್ರೀಕೃಷ್ಣ ಮೆಟ್ಟಿದನೋ ತಕಧಿಮ್ ಧಿಮ್ ಎನ್ನುತ ॥ ಆಡಿದನೋ॥**

**ಸುರರು ಪುಷ್ಪದ ವೃಷ್ಟಿಯ ಕರೆಯಲು ಸುದತಿಯರೆಲ್ಲರು ಪಾಡಲು ನಾಗಕನ್ನಿಕೆಯರು ನಾಥನ ಬೇಡಲು, ನಾನಾ ವಿಧದಿ ಸ್ತುತಿ ಮಾಡಲು, ರಕ್ಕಸರೆಲ್ಲರೂ ಕಕ್ಕಸವನೇ ಕಂಡು ದಿಕ್ಕು ದಿಕ್ಕುಗಳಿಗೆ ಓಡಲು, ಚಿಕ್ಕವನಿವನಲ್ಲಾ ಪುರಂದರವಿಠಲಾ ವೆಂಕಟರಮಣನ ಬೇಗೆ ಯಶೋದೆ ಬಿಂಕದೊಳೆತ್ತಿ ಮುದ್ದಾಡೆ ಶ್ರೀಕೃಷ್ಣ ॥ ಆಡಿದನೋ ॥**

## ಬಲರಾಮನಿಂದ ಧೇನುಕಾಸುರ ವಧೆ

ಪ್ರತಿನಿತ್ಯದಂತೆ ಬಲರಾಮ ಕೃಷ್ಣನೊಡನೆ ಹಸುಗಳನ್ನು ನೋಡಿಕೊಳ್ಳುತ್ತಾ ಕಾಡಿನಲ್ಲಿ ತಿರುಗಾಡುತ್ತಿದ್ದನು. ಹೀಗೆ ಹೋಗುತ್ತಿರುವಾಗ ಅವರು ಒಂದು ದಿನ ತಾಳೆಯ ಮರಗಳ ವನಕ್ಕೆ ಹೋದರು. ಆ ತಾಲವನದಲ್ಲಿ ಧೇನುಕನೆಂಬ ರಾಕ್ಷಸನು ಕತ್ತೆಯ ಆಕೃತಿಯನ್ನು ಧರಿಸಿ ಮೃಗಮಾಂಸಗಳನ್ನು ತಿನ್ನುತ್ತಾ ಅಲ್ಲಲ್ಲೇ ಅಡ್ಡಾಡುತ್ತಿದ್ದನು. ಆ ತಾಲವನದಲ್ಲಿ ತಾಳೆಹಣ್ಣುಗಳು ಯಥೇಚ್ಛವಾಗಿ ಬೆಳೆದಿದ್ದವು. ಆ ಮಾಗಿದ ಹಣ್ಣುಗಳನ್ನು ಕಂಡು ಅವರಿಗೆ ತಿನ್ನಬೇಕೆಂಬ ಆಸೆಯಿತು ಗೋಪಾಲರು ಬಲರಾಮ ಕೃಷ್ಣನನ್ನು ಕುರಿತು ಈ ವನದಲ್ಲಿ ತಾಳೆಯ ಹಣ್ಣುಗಳು ಯಥೇಚ್ಛವಾಗಿ ಬಿಟ್ಟಿವೆ. ಆದರೆ ಅದನ್ನು ಕಿತ್ತು ತಿನ್ನಲು ಸಾಧ್ಯವೇ ಇಲ್ಲ. ಏಕೆಂದರೆ ಧೇನುಕಾಸುರನೆಂಬ ರಾಕ್ಷಸನು ಈ ವನವನ್ನು ಕಾಯುತ್ತಿದ್ದಾನೆ. ಸುಗಂಧವನ್ನು ಬೀರುವ ಈ ಹಣ್ಣುಗಳನ್ನು ನಮಗೂ ತಂದುಕೊಡಿ. ಆ ಹಣ್ಣುಗಳನ್ನು ತಿನ್ನಲು ನಮಗೆ

ಆಸೆಯಾಗಿದೆ ಎಂದು ಹೇಳಿದರು. ಆಗ ಬಲರಾಮನು ಮರಗಳನ್ನು ಅಲ್ಲಾಡಿಸಿ ಕೆಲವು ಹಣ್ಣುಗಳನ್ನು ಉದುರಿಸಿದನು. ಕೃಷ್ಣನೂ ಸಹ ಕೆಲವನ್ನು ಉದುರಿಸಿದನು. ಹಣ್ಣುಗಳು ಬೀಳುವ ಶಬ್ದವನ್ನು ಕೇಳಿ ದುರುಳನೂ ದೈತ್ಯ ಗರ್ಧಭನು ಸಿಟ್ಟೆದ್ದು ಅಲ್ಲಿಗೆ ಬಂದನು. ಬಲಶಾಲಿಯಾದ ಆ ದೈತ್ಯನು ತನ್ನ ಹಿಂಗಾಲುಗಳಿಂದ ಬಲರಾಮನ ಎದೆಗೆ ಒದ್ದನು. ಬಲರಾಮನು ಆತನ ಹಿಂಗಾಲುಗಳನ್ನು ಹಿಡಿದೆತ್ತಿ ಧೇನುಕಾಸುರನು ಸಾಯುವರೆಗೂ ಆಕಾಶದಲ್ಲಿ ಗಿರ್ರನೆ ತಿರುಗಿಸಿ ಕೊನೆಗೆ ತಾಳೆಯ ಮರಕ್ಕೆ ಬೀಸಿ ಹೊಡೆದನು. ಆ ಹೊಡೆತಕ್ಕೆ ಮರದ ತುದಿಯಿಂದ ಬೇಕಾದಷ್ಟು ಹಣ್ಣುಗಳು ಬಿದ್ದವು. ನಂತರ ಧೇನುಕಾಸುರನ ಸಹಚರರೂ ಅಲ್ಲಿಗೆ ಬಂದರು. ಬಲರಾಮ ಕೃಷ್ಣರಿಬ್ಬರೂ ಅವರನ್ನೆಲ್ಲಾ ಕ್ಷಣಮಾತ್ರದಲ್ಲಿ ಹೊಡೆದು ಬೀಳಿಸಿದರು. ನಂತರ ಗೋಪಾಲರು ನಿರಾತಂಕವಾಗಿ ಹಣ್ಣುಗಳನ್ನು ತಿಂದು ತೃಪ್ತಿಗೊಂಡರು. ಹಸುಗಳೂ ಸಹ ಆ ತಾಲವನದಲ್ಲಿ ಹುಲುಸಾಗಿ ಬೆಳೆದಿದ್ದ ಹುಲ್ಲುಗಳನ್ನು ಮೇಯ್ದು ಸಂತಸಪಟ್ಟವು.

## ಬಲರಾಮನಿಂದ ಪ್ರಲಂಭಾಸುರನ ವಧೆ

ಧೇನುಕಾಸುರನನ್ನು ವಧಿಸಿ ರಾಮಕೃಷ್ಣರೀರ್ವರು ಭಾಂಡೀರವೆಂಬ ವೃಕ್ಷದ ಕೆಳಗೆ ಬಂದರು. ಹಸುಕಟ್ಟುವ ಹಗ್ಗಗಳನ್ನು ಹೆಗಲ ಮೇಲೆ ಹೇರಿಕೊಂಡು ವನಮಾಲಾ ಭೂಷಿತರಾಗಿದ್ದ ರಾಮ–ಕೃಷ್ಣರು ಹೊಸದಾಗಿ ಕೊಂಬು ಹುಟ್ಟುತ್ತಿರುವ ಹೋರಿಗಳೋ ಎಂಬಂತೆ ಶೋಭಿಸುತ್ತಿದ್ದರು. ಹಳದಿ ಮತ್ತು ಕಪ್ಪುಬಣ್ಣಗಳಿಂದ ಬಣ್ಣಹಾಕಿದ ಪೀತಾಂಬರ ಮತ್ತು ಕೃಷ್ಣಾಂಬರಗಳನ್ನು ಅವರು ಧರಿಸಿದ್ದರು. ಇವರಿಬ್ಬರೂ ಇಂದ್ರ ಧನುಸ್ಸಿನೊಡನೆ ಪ್ರಕಾಶಿಸುವ ಬಿಳಿಯ ಮತ್ತು ಕಪ್ಪುಮೋಡಗಳಂತೆ ಶೋಭಿಸುತ್ತಿದ್ದರು. ಅಂದರೆ ಬಿಳಿಯ ಬಣ್ಣದ ಬಲರಾಮನು ಕೃಷ್ಣಾಂಬರಧಾರಿಯಾಗಿದ್ದನು. ಕಪ್ಪುಬಣ್ಣದ ಕೃಷ್ಣನು ಪೀತಾಂಬರಧಾರಿಯಾಗಿದ್ದನು. ಹೀಗೆ ಬಲರಾಮ ಕೃಷ್ಣರು ಆಟವಾಡುತ್ತಿರುವಾಗ ಪ್ರಲಂಭಾಸುರನೆಂಬ ರಾಕ್ಷಸನು ಅವರಿಬ್ಬರನ್ನು ಹಿಡಿದೊಯ್ಯಬೇಕೆಂದು ತಾನೂ ಗೊಲ್ಲರ ವೇಷಧರಿಸಿ ಗೊಲ್ಲರ ಗುಂಪಿನೊಳಗೆ ಬಂದು ಸೇರಿದನು. ಹೇಗಾದರೂ ಮಾಡಿ ಅವರನ್ನು

ಕರೆದೊಯ್ಯಬೇಕೆಂದು ಅವರಿಬ್ಬರಲ್ಲಿ ಕೃಷ್ಣನು ಅಜೇಯನೆಂದು ಭಾವಿಸಿ ಬಲರಾಮ ಇರುವತ್ತ ಹೊರಟನು. ಗೋಪಾಲರು ಹರಿಣಾಕ್ರೀಡೆಯನ್ನು ಆಡುತ್ತಿದ್ದರು. ಹೇಗೆಂದರೆ ಒಂದು ಸ್ಥಳದಿಂದ ಇಬ್ಬಿಬ್ಬರು ಏಕಕಾಲದಲ್ಲಿ ಹೊರಟು ನಿರ್ಧಿಷ್ಟ ಗುರಿಯ ಕಡೆಗೆ ಹರಿಣಗಳು ನಾಲ್ಕು ಕಾಲುಗಳಿಂದ ಓಡುವಂತೆ ಕೈಗಳನ್ನು ಊರಿಕೊಂಡು ವೇಗವಾಗಿ ಓಡತಕ್ಕದ್ದು. ಗುರಿಯನ್ನು ಇಬ್ಬರಲ್ಲಿ ಮೊದಲು ಯಾವಾತನು ತಲುಪುವನೋ ಅವನೇ ಗೆದ್ದವನು. ಮತ್ತೊಬ್ಬ ಸೋತವನು ಎಂದು ನಿರ್ಧರಿಸಲಾಗುತ್ತಿತ್ತು. ಅಷ್ಟೇ ಅಲ್ಲ ಸೋತವನು ಗೆದ್ದವನನ್ನು ಹೊತ್ತುಕೊಂಡು ನಿರ್ಧಿಷ್ಟವಾದ ಗುರಿಯವರೆಗೆ ಹೋಗಿ ಮತ್ತೆ ಸ್ವಸ್ಥಾನಕ್ಕೆ ಹಿಂದುರುಗಿ ಬರಬೇಕೆಂಬ ನಿಯಮ ಆಟದಲ್ಲಿತ್ತು. ಪ್ರಕೃತದಲ್ಲಿ ಭಾಂಡೀರ ವೃಕ್ಷವನ್ನು ಅವರು ಗುರಿಯಾಗಿ ಇಟ್ಟುಕೊಂಡಿದ್ದರು. ಈ ಆಟದಲ್ಲಿ ಶ್ರೀಧಾಮನೊಂದಿಗೆ ಕೃಷ್ಣನು, ಬಲರಾಮ ಪ್ರಲಂಭನೊಂದಿಗೆ ಹೊರಟರು. ಅಂತೆಯೇ ಇತರ ಗೋಪಾಲರು ಇಬ್ಬಿಬ್ಬರಾಗಿ ಹೊರಟು ಸ್ಪರ್ಧೆಯಲ್ಲಿ ಓಡಲು ಆರಂಭಿಸಿದರು.

ಕೃಷ್ಣನು ಶ್ರೀಧಾಮನನ್ನು ಬಲರಾಮನು ಪ್ರಲಂಭಾಸುರನನ್ನು ಸೋಲಿಸಿದನು. ಆಟದಲ್ಲಿ ಸೋತವರೆಲ್ಲರೂ ಗೆದ್ದವರನ್ನು ಹೊತ್ತುಕೊಂಡು ಭಾಂಡೀರ ವೃಕ್ಷದ ಬಳಿಗೆ ಹೋಗಿ ಮತ್ತೆ ಹೊರಟ ಸ್ಥಳಕ್ಕೆ ಹಿಂದಿರುಗಿದರು. ಆದರೆ ಪ್ರಲಂಭಾಸುರನಾದರೋ ಬಲರಾಮನನ್ನು ಹೆಗಲಮೇಲೆ ಹೊತ್ತುಕೊಂಡು ಚಂದ್ರ ಸಮೇತವಾದ ಮೇಘದಂತೆ ಆಕಾಶದತ್ತ ಹೋಗಿ ಸೇರಿದನು. ಹೆಸರಿಗೆ ತಕ್ಕಂತೆ ಬಲರಾಮನು ಅತ್ಯಂತ ಬಲಶಾಲಿಯಾಗಿದ್ದನು. ಅವನ ಭಾರವನ್ನು ತಾಳಲಾರದೆ ರಾಕ್ಷಸನು ತನ್ನ ದೇಹವನ್ನು ದೊಡ್ಡದಾಗಿ ಬೆಳೆಸಿದನು. ಅವನು ಕೆಳಗೆ ಆಟವಾಡುತ್ತಿರುವಾಗ ಅವನು ಹೆಜ್ಜೆಯಿಡುವ ರಭಸಕ್ಕೆ ಭೂಮಿಯೇ ಕಂಪಿಸುತ್ತಿತ್ತಂತೆ. ನಿರ್ಭಯನಾಗಿ ಪ್ರಲಂಭನು ತನ್ನನ್ನು ಒಯ್ಯುತ್ತಿರುವಾಗ ಬಲರಾಮನು ಕೃಷ್ಣನನ್ನು ಕುರಿತು "ಎಲೈ ಕೃಷ್ಣ ಪರ್ವತಾಕಾರದ ಯಾವನೋ ಒಬ್ಬ ದೈತ್ಯನು ನನ್ನನ್ನು ಹೊತ್ತುಕೊಂಡು ಹೋಗುತ್ತಿದ್ದಾನೆ. ಇವನು ಗೊಲ್ಲರ ವೇಷವನ್ನು ಧರಿಸಿ ಬಂದಿದ್ದನು. ಈಗ ನಾನೇನು ಮಾಡಲಿ ಹೇಳು ಎಂದನು. ಆಗ ಕೃಷ್ಣನು ಮುಗುಳ್ನಗೆಯನ್ನು ಬೀರುತ್ತಾ ಬಲರಾಮನನ್ನು ಉದ್ಧೇಶಿಸಿ ಹೀಗೆ ಹೇಳಿದನು –

**‘ಕಿಮಯಂ ಮಾನುಷೋಭಾವೋವ್ಯಕ್ತಮೇವಾವಲಂಖ್ಯತೇ**

**ಸರ್ವಾತ್ಮನ್ ಸರ್ವಗುಹ್ಯಾನಾಂ ಗುಹ್ಯ ಗುಹ್ಯಾತ್ಮನಾತ್ವಯಾ**

**ಸ್ಮರ ಶೇಷ ಜಗದ್ಬಿಜ ಕಾರಣಂ  ಕಾರಣಾಗ್ರಜಮ್**

**ಆತ್ಮಾನ ಮೇಕಂ ತದ್ವ ಚ್ಛ ಜಗತ್ಯೇಕಾರ್ಣವೇ ಚಯತ್**

**ಕಿಂ ನ ವೇತ್ಸಿ ಯಥಾಹಂ ಚತ್ವಂ ಚೈಕಂ ಕಾರಣ ಭುವಃ**

**ಭಾರರವತಾರಣಾರ್ಥಾಯ ಮರ್ತ್ಸ್ಯಲೋಕಮುಪಾಗತೌ**

(ವಿ.ಪು. ಪಂ.ಅಂ. ಅಧ್ಯಾಯ 9 ಶ್ಲೋಕ 23ರಿಂದ 25)

ಹೇ ಸರ್ವಾತ್ಮ ನೀನು ಸರ್ವರಹಸ್ಯಗಳಿಗೂ ಪರಮರಹಸ್ಯನಾಗಿದ್ದುಕೊಂಡು ಹೀಗೇಕೆ ಮನುಷ್ಯ ಭಾವವನ್ನೇಕೆ ತಳೆದಿರುವೆ. ನೀನು ಸಮಸ್ತ ಜಗತ್ತುಗಳ ಕಾರಣಕ್ಕೂ ಪೂರ್ವದಲ್ಲಿರುವ, ಮೂಲಕಾರಣನಾದ ಏಕೈಕ ಕಾರಣನೆಂಬುದನ್ನು ಪ್ರಳಯಕಾಲದಲ್ಲಿಯೂ ಉಳಿದಿರತಕ್ಕವನೆಂದು ಸ್ಮರಿಸಿಕೋ. ನಾನೂ, ನೀನೂ ಸಹ ಈ ವಿಶ್ವಕ್ಕೆ ಮೂಲಕಾರಣರೆಂಬುದನ್ನು ಭೂಭಾರವನ್ನು ಇಳಿಸುವುದಕ್ಕಾಗಿ ಈ ಮರ್ತ್ಯಲೋಕದಲ್ಲಿ ಅವತರಿಸಿರುವೆವು ಎಂಬುದನ್ನು ನೀನು  ತಿಳಿದಿಲ್ಲವೇ ಎಂದು ಕೇಳಿದನು. ಅಷ್ಟೇ ಅಲ್ಲ.

**ಸಹಸ್ರ ಪದ್ಮೋದ್ಭವಯೋ ನಿರಾಧ್ಯ – ಸಹಸ್ರಶಸ್ತ್ವಾಂ ಮುನಯೋ ಗೃಣಂತಿ**

**ದಿವ್ಯಂ ಹಿರೂಪಂ ತವ ವೇತ್ತಿ ನಾನ್ಯೋ ದೇವೈರ ಶೇಷೈರವತಾರ ರೂಪಮ್**

**ತದರ್ಚ್ಯತೇ ವೇತ್ಸಿ ನ ಕಿಂ ಯದಂತೇ ತ್ವಯ್ಯೇವ ವಿಶ್ವಂ ಲಯಮಭ್ಯುಪೈತಿ**

**ತ್ವಯಾ ಧೃತೇಯಂ ಧರಣೀ ಬಿಬರ್ತಿಚರಾಚರಂ ವಿಶ್ವಮನಂತಮೂರ್ತೇ**

(ವಿ.ಪು.2ನೇ ಸಂ. ಪಂ.ಅಂ. ಅಧ್ಯಾಯ 9 ಶ್ಲೋಕ 27ರಿಂದ 28)

ನೀನು ಸಹಸ್ರಮುಖವುಳ್ಳವನು. ನಿನಗೆ ಸಾವಿರ ಕೈಗಳಿವೆ. ಸಾವಿರ ಪಾದಗಳಿವೆ. ಸಾವಿರ ಶರೀರಗಳಿವೆ. ಸಾವಿರಾರು ಬ್ರಹ್ಮರು ನಿನ್ನಿಂದ ಜನಿಸಿದ್ದಾರೆ ಎಂದು ಸಾವಿರಾರು ಮಂದಿ ನಿನ್ನನ್ನು ಸ್ತೋತ್ರಮಾಡುತ್ತಾರೆ. ನಿನ್ನ ದಿವ್ಯವಾದ ರೂಪವನ್ನು ಮತ್ತೊಬ್ಬನು ಅರಿಯಲು ಸಾಧ್ಯವಿಲ್ಲ. ಆದ್ದರಿಂದ

ಸಮಸ್ತ ದೇವತೆಗಳೂ ನಿನ್ನ ಅವತಾರ ರೂಪವನ್ನೇ ಅರ್ಚಿಸುತ್ತಾರೆ. ಅಂತ್ಯಕಾಲದಲ್ಲಿ ಸಮಸ್ತ ಪ್ರಪಂಚವೂ ನಿನ್ನಲ್ಲಿಯೇ ಲಯ ಹೊಂದುತ್ತದೆ. ಹೇ ಅನಂತಮೂರ್ತಿ ನೀನು ಧರಿಸಿದೆ ಎಂದು ಮುಂತಾಗಿ ಕೃಷ್ಣನು ಬಲರಾಮನ ನಿಜಸ್ವರೂಪವನ್ನು ತಿಳಿಯಪಡಿಸಿದನು. ಸಾಕ್ಷಾತ್ ಮಹಾವಿಷ್ಣುವಿನ ಅವತಾರವೆಂದು ಪ್ರಸಿದ್ಧನಾದ ಶ್ರೀಕೃಷ್ಣನೇ ತನ್ನ ಅಣ್ಣ ಬಲರಾಮನ ಅವತಾರದ ವಿಶೇಷತೆಯನ್ನು ಹೇಳಿರುವುದರಿಂದ ಶ್ರೀಕೃಷ್ಣ ಬಲರಾಮರು ಮಾನುಷ ರೂಪದಲ್ಲಿ ಲೋಕಹಿತಾರ್ಥವಾಗಿ ಧರೆಗಿಳಿದು ಬಂದಿರುವರೆಂಬ ಸಂಗತಿಯಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಕೃಷ್ಣ ಬಲರಾಮನನ್ನು ಅನಂತ ಎಂದು ಹೇಳುತ್ತಾನೆ. ಆದ್ದರಿಂದ ಬಲರಾಮನು ಆದಿಶೇಷನ ಅವತಾರವೆಂದು ಖಚಿತವಾಗಿ ತಿಳಿಯುತ್ತದೆ. ಆದಿಶೇಷನೇ ಬಲರಾಮ ಅಥವಾ ಸಂಕರ್ಷಣನ ರೂಪದಲ್ಲಿ ಬಂದಿರುತ್ತಾನೆ ಎಂದು ತಿಳಿಯುತ್ತದೆ. ಭಗವಂತನ ವಿಭವ ಅವತಾರದಲ್ಲಿ ಅಂದರೆ ದಶಾವತಾರದಲ್ಲಿ ಬಲರಾಮನ ಅವತಾರವು ಒಂದು ಎಂಬುದರಲ್ಲಿ ಸಂದೇಹವೇ ಇಲ್ಲ. ಇತ್ತ ಶ್ರೀಕೃಷ್ಣನ ಮಾತನ್ನು ಕೇಳುತ್ತಲಿದ್ದ ಬಲರಾಮನು ಒಮ್ಮೆ ನಕ್ಕು ಪ್ರಲಂಭಾಸುರನನ್ನು ಅದುಮಿದನು. ಕ್ರೋಧದಿಂದ ರಕ್ತನೇತ್ರನಾಗಿ ಪ್ರಲಂಭನ ನೆತ್ತಿಯಮೇಲೆ ಮುಷ್ಠಿಯಿಂದ ಗುದ್ದಿದನು. ಆ ಗುದ್ದಿನ ರಭಸಕ್ಕೆ ದೈತ್ಯನ ಎರಡು ಕಣ್ಣುಗಳೂ ಹೊರಬಂದವು. ಮೆದುಳು ಈಚೆಗೆ ಬಂದಿತು. ಆ ಪ್ರಲಂಭಾಸುರನು ರಕ್ತವನ್ನು ಕಾರುತ್ತಾ ನೆಲದ ಮೇಲೆ ಬಿದ್ದು ಸತ್ತುಹೋದನು. ರಾಕ್ಷಸನು ಹತನಾದುದನ್ನು ಕಂಡು ಗೋಪಾಲರು ಭಲಾ, ಭಲಾ, ಭೇಷ್, ಭೇಷ್ ಎಂದು ಹೊಗಳಿದರು. ಹೀಗೆ ಪ್ರಲಂಭನು ಹತನಾಗಲು ಬಲರಾಮನು ಗೋಪಾಲರಿಂದ ಸ್ತುತಿಸಲ್ಪಟ್ಟನು. ನಂತರ ಎಲ್ಲರೂ ಗೋಕುಲಕ್ಕೆ ಹಿಂದಿರುಗಿ ಬಂದರು.

## ಗೋವರ್ಧನಗಿರಿಯ ಪೂಜೆ

ಈ ಹಿಂದೆಯೇ ಹೇಳಿದಂತೆ ಭಗವಾನ್ ಶ್ರೀಕೃಷ್ಣ ಜಗನ್ನಾಟಕ ಸೂತ್ರಧಾರಿ. ಅವನು ಪ್ರತಿಯೊಂದು ಕೃತ್ಯದಲ್ಲಿಯೂ ನಮ್ಮಂತಹ ಹುಲುಮಾನವನಿಗೆ ಯಾವುದೇ ಸಂದೇಶವನ್ನು ನೀಡುತ್ತಲೇ ಇರುತ್ತಾನೆ. ಅವನು ಮಾಡುವ ಕೃತ್ಯ ಈ ಚೇಷ್ಟೆಯೆನಿಸಿದರೂ ಅದರಲ್ಲಿ ಒಂದು ನೀತಿ ಬೋಧನೆ ಇದ್ದೇ ಇರುತ್ತದೆ.

ಅಂತಹುದೇ ಒಂದು ಪ್ರಸಂಗ ಶ್ರೀಕೃಷ್ಣ ಗೋವರ್ಧನ ಗಿರಿಧಾರಿಯಾಗಿ ತನ್ನ ಬಂದು ಬಳಗವನ್ನೆಲ್ಲಾ ರಕ್ಷಿಸಿದನು. ಅದರ ಬಗ್ಗೆ ಈಗ ತಿಳಿಯೋಣ.

ಪರಾಶರರು, ಮೈತ್ರೇಯರಿಗೆ ಈ ಪ್ರಸಂಗವನ್ನು ವಿವರಿಸುತ್ತಾರೆ. ಬಲರಾಮ, ಕೃಷ್ಣರು ವ್ರಜದಲ್ಲಿ ವಿಹರಿಸುತ್ತಿರುವಾಗ ಮಳೆಗಾಲವು ಕಳೆಯಿತು. ಕೊಳಗಳಲ್ಲಿ ಅರಳಿದ ತಾವರೆಗಳಿಂದ ಕೂಡಿ ಶರತ್ಕಾಲವು ಬಂದಿತು.

**ಪ್ರಾಣಾಯಾಮ ಇವಾಂಭೋಭಿಸ್ಸರಸಾಂ ಕೃತಪೂರಕೈಃ**

**ಅಭ್ಯಸ್ಯ ತೇನುದಿವಸಂ ರೇಚುಕಾಕುಂಭಕಾದಿಭಿಃ**

**ವಿಮಲಾಂಬರ ನಕ್ಷತ್ರೇ ಕಾಲೇ ಚಾಭ್ಯಾಗತೇ ವ್ರಜೇ**

**ದದರ್ಶೇಂದ್ರ ಮಹಾರಮ್ಭಾ ಯೋದ್ಯತಾಂಸ್ತಾನ್ ವ್ರಜೌಕಸ**

(ವಿ.ಪು. 2ನೇ ಸಂ.ಪಂಚಮಾಂಶ ಅ.10 ಶ್ಲೋ 15–16)

ಈ ಶರತ್ಕಾಲದಲ್ಲಿ ಎಲ್ಲೆಡೆಯೂ ನೀರು ತಿಳಿಯಾಯಿತು. ಇಂದ್ರಿಯಾರ್ಥಗಳಾದ ಶಬ್ದ, ರಸ, ಗಂಧ, ಸ್ಪರ್ಶಾದಿ ವಿಷಯಗಳಿಂದ ಇಂದ್ರಿಯಗಳನ್ನು ಪ್ರತ್ಯಾಹಾರ ಹೇಗೆ ಕಿತ್ತು ಬೇರ್ಪಡಿಸುವುದೋ ಹಾಗೆ ಆಕಾಶದಿಂದ ಮೋಡವನ್ನು  ನೆಲದಿಂದ ಕೆಸರನ್ನು, ನೀರಿನಿಂದ ಮಾಲಿನ್ಯವನ್ನು ಶರತ್ಕಾಲವು ಬೇರ್ಪಡಿಸಿ ದೂರಮಾಡಿತು.(ಇಲ್ಲಿ ಪ್ರತ್ಯಾಹಾರ ಎಂದು ಯೋಗಾಭ್ಯಾಸದ ಒಂದು ಪ್ರಕ್ರಿಯೆ. ಇದು ಇಂದ್ರಿಯ ನಿಗ್ರಹಕ್ಕಾಗಿ ಮಾಡುವ ಪ್ರಯತ್ನ. ಪೂರಕಗಳನ್ನು ಮಾಡಿದ ಜಲಾಶಯಗಳ ಜಲಗಳು ಈಗ ಕುಂಭಕ ರೇಚಕಗಳಿಂದ ಪ್ರಾಣಾಯಾಮವನ್ನು ಅಭ್ಯಾಸ ಮಾಡುತ್ತಿವೆಯೋ ಎಂಬಂತೆ ಕಾಣಿಸಿದವು.) ಪ್ರಾಣಾಯಾಮ ಮಾಡುವಾಗ ಪೂರಕ ಎಂದರೆ ಉಸಿರನ್ನು ಒಳಗೆ ತೆಗೆದುಕೊಳ್ಳುವುದು ಕುಂಭಕ= ಉಸಿರುಕಟ್ಟುವುದು. ರೇಚಕ = ಕ್ರಮವಾಗಿ ಉಸಿರನ್ನು ಹೊರಬಿಡುವುದು ಅಂತೆಯೇ ಜಲಾಶಯವು. ಪೂರಕ=ಮಳೆಗಾಲದಲ್ಲಿ ನೀರು ತುಂಬಿಕೊಳ್ಳುತ್ತದೆ. ಕುಂಭಕ = ನೀರನ್ನು ಹಾಗೆಯೇ ಧರಿಸಿರುತ್ತದೆ. ರೇಚಕ–ಕಾಲುವೆಗಳ ಮೂಲಕ ನೀರನ್ನು

ಬಿಡುತ್ತದೆ. ಈ ಪ್ರಕಾರವಾಗಿ ನಿರ್ಮಲವಾದ ಗಗನವೂ ನಕ್ಷತ್ರಗಳೂ ಇರುವ ಶರತ್ಕಾಲವಾಗಿ ಬರಲಾಗಿ ವ್ರಜದಲ್ಲಿರುವ ವ್ರಜವಾಸಿಗಳೆಲ್ಲರೂ 'ಇಂದ್ರಮಹ' ಎಂಬ ಹಬ್ಬವನ್ನು ಆಚರಿಸಲು ತೊಡಗಿದರು. ಇದು ದೇವೇಂದ್ರನನ್ನು ಪೂಜಿಸುವ ಹಬ್ಬದ ಸಡಗರ, ಇಂದ್ರನು ಮಳೆ ಸುರಿಸಿದನಲ್ಲಾ ಎಂದು ಅವನಿಗೆ ಕೃತಜ್ಞತಾಪೂರ್ವಕವಾಗಿ ಆಚರಿಸುವ ಹಬ್ಬದ ಸಡಗರ. ಶ್ರೀಕೃಷ್ಣನಿಗೆ ಹೀಗೆ ಹಬ್ಬದ ಆಚರಣೆ ಮಾಡುವುದು ಸರಿ ಹೋಗಲಿಲ್ಲ. ಗೋಪಾಲರು ಉತ್ಸಾಹದಿಂದ ಈ ಉತ್ಸವದಲ್ಲಿ ಸಂಭ್ರಮಿಸುತ್ತಿರುವುದನ್ನು ನೋಡಿದ ಶ್ರೀಕೃಷ್ಣನು ವೃದ್ಧರನ್ನು ಕುರಿತು ಹೀಗೆ ಕೇಳಿದನು "ಪೂಜ್ಯರೇ ನೀವು ಬಹಳ ಹರ್ಷಿತರಾಗಿದ್ದಿರಲ್ಲ 'ಇಂದ್ರಮಹ' ಎಂದರೆ ಯಾವುದಿದು" ಎಂದು ಕೇಳಿದನು. ಆಗ ನಂದಗೋಪನು ಅತ್ಯಂತ ಆದರದಿಂದ ಹೀಗೆಂದನು. ದೇವರಾಜನಾದ ಶತಕ್ರತುವು ಮೇಘಗಳಿಗೂ ಜಲಕ್ಕೂ ಅಧಿದೇವತೆ. ಆತನ ಪ್ರೇರಣೆಯಿಂದ ಮೇಘಗಳು ಜಲಮಯವಾದ ರಸವನ್ನು ಸುರಿಸುತ್ತವೆ. ಅಂತಹ ಮಳೆಯಿಂದ ಬೆಳೆದ ಸಸ್ಯಗಳನ್ನು, ಅನ್ಯ ಪ್ರಾಣಿಗಳನ್ನು ತಿಂದು ನಾವು ಜೀವಿಸುತ್ತಿದ್ದೇವೆ. ಸಸ್ಯಗಳನ್ನು ಬಳಸುವ ನಾವು ದೇವತೆಗಳನ್ನು ತೃಪ್ತಿಗೊಳಿಸುತ್ತಿದ್ದೇವೆ. ಆದ್ದರಿಂದ ಮಳೆಗಾಲವಾದ ನಂತರ ಎಲ್ಲ ರಾಜರೂ ಸಂತುಷ್ಟರಾಗಿ ಈ ಬಗೆಯ ಯಜ್ಞಗಳಿಂದ ದೇವೇಂದ್ರನನ್ನು ಪೂಜಿಸುತ್ತಾರೆ. ಹಾಗೆಯೇ ಮನುಷ್ಯರಾದ ನಾವು ಸಹ 'ಇಂದ್ರಮಹ'ವನ್ನು ಆಚರಿಸುತ್ತೇವೆ ಎಂದನು. ಆಗ ಕೃಷ್ಣನು ಇಂದ್ರನಿಗೆ ರೋಷವನ್ನು ಬರಿಸುವ ರೀತಿಯಲ್ಲಿ ಹೀಗೆಂದನು.

**ನವಯಂ ಕೃಷಿಕರ್ತಾತೋ ವಾಣಿಜ್ಯೋ ಜೀವಿನೋ ನ ಚ**
**ಗಾವೋಸ್ಮ ದೈವತಂ ತಾತ ವಯಂ ವನಚರಾಯತಃ**

**ಆನ್ವೀಕ್ಷಕೀ ತ್ರಯೀ ವಾರ್ತಾ ದಂಡನೀತಿಸ್ತಥಾ ಪರಾ**
**ವಿದ್ಯಾಚತುಷ್ಟಯಂ ಚೈತದ್ವಾರ್ತ್ತಾ ಮಾತ್ರಕ ಶೃಣುಷ್ವ ಮೇ**

**ಕೃಷಿರ್ವಣಿಜ್ಯಾ ತದ್ವಚ್ಚ ತೃತೀಯಂ ಪಶುಪಾಲನಮ್**
**ವಿದ್ಯಾಹ್ಯೇಕಾ ಮಹಾಭಾಗ ವಾರ್ತಾ ವೃತ್ತಿತ್ರಯಾಶಯಾ**

**ಕರ್ಷಕಾಣಾಂ ಕೃಷಿರ್ವೃತ್ತಿಃ ಪಣ್ಯಂ ವಿಪಣಿ ಜೀವಿನಾಮ್**
**ಅಸ್ಮಾಕಂಗೌಃ ಪರಾ ವೃತ್ತಿ ವಾರ್ತಾ ಬೇಧೈರಿಯಂ ತ್ರಿಚಃ**

**ವಿದ್ಯಯಾ ಯೋ ಯಯಾ ಯುಕ್ತ ಸ್ತಸ್ಯ ಸಾದೈವತಂ ಮಹತ್**
**ಸ್ರೋವ ಪೂಜ್ಯಾ ರ್ಚನೀಯಾ ಚ ಸೈವ ತಸ್ಯೋಪ ಕಾರಿಕಾ**
**ಯೋಯಸ್ಯ ಫಲ ಮಶ್ನನ್ ವೈಪೂಜಯತ್ಸಪರಂ ನರಃ**
**ಇಹ ಚಪ್ರತ್ಯಜೈ ವಾದೌನತದಾಪ್ನೋತಿಶೋ**

(ವಿ.ಪು. 2ನೇ ಸಂ ಪಂಚಮಾಶ ಶ್ಲೋ 20ರಿಂದ 31)

ಎಲೈ ಸ್ವಾಮಿ ನಾವು ಕೃಷಿಕರಲ್ಲ. ವಣಿಜರಲ್ಲ. ಕಾಡಿನಲ್ಲಿರತಕ್ಕವರು ಗೋವುಗಳೇ ನಮ್ಮ ದೇವತೆ 1) ಆನ್ವೀಕ್ಷಕಿ (ತರ್ಕಶಾಸ್ತ್ರ) 2) ವೇದತ್ರಯೀ ವಾರ್ತಾ 3) ದಂಡನೀತಿ 4) ಅರ್ಥಶಾಸ್ತ್ರ) ಎಂದು ನಾಲ್ಕು ವಿದ್ಯೆಗಳು ಇರತಕ್ಕವು. ಇವುಗಳಲ್ಲಿ ವಾರ್ತೆಯೆಂದರೆ ಏನೆಂಬುದನ್ನು ಹೇಳುತ್ತೇನೆ ಕೇಳು. ಕೃಷಿ, ವಾಣಿಜ್ಯ ಮತ್ತು ಪಶುಪಾಲನೆ. ಈ ಮೂರೂ ವೃತ್ತಿಗಳನ್ನು ಒಳಗೊಂಡದ್ದು ವಾರ್ತೆಯೆಂಬ ವಿದ್ಯೆ. ಬೇಸಾಯಗಾರರ ವೃತ್ತಿ. ಕೃಷಿ. ವಣಿಜರ ವೃತ್ತಿ ವ್ಯಾಪಾರ. ನಮಗೆಲ್ಲ ಪಶುಪಾಲನೆಯೇ ಮುಖ್ಯವಾದ ವೃತ್ತಿ. ಯಾವ ವ್ಯಕ್ತಿಯು ಯಾವ ವಿದ್ಯೆಯಿಂದ ಕೂಡಿರುತ್ತಾನೋ ಅವನಿಗೆ ಆ ವಿದ್ಯೆಯೇ ಮಹತ್ತರವಾದ ದೇವತೆಯೆಂದು ತಿಳಿಯಬೇಕು. ಆ ದೇವತೆಯನ್ನೇ ಸೇವಿಸಬೇಕು. ಆ ದೇವತೆಯನ್ನೇ ಅರ್ಚಿಸಬೇಕು. ಆ ವ್ಯಕ್ತಿಗೆ ಅದೇ ಉಪಕಾರೀ ದೇವತೆ. ಒಬ್ಬರಿಂದಾದ ಫಲವನ್ನು ಅನುಭವಿಸುತ್ತಾ ಅವರನ್ನು ಬಿಟ್ಟು ಇನ್ನೊಬ್ಬರನ್ನು ಯಾವ ಮನುಷ್ಯನು ಪೂಜಿಸುತ್ತಾನೋ ಅವನಿಗೆ ಇಹದಲ್ಲಿಯೂ ಪರದಲ್ಲಿಯೂ ಒಳ್ಳೆಯದಾಗುವುದಿಲ್ಲ. ನಾವುಗಳೆಲ್ಲಾ ಅರಣ್ಯವಾಸಿಗಳು. ಅರಣ್ಯದ ಗಡಿಯಲ್ಲಿರತಕ್ಕವು ಪರ್ವತಗಳು. ಆದ್ದರಿಂದ ಪರ್ವತಗಳೇ ನಮಗೆ ಪರಮಗತಿ. ನಾವೆಲ್ಲರೂ ಬಾಗಿಲು, ಗೋಡೆ, ಕೋಟೆ ಮುಂತಾದ ನಿಯಮಿತ ಆವರಣದೊಳಗೆ ನೆಲಸತಕ್ಕವರಲ್ಲ. ನಮಗೇಂತ ಮನೆಯಾಗಲೀ ಹೊಲವಾಗಲೀ ಇಲ್ಲ. ನಾವು ಸದಾ ಸಂಚಾರಿಗಳು. ಮುನಿಗಳಂತೆ ಒಂದು ಕಡೆಯಿಂದ ಚಲಿಸುವ ಜನರು ನಾವು. ಅಲ್ಲದೆ

ಕಾಮರೂಪಿಗಳಾದ ಈ ಪರ್ವತಗಳು ಬೇರೆ ಬೇರೆ ರೂಪವನ್ನು ಧರಿಸಿ ತಮ್ಮ ಶಿಖರಪ್ರಾಂತಗಳಲ್ಲಿ ಸಂಚರಿಸುತ್ತವೆಯೆಂದು ಸಮಾಚಾರ ಕೇಳಿಬರುತ್ತದೆ. ಈ ವನವಾಸಿಗಳೇನಾದರೂ ಅರಣ್ಯದ ಪ್ರಾಣಿಗಳನ್ನು ಬಾಧಿಸತೊಡಗಿದರೆ ಆಗ ಆ ಪರ್ವತಗಳು ಸಿಂಹಾದಿರೂಪಗಳನ್ನು ಧರಿಸಿ ಆ ಜನರನ್ನು ಕೊಂದು ಹಾಕುತ್ತವೆಯೆಂದು ಸುದ್ದಿ ಇದೆ. ಆದ್ದರಿಂದ ಗಿರಿಯಜ್ಞವನ್ನು ಗೋಯಜ್ಞವನ್ನು ನಾವು ಆಚರಿಸೋಣ. ದೇವೇಂದ್ರನಿಂದ ನಮಗೇನಾಗಬೇಕಾಗಿದೆ? ಗೋವುಗಳು ಹಾಗೂ ಬೆಟ್ಟಗಳೇ ನಮ್ಮ ದೇವತೆಗಳು. ಆದ್ದರಿಂದ ಅವುಗಳನ್ನೇ ಪೂಜಿಸೋಣ. **ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ** ಎಂಬ ಗೀತಾಚಾರ್ಯನ ಮಾತೂ ಸಹ ಇಲ್ಲಿ ನೆನೆಪಿಗೆ ಬರುತ್ತದೆ. ಅಂತೂ ವ್ರಜವಾಸಿಗಳೆಲ್ಲಾ ಕೃಷ್ಣನು ಹೇಳಿದಂತೆ ಗಿರಿಯಜ್ಞವನ್ನು ನಡೆಸಿದರು. ಗೋವರ್ಧನಗಿರಿಯ ಪೂಜೆ, ಹೋಮ, ಬ್ರಾಹ್ಮಣ ಭೋಜನ ಮುಂತಾದವುಗಳು ನಡೆದ ನಂತರ ಶರತ್ಕಾಲದ ಹೂಮಾಲೆಗಳಿಂದ ಅಲಂಕೃತವಾದ ಹಸುಗಳು ಗೋಪರು ಗೋವರ್ಧನ ಗಿರಿಯ ಪ್ರದಕ್ಷಿಣೆ ಮಾಡಿದರು. (ಒಂದು ವಿಶೇಷವೇನೆಂದರೆ ಇಂದಿಗೂ ಮಥುರಾ ಬಳಿ ಇರುವ ಗೋವರ್ಧನ ಗಿರಿ ನಿರಂತರ ಪೂಜೆಪುನಸ್ಕಾರಗಳನ್ನು ಭಕ್ತರು ಆಚರಿಸಿ ಗಿರಿ ಪ್ರದಕ್ಷಿಣೆ ಮಾಡುತ್ತಾರೆ. ಬೆಟ್ಟವೇ ದೈವ, ಗೋವರ್ಧನ ಗಿರಿಯ ಶಿಖರದ ಮೇಲೆ ಶ್ರೀಕೃಷ್ಣನು ರೂಪಾಂತರವನ್ನು ಧರಿಸಿ ಕುಳಿತುಕೊಂಡು "ನಾನು ಪರ್ವತರಾಜ" ಎಂದು ಹೇಳುತ್ತಾ ಗೋಪವರ್ಯರು ತಂದು ಅರ್ಪಿಸಿದ ನಾನಾ ಬಗೆಯ ಆಹಾರವನ್ನು ಭುಜಿಸಿದನು. ಅದೇ ಶ್ರೀಕೃಷ್ಣನು ತನ್ನ ಸಹಜರೂಪದಿಂದ ಬೆಟ್ಟದ ಶಿಖರವನ್ನು ಹತ್ತಿ ಗೋಪರೊಡನೆ ತನ್ನದೇ ಆದ ರೀತಿಯಲ್ಲಿ ಗಿರಿಯನ್ನು ಅರ್ಚಿಸಿದನು. ನಂತರ ಪರ್ವತರಾಜ ಅಂತರ್ಧಾನನಾದನು.

ಇತ್ತ ಇಂದ್ರಮಹವು ನಿಂತುಹೋಯಿತಲ್ಲಾ ಎಂದು ಕುಪಿತನಾಗಿ ಇಂದ್ರನು ಮೇಘಗಣವನ್ನು ಕರೆದು ಇಂತೆಂದನು. ನಂದಗೋಪರು ಕೃಷ್ಣನ ಆಶ್ರಯ ಪಡೆದು ಇಂದ್ರಮಹವನ್ನು ನಿಲ್ಲಿಸಿದ್ದಾರೆ. ಗೊಲ್ಲರ ಜೀವನಮೂಲವಾದ ಗೋವುಗಳನ್ನು ಮಳೆ ಬಿರುಗಾಳಿಯಿಂದ ಪೀಡಿಸಿರಿ. ನಾನೂ ಸಹ ಪರ್ವತ ಶಿಖರದಂತಿರುವ ಉನ್ನತವಾದ ಗಜವನ್ನೇರಿ ಬಿರುಗಾಳಿ

ಮಳೆಗಳನ್ನು ಸುರಿಸುವ ಕಾರ್ಯದಲ್ಲಿ ನಿಮಗೆ ನೆರವಾಗುವೆನು ಎಂದನು. ಇಂದ್ರನ ಆಜ್ಞೆಯಂತೆ ಆ ಮೇಘಗಳು ವ್ರಜದ ಗೋವುಗಳು ನಾಶವಾಗುವ ಪರಿಯಲ್ಲಿ ಭೀಕರವಾದ ಜಡಿಮಳೆಯನ್ನು ಸುರಿಸಲಾರಂಭಿಸಿದವು. ಒಂದೇ ಕ್ಷಣದಲ್ಲಿ ಭೂಮಿ ಆಕಾಶ, ದಿಕ್ಕುಗಳು ಧಾರಾಕಾರವಾದ ಮಳೆಯಿಂದ ಏಕಾಕಾರವಾಗಿ ಹೋದವು. ಎಡಬಿಡದೆ ಸುರಿಯುವ ಮೋಡಗಳ ನಿಬಿಡವಾದ ಜಡಿಮಳೆಯಿಂದ ಲೋಕದಲ್ಲಿ ಕತ್ತಲೆ ಕವಿಯಿತು. ಕೆಳಗೆ ಮೇಲೆ ಅಡ್ಡಲಾಗಿ ಜಗತ್ತೆಲ್ಲಾ ಜಲಮಯವಾಯಿತು. ಬಿರುಗಾಳಿಯಿಂದ ಕಂಪಿಸುತ್ತಿದ್ದ ಕತ್ತುಗಳುಳ್ಳ ಕರುಗಳು ಕರುಣಾಪೂರ್ಣವಾಗಿ ಕೃಷ್ಣನನ್ನು ಕುರಿತು "ತ್ರಾಹಿತ್ರಾಹಿ" ಕಾಪಾಡು 'ಕಾಪಾಡು' ಎಂದು ಬೇಡತೊಡಗಿದವು. ಗೋಪ ಗೋಪಿಯರೂ ಕೃಷ್ಣನಲ್ಲಿ ಮೊರೆಹೊಕ್ಕರು. ಆಗ ಕೃಷ್ಣನು ವಿಶಾಲ ಶಿಲೆಗಳಿಂದ ದಟ್ಟವಾಗಿರುವ ಗೋವರ್ಧನಗಿರಿಯನ್ನೇ ಧೈರ್ಯದಿಂದ ತನ್ನ ಒಂದೇ ಕೈಯಲ್ಲಿ ಕಿತ್ತು ಎತ್ತಿ ಗೋಕುಲದ ಮೇಲ್ಗಡೆ ಒಂದು ದೊಡ್ಡದಾದ ಕೊಡೆಯಂತೆ ಹಿಡಿದನು. ಕೃಷ್ಣನು ಗೋಪಾಲರನ್ನು ಕುರಿತು "ಮಳೆಯನ್ನು ತಡೆಯುವಂತೆ ಮಾಡಿದ್ದೇನೆ. ಎಲ್ಲರೂ ಬೇಗ ಈ ಬೆಟ್ಟದ ಅಡಿಗೆ ಬಂದು ಸೇರಿಕೊಳ್ಳಿರಿ. ಬೆಟ್ಟವು ಬಿದ್ದಿತೆಂಬ ಭಯಬೇಡ. ನಿರ್ಭಯವಾಗಿ ಪ್ರವೇಶಿಸಿರಿ" ಎಂದನು. ಆಗ ಗೋಪರೆಲ್ಲರೂ ತಮ್ಮ ಗೋವುಗಳೊಡನೆ ಬೆಟ್ಟದ ಅಡಿಗೆ ಬಂದರು. ಮಳೆಯಿಂದ ತೊಂದರೆಗೊಳಗಾದ ಗೋಪಿಯರು ತಮ್ಮ ಪಾತ್ರೆಪಡಗಗಳನ್ನು ಗಾಡಿಯ ಮೇಲೆ ಹೇರಿಕೊಂಡು ಬಂದರು. ಶ್ರೀಕೃಷ್ಣನಾದರೋ ಆ ಶೈಲವು ಅಲ್ಲಾಡದಂತೆ ನಿಶ್ಚಲವಾಗಿ ಎತ್ತಿ ಹಿಡಿದುಕೊಂಡಿದ್ದನು. ವ್ರಜವಾಸಿಗಳೆಲ್ಲಾ ಆನಂದ ಹಾಗೂ ಆಶ್ಚರ್ಯಚಕಿತರಾಗಿ ಕೃಷ್ಣನನ್ನು ನೋಡುತ್ತಿದ್ದರು. ಅತ್ಯಂತ ಹರ್ಷಿತರಾದ ಅವರು ಕೃಷ್ಣನ ಗುಣಗಾನ ಮಾಡತೊಡಗಿದರು. ಆ ನಂದಗೋಕುಲದಲ್ಲಿ ಮಹಾಮೇಘಗಳು ಸತತವಾಗಿ ಏಳು ರಾತ್ರಿಗಳವರೆಗೆ ಮಳೆ ಸುರಿಸಿದವು. ಗೋವುಗಳಾಗಲಿ, ಗೋಪರಾಗಲೀ ವಿಚಲಿತರಾಗದೆ ಕೃಷ್ಣ ಕೃಪಾಸಾನ್ನಿಧ್ಯದಲ್ಲಿ ಇದ್ದರು. ಹೀಗೆ ಇಂದ್ರನ ಪ್ರತಿಜ್ಞೆ, ಪ್ರಯತ್ನ ಸುಳ್ಳಾಯಿತು. ಹೀಗಾಗಿ ಇನ್ನು ಮಳೆ ಸುರಿಸುವುದು ಬೇಡ ಎಂದು ಮೇಘಗಳನ್ನು ಇಂದ್ರನು ತಡೆದನು. ಮೋಡಗಳು ಚದುರಿ ಆಕಾಶವು ಸ್ವಚ್ಛವಾಯಿತು. ನಂತರ ಗೋಕುಲದವರೆಲ್ಲರೂ ಸಂತೋಷದಿಂದ ತಮ್ಮ ಸ್ವಸ್ಥಾನವನ್ನು

ಸೇರಿದರು. ನಂತರ ಶ್ರೀಕೃಷ್ಣನು ಗೋವರ್ಧನ ಮಹಾಶೈಲವನ್ನು ಸ್ವಸ್ಥಾನದಲ್ಲಿ ಇಳಿಸಿದನು. ಹೀಗಿರುವಲ್ಲಿ ದೇವೇಂದ್ರನು ಅಲ್ಲಿಗೆ ಆಗಮಿಸಿ ಶ್ರೀಕೃಷ್ಣನನ್ನು ಸ್ತೋತ್ರಮಾಡಿದನು. ನಂತರ ಆತನಿಗೆ ಉಪೇಂದ್ರನೆಂದು ಗೋವಿಂದನೆಂದು ಹೆಸರಿಟ್ಟು ಪಟ್ಟಾಭಿಷೇಕ ಮಾಡಿದನು. ಅಷ್ಟೇ ಅಲ್ಲ ತನ್ನ ಅಂಶದಿಂದ ಜನಿಸಿದ ಅರ್ಜುನನ ಹಿತರಕ್ಷಣೆ ಮಾಡಬೇಕೆಂದು ಪ್ರಾರ್ಥಿಸಿದನು. "ಅದಕ್ಕೆ ಶ್ರೀಕೃಷ್ಣನು "ಎಲೈ ಇಂದ್ರ ನಿನ್ನ ಅಂಶದಿಂದ ಭರತವಂಶದಲ್ಲಿ ಪಾರ್ಥನು ಹುಟ್ಟಿದ್ದಾನೆ ಎಂಬುದನ್ನು ನಾನು ಬಲ್ಲೆ. ನಾನು ಭೂತಳದಲ್ಲಿರುವವರೆಗೂ ಆತನನ್ನು ಸಂರಕ್ಷಿಸುವೆನು. ನಾನು ಈ ಭೂಮಿಯಲ್ಲಿ ಇರುವವರೆಗೂ ಯಾರೂ ಅವನನ್ನು ಜಯಿಸಲಾರ ಅಷ್ಟೇಅಲ್ಲಿ

**ಕಂಸೋನಾಮ ಮಹಾಬಾಹುರ್ದೈತೋರಿಷ್ಟಸ್ತಥಾ ಸುರಃ**

**ಕೇಶಿ ಕುವಲಯಾಪೀಡೋ ನರಕಾದ್ಯಾಸ್ತಥಾಪರೇ**

**ಹತೇಷು ತೇಷು ದೇವೇಂದ್ರ ಭವಿಷ್ಯತಿ ಮಹಾಹವಃ**

**ತತ್ರವಿದ್ಧಿ ಸಹಸ್ರಾಕ್ಷ ಭಾರಾವತರಣಂ ಕೃತಮ್**

**ಸತ್ವಂಗಚ್ಛನ ಸಂತಾಪಂ ಪುತ್ರಾರ್ಥೇ ಕರ್ಮಮರ್ಹಸಿ**

**ನಾರ್ಜುನಸ್ಯ ರಿಪುಃ ಕಶ್ಚಿನ್ಮ ಮಾಗ್ರೇ ಪ್ರಭವಿಷ್ಯತ**

**ಅರ್ಜುನಾರ್ಥೇ ತ್ವಹಾ ಸರ್ವಾನ್ ಯುಧಿಷ್ಠಿರ ಪುರೋಗಮಾನ್**

**ನಿವೃತ್ತೆ ಭಾರತೇ ಯುದ್ಧೇ ಕುಂತ್ಯೈ ದಾಸ್ವಾಮವಿಕ್ಷತಾನ್**

(ವಿ.ಪು. 2ನೇ ಸಂ.ಪ. ಅಂ ಅ 12. ಶ್ಲೋ 21ರಿಂದ 24)

ಎಲೈ ಶಕ್ರ ಅರಿಂದಮ – ನಾನು ಈ ಭೂಮಿಯಲ್ಲಿ ಇರುವವರೆಗೂ ಅರ್ಜುನನನ್ನು ಯುದ್ಧದಲ್ಲಿ ಯಾವನೂ ಜಯಿಸಲಾರ. ದೇವೇಂದ್ರ – ಕಂಸನೆಂಬ ಮಹಾದೈತ್ಯನಿದ್ದಾನೆ. ಹಾಗೆಯೇ ಅರಿಷ್ಟ, ಕೇಶಿ, ಕುವಲಯಾಪೀಡ ನರಕ ಮುಂತಾದ ಅಸುರರು ಇದ್ದಾರೆ. ಇವರೆಲ್ಲರೂ ಹತರಾದ ನಂತರ ಒಂದು ಮಹಾಯುದ್ಧವು ನಡೆಯುತ್ತದೆ. ಎಲೈ ಸಹಸ್ರಾಕ್ಷ, ಆಗ ಈ ಭೂಭಾರವು ಇಳಿಯುವುದೆಂದು ತಿಳಿ. ನೀನು ನಿನ್ನ ಮಗನಿಗಾಗಿ

ಚಿಂತಿಸಬೇಡ. ಹೋಗು ನನ್ನೆದುರಿಗೆ ಯಾವ ವೈರಿಯೂ ಅರ್ಜುನನ ಮೇಲೆ ಕೈಹಾಕಿ ಸಫಲನಾಗಲಾರ. ಭಾರತಯುದ್ಧವು ಸಮಾಪ್ತವಾದ ನಂತರ ಅರ್ಜುನನಿಗೋಸ್ಕರವೇ ಯುಧಿಷ್ಠಿರಾದಿಗಳನ್ನು ಉಳಿಸಿ ಕುಂತಿಗೆ ಒಪ್ಪಿಸುವೆನು ಎಂದನು. ಜನಾರ್ಧನನು ಹೀಗೆ ನುಡಿಯಲಾಗಿ ಇಂದ್ರನು ಅತ್ಯಂತ ಸಂತಸಭರಿತನಾಗಿ ತನ್ನ ಐರಾವತ ಗಜವನ್ನೇರಿ ದೇವಲೋಕಕ್ಕೆ ಹೊರಟುಹೋದನು. ಇತ್ತ ಶ್ರೀಕೃಷ್ಣನು ಗೋವುಗಳಿಂದಲೂ, ಗೋಪಾಲರಿಂದಲೂ, ಪರಿವೃತನಾಗಿ ಮತ್ತೆ ವ್ರಜಕ್ಕೆ ಹಿಂದಿರುಗಿದನು. ಈ ಎಲ್ಲ ಸಂಗತಿಗಳಿಂದ ಶ್ರೀಕೃಷ್ಣಾವತಾರ ಪೂರ್ವಯೋಜಿತ ಎಂದು ಸ್ಪಷ್ಟವಾಗುತ್ತದೆ.

## ಗೋಪಿಯರೊಡನೆ ರಾಸಕ್ರೀಡೆ

ಅತ್ತ ದೇವೇಂದ್ರನು ಹೊರಟುಹೋದಮೇಲೆ ಯಾವುದೇ ಕ್ಲೇಶವಿಲ್ಲದೆ ಅತ್ಯಂತ ಮಹತ್ಕಾರ್ಯಗಳನ್ನು ನಡೆಸುವ ಶ್ರೀಕೃಷ್ಣನನ್ನು ನೋಡಿ ಗೋಪಾಲರೆಲ್ಲರೂ ಅತ್ಯಾಶ್ಚರ್ಯಗೊಂಡರು. ಅವನು ಇದುವರೆಗೂ ಮಾಡಿದ ಅದ್ಭುತ ಕಾರ್ಯಗಳು ಒಂದೇ ಎರಡೇ ಈಗಾಗಲೇ ಪೂತನಾ ಸಂಹಾರ, ಯಮಳಾರ್ಜುನರನ್ನು ಭುಜಿಸಿದುದು, ಕಾಳಿಯ ದಮನ, ಧೇನುಕಾಸುರನನ್ನು ಧ್ವಂಸಮಾಡಿದುದು, ಗೋವರ್ಧನ ಪರ್ವತವನ್ನು ಎತ್ತಿದುದು. ಇವೆಲ್ಲವನ್ನು ನೋಡಿದರೆ ಇವನು ಸಾಧಾರಣ ಮನುಷ್ಯನಲ್ಲ ಈ ಎಲ್ಲಾ ಕಾರ್ಯಗಳನ್ನು ದೇವತೆಗಳೇ ಮಾಡುವಂತಹುದು ಎಂದು ಮನಸ್ಸಿನಲ್ಲಿಯೇ ಯಾವುದೋ ಒಂದು ಸಂದೇಹ ಗೋಪಾಲರ ಮನದಲ್ಲಿ ಕಾಡತೊಡಗಿ ಆ ಕೃಷ್ಣನನ್ನೇ ಪ್ರಶ್ನಿಸಿದರು. ಕೃಷ್ಣನನ್ನು ಕುರಿತು ನೀನು ಯಾರಪ್ಪಾ ದೇವತೆಯೋ, ದಾನವನೋ ಯಕ್ಷನೋ, ಗಂಧರ್ವನೋ ಎಂದು ಕೇಳಿದರು. ಅಷ್ಟರಲ್ಲಿಯೇ ಅವರಿಗೆ ಅವರಿಗೆ ಕೃಷ್ಣನನ್ನು ಹಾಗೆ ಕೇಳಿದರೆ ಏನೆಂದುಕೊಳ್ಳುತ್ತಾನೋ ಎಂಬ ಭಯ ಬೇರೆ. ತಕ್ಷಣ ಹೋಗಲಿ ಬಿಡು ನೀನು ಯಾರಾದರೇನು? ಈ ವಿಚಾರದಿಂದ ನಮೇನಾಗಬೇಕಾಗಿದೆ ! ಒಟ್ಟಿನಲ್ಲಿ ನೀನು ನಮಗೆ ಆಪ್ತ ಬಂಧುವಾಗಿರುವೆ. ನಿನಗೆ ನಮೋ ನಮಃ

ಎಂದರು. ಗೋಪಾಲರು ಹೀಗೆ ನುಡಿಯಲಾಗಿ ಕೃಷ್ಣ ಒಂದು ಕ್ಷಣಕಾಲ ಸುಮ್ಮನೆ ಇದ್ದನು. ನಂತರ ಪ್ರಣಯಕೋಪವನ್ನು ನಟಿಸುತ್ತಾ ವಿಚಾರದಿಂದ ನಿಮಗೆ ಪ್ರೀತಿ ಇರುವುದಾದರೆ ನಿಮಗೆ ನಾನು ಶ್ಲಾಘನಿಯನಾದರೆ ನಾನು ನಿಮ್ಮ ಬಂಧುಗಳಲ್ಲಿ ಒಬ್ಬ ಎಂದು ತಿಳಿಯಿರಿ ಎಂದನು. ಶ್ರೀಹರಿಯ ಮಾತಿಗೆ ಗೋಪಾಲರೆಲ್ಲರೂ ಸುಮ್ಮನಾದರು. ಹೀಗಿರಲಾಗಿ ಒಂದುಸಲ ಎಲ್ಲೆಡೆ ಶರಶ್ಚಂದ್ರನ ಬೆಳದಿಂಗಳು ಎಲ್ಲೆಡೆ ಹರಡಿತ್ತು. ಗಗನವು ನಿರ್ಮಲವಾಗಿತ್ತು. ದುಂಬಿಗಳ ಗುಂಜಾರವದಿಂದ ವನವೆಲ್ಲ ಮನೋಹರವಾಗಿತ್ತು. ಅದನ್ನು ನೋಡಿ ಶ್ರೀಕೃಷ್ಣನಿಗೆ ಗೋಪಿಯರೊಡನೆ ಕ್ರೀಡಿಸಬೇಕೆಂಬ ಮನಸ್ಸಾಯಿತು. ಪಕ್ಕದಲ್ಲಿ ಬಲರಾಮನೂ ಇರಲಿಲ್ಲ. ಈ ಸಂದರ್ಭದಲ್ಲಿ ತನ್ನ ಮಧುರಗಾನದಿಂದ ಎಲ್ಲ ಗೋಪಿಯರ ಮನವನ್ನು ಸೂರೆಗೊಂಡನು.

**ರಮ್ಯಂ ಗೀತಧ್ವಜನಿಂ ಶ್ರುತ್ವಾ ಸಂತಜ್ಯಾವಸಧಾಂಸ್ತದಾ ।**
**ಆ ಜಗ್ಮುಸ್ತರಿತಾ ಗೋಪ್ಯೋ ಯತ್ರಾಸ್ತೇ ಮಧುಸೂದನಃ ॥**
**ಶನೈಶ್ಶನೈರ್ಜಗೌ ಗೋಪಿ ಕಾಚಿತ್ತಸ್ಯ ಲಯಾನುಗಮ್ ।**
**ದತ್ತಾವಧಾನಾ ಕಾಚಿಚ್ಚ ತಮೇವ ಮನಸಾಸ್ಮರತ್॥**
**ಕಾಚಿತ್ ಕೃಷ್ಣೇತಿ ಕೃಷ್ಣೇತಿ ಪ್ರೋಚ್ಯ ಲಜ್ಜಾಮುಪಾಯಯೌ ।**
**ಯಯೌ ಚ ರಾಚಿತ್ ಪ್ರೇಮಾಂಧಾ ತತ್ಪಾರ್ಶಮವಿಲಂಚಿತಮ್ ॥**
**ಕಾಚ್ಚಿಚ್ಚಾವಸಧಸ್ಯಾನ್ತೇ ಸ್ಥಿತ್ವಾ ದೃಷ್ಟ್ವಾ ಬಹಿರ್ಗುರುಮ್ ।**
**ತನ್ಮಯತ್ವೇನ ಗೋವಿಂದಂ ದಧ್ಯೌಮೀಲಿತ ಲೋಚನಾ ॥**
**ತಚ್ಚಿತ್ತ ವಿಮಲಾಹ್ಲಾದಕ್ಷೀಣ ಪುಣ್ಯ ಚಯಾ ತಥಾ ।**
**ತದಪ್ರಾಪ್ತಿ ಮಹಾದುಃಖ ವಿಲೀನಾಶೇಷ ಪಾತಕಾ ॥**
**ಚಿಂತಯಂತಾ ಜಗತ್ಸೂತಿಂ ಪರಬ್ರಹ್ಮ ಸ್ವರೂಪಿಣಮ್ ।**
**ನಿರುಚ್ಛಾಸತಯಾ ಮುಕ್ತಿಂ ಗತಾನ್ಯಾ ಗೋಪಕನ್ಯಕಾ ॥**

**ಗೋಪಿಪರಿವೃತೋ ರಾತ್ರಿಂ ಶರಚ್ಚಂದ್ರ ಮನೋರಮಾಮ್ ।**

**ಮಾನಯಾಮಾದ ಗೋವಿಂದೋರಾಸಾರಂಬರಸೋತ್ಸುಕಃ ॥**

**ಗೋಪ್ಯಶ್ಚ ವೃಂದಶ್ಚ ಕೃಷ್ಣ ಚೇಷ್ಟಾಸ್ವಾಯತ್ ಮೂರ್ತಯಃ ।**

**ಅನ್ಯದೇಶಂ ಗತೇ ಕೃಷ್ಣೇ ಚೇರುವೃಂದಾವನಾಂತರಮ್ ॥**

(ವಿ.ಪು. 2ನೇ ಸಂ.ಪಂಚಮಾಂಶ ಅ.19 ಶ್ಲೋ 17ರಿಂದ 24)

ಹೆಂಗಸರಿಗೆ ವಿಶೇಷವಾಗಿ ಪ್ರಿಯವಾದ ಮಧುರಧ್ವನಿಯಲ್ಲಿ ಸ್ವರಗಳನ್ನು ಕ್ರಮವಾಗಿ ಯೋಚಿಸಿ ಸುಲಲಿತವಾದ ಪದಗಳ್ನು ಬಳಸಿ ಶ್ರೀಕೃಷ್ಣ ಹಾಡಲಾರಂಭಿಸಿದನು. (ಕೆಲವೆಡೆ ಕೊಳಲಿನ ನಾದದಿಂದ ಎಲ್ಲ ಗೋಪಿಯರನ್ನು ಆಕರ್ಷಿಸಿದನು ಎಂದಿದೆ. ಒಟ್ಟಿನಲ್ಲಿ ಎರಡೂ ಮನಮೋಹಕ ಗಾಯನವೇ ಸರಿ) ಈ ಇಂಪಾದ ಗೀತ ಧ್ವನಿಯನ್ನು ಆಲಿಸಿದ ಗೋಪಿಯರು ತಮ್ಮ ತಮ್ಮ ಮನೆಗಳನ್ನೇ ಬಿಟ್ಟು ಮಧುಸೂದನನಿರುವಲ್ಲಿಗೆ ತ್ವರೆಯಿಂದ ಬಂದರು. ಅವರಲ್ಲೊಬ್ಬ ಗೋಪಿಯು ಶ್ರೀಕೃಷ್ಣನ ಧ್ವನಿಯೊಂದಿಗೆ ತನ್ನ ಧ್ವನಿಯನ್ನು ಕೂಡಿಸಿ ಮೆಲ್ಲ ಮೆಲ್ಲಗೆ ಹಾಡಲಾರಂಭಿಸಿದಳು. ಇನ್ನೊಬ್ಬಳು ಹಾಡನ್ನು ಆಲಿಸುತ್ತಾ ಕೃಷ್ಣನನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದಳು. ಇನ್ನೊಬ್ಬಳು ಕೃಷ್ಣ ಕೃಷ್ಣ ಎಂದು ಹೇಳುತ್ತಾ ನಾಚಿದಳು. ಪ್ರೇಮಾಂಧಳಾದ ಮತ್ತೊಬ್ಬಳು ಅವನ ಬಳಿಗೆ ಹೋಗಿ ನಿಂತಳು. ಒಬ್ಬ ಗೋಪಿಯು ಮನೆಯ ಹೊರಗಡೆ ಜನರಿದ್ದದನ್ನು ಕಂಡು ಮನೆಯ ಬಳಿಯೇ ನಿಂತು ಕಣ್ಮುಚ್ಚಿ ಗೋವಿಂದನನ್ನೇ ನೆನೆಯುತ್ತಿದ್ದಳು. ಇನ್ನೊಬ್ಬ ಗೋಪಕನ್ಯೆಯು ಜಗತ್ಕಾರಣನೂ ಪರಬ್ರಹ್ಮ ಸ್ವರೂಪನೂ ಆದ ಶ್ರೀಕೃಷ್ಣನನ್ನೇ ಧ್ಯಾನಿಸುತ್ತಾ ಪರಿಶುದ್ಧವಾದ ಪರಮಾನಂದವನ್ನು ಅನುಭವಿಸಿದ್ದರಿಂದ ಅವಳ ಪುಣ್ಯಸಂಚಯವೆಲ್ಲ ಕರಗಿತು. ಅಂತೆಯೇ ಕೃಷ್ಣನು ತನಗೆ ದೊರಕಲಿಲ್ಲವೆಂಬ ಮಹಾದುಃಖವನ್ನು ಅನುಭವಿಸಿದ್ದರಿಂದ ಅವಳ ಪಾಪಸಂಚಯವೂ ಕ್ಷೀಣಿಸಿತ್ತು. ಏಕಾಗ್ರತೆಯಿಂದ ಚಿಂತಿಸುತ್ತಿರುವಾಗ ಅವಳ ಉಸಿರು ನಿಂತು ಹೋಗಲು ಆ ಗೋಪಕನ್ಯೆಯು ಮುಕ್ತಿಯನ್ನೈದಿದಳು ರಾಸಕ್ರೀಡೆಯನ್ನಾರಂಭಿಸಬೇಕೆಂದು ರಸರುಚಿಯುಳ್ಳ ಗೋವಿಂದನು ಗೋಪಿಜನ ಪರಿವ್ರತನಾಗಿ ಶರಚ್ಚಂದ್ರ ಮನೋಹರವಾದ ಆ ರಾತ್ರಿಯನ್ನು ಉತ್ತಮವೆಂದು ಭಾವಿಸಿದನು. ಗೋಪಿಯರು ಗುಂಪುಗುಂಪಾಗಿ

ಸೇರಿ ತಲ್ಲೀನರಾಗಿ ಶ್ರೀಕೃಷ್ಣನಂತೆ ಅಭಿನಯಿಸುತ್ತಿದ್ದರು. ಇದ್ದಕ್ಕಿದ್ದಂತೆ ಶ್ರೀಕೃಷ್ಣ ಅವರಿಗೆ ಕಾಣದಂತೆ ಬೇರೆ ಎಲ್ಲೋ ಹೊರಟುಹೋದನು. ಆಗ ಗೋಪಿಯರು ಅವನನ್ನೇ ಹುಡುಕುತ್ತಾ ವೃಂದಾವನದೊಳಗೆ ಅಲೆದಾಡತೊಡಗಿದರು.

ರಾಸಕ್ರೀಡೆ, ರಾಸಲೀಲೆ ಎಂಬುವುದು ಒಂದು ಆಧ್ಯಾತ್ಮಿಕನೆಲೆ. ಈ ರಾಸಕ್ರೀಡೆಯ ಬಗ್ಗೆ ಕೆಲವರು ಕ್ಷೀಣವಾಗಿ ತಪ್ಪು ಅಭಿಪ್ರಾಯಗಳನ್ನು ತಿಳಿಸಿರುವುದು ಉಂಟು. ಅದರ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದು ಬೇಡ ಗೋಪ ಗೋಪಿಯರು ಮತ್ತಾರೂ ಅಲ್ಲ ಪರಮಾತ್ಮನ ಸಾನ್ನಿಧ್ಯವನ್ನು ಸಾಮಿಪ್ಯವನ್ನು ಬಯಸಿದ ಮಹಾತಪಸ್ವಿಗಳು, ಮುನಿಗಳು ಅನೇಕ ವರ್ಷಗಳ ಕಾಲ ತಪಸ್ಸು ಮಾಡಿ ಈ ಜನ್ಮದಲ್ಲಿ ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ರಾಸಕ್ರೀಡೆ ಎಂದರೆ ಸ್ತ್ರೀ ಪುರುಷರು ಅನ್ಯೋನ್ಯವಾಗಿ ಕೈಹಿಡಿದುಕೊಂಡು ಹಾಡುತ್ತಾ ಮಂಡಲಾಕಾರವಾಗಿ ಸುತ್ತುತ್ತಾ ನೃತ್ಯಮಾಡುವುದು. ಇದರಲ್ಲಿ ಒಟ್ಟು 64 ಜನರಿಗಿಂತ ಹೆಚ್ಚು ಮಂದಿ ಇರಬಾರದು ಎಂಬ ನಿಯಮವಿದೆ. ಭಗವಾನ್ ಶ್ರೀಕೃಷ್ಣನು ಸರ್ವಾಂತರ್ಯಾಮಿ ಆದ್ದರಿಂದ ಎಲ್ಲ ಗೋಪಿಯರೊಡನೆಯೂ ಇದ್ದು ನೃತ್ಯ ಮಾಡಿದನು. ಈ ಸಂದರ್ಭದಲ್ಲಿ ಪರಮಾತ್ಮನೊಬ್ಬನೇ ಪುರುಷ. ಮಿಕ್ಕೆಲ್ಲ ಜೀವಾತ್ಮಗಳು 'ಸ್ತ್ರೀ'ಯೆಂಬ ಆಧ್ಯಾತ್ಮಿಕ ಸತ್ಯ. ನಮಗೆಲ್ಲ ತಿಳಿದೇ ಇದೆ. ಮತ್ತೊಂದು ವಿಷಯ ಪರಮಾತ್ಮ ಯಾರಿಗೂ ಸ್ವಂತ ಅಲ್ಲ. ಆದರೂ ಎಲ್ಲರಲ್ಲಿಯೂ, ಎಲ್ಲರ ಮನದಲ್ಲಿಯೂ ನೆಲೆಯಾಗಿ ನಿಂತಿದ್ದಾನೆ. ಅವನಲ್ಲಿ ಯಾವುದೇ ಬೇಧಭಾವವಿಲ್ಲ. ಅವನ ಪಾಲಿಗೆ ಎಲ್ಲರೂ ಒಂದೇ. ಎಲ್ಲರನ್ನೂ ರಕ್ಷಿಸುವುದೊಂದೇ ಅವನ ಉದ್ದೇಶ.

ಈ ರಾಸಕ್ರೀಡೆಯಲ್ಲಿ ಭಾಗವಹಿಸಿದ ಗೋಪಿಯರು ವಿವಿಧ ಮನೋಭಾವವನ್ನು ಹೊಂದಿರುವುದನ್ನು ನಾವು ಕಾಣುತ್ತೇವೆ. ಒಬ್ಬಳು ಕೃಷ್ಣನನ್ನು ಧ್ಯಾನಿಸುತ್ತಾ, ಕೃಷ್ಣನ ಗಾಯನದಲ್ಲಿ ಮೆಲ್ಲಮೆಲ್ಲಗೆ ತಾನೂ ಹಾಡುತ್ತಾ ಮೈಮರೆತಳು. ಮತ್ತೊಬ್ಬ ಗೋಪಿ ಗುರುಜನ ಎದುರು ಇದ್ದಾರಲ್ಲ ಎಂದು ಭೀತಿಗೊಂಡು ಮನದಲ್ಲಿಯೇ ತನ್ನ ಮನೆಯ ಮುಂದೆಯೇ ನಿಂತು ಶ್ರೀಕೃಷ್ಣಗಾಯನದ ರಸಾಸ್ವಾದ ಮಾಡುತ್ತಿದ್ದಾಳೆ. ಮತ್ತೆ ಕೆಲವರು ತಾವೂ

ಕಾಳಿಂಗಮರ್ಧನ ಮಾಡಿದಂತೆ, ಗೋವರ್ಧನಗಿರಿಯನ್ನು ಎತ್ತುತ್ತಿದ್ದಂತೆ ಕೃಷ್ಣಲೀಲೆಯನ್ನು ಅನುಕರಿಸುತ್ತಿದ್ದರು. ಇಷ್ಟೆಲ್ಲಾ ಆಯಿತಲ್ಲಾ ಸ್ವಯಂ ಕೃಷ್ಣನೇ ಬಲರಾಮನಿಲ್ಲದಿದ್ದಾಗ ಈ ರಾಸಕ್ರೀಡೆಗೆ ಆರಂಭಿಸಿದ ಎಂದಿದೆ. ಇದೆಷ್ಟು ಸೊಗಸಾಗಿದೆ. ಇದರಿಂದ ಬಲರಾಮನ ಗಂಭೀರಸ್ವಭಾವ, ಕೃಷ್ಣನಿಗೆ ಅಣ್ಣನ ಮೇಲಿದ್ದ ಗೌರವ, ಇವೆಲ್ಲವನ್ನು ಕವಿ ನಮ್ಮ ಊಹೆಗೆ ಬಿಟ್ಟಿದ್ದಾನೆ.

ಮತ್ತೊಂದು ವಿಷಯವೇನೆಂದರೆ ಮೋಕ್ಷವನ್ನು ಬಯಸುವವರು ಯಾವುದೇ ಪುಣ್ಯ ಅಥವಾ ಪಾಪದ ಹೊಗೆಯನ್ನು ಹೊತ್ತು ಹೋಗುವುದಿಲ್ಲ. ಒಂದು ವೇಳೆ ಪುಣ್ಯವಾಗಲಿ, ಪಾಪವಾಗಲಿ, ಅವುಗಳ ಶೇಷವನ್ನು ಅನುಭವಿಸುವುದಕ್ಕಾಗಿ ಮತ್ತೊಮ್ಮೆ ಅವರಿಗೆ ದೇಹಪ್ರಾಪ್ತಿಯಾಗುವುದು ಖಂಡಿತ. ಅವರೆಡೂ ಕ್ಷಯಿಸಿದಾಗ ಮಾತ್ರ ನಮಗೆ ಮೋಕ್ಷ ದೊರಕುತ್ತದೆ ಎಂದು ಶಾಸ್ತ್ರ ಸಿದ್ಧಾಂತವಿದೆ.

ಈ ರಾಸಕ್ರೀಡೆಯ ಸಂದರ್ಭದಲ್ಲಿ ಗೋಪಿಯರ ಮನೆಯಲ್ಲಿ ಇರುವ ಅವರವರ ಪತಿಗಳೂ, ತಂದೆತಾಯಂದಿರು, ಸೋದರರೂ ಬೇಡ ಬೇಡವೆಂದರೂ ಸಹ ಆ ಗೋಪಬಾಲೆಯರು ಕ್ರೀಡಾಲೋಲುಪರಾಗಿ ಕೃಷ್ಣನೊಡನೆ ರಾತ್ರಿಯ ಹೊತ್ತು ವಿಹರಿಸ ತೊಡಗಿದರು. ಶತ್ರು ವಿಧ್ವಂಸಕನೂ ಅಚಿಂತ್ಯಮಹಿಮನೂ ಆದ ಮಧುಸೂದನನು ತನ್ನ ಕಿಶೋರ ಚಾಪಲ್ಯವನ್ನು ಮೆರೆಸುತ್ತಾ ಅವರೊಡನೆ ಈಶ್ವರನೂ, ಪರಮಾತ್ಮ ಸ್ವರೂಪನೂ, ವಿಭುವೂ ಆ ಶ್ರೀಕೃಷ್ಣ ಗೋಪಿಯರಲ್ಲಿಯೂ  ಅವರ ಗಂಡಂದಿರಲ್ಲಿಯೂ ಅಷ್ಟೇಕೆ ಸರ್ವ ಭೂತಗಳಲ್ಲಿಯೂ ವಾಯುವಿನಂತೆ ವ್ಯಾಪಕನಾಗಿರತಕ್ಕವನು, ಯಾವ ರೀತಿಯಲ್ಲಿ ಆಕಾಶ, ಅಗ್ನಿ, ಪೃಥ್ವಿ, ಜಲ, ವಾಯು ಮತ್ತು ಆತ್ಮ ಹೀಗೆ ಎಲ್ಲಾ ಚರಾಚರವಸ್ತುಗಳಲ್ಲಿ ವ್ಯಾಪಿಸಿಕೊಂಡಿರುತ್ತದೆಯೋ ಅಂತೆಯೇ ಶ್ರೀಕೃಷ್ಣ ಸರ್ವಾಂತರ್ಯಾಮಿಯಾಗಿ ಎಲ್ಲದರಲ್ಲಿಯೂ, ಎಲ್ಲರಲ್ಲಿಯೂ ನೆಲೆಸಿರುತ್ತಾನೆ. ಎಂಬುದನ್ನು ತಿಳಿದವನೇ ಜಾಣ, ರಾಸಕ್ರೀಡೆಯು ಶ್ರೀಕೃಷ್ಣನ ಲೀಲಾವಿನೋದಗಳಲ್ಲಿ ಒಂದು ಎಂದು ಭಾವಿಸುತ್ತಾ ನಾವೂ ಸಹ ಆ ಜಗನ್ಮೋಹನನಲ್ಲೇ ಶರಣಾಗುವ.

**ಸರ್ವಂ ಶ್ರೀಕೃಷ್ಣಾರ್ಪಣಮಸ್ತು**

# ವೃಷಭಾಸುರನ ವಧೆ

ಪರಾಶರಮುನಿಗಳು ಮೈತ್ರೇಯರಿಗೆ ವೃಷಭಾಸುರನ ವಧೆಯ ಬಗ್ಗೆ ವಿವರಿಸುತ್ತಾ ಹೀಗೆಂದರು. ಒಮ್ಮೆ ಶ್ರೀಕೃಷ್ಣನು ಸಾಯಂಕಾಲದಲ್ಲಿ ರಾಸಲೀಲೆಯಲ್ಲಿ ಮಗ್ನನಾಗಿರುವಾಗ ಅರಿಷ್ಟನೆಂಬ ಅಸುರನು ವೃಷಭರೂಪವನ್ನು ಧರಿಸಿ (ಎತ್ತಿನ) ಜನರನ್ನು ಹೆದರಿಸುತ್ತಾ ವ್ರಜಭೂಮಿಯನ್ನು ಪ್ರವೇಶಿಸಿದನು. ಆತನ ದೇಹಕಾಂತಿಯು ಮೋಡದಂತೆ ಕಪ್ಪಾಗಿ ಇದ್ದಿತು. ಕೊಂಬುಗಳು ಚೂಪಾಗಿದ್ದವು. ಸೂರ್ಯಮಂಡಲದಂತೆ ಕಣ್ಣುಗಳು ಹೊಳೆಯತ್ತಿದ್ದವು. ಆ ಎತ್ತು ತನ್ನ ಕೊಂಬುಗಳಿಂದ ನೆಲವನ್ನು ಸೀಳುತ್ತಾ ನುಗ್ಗಿತು. ವಿಶಾಲವಾದ ಮುಡದಿಂದ ಕೂಡಿದ ಆ ಎತ್ತು ಬಹಳ ಎತ್ತರವಾಗಿದ್ದಿತು. ಅದರ ಪೃಷ್ಟವೋ ಸಗಣಿ, ಮೂತ್ರಗಳಿಂದ ಲೇಪಿತವಾಗಿದ್ದಿತು. ಅದನ್ನು ನೋಡಿದರೇನೆ ಹಸುಗಳು ಹೆದರಿ ಓಡಿಹೋಗುತ್ತಿದ್ದವು. ವೃಷಭವೇಷದಲ್ಲಿದ್ದ ಆ ದೈತ್ಯನು ಗೋವುಗಳಿಗೆ ಗರ್ಭಸ್ರಾವವಾಗುವಂತೆ ಗುಟುರು ಹಾಕುತ್ತಿದ್ದನು. ಆ ಅಸುರನು ಸದಾ ಅರಣ್ಯದಲ್ಲಿ ಅಲೆಯುತ್ತಾ ತಪಸ್ವಿಗಳನ್ನು ಕೊಂದುಹಾಕುತ್ತಿದ್ದನು. ಅತಿ ಘೋರವಾದ ಕೆಂಗಣ್ಣಿನ ಆ ಹೋರಿಯನ್ನು ಕಂಡ ಗೋಪಬಾಲೆಯರು ಭಯದಿಂದ ಕಂಗೆಟ್ಟು 'ಕೃಷ್ಣ, ಕೃಷ್ಣ' ಎಂದು ಕೂಗಿಕೊಂಡರು. ಆಗ ಕೃಷ್ಣನು ಸಿಂಹನಾದವನ್ನು ಮಾಡಿ ಚಪ್ಪಾಳೆ ಹಾಕಿದನು. ಆ ಶಬ್ದವನ್ನು ಕೇಳಿದಾಕ್ಷಣ ವೃಷಭವು ದಾಮೋದರನೆಡೆಗೆ ಧಾವಿಸಿತು. ದುಷ್ಟಾತ್ಮನಾದ ವೃಷಭನು ಕೊಂಬುಗಳನ್ನು ಮುಂದೆ ಚಾಚುತ್ತ ಕೃಷ್ಣನ ಹೊಟ್ಟೆಯನ್ನೇ ಗುರಿಯಿಟ್ಟು ನೋಡುತ್ತಾ ಆತನಿದ್ದೆಡೆಗೆ ಧಾವಿಸಿ ಬಂದನು. ಶ್ರೀಕೃಷ್ಣ ತಿರಸ್ಕಾರದಿಂದ ಮುಗುಳ್ನಗೆ ಬೀರುತ್ತಾ ನಿಂತಲ್ಲಿಯೇ ನಿಂತಿದ್ದನು. ಸ್ವಲ್ಪವೂ ಕದಲಿಲ್ಲ. ಹತ್ತಿರ ಬಂದೊಡನೆ ಮಧುಸೂದನನು ಮೊಸಳೆಯಂತೆ ಹೋರಿಯ ಕೊಂಬುಗಳನ್ನೇ ಗಪ್ಪನೆ ಹಿಡಿದನು. ಆಚೀಚೆ ತಿಣುಕಾಡಲಾರದೆ ನಿಂತಿದ್ದ ಅದರ ಹೊಟ್ಟೆಗೆ ಮೊಳಕಾಲಿನಿಂದ ಒದ್ದನು. ಹೀಗೆ ಕೊಂಬುಗಳನ್ನು ಹಿಡಿದು ನಿಲ್ಲಿಸಿ ಅರಿಷ್ಟಾಸುರನ ದರ್ಪವನ್ನು ನುಚ್ಚುನೂರು ಮಾಡಿದನು. ಶ್ರೀಕೃಷ್ಣ

ಆತನ ಕತ್ತನ್ನು ಒದ್ದೆ ಬಟ್ಟೆಯನ್ನು ಹಿಂಡುವಂತೆ ಹಿಂಡಿಬಿಟ್ಟನು. ವೃಷಭದ ಒಂದು ಕೊಂಬನ್ನು ಮುರಿದು ಕಿತ್ತು ಅದರಿಂದಲೇ ಬಡಿದನು. ಆಗ ಆ ಮಹಾದೈತ್ಯನು ಬಾಯಿಂದ ನೆತ್ತರನ್ನು ಕಕ್ಕುತ್ತಾ ಸತ್ತುಬಿದ್ದನು. ಆದೈತ್ಯನು ಹೀಗೆ ಸಾವನ್ನಪ್ಪಿದ್ದನ್ನು ನೋಡಿ ಗೋಪಬಾಲರೆಲ್ಲರೂ ಸಂತಸಗೊಂಡು ಶ್ರೀಕೃಷ್ಣನನ್ನು ಸ್ತುತಿಸಿದರು.

## ಬಲರಾಮ ಕೃಷ್ಣನನ್ನು ಮಧುರೆಗೆ ಕರೆತರಲು ಅಕ್ರೂರನ ನೆರವು

ನಾರದ ಎಂದರೇನೆ ಸಾಕು ಕಿತಾಪತಿಯ ಮನುಷ್ಯ. ಇಬ್ಬರಿಗೆ ಜಗಳ ತಂದಿಟ್ಟು ನಾರಾಯಣ, ನಾರಾಯಣ ಎಂದು ಹೇಳುತ್ತಾ ಆ ಜಾಗದಲ್ಲಿ ಇರದೆಯೇ ಎಲ್ಲೋ ಕಣ್ಮರೆಯಾಗುತ್ತಾರೆ ಎಂಬ ಮಾತು ನಮ್ಮಂತಹ ಸಾಮಾನ್ಯ ಜನರಲ್ಲಿ ಬರುತ್ತದೆ. ಆದರೆ ಅದು ಹಾಗಲ್ಲ. ನಾರದ ಮಹಾಜ್ಞಾನಿ, ತ್ರಿಕಾಲಜ್ಞಾನಿ, ದಿವ್ಯಜ್ಞಾನಿ, ತ್ರಿಲೋಕಸಂಚಾರಿ ಯಾವುದೇ ದುಷ್ಟ ನಿವೃತ್ತಿಯಾಗಲು ನಾರದ ಕೈವಾಡ ಇದ್ದೇ ಇರುತ್ತದೆ. ಎಲ್ಲರಿಗೂ ಸನ್ಮಂಗಳವನ್ನು ಉಂಟುಮಾಡುವವನೆ ನಾರದ. ಪ್ರಸ್ತುತ ನಾರದನು ಕಂಸವಧೆಯನ್ನು ಮಾಡಿಸಲು ಅವರು ಶ್ರೀಕೃಷ್ಣನಿಗೆ ಹೇಗೆಲ್ಲಾ ನೆರವಾದ ಎಂಬುದನ್ನು ನಾವು ಈಗ ತಿಳಿಯೋಣ.

ನಾರದರು ಕಂಸನ ಆಸ್ಥಾನಕ್ಕೆ ಬಂದು – ಬೇಕಂತಲೇ ಅವನ ಕೋಪವನ್ನು ಉದ್ವಿಗ್ನಗೊಳಿಸುವುದಕ್ಕೆ, ಅಂದರೆ ಬೆಂಕಿಗೆ ಮತ್ತಷ್ಟು ತುಪ್ಪವನ್ನು ಹಾಕುವಂತಹ ಕಾರ್ಯವನ್ನು ಮಾಡಿದ. ಕೃಷ್ಣ ಕಾಳಿಂಗ ಸರ್ಪವನ್ನು ದಮನಗೊಳಿಸಿದುದು, ವೃಕ್ಷದ್ವಯಗಳನ್ನು ಉರುಳಿಸಿದುದು, ಪೂತನಸಂಹಾರ, ಶಕಟಾಸುರ ಸಂಹಾರ ಯಶೋದಾ ದೇವಕಿಯರ ಗರ್ಭದಲ್ಲಿ ಜನಿಸಿದ ಶಿಶುಗಳ ಪರಿವರ್ತನೆ ಪಡೆದದ್ದು. ಹೀಗೆ ಎಲ್ಲವನ್ನು ಸಕ್ರಮವಾಗಿ ಕಂಸನಿಗೆ ಹೇಳಿದರು. ದಿವ್ಯಜ್ಞಾನಿಗಳಾದ ನಾರದರ ಬಾಯಿಂದ ಸಕಲವೃತ್ತಾಂತವನ್ನು ಕೇಳಿ ತಿಳಿದ ಮರುಳನಾದ ಕಂಸನು ವಸುದೇವ ದೇವಕಿಯರ ಮೇಲೆ ಕಡುಕೋಪಗೊಂಡನು. ರೋಷಾವೇಶದಿಂದ ಸಕಲ ಯಾದವರನ್ನು ಮನಬಂದಂತೆ ಬಯ್ದನು. ಅಷ್ಟೇ ಅಲ್ಲ. ಮುಂದೆ ತಾನು

ಮಾಡಬೇಕಾದ ಕೆಲಸಗಳ ಪಟ್ಟಿಯನ್ನೇ ಮನದಲ್ಲಿ ಹಾಕಿಕೊಂಡನು. ಕಂಸನು ತನ್ನ ಮನದಲ್ಲಿಯೇ ಹೀಗೆ ಅಂದುಕೊಂಡನು "ರಾಮಕೃಷ್ಣರು ಇನ್ನೂ ಚಿಕ್ಕ ಬಾಲಕರು, ಅವರು ಬಲಾಢ್ಯರಾಗುವುದರೊಳಗೆ ಅವರನ್ನು ನಾನು ಮುಗಿಸಿಬಿಡಬೇಕು. ಅವರು ಯುವಕರಾದಮೇಲೆ ಅಸಾಧ್ಯರಾಗುವರು. (ಆ ಒಂದು ಭಯ ಕಂಸನಲ್ಲಿ ಇದ್ದೇ ಇದ್ದಿತು ಎಂದು ಈ ಮಾತಿನಿಂದ ತಿಳಿಯುತ್ತದೆ) ನಮ್ಮ ಚಾಣೂರ ಮುಷ್ಟಿಕರು ಅತ್ಯಂತ ಬಲಶಾಲಿಗಳು. ಅವರಿಬ್ಬರೊಡನೆ ಮಲ್ಲಯುದ್ಧವನ್ನು ಯೋಜಿಸಿ ತುಂಟರಾದ ರಾಮಕೃಷ್ಣರನ್ನು ಕೊಲ್ಲಿಸುತ್ತೇನೆ. ಈಗ ಹೇಗಿದ್ದರೂ ಧನುರ್ಯಜ್ಞ ಎಂಬ ದೊಡ್ಡ ಹಬ್ಬದ ಸಂಭ್ರಮದ ಯೋಗ ಒದಗಿದೆ. ಇದನ್ನೇ ನೆಪವಾಗಿಟ್ಟುಕೊಂಡು ಅವರನ್ನು ಮಧುರಾ ನಗರಕ್ಕೆ ಕರೆತರಿಸುತ್ತಾನೆ. ಹೇಗಿದ್ದರೂ ಶ್ವಪಲ್ಕನ ಮಗನಾದ ಅಕ್ರೂರನು ಶೂರನಾದ ಯದುಶ್ರೇಷ್ಠನೆಂದು ಪ್ರಸಿದ್ಧನಾಗಿದ್ದಾನಲ್ಲ. ಅವನನ್ನೇ ರಾಮಕೃಷ್ಣರನ್ನು ಕರೆತರುವಂತೆ ಗೋಕುಲಕ್ಕೆ ಕಳುಹಿಸುತ್ತೇನೆ. ಅಷ್ಟೆ ಅಲ್ಲದೆ ಕೇಶಿರಾಕ್ಷಸನು ಬೃಂದಾವನದ ಬಳಿ ತಿರುಗಾಡುತ್ತಿದ್ದಾನೆ. ಅಲ್ಲಿಯೇ ಅವರಿಬ್ಬರನ್ನು ಕೊಂದುಬಿಡಬೇಕು. ಅವನಿಗೆ ಆದೇಶವನ್ನು ನೀಡುತ್ತೇನೆ. ನನ್ನ ಬಳಿ ಕುವಲಯಾಪೀಡ ಎಂಬ ಮದ್ದಾನೆಯಿದೆಯಲ್ಲ, ಆ ಮದ್ದಾನೆಯೊಂದೇ ಸಾಕು ಅವರಿಬ್ಬರನ್ನು ಕೊಲ್ಲಲು ಎಂದು ಇಲ್ಲದ ಸಲ್ಲದ ಲೆಕ್ಕಾಚಾರ ಹಾಕುತ್ತಾ ಇದ್ದು ಕೊನೆಗೆ ಅಕ್ರೂರನನ್ನು ಕರೆದು ಹೀಗೆಂದನು.

"ಹೇ ದಾನಪತಿ (ಅಕ್ರೂರನು ಸ್ಯಮಂತಕಮಣಿಯ ನೆರವಿನಿಂದ ಅನೇಕ ದಾನಧರ್ಮಗಳನ್ನು ಮಾಡುತ್ತಿದ್ದನು ಆದ್ದರಿಂದ ದಾನಪತಿ ಎನಿಸಿಕೊಂಡನು.) ಅಕ್ರೂರನೇ ನನ್ನ ಸಂತೋಷಕ್ಕಾಗಿ ನೀನು ಒಂದು ಮಾತನ್ನು ನಡೆಸಿಕೊಡಬೇಕಾಗಿದೆ. ರಥವನ್ನೇರಿ ನಂದಗೋಕುಲಕ್ಕೆ ಹೋಗು. ಅಲ್ಲಿ ವಸುದೇವನ ಇಬ್ಬರು ಮಕ್ಕಳಿದ್ದಾರೆ. ಅವರು ವಿಷ್ಣುವಿನ ಅಂಶದಿಂದ ಹುಟ್ಟಿರುವರಂತೆ. ಆ ದುಷ್ಟರು ನನ್ನನ್ನು ನಾಶಮಾಡುವುದಕ್ಕಾಗಿಯೇ ಜನಿಸಿ ಅಲ್ಲಿ ಬೆಳೆಯುತ್ತಿರುವವರಂತೆ. ನನ್ನ ಧನುರ್ಯಜ್ಞವು ಈ ಮಧುರೆಯಲ್ಲಿ ಮುಂದಿನ ಚತುರ್ದಶಿಯ ದಿನ ನಡೆಯಲಿದೆ. ಆ ಸಮಯದಲ್ಲಿ ನಡೆಯುವ ಜಟ್ಟಿಕಾಳಗ(ಮಲ್ಲಯುದ್ಧ)ಕ್ಕಾಗಿ ಅವರಿಬ್ಬರನ್ನು ನೀನು ಕರೆತರಬೇಕೆಂದನು. ಅವರನ್ನು ಚಾಣುರ ಮುಷ್ಟಿಕರು ಕೊಂದುಹಾಕುತ್ತಾರೆ

ಅಥವಾ ನನ್ನ ಬಳಿಯಿರುವ ಮುಖ್ಯವಾದ (ಆಪ್ತನಾದ) ಮಾವುತನು ಕುವಲಯಾಪೀಡನೆಂಬ ಮದ್ದಾನೆಯನ್ನು ನುಗ್ಗಿಸಿ ಅವರಿಬ್ಬರನ್ನು ಧ್ವಂಸಮಾಡಿಸುತ್ತಾನೆ. ಅವರಿಬ್ಬರನ್ನು ಕೊಂದ ನಂತರ ದುರ್ಬುದ್ಧಿಯುಳ್ಳ ಆ ವಸುದೇವನನ್ನು, ನಂದಗೋಪನನ್ನು, ನನ್ನ ತಂದೆಯೆನಿಸಿಕೊಂಡಿರುವ ಪರಮದುಷ್ಟನಾದ ಉಗ್ರಸೇನನನ್ನು ವಧಿಸುವೆನು. ಆದ ನಂತರ ನನ್ನ ಸಾವಿಗಾಗಿ ಹವಣಿಸುತ್ತಿರುವ ಗೊಲ್ಲರ ಸಮಸ್ತ ಗೋಧನಗಳನ್ನು ವಶಪಡಿಸಿಕೊಂಡು ಅವರಲ್ಲಿರುವ ಧನವನ್ನೆಲ್ಲವನ್ನು ಕಿತ್ತುಕೊಳ್ಳುತ್ತೇನೆ. "ಎಲೈ ದಾನಪತಿ! ನಿನ್ನೊಬ್ಬನನ್ನು ಬಿಟ್ಟರೆ ಈ ಯಾದವರೆಲ್ಲರೂ ನನಗೆ ಶತ್ರುಗಳಾಗಿದ್ದಾರೆ. ಅವರೆಲ್ಲರೂ ಕ್ರಮವಾಗಿ ಸಂಹರಿಸುತ್ತೇನೆ. ಯಾದವರು ನಿರ್ಮೂಲರಾದ ಮೇಲೆ ನಿಷ್ಕಂಟಕವಾದ ಈ ಸಮಸ್ತ ರಾಜ್ಯವನ್ನು ನಾನು ಅನುಭವಿಸುತ್ತೇನೆ. ಅಷ್ಟೇ ಅಲ್ಲ. ಆ ಗೊಲ್ಲರನ್ನು ಕುರಿತು ಎಮ್ಮೆಯ ತುಪ್ಪ, ಮೊಸರು ಮುಂತಾದ ಕಾಣಿಕೆಗಳನ್ನು ಕೂಡಲೇ ತಂದುಕೊಡಬೇಕೆಂದು ಹೇಳು" ಎಂದನು.

ಹೀಗೆ ಕಂಸನಿಂದ ಆಜ್ಞಾಪಿಸಲ್ಪಟ್ಟ ಅಕ್ರೂರನು ಕೃಷ್ಣನ ಮಹಾ ಭಕ್ತನಾದ್ದರಿಂದ "ನಾಳೆಯೇ ಬೇಗ ಹೋಗಿ ನಾನು ಶ್ರೀಕೃಷ್ಣನನ್ನು ಸಂದರ್ಶಿಸುತ್ತೇನೆ ಎಂದು ಸಂತುಷ್ಟನಾದನು. ಇಲ್ಲಿ ಕಂಸನ ದುರಾಲೋಚನೆ, ದುಷ್ಟ ಪ್ರವೃತ್ತಿ, ದುರಹಂಕಾರ, ದೌರ್ಜನ್ಯ, ಎಲ್ಲವೂ ಅರ್ಥವಾಗುತ್ತದೆ. ಮುಂದೆ ತನ್ನ ನಾಶಕ್ಕೆ ತಾನೇ ಕಾರಣನಾಗುತ್ತಾನೆ. ತಾನು ಹೇಗೆ ಬೀಳುತ್ತಾನೆ ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ನೋಡೋಣ.

## ಕೇಶಿ ಸಂಹಾರ

ಇತ್ತ ಕೇಶಿ ಎಂಬ ರಾಕ್ಷಸನು ಕಂಸನ ದೂತನಿಂದ ಪ್ರೇರಿತನಾಗಿ ಅಶ್ವದ ವೇಷ (ಕುದುರೆ) ವನ್ನು ಧರಿಸಿ ಶ್ರೀಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ಬೃಂದಾವನಕ್ಕೆ ಬಂದನು. ಆ ದೈತ್ಯಾಶ್ವವು ಅಲ್ಲಿಗೆ ಬಂದು ಜೋರಾಗಿ ಕೆನೆಯಿತು, ಯಥಾಪ್ರಕಾರ ಅಶ್ವದ ಕೆನತಕ್ಕೆ ಹೆದರಿ ಗೋಪ ಗೋಪಿಯರು "ತ್ರಾಹಿ, ತ್ರಾಹಿ, ಕೃಷ್ಣ ನಮ್ಮನ್ನು ರಕ್ಷಿಸು" ಎಂದು ಪ್ರಾರ್ಥಿಸಿದರು. ಅವನಲ್ಲಿಯೇ ಶರಣಾದರು. ಆಗ ಕೃಷ್ಣನು ಗೋಪಬಾಲರಿಗೆ ಅಭಯ ಪ್ರಧಾನಮಾಡುತ್ತಾ

ಈ ಅಶ್ವವೇಷಧಾರಿಯಾದ ಕೇಶಿಯನ್ನು ಕಂಡು ದಾನವನ ಕಡೆ ತಿರುಗಿ "ಬಾ ಇತ್ತ ಬಾ ದುರುಳ,

**ಏಹ್ಯೇಹಿ ದುಷ್ಟ ಕೃಷ್ಣೋಽಹಂ ಪೂಷ್ಣಸ್ತ್ವಿವ ಪಿನಾಕಧೃಕ್**
**ಪಾತಯಿಷ್ಯಾಮಿ ದಶನಾನ್ ವದನಾದಖಿಲಾಂಸ್ತವ**

(ವಿ.ಪು. 2ನೇ ಸಂ. ಪಂಚಮಾಂಶ . 16ಶ್ಲೋಕ 7)

ಕೃಷ್ಣನೆಂದರೆ ನಾನೇ ಈ ಹಿಂದೆ ಪಿನಾಕಧಾರಿಯಾದ ವೀರಭದ್ರನು ಪೂಷನ ಹಲ್ಲುಗಳನ್ನು ಮುರಿದು ಉದುರಿಸುವೆನು ಬಾ ಎಂದು ಹೇಳಿ ಕೃಷ್ಣನು ಕೇಶಿಯ ಎದುರಿಗೆ ನಡೆದನು. (ಪೂಷ ಎಂಬುವನು ದ್ವಾದಶ ಆದಿತ್ಯರಲ್ಲಿ ಒಬ್ಬನು. ದಕ್ಷಯಜ್ಞ ಧ್ವಂಸದ ಕಾಲದಲ್ಲಿ ವೀರಭದ್ರನು ಪೂಷನ ಹಲ್ಲುಗಳನ್ನು ಒಡೆದು ಹಾಕಿದನೆಂದು ಪುರಾಣ ಕಥೆಯು ತಿಳಿಸುತ್ತದೆ) ದೈತ್ಯಾಶ್ವವು (ಕೇಶಿಯ) ದೊಡ್ಡದಾಗಿ ಬಾಯ್ದೆರದು ಕೃಷ್ಣನ ಕಡೆಗೆ ಧಾವಿಸಿದನು. ಒಡನೆಯೇ ಶ್ರೀಕೃಷ್ಣ ತನ್ನ ತೋಳನ್ನು ದಪ್ಪವಾಗಿಸಿಕೊಂಡು ದೈತ್ಯಾಶ್ವದ ಬಾಯೊಳಗೆ ರಪ್ಪನೆ ತುರುಕಿದನು. ಅದರ ಬಾಯೊಳಗೆ ನುಗ್ಗಿದ ಕೃಷ್ಣಬಾಹುವಿನ ರಭಸಕ್ಕೆ ಕೇಶಿಯ ಹಲ್ಲುಗಳೆಲ್ಲ ಮುರಿದು ಬಿದ್ದವು. ಉಗ್ರವ್ಯಾಧಿಯು ಆತಂಕಕಾರಿಯಾಗಿ ದೇಹದಲ್ಲಿ ಬೆಳೆಯುವ ಹಾಗೆ ಕೇಶಿ ದಾನವನ ದೇಹದೊಳಗೆ ನುಗ್ಗಿದ ಶ್ರೀ ಕೃಷ್ಣನ ಬಾಹು ಕ್ರಮವಾಗಿ ವರ್ಧಿಸುತ್ತ ಬಂದಿತು.

ಅಶ್ವದ ತುಟಿಗಳು ಹರಿದವು. ನೊರೆ ನೊರೆಯಾಗಿ ರಕ್ತವನ್ನು ಕಕ್ಕಿತು. ಅಶ್ವವು ತನ್ನ ಕಾಲುಗಳಿಂದ ನೆಲವನ್ನು ಕುಟ್ಟುತ್ತಾ ಒದ್ದಾಡಿತು. ಅದರ ಮೈಯೆಲ್ಲಾ ಬೆವೆತುಹೋಯಿತು. ಕೊನೆಗೆ ಕುದುರೆಯ ಚೇಷ್ಠೆಯೆಲ್ಲಾ ಉಡುಗಿ ಕುಸಿದುಬಿದ್ದಿತು. ಹೀಗೆ ಕೇಶಿದಾನವನನ್ನು ಶ್ರೀಕೃಷ್ಣನು ಸಂಹರಿಸಿದನು. ಶ್ರೀಕೃಷ್ಣನಾದರೋ ಸ್ವಲ್ಪವೂ ದೇಹಾಯಾಸವಿಲ್ಲದಂತೆ ನಸುನಗುತ್ತಾ ಅಲ್ಲಿಯೇ ನಿಂತಿದ್ದನು. ಕೇಶಿಯು ಹತನಾದ್ದರಿಂದ ವಿಸ್ಮಿತರಾಗಿ ಗೋಪಗೋಪಿಯರು ಪುಂಡರೀಕಾಕ್ಷನನ್ನು ಅತ್ಯಂತ ಸಂತಸದಿಂದ ಸ್ತುತಿಸತೊಡಗಿದರು.

ದುಷ್ಟರನ್ನು ಸಂಹರಿಸುವುದೇ ಭಗವಂತ ಆಟ. ಈ ಆಟವನ್ನು

ನೋಡುತ್ತಾ ಭಕ್ತರು "ಉಫೇ ಉಫೇ" ಎಂದರೇನೇ ಸಾಕ್ಷಾತ್ ಭಗವಂತ ಉಬ್ಬಿಹೋಗುತ್ತಾನೆ. ಭಗವಂತನಲ್ಲಿ 'ತ್ರಾಹಿ, ತ್ರಾಹಿ' ಎಂದು ಕೇಳಿಕೊಂಡರೆ ಸಾಕು ಖಂಡಿತವಾಗಿಯೂ ರಕ್ಷಿಸುತ್ತಾನೆ. ಎಂಬುದು ಶತಷಃ ಸತ್ಯ

ಶ್ರೀಕೃಷ್ಣಾರ್ಪಣಮಸ್ತು

## ಗೋಕುಲಕ್ಕೆ ಅಕ್ರೂರನ ಪ್ರಯಾಣ

## ಬಲರಾಮ, ಕೃಷ್ಣನನ್ನು ನೋಡಿ ಅವನಿಗೆ ಆದ ಆನಂದಾನುಭವ

ಪರಾಶರ ಮಹರ್ಷಿಗಳು ಮೈತ್ರೇಯರಿಗೆ ಅಕ್ರೂರನ ಭಕ್ತ್ಯಾತಿಶಯಗಳನ್ನು ವಿವರಿಸುತ್ತಾ ಹೀಗೆ ಹೇಳಿದರು. ಕಂಸನು ಅಕ್ರೂರನಿಗೆ ಕೃಷ್ಣ, ಬಲರಾಮರನ್ನು ಮಧುರೆಗೆ ಕರೆತರಬೇಕೆಂದು ಆಜ್ಞೆಯನ್ನು ಕಳುಹಿಸಿದನು. ಅಕ್ರೂರನು ಅತ್ಯಾನಂದದಿಂದ ರಾಜನ ಅಣತಿಯನ್ನು ಶಿರಸಾವಹಿಸಿ ಗೋಕುಲದತ್ತ ಹೊರಟನು. ಅವನು ಕೃಷ್ಣಾನುಭವವನ್ನು ತನ್ನ ಮನಸ್ಸಿನಲ್ಲಿಯೇ ಮೆಲುಕುಹಾಕುತ್ತಾ ಹೊರಟನು. ಅವನ ಆನಂದಾನುಭವವನ್ನು ಈಗ ಅವನ ಮಾತಿನಿಂದಲೇ ಕೇಳಿ ಧನ್ಯರಾಗೋಣ.

**ಅದ್ಯಮೇ ಸಫಲಂ ಜನ್ಮ ಸುಪ್ರಭಾತಾಭವನ್ನಿಶಾ**
**ಯದುನ್ನಿದ್ರಾಬ್ಜ ಪತ್ರಾಕ್ಷಂ ವಿಷ್ಣೋರ್ದ್ರಕ್ಷ್ಯಾಮ್ಯಹಂ ಮುಖಮ್**

**ವಿನಿರ್ಜಗ್ಮುರ್ಯತೋ ವೇದಾ ವೇದಾಂಗಾನ್ಯಖಿಲಾನಿಚ**
**ದ್ರಷ್ಯಾಮಿ ತತ್ಪರಂ ಧಾಮ ಧಾಮ್ನಾಂ ಭಗವತೋ ಮುಖಮ್**

**ಯಜ್ಞೇಷು ಯಜ್ಞಪುರುಷಃ ಪುರುಷೈಃ ಪುರುಷೋತ್ತಮಃ**
**ಇಜ್ಯತೇ ಯೋಽಖಿಲಾಧಾರಸ್ತಂ ದ್ರಕ್ಷ್ಯಾಮಿ ಜಗತ್ಪತಿಮ್**

**ಇಷ್ಟ್ವಾಯಮಿಂದ್ರೋಯಜ್ಞಾನಾಂ ಶತೇನಾಮರರಾಜತಾಮ್**
**ಅವಾಪ ಸ್ವರೂಪ ನಂತಾದಿಮಂತಂ ದ್ರಕ್ಷ್ಯಾಮಿ ಕೇಶವಮ್**

**ನ ಬ್ರಹ್ಮಾ ನೇಂದ್ರರುದ್ರಾಶ್ವಿವಸ್ವಾದಿತ್ಯ ಮರುದ್ಗನಾಃ**
**ಯಸ್ಯ ಸ್ವರೂಪಜಾನಂತಿ ಪ್ರತ್ಯಕ್ಷಕ್ಷಂ ಯಾತಿ ಮೇ ಹರಿಃ**

ಸರ್ವಾತ್ಮಾ ಸರ್ವವಿತ್ಸರ್ವ ಸ್ಸರ್ವಭೂತೇಷ್ವವಸ್ಥಿತಃ
ಯೋ ಹ್ಯಚೀತ್ಯೋವ್ಯಯೋ ವ್ಯಾಪಿ ಸಮಕ್ಷ್ಯತಿ ಮಯಾಸಹ

ಮತ್ಸ್ಯಕೂರ್ಮವರಾಹಾಶ್ವ ಸಿಂಹರೂಪಾದಿಭಿಃ ಸ್ಥಿತಮ್
ಚಕಾರ ಜಗತೋ ಯೋಜಃ ಸೋದ್ಯ ಮಾಂ ಪ್ರಲಪಿಷ್ಯತಿ
ಸಾಂಪ್ರತಂ ಚ ಜಗತ್ ಸ್ವಾಮಿ ಕಾರ್ಯಕಾತ್ಮ ಹೃದಿ ಸ್ಥಿತಮ್
ಕರ್ತುಂ ಮನುಷ್ಯತಾಂ ಪ್ರಾಪ್ತ ಸ್ವೇಚ್ಛಾದೇಹ ಧೃಗವ್ಯಯಃ

ಯೇನಂತಃ ಪೃಥಿವೀ ಗತ್ತೇ ಶೇಖರಸ್ಥಿತಿ ಸಂಸ್ಥಿತಾಮ್
ಸೋವತೀರ್ಣೋಜಗತ್ಸರ್ಥೇ ಮಾಮಕ್ರೂರೇತಿ ವಕ್ಷ್ಯತಿ

ಪಿತೃ ಪುತ್ರ ಸುಹೃದ್ ಭ್ರಾತೃ ಮಾತೃ ಬಂದು ಮಯೀಮಿಮಾಮ್
ಯನ್ಮಾಯಾಂ ನಾಮಮುತ್ತರ್ತುಂ ಜಗತ್ತಸ್ಮೈ ನಮೋ ನಮಃ

(ವಿ.ಪು. 2ನೇ ಸಂ. ಪಂಚಮಾಂಶ ಶ್ಲೋಕ 3ರಿಂದ 13)

ಅಕ್ರೂರನು ಸ್ವಗತ ಹೀಗೆ ಹೇಳಿಕೊಳ್ಳುತ್ತಾನೆ.– "ಆಹಾ ! ನನಗಿಂತ ಧನ್ಯನು ಮತ್ತೊಬ್ಬನಿಲ್ಲ. ಅಂಶಾವತಾರಿಯಾದ ಚಕ್ರಧಾರಿ ಭಗವಂತನ ಮುಖವನ್ನು ಇಂದು ನೋಡುವೆನು. ಈಗ ನನ್ನ ಜನ್ಮ ಸಾರ್ಥಕವಾಯಿತು. ರಾತ್ರಿ ಕಳೆದು ಸುಪ್ರಭಾತವಾಯಿತು. ಅರಳಿದ ತಾವರೆಯ ಎಸಳಿನಂತೆ ಕಣ್ಣುಳ್ಳ, ವಿಷ್ಣುವಿನ ಮುಖವನ್ನು ನಾನು ನೋಡುವೆನು. ಕೇವಲ ಸಂಕಲ್ಪಾತ್ಮಕವಾಗಿ ಸ್ಮರಿಸಿಕೊಂಡರೇನೇ ಯಾವ ಮುಖವು ಜನರ ಪಾಪವನ್ನು ಪರಿಹರಿಸುವುದೋ ಅಂತಹ ವಿಷ್ಣುವಿನ ಪುಂಡರೀಕ ನಯನವುಳ್ಳ ಮುಖವನ್ನು ಸಾಕ್ಷಾತ್ತಾಗಿ ಕಾಣುತ್ತೇನೆ. ಯಾವ ಮುಖದಿಂದ ವೇದಗಳೂ ಸಮಸ್ತ ವೇದಾಂಗಗಳು ಪ್ರಕಟವಾದವೋ ತೇಜಸ್ಸುಗಳಿಗೆ ಪರಮ ತೇಜಸ್ಸಿನ ನೆಲೆಯಾದ ಭಗವಂತನ ಆ ಮುಖವನ್ನು ನಾನು ನೋಡುವೆನು. ಅಖಿಲಾಧಾರನಾದ ಯಾವ ಪುರುಷೋತ್ತಮನೂ ಯಜ್ಞಗಳಲ್ಲಿ ಯಜ್ಞಪುರುವಾಗಿ ಋತ್ವಿಜರಿಂದ ಅರ್ಚಿಸಲ್ಪಟ್ಟಡುವನೋ ಆ ಜಗದೀಶ್ವರನನ್ನು ನಾನು ಸಂದರ್ಶಿಸುತ್ತೇನೆ.

ಯಜ್ಞಭಿಕ್, ಯಜ್ಞಕೃತ್, ಯಜ್ಞಭುಕ್, ಯಜ್ಞಸಾಧನ, ಯಜ್ಞಾಂತಕೃತ್, ಯಜ್ಞಗುಹ್ಯಮನ್ನಮನಾದ "ಏವಚ" ನೂರು ಯಜ್ಞಗಳಿಂದ ಯಾರನ್ನು ಆರಾಧಿಸಿ ಇಂದ್ರನು ದೇವೇಶ್ವರ ಎಂದೆನಿಸಿಕೊಂಡನೋ ಅಂತಹ ಅನಂತನೂ ಅನಾದಿಯೂ ಆದ ಕೇಶವನನ್ನು ನಾನು ನೋಡುವೆ. ಬ್ರಹ್ಮ, ಇಂದ್ರ, ರುದ್ರರು, ಅಶ್ವಿನ ದೇವತೆಗಳು, ವಸುಗಳು, ಆದಿತ್ಯರು ಮರುದ್ಗುಣಗಳೂ ಸಹ ಯಾರ ಸ್ವರೂಪವನ್ನು ಅರಿಯಲು ಅಸಾಧ್ಯವೋ ಅಂತಹ  ಶ್ರೀಹರಿಯು ನನಗೆ ಪ್ರತ್ಯಕ್ಷನಾಗುತ್ತಾನೆ. ಸರ್ವಾತ್ಮನೂ, ಸರ್ವಜ್ಞನೂ ಸರ್ವನೂ ಸರ್ವಭೂತಗಳಲ್ಲಿ ನೆಲೆಸಿದವನೂ ಅಚಿಂತ್ಯನೂ, ಅವ್ಯಯನೂ ವಿಭುವೂ ಆದ ಮಹಾತ್ಮನೂ ನನ್ನೊಡನೆ ಸಂಭಾಷಿಸುತ್ತಾನೆ. ಮತ್ಸ್ಯ, ಕೂರ್ಮ, ವರಾಹ, ಹಯಗ್ರೀವ, ನರಸಿಂಹಾದಿ ರೂಪಗಳಿಂದ ಯಾವನು ಈ ಜಗತ್ತಿನ ಸಂರಕ್ಷಣೆಯನ್ನು ಮಾಡಿದನೋ ಅಂತಹ ಅನಾದಿ ಪುರುಷನು ಇಂದು ನನ್ನೊಡನೆ ಮಾತನಾಡುತ್ತಾನೆ. ಅವ್ಯಯನಾದ ಆ ಜಗದೀಶ್ವರನು ತನ್ನ ಮನಸ್ಸಿನಲ್ಲಿ ಚಿಂತಿಸಿದ  ಕಾರ್ಯವನ್ನು ನೆರವೇರಿಸುವುದಕ್ಕಾಗಿ ಪ್ರಕೃತದಲ್ಲಿ (ಈಗ) ತನ್ನ ಇಚ್ಛಾನುಸಾರವಾಗಿ  ಮನುಷ್ಯದೇಹವನ್ನು ಧರಿಸಿದ್ದಾನೆ. ಯಾವ ಅನಂತನು ಶೇಷರೂಪದಿಂದ ತನ್ನ ಮಸ್ತಕದಲ್ಲಿ ಕ್ಷೇಮವಾಗಿ ಇರಿಸಲ್ಪಟ್ಟ ಈ ಪೃಥ್ವಿಯನ್ನು ಧರಿಸಿರುವನೋ, ಜಗದ ಹಿತಕ್ಕಾಗಿ ಅವತರಿಸಿದ ಆ ಭಗವಂತನು ನನ್ನನ್ನು ನೋಡಿ 'ಅಕ್ರೂರ' ಎಂದು ಸಂಭೋದಿಸುತ್ತಾನೆ. ನನಗೆ ಅದೆಷ್ಟು ಹೃದಯಸ್ಪರ್ಶಿಯಾಗಿರುದೆ. ನನಗೆ ಅದೆಷ್ಟು ಆಪ್ಯಾಯಮಾನವಾಗಿರುತ್ತದೆ. ತಂದೆ, ಮಗ, ಸ್ನೇಹಿತ, ಸೋದರ, ತಾಯಿ, ಬಂಧು ಬಳಗ ರೂಪದಲ್ಲಿ ವಿಜೃಂಭಿಸುವ ಯಾವಾತನ ಮಾಯೆಯನ್ನು ಈ ಜಗತ್ತು ಉಲ್ಲಂಘಿಸಲು ಅಸಾಧ್ಯವಾಗಿದೆಯೋ ಆ ಮಹಾಮಹಿಮನಿಗೆ ನಮೋನಮಃ. ಅವನಲ್ಲಿ ನಾನು ಶರಣಾಗುತ್ತೇನೆ. ಹೀಗೆ ಅಕ್ರೂರನು ಭಕ್ತಿಯಿಂದ ನಮ್ರಚಿತ್ತನಾಗಿ ಸೂರ್ಯನು ಸ್ವಲ್ಪ ಪ್ರಕಾಶಿಸುತ್ತಿರುವಾಗಲೇ ಗೋಕುಲವನ್ನು ಸೇರಿದನು. ಹಸುಗಳ ಹಾಲು ಹಿಂಡುವ ಸ್ಥಳದಲ್ಲಿ ಕರುಗಳ ನಡುವೆ ನಿಂತಿದ್ದ ಶ್ರೀಕೃಷ್ಣನನ್ನು ಕಂಡನು.

ಇಲ್ಲಿ ಅಕ್ರೂರನ ಒಂದೊಂದು ಮಾತಿನಲ್ಲಿಯೂ ಅಷ್ಟೇ ಏಕೆ ಒಂದೊಂದು ಪದದಲ್ಲಿಯೂ ಧನ್ಯತಾ ಮನೋಭಾವವನ್ನು ನಾವು ಕಾಣಬಹುದು. ದೇವಾನುದೇವತೆಗಳಿಗೂ ಅವನನ್ನು ಅರ್ಥ ಮಾಡಿಕೊಳ್ಳಲು

ಸಾಧ್ಯವಾಗದ ಮಹಾನುಭಾವವನ್ನು ತಾನು ಭೇಟಿಯಾಗುವೆನಲ್ಲಾ ಎಂಬ ಹೆಗ್ಗಳಿಕೆ ಅಕ್ರೂರನಲ್ಲಿ ಕಾಣಬಹುದು. ಭಗವಂತನು ಸ್ಮರಣ ಮಾತ್ರದಿಂದಲೇ ಸಕಲ ಪಾಪಗಳನ್ನು ದೂರಮಾಡುವನು. ಶ್ರೀ ಹರಿಯನ್ನು ಒಲಿಸಲು ಸುಲಭ ಮಾರ್ಗವನ್ನು ಅಕ್ರೂರನು ನಮ್ಮಂತಹ ಹುಲುಮಾನವರಿಗೂ ನಿರ್ದೇಶಿಸಿದ್ದಾನೆ. "ಹರಿಸ್ಮರಣೆ ಮಾಡೋ ನಿರಂತರ, ಪರಗತಿಗೆ ಇದು ನಿರ್ಧಾರ" ಎಂಬ ಪುರಂದರ ವಾಣಿಯನ್ನು ಈ ಸಂದರ್ಭದಲ್ಲಿ ಸ್ಮರಿಸೋಣವೇ ?

ಹೀಗೆ ಯದುವಂಶೀಯನಾದ ಅಕ್ರೂರನು ಕೃಷ್ಣ ಬಳಿಬಂದು 'ನಾನು ಅಕ್ರೂರ' ಎಂದು ಹೇಳುತ್ತಾ ಅವನ ಚರಣಕಮಲಗಳಿಗೆ ವಂದಿಸಿದನು. ಶ್ರೀಕೃಷ್ಣನು ತನ್ನ ಶ್ರೀವತ್ಸ ಪದ್ಮ ಚಿಹ್ನಾಂಕಿತವಾದ ಪಾಣಿಯಿಂದ ಅವನನ್ನು ಸ್ಪರ್ಶಿಸಿ ತನ್ನತ್ತ ಎಳೆದುಕೊಂಡು ಪ್ರೀತಿಯಿಂದ ಗಾಢವಾಗಿ ಅಪ್ಪಿಕೊಂಡನು. ನಂತರ ಬಲರಾಮನಿಗೂ ಅಕ್ರೂರನು ನಮಿಸಿದನು. ಅವರೀರ್ವರೂ ಸಂಪ್ರೀತರಾಗಿ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಅಕ್ರೂರನಿಗೆ ವಂದನಾಪೂರ್ವಕವಾಗಿ ಸತ್ಕರಿಸಿ ಭೋಜನ ಮಾಡಿಸಿದರು. ನಂತರ ಅಕ್ರೂರನು ತಾನು ಬಂದಿರುವ ಉದ್ಧೇಶವನ್ನು ತಿಳಿಸಲು ಉಪಕ್ರಮಿಸಿದನು. ದುರಾತ್ಮನಾದ ಕಂಸನು ವಸುದೇವನನ್ನು ಗದರಿಸಿದ್ದು, ದೇವಕಿಯನ್ನು ನಿಂದಿಸಿದ್ದು, ತಂದೆಯಾದ ಉಗ್ರಸೇನನನ್ನು ಸೆರೆಮನೆಯಲ್ಲಿ ಇಟ್ಟ ಬಗೆ, ಇವುಗಳನ್ನೆಲ್ಲಾ ತಿಳಿಸಿ, ತಾನು ಬಂದ ಉದ್ದೇಶವನ್ನು (ಅಂದರೆ ಬಲರಾಮ ಕೃಷ್ಣರನ್ನು ಕರೆದುಕೊಂಡೊಯ್ಯಲು) ತನ್ನನ್ನು ಕಂಸನು ಕಳುಹಿಸಿದ್ದಾನೆ ಎಂಬುದನ್ನು ಸವಿವರವಾಗಿ ಕೃಷ್ಣ ಬಲರಾಮರಿಗೆ ತಿಳಿಸಿದನು.

ಆಗ ಶ್ರೀಕೃಷ್ಣನು 'ಹೇ ದಾನಪತಿ, ಇವೆಲ್ಲವೂ ನನಗೆ ಗೊತ್ತಾಯಿತು. 'ಹೇ ಮಹಾಭಾಗ ಈ ವಿಷಯದಲ್ಲಿ ನನಗೆ ಸರಿತೋರಿದ್ದನ್ನು ಮಾಡುವೆನು. ಅನ್ಯಥಾ ಭಾವಿಸಬಾರದು. ಕಂಸನು ನನ್ನಿಂದ ಹತನಾದನೆಂದೇ ತಿಳಿ. ನಾನು ಬಲರಾಮನೂ ನಾಳೆ ನಿನ್ನೊಡನೆ ಮಧುರೆಗೆ ಬರುತ್ತೇವೆ. ಹಿರಿಯರಾದ ಗೋಪಾಲರು ಯಥೇಚ್ಛವಾಗಿ ಕಾಣಿಕೆಗಳನ್ನು ತೆಗೆದುಕೊಂಡು ಬರುತ್ತಾರೆ.

ಎಲೈ ವೀರ, ನೀನು ಈ ರಾತ್ರಿಯನ್ನು ಇಲ್ಲಿ ಕಳೆ. ನೀನು ಚಿಂತಿಸಬೇಡ. ಇನ್ನು ಮೂರು ರಾತ್ರಿಯೊಳಗೆ ಕಂಸನನ್ನು ಅವನ ಪರಿವಾರ ಸಮೇತನಾಗಿ ನಾನು ಸಂಹರಿಸುವೆನು ಎಂದು ನುಡಿದನು.

ಅನಂತರ ಅಕ್ರೂರನೂ ಬಲರಾಮ ಕೃಷ್ಣರೂ ಗೋಕುಲದಲ್ಲಿದ್ದ ಸಮಸ್ತ ಗೋಪಾಲರಿಗೂ ಕಂಸನ ಸಂದೇಶವನ್ನು ತಿಳಿಸಿ ನಂದಗೋಪನ ಮನೆಯಲ್ಲಿ ಅಂದು ರಾತ್ರಿ ಮೂವರೂ, ನಿದ್ರಿಸಿದರು. ಮರುದಿನ ಬೆಳಿಗ್ಗೆ ಅಕ್ರೂರನೊಡನೆ ಹೊರಡಲು ಬಲರಾಮ ಕೃಷ್ಣರು ಸಿದ್ಧರಾದರು. ಅದನ್ನು ನೋಡಿದ ಗೋಪಿಯರು ಕಣ್ಣೀರು ಸುರಿಸುತ್ತಾ ನಿಟ್ಟುಸಿರುಬಿಡುತ್ತಾ ತಮ್ಮಲ್ಲಿಯೇ ಹೀಗೆ ಮಾತಾಡಿಕೊಂಡರು. "ಗೋವಿಂದನು ಒಮ್ಮೆ ಮಧುರೆಗೆ ಹೋದಮೇಲೆ ತಿರುಗಿ ಗೋಕುಲಕ್ಕೆ ಹೇಗೆ ಬಂದಾನು! ನಗರ ಸ್ತ್ರೀಯರ ಮಧುರವಾದ ಮಾತುಗಳಿಂದ ಮೋಹಿತನಾಗಿ ನಮ್ಮನ್ನೆಲ್ಲಾ ಖಂಡಿತವಾಗಿ ಮರೆತುಬಿಡುತ್ತಾನೆ. ಈ ಸಮಸ್ತ ಗೋಕುಲದಲ್ಲಿ ಸಾರಭೂತನಾದವೆಂದರೆ ಕೃಷ್ಣ ವಿಧಾತನು ಅವನನ್ನು ಇನ್ನೊಂದೆಡೆಗೆ ಕರೆದೊಯ್ಯುತ್ತಿದ್ದಾನೆ. ನಿರ್ದಯನೂ ದುರಾತ್ಮನೂ ಆದ ಆ ವಿಧಾತನು (ಅಕ್ರೂರ) ಗೋಪಿಯರ ಮನಸ್ಸಿಗೆ ಬಲವಾದ ಏಟು ಕೊಟ್ಟನು. ನಗರವಾಸಿಗಳಾದ ಯುವತಿಯರಾದರೋ ಭಾವಗರ್ಭಿತವಾಗಿ ಮುಗುಳ್ನಗೆ ಬೀರುತ್ತ ಮಾತನಾಡುತ್ತಾರೆ. ಅವರ ನಡಿಗೆಯೇ ವಿಲಾಸಮನೋಜ್ಞವಾಗಿರುತ್ತದೆ.

ಬಹುಸೊಗಸಾದ ಓರೆಗಣ್ಣಿನ ನೋಟಕ್ಕೆ ಗ್ರಾಮದಲ್ಲಿ ಬೆಳೆದ ಕೃಷ್ಣನು ಅವರ ಲೀಲೆಗಳೆಂಬ ಸಂಕೋಲೆಗಳಿಗೆ ಸಿಕ್ಕಿಕೊಂಡುಬಿಡುತ್ತಾನೆ. ಇದೋ ! ಇದೋ ! ಕೃಷ್ಣನು ರಥವೇರಿ ಮಧುರೆಗೆ ಹೊರಟಿದ್ದಾನೆ ದಯಾಹೀನನಾದ ಅಕ್ರೂರನೆಂಬ ಕ್ರೂರನಿಂದ ಮೋಸಹೋಗಿದ್ದಾನೆ. ಈ ಗೋವಿಂದನೂ ಸಹ ಅತ್ಯಂತ ದಯಾಹೀನ. ಆಗಲೇ ಬಲರಾಮನೊಡನೆ ಹೊರಟೇಬಿಟ್ಟಿದ್ದಾನೆ. ಬೇಗ ಹೋಗಿ ಅವನನ್ನು ತಡೆಯಿರಿ ಎಂದು ಗೋಪಿಯರು ಹೇಳುತ್ತಲೇ ಇದ್ದರು. ಆದರೆ ಅವರ ಮಾತನ್ನು ಯಾರೂ ಕೇಳಲಿಲ್ಲ. ಗೋಪಿಯರ

ಈ ಮಾತುಗಳಿಂದ ಅವರಿಗೆ ಈ ಕೃಷ್ಣನಲ್ಲಿದ್ದ ಅಕ್ಕರೆ, ಅತಿಯಾದ ಪ್ರೇಮ, ವಿರಹ, ಕಾತುರತೆ ಎಲ್ಲವೂ ಸ್ಪಷ್ಟವಾಗುತ್ತದೆ. ಆದರೆ ಶ್ರೀಕೃಷ್ಣನ ಅವತಾರ ರಹಸ್ಯವನ್ನು ಅವರೇನು ಬಲ್ಲರು ? ಆದ್ದರಿಂದಲೇ ಹೀಗೆ ಹಲುಬುತ್ತಿದ್ದರು ಎಂಬುದು ತಿಳಿಯುತ್ತದೆ. ಈ ರೀತಿಯಲ್ಲಿ ಶ್ರೀಕೃಷ್ಣನು ಅಕ್ರೂರನೊಡನೆ ಹಾಗೂ ಅಣ್ಣ ಬಲರಾಮನೊಡನೆ ರಥವನ್ನೇರಿ ಮಧುರೆಯತ್ತ ಹೊರಟನು. ಶೀಘ್ರಗಾಮಿಗಳಾದ ಅಶ್ವಗಳನ್ನು ಹೂಡಿದ್ದ ರಥದಲ್ಲಿ ಪ್ರಯಾಣ ಮಾಡುತ್ತಾ ರಾಮ ಕೃಷ್ಣ, ಅಕ್ರೂರರು ಮಧ್ಯಾಹ್ನದ ಹೊತ್ತಿಗೆ ಯಮುನಾ ನದಿಯನ್ನು ಸೇರಿದರು. ಆಗ ಅಕ್ರೂರನು ಶ್ರೀಕೃಷ್ಣನನ್ನು ಕುರಿತು 'ನೀವಿಬ್ಬರೂ ಇಲ್ಲೇ ಕುಳಿತಿರಿ. ನಾನು ಯಮುನಾ ಜಲದಲ್ಲಿ ಮಾಧ್ಯಾಹ್ನಿಕವನ್ನು ಮುಗಿಸಿ ಬರುವೆನು' ಎಂದನು. ಶ್ರೀಕೃಷ್ಣನು ಆಗಲಿ ಎಂದನು, ಪ್ರಾಜ್ಞನಾದ ಅಕ್ರೂರನು ಧ್ಯಾನ ಆಚಮನಗಳನ್ನು ಮಾಡಿ ಯಮುನಾ ಜಲದಲ್ಲಿ ನಿಂತು ಪರಬ್ರಹ್ಮವಸ್ತುವನ್ನು ಧ್ಯಾನಿಸತೊಡಗಿದನು. ಈ ಸಂದರ್ಭದಲ್ಲಿ ಅವನಿಗೆ ಅಚ್ಚರಿಯೊಂದು ಕಾದಿತ್ತು. ಧ್ಯಾನಾಸಕ್ತನಾದ ಅಕ್ರೂರನು ಪರಬ್ರಹ್ಮವಸ್ತುವನ್ನು ನೋಡಿದನು. ಆದಿತ್ಯಮೂರ್ತಿ ಹೇಗಿತ್ತು?

**ಫಣಾಸಹಸ್ರಮಾಲಾಢ್ಯಂ ಬಲಭದ್ರಂ ದದರ್ಶಸಃ**
**ಕುಂದ ಮಾಲಂಗ ಮುನ್ನಿದ್ರ ಪದ್ಮ ಪತ್ರಾಯತೇಕ್ಷಣಂ**

**ವ್ರತಂ ವಾಸುಕಿ ರಂಭಾದ್ಯೈರ್ಮಹದ್ಭಿಃ ಪವನಾಶಿಬಿ**
**ಸಂಸ್ತೂಯ ಮಾನ ಮುದ್ಗನ್ದಿವನಮೂಲಾ ವಿಭೂಷಿತಮ್**

**ದಧಾಮ ಮಸಿತೇ ವಸ್ತ್ರೇ ಚಾರು ಪದ್ಮಾವತಂಸಕಮ್**
**ಚಾರು ಕುಂಡಲಿನಂ ಭ್ರಾನ್ತ ಮನ್ತರ್ಜಲ ತಲೇ ಸ್ಥಿತಮ್**
**ತಸ್ಯೋತ್ಸಂಗೇ ಘನಶ್ಯಾಮಮಾತಾಮ್ರಾಯತ ಲೋಚನಮ್**
**ಚತುರ್ಬಾಹು ಮುದಾರಾಂಗಂ ಚಕ್ರಾ ಧ್ಯಾಯಧಭೂಷಣಂ**

(ವಿ. ಪು. 2ನೇ ಸಂ. ಪಂಚಮಾಂಶ ಅ.18 ಶ್ಲೋಕ 36ರಿಂದ 39)

ಅಕ್ರೂರನು ಸಾವಿರ ಹೆಡೆಗಳ ಸಾಲಿನಿಂದ ವಿರಾಜಿಸತಕ್ಕವನೂ ಕುಂದ ಕುಸುಮ ಮಾಲೆಯಂತೆ ಶುಭ್ರಾಂಗನು, ಅರಳಿದ ಕಮಲ ಪುಷ್ಪದಂತೆ ವಿಶಾಲನೇತ್ರವುಳ್ಳವನೂ ಆದ ಬಲಭದ್ರನನ್ನು ಕಂಡನು, ಆ ಬಲಭದ್ರನು ವಾಸುಕಿ, ರಂಭ ಮೊದಲಾದ ಮಹಾಸರ್ಪಗಳಿಂದ ಪರಿವೃತನಾಗಿ ಸ್ತುತಿಸಲ್ಪಡುತ್ತ ಸುವಾಸನೆಯನ್ನು ಬೀರುವ ವನಮಾಲೆಯಿಂದ ವಿಭೂಷಿತನಾಗಿದ್ದನು. ಅಲ್ಲದೆ ಶ್ಯಾಮವರ್ಣದ ಎರಡು ವಸ್ತ್ರಗಳನ್ನು ಧರಿಸಿ ಸುಂದರವಾದ ಪದ್ಮಮಾಲೆಯನ್ನು ಶಿರಸ್ಸಿನಲ್ಲಿ ಮುಡಿದಿದ್ದನು. ಮನೋಹರವಾದ ಕುಂಡಲಗಳಿಂದ ಅಲಂಕೃತನಾಗಿ ನೀರಿನ ತಳದಲ್ಲಿ ವಿರಾಜಮಾನನಾಗಿದ್ದನು. ಬಲಭದ್ರನೊಡನೆ ಮೇಘಶ್ಯಾಮನೂ ಸ್ವಲ್ಪ ಕೆಂಪಾದ ವಿಶಾಲನೇತ್ರವುಳ್ಳವನೂ ಚತುರ್ಭುಜನೂ ಮನೋಜ್ಞಶರೀರನೂ ಶಂಖ ಚಕ್ರಾದಾಯುಧಗಳಿಂದ ಭೂಷಿತನೂ ಆದ ಶ್ರೀಕೃಷ್ಣನನ್ನು ಸಹ ಅಕ್ರೂರನು ನೋಡಿದನು. ಬಳಿಯಲ್ಲಿದ್ದ ಯೋಗಸಿದ್ಧರೂ ಶುದ್ಧಾತ್ಮರೂ ಆದ ಸನಕ ಸನಂದಾದಿ ಮುನಿಗಳು ನಾಸಾಗ್ರ ದೃಷ್ಟಿಯುಳ್ಳವರಾಗಿ ಶ್ರೀಕೃಷ್ಣನನ್ನು ಧ್ಯಾನಿಸುತ್ತಿದ್ದರು. ಅಕ್ರೂರನು ಅವರೇ ಬಲಭದ್ರ ಶ್ರೀ ಕೃಷ್ಣರೆಂದು ಗುರುತುಹಿಡಿದು ವಿಸ್ಮಿತನಾಗಿ ರಥದಲ್ಲಿದ್ದವರು ಇಷ್ಟು ಬೇಗ ಇಲ್ಲಿಗೆ ಹೇಗೆ ಬಂದರು? ಎಂದು ಚಿಂತೆಗೊಳಗಾದನು. ಏನನ್ನೋ ಹೇಳಬೇಕೆಂದು ಅಕ್ರೂರನು ಉದ್ದೇಶಿಸಿದಾಗ ಜನಾರ್ಧನನು ಅವನಿಂದ ಮಾತೇ ಹೊರಡದಂತೆ ತಡೆದನು. ಅನಂತರ ಅಕ್ರೂರನು ಯಮುನಾನದಿಯಿಂದ ಈಚೆಗೆ ಬಂದು ರಥದ ಬಳಿಗೆ ಹೋದನು. ಅಲ್ಲಿ ಮೊದಲಿನಂತೆ ರಥದಲ್ಲಿಯೇ ಇಬ್ಬರೂ ಮನುಷ್ಯಾಕೃತಿಯಲ್ಲಿ ಕುಳಿತಿರುವುದನ್ನು ಕಂಡನು. ಮತ್ತೆ ಹಿಂದಕ್ಕೆಹೋಗಿ ಯಮುನಾ ನದಿಯಲ್ಲಿ ಇಳಿದಾಗ ಹಿಂದಿನಂತೆ ಅವರಿಬ್ಬರೂ ಜಲದಲ್ಲಿ ಕಾಣಿಸಿದರು. ಆಶ್ಚರ್ಯಚಕಿತನಾದ ಅಕ್ರೂರನು ಭಗವಂತನನ್ನು ಕುರಿತು ಹೀಗೆ ಸ್ತುತಿಸಿದನು.

**ಸನ್ಮಾತ್ರ ರೂಪಿಣೇ ಅಚಿಂತ್ಯ ಮಹಿಮ್ನೆ ಪರಮಾತ್ಮನೇ**

**ವ್ಯಾಪಿನೇ ನೈಕರೂಪೈಕಸ್ವರೂಪಾಯ ನಮೋ ನಮಃ**

**ಸರ್ವರೂಪಾಯ ತೇ ಚಿಂತ್ಯ ಹವಿರ್ಭೂತಾಯ ತೇ ನಮಃ**

**ನಮೋ ವಿಜ್ಞಾತಪಾರಾಯ ಪ್ರಕೃತೇಃ ಪ್ರಭೋ**

**ಓಂ ನಮೋ ವಾಸುದೇವಾಯ ನಮಸ್ಸಂಕರ್ಷಣಾಯ ಚ**

**ಪ್ರದ್ಯುಮ್ನಾಯ ನಮಸ್ತುಭ್ಯಮನಿರುದ್ಧಾಯ ತೇ ನಮಃ**

(ವಿ.ಪು. 2ನೇ ಸಂ. ಪ. ಅಂ. ಅ.18 ಶ್ಲೋಕ 48,49 ಮತ್ತು 58)

ಸತ್ತಾ ಮಾತ್ರಸ್ವರೂಪನೂ ಅಚಿಂತ್ಯ ಮಹಿಮನೂ ಆದ ಪರಮಾತ್ಮನಿಗೆ ನಮಸ್ಕಾರ ಕಾರ್ಯರೂಪದಿಂದ ಅನೇಕನೂ ಕಾರಣರೂಪದಿಂದ ಏಕನೂ ಆದ ವಿಭುವಿಗೆ ನಮಸ್ಕಾರ (ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ ಎಂಬ ವಿಷ್ಣುಸಹಸ್ರನಾಮದ ಸ್ತುತಿ ಇದೆ) ಹೇ ಅಚಿಂತ್ಯನೂ, ಸರ್ವರೂಪನೂ, ಹವಿಃ ಸ್ವರೂಪನೂ ಆದ ನಿನಗೆ ನಮಸ್ಕಾರ, (ಯತ್ಪುರುಷೇಣ ಹವಿಷಾ ದೇವಾಯಜ್ಞಮತನ್ವತ ವಸಂತೋ ಅಸ್ಯಾಸೀ ದಾಜ್ಯಮ್ । ಗ್ರೀಷ್ಮ ಇದ್ಮಶ್ಶರದ್ಧವಿಃ । ಸಪ್ತಾಸ್ಯಾಸನ್ಪರಿಧಯಃ ತ್ರಿಸ್ತಪ್ತ ಸಮಿದಃಕೃತಾಃ ದೇವಾಯದ್ಯಜ್ಞಂ ತನ್ವಾನಾಃ । ಅಬಧ್ನಂ ಪುರುಷಂಪಶುಮ್ । ತಂ ಯಜ್ಞಂ ಬರ್ಹಿಷಿಪ್ರೌಕ್ಷನ್ । ಪುರುಷಂ ಜಾತಮಗ್ರತಾಃ । ಎಂಬ ಪುರುಷ ಸೂಕ್ತದ ವಾಣಿಯನ್ನು ಇಲ್ಲಿ ನೆನೆಪಿಸಿಕೊಳ್ಳೋಣ) ಅಂತೆಯೇ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬವು ಭಗವಂತನ ಚತುರ್ವ್ಯೂಹಗಳು. ಇಂತು ಅಕ್ರೂರನು ಭಗವನ್ನಾರಾಯಣ ದಿವ್ಯಸ್ವರೂಪವನ್ನು ಕಂಡು ಧನ್ಯನಾದನು. ಅಂತಹ ಮಹಾಭಕ್ತ ಅಕ್ರೂರನಿಗೆ ನಮೋನಮಃ

## ಅಕ್ರೂರನು ಶ್ರೀಕೃಷ್ಣ ಬಲರಾಮರೊಡನೆ ಮಧುರೆಯನ್ನು ಪ್ರವೇಶಿಸುವುದು

ಅಕ್ರೂರನು ಈ ಪ್ರಕಾರವಾಗಿ ಯಮುನಾ ಜಲಮಧ್ಯದಲ್ಲಿ ನಿಂತು ವಿಷ್ಣುವನ್ನು ಸ್ತುತಿಸಿ ಸರ್ವೇಶ್ವರನನ್ನು ಮನಃ ಕಲ್ಪಿತವಾದ ಧೂಪ ಪುಷ್ಪಾದಿಗಳಿಂದ ಅರ್ಚಿಸಿದನು. ಸಮಸ್ತ ಪ್ರಾಪಂಚಿಕ ವಿಷಯಗಳನ್ನು ದೂರವಿಟ್ಟು ಬ್ರಹ್ಮವಸ್ತುವಿನಲ್ಲಿ ಬಹುಕಾಲ ತನ್ನ ಮನಸ್ಸನ್ನು ನಿಲ್ಲಿಸಿದ್ದನು. ಈ ಒಂದು ಸಮಾಧಿ ಸ್ಥಿತಿಯಿಂದ ಮತ್ತೆ ಎಚ್ಚೆತ್ತನು. ಮೊದಲಿನಂತೆ ಬಲರಾಮ, ಕೃಷ್ಣರು ರಥದಲ್ಲಿ ಕುಳಿತುಕೊಂಡಿರುವುದನ್ನು ನೋಡುತ್ತಿರಲಾಗಿ

ಶ್ರೀಕೃಷ್ಣ ಬೇಕೆಂತಲೇ ಅಕ್ರೂರನನ್ನು ಕುರಿತು ಅಕ್ರೂರ ಯಮುನಾ ಜಲದಲ್ಲಿ ನೀನು ಏನೋ ಒಂದು ಅಶ್ಚರ್ಯವನ್ನು ಕಂಡಿರಬೇಕು ಅಲ್ಲವೇ ? ಎಂದನು. ಅದಕ್ಕೆ ಅಕ್ರೂರನು "ಹೇ ಅಚ್ಯುತ ನೀರಿನೊಳಗೆ ನಾನು ಯಾವ ಆಶ್ಚರ್ಯವನ್ನು ಕಂಡೆನೋ ಅದೇ ಆಶ್ಚರ್ಯವನ್ನು ಈಗ ನಾನು ಎದುರಿಗೆ ಕಾಣುತ್ತಿದ್ದೇನೆ" ಎಂದನು. ಅಷ್ಟೇ ಅಲ್ಲ ಈಗ ಮಥುರೆಗೆ ಹೋಗೋಣ. ಕಂಸನಿಗೆ ನಾನು ಹೆದರುತ್ತಿದ್ದೇನೆ. ಪರಾನ್ನಾದಿಂದ "ಜೀವಿಸತಕ್ಕ ಜನರ ಆತ್ಮಕ್ಕೆ ಧಿಕ್ಕಾರ" ಎಂದನು. ಹೀಗೆ ಹೇಳಿ ಅಕ್ರೂರನು ಪರಾನ್ನ ಪರಾಧೀನ ಅದರಲ್ಲೂ ಕಂಸನಂತಹ ರಾಕ್ಷಸನಿಗೆ ಅಧೀನನಾಗಿರುವುದಕ್ಕೆ ಧಿಕ್ಕಾರ ಎಂದು ವಾಯುವೇಗದಿಂದ ತನ್ನ ರಥಾಶ್ವಗಳನ್ನು ಓಡಿಸಿ, ಸಾಯಂಕಾಲದ ವೇಳೆಗೆ ಮಥುರಾ ನಗರವನ್ನು ಬಂದು ಸೇರಿದನು.

ಅಲ್ಲಿಗೆ ಬಂದು ಬಲರಾಮ, ಕೃಷ್ಣರನ್ನು ಕುರಿತು "ನೀವಿಬ್ಬರೂ ಪಾದಚಾರಿಗಳಾಗಿ ಮುಂದೆ ಹೋಗಿ ನಾನೊಬ್ಬನೇ ರಥದಲ್ಲಿ ನಗರವನ್ನು ಪ್ರವೇಶಿಸುವೆ. ಒಂದು ವಿಷಯ ನೀವು ವಸುದೇವನ ಮನೆಗೆ ಹೋಗಬಾರದು. ನಿಮ್ಮಿಬ್ಬರ ನಿಮಿತ್ತದಿಂದಲೇ ಪಾಪ ಆ ವೃದ್ಧ ವಸುದೇವನನ್ನು ದೂರೀಕರಿಸಿದ್ದಾನೆ" ಎಂದನು. ಹೀಗೆ ಹೇಳಿ ಅಕ್ರೂರನು ಮಥುರಾಪುರದೊಳಗೆ ಹೋದನು. ಬಲರಾಮ ಕೃಷ್ಣರು ಕಾಲ್ನಡಿಗೆಯಿಂದ ನಗರವನ್ನು ಪ್ರವೇಶಿಸಿ ರಾಜಮಾರ್ಗವನ್ನು ಸೇರಿದರು. ಅಲ್ಲಿ ಪೌರನಾರಿಯರು, ಪುರುಷರು ಅತ್ಯಾನಂದದಿಂದ ಕಣ್ಣರಳಿಸಿ ಸ್ವಾಗತಿಸಿದರು. ಬಲರಾಮ ಕೃಷ್ಣರನ್ನು ನೋಡುತ್ತಿರಲಾಗಿ, ಆ ವೀರರು ಮದಿಸಿದ ಬಾಲಗಜಗಳಂತೆ ಕಂಗೊಳಿಸಿ ಗಂಭೀರವಾಗಿ ಲೀಲೆಯಿಂದ ರಾಜಮಾರ್ಗದಲ್ಲಿ ಸಾಗುತ್ತಿದ್ದರು. ಹೀಗೆ ಸಾಗುತ್ತಿರಲಾಗಿ ದಾರಿಯಲ್ಲಿ ಅವರು ರಜಕನನ್ನು ಕಂಡರು. (ಬಟ್ಟೆಗಳನ್ನು ಒಗೆದು ಬಣ್ಣ ಹಾಕುವವ ಅಗಸ)

## ರಜಕನ ವಧೆ

ಶ್ರೀಕೃಷ್ಣ ಬಲರಾಮರ ರಾಜಮಾರ್ಗದಲ್ಲಿ ಹೋಗುತ್ತಿರುವಾಗ ರಜಕನೊಬ್ಬನನ್ನು ಕಂಡು ತಮಗೆ ಬೇಕಾದ ಕೆಲವು ಸುಂದರವಾದ ವಸ್ತ್ರಗಳನ್ನು ತಮಗೆ ನೀಡಬೇಕೆಂದು ಕೇಳಿದರು. ಆ ರಜಕನಾದರೋ

ಮಹಾ ದುರಹಂಕಾರಿಯಾಗಿದ್ದನು. ಅವನು ಕಂಸನ ಅರಮನೆಗೆ ಸಂಬಂಧಿಸಿದವನಾಗಿದ್ದನು. ತನಗೆ ರಾಜಾನುಗ್ರಹವಿದೆಯೆಂದು ಗರ್ವ ಅವನಲ್ಲಿತ್ತು. ಅವನು ಗಟ್ಟಿಯಾಗಿ ಅವಾಚ್ಯ ಶಬ್ದಗಳಿಂದ ರಾಮಕೃಷ್ಣರನ್ನು ಹಂಗಿಸಿದನು. ಆಗ ಶ್ರೀ ಕೃಷ್ಣನು ಕುಪಿತನಾಗಿ ದುರಾತ್ಮನಾದ ಆ ರಜಕನ ಶಿರಸನ್ನು ಕರತಳ ಪ್ರಹಾರದಿಂದ ನೆಲಕ್ಕೆ ಉರುಳಿಸಿದನು. ನಂತರ ತಮಗೆ ಬೇಕಾದ ವಸ್ತ್ರಗಳನ್ನು ತೆಗೆದುಕೊಂಡರು. ಶ್ರೀಕೃಷ್ಣ ಪೀತಾಂಬರವನ್ನು ತೆಗೆದುಕೊಂಡು ಉಟ್ಟನು. ಬಲರಾಮ ನೀಲಾಂಬರವನ್ನು ತೆಗೆದುಕೊಂಡು ಉಟ್ಟನು. ಇಬ್ಬರೂ ಸಂತಸದಿಂದ ಮುಂದೆ ನಡೆದರು.

## ಹೂವಾಡಿಗನ ಮೇಲೆ ಕೃಪಾಕಟಾಕ್ಷ

ಶ್ರೀಕೃಷ್ಣ ಬಲಾರಾಮರಿಬ್ಬರಿಗೂ ಮಥುರಾನಗರದ ರಾಜಬೀದಿಯಲ್ಲಿ ನಡೆದು ಹೋಗುತ್ತಿರುವಾಗ ಒಬ್ಬ ಹೂವಾಡಿಗ (ಮಾಲಾಕಾರ)ನನ್ನು ಕಂಡರು. ಅವರಿಬ್ಬರನ್ನು ತನ್ನ ಮನೆಯಲ್ಲಿ ಕಂಡು ಮಾಲಾಕಾರನು "ಇವರಿಬ್ಬರೂ ಧರೆಗಿಳಿದು ಬಂದ ದೇವತೆಗಳೇ" ಎಂದು ವಿಸ್ಮಯದಿಂದ ನೋಡತೊಡಗಿದನು. ಅವರಿಬ್ಬರೂ ಮಾಲಾಕಾರನ ಬಳಿ ಹೂವುಗಳನ್ನು ಯಾಚಿಸಿದರು. ಹೂವಾಡಿಗನು ಎರಡೂ ಕೈಗಳನ್ನೂ ನೆಲದಮೇಲೂರಿ (ಸಾಷ್ಟಾಂಗ ನಮಸ್ಕಾರ) ತಲೆಯನ್ನು ಭೂಮಿಗೆ ಮುಟ್ಟಿಸಿ ನಮಸ್ಕರಿಸಿದನು. ಸ್ವಾಮಿ ನನ್ನ ಮನೆಗೆ ಬಂದದ್ದು ಪರಮಾನುಗ್ರಹವಾಯಿತು ನಾನು ಧನ್ಯನಾದೆ. ನಿಮ್ಮನ್ನು ಪೂಜಿಸುವ ಭಾಗ್ಯ ನನ್ನಾಯಿತು" ಎಂದನು. ನಂತರ ಅತ್ಯಂತ ಹರ್ಷದಿಂದ ಅವರಿಗೆ ಬೇಕಾದ ಹೂವುಗಳನ್ನು ನೀಡಿದನು. ಆಗ ಶ್ರೀಕೃಷ್ಣನು ಪ್ರಸನ್ನನಾಗಿ ಹೂವಾಡಿಗನಿಗೆ ವರವನ್ನಿತ್ತನು. "ಎಲೈ ಸೌಮ್ಯ, ನನ್ನನ್ನು ಆಶ್ರಯಿಸಿದ ಲಕ್ಷ್ಮಿಯು (ಐಶ್ವರ್ಯ) ನಿನ್ನನ್ನು ಎಂದೂ ತೊರೆಯದಿರಲಿ. ನಿನಗೆ ಎಂದೆಂದಿಗೂ ಬಲಹಾನಿಯಾಗಲಿ, ಧನಹಾನಿಯಾಗಲಿ ಆಗುವುದಿಲ್ಲ. ಎಲ್ಲಿಯವರೆಗೆ ಹಗಲುಗಳಾಗುತ್ತಿರುವುದೋ ಅಲ್ಲಿಯವರೆಗೆ ನಿನ್ನ ಸಂತತಿಯು ನಶಿಸದೆ ನಡೆಯುತ್ತಾ ಹೋಗುವುದು. ಈ ಲೋಕದಲ್ಲಿ ಸಮೃದ್ಧವಾಗಿ ಭೋಗಗಳನ್ನು ಅನುಭವಿಸಿದ ನಂತರ ಕಡೆಯ ಕಾಲದಲ್ಲಿ ನನ್ನ ಅನುಗ್ರಹ ನಿನಗೆ ನನ್ನ ಸ್ಮರಣೆಯುಂಟಾಗಿ ನೀನು ದಿವ್ಯಲೋಕವನ್ನು ಪಡೆಯುವೆ. ಹೇ

ಸೌಮ್ಯನೇ, ಸರ್ವಕಾಲದಲ್ಲಿಯೂ ನಿನಗೆ ಧರ್ಮದಲ್ಲಿ ಸ್ಥಿರವಾಗಿ ಮನಸ್ಸು ನೆಟ್ಟಿರುತ್ತದೆ. ಸುಖವಾಗಿ ಬಾಳು ಎಂದು ಹರಸಿದನು. ಅಷ್ಟೆ ಅಲ್ಲ –

**ಧರ್ಮೇ ಮನಶ್ಚ ತೇ ಭದ್ರ ಸರ್ವಕಾಲಂ ಭವಿಷ್ಯತಿ**
**ಯುಷ್ಮತ್ ಸಂತತೀ ಜಾತಾನಾಂ ಧೀರ್ಘಮಾಯುರ್ಭವಿಷ್ಯತಿ**
**ನೋಪಸರ್ಗಾದಿಕಂ ದೋಷಂ ಯುಷ್ಮತ್ ಸಂತತಿ ಸಂಭವಃ**
**ಅವಾಪ್ಸ್ಯತಿ ಮಹಾಭಾಗ ಯಾವತ್ಸೂರ್ಯೋ ಭವಿಷ್ಯತಿ**

(ವಿ.ಪು. 2ನೇ ಸಂ. 19ನೇ ಅಧ್ಯಾಯ ಪಂಚಮಾಂಶ ಶ್ಲೋಕ 27,28)

ನೀನು ಎಂದೆಂದಿಗೂ ಧರ್ಮಮಾರ್ಗದಲ್ಲಿ ನಡೆಯುವೆ. ನಿನ್ನ ಸಂತತಿಯಲ್ಲಿ ಜನಿಸಿದವರಿಗೆ ದೀರ್ಘಾಯಸ್ಸು ಲಭಿಸುವುದು. ಹೇ ಮಹಾಭಾಗ ಸೂರ್ಯನಿರುವವರೆಗೆ ನಿನ್ನ ವಂಶದಲ್ಲಿ ಜನಿಸಿದ ಯಾರಿಗೂ ವಿಪತ್ಕಾರಿಯಾದ ರೋಗಾದಿಗಳ ಬಾಧೆಯುಂಟಾಗದಿರಲಿ" ಎಂದು ನುಡಿದನು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಭಗವಂತನನ್ನು ಒಲಿಸಲು ನಿಶ್ಚಲವಾದ ಭಕ್ತಿ ಒಂದೇ ಸಾಕು. ಇದರಿಂದ ಅವನು ನಮ್ಮ ಮೇಲೆ ಕೃಪಾವೃಷ್ಟಿಯನ್ನು ಸುರಿಸುತ್ತಾನೆ. ಅವನಿಗೆ ಭಕ್ತಿಯಿಲ್ಲದ ಆಡಂಬರದ ಪೂಜೆ, ನೈವೇದ್ಯ ಬೇಕಾಗಿಲ್ಲ. ಅನನ್ಯ ಭಕ್ತಿ ಅನನ್ಯ ಶರಣಾಗತಿ ಒಂದೇ ಸಾಕು. ಹೂವಾಡಿಗನು ಕೇವಲ ಹೂವನ್ನು ಭಕ್ತಿಶ್ರದ್ಧಾಪೂರ್ವಕವಾಗಿ ಸಮರ್ಪಿಸಿದ್ದರಿಂದ ಅವನಿಗೆ ಮಾತ್ರವಲ್ಲದೆ ಮುಂಬರುವ ಅವನ ಸಂತತಿಗೂ ಆರೋಗ್ಯ, ಐಶ್ವರ್ಯ, ದೀರ್ಘಾಯಸ್ಸು ಮುಂತಾದವುಗಳನ್ನು ಭಗವಂತನು ತಾನೇ ಅನುಗ್ರಹಿಸಿದನು. ಇದಲ್ಲವೇ ಭಕ್ತನಿಗೂ – ಭಗವಂತನಿಗೂ ಇರುವ ಅವಿನಾಸಂಬಂಧ ಭಗವದ್ಗೀತೆಯಲ್ಲಿ ಕೃಷ್ಣನೇ "ಪತ್ರಂ, ಪುಷ್ಪಂ, ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ, ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮಾನಃ" ಎಂದು ಹೇಳಿದ್ದಾನೆ. ಆದ್ದರಿಂದ ಅವನ ಸಾನ್ನಿಧ್ಯದಲ್ಲೇ ನಮ್ಮ ಜೀವನವನ್ನು ಹಸನಾಗಿಸಿಕೊಳ್ಳೋಣ.

## ಶ್ರೀಕೃಷ್ಣ ಕುಬ್ಜೆಯಲ್ಲಿ ಕಾರುಣ್ಯ ತೋರಿಸಿದ್ದು

ಶ್ರೀಕೃಷ್ಣನು ಮಥುರಾನಗರದ ರಾಜಬೀದಿಯಲ್ಲಿ ಬಲರಾಮನೊಡನೆ ಹೋಗುತ್ತಿದ್ದನು. ಆ ರಾಜಬೀದಿಯ ಮಧ್ಯದಲ್ಲಿ ಚಂದನ ಮುಂತಾದ ಅನುಲೇಪನ ಪಾತ್ರೆಯನ್ನು ಹಿಡಿದು ನವಯೌವನ ಶಾಲಿನಿಯಾದ ಒಬ್ಬ ಕುಬ್ಜ ಸ್ತ್ರೀ(ಗೂನಿ)ಯನ್ನು ಕಂಡನು. ಅವಳನ್ನು ಕುರಿತು ಶ್ರೀಕೃಷ್ಣ "ಎಲೌ ಬಾಲೆ ನೀನು ಈ ಅನುಲೇಪನವನ್ನು ಯಾರಿಗಾಗಿ ತೆಗೆದುಕೊಂಡು ಹೋಗುತ್ತಿದ್ದೀಯಮ್ಮಾ" ಎಂದು ಕೇಳಿದನು. ಕೃಷ್ಣನ ದರ್ಶನ ಮಾತ್ರದಿಂದಲೇ ಮೋಹಿತಳಾದ ಕುಬ್ಜೆಯು ಅನುರಾಗವನ್ನು ತಳೆದು "ಕಾಂತ, ನಾನು ಯಾರೆಂದು ಗೊತ್ತಿಲ್ಲವೇ ? ನಾನು ಕಂಸ ಮಹಾರಾಜನಿಂದ ಅನುಲೇಪನ ಕಾರ್ಯದಲ್ಲಿ ನಿಯುಕ್ತಳಾದವಳು. ನಾನು ಅನೇಕವಕ್ರೆ ಕುಬ್ಜೆ ಎಂದು ವಿಖ್ಯಾತಳಾಗಿದ್ದೇನೆ. ನಾನಲ್ಲದೆ ಇನ್ನೊಬ್ಬರು ತಯಾರಿಸಿದ ಅನುಲೇಪನವು ಕಂಸನಿಗೆ ಪ್ರಿಯವಾಗದು. ಅವನ ಕೃಪೆಗೆ ನಾನು ಪಾತ್ರಳಾಗಿದ್ದೇನೆ" ಎಂದಳು. ಆಗ ಶ್ರೀಕೃಷ್ಣನು ರಾಜಾರ್ಹವಾದ ಈ ಸುಗಂಧದ್ರವ್ಯವು ಬಹಳ ಚೆನ್ನಾಗಿರುತ್ತದೆ. ನಮ್ಮಿಬ್ಬರ ದೇಹಕ್ಕೆ 'ಯೋಗ್ಯವಾದ ಅನುಲೇಪನವನ್ನು ಕೊಡು' ಎಂದು ಕೇಳಿದನು. ಅದಕ್ಕೆ ಕುಬ್ಜೆಯು ಒಪ್ಪಿಕೊಂಡು ಅವರಿಬ್ಬರಿಗೂ ಅನುಲೇಪನವನ್ನು ಕೊಟ್ಟಳು. ಇಬ್ಬರು ಆ ಅನುಲೇಪನವನ್ನು ಬಳಿದುಕೊಂಡರು. ಈ ಮಧ್ಯೆ ಶ್ರೀಕೃಷ್ಣನು ತನ್ನ ಕೈಯ ಎರಡು ಬೆರಳುಗಳಿಂದ ಕುಬ್ಜೆಯ ಗಲ್ಲವನ್ನು ಅಲುಗಿಸಿ ಅವಳನ್ನು ಎತ್ತಿಹಿಡಿದು ತೂಗಾಡಿಸಿ, ಕಾಲುಗಳನ್ನು ಕೆಳಗೆ ಜಗ್ಗಿದನು. ಹೀಗೆ ಆ ಕುಬ್ಜೆಯ ಡೊಂಕನ್ನು ತಿದ್ದಿದನು. ಆಗ ಅವಳು ಸುಂದರ ಸ್ತ್ರೀಯಾಗಿ ನಿಂತಳು. ಅನಂತರ ಆ ಕುಬ್ಜೆಯು ಶ್ರೀಕೃಷ್ಣನ ವಸ್ತ್ರವನ್ನು ಎಳೆದು 'ನನ್ನ ಮನೆಗೆ ಬಾ' ಎಂದಳು. ಶ್ರೀಕೃಷ್ಣನು ಬಲರಾಮನ ಮುಖವನ್ನು ನೋಡಿ ನಗುತ್ತ ಸುಂದರಾಕೃತಿಯನ್ನು ಪಡೆದ ಕುಬ್ಜೆಗೆ 'ಆಗಲಿ ನಿನ್ನ ಮನೆಗೆ ಇನ್ನೊಮ್ಮೆ ಯಾವಾಗಲಾದರೂ ಬರುತ್ತೇನೆ' ಎಂದು ಹೇಳಿ ಅವಳನ್ನು ಕಳುಹಿಸಿದನು.

## ಧನುರ್ಭಂಗ

ಅಂತೆಯೇ ರಾಜಮಾರ್ಗದಲ್ಲಿ ಹೋಗುತ್ತಿದ್ದ ಶ್ರೀಕೃಷ್ಣ – ಬಲರಾಮರು

ಧನುಃ ಶಾಲೆಗೆ ಹೋದರು. ಅಲ್ಲಿ ಬಿಲ್ಲುಹಬ್ಬಕ್ಕಾಗಿ (ಧನುರ್ಯಜ್ಞ) ಗೊತ್ತಾದ ಶ್ರೇಷ್ಠ ಧನಸ್ಸು ಯಾವುದೆಂದು ಕಾವಲುಗಾರರನ್ನು ಕೇಳಿ ತಿಳಿದುಕೊಂಡರು.

**ಆಯಾಗಂ ತದ್ಧನೂರತ್ನಂ ತಾಭ್ಯಾಂ ಪ್ರಷ್ಟೈಸ್ತು ರಕ್ಷಿಭಿಃ ।**

**ಆಖ್ಯಾತೇ ಸಹಸಾ ಕೃಷ್ಣೋ ಗೃಹೀತ್ವಾ ಪೂರಯದ್ಧನುಃ ॥**

**ತತಃ ಪೂರಯತಾ ತೇನ ಭಜ್ಯಮಾನಂ ಬಲದ್ಧನುಃ ।**

**ಚಕಾರ ಸಮಹಚ್ಛಬ್ದಂ ಮಧುರಾ ಯೇನ ಪೂರಿತಾ ॥**

(ವಿ.ಪು. 2ನೇ ಸಂ. ಪಂಚಮಾಂಶ ಅ 20 ಶ್ಲೋಕ 15–16)

ಶ್ರೀಕೃಷ್ಣನು ಆ ಧನಸ್ಸನ್ನು ಹೆದೆಯೇರಿಸಿತೊಡಗಿದನು. ಬಲತ್ಕಾರವಾಗಿ ಹೆದೆಯೆನ್ನೆಳೆದು ಜಗ್ಗಿದಾಗ ಆ ಧನಸ್ಸು ಧಡಾರನೆ ಮುರಿದು ಭಯಂಕರವಾದ ಶಬ್ದದೊಂದಿಗೆ ಬಿದ್ದುಹೋಯಿತು. ಆ ಶಬ್ದದಿಂದ ಮಥುರಾ ನಗರವೇ ಮೊಳಗಿಹೋಯಿತು. ಧನಸ್ಸನ್ನು ಮುರಿದುದರಿಂದ ಕಾವಲುಗಾರರು ಬಲರಾಮಕೃಷ್ಣರನ್ನು ಹಿಡಿಯಲು ಆಕ್ರಮಣ ಮಾಡಿದರು. ಇವರಿಬ್ಬರೂ ಆ ಕಾವಲುಗಾರರ ಪಡೆಯನ್ನು ಧ್ವಂಸ ಮಾಡಿ ಧನುಗೃಹದಿಂದ ಹೊರಟುಹೋದರು.

## ಶ್ರೀಕೃಷ್ಣ ಕುವಲಯಾಪೀಡವೆಂಬ ಆನೆಯನ್ನು ವಧಿಸಿದುದು

ಕಂಸನಿಗೆ ಧನುರ್ಭಂಗದ ವಿಷಯ ತಿಳಿಯಿತು. ಕೂಡಲೇ ಚಾಣೂರ ಮುಷ್ಟಿಕರನ್ನು ಕರೆಸಿ ಹೀಗೆಂದನು.

**ಗೋಪಾಲಧಾರಕೌ ಪ್ರಾಪ್ತೌ ಭವದ್ಭ್ಯಾಂ ತು ಮಮಾಗ್ರತಃ ।**

**ಮಲ್ಲಯುದ್ದೇನಹಂತವ್ಯೌ ಮಮ ಪ್ರಾಣಹತಾ ಹಿತೌ॥**

**ನಿಯುದ್ಧೇ ತದ್ವಿನಾಶೇನ ಭವದ್ಭ್ಯಾಂ ತೋಷಿತೋ ಹ್ಯಹಮ್**

**ದಾಸ್ಯಾಮ್ಯಭಿಮತಾನ್ ಕಾಮಾನ್ಯಾನ್ಯಥೈತೌ ಮಹಾಬಲೌ**

**ನ್ಯಾಯತೋಽನ್ಯಾಯತೋ ವಾಪಿ ಭವದ್ಭ್ಯಾಂ ತೌ ಮಮಾಹಿತೌ**

**ಹಂತವ್ಯೌ ತದ್ವಧಾದ್ರಾಜ್ಯ ಸಾಮಾನ್ಯಂ ವಾಂ ಭವಿಷ್ಯತಿ**

(ವಿ.ಪು.3ನೇ ಸಂ. ಪಂ. ಅಂ. ಅ.4 ಶ್ಲೋ 19ರಿಂದ 21)

ಗೊಲ್ಲರ ಬಾಲಕರು ಬಂದಿದ್ದಾರೆ. ಅವರಿಬ್ಬರೂ ನನ್ನ ಪ್ರಾಣವನ್ನು ತೆಗೆಯಬೇಕೆಂದಿದ್ದಾರೆ. ನೀವಿಬ್ಬರೂ ಮಲ್ಲಯುದ್ಧದಲ್ಲಿ ಅವರನ್ನು ತನ್ನೆದುರಿಗೆ ಕೊಂದುಹಾಕತಕ್ಕದ್ದು. ಮಲ್ಲಯುದ್ಧದಲ್ಲಿ ನೀವು ಅವರನ್ನು ಕೊಂದುಹಾಕಿ ನನಗೆ ಸಂತೋಷವನ್ನುಂಟುಮಾಡಿದರೆ ನಾನು ನಿಮ್ಮ ಇಷ್ಟಾರ್ಥಗಳನ್ನು ನಡೆಸಿಕೊಡುವೆನು. ಅನ್ಯಥಾ ಭಾವಿಸಬೇಡಿ. ಆ ಬಾಲಕರು ಬಲಾಢ್ಯರು ಯುದ್ಧ ಸಮಯದಲ್ಲಿ ನ್ಯಾಯವೋ ಅನ್ಯಾಯವೋ ಯಾವುದೋ ಒಂದು ವಿಧಾನದಿಂದ ತನ್ನ ಆ ವೈರಿಗಳನ್ನು ವಧಿಸಬೇಕು. ಅವರನ್ನು ವಧಿಸಿದರೆ ಈ ರಾಜ್ಯ ನನಗೂ ನಿಮಗೂ ಸಮಾನವಾಗಿ ಸೇರಿದ್ದೆಂದು ಭಾವಿಸಿದ್ದೇನೆ ಎಂದನು. ಅನಂತರ ಕಂಸನು ಕುವಲಯಾಪೀಡ ಎಂಬ ಆನೆಯ ಮಾವುತನನ್ನು ಬರಮಾಡಿಕೊಂಡು "ಎಲ್ಲೈ ಜಟ್ಟಿ ಕಾಳಗ (ಮಲ್ಲಯುದ್ಧ) ನಡೆಯವ ಸ್ಥಳ ಅಖಾಡ ಇದೆಯಷ್ಟೇ. ಅದರ ಬಾಗಿಲಲ್ಲಿ ನೀನು ಕುವಲಯಾಪೀಡವೆಂಬ ಉನ್ನತವಾದ ಮಹಾಗಜವನ್ನು ನಿಲ್ಲಿಸಿಕೊಂಡಿರು. ಆ ಇಬ್ಬರು ಗೊಲ್ಲರ ಹುಡುಗರು ಜಟ್ಟಿಕಾಳಗಕ್ಕಾಗಿ ರಂಗಮಂಟಪದ ದ್ವಾರದ ಬಳಿ ಬಂದಾಗ ಆನೆಯನ್ನು ನುಗ್ಗಿಸಿ ಆ ಹುಡುಗರನ್ನು ಕೊಂದುಬಿಡಿ" ಎಂದನು. ಹೀಗೆ ಮಾವುತನಿಗೆ ಆಜ್ಞಾಪಿಸಿ ಅಖಾಡದಲ್ಲಿ ಸ್ಥಾಪಿಸಿದ ಪೀಠೋಪಕರಣಗಳನ್ನೆಲ್ಲಾ ಪರೀಕ್ಷಿಸಿ ತನ್ನ ಅರಮನೆಗೆ ಹೋದನು.

**ತಮಪ್ಯಾಜ್ಞಾಪ್ಯ ದೃಷ್ಟ್ವಾ ಚ ಸರ್ವಾನ್ ಮಂಚಾನುಪಾಕೃತಾನ್**

**ಆಸನ್ನ ಮರಣಃ ಕಂಸಃ ಸೂರ್ಯೋದಯ ಮುದೈಕ್ಷತ**

(ವಿ.ಪು. 2ನೇ ಸಂ. ಪಂಚ ಅ. 20. ಶ್ಲೋಕ 24)

ಹೀಗೆ ಮಾವುತನಿಗೆ ಆಜ್ಞಾಪಿಸಿ, ಮಲ್ಲಯುದ್ಧಕ್ಕೆ ಆಗಿರುವ ಸಿದ್ಧತೆಗಳನ್ನೆಲ್ಲ ಪರೀಕ್ಷಿಸಿ, ಮೃತ್ಯು ಸಮೀಪಿಸಿದ್ದ ಕಂಸನು ಬೆಳಗಾಗುವುದನ್ನೇ ನಿರೀಕ್ಷಿಸುತ್ತಿದ್ದನು.

# ಕುವಲಯಾಪೀಡನ ಸಂಹಾರ

ಬೆಳಗಾಯಿತು. ಸಮಸ್ತ ಪೌರಜನರು, ಹಾಗೂ ರಾಜರೂ ಬಂದು ತಮ್ಮ ಭೃತ್ಯದೊಡನೆ ಆಗಮಿಸಿ ತಮ್ಮ ತಮ್ಮ ಆಸನಗಳಲ್ಲಿ ಕುಳಿತರು. ಮಲ್ಲಯುದ್ಧದ ತೀರ್ಪುಗಾರ ರಂಗಮಧ್ಯಕ್ಕೆ ಸಮೀಪದಲ್ಲಿ ಕುಳಿತುಕೊಳ್ಳುವಂತೆ ಕಂಸನು ಸೂಚನೆಯಿತ್ತನು. ಮತ್ತು ತಾನು ಎತ್ತರದಲ್ಲಿ ಉನ್ನತವಾದ ಸಿಂಹಾಸನದಲ್ಲಿ ಕುಳಿತನು. ಅಂತಃಪುರದ ಸ್ತ್ರೀಯರಿಗಾಗಿ ಬೇರೆ ಪೀಠಗಳು ವ್ಯವಸ್ಥಿತವಾಗಿದ್ದವು. ಹಾಗೆಯೇ ವೇಶ್ಯಾಸ್ತ್ರೀಯರೂ ಪೌರಸ್ತ್ರೀಯರೂ ಕುಳಿತುಕೊಳ್ಳುವುದಕ್ಕಾಗಿ ಬೇರೆ ಪೀಠಗಳನ್ನು ಒದಗಿಸಲಾಗಿದ್ದಿತು. ನಂದಗೋಪನೇ ಮೊದಲಾದ ಗೋಪಾಲರು ಬಂದು ಒಂದು ಕಡೆ ಪೀಠಗಳಲ್ಲಿ ಕುಳಿತಿದ್ದರು. ಅವರ ಪೀಠಗಳ ಬಳಿಯಲ್ಲಿ ಅಕ್ರೂರ ವಸುದೇವರೂ ಕುಳಿತಿದ್ದರು. ಕೃಷ್ಣನನ್ನು ಹೆತ್ತ ತಾಯಿ ದೇವಕಿಯ ಪುತ್ರ ದರ್ಶನ ಲಾಲಸೆಯಿಂದ ಕಡೆಯಲ್ಲಾದರೂ ನನ್ನ ಮಗನ ಮುಖವನ್ನು ನೋಡುವೆನು ಎಂದು ಕಾತರದಿಂದ ನಗರ ಸ್ತ್ರೀಯರ ನಡುವೆ ಕುಳಿತಿದ್ದಳು. ವಾದ್ಯಗಳು ಮೊಳಗಲು ಆರಂಭಿಸಿದವು. ಚಾಣೂರನು ರಂಗಸ್ಥಳಕ್ಕೆ ಬಂದು ಹೂಂಕರಿಸಿದನು. ಮುಷ್ಟಿಕಾಸುರನು ಸೆಡ್ಡು ಹೊಡೆದು ನಿಂತನು. ಜನರ ನಡುವೆ ಗದ್ದಲವೇರ್ಪಟ್ಟಿತು. ಗೋಪವೇಷಧಾರಿಗಳಾದ ಬಲಭದ್ರ ಶ್ರೀಕೃಷ್ಣರು ಮುಗುಳ್ನಗೆ ಬೀರುತ್ತಾ ರಂಗಮಂಟಪದ ಬಾಗಿಲ (ಅಖಾಡ) ಬಳಿ ಬಂದರು, ಒಡನೆಯೇ ಮಾವುತನು ಕುವಲಯಾಪೀಡನನ್ನು ತಿವಿದು ದೌಡಾಯಿಸಿದನು. ಅದು ಗೋಪಬಾಲಕರನ್ನು ಕೊಲ್ಲುವುದಕ್ಕಾಗಿ ನುಗ್ಗಿ ಬಂದಿತು. ರಂಗಮಂಟಪದಲ್ಲಿ ಮಹತ್ತರವಾದ ಹಾಹಾಕಾರವೆದ್ದಿತು. ಬಲರಾಮನು ತಮ್ಮನನ್ನು ಕುರಿತು ಕೃಷ್ಣ, ಶತ್ರು ಪ್ರೇರಣೆಯಿಂದ ಆ ಆನೆ ನುಗ್ಗಿ ಬರುತ್ತಿದೆ. ಇದನ್ನು ಕೊಲ್ಲಬೇಕು' ಎಂದನು. ಅಣ್ಣನ ಮಾತಿನಂತೆ ಶ್ರೀಕೃಷ್ಣನು ಸಿಂಹನಾದ ಮಾಡಿ ಸಿದ್ಧನಾದನು. ಆನೆ ಹತ್ತಿರ ಬಂದೊಡನೆ ಕೃಷ್ಣನು ಕೈಯಿಂದ ಅದರ ಸೊಂಡಿಲನ್ನು ಹಿಡಿದು ಜಗ್ಗಿ, ಐರಾವತದಂತೆ (ಇಂದ್ರನ ಬಳಿ ಇರುವ ಆನೆ) ಬಲಶಾಲಿಯಾಗಿದ್ದ ಕುವಲಯಾಪೀಡನನ್ನು ಗಿರ್ರನೆ ತಿರುಗಿಸಿದನು. ಶ್ರೀಕೃಷ್ಣ ಸಕಲ ಜಗದಾಧಾರನಾಗಿದ್ದರೂ ಸಹ ಬಾಲಲೀಲೆಯನ್ನು ಅನುಸರಿಸಿ ಬಹಳ ಹೊತ್ತು ಕುವಲಯಾಪೀಡದ ಕೋರೆಹಲ್ಲು – ಪಾದಳ ನಡುವೆ ಕ್ರೀಡಿಸಿ, ನಂತರ ಅದರ ಎಡಕೋರೆಯನ್ನು ಬಲಗೈಯಿಂದ ಕಿತ್ತನು.

ಅದೇ ಕೋರೆಹಲ್ಲಿನಿಂದ ಮಾವಟಿಗನ ತಲೆಗೆ ಬಡಿದನು. ಅವನ ತಲೆ ನೂರು ಚೂರಾಯಿತು. ಕ್ರುದ್ಧನಾದ ಬಲರಾಮನು ಆನೆಯ ಬಲಗಡೆಯ ದಂತವನ್ನು ಒಡನೆಯೇ ಕಿತ್ತು ಹತ್ತಿರದಲ್ಲಿದ್ದ ಇತರ ಮಾವುತರನ್ನು ಬಡಿದು ಕೊಂದನು. ಬಲಾಢ್ಯನಾದ ಬಲರಾಮನು ಕೋಪಾವಿಷ್ಟನಾಗಿ ರಭಸದಿಂದ ನೆಗೆದು ಮದಗಜದ ಮಸ್ತಕವನ್ನು ಎಡಗಾಲಿನಿಂದ ಒದ್ದನು. ದೇವೇಂದ್ರನ ವಜ್ರಾಯುಧದ ಹೊಡೆತಕ್ಕೆ ಸಿಕ್ಕ ಪರ್ವತವು ಉರುಳಿದಂತೆ ಬಲರಾಮನ ಹೊಡೆತಕ್ಕೆ ಸಿಕ್ಕಿ ಕುವಲಯಾಪೀಡವು ಉರುಳಿಬಿತ್ತು. ನಂತರ ರಕ್ತಸಿಕ್ತವಾದ ಆನೆಯ ದಂತಗಳನ್ನೇ ತಮ್ಮ ಆಯುಧಗಳಂತೆ ಕೈಯಲ್ಲಿ ಹಿಡಿದು ಮೃಗಗಳ ಮಧ್ಯದಲ್ಲಿ ಸಿಂಹದ ಗಂಭೀರವಾದ ನಡಿಗೆಯಂತೆ ಅತ್ತ ಇತ್ತ ಸುತ್ತಲೂ ನೋಡುತ್ತಾ ಬಲರಾಮಕೃಷ್ಣರು ವಿಶಾಲವಾದ ರಂಗಮಂಟಪವನ್ನು ಪ್ರವೇಶಿಸಿದರು. ಒಡನೆಯೇ ರಂಗಮಂಟಪದಲ್ಲಿ ಇದೋ ಕೃಷ್ಣ ! ಇದೋ ಬಲರಾಮ ಎಂದು ಭಾರಿ ಗದ್ದಲವೆದ್ದಿತು.

**ಸೋಽಯಂಯಃ ಕಾಲಿಯಂ ನಾಗಂ ಮಮರ್ದಾರುಹ್ಯ ಬಾಲಕಃ**

**ಧೃತೋ ಗೋವರ್ಧನೋ ಯೇನ ಸಪ್ತರಾತ್ರಂ ಮಹಾಗಿರಿಃ**

**ಅರಿಷ್ಟೋ ಧೇನುಕಃ ಕೇಶಿ ಲೀಲಯೈವ ಮಹಾತ್ಮನಾ**

**ನಿಹತಾ ಯೇನ ದುರ್ವೃತ್ತಾ ದೃಶ್ಯತಾ ಮೇಷ ಸೋಽಚ್ಯುತಃ**

**ಅಯಂ ಚಾಸ್ಯ ಮಹಾಬಾಹುರ್ಬಲಭದ್ರೋಽಗ್ರತೋಽಗ್ರಜಃ**

**ಪ್ರಯಾತಿಲೀಲಯಾ ಯೋಷಿನ್ಮನೋ ನಯನ ನಂದನಃ**

**ಅಯಂಸ ಕಥ್ಯತೇ ಪ್ರಾಜ್ಞೈಃ ಪುರಾಣಾರ್ಥವಿಶಾರದೈಃ**

**ಗೋಪಾಲೋ ಯಾದವಂ ವಂಶಂ ಮಗ್ನಮಭ್ಯು ಧರಿಷ್ಯತಿ**

**ಅಯಂ ಹಿಸರ್ವಲೋಕಸ್ಯ ವಿಷ್ಣೋರಖಿಲ ಜನ್ಮನಃ**

**ಅವತೀರ್ಣೋ ಮಹೀ ಮಂಶೋ ನೂನಂ ಭಾರಹರೋಭುವಃ**

(ವಿ.ಪು. 2ನೇ ಸಂ. ಪ.ಅಂ. ಅ. 20. ಶ್ಲೋಕ 45ರಿಂದ 50)

ಘೋರಪೂತನೆಯನ್ನು ಕೊಂದವನಿವನು. ಇವನೇ ಶಕಟಾಸುರನನ್ನು ಒದ್ದು ಹಾರಿಸಿದವನು. ಈತನೇ ಜೋಡಿ ಮತ್ತಿ ಮರಗಳನ್ನು ಮುರಿದು

ಕೆಡವಿದವನು, ಕಾಳಿಯ ನಾಗವನ್ನು ಹತ್ತಿ ನಿಂತು ಅದನ್ನು ಮರ್ಧಿಸಿದವನು, ಆ ಹುಡುಗ ಇವನೇ. ಗೋವರ್ಧನ ಮಹಾಗಿರಿಯನ್ನು ಏಳು ರಾತ್ರಿಗಳವರೆಗೆ ಎತ್ತಿ ಹಿಡಿದಿದ್ದವನು ಇವನು. ಅರಿಷ್ಟ, ಧೇನುಕ, ಕೇಶಿ ಎಂಬ ದುಷ್ಟರನ್ನು ಯಾವ ಮಹಾತ್ಮನು ಲೀಲೆಯಿಂದಲೇ ಕೊಂದು ಹಾಕಿದನೋ ಆ ಅಚ್ಯುತನೆಂಬುವನು ಈತನೆ ನೋಡಿರಿ. ಇವನ ಮುಂದೆ ಇರತಕ್ಕವನು ಇವನ ಅಣ್ಣನಾದ ಬಲಭದ್ರ. ಅಜಾನುಬಾಹು. ಕೆಳಗೆ ಬಿದ್ದ ಯಾದವ ವಂಶವನ್ನು ಗೋಪಾಲನೊಬ್ಬನು ಉದ್ಧರಿಸುವನೆಂದು ಪುರಾಣಾರ್ಥ ವಿಶಾರದ ಪ್ರಾಜ್ಞರು ಹೇಳುತ್ತಿದ್ದರಲ್ಲಾ, ಅವನೇ ಇವನು ಶ್ರೀಕೃಷ್ಣ !

ಇವನು ಸರ್ವಲೋಕಮಯನೂ ಸರ್ವಕಾರಣನೂ ಆ ಭಗವಾನ್ ವಿಷ್ಣುವಿನ ಅಂಶವಾಗಿ ಭೂಮಿಯಲ್ಲಿ ಅವತರಿಸಿರಬೇಕು. ಇವನು ನಿಜವಾಗಿಯೂ ಭೂಮಿಯ ಭಾರವನ್ನು ಇಳಿಸಲು ಬಂದಿರಬೇಕು ಎಂದು ಪುರಜನರು ಮಾತನಾಡಿಕೊಳ್ಳುತ್ತಿದ್ದರು. ರಾಜಾಂತಃಪುರದ ಸ್ತ್ರೀಯರೂ ಸಹ ತಮ್ಮ ಕಣ್ಣುಗಳ್ನು ಹಿಗ್ಗಿಸಿ ಶ್ರೀಕೃಷ್ಣನನ್ನು ನೋಡುತ್ತಾ ಅವನ ಅಂಗಾಂಗಗಳನ್ನು ವರ್ಣಿಸುತ್ತಿದ್ದರು.

## ಮುಷ್ಟಿಕಾಸುರ – ಚಾಣುರರ ಮರ್ಧನ

ಕುವಲಯಾಪೀಡನ ವದೆಯಾದ ನಂತರ ಶ್ರೀಕೃಷ್ಣನು ಸೊಂಟದ ಪಟ್ಟಿಯನ್ನು ಬಿಗಿದು ಕಟ್ಟಿ ನೆಲವನ್ನದುರಿಸುತ್ತ ಪ್ರೇಕ್ಷಕರ ಎದುರಿಗೆ ರಂಗಸ್ಥಳಕ್ಕೆ ನೆಗೆದನು. ಅಮಿತ ಪರಾಕ್ರಮಿಯಾದ ಶ್ರೀಕೃಷ್ಣನು ಚಾಣೂರನೊಡನೆ ಕುಸ್ತಿಯನ್ನು ಆರಂಭಿಸಿದನು. ಬಲರಾಮನು ಮುಷ್ಟಿಕಾಸುರನೊಡನೆ ಕುಸ್ತಿಯಲ್ಲಿ ತೊಡಗಿದನು. ಶ್ರೀಕೃಷ್ಣನು ಚಾಣೂರನೊಡನೆ ಪರಸ್ಪರ ಹಸ್ತ ಸಂಘಟನ, ಹಸ್ತಗಳನ್ನು ಕೊಡಹುವುದು, ಜಗ್ಗಿ ಎಳೆದು ತಳ್ಳುವುದು, ಮುಷ್ಟಿಗಳಿಂದ ಗುದ್ದುವುದು ಮೊಳಕೈ ಕೀಲಿನಿಂದ ಚುಚ್ಚುವುದು, ಎಂದು ಮೊಳಕೈಗಳಿಂದಲೂ ಇಡಿಯುವುದು. ಕಾಲಿನಿಂದ ಎತ್ತಿ ಎಸೆಯುವುದು, ಹಿಡಿದು ಅಮುಕುವುದು ಈ ಪ್ರಾಕಾರಗಳಿಂದ ಮಹತ್ತರವಾದ ಕುಸ್ತಿ ಕಾಳಗವನ್ನು ನಡೆಸಿದನು. ಚಾಣೂರನು ಇದುವರೆಗೂ ಅದೆಷ್ಟೋ ಕುಸ್ತಿಗಳಲ್ಲಿ

ಜಯಿಸಿದ್ದನು. ಆದರೆ ಈಗ ತನ್ನ ಜೀವಿತದಲ್ಲಿ ಮೊದಲಬಾರಿಗೆ ಕೃಷ್ಣನ ಹೊಡೆತದಿಂದಾಗಿ ಕ್ಷಣ, ಕ್ಷಣಕ್ಕೂ ಬಲಗುಂದುತ್ತ ಹೋದನು.

ಶ್ರೀಕೃಷ್ಣನಾದರೋ ಲೀಲಾಜಾಲವಾಗಿ ಚಾಣೂರನೊಡನೆ ಹೋರಾಡುತ್ತಿದ್ದನು. ಚಾಣೂರನು ಬಲದಲ್ಲಿ ಕುಗ್ಗುತ್ತಿರುವುದನ್ನೂ ಶ್ರೀಕೃಷ್ಣನ ಕೈ ಮೇಲಾಗುತ್ತಿರುವುದನ್ನೂ ನೋಡಿದ ಕಂಸನು ಕ್ರುದ್ಧನಾಗಿ ಉತ್ಸವದ ವಾದ್ಯಗಳನ್ನು ನಿಲ್ಲಿಸಬೇಕೆಂದು ಆಜ್ಞಾಪಿಸಿದನು. ಮೃದಂಗ ಮುಂತಾದ ವಾದ್ಯಗಳು ನಿಂತುಹೋಗಲಾಗಿ ಒಡನೆಯೇ ಆಕಾಶದಲ್ಲಿ ನೆರೆದಿದ್ದ ದೇವತೆಗಳು ವಾದ್ಯಗಳನ್ನು ಭಾರಿಸತೊಡಗಿದರು. "ಜಯ ಗೋವಿಂದ ಜಯ ಜಯ ಕೇಶವ ಚಾಣೂರನನ್ನು ಕೊಂದು ಹಾಕು" ಎಂದು ಅವರು ಹೇಳುತ್ತಿದ್ದರು. ಶ್ರೀಕೃಷ್ಣನು ಹೀಗೆ ಬಹಳ ಹೊತ್ತು ಮಲ್ಲಯುದ್ಧವೆಂಬ ಆಟವನ್ನು ಆಡಿದಮೇಲೆ ಅವನನ್ನು ಕೊಲ್ಲಬೇಕೆಂದು ನಿಶ್ಚಯಿಸಿದನು. ದೈತ್ಯಮಲ್ಲನಾದ ಚಾಣೂರನನ್ನು ಗಪ್ಪನೆ ಹಿಡಿದು ಎತ್ತಿ ಒಂದುನೂರು ಸುತ್ತು ಗಗನದಲ್ಲಿ ಗಿರ್ರೆಂದು ತಿರುಗಿಸಲು ಚಾಣೂರನ ಪ್ರಾಣಹೋಯಿತು. ನಂತರ ಶ್ರೀಕೃಷ್ಣನು ಚಾಣೂರನ ದೇಹವನ್ನು ದೊಪ್ಪನೆ ಕೆಳಗೆ ಎಸೆದನು. ನೆಲದಮೇಲೆ ಸಿಡಿದ ಚಾಣೂರನ ದೇಹವು ನೂರಾರು ಹೋಳುಗಳಾಯಿತು. ನೆತ್ತರು ಹರಿದು ನೆಲವೆಲ್ಲ ಕೆಸರಾಯಿತು. ಹೀಗೆ ಚಾಣೂರನ ಅಂತ್ಯವಾಯಿತು.

ಅದೇ ಸಮಯದಲ್ಲಿ ಅತ್ತ ಬಲರಾಮನೂ ಸಹ ದೈತ್ಯ ಮಲ್ಲನಾದ ಮುಷ್ಟಿಕನೊಡನೆ ಹೋರಾಡುತ್ತಿದ್ದನು. ಅವನೂ ಸಹ ಮುಷ್ಟಿಕನ ತಲೆಯನ್ನು ಮುಷ್ಟಿಯಿಂದ ಗುದ್ದಿ, ಎದೆಯನ್ನು ಮೊಳಕಾಲಿನಿಂದ ಒದ್ದು ನೆಲದ ಮೇಲೆ ಉರುಳಿಸಿ ಸಾಯುವಂತೆ ಹಿಂಡಿ ಹಿಸುಕಿದನು. ನಂತರ ಶ್ರೀಕೃಷ್ಣನು ಮಲ್ಲರಾಜನೂ ಮಹಾಬಲನೂ ಆದ ತೋಶಲಕ ಎಂಬುವನನ್ನು ತನ್ನ ಎಡಮುಷ್ಟಿಯಿಂದ ಗುದ್ದಿ ನೆಲಕ್ಕೆ ಬೀಳಿಸಿ ಕೊಂದು ಹಾಕಿದನು. ಹೀಗೆ ಮೂವರು ಮಹಾಬಲಶಾಲಿಗಳಾದ ಜಟ್ಟಿಗಳು ಸಾಯಲಾಗಿ, ಮಿಕ್ಕ ಜಟ್ಟಿಗಳು ಓಡಿಹೋದರು.

ಅನಂತರ ಶ್ರೀಕೃಷ್ಣನು ತನ್ನ ಗೆಳೆಯರಾದ ಗೋಪಾಲಕರನ್ನು ಬಲಾತ್ಕಾರವಾಗಿ ರಂಗಮಂಟಪಕ್ಕೆ ಕರೆತಂದು ಅವರೊಡನೆ ಹರ್ಷದಿಂದ ಕುಣಿದಾಡಿದನು.

# ಕಂಸೋದ್ಧಾರ

ಕಂಸನ ಪೂರ್ವ ಜನ್ಮವೃತ್ತಾಂತವನ್ನು ನಾವು ಈಗಾಗಲೇ ತಿಳಿದಿದ್ದೇವೆ. ಕಂಸ ಮತ್ತಾರು ಅಲ್ಲ, ಶ್ರೀಮಹಾವಿಷ್ಣುವಿನ ಸದಾ ಸೇವೆಯಲ್ಲಿಯೇ ನಿರತನಾಗಿದ್ದ ದ್ವಾರಪಾಲಕನು. ಋಷಿಶಾಪದಿಂದಾಗಿ ಅವನು ಮೂರು ಜನ್ಮದಲ್ಲಿ ವಿಷ್ಣುದ್ವೇಷಿಯಾಗಿಯೇ ಅಸುರನಾಗಿಯೇ ಜನ್ಮತಾಳಬೇಕಾಯಿತು. ಇರಲಿ. ಈಗ ಕೃಷ್ಣ ಕಂಸನನ್ನು ಹೇಗೆ ಸಂಹರಿಸಿದನು ಎಂಬುದನ್ನು ತಿಳಿಯೋಣ. ಕಂಸನು ತನ್ನ ಬೆಂಬಲಿಗರಾದ ಶಕಟಾಸುರ, ಪೂತನಾ, ಚಾಣೂರ ಮುಷ್ಠಿಕಾಸುರ ಮುಂತಾದವರನ್ನು ಕಳೆದುಕೊಂಡು ಒಂಟಿಸಲಗನಂತಾದನು. ಕಂಸನನ್ನು ಸಹ ತಾನು ಸಂಹರಿಸುವೆನೆಂದು ಈಗಾಗಲೇ ಅಕ್ರೂರನಿಗೆ ಸೂಚಿಸಿದ್ದನು.

ಚಾಣೂರ ಮುಷ್ಟಿಕಾಸುರರು ಹತನಾದ ನಂತರ ಕಂಸನು ಕೆಂಗಣ್ಣಿನಿಂದ ಚಡಪಡಿಸುತ್ತಾ ಒತ್ತಟ್ಟಿಗೆ ಅಲ್ಲಿಯೇ ನಿಂತಿದ್ದ ಜನರನ್ನು ಕುರಿತು “ಆ ಇಬ್ಬರು ಗೊಲ್ಲರನ್ನು ಬಲತ್ಕಾರವಾಗಿ ಸಭೆಯಿಂದ ಹೊರಗೆ ತಳ್ಳಿರಿ’ ಎಂದು ಗಟ್ಟಿಯಾಗಿ ಅರಚಿದನು. ಅಷ್ಟೇ ಅಲ್ಲ ಆ ಪಾಪಿ ನಂದನನ್ನು ಕಬ್ಬಿಣದ ಸಂಕೋಲೆಗಳಿಂದ ಬಂಧಿಸಿರಿ.

**ನಂದೋಪಿ ಗೃಹ್ಯತಾಂ ಪಾಪೋ ನಿರ್ಗಲೈರಾಯಸೈರಿಹ ।**
**ಅವೃದ್ಧಾರ್ಹೇಣ ದಂದೇನ ವಸುದೇವೋಪಿ ವಧ್ಯತಾಮ್ ॥**

**ವಲ್ಗೀತಿ ಗೋಪಾಃ ಕೃಷ್ಣೇನ ಯೇ ಚೇಮೇ ಸಹಿತಾಃ ಪುರಃ ।**
**ಗಾವೋ ನಿಗೃಹ್ಯತಾಮೇಷಾಂ ಯಚ್ಚಾಸ್ತಿ ವಸುಕಿಂಚನ ॥**

**ಏವಮಾಜ್ಞಾಪಯಂತಂ ತು ಪ್ರಹಸ್ಯ ಮಧುಸೂದನಃ**
**ಉತ್ಪ್ಲುತ್ಯಾರುಹ್ಯ ತಂ ಮಂಚಂ ಕಂಸಂ ಜಗ್ರಾಹ ವೇಗತಃ ॥**

**ಕೇಶೇಷ್ವಾಕೃಷ್ಯ ವಿಗಲತ್ಕಿರೀಟಮ್ ಅವನೀತಲೇ ।**
**ಸ ಕಂಸಂ ಪಾತಯಾಮಾಸ ತಸ್ಯೋಪಂ ಪಪಾತ ಚ ॥**

**ಅಶೇಷ ಜಗದಾಧಾರ ಗುರುಣಾ ಪತತೋಪರಿ ।**

**ಕೃಷ್ಣೇನ ತ್ಯಾಜಿತಃ ಪ್ರಾಣಾನುಗ್ರಸೇನಾತ್ಮಜೋನ್ನಪಃ ॥**

**ಮೃತಸ್ಯ ಕೇಶೇಷು ತದಾ ಗೃಹೀತ್ವಾ ಮಧುಸೂದನಃ**

**ಚ ಕರ್ಷ ದೇಹಂ ಕಂಸಸ್ಯ ರಂಗಮಧ್ಯೆ ಮಹಾಬಲಃ ॥**

**ಗೌರವೇಣಾತಿಮಹತಾ ಪರಿಖಾ ತೇನ ಕೃಷ್ಣತಾ**

**ಕೃತಾಃ ಕಂಸಸ್ಯ ದೇಹೇನ ವೇಗೇನೇವ ಮಹಾಂಭಸಃ ॥**

(ವಿ.ಪು. 2ನೇ ಸಂ. ಪಂ. ಅಂ. ಅ. 20 ಶ್ಲೋಕ 83ರಿಂದ 89)

ಶ್ರೀ ಪರಾಶರರು ಮೈತ್ರೇಯರಿಗೆ ಕಂಸನ ಸಂಹಾರವನ್ನು ಕೆಲವೇ ಮಾತುಗಳಲ್ಲಿ ಹೇಳಿ ಮುಗಿಸಿದ್ದಾರೆ. ಇದರಲ್ಲಿ ಯಾವ ಮಲ್ಲಯುದ್ಧದ ವರ್ಣನೆಯಿಲ್ಲ. ಜಟ್ಟಿ ಕಾಳಗದ ಮಹತ್ವವಿಲ್ಲ, ಮಹಾಬಲಶಾಲಿಯಾದ ಕಂಸನನ್ನು ಅದೆಷ್ಟು ಲೀಲಾಜಾಲವಾಗಿ ಸಂಹರಿಸಿದ ಎಂಬುದನ್ನು ನೋಡೋಣ. (ಇಲ್ಲಿ ಒಂದು ಸೂಕ್ಷ್ಮವಾದ ವಿಷಯವನ್ನು ನಾವು ಗಮನಿಸಬೇಕಾಗಿದೆ. ಕಂಸನು ತನ್ನ ಪರಿವಾದವರಿಗೆ " ಅವೇದಾರ್ಹೇಣ ದಂಡೇನ ವಸುದೇವೋಪಿ ವಧ್ಯತಾಮ್" ವೃದ್ಧರುಗೆ ಮರಣದಂಡನೆಗೆ ಅನರ್ಹರು ಎಂದು ಅಂದಿನ ನ್ಯಾಯಾಂಗದ ಆದೇಶವಾಗಿದ್ದಿರಬಹುದು. ವಸುದೇವ ವೃದ್ಧನಾಗಿದ್ದಾನೆ. ಅವನು ಮರಣದಂಡನೆಗೆ ಅನರ್ಹ, ಆದರೂ ಪರವಾಗಿಲ್ಲ, ವಸುದೇವನಿಗೆ ಮರಣದಂಡನೆಯನ್ನು ವಿಧಿಸಿ ಅವನನ್ನು ಕೊಲ್ಲಿರಿ ಎಂದು ಆಜ್ಞಾಪಿಸುತ್ತಾನೆ)

ಕಂಸನು ಕೃಷ್ಣನೊಡನೆ ಎದುರಿಗೆ ಕುಣಿಯುತ್ತಿರುವ ಗೊಲ್ಲರ ಗೋವುಗಳನ್ನು ಅವರ ಬಳಿ ಇರುವ ಎಲ್ಲ ಧನವನ್ನು ಕಸಿದು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಎಂದು ಆಜ್ಞಾಪಿಸಿದನು. ಹೀಗೆ ಆಜ್ಞಾಪಿಸುತ್ತಿದ್ದ ಕಂಸನನ್ನು ನೋಡಿ ಶ್ರೀಕೃಷ್ಣನು ನಕ್ಕನು. ಒಡನೆಯೇ ಉನ್ನತ ವೇದಿಕೆಯಲ್ಲಿದ್ದ ಸಿಂಹಾಸನದ ಕಡೆಗೆ ವೇಗದಿಂದ ನೆಗೆದು ಹತ್ತಿದನು. ಕಂಸನ ಕಿರೀಟ ಸಡಿಲವಾಗಿದ್ದಿತು. ಅದನ್ನು ತಳ್ಳಿ ಕಂಸನ ತಲೆಗೂದಲನ್ನು ಹಿಡಿದು ಜಗ್ಗಿ ಕೆಳಗಿನ ನೆಲದ ಮೇಲೆ ಉರುಳಿಸಿ ಅವನ ದೇಹದ ಮೇಲೆ ತಾನೂ ಧುಮುಕಿದನು.

ಈ ಸಮಸ್ತ ಜಗತ್ತುಗಳನ್ನು ತನ್ನೊಳಗೆ ತುಂಬಿಕೊಂಡಿರುವ ಶ್ರೀಕೃಷ್ಣನು ಮೈಮೇಲೆ ಧುಮುಕಲಾಗಿ ಉಗ್ರಸೇನನ ಪುತ್ರನಾದ ಕಂಸನು ಪ್ರಾಣಬಿಟ್ಟನು. ಮಹಾಬಲಶಾಲಿಯಾದ ಶ್ರೀಕೃಷ್ಣನು ಮೃತನಾದ ಕಂಸನ ಕಳೇಬರದ ಕೇಶಗಳನ್ನು ಹಿಡಿದು ಮಲ್ಲಯುದ್ಧದ ರಂಗಮಧ್ಯದಲ್ಲಿ ಎಳೆದಾಡಿದನು. ಭಾರಿತೂಕವಿದ್ದ ಕಂಸನ ದೇಹವನ್ನು ಶ್ರೀಕೃಷ್ಣ ಎಳೆದಾಡಲಾಗಿ ಜಲಪ್ರವಾಹದ ವೇಗದಿಂದ ನೆಲವು ಕೊರಕಲು (ಸೀಳಿ) ಆಗುವಂತೆ ಆ ಸ್ಥಳದಲ್ಲಿಯೂ ಕೊರಕಲಾಯಿತು. ಶ್ರೀಕೃಷ್ಣನು ಕಂಸನನ್ನು ಆಕ್ರಮಿಸಿ ಹಿಡಿದಾಗ ಅವನ ತಮ್ಮನಾದ ಸುಮಾಲಿ ಎಂಬುವನು ಅತ್ಯಂತ ರೋಷದಿಂದ ನುಗ್ಗಿ ಬಂದನು. ಬಲರಾಮ ಅವನನ್ನು ಲೀಲಾಜಾಲವಾಗಿ ಮುಗಿಸಿದನು. ಮಧುರೇಶ್ವರನಾದ ಕಂಸನನ್ನು ಶ್ರೀಕೃಷ್ಣನು ಲೀಲೆಯಿಂದ ಕೊಲ್ಲಲಾಗಿ, ರಂಗಮಂಟಪದಲ್ಲಿ ಎಲ್ಲೆಲ್ಲಿಯೂ ಹಾಹಾಕಾರವೆದ್ದಿತು,

ನಂತರ ಬಲಾಢ್ಯನಾದ ಶ್ರೀಕೃಷ್ಣ ಬಲರಾಮನು ತಡಮಾಡದೆ ವಸುದೇವ ದೇವಕಿಯರ ಪಾದಗಳಿಗೆ ನಮಸ್ಕರಿಸಿದರು. ಕಾಲಿಗೆ ಬಿದ್ದ ಅವರಿಬ್ಬರನ್ನೂ ವಸುದೇವ ದೇವಕಿಯರು ಹಿಡಿದೆಬ್ಬಿಸಿದರು. ಶ್ರೀಕೃಷ್ಣನ ಜನನಕಾಲದಲ್ಲಿ ಅವನು ಆಡಿದ ಮಾತುಗಳೆಲ್ಲಾ ನೆನಪಿಗೆ ಬಂದಿತು. ಆಗ ವಸುದೇವ ದೇವಕಿಯರೇ ನಮ್ರಭಾವದಿಂದ ಶ್ರೀಕೃಷ್ಣನಿಗೆ ಕೈಮುಗಿದು ನಿಂತುಕೊಂಡರು. ವಸುದೇವನು ಇಂತೆಂದನು.

**ಪ್ರಸೀದ ಸೀದತಾಂ ದತ್ತೋ ದೇವಾನಾಂ ಯೋ ವರಃ ಪ್ರಭೋ ।**
**ತಥಾವಯೋ ಪ್ರಸಾದೇನ ಕೃತೋ ದ್ಧಾರಸ್ಯ ಕೇಶವ ॥**

**ತ್ವಮಂತಃ ಸರ್ವಭೂತಾನಾಂ ಸರ್ವಭೂತಮಯಃ ಸ್ಥಿತಃ ।**
**ಪ್ರವರ್ತೇ ತೇ ಸಮಸ್ತಾತ್ಮಂ ಸ್ತ್ವತೋ ಭೂತ ಭವಿಷ್ಯತೀ ॥**

**ಯಜ್ಞೇಸ್ತ್ವಮಿಜ್ಯ ಸೇಚಿಂತ್ಯ ಸರ್ವದೇವಮಯಾಚ್ಯುತ ।**
**ತ್ವಮೇವ ಯಜ್ಞೋ ಯಷ್ಟಾ ಚ ಯಜ್ವನಾಂ ಪರಮೇಶ್ವರ ॥**

ಸಮುದ್ಭವ ಸಮಸ್ತಸ್ಯ ಜಗತಸ್ತ್ವಂ ಜನಾರ್ಧನ ॥

ಸಾಪಹ್ನವಂ  ಮಮಮನೋ ಯದೇತತ್ತ್ವಯಿ ಜಾಯತೇ ।
ದೇವಕ್ಯಾಶ್ಚಾತ್ಮಜ ಪ್ರೀತ್ಯಾ ತದತ್ತನ್ತವಿಡಂಬಿನಾ ॥

ತ್ವಂ ಕರ್ತಾ ಸರ್ವ ಭೂತಾನಾಮನಾದಿ ನಿಧನೋ ಭವಾನ್ ।
ತ್ವಾಂ ಮನುಷ್ಯಸ್ಯ ಕಸ್ಯೇಷಾ ಜಿಹ್ವಾ ಪುತ್ರೇತಿ ವಕ್ಷ್ಯತಿ ॥

ಜಗದೇತ ಜಗನ್ನಾಥ ಸಂಭೂತ ಮಖಿಲಂ ಯತಃ ।
ಕಯಾ ಯುಕ್ತ್ಯಾ ವಿನಾಮಾಯಾಂಸೋಽಸ್ಮತ್ತಃ ಸಂಭವಿಷ್ಯತಿ ॥

ಯಸ್ಮಿನ್ ಪ್ರತಿಷ್ಠಿತಂ ಸರ್ವಂ ಜಗತ್‌ಸ್ಥಾವರ ಜಂಗಮಮ್ ।
ಸಕೋಽಷ್ಠೋತ್ಸಂಗ ಶಯನೋ ಮಾನುಷೋ ಜಾಯತೇ ಕಥಮ್ ॥
ಸತ್ವಂ ಪ್ರಸೀದ ಪರಮೇಶ್ವರ ಪಾಹಿ ವಿಶ್ವ– ।
ಮಂಶಾವತಾರ ಕರಣೈರ್ನ ಮಮಾಸಿ ಪುತ್ರ ॥

ಆ ಬ್ರಹ್ಮಪಾದಪಮಿದಂ ಜಗದೇತದೀಶ ।
ತ್ವತ್ತೋ ವಿಮೋಹಯಸಿ ಕಿಂ ಪುರುಷೋತ್ತಮಾಸ್ಮಾನ್ ॥

ಮಯಾವಿಮೋಹಿತದೃಶಾ ತನಯೋ ಮಮೇತಿ ।
ಕಂಸಾದ್ಭಯಂ ಕೃತಮಪಾಸ್ತ ಭಯೇತಿ ತೀವ್ರಮ್ ॥

ನೀತೋಽಸಿ ಗೋಕುಲ ಮರಾತಿ ಭಯಾಕುಲೇನ ।
ವೃದ್ಧಿಂ ಗತೋಽಸಿ ಮಮನಾಸ್ತಿ ಮಮತ್ವಮೀಶ ॥

ಕರ್ಮಾಣಿ ರುದ್ರಮರುದಶ್ವಿ ಶತಕ್ರತೂನಾಂ ।
ಸಾಧ್ಯಾನಿ ಯಸ್ಯನ ಭವಂತಿ ನಿರೀಕ್ಷಿತಾನಿ ॥

ತ್ವಂ ವಿಷ್ಣುರೀಶ್ ಜಗತಾಮುಪಕಾರಹೇತೋಃ
ಪ್ರಾಪ್ತೋಽಸಿ ನಃ ಪರಿಗತೋ ವಿಗತೋಹಿ ಮೋಹಃ ॥

(ವಿ.ಪು. 2ನೇ ಸ. ಪಂ. ಅಂ.20 ಶ್ಲೋ 94ರಿಂದ 105)

ವಸುದೇವನು ಹೇಳಿದನು, ಹೇ ಪ್ರಭು, ಕೇಶವ, ಕಷ್ಟಕ್ಕೊಳಗಾದ ದೇವತೆಗಳಿಗೆ ಯಾವ ವರವನ್ನಿತ್ತಿದ್ದೆಯೋ ಆ ವರವನ್ನು ನಮ್ಮಿಬ್ಬರಿಗೆ ಅನುಗ್ರಹಿಸಿ ಅದನ್ನು ನಡೆಸಿಕೊಟ್ಟಿರುವೆ. ಹೇ ಭಗವಾನ್ ಆರಾಧನೆಗೆ ಪ್ರಸನ್ನನಾಗಿ ದುಷ್ಟ ಸಂಹಾರ ಮಾಡುವ ಉದ್ದೇಶದಿಂದ ನನ್ನ ಮನೆಯಲ್ಲಿ ಅವತರಿಸಿದೆಯಲ್ಲ. ಹೀಗಾಗಿ ನಮ್ಮ ವಂಶ ಪವಿತ್ರವಾಯಿತು. ಸರ್ವಭೂತಮಯನಾದ ನೀನು ಸರ್ವಭೂತಗಳ ಅಂತರಂಗದಲ್ಲಿ ಸ್ಥಿತನಾಗಿರುವೆ. ಹೇ, ಸರ್ವಾತ್ಮ ನಿನ್ನಿಂದಲೇ ಈ ಭೂತ ಭವಿಷ್ಯತ್ತುಗಳು ಪ್ರವರ್ತಿಸುತ್ತವೆ. ನೀನು ಅಚ್ಯುತ, ಅಚಿಂತ್ಯ, ಸರ್ವದೇವಮಯ, ಸಮಸ್ತ ಯಜ್ಞಗಳಿಂದ ಅರ್ಚಿತನಾಗತಕ್ಕವನು. ನೀನೇ ಓ ಪರಮೇಶ್ವರ ನೀನೇ ಯಜ್ಞಸ್ವರೂಪನಾಗಿರುವೆ. ಯಾಜಕರಿಗೆ ಯಾಜಕನಾಗಿದ್ದೀಯೇ. ಎಲೈ ಜನಾರ್ಧನ, ಸಮಸ್ತ ಜಗತ್ತಿಗೂ ಉತ್ಪತ್ತಿ ಸ್ಥಾನ ನೀನೇ. ನಾನು ಮತ್ತು ದೇವಕಿಯು ನಿನ್ನನ್ನು ಪುತ್ರ ವಾತ್ಸಲ್ಯದಿಂದ ನೋಡುತ್ತಿರುವೆವು. ಅದು ನಿಜವಾಗಿಯೂ ಹಾಸ್ಯಾಸ್ಪದವೇ ಸರಿ. ಆದ್ಯಂತ ರಹಿತನಾದ ನೀನು ಸರ್ವವಸ್ತುಗಳಿಗೂ ಸೃಷ್ಟಿಕರ್ತನಾಗಿರುವೆ. ಯಾವ ಮನುಷ್ಯನ ನಾಲಿಗೆ ನಿನ್ನನ್ನು 'ಪುತ್ರ' ಎಂದು ಕರೆದೀತು ? ಪುತ್ರ ಎಂದರೆ ನರಕಯಾತನೆಯಿಂದ ತಪ್ಪಿಸುವವನು) ಹೇ ಜಗನ್ನಾಥ, ಈ ಸಮಸ್ತ ಜಗತ್ತು ಯಾರಿಂದ ಜನಿಸಿದೆಯೋ ಅಂತಹ ಮಾಯಶಕ್ತಿಯಿಂದಲ್ಲದೆ ನಮ್ಮ ಮಗನಾಗಿ ಜನಿಸಿದನೆಂದು ಹೇಳಲು ಸಾಧ್ಯವೇ ? ಯಾವಾತನಲ್ಲಿ ಸ್ಥಾವರ ಜಂಗಮಾದಿ ಸಕಲ ವಿಶ್ವವೂ ಪ್ರತಿಷ್ಠಿತವಾಗಿದೆಯೋ ಆತನು ಗರ್ಭದಲ್ಲಿಯೂ ತೊಡೆಯ ಮೇಲೆಯೂ ಮಲಗುವ ಮನುಷ್ಯನಾಗುವನೇ ? ಹೇ ಪರಮೇಶ್ವರ ಇದೆಲ್ಲಾ ಬರೀ ಭ್ರಮೆ ಪ್ರಸನ್ನನಾಗು ಅಂಶಾವತಾರಗಳಿಂದ ಈ ಜಗತ್ತನ್ನು ಪಾಲಿಸುತ್ತಿರು. ನೀನು ನನ್ನ ಪುತ್ರ ಎಂಬುವುದು ಸರಿಯಲ್ಲ. ಬ್ರಹ್ಮನಿಂದ ಹಿಡಿದು ಒಂದು ಪಾದಪದವರೆಗೂ(ಮರ) ಈ ಜಗತ್ತು ನಿನ್ನಿಂದ ಹುಟ್ಟಿದೆ. ಎಲೈ ಈಶ್ವರ ಪುರುಷೋತ್ತಮ ನಮ್ಮನ್ನು ಏಕೆ ಹೀಗೆ ವ್ಯಾಮೋಹಗೊಳಿಸುತ್ತೀಯೇ, ಹೇ ನಿರ್ಭಯ ಅಂದು ನಾನು ನಿನ್ನನ್ನು ನನ್ನ ಪುತ್ರನೆಂದು ಭಾವಿಸಿ ಮಾಯಾಮೋಹಿತನಾಗಿ ಕಂಸನಿಂದಾಗುವ ಭಯವನ್ನು ಶಂಕಿಸಿ ನಿನ್ನನ್ನು ಗೋಕುಲದತ್ತ ಕರೆದೊಯ್ದೆನು. ಅಲ್ಲಿ ನೀನು ದೊಡ್ಡವನಾದೆ. ಆದರೆ ಈಗ ನನಗೆ ಆ ಮಮತೆಯ ಭ್ರಾಂತಿಯಿಲ್ಲ. ರುದ್ರರು,

ಮರುತ್ತುಗಳು, ಅಶ್ವಿನಿದೇವತೆಗಳು, ದೇವೇಂದ್ರ ಇವರಿಗೂ ಸಾಧ್ಯವಾಗದಂತಹ ನಿನ್ನ ಅದ್ಭುತವಾದ ಕಾರ್ಯವನ್ನು ನಾನು ಕಂಡೆನು. ಜಗದೀಶ ನೀನು ಮಹಾವಿಷ್ಣುವಾಗಿದ್ದೀಯೆ. ಲೋಕೋಪಕಾರಕ್ಕಾಗಿಯೇ ನೀನು ಇಲ್ಲಿಗೆ ಬಂದಿರುವೆ ಎಂದು ಸ್ಪಷ್ಟವಾಯಿತು." ಎಂದನು. ವಸುದೇವನ ಈ ಮಾತುಗಳಲ್ಲಿ ಭಗವಂತ ಈ ಭುವಿಗೆ ಬಂದ ರಹಸ್ಯವನ್ನು ನಾವು ಸ್ಪಷ್ಟವಾಗಿ ತಿಳಿಯಬಹುದು.

## ಉಗ್ರಸೇನನಿಗೆ ರಾಜ್ಯಾಭಿಷೇಕ

ಪರಾಶರಮುನಿಗಳು ಮೈತ್ರೇಯರಿಗೆ ಕಂಸವಧ ವೃತ್ತಾಂತವನ್ನು ಹೇಳುತ್ತಾ ಹೀಗೆಂದನು. ಈಗಾಗಲೇ ಶ್ರೀಕೃಷ್ಣ ತನ್ನ ಅಮಾನುಷ ಕೃತ್ಯ, ಅತಿಮಾನುಷ ಸಾಹಸಗಳಿಂದ ತಾನು ವಿಷ್ಣುವೇ ಧರೆಗೆ ಇಳಿದುಬಂದಿರುವೆನೆಂದು ಸಾಬೀತುಪಡಿಸಿದ್ದಾನೆ. ಇದನ್ನು ಈಗಾಗಲೇ ನಾವು ವಸುದೇವನ ಮಾತುಗಳಲ್ಲಿ ತಿಳಿದುಕೊಂಡಿದ್ದೇವೆ. ಅಲ್ಲಿ ನೆರೆದಿದ್ದ ಯಾದವರೆಲ್ಲರೂ ಮತ್ತಿತರರೂ ಅದನ್ನು ಕೇಳುತ್ತಿದ್ದಿರಬಹುದು. ಇದನ್ನು ಕಂಡ ಕೃಷ್ಣನು ಮತ್ತೊಮ್ಮೆ ಅವರೆದುರಿಗೆ ತಾನೊಬ್ಬ ಸಾಮಾನ್ಯ ಮನುಷ್ಯ ಎಂದು ಸಮರ್ಥಿಸಿಕೊಳ್ಳುತ್ತಾ ಮಾಯಾ ಬಲೆಯನ್ನು ಅಲ್ಲಿ ನೆರದಿರುವ ಜನರ ಮನದಲ್ಲಿ ಬೀಸುತ್ತಾನೆ. ಅದರ ಸೊಗಸನ್ನು ಕೃಷ್ಣನ ಬಾಯಿಂದಲೇ ಕೇಳೋಣ.

**ಉವಾಚ ಚಾಂಬ ಹೇತಾತ ಚಿರಾದುತ್ಕಂಠಿತೇನ ಮೇ ।**
**ಭವಂತೌ ಕಂಸಭೀತೇನ ದೃಷ್ಟೌ ಸಂಕರ್ಷಣೇನ ಚ ॥**
**ಕುರ್ವತಾಂ ಯಾತಿ ಯಃ ಕಾಲೋ ಮಾತಾ ಪಿತ್ರೋರಪೂಜನಮ್ ।**
**ತತ್ ಖಿನ್ನ ಮಾಯುಪೋ ವ್ಯರ್ಥಮ ಸಾಧೂನಾಂ ಹಿ ಜಾಯತೇ ॥**
**ಗುರುದೇವ ದ್ವಿಜಾತೀನಾಂ ಮಾತಾ ಪಿತ್ರೋಶ್ಚ ಪೂಜನಮ್ ।**
**ಕುರ್ವತಾಂ ಸಪಲಃ ಕಾಲೋ ದೇಹಿನಾಂ ತಾತ ಜಾಯತೇ ॥**
**ತತ್ ಕ್ಷಂತವ್ಯಮಿದಂ ಸರ್ವಮತಿಕ್ರಮಕೃತಂ ಪಿತಃ ।**
**ಕಂಸವೀರ್ಯ ಪ್ರತಾ ಪಾಭ್ಯಾಮಾವಯೋಃ ಪರವಶ್ಯಯೋಃ ॥**

(ವಿ.ಪು. 2ನೇ ಸಂ. 21ನೇ ಅಂ ಪಂಚಮಾಂಶ ಶ್ಲೋಕ 2ರಿಂದ 5)

ತಾಯಿ ತಂದೆಯರೆದುರಿಗೆ ಕೃಷ್ಣ ಹೀಗೆಂದನು. ಅಮ್ಮಾ ಅಪ್ಪಾ ನಿಮ್ಮನ್ನು ನೋಡಬೇಕೆಂದು, ನಿಮಗೆ ಸೇವೆ ಸಲ್ಲಿಸಬೇಕೆಂದು ಬಹುದಿನಗಳಿಂದ ಹಂಬಲಿಸುತ್ತಿದ್ದೆವು. ಆದರೆ ಅದಕ್ಕೆ ನಮಗೆ ಅವಕಾಶ ಸಿಗಲಿಲ್ಲ. ಕಾರಣ – ದುಷ್ಟ ರಾಕ್ಷಸ ಕಂಸನು ಏನು ಮಾಡುತ್ತಾನೋ ಎಂಬ ಭಯ ನಮಗಿದ್ದಿತು. ಸಧ್ಯ ಈಗಲಾದರೂ ನಿಮ್ಮೀರ್ವರನ್ನು ಕಂಡು ಧನ್ಯರಾದೆವು. ತಾಯಿತಂದೆಗಳ ಸೇವೆಯನ್ನು ಮಾಡದೆ ಕಾಲಕಳೆಯತಕ್ಕವರಿಗೆ ಅಷ್ಟು ಆಯಸ್ಸಿನಭಾಗ ವ್ಯರ್ಥವಾದಂತೆಯೇ ಸರಿ. ಅಷ್ಟೇ ಅಲ್ಲ  ಗುರು–ದೇವ–ಬ್ರಾಹ್ಮಣ ತಾಯಿ ತಂದೆಗಳ ಪೂಜೆಯನ್ನು ಮಾಡತಕ್ಕ ಸಮಯವು (ಜನ್ಮ) ಸಫಲವಾಗುತ್ತದೆ. ಎಲೈ ತಂದೆಯೇ ನಾವು ಮಾಡಿದ ಅಪರಾಧಗಳನ್ನು ಕ್ಷಮಿಸಿ, ಕಂಸನ ಪ್ರತಾಪ ಪರಾಕ್ರಮಗಳಿಗೆ ಅಂಜಿ ಪರವಶರಾದ ನಮ್ಮಿಂದ ಈ ತಪ್ಪು ನಡೆದುಹೋಯಿತು ಎಂದು ಹೇಳಿದನು. ಕೃಷ್ಣನ ಈ ಮಾತುಗಳು ಮನುಕುಲಕ್ಕೆ ನೀಡಿದ ಒಂದು ದಿವ್ಯಸಂದೇಶ ಎಂಬುದರಲ್ಲಿ ತೃಣಮಾತ್ರವೂ ಸಂದೇಹವಿಲ್ಲ. ‘ಮಾತೃದೇವೋ ಭವ’, ಎಂಬ ಅಮೃತವಾಕ್‌ಗಳು ಇಂದಿನದಲ್ಲ, ವೇದ ಉಪನಿಷತ್ತುಗಳೂ ಇದನ್ನು ಸಾರುತ್ತದೆ. ನಮ್ಮ ಹಿರಿಯರು ಕೇವಲ ಮಾತುಗಳನ್ನಷ್ಟೇ ಹೇಳಿ ಮುಗಿಸಲಿಲ್ಲ. ನುಡಿದಂತೆಯೇ ನಡೆದುಕೊಂಡು ಬಂದಿರುವ ಮಹಾನುಭಾವರವರು. ನಮ್ಮದು ಸನಾತನ ಧರ್ಮ, ಸನಾತನ ಸಂಸ್ಕೃತಿ ನಾವು ಈ ಪುಣ್ಯಭೂಮಿಯಲ್ಲಿ ಜನಿಸಿರುವೆವಲ್ಲಾ ! ಅದೇ ನಮ್ಮೆಲ್ಲರ ಭಾಗ್ಯ ಪ್ರಕೃತ ವಿಷಯಕ್ಕೆ ಬರೋಣ. ಕೃಷ್ಣ ಬಲರಾಮರು ತಂದೆ ತಾಯಿಗಳನ್ನು ವಿಚಾರಿಸಿಕೊಂಡು ಬಂದು ನಂತರ, ಅಲ್ಲೇ ದುಃಖತಪ್ತರಾಗಿದ್ದ ಕಂಸನ ಪತ್ನಿಯರಿಗೂ ಸಮಾಧಾನದ ಸಾಂತ್ವನದ ಮಾತುಗಳನ್ನು ಹೇಳಿ ನಂತರ ಕಂಸನ ತಂದೆಯಾದ ಉಗ್ರಸೇನನ ಬಳಿ ಬಂದರು. ಇಷ್ಟು ದಿನಗಳೂ ಬಂಧಿತನಾಗಿದ್ದ ಉಗ್ರಸೇನನಿಗೆ ರಾಜ್ಯಾಭಿಷೇಕವನ್ನು ಮಾಡಬೇಕೆಂದು ಶ್ರೀಕೃಷ್ಣನು ನಿರ್ಧರಿಸಿದ್ದನು.

**ಉಗ್ರಸೇನಂ ತತೋ ಬಂಧಾನ್ ಮುಮೋಚ ಮಧುಸೂದನಃ ।**
**ಅಭ್ಯಷಿಂಚತ್ ತದೇವೈನಂ ನಿಜರಾಜ್ಯೇ ಹತಾತ್ಮಜಮ್ ॥**
**ರಾಜ್ಯೇಭಿಷಿಕ್ತಃ ಕೃಷ್ಣೇನ ಯದುಸಿಂಹಸ್ಸುತಸ್ಯಸಃ ।**
**ಚಕಾರ ಪ್ರೇತಕಾರ್ಯಾಣಿ ಯೇ ಚಾನ್ಯೇತತ್ರ ಘಾತಿತಾಃ ॥**

ಶ್ರೀಕೃಷ್ಣನು ಮಗನನ್ನು ಕಳೆದುಕೊಂಡ ಉಗ್ರಸೇನನನ್ನು ಸೆರೆಯಿಂದ ಬಿಡಿಸಿ ಅಂದೇ ತನ್ನ ರಾಜ್ಯದಲ್ಲಿ ರಾಜನೆಂದು ಅಭಿಷೇಕ ಮಾಡಿಸಿದನು. ಹೀಗೆ ರಾಜ್ಯಾಭಿಷಿಕ್ತವಾದ ಯದುಶ್ರೇಷ್ಠ ಉಗ್ರಸೇನನು ಹತನಾದ ತನ್ನ ಮಗ ಕಂಸನಿಗೂ ಹತರಾಗಿದ್ದ ಇತರರಿಗೂ ಪ್ರೇತಕಾರ್ಯವನ್ನು ನಡೆಸಿದನು. ನಂತರ ಶ್ರೀಕೃಷ್ಣನು "ಮಹಾರಾಜ ಮುಂದಿನ ಕಾರ್ಯವೇನೆಂಬುದನ್ನು ನನಗೆ ಅಜ್ಞಾಪಿಸು ಯಾವುದೇ ಸಂದೇಹಬೇಡ. ಯಯಾತಿಯ ಶಾಪದಿಂದ ನಮ್ಮ ವಂಶವು ರಾಜ್ಯಾರ್ಹವಲ್ಲ. ಹಾಗೆ ಇದ್ದರೂ ಪ್ರಕೃತದಲ್ಲಿ ಸೇವಕನಾದ ನಾನಿರುವಾಗ ನೀನು ಭಯಪಡಬೇಕಾದ್ದಿಲ್ಲ. ದೇವತೆಗಳಿಗೂ ನೀನು ಆಜ್ಞಾಪಿಸಬಹುದು." ಕಾರ್ಯಾರ್ಥವಾಗಿ ಮಾನವದೇಹವನ್ನು ಧರಿಸಿದ್ದ ಭಗವಾನ್ ಕೇಶವನು ಹೀಗೆ ಹೇಳಿ ವಾಯುದೇವನನ್ನು ಸ್ಮರಿಸಿಕೊಂಡನು. ವಾಯುವು ಉಪಸ್ಥಿತನಾದನು. ಆಗ ಅವನಿಗೆ ಸುಧರ್ಮವೆಂಬ ಶ್ರೇಷ್ಠವಾದ ಸಭಾಮಂಟಪವನ್ನು ತರುವಂತೆ ಹೇಳಿ ಅದನ್ನೇ ತರಿಸಿದನು. ಇಂದ್ರಲೋಕದಿಂದ ತರಿಸಿದ ಈ ಸಭಾಮಂಟಪದಲ್ಲಿ ಉಗ್ರಸೇನನು ವಿರಾಜಮಾನನಾದನು.

## ಸಾಂದೀಪನಿಯ ಶಿಷ್ಯರಾಗಿ ಶ್ರೀಕೃಷ್ಣಬಲರಾಮರ ವಿದ್ಯಾಭ್ಯಾಸ

ಈಗಾಗಲೇ ಶ್ರೀಕೃಷ್ಣ ಬಲರಾಮರು ಸ್ವತಃ ಸರ್ವಜ್ಞಾನಮಯರೂ ಸಕಲ ಶಾಸ್ತ್ರಪಾರಂಗತರಾಗಿದ್ದರೂ ಸಹ ಈ ಲೋಕದಲ್ಲಿ ತಾವಿಬ್ಬರೂ ಜನಿಸಿದ ಮೇಲೆ ಗುರುಶಿಷ್ಯರ ಪರಂಪರೆಯನ್ನು ರಕ್ಷಿಸಬೇಕೆಂದು ಉದ್ದೇಶಿಸಿದರು.

**ವಿದಿತಾಖಿಲ ವಿಜ್ಞಾನೌ ಸರ್ವಜ್ಞಾನಮಯಾದಪಿ ।**
**ಶಿಷ್ಯಾಚಾರ್ಯಕ್ರಮಂ ವೀರೌ ಖ್ಯಾಪಯಂತೌ ಯದೂತ್ತಮೌ ॥**

**ತತಃ ಸಾಂದೀಪನಿಂ ಕಾಶ್ಯಮ್ ಅವಂತಿಪುರವಾಸಿನಮ್ ।**
**ವಿದ್ಯಾರ್ಥಂ ಜಗ್ಮತು ಬಾಲೌ ಕೃತೋಪನಯನ ಕ್ರಮೌ ॥**

**ವೇದಭ್ಯಾಸ ಕೃತಪ್ರೀತಿ ಸಂಕರ್ಷಣ ಜನಾರ್ಧನೌ ।**

**ತಸ್ಯ ಶಿಷ್ಯತ್ವ ಮಭ್ಯೇತ್ಯ ಗುರುವೃತ್ತಿಪರೌ ಹಿತೌ ॥**

**ದರ್ಶಯಾಂಚಕ್ರತುರ್ವೀರಾ ವಾಚಾರ ಮಖಿಲೇ ಜನೇ ।**

**ಸರಹಸ್ಯಂ ಧನುರ್ವೇದಂ ಸಂಗ್ರಹ ಮಧೀಯತಾಮ್॥**

**ಅಹೋರಾತ್ರ ಚತುಷ್ಷಷ್ಟ್ಯಾ ತದದ್ಭುತಮಭೂದ್ ದ್ವಿಜ ।**

**ಸಾಂದೀಪನಿರಸಂಭಾವ್ಯಂ ತಯೋಃ ಕರ್ಮಾತಿ ಮಾನುಷಮ್ ॥**

**ವಿಚಿಂತ್ಯ ತೌ ತದಾ ಮೇನೇ ಪ್ರಾಪ್ತೌ ಚಂದ್ರದಿವಾಕರೌ ।**

**ಸಾಂಗಾಶ್ಚ ಚತುರೋ ವೇದಾನ್ ಸರ್ವಶಾಸ್ತ್ರಾಣಿ ಚೈವಹಿ ॥**

(ವಿ.ಪು. 2ನೇ ಸಂ. ಪಂಚಮಾಂಶ, ಅ.21 ಶ್ಲೋ.19ರಿಂದ 23)

ಶ್ರೀಕೃಷ್ಣನು ಬಲರಾಮರಿಗೆ ಉಪನಯನ ಸಂಸ್ಕಾರವು ನಡೆಯಿತು. ನಂತರ ಆ ಬಾಲಕರು ಕಾಶಿಯಲ್ಲಿ ಜನಿಸಿ ಅವಂತೀಪುರದಲ್ಲಿ ನೆಲೆಸಿದ್ದ ಸಾಂದೀಪನಿ ಎಂಬ ಆಚಾರ್ಯರ ಬಳಿ ವಿದ್ಯಾಭ್ಯಾಸಕ್ಕಾಗಿ ಹೋದರು. ಆ ಸಂಕರ್ಷಣನೂ (ಬಲರಾಮ) ಜನಾರ್ಧನನೂ (ಕೃಷ್ಣ) ಸಾಂದೀಪನಿಯಲ್ಲಿ ಶಿಷ್ಯತ್ವವನ್ನು ಸ್ವೀಕರಿಸಿ ಗುರುಶುಶ್ರೂಷೆ ಮಾಡುತ್ತಾ ಪ್ರೀತಿಯಿಂದ ವೇದಭ್ಯಾಸದಲ್ಲಿ ತೊಡಗಿದರು. ಅಷ್ಟೇ ಅಲ್ಲ. ಅಸ್ತ್ರ ಮಂತ್ರೋಪನಿಷತ್ ಸಹಿತನಾಗಿ ಧನುರ್ವೇದವನ್ನೂ, ಅಸ್ತ್ರ ಪ್ರಯೋಗವಿಧಿಯನ್ನೂ ಕಲಿತರು. ಒಂದು ಆಶ್ಚರ್ಯದ ಸಂಗತಿ ಎಂದರೆ 64 ಅಹೋರಾತ್ರಿಗಳಲ್ಲಿ (ಅಂದರೆ 64 ದಿವಸಗಳಲ್ಲಿ) 64 ವಿದ್ಯೆಗಳನ್ನು ಅವರು ಕಲಿತರು. ಇದು ಸಾಮಾನ್ಯ ಮನುಷ್ಯರಿಗೆ ಸಾಧ್ಯವೇ ! ಖಂಡಿತ ಇಲ್ಲ. ಇದನ್ನು ಆಚಾರ್ಯ ಸಾಂದೀಪನಿಯೇ ಊಹಿಸಿರಲಿಲ್ಲ. ಇಂತಹ ಅಮಾನುಷ ಕಾರ್ಯವನ್ನು ಆಲೋಚಿಸುತ್ತಾ ಆಚಾರ್ಯರು “ಇವರು ಬೇರಾರು ಅಲ್ಲ, ಚಂದ್ರ ಸೂರ್ಯರೇ ಈ ವೇಷದಲ್ಲಿ ಬಂದಿರಬೇಕು” ಎಂದು ಭಾವಿಸಿದರು.

ನಮ್ಮಂತಹ ಹುಲುಮಾನವರು ಈ 64 ವಿದ್ಯೆಗಳನ್ನು ಕಲಿಯುವುದಿರಲಿ ಅವುಗಳು ಯಾವುದೆಂಬುದನ್ನೂ ನಾವು ತಿಳಿದಿಲ್ಲ. ಈಗಾಲಾದರೂ ಆ 64 ವಿದ್ಯೆಗಳ ಹೆಸರನ್ನಾದರೂ ತಿಳಿಯಲು ಪ್ರಯತ್ನಿಸೋಣ.

## 64 ವಿದ್ಯೆಗಳು ಯಾವುವು ?

1) ವೇದ 2) ವೇದಾಂಗ 3) ಇತಿಹಾಸ 4) ಆಗಮ 5) ನ್ಯಾಯ 6) ಕಾವ್ಯ 7) ಅಲಂಕಾರ 8) ನಾಟಕ 9) ಗಾನ 10) ಕವಿತ್ವ 11) ಕಾಮಶಾಸ್ತ್ರ 12) ದ್ಯೂತ 13) ನೈಪುಣ್ಯ 14) ದೇಶಭಾಷಾಜ್ಞಾನ 15) ವಾಚಕ 16) ಸಮಸ್ತಾವಧಾನ 17) ಸರ್ವಶಾಸ್ತ್ರ 18) ಶಕುನ 19) ಸಾಮುದ್ರಿಕಾ 20) ರತ್ನಪರೀಕ್ಷಾ 21) ಸ್ವರ್ಣಪರೀಕ್ಷಾ 22) ಅಶ್ವಲಕ್ಷಣ 23) ಗಜಲಕ್ಷಣ 24) ಮಲ್ಲವಿದ್ಯಾ 25) ಪಾಕಕರ್ಮ 26) ದೋಹಳ ಕೃಷಿ ಕಸಿಮಾಡುವುದು) 27) ಗಂಧವಾಹ 28) ಧಾತುವಾದ 29) ಖನೀವಾದ 30) ಅಗ್ನಿಸ್ತಂಭ 31) ಜಲಸ್ತಂಭ 32) ವಾಯುಸ್ತಂಭ 33) ಖಡ್ಗಸ್ತಂಭ 34) ವಶ್ಯ 35) ಆಕ್ಷರಣ 36) ಮೋಹನ 37) ವಿದ್ವೇಷಣ 38) ಉಚ್ಚಾಟನ 39) ಮಾರಣ 40) ಕಾಲವಂಚನ 41) ವಾಣಿಜ್ಯ 42) ಪಾಶ್ವಪಾಲ್ಯ 43) ಕೃಷಿಆಸವಕರ್ಮ 44) ಲಾವುಕ (ಜಾತಕಕ್ಕಾಗಿ ಬುಡುಬುಡಿಕೆಗಾರರು ಇಟ್ಟುಕೊಂಡಿರುವ ಪಕ್ಷಿ) 45) ಯುದ್ಧ 46) ಮೃಗಯಾ 47) ರತಿಕೌಶಲ 48) ಅದೃಶ್ಯಕರಣೀ 49) ದ್ಯೂತಕರಣೀ 50) ಚಿತ್ರ 51) ಲೋಹ 52) ಪಾಷಾಣ 53) ಮೃತ್ 54) ದಾರು 55) ವೇಣು 56) ಚರ್ಮಾಂಬರಕ್ರಿಯಾ 57) ಚೌರ್ಯ 58) ಔಷಧಸಿದ್ಧಿ 59) ಮಂತ್ರಸಿದ್ಧಿ 60) ಸ್ವರವಂಚನ 61) ದೃಷ್ಟಿವಂಚನ 62) ಅಂಜನ 63) ಜಲಪ್ಲವನ 64) ಇಂದ್ರಜಾಲ

ಇವಲ್ಲದೆ ಅಷ್ಟಾಂಗಯೋಗಗಳು : 1) ಯಮ 2) ನಿಯಮ 3) ಆಸನ 4) ಪ್ರಾಣಾಯಾಮ 5) ಪ್ರತ್ಯಾಹಾರ 6) ಧ್ಯಾನ 7) ಧಾರಣ 8) ಸಮಾಧಿ

ಇಂದಿನ ವಿದ್ಯೆಗಳು ಇವುಗಳಲ್ಲಿ ಯಾವುದಾದರೂ ಒಂದರಲ್ಲಿ ಅಭಿವ್ಯಕ್ತವಾಗಿರುತ್ತದೆ. ಹೆಸರುಗಳು ಬೇರೆ ಬೇರೆ ಇರಬಹುದು. ಆದರೆ ಮೂಲ ಒಂದೇ.

ಈ 64 ವಿದ್ಯೆಗಳಲ್ಲಿ ಶ್ರೀಕೃಷ್ಣ ಬಲರಾಮರು ಪಾರಂಗತರಾದರು. ಆ

ಬಾಲಕರು ನಾಲ್ಕು ವೇದಗಳನ್ನು ಷಡಂಗಗಳನ್ನೂ ಸರ್ವಶಾಸ್ತ್ರಗಳನ್ನೂ ಕಲಿತಿದ್ದರು. ಆಚಾರ್ಯರು ಒಂದು ಸಲ ಹೇಳಿದರೆ ಸಾಕು ಆ ಶಿಷ್ಯರು ಪಕ್ಕನೆ ಗ್ರಹಿಸುತ್ತಿದ್ದರಂತೆ. ಅಷ್ಟೊಂದು ಕುಶಾಗ್ರಬುದ್ಧಿಯುಳ್ಳವರು. ಸೂಕ್ಷ್ಮ ಬುದ್ಧಿಯುಳ್ಳವರು ಇಷ್ಟೆಲ್ಲಾ ಕಲಿತಾದ ನಂತರ ಗುರುಗಳಿಗೆ ಗುರುದಕ್ಷಿಣೆ ಸಲ್ಲಿಸಲೇಬೇಕಲ್ಲವೇ ಅದಕ್ಕೆ ಕೃಷ್ಣ ಬಲರಾಮರು ಗುರುಗಳನ್ನೇ ಯಾವ ಗುರುದಕ್ಷಿಣೆಯನ್ನು ಸಲ್ಲಿಸಬೇಕು ದಯವಿಟ್ಟು ತಿಳಿಸಿ ಎಂದು ಕೇಳಿದರು. ಅದರಲ್ಲೂ ಒಂದು ಆಶ್ಚರ್ಯ ಸಂಗತಿಯು ಕಾದಿದ್ದಿತು.

ಸಾಂದೀಪನಿಯ ಪುತ್ರನು ಈ ಹಿಂದೆ ಪ್ರಭಾಸ ಕ್ಷೇತ್ರದ ಬಳಿ ಸಮುದ್ರದಲ್ಲಿ ಸತ್ತುಹೋಗಿದ್ದನು. ಅದನ್ನು ಸ್ಮರಿಸುತ್ತಾ ಪ್ರಾಜ್ಞರಾದ ಆಚಾರ್ಯರು, ಈ ಶಿಷ್ಯರ ಅತೀಂದ್ರೀಯವಾದ ಅದ್ಭುತ ಕಾರ್ಯಗಳನ್ನು ನೋಡಿ ಚಿಂತಿಸುತ್ತಾ, ಮೃತನಾದ ತನ್ನ ಪುತ್ರನನ್ನು ನನಗೆ ತಂದು ಕೊಡಿರಿ ಅದೇ ಗುರುದಕ್ಷಿಣೆ ಎಂದು ಹೇಳಿದರು.

ಆಗ ಬಲರಾಮ ಕೃಷ್ಣರಿಬ್ಬರೂ ಸಮುದ್ರದತ್ತ ಹೋದರು. ಸಮುದ್ರ ರಾಜನಾದರೋ ಅರ್ಘ್ಯಹಸ್ತಗಳಿಂದ ಸ್ವಾಗತಿಸಿ "ನಾನು ಸಾಂದೀಪನಿಯ ಪುತ್ರನನ್ನು ಕೊಲ್ಲಲಿಲ್ಲ. ಪಂಚಜನ ಎಂಬ ದೈತ್ಯನು ಶಂಖ ರೂಪದಿಂದ ಬಂದು ಆ ಬಾಲಕನನ್ನು ಅಪಹರಿಸಿದ್ದಾನೆ. ಆ ದೈತ್ಯನು ಈ ಸಮುದ್ರದಲ್ಲಿಯೇ ಇದ್ದಾನೆ ಎಂದನು.

**ಇತ್ಯುಕ್ತೋಂತರ್ಜಲಂ ಗತ್ವಾ ಹತ್ವಾ ಪಂಚಜನಂ ಚತಮ್**
**ಕೃಷ್ಣೋಜಗ್ರಹ ತಸ್ಯಾಸ್ಥಿ ಪ್ರಭವಂ ಶಂಖ ಮುತ್ತಮಮ್**

**ಯಸ್ಯನಾದೇನ ದೈತ್ಯಾನಾಂ ಬಲಹಾನಿರಜಾಯತ**
**ದೇವಾನಾಂ ವವೃದೇ ತೇಜೋ ಯಾತ್ಯ ಧರ್ಮಶ್ಚ ಸಂಕ್ಷಯಮ್**

**ತಂ ಪಾಂಚಜನ್ಯ ಮಾಪೂರ್ಯ ಗತ್ವಾ ಯಮಪುರಂ ಹರಿಃ ।**
**ಬಲದೇವಶ್ಚ ಬಲವಾಂಜಿತ್ವಾ ವೈವಸ್ವತಂ ಯಮಮ್**

**ತಂಬಾಲಂ ಯಾತನಾ ಸಂಸ್ಥಂ ಯಥಾಪೂರ್ವ ಶರೀರಣಮ್**

**ಪಿತ್ರೇ ಪ್ರದತ್ತವಾನ್ ಕೃಷ್ಣೋ ಬಲಶ್ಚ ಬಲಿನಾಂ ವರಃ**

(ವಿ.ಪು. 2ನೇ ಸಂ. ಪಂ.ಅ.21.ಶ್ಲೋ28ರಿಂದ 31)

ಆಗ ಶ್ರೀಕೃಷ್ಣನು ಸಮುದ್ರಜಲದೊಳಗೆ ಪ್ರವೇಶಿಸಿ ಆ ಪಂಚಜನ ದೈತ್ಯನನ್ನು ಸಂಹರಿಸಿ, ಅವನ ಅಸ್ಥಿಯಿಂದಾದ ಶಂಖೋತ್ತಮವನ್ನು ತೆಗೆದುಕೊಂಡನು. ಆ ಪಾಂಚಜನ್ಯ ಶಂಖನಾದಕ್ಕೆ ದೈತ್ಯನ ಬಲ ಕುಂದುತ್ತದೆ. ಅವನು ಸಾಯುತ್ತಾನೆ. ದೇವತೆಗಳ ವರ್ಚಸ್ಸು, ತೇಜಸ್ಸು ವರ್ಧಿಸುತ್ತದೆ. ಅಧರ್ಮವು ಕ್ಷಯಿಸುತ್ತದೆ. (ಆ ಪಾಂಚಜನ್ಯವನ್ನೇ ಶ್ರೀಕೃಷ್ಣನು ಮಹಾಭಾರತ ಯುದ್ಧದಲ್ಲಿ ಊದಿದನು ಎಂಬುದನ್ನು ಸ್ಮರಿಸಬಹುದು) ನಂತರ ಶ್ರೀಕೃಷ್ಣ ಬಲರಾಮರು ಯಮಪುರಿಗೆ ಹೋದರು. ಶ್ರೀಕೃಷ್ಣನು ಪಾಂಚಜನ್ಯವನ್ನು ಊದಿದನು. ಅವರಿಬ್ಬರೂ ಅಲ್ಲಿ ಯಮನನ್ನೇ ಜಯಿಸಿ, ನರಕಯಾತನೆಯನ್ನು ಅನುಭವಿಸುತ್ತಿದ್ದ ಆ ಗುರು ಪುತ್ರನಿಗೆ ತನ್ನ ಮಾಯಶಕ್ತಿಯಿಂದ ಮೊದಲಿದ್ದ ಶರೀರಾಕೃತಿಯನ್ನೇ ನಿರ್ಮಿಸಿಕೊಟ್ಟು ಆತನ ತಂದೆಯಾದ ಸಾಂದೀಪನಿಗೆ ಹಾಗೂ ತನ್ನ ಗುರುಗಳಿಗೆ ಒಪ್ಪಿಸಿದನು. ಹೀಗೆ ಅಸಾಧ್ಯವಾದ ಕಾರ್ಯವನ್ನು ಸಾಧ್ಯವನ್ನಾಗಿಸಿ ದೇವಾನುದೇವತೆಗಳಿಂದ ಸ್ತುತಿಸಲ್ಪಟ್ಟರು. ಹೀಗೆ ಕೃಷ್ಣ ಮಹಿಮೆ ಒಂದೇ, ಎರಡೇ... ಅಸಂಖ್ಯಾತ ಅಂತಹ ಪರಮಾತ್ಮನಾದ ಶ್ರೀಕೃಷ್ಣನಲ್ಲಿ ನಾವೆಲ್ಲರೂ ಮೊರೆಯಿಡೋಣ

**ಶ್ರೀಕೃಷ್ಣಮಯಂ ಜಗತ್**

## ಜರಾಸಂಧನ ಪರಾಜಯ

ಪರಾಶರರು ಮೈತ್ರೇಯರಿಗೆ ಜರಾಸಂಧನು ಕೃಷ್ಣನನ್ನು ಎದುರಿಸಲು ಹದಿನೆಂಟು ಬಾರಿ ಯುದ್ಧಕ್ಕೆ ಬರುವುದನ್ನು ವಿವರಿಸುವುದನ್ನು ಈ ಅಧ್ಯಾಯದಲ್ಲಿ ಕಾಣಬಹುದು. ಜರಾಸಂಧನಿಗೆ ಅಸ್ತಿ, ಪ್ರಾಪ್ತಿ ಎಂಬ ಇಬ್ಬರು ಪುತ್ರಿಯರು ಇದ್ದರು. ಅವರಿಬ್ಬರನ್ನೂ ಜರಾಸಂಧನು ಕಂಸನಿಗೆ ಕೊಟ್ಟು ಮದುವೆ ಮಾಡಿದ್ದನು. ಜರಾಸಂಧನು ಮಗದೇಶ್ವರನಾಗಿದ್ದನು. ಅಂದರೆ ಮಗಧ ದೇಶವನ್ನು ಆಳುತ್ತಿದ್ದನು. ಜರಾಸಂಧನು ಮಹಾಬಲಿಷ್ಠನಾಗಿದ್ದನು.

ಅವನು ಕಂಸನು ಕೃಷ್ಣನಿಂದ ಹತನಾದುದನ್ನು ಕೇಳಿ ಕೋಪಾವಿಷ್ಟನಾದನು. ಕಂಸನನ್ನು ವಧಿಸಿದ ಶ್ರೀಕೃಷ್ಣನನ್ನೂ ಯಾದವರನ್ನೂ ಸಂಹರಿಸಬೇಕೆಂದು ದೊಡ್ಡ ಸೈನ್ಯದೊಡನೆ ದಂಡೆತ್ತಿ ಬಂದನು. ಆ ಮಗದೇಶ್ವರ ಇಪ್ಪತ್ತಮೂರು ಅಕ್ಷೌಹಿಣಿ ಸೇನೆಯೊಡನೆ ಬಂದು ಮಥುರಾನಗರಕ್ಕೆ ಮುತ್ತಿಗೆ ಹಾಕಿದನು. ಆಗ ಬಲಿಷ್ಠನಾದ ಬಲರಾಮ ಕೃಷ್ಣರು ಕೆಲವೇ ಸೈನಿಕರೊಡನೆ ನಗರದ ಹೊರಗೆ ಬಂದು ಬಲಿಷ್ಠನಾದ ಜರಾಸಂಧನ ಸೈನಿಕರೊಡನೆ ಯುಧ್ಧವನ್ನು ಆರಂಭಿಸಿದರು. ಆಗ ಶ್ರೀಕೃಷ್ಣ ರಾಮರು ತಮ್ಮ ಪುರಾತನ ಆಯುಧಗಳಾದ ಶಾರ್ಙ್ಗ, ಧನಸ್ಸು, ಅಕ್ಷಯ ಬಾಣಗಳಿಂದ ಎರಡು ಬತ್ತಳಿಕೆಗಳು ಮತ್ತು ಕೌಮೋದಕಿಯೆಂಬ ಗದೆ ಇವು ಗಗನ ಮಾರ್ಗದಿಂದ ಬಂದವು. ಬಲಭದ್ರನಿಗೆ ಇಷ್ಟವಾದ ಹಲಾಯುಧವೂ ಸುಮನವೆಂಬ ಮುಸಲಾಯುಧವು ಉಪಸ್ಥಿತವಾದವು. ನಂತರ ನಡೆದ ಯುದ್ಧದಲ್ಲಿ ವೀರರಾದ ಬಲರಾಮ ಜನಾರ್ಧನರು ಮಗಧೇಶ್ವರ ಜರಾಸಂಧನನನ್ನು ಸೈನ್ಯ ಸಮೇತರಾಗಿ ಸೋಲಿಸಿ ಓಡಿಸಿ ತಮ್ಮ ನಗರವನ್ನು ಪ್ರವೇಶಿಸಿನು. ಅತ್ಯಂತ ದುರಾತ್ಮನಾದ ಜರಾಸಂಧನು ಪರಾಜಿತನಾಗಿ ಓಡಿಹೋದನು. ಜೀವಸಹಿತನಾಗಿ ಹೋದನೆಂಬ ಕಾರಣದಿಂದ ಆತನು ಪರಾಜಿತನಾದನೆಂದು ಶ್ರೀಕೃಷ್ಣನು ಭಾವಿಸಲಿಲ್ಲ. ಮತ್ತೆ ಮತ್ತೆ ಜರಾಸಂಧನು ಸೇನಾಸಮೇತವಾಗಿ ಯುದ್ಧಕ್ಕೆ ಬಂದು ಸೋಲುತ್ತಿದ್ದನು. ಹೀಗೆ ಅವನು ಹದಿನೆಂಟು ಬಾರಿ ಶ್ರೀಕೃಷ್ಣ ಬಲರಾಮರನ್ನು ಎದುರಿಸಿ ಸೋತು ಹೋದನು. ಹಲವಾರು ಸಲ ಯುದ್ಧ ನಡೆದರೂ ಯಾದವ ಸೈನ್ಯವು ಸೋಲಲಿಲ್ಲ ಎಂಬುದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಶ್ರೀಕೃಷ್ಣ ಪರಮಾತ್ಮ ಯಾದವರ ಪಕ್ಷದಲ್ಲಿ ವಿಜೃಂಭಿಸಿದ್ದನು. ಮುಂದೆ ಭೀಮನು ಜರಾಸಂಧನನ್ನು ಕೊಲ್ಲುವನು. ಹಾಗೆ ಕೊಲ್ಲುವಾಗ ಜರಾಸಂಧನ ಇಬ್ಭಾಗವಾದ ಶರೀರವನ್ನು ಆಚೀಚೆಗೆ ಬದಲಾಯಿಸಿಹಾಕಬೇಕೆಂದು ಶ್ರೀಕೃಷ್ಣನೇ ಸೂಚಿಸಿದನು. ಭೀಮನು ಅದರಂತೆಯೇ ಮಾಡಿ ಜರಾಸಂಧನನ್ನು ಕೊಲ್ಲುವನು.

## ಕಾಲಯವನನ ಉತ್ಪತ್ತಿ

ಭಗವಾನ್ ಶ್ರೀಕೃಷ್ಣನ ಲೀಲೆ ಅದ್ಭುತವಾದದ್ದು. ಸಕಲ ಚರಾಚರದ ಸೃಷ್ಟಿ,

ಸ್ಥಿತಿ, ಲಯಗಳಿಗೂ ಕಾರಣನಾದವನು ಶ್ರೀಕೃಷ್ಣ ಎಂಬುದನ್ನು ನಾವು ಈ ವಿಷ್ಣುಪುರಾಣದ ಉದ್ದಕ್ಕೂ ನಾವು ಕಂಡರಿದ್ದಿದ್ದೇವೆ. ಅವನು ಲೀಲಾಮಾನುಷ ವಿಗ್ರಹ. ಅಂಶಾವತಾರಿಯಾಗಿ ಮಾವ ಜನ್ಮದಲ್ಲಿ ಹುಟ್ಟಿದರೂ ಸಹ ಕೆಲವೊಮ್ಮೆ ತನ್ನ ದೇವತ್ವವನ್ನು ಆಧಿಕ್ಯವನ್ನು ವ್ಯಕ್ತಪಡಿಸುತ್ತಾ ಮಾನವಸಹಜವಾದ ಪ್ರವೃತ್ತಿಗಳಿಂದಲೂ ತನ್ನ ಲೀಲೆಯನ್ನು ಈ ಜಗತ್ತಿಗೆ ತೋರಿಸುತ್ತಾನೆ. ಅದೇ ಶ್ರೀಕೃಷ್ಣನ ಲೀಲಾ ವೈಶಿಷ್ಟ್ಯ. ಈ ಹಿಂದೆ ನಾವು ತಿಳಿದಂತೆ ಜರಾಸಂಧನನ್ನು ಕೊಲ್ಲಲು ಶ್ರೀಕೃಷ್ಣನಿಗೆ ಅಸಾಧ್ಯವಾದುದೇನಲ್ಲ. ಆದರೂ ಅವನು ಹದಿನೆಂಟು ಬಾರಿ ದಂಡೆತ್ತಿ ಬಂದರೂ ಅವನಿಗೆ ಜೀವಭಿಕ್ಷೆಯನ್ನು ನೀಡಿ ಕಳುಹಿಸುತ್ತಾನೆ. ಕಾರಣ ಏನು ? ಅದರ ಮರ್ಮ ಅವನಿಗೆ ಗೊತ್ತು. ಮತ್ತಾರಿಗೂ ತಿಳಿಯುವುದಿಲ್ಲ. ಅದೇ ಕೃಷ್ಣಾವತಾರದ ರಹಸ್ಯ. ಇಂತಹ ಮನುಷ್ಯ ಧರ್ಮವನ್ನು ಪರಾಶರರು ಮೈತ್ರೇಯರಿಗೆ ವರ್ಣಿಸಿರುವುದೇ ಒಂದು ಸೊಗಸು. ಅದರ ಬಗ್ಗೆ ನಾವು ತಿಳಿದು ಆನಂದಿಸೋಣ.

**ನತದ್ಬಲಂ ಯಾದವಾನಾಂ ವಿಜಿತಂ ಯದನೇಕಶಃ**
**ತತ್ತು ಸನ್ನಿಧಿ ಮಾಹಾತ್ಮ್ಯಂ ವಿಷ್ಣೋರಂಶಸ್ಯ ಚಕ್ರಿಣಃ**

**ಮನುಷ್ಯ ಧರ್ಮಶೀಸ್ಯ ಲೀಲಾ ಸಾಜಗತೀಪತೇಃ**
**ಅಸ್ತ್ರಾಣ್ಯನೇಕರೂಪಾಣಿ ಯದರಾತಿಷು ಮುಂಚತಿ**

**ಮನಸೈವ ಜಗತ್‌ಸೃಷ್ಟಿಂ ಸಂಹಾರಂ ಚ ಕರೋತಿಯಃ**
**ತಸ್ಯಾರಿ ಪಕ್ಷಕ್ಷಪಣೇ ಕಿಯಾನುದ್ಯಮ ವಿಸ್ತರಃ**

**ತಥಾಪಿಯೋ ಮನುಷ್ಯಾಣಾಂ ಧರ್ಮಸ್ತಮನುವರ್ತತೇ**
**ಕುರ್ವನ್ ಬಲವತಾ ಸಂಧಿಂ ಹೀನೈರ್ಯುದ್ಧಂ ಕರೋತ್ಯಸೌ**

**ಸಾಮ ಚೋಪ ಪ್ರಧಾನಂ ಚ ತಥಾ ಬೇಧಂ ಚ ದರ್ಶಯನ್**
**ಕರೋಪಿ ದಂಡಪಾತಂ ಚ ಕ್ವಚದೇವ ಪಲಾಯನಮ್**

**ಮನುಷ್ಯ ದೇವಿನಾಂ ಚೇಷ್ಟಾಮಿತ್ಯೈವ ಮನುವರ್ತತೇ**
**ಲೀಲಾ ಜಗತ್ಪರೇ ಸ್ತನ್ಯಚ್ಛಂದತಃ ಪರಿವರ್ತತೇ**

(ಶ್ರೀ.ವಿ.ಪು 2ನೇ ಸಂ. ಪ<ಚಮಾಂಶ ಅ. 22. ಶ್ಲೋಕ 13 ರಿಂದ 18)

ಜರಾಸಂಧನು 18 ಬಾರಿ ಅಧಿಕ ಸೇನಾ ಸಮೇತನಾಗಿ ಬಂದರೂ ಅಲ್ಪಸಂಖ್ಯೆಯುಳ್ಳ ಯಾದವರಿಂದ ಪ್ರತೀಬಾರಿಯೂ ಯುದ್ಧದಲ್ಲಿ ಸೋತುಹೋದನು. ಇದರ ರಹಸ್ಯ ಏನೆಂದು ಹೇಳಬೇಕಾದುದ್ದೇ ಇಲ್ಲ. ಏನೆಂದರೆ ಅವರೆಲ್ಲರೂ ಶ್ರೀಕೃಷ್ಣನ ಸಾನ್ನಿಧ್ಯದಲ್ಲಿಯೇ ಇದ್ದರೂ ಕೃಷ್ಣನ ಅಭಯಹಸ್ತ ಅವರ ಪಾಲಿಗೆ ಇದ್ದಿತು. ಅಷ್ಟೇ ಅಲ್ಲದೆ ಶ್ರೀಕೃಷ್ಣನು ಶತ್ರುಗಳ ಮೇಲೆ ವಿವಿಧ ಅಸ್ತ್ರಗಳನ್ನು ಪ್ರಯೋಗಿಸಿದುದೂ ಸಹ ಕೃಷ್ಣನ ಮನುಷ್ಯ ಧರ್ಮವನ್ನು ಸ್ವೀಕರಿಸಿದ ಲೀಲೆಯೇ ಸರಿ. ಯಾವಾತನು ಈ ಜಗತ್ತನ್ನು ಸೃಷ್ಟಿಸಬಲ್ಲನೋ ಅಥವಾ ಸಂಹರಿಸಬಲ್ಲನೋ ಆತನಿಗೆ ಶತ್ರು ಪಕ್ಷವನ್ನು ಈ ರೀತಿ ಧ್ವಂಸಮಾಡುವ ಅವಶ್ಯಕತೆಯೇನಾದರೂ ಉಂಟೇ? ಖಂಡಿತಾ ಇಲ್ಲ. ಮನುಷ್ಯಧರ್ಮವನ್ನು ಅವಲಂಬಿಸಿರುವುದರಿಂದ ಶ್ರೀಕೃಷ್ಣ ಬಲಾಢ್ಯರೊಡನೆ ಸಂಧಿಯನ್ನೂ ಬಲಹೀನರೊಡನೆ ಯುದ್ಧ ಮಾಡುತ್ತಾ ಇರುವನು ಅಷ್ಟೇ ಅಲ್ಲ ಕೆಲವೆಡೆ ಸಾಮ, ಕೆಲವೆಡೆ ದಾನ, ಕೆಲವೆಡೆ ಅದೇ ಮನುಷ್ಯ ಧರ್ಮವನ್ನು ಅನುಸರಿಸಿ ತಾನು ಪಲಾಯನ ಮಾಡುವುದೂ ಉಂಟು. ಹೀಗೆ ಮಾನವೋಚಿತವಾದ ಕೃತ್ಯವನ್ನು ಪಾಲಿಸತಕ್ಕ ಜಗದೀಶ್ವರನು ತನ್ನ ಇಚ್ಛಾನುಸಾರವಾಗಿ ಎಲ್ಲವನ್ನು ನಡೆಸುತ್ತಾನೆ. ಪಲಾಯನ ಮಾಡಿ ತನ್ನ ಲೀಲೆಯನ್ನು ತೋರಿಸಿದ ಪ್ರಸಂಗವನ್ನು ನಾವು ಕಾಲಯವನ ಪ್ರಸಂಗದಲ್ಲಿ ಮುಂದೆ ನೋಡೋಣ. ಕಾಲಯವನ ಚರಿತ್ರೆಯನ್ನು ನಾವು ಕೇಳಿದರೆ ಹೀಗೂ ಉಂಟೇ ? ಎಂದು ಅಚ್ಚರಿಪಡಬೇಕಾಗುತ್ತದೆ.

# ಕಾಲಯವನ

ಪರಾಶರರು ಕೃಷ್ಣನ ಮಹಿಮೆಯನ್ನು ಮೈತ್ರೇಯರಿಗೆ ವರ್ಣಿಸುತ್ತಾ ಹೀಗೆಂದರು. ಒಮ್ಮೆ ಯಾದವರ ಸಭೆಯಲ್ಲಿ ಗಾರ್ಗ್ಯ ಎಂಬ ಬ್ರಾಹ್ಮಣನನ್ನು ಅವನ (ಹೆಂಡತಿಯ ಸೋದರ) ಶ್ಯಾಲನು 'ಷಂಡ' ಎಂದು ಮೂದಲಿಸಿದನು. (ಷಂಡ ಎಂದರೆ ಮಕ್ಕಳು ಇಲ್ಲದಿರುವವನು. ಇದನ್ನು ಕೇಳಿ ಯಾದವರೆಲ್ಲರೂ ಸಭೆಯಲ್ಲಿ ಜೋರಾಗಿ ನಕ್ಕರಂತೆ ಇದರಿಂದ ಕೋಪಾವಿಷ್ಟನಾದ ಗಾರ್ಗ್ಯನು ದಕ್ಷಿಣಾಪಥಕ್ಕೆ ಹೋಗಿ ತನಗೆ ಯಾದವ ಭಯಂಕರನಾದ ಪುತ್ರನು ಬೇಕೆಂದು ಪ್ರಾರ್ಥಿಸುತ್ತ ಮಹಾದೇವನನ್ನು ಕುರಿತು ತಪಸ್ಸು ಮಾಡಿದನು. ಹೀಗೆ ತಪಸ್ಸನ್ನು ಆಚರಿಸುವಾಗ ವ್ರತಾಂಗನಾಗಿ ಕಬ್ಬಿಣದ ಪುಡಿಯನ್ನು ಗಾರ್ಗ್ಯನು ತಿನ್ನುತ್ತಿದ್ದನು. ಸುಮಾರು (ಇಂದಿಗೂ ಗಾಜಿನ ಪುಡಿ, ಇಟ್ಟಿಗೆ ಪುಡಿಗಳನ್ನು ತಿಂದು ವಿಶ್ವದಾಖಲೆ ಸ್ಥಾಪಿಸಿರುವವರು) ಹನ್ನೆರಡು ವರ್ಷಗಳ ಕಾಲ ಅವನು ಶಿವನನ್ನು ಕುರಿತು ತಪಸ್ಸು ಮಾಡಿದನು. ನಂತರ ಶಿವನು ಪ್ರತ್ಯಕ್ಷನಾಗಿ ಗಾರ್ಗ್ಯನಿಗೆ ಅಭೀಷ್ಟವಾದ ವರವನ್ನಿತ್ತನು. ಈ ಮಧ್ಯೆ ಪುತ್ರಹೀನನಾದ ಒಬ್ಬ ಯವನ ರಾಜನು ಪುತ್ರಾರ್ಥಿಯಾಗಿ ಗಾರ್ಗ್ಯನನ್ನು ಸೇವಿಸಿ ಉಪಚರಿಸಿ, ಸಂತಸಪಡಿಸಿದ್ದನು. ಅದರ ಪರಿಣಾಮವಾಗಿ ಗಾರ್ಗ್ಯನು ಯವನರಾಜನ ಮಡದಿಯನ್ನು ಸಂಗಮಿಸಿದ್ದನು. ಹೀಗಾಗಿ ಅವನಿಗೆ ಪುತ್ರನೊಬ್ಬನು ಜನಿಸಿದನು. ಆ ಮಗುವು ಕಪ್ಪು ಬಣ್ಣವುಳ್ಳದ್ದಾಗಿತ್ತು. ಆದ್ದರಿಂದ ಯವನನು ಅವನಿಗೆ 'ಕಾಲಯವನ' ಎಂಬ ಹೆಸರಿಟ್ಟು ಅವನು ದೊಡ್ಡವನಾದ ನಂತರ ಅವನಿಗೆ ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿ ಯುವರಾಜನು ತಪಸ್ಸಿಗೆ ಹೊರಟು ಹೋದನು. ಅವನು ಅತ್ಯಂತ ವೀರ್ಯವಂತನಾಗಿದ್ದನು. ಅವನು ಒಮ್ಮೆ ನಾರದ ಮುನಿಗಳನ್ನು ಕುರಿತು "ನಾರದರೇ ಈ ಜಗತ್ತಿನಲ್ಲಿ ಅತ್ಯಂತ ಬಲಿಷ್ಠರಾದ ನರಾಧಿಪತಿಗಳು ಯಾರು?" ಎಂದು ಕೇಳಿದನು. ಅದಕ್ಕೆ ನಾರದರು "ಯಾದವರು" ಎಂದು ಹೇಳಿದರು. ಸರಿ ಕಾಲಯವನು ಗಜಾ ಅಶ್ವ ರಥಗಳಿಂದ ಕೂಡಿದ ಸಾವಿರಾರು ಕೋಟಿ ಮ್ಲೇಚ್ಛ ಸೈನಿಕರನ್ನು ಸಜ್ಜುಗೊಳಿಸಿ ಯಾದವರು ಇರುವ ಮಥುರಾ ನಗರಕ್ಕೆ ದಂಡೆತ್ತಿ ಬಂದನು. ಯಾದವರ ಪೌರುಷವನ್ನು ಸಹಿಸಲಾರದ ಕಾಲಯವನನು ಸೈನ್ಯದೊಡನೆ ಸುಧೀರ್ಘ ಪ್ರಯಾಣ ಮಾಡಿದನು. ತನ್ನ ವಾಹನವು ಬಳಲಿದೊಡನೆ ಕಾಲಯವನ

ಮತ್ತೊಂದು ವಾಹನವನ್ನೇರಿ ಪ್ರಯಾಣವನ್ನು ಮುಂದುವರೆಸುತ್ತಿದ್ದನು. ವಜ್ರಾಯುಧಕ್ಕಿಂತಲೂ ಕಠೋರವಾಗಿದ್ದ ಕಾಲಯವನನ ಎದೆಯನ್ನು ಬೀಳಿಸಲು ಶ್ರೀಕೃಷ್ಣ ಉದ್ಯುಕ್ತನಾದನು. ಅವನನ್ನು ಸೋಲಿಸಲು ಸಾಯಿಸಲು ಅವನು ಹೀಗೆ ಯೋಚಿಸಿದನು.

## ದ್ವಾರಕೆಯ ನಿರ್ಮಾಣ

ಶ್ರೀಕೃಷ್ಣನು ಹೀಗೆ ಆಲೋಚಿಸಿದನು. "ಒಂದು ವೇಳೆ ಕಾಲಯವನಿಂದ ಯಾದವ ಸೇನೆಯ ಬಹುಭಾಗ ನಷ್ಟವಾದಲ್ಲಿ ಜರಾಸಂಧನಿಗೆ ಮತ್ತೆ ಆಕ್ರಮಣವು ಸುಲಭ ಸಾಧ್ಯವಾಗುತ್ತದೆ. ಪ್ರಸ್ತುತ ಮಗಧನ ಸೈನ್ಯ ಕ್ಷೀಣವಾಗಿದ್ದರೂ ಕಾಲಯವನನ ಬಳಿ ಸಾಕಷ್ಟು ಸೈನ್ಯ ಇದೆ. ಹೀಗೇನಾದರೂ ಆದರೆ ಯಾದವರಿಗೆ ಎರಡು ಬಗೆಯಲ್ಲಿ ವಿಪತ್ತು ಕಾದಿರುತ್ತದೆ. ಆದ್ದರಿಂದ ಶತ್ರುಗಳಿಗೆ ದುರ್ಜಯವಾದ ಒಂದು ಕೋಟೆಯನ್ನು ಯಾದವರಿಗಾಗಿ ರಚಿಸುವೆನು" ಎಂದು ಆಲೋಚಿಸಿ ಶ್ರೀಕೃಷ್ಣ ತನಗೆ ಹನ್ನೆರಡು ಯೋಜನೆಗಳಷ್ಟು ನೆಲಬೇಕೆಂದು ಸಮುದ್ರರಾಜನನ್ನು ಬೇಡಿಕೊಂಡನು. ಸಮುದ್ರರಾಜನು ಇದಕ್ಕೆ ಸಮ್ಮತಿಸಿದ. ಅವನು ಬಿಟ್ಟುಕೊಟ್ಟ ಸ್ಥಳದಲ್ಲಿ (ಅರಬ್ಬಿಸಮುದ್ರ ದ್ವಾರಕಾಪುರಿಯನ್ನು ನಿರ್ಮಿಸಿದನು. ಇಂದಿಗೂ 'ದ್ವಾರಕಾಪುರಿ' ಯು ಪುಣ್ಯಕ್ಷೇತ್ರ, ಪವಿತ್ರಕ್ಷೇತ್ರವೆಂದು ಜನರು ಪರಿಗಣಿಸುತ್ತಾರೆ. ಪಕ್ಕದ ಗೋಮತಿ ನದಿಯು ಅರಬ್ಬಿ ಸಮುದ್ರಕ್ಕೆ ಸೇರುತ್ತದೆ. ಎತ್ತರವಾಗಿ ರಾರಾಜಿಸುತ್ತಿರುವ ದ್ವಾರಕಾಧೀಶನ ದೇವಾಲಯ ಅಲ್ಲಿ ದಿನಕ್ಕೆ ಐದು ಸಲ ದ್ವಾರಕಾಧೀಶನಿಗೆ ಆಗುವ ಅಲಂಕಾರ, ಕೃಷ್ಣನ ಲೀಲಾವಿನೋದಗಳನ್ನು ನೆನಪಿಸಿಕೊಂಡರೆ ನಾವು ಸಾಕ್ಷಾತ್ ಕೃಷ್ಣನ ಸಾನ್ನಿಧ್ಯದಲ್ಲಿರುವಂತೆ ಭಾಸವಾಗುತ್ತದೆ.

ಈ ನಗರದ ಸುತ್ತಲೂ ಉನ್ನತವಾದ ಪ್ರಾಕಾರದಿಂದ ಆವೃತವಾಗಿ, ದೊಡ್ಡ ದೊಡ್ಡ ಉದ್ಯಾನಗಳಿಂದಲೂ ನೂರಾರು ಸರೋವರಗಳಿಂದಲೂ ಶೋಭಿತವಾಗಿದೆ. ಅತ್ಯುನ್ನತವಾದ ಸೌಧಗಳಿಂದಲೂ, ಗೃಹಗಳಿಂದಲೂ ತುಂಬಿದ ಆ ದ್ವಾರಕೆಯು ದೇವೇಂದ್ರನ ಅಮರಾವತಿಯಂತೆ ವಿರಾಜಿಸುತ್ತಿತ್ತು. ಶ್ರೀಕೃಷ್ಣನು ದ್ವಾರಕಾಪುರವನ್ನು ನಿರ್ಮಾಣ ಮಾಡಿದ ನಂತರ ಮಥುರಾ ಪ್ರಜೆಗಳನ್ನು ದ್ವಾರಕೆಗೆ ತಂದ. ಇತ್ತ ಕಾಲವನನು ಮಥುರೆಯ ಸಮೀಪಕ್ಕೆ

ಬರುತ್ತಿರುವಾಗ ಶ್ರೀಕೃಷ್ಣನು ಮಥುರೆಯೊಳಗೆ ಹೋಗಿ ಸೇರಿಕೊಂಡನು. ಕಾಲಯವನನ ಸೇನೆಯು ಮಥುರೆಯನ್ನು ಸುತ್ತುಗಟ್ಟಲು, ಗೋವಿಂದನು ನಿರಾಯುಧನಾಗಿ ಹೊರಗೆ ಬಂದನು. ಹಾಗೆ ಬಂದುದನ್ನು ಕಾಲಯವನನು ಕಂಡನು. ಅವನು ಶ್ರೀಕೃಷ್ಣನೆಂದು ತಿಳಿಯಲು ಅವನಿಗೆ ಹೆಚ್ಚುಕಾಲ ಬೇಕಾಗಲಿಲ್ಲ. ನಿರಾಯುಧನಾಗಿದ್ದ ಶ್ರೀಕೃಷ್ಣನನ್ನು ಕಾಲಯವನನು ಬೆನ್ನಟ್ಟಿದನು. ಶ್ರೀಕೃಷ್ಣನೂ ಓಡಲು ಆರಂಭಿಸಿದನು. ಮಹಾಯೋಗಿಗಳಿಗೂ ಅಗಮ್ಯನಾದ ಶ್ರೀಕೃಷ್ಣನನ್ನು ಹಿಡಿಯಬೇಕೆಂದು ಕಾಲಯವನನನ್ನು ಹಿಂಬಾಲಿಸಿ ಹೋದನು. ಹೀಗೆ ಹಿಂಬಾಲಿಸಲ್ಪಟ್ಟ ಶ್ರೀಕೃಷ್ಣ ಓಡುತ್ತಾ ಓಡುತ್ತಾ ಒಂದು ದೊಡ್ಡ ಗುಹೆಯನ್ನು ಪ್ರವೇಶಿಸಿದನು.

## ಕಾಲಯವನನು ಮುಚುಕುಂದ ನೋಟದಿಂದ ಭಸ್ಮವಾಗುವುದು

**ತೇನಾನುಯಾತಃ ಕೃಷ್ಣೋಽಪಿ ಪ್ರವಿವೇಶ ಮಹಾಗುಹಾಮ್**
**ಯತ್ರ ಶೇತೇ ಮಹಾವೀಯ ಮುಚುಕುಂದೋ ನರೇಶ್ವರಃ**
**ಸೋಽಪಿ ಪ್ರವಿಷ್ಟೋ ಯವನೋ ದೃಷ್ಟ್ವಾ ಶಯ್ಯಾಗತಂನೃಪಮ್**

**ಪಾದೇನ ತಾಡಯಾಮಾಸ ಮತ್ವಾ ಕೃಷ್ಣಂ ಸುದರ್ಮತಃ**
**ಉತ್ಥಾಯ ಮುಚುಕುಂದೋಽಪಿ ದದರ್ಶಯವನಂನೃಪ**

**ದೃಷ್ಟಮಾತ್ರಶ್ಚ ತೇನಾಸೌ ಜಜ್ವಾಲ ಯವನೋಗ್ನಿನಾ**
**ತತ್ರ ಕ್ರೋಧಜೇನ ಮೈತ್ರೇಯ ಭಸ್ಮೀಭೂತಶ್ಚ ತತ್ ಕ್ಷಣಾತ್**

**ಸಹಿ ದೇ ವಾಸುರೇ ಯುದ್ಧೇ ಗತೋ ಹತ್ವಾ ಮಹಾಸೂರಾನ್**
**ನಿದ್ರಾ ರ್ತಸ್ಸು ಮಹಾಕಾಲಂ ನಿದ್ರಾಂ ವವ್ರೇ ವರಂ ಸುರಾನ್**

**ಪ್ರೋಕ್ತಶ್ಚ ದೇವೈ ಸ್ಸಂದುಪ್ತಂ ಯಸ್ತ್ವಾಮುತ್ಥಾಪಯಿಷ್ಯತಿ**
**ದೇಹಜೇನಾಗ್ನಿನಾ ಸದ್ವಸ್ಯತು ಭಸ್ಮೀ ಭವಿಷ್ಯತಿ**

(ವಿ.ಪು. 2ನೇ ಸಂ. ಪಂಚಮಾಂಶ ಅ. 23 ಶ್ಲೋ 18ರಿಂದ 23)

ಆ ಗುಹೆಯಲ್ಲಿ ಮಹಾಪರಾಕ್ರಮಿಯಾದ ಮುಚುಕುಂದ ಎಂಬ ಒಬ್ಬ ರಾಜನು ಮಲಗಿ ನಿದ್ರಿಸುತ್ತಿದ್ದನು. ಕೃಷ್ಣನನ್ನು ಹಿಂಬಾಲಿಸಿ ಬಂದ ಕಾಲಯವವನನೂ ಆ ಗುಹೆಯನ್ನು ಪ್ರವೇಶಿಸಿದನು. ಅಲ್ಲಿ ಮಲಗಿದ್ದ ಮುಚುಕುಂದನನ್ನು ನೋಡಿ, ಆತನೇ ಶ್ರೀಕೃಷ್ಣನೆಂದು ಭ್ರಮಿಸಿ ಕಾಲಯವನನು ಮುಚುಕುಂದನನ್ನು ಕಾಲಿನಿಂದ ಒದ್ದನು. ಆಗ ಎಚ್ಚೆತ್ತ ಮುಚುಕುಂದನು ಕಾಲಯವನನ್ನು ಕಣ್ಣುಬಿಟ್ಟು ನೋಡಿದನು. ಹಾಗೆ ನೋಡಿದ ಕೂಡಲೇ ಆತನ ಕ್ರೋಧದಿಂದ ಉಂಟಾದ ಅಗ್ನಿಯಿಂದ ಕಾಲಯವನನು ಆ ಕ್ಷಣದಲ್ಲಿಯೇ ಸುಟ್ಟು ಬೂದಿಯಾದನು.

ಇದಕ್ಕೂ ಒಂದು ಕಾರಣವುಂಟು. ಮುಚುಕುಂದನು ಹಿಂದೆ ದೇವಾಸುರ ಸಂಗ್ರಾಮದಲ್ಲಿ ಬಲಶಾಲಿಗಳಾದ ಅಸುರರನ್ನು ಕೊಂದು ನಿದ್ರೆಗಾಗಿ ಬಳಲಿ ಹಂಬಲಿಸುತ್ತಾ, ಧೀರ್ಘಕಾಲದವರೆಗೆ ತನಗೆ ನಿದ್ರಿಸಬೇಕೆಂದು ದೇವತೆಗಳಲ್ಲಿ ವರವನ್ನು ಕೇಳಿಕೊಂಡನು. ಆಗ ದೇವತೆಗಳು 'ತಥಾಸ್ತು' ಎಂದು ವರವನ್ನಿತ್ತು 'ನೀನು ನಿದ್ರಿಸುವಾಗ ಯಾವಾತನು ನಿನ್ನನ್ನು ಎಬ್ಬಿಸುವನೋ ಆತನು ತನ್ನ ದೇಹದಿಂದಲೇ ಹುಟ್ಟಿದ ಅಗ್ನಿಯಿಂದ ಕೂಡಲೇ ಭಸ್ಮೀಭೂತನಾಗುವನು' ಎಂದು ಹೇಳಿದ್ದರು. ಇದು ಶ್ರೀಕೃಷ್ಣನಿಗೆ ತಿಳಿದ್ದಿರಬಹುದು. ಆದ್ದರಿಂದ ಅವನು ಗುಹೆಯೊಳಗೆ ಬಂದು ಕಾಲಯವನನ್ನು ಮುಚುಕುಂದನಿಂದ ಕೊಲ್ಲಿಸಿದನು. ಅದಕ್ಕಾಗಿಯೇ ತಾನು ಕಾಲಯವನನಿಗೆ ಹೆದರಿ ಓಡಿದನೆಂಬ ಲೀಲೆಗೂ ಪಾತ್ರನಾದನು. ಹೀಗೆ ಮುಚುಕುಂದನಿಂದ ಕಾಲಯವನು ಮೃತ್ಯುವನ್ನಪ್ಪಿದನು.

## ಮುಚುಕುಂದನಿಂದ ಭಗವಂತನ ಸ್ತುತಿ

ಮುಚುಕುಂದ ಶ್ರೀಕೃಷ್ಣನ ಪರಮಭಕ್ತ. ಮುಚುಕುಂದನು ಪಾಪಿಯಾದ ಕಾಲಯವನನ್ನು ಭಸ್ಮೀಭೂತನನ್ನಾಗಿ ಮಾಡಿದನಂತರ ಅಲ್ಲಿಯೇ ನಿಂತಿದ್ದ ಶ್ರೀಕೃಷ್ಣನನ್ನು ಕಂಡು ನೀನು ಯಾರಪ್ಪಾ? ಎಂದು ಕೇಳಿದರು. (ಮುಚುಕುಂದ ಈ ಹಿಂದೆ ಶ್ರೀಕೃಷ್ಣನು ಕಂಡಿರಲಿಲ್ಲ. ಈ ಹಿಂದೆ ವೃದ್ಧಗಾರ್ಗ್ಯನು ಭಗವಂತನು

ಅಂಶಾವತಾರಿಯಾಗಿ ಹರಿಯಾಗಿ ಹುಟ್ಟುತ್ತಾನೆ ಎಂಬ ಭವಿಷ್ಯನುಡಿಯನ್ನು ಕೇಳಿ ತಿಳಿದಿದ್ದನಷ್ಟೇ) ಶ್ರೀಕೃಷ್ಣನು "ನಾನು ಚಂದ್ರವಂಶಕ್ಕೆ ಸೇರಿದವನು. ಯದುಕುಲದಲ್ಲಿ ಹುಟ್ಟಿದವನು. ನಾನು ವಸುದೇವನ ಮಗ ಎಂದು ತಿಳಿಸಿದನು. ಮುಚುಕುಂದನಿಗೆ ತಕ್ಷಣ ಆ ವೃದ್ಧನು ಹೇಳಿದ ಮಾತು ನೆನೆಪಿಗೆ ಬಂದಿತು. ಆತನು ಶ್ರೀಹರಿಗೆ ನಮಸ್ಕರಿಸಿ ಇಂತೆಂದನು.

**ಪುರಾಗಾರ್ಗೇಣ ಕಥಿತ ಮಷ್ಟಾ ವಿಂಶತಿಮೇಯುಗೇ**

**ದ್ವಾಪರಾಂತೇ ಹರೇರ್ಜನ್ಮ ಯದುವಂಶೇ ಭವಿಷ್ಯತಿ**

**ಸಂಸಾರಪತಿತಸ್ಯೈಕೋ ಜನ್ತೋಸ್ತ್ವಂ ಶರಣಮ್‌ಪರಮ್**

**ಪ್ರಸೀದತ್ವಂ ಪ್ರಪನ್ನಾರ್ತ ಹರನಾ ಶಾಯಮೇ ಶುಭಮ್**

(ವಿ.ಪು. 2ನೇ ಸಂ. ಪಂಚಮಾಶ. ಅ. 23 ಶ್ಲೋ.27)

ಎಲೈ ಪರಮೇಶ್ವರ ! ನೀನು ವಿಷ್ಣುವಿನ ಅಂಶಾವತಾರವಾಗಿದ್ದೀಯೇ ಈ ಹಿಂದೆ ಒಬ್ಬ ಗಾರ್ಗ್ಯನು 'ಇಪ್ಪತ್ತೆಂಟನೆ ದ್ವಾಪರಯುಗದಲ್ಲಿ ಶ್ರೀಹರಿಯ ಅವತಾರ ಯದುವಂಶದಲ್ಲಿ ಆಗುವುದು ಎಂದು ಭವಿಷ್ಯ ನುಡಿದಿದ್ದನು. ಆತನೇ ನೀನು. ಇಲ್ಲಿಗೆ ಬಂದಿರುವೆ ಇದರಲ್ಲಿ ಸಂದೇಹವಿಲ್ಲ. ಮಾನವರ ಉಪಕಾರಕ್ಕಾಗಿಯೇ ನೀನು ಅವತರಿಸಿದ್ದೀಯೇ ಹಿಂದೆ ದೇವಾಸುರ ಸಂಗ್ರಾಮದಲ್ಲಿ ಅಸುರರು ನನ್ನ ತೇಜಸ್ಸನ್ನು ತಡೆದುಕೊಳ್ಳಲಾರದೆ ಹೋದರು. ಅಂತಹ ನಾನು ಈಗ ನಿನ್ನ ತೇಜಸ್ಸನ್ನು ತಡೆದುಕೊಳ್ಳಲಾರದೆ ಹೋಗಿದ್ದೇನೆ. ಹೇ ಸ್ವಾಮಿ, ಸಂಸಾರದಲ್ಲಿ ಬಿದ್ದಿರುವ ಜಂತುವಿಗೆ ನೀನೊಬ್ಬನೇ ಶ್ರೇಷ್ಠವಾದ ಶರಣಸ್ಥಾನ ಶರಣಾಗತರ ಕಷ್ಟವನ್ನು ಪರಿಹರಿಸುವ ಪ್ರಭುವೆ ಪ್ರಸನ್ನನಾಗು. ನನ್ನ ಅಮಂಗಳವೆಲ್ಲಾ ನಷ್ಟವಾಗಲಿ. ಈ ಪ್ರಪಂಚದಲ್ಲಿರುವ ಸಮಸ್ತ ಸಮುದ್ರಗಳು ನದಿಗಳು ನೀನೇ. (ಸಾಮಾನ್ಯವಾಗಿ ನದಿಗಳು ಸ್ತ್ರೀವಾಚಕವಾಗಿರುತ್ತದೆ. ಆದರೆ ಬ್ರಹ್ಮಪುತ್ರ ನದಿ ಪುರುಷವಾಚಕವಾಗಿದೆ)

ಬುದ್ಧಿ ಅವ್ಯಾಕೃತ ಪ್ರಾಣ ಪ್ರಾಣಧಾರಿಯಾದ ಜೀವ, ಜೀವನಿಗಿಂತ ಪರತರವಾದ ವಿಭುವು ಜನ್ಮವಿಕಾರ ಶೂನ್ಯವೂ ಆದ ತತ್ವ ನೀನೇ,

ನೀನು ಶಬ್ದ ಸ್ಪರ್ಶಾದಿರಹಿತನಾಗಿರುವೆ ಜರಾವರ್ಜಿತವೂ ಆಜ್ಞೇವೂ ಕ್ಷಯರಹಿತವೂ, ವೃದ್ಧಿನಾಶಗಳಿಲ್ಲದ್ದೂ ಆದ್ಯಂತರಹಿತನೂ ಆದ ಬ್ರಹ್ಮ ವಸ್ತುವು ನೀನೇ, ದೇವತೆಗಳು, ಪಿತೃಗಳ ಯಕ್ಷ ಗಂಧರ್ವ ಕಿನ್ನರರು, ಸಿದ್ಧರು, ಅಪ್ಸರೆಯರು ಮನುಷ್ಯ, ಪಶುಪಕ್ಷಿ ಮೃಗಗಳು ಎಲ್ಲವೂ ನಿನ್ನಿಂದ ಹುಟ್ಟಿವೆ. ಸರೀಸೃಪಗಳು ಸಕಲ ಜಂತುಗಳು ವೃಕ್ಷಗಳು, ಹಿಂದೆ ಇದ್ದದ್ದು ಮುಂದೆ ಆಗತಕ್ಕದ್ದು, ಸಕಲ ಚರಾಚರಗಳೂ ನಿನ್ನಿಂದ ಜನಿಸಿವೆ. ಹೇ ಸ್ವಾಮಿ, ಮೂರ್ತವೂ, ಅಮೂರ್ತವೂ, ಸ್ಥೂಲವೂ, ಸೂಕ್ಷ್ಮವೂ ಎಲ್ಲವೂ ನೀನೇ, ನೀನೇ ಈ ಜಗತ್ತಿನ ಕರ್ತಾ ನೀನಲ್ಲದೆ ಮತ್ತೊಂದು ವಸ್ತುವಿಲ್ಲ. ಹೇ ಭಗವಾನ್ ತಾಪತ್ರಯಗಳಿಂದ ಬಳಲುತ್ತ ಸಂಸಾರ ಚಕ್ರದಲ್ಲಿ ತೊಳಲುತ್ತಿರುವ ನನಗೆ ಎಲ್ಲೆಲ್ಲಿಯೂ ಮನಃಶಾಂತಿ ದೊರಕಲಿಲ್ಲ. ಹೇ ಸ್ವಾಮಿ ದುಃಖಗಳನ್ನೇ ಸುಖಗಳೆಂದು ತಿಳಿದು ಬರಮಾಡಿಕೊಂಡೆನು. ರಾಜ್ಯಾಧಿಕಾರ, ಪೃಥ್ವಿ, ಸೈನ್ಯ, ಭಂಡಾರ, ಮಿತ್ರರು, ಮಕ್ಕಳು, ಮಡದಿಯರು, ಭೃತ್ಯರು, ಶಬ್ದಸ್ಪರ್ಶಾದಿ ವಿಷಯಗಳು ಇವೆಲ್ಲವೂ ಅವಿನಾಶಿಗಳೆಂದು ಸುಖಕರವೆಂದು ನಾನು ಇದುವರೆಗೂ ಬಗೆದಿದ್ದೆನು. ಕಡೆಯಲ್ಲಿ ಅವೆಲ್ಲವೂ ನನಗೆ ದುಃಖಕರವಾಗಿ ಪರಿಣಮಿಸಿತು. ನಿನ್ನ ಮಾಯೆಯಿಂದ ಮೂಢಚಿತ್ತರಾದ ಜನರು ಹುಟ್ಟು, ಸಾವು, ಮುಪ್ಪು ಮುಂತಾದ ತಾಪಗಳನ್ನು ಅನುಭವಿಸಿ ಕಡೆಯಲ್ಲಿ ಯಮಲೋಕಕ್ಕೆ ಹೋಗುತ್ತಾರೆ. ಅನಂತರ ತಾವು ಮಾಡಿದ ಕರ್ಮಗಳಿಗೆ ಅನುಗುಣವಾಗಿ ನರಕಗಳಲ್ಲಿ ಅತಿದಾರುಣವಾದ ದುಃಖವನ್ನು ಅನುಭವಿಸುತ್ತಾರೆ. "ಪರಮೇಶ್ವರ ! ನಾನೂ ಸಹ ನಿನ್ನ ಮಾಯೆಯಿಂದ ಮೋಹಿತನಾಗಿ ಅತ್ಯಂತ ವಿಷಯಾಸಕ್ತನಾದೆನು. ಈಗ ಅದೆಲ್ಲವೂ ಅಶಾಶ್ವತವೆಂದು ತಿಳಿದು ಪರಮಪದ ಸ್ವರೂಪನಾದ ನಿನಗೆ ಶರಣಾಗಿದ್ದೇನೆ. ಮೋಕ್ಷಾಪೇಕ್ಷಿಯಾಗಿದ್ದೇನೆ" ಎಂದು ಮುಚುಕುಂದನು ಶ್ರೀಕೃಷ್ಣನಲ್ಲಿ ಶರಣಾದನು. ಭಗವಂತನನ್ನು ಹೀಗೆ ಸ್ತುತಿಸಲಾಗಿ ಶ್ರೀಹರಿಯು ಧೀಮಂತನಾದ ಮುಚುಕುಂದನಿಗೆ ಹೀಗೆ ಅಭಯಪ್ರಧಾನ ಮಾಡಿದನು. "ಮಹಾರಾಜ ಮುಚುಕುಂದ, ನಿನ್ನ ಇಷ್ಟಾರ್ಥದಂತೆ ದಿವ್ಯ ಲೋಕವನ್ನು ನೀನು ಪಡೆವೆ. ನನ್ನ ಪ್ರಸಾದದಿಂದ ನಿನಗೆ ಅವ್ಯಾಹತವಾದ ಪರಮೈಶ್ವರ್ಯವು ದೊರೆಯುವುದು. ದಿವ್ಯವಾದ ಮಹಾಭೋಗಗಳನ್ನು ಅನುಭವಿಸಿದ ನಂತರ

ನೀನು ಒಂದು ಮಹಾವಂಶದಲ್ಲಿ ಜನಿಸುವೆ. ಆಗ ನನ್ನ ಅನುಗ್ರಹದಿಂದ ನಿನಗೆ ಜನ್ಮಾಂತರ ಸ್ಮರಣೆ ಇರುವುದು. ನಂತರ ಮೋಕ್ಷಪಡೆಯುವೆ ಎಂದನು. (ಇಲ್ಲಿ ಶ್ರೀಕೃಷ್ಣನ ಅಭಿಪ್ರಾಯವೇನೆಂದರೆ ಮೊದಲು ಪುಣ್ಯದ ಫಲವನ್ನು ಅನುಭವಿಸಲಿ. ಅನಂತರ ಚಿತ್ತಶುದ್ಧಿಯಾಗುತ್ತದೆ. ಬ್ರಹ್ಮಜ್ಞಾನ ಉಂಟಾಗುತ್ತದೆ. ನಂತರ ಮೋಕ್ಷ ದೊರೆಯುತ್ತದೆ ಎಂದು ಅಭಿಪ್ರಾಯ).

ಆ ಒಂದು ಚಿತ್ತಶುದ್ಧಿಯನ್ನು ಅರಸಿ ಮುಚುಕುಂದನು ಗುಹೆಯಿಂದ ಹೊರಗೆ ಬಂದು ತಪಸ್ಸಿಗೆ ಹೋಗುತ್ತಾನೆ. ಅಲ್ಲಿ ಚಿಕ್ಕ ಚಿಕ್ಕ ಆಕಾರದ ಮನುಷ್ಯರನ್ನು ನೋಡಿ ಓಹೋ ಕಲಿಯುಗ ಬಂದೇಬಿಟ್ಟಿತು ಎಂದುಕೊಂಡು ನರನಾರಾಯಣರ ಆಶ್ರಮವಿದ್ದ ಗಂಧಮಾದನಗಿರಿಯನ್ನು ಕುರಿತು ತಪಸ್ಸಿಗಾಗಿ ಹೊರಟುಹೋದನು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ವಿಷಯವೇನೆಂದರೆ ಭಗವಂತ ಅಪೇಕ್ಷಿಸಿದರೆ ಭಕ್ತನನ್ನೇ ಅರಸುತ್ತಾ ಶರಣಾಗತರಾದವರನ್ನೇ ರಕ್ಷಿಸಲು ತಾನೇ ಭಕ್ತರ ಬಳಿ ಹೋಗುತ್ತಾನೆ. ಯಾವುದೇ ಐಶ್ವರ್ಯ, ಅಂತಸ್ತು, ಹೆಗ್ಗಳಿಕೆ ಯಾವುದೂ ಅವನಿಗೆ ಬೇಕಾಗಿಲ್ಲ ಭಕ್ತನ ಶ್ರೇಯಸ್ಸೇ ಅವನಿಗೆ ಮುಖ್ಯ ಎಂಬುದನ್ನು ಮುಚುಕುಂದನ ಚರಿತ್ರೆಯಿಂದ ನಾವು ತಿಳಿದುಕೊಳ್ಳಬಹುದು.

ಇತ್ತ ಬಲರಾಮನು ವ್ರಜಭೂಮಿಗೆ ಹೋಗಿ ಗೋಪ ಗೋಪಿಯರೊಡನೆ ಆನಂದದಿಂದ ಮದ್ಯಪಾನ ಮಾಡಿ, ಪಕ್ಕದಲ್ಲಿ ಹರಿಯುತ್ತಿದ್ದ ಯಮುನಾ ನದಿಯನ್ನು ಕೆಣಕಿದನು. ಎರಡು ತಿಂಗಳುಗಳ ಕಾಲ ವ್ರಜಭೂಮಿಯಲ್ಲಿ ವಿಹರಿಸುತ್ತಿದ್ದಾಗ, ಕೃಷ್ಣನ ಬಗ್ಗೆ ಎಲ್ಲ ಗೋಪ ಗೋಪಿಯರು ವಿಚಾರಿಸಿದರು. ನಂತರ ಬಲರಾಮನು ದ್ವಾರಕೆಗೆ ತೆರಳಿ ರೇವತನೆಂಬ ರಾಜನ ಮಗಳಾದ ರೇವತಿಯೆಂಬ ಕನ್ಯೆಯನ್ನು ಮದುವೆಯಾದನು. ಅವಳಲ್ಲಿ ಆತನಿಗೆ ನಿಶಠ, ಉಲ್ಮುಖ ಎಂಬ ಪುತ್ರರು ಜನಿಸಿದರು.

## ರುಕ್ಮಿಣಿ ಹರಣ

ಪರಾಶರರು ಮೈತ್ರೇಯರಿಗೆ ರುಕ್ಮಿಣಿಯನ್ನು ಶ್ರೀಕೃಷ್ಣ ಅಪಹರಿಸಿದ ಬಗೆಯನ್ನು ವಿವರಿಸಲು ಉದ್ಯುಕ್ತರಾದರು. ವಿದರ್ಭರಾಜ್ಯದ ಕುಂಡಿನಪುರದಲ್ಲಿ

ಭೀಷ್ಮಕನೆಂಬ ರಾಜನಿದ್ದನು. ಆತನಿಗೆ ರುಕ್ಮಿಯೆಂಬ ಮಗನೂ, ಹಾಗೂ ಬಹುಸುಂದರಿಯಾದ ರುಕ್ಮಿಣಿಯೆಂಬ ಮಗಳೂ ಇದ್ದರು. ಶ್ರೀಕೃಷ್ಣನು ರುಕ್ಮಿಣಿಯನ್ನು ಮಧುರಸ್ಮಿತೆಯಾದ ರುಕ್ಮಿಣಿಯು ಶ್ರೀಕೃಷ್ಣನನ್ನು ಪ್ರೇಮಿಸಿದರು. ಶ್ರೀಕೃಷ್ಣನು ರುಕ್ಮಿಣಿಯನ್ನು ಮದುವೆಯಾಗಲು ಯಾಚಿಸಿದರೂ ರುಕ್ಮಿಯು ಅವಳನ್ನು ಮದುವೆ ಮಾಡಿಕೊಡಲು ಒಪ್ಪಲಿಲ್ಲ. ಕಾರಣ ಅವನಿಗೆ ಶ್ರೀಕೃಷ್ಣನ ಮೇಲೆ ಬಹಳ ದ್ವೇಷವಿತ್ತು. ಅಷ್ಟೇ ಅಲ್ಲ, ಜರಾಸಂಧನ ಹಾಗು ರುಕ್ಮಿಯ ಪ್ರೇರಣೆಗೆ ಒಳಗಾಗಿ ಪರಾಕ್ರಮಿಯಾದ ಭೀಷ್ಮಕನು ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಟ್ಟು ವಿವಾಹಮಾಡಬೇಕೆಂದು ಉದ್ದೇಶಿಸಿದನು. ಆಗ ಶಿಶುಪಾಲನ ಹಿತೈಷಿಗಳಾದ ಜರಾಸಂಧನೇ ಮೊದಲಾದ ನೃಪಾಲರು ವಿವಾಹಕ್ಕೋಸ್ಕರ ಭೀಷ್ಮಕನ ಕುಂಡಿನಪುರಕ್ಕೆ ಹೊರಟುಹೋದರು. ಶ್ರೀಕೃಷ್ಣನೂ ಬಲರಾಮನ ಸಹಿತ ಅನೇಕ ಯಾದವರೊಂದಿಗೆ ಚೈದ್ಯರಾಜನಾದ ಶಿಶುಪಾಲನ ವಿವಾಹ ಮಹೋತ್ಸವವನ್ನು ನೋಡೋಣ ಎಂದು ಕುಂಡಿನಪುರಕ್ಕೆ ಹೊರಟರು. ರುಕ್ಮಿಣಿಗೆ ಶಿಶುಪಾಲನನ್ನು ಮದುವೆಯಾಗಲು ಇಷ್ಟವಿರಲಿಲ್ಲ. ಆದ್ದರಿಂದ ಅವಳು ಮನದಳಲನ್ನು ಪರಿಹರಿಸಬೇಕೆಂದು ಪತ್ರ ಬರೆದು ಕಳುಹಿಸಿ ಪ್ರಸಂಗ ಭಾಗವತದಲ್ಲಿ ಬಂದಿದೆ. ಅನಂತರ ಕೃಷ್ಣನು

**ಶೋಭಾವಿನಿ ವಿವಾಹೇತು ತಾಂ ಕನ್ಯಾಂ ಹೃತವಾನ್ ಹರಿಃ**

**ವಿಪಕ್ಷಭಾರ ಮಾಸಜ್ಯ ರಾಮಾದಿಷ್ವಥ ಬಂದುಷು**

**ತತಶ್ಚ ಪೌಂಡ್ರಕ ಶ್ರೀಮನ್ ದಂತವಕ್ರೋ ವಿದೂರಥಃ**

**ಶಿಶುಪಾಲ ಜರಾಸಂಧ ಸಾಲ್ವಾದ್ಯಾಶ್ಚ ಮಹೀಭೃತಃ**

(ವಿ.ಪು. 2ನೇ ಸಂ. ಅ.4 ಪಂಶ್ಲೋ 6–7)

ಇನ್ನೇನು ನಾಳೆ ವಿವಾಹವೆಂದಿರುವಾಗ, ವೈರಿಗಳನ್ನು ಎದುರಿಸುವ ಭಾರವನ್ನು ಬಲಭದ್ರಾದಿ ಯದುಬಂಧುಗಳಿಗೆ ವಹಿಸಿ, ಶ್ರೀಕೃಷ್ಣನು ಆ ಕನ್ಯೆಯನ್ನು ಅಪಹರಸಿಕೊಂಡು ಹೋದನು. ಆಗ ಪೌಂಡ್ರಕ, ದಂತವಕ್ರ, ವಿದೂರಥ, ಶಿಶುಪಾಲ, ಜರಾಸಂಧ, ಸಾಲ್ವ ಮುಂತಾದ ನೃಪಾಲರು ಕುಪಿತರಾಗಿ ಶ್ರೀಕೃಷ್ಣನನ್ನು ಕೊಲ್ಲಬೇಕೆಂದು ಮಹತ್ತರವಾದ ಪ್ರಯತ್ನವನ್ನು

ನಡೆಸಿದರು. ಆದರೆ  ಬಲರಾಮನೇ ಮೊದಲಾದ ಯದುಪುಂಗವರೊಡನೆ ಯುದ್ಧದಲ್ಲಿ ಸೋತುಹೋದರು. ಆಗ ರುಕ್ಮಿಯು "ಕೇಶವನನ್ನು ಸಂಹರಿದೆ ಕುಂಡಿನಪುರವನ್ನು ಪ್ರವೇಶಿಸುವುದಿಲ್ಲ" ಎಂದು  ಶ್ರೀಕೃಷ್ಣನನ್ನು ಕೊಲ್ಲುತ್ತೇನೆ ಎಂದು ಪ್ರತಿಜ್ಞೆ ಮಾಡಿ, ಅವನ ಬೆನ್ನಟ್ಟಿ ಹೋದನು. ಶ್ರೀಕೃಷ್ಣನ ರುಕ್ಮಿಯ ಗಜಾಶ್ವರಥ ಪದಾತಿಸಂಕುಲವಾದ ಸೇನೆಯನ್ನು ಲೀಲೆಯಿಂದ ಸಂಹರಿಸಿ ರುಕ್ಮಿಯನ್ನು ಪರಾಜಯಗೊಳಿಸಿ ನೆಲದ ಮೇಲೆ ಉರುಳಿಸಿದನು. ಆದರೆ ಕೊಲ್ಲಲಿಲ್ಲ, ಕಾರಣ ಅವನು ರುಕ್ಮಿಣಿಯ ಸಹೋದರ ಎಂಬ ಮರುಕ ಭಾವನೆ. ಶ್ರೀಕೃಷ್ಣನಲ್ಲಿ ಇದ್ದಿತು. ಹೀಗೆ ರುಕ್ಮಿಯನ್ನು ಜಯಿಸಿ ಮಧುಸೂದನನು ರಾಕ್ಷಸ ವಿಧಾನದಿಂದ ಅಪಹರಿಸಿ ತಂದಿದ್ದ ರುಕ್ಮಿಣಿಯನ್ನು ಸರಿಯಾದ ರೀತಿಯಲ್ಲಿ ಅಂದರೆ  ಶಾಸ್ತ್ರೋಕ್ತ ಪ್ರಕಾರವಾಗಿ ವಿವಾಹವಾದನು.

**ನಿರ್ಜಿತ್ಯ ರುಕ್ಮಿಣಿಂ ಸಮ್ಯಗುಪಯೇ ಮೇ ಚ ರುಕ್ಮಿಣಿಮ್ ।**
**ರಾಕ್ಷಸೇನ ವಿವಾಹೇನ ಸಂಪ್ರಾಪ್ತಾಂ ಮಧುಸೂಧನಃ ॥**

**ತಸ್ಯಾಂ ಜಜ್ಞೇ ಚ ಪ್ರದ್ಯುಮ್ನೋ ಮದನಾಂಶಸ್ಸವೀರ್ಯವಾನ್**
**ಜಹಾರ ಶಂಬರೋ ಯಂ ವೈ ಯೋ ಜಘಾನ ಚ ಶಂಬರಮ್ ॥**

(ವಿ. ಪು. 2ನೇ ಸಂ. ಪಂಚಮಾಂಶ ಅ. 20 ಶ್ಲೋ11–12)

ಹೀಗೆ ಮದುವೆಯಾಗಲು ಶ್ರೀಕೃಷ್ಣ – ರುಕ್ಮಿಣಿಯರಿಗೆ ಪ್ರದ್ಯುಮ್ನ ಎಂಬ ವೀರನಾದ ಪುತ್ರನು ಜನಿಸಿದನು. ಅವನನ್ನು ಒಮ್ಮೆ ಶಂಬರಾಸುರನೆಂಬ ರಾಕ್ಷಸನು ಅಪಹರಿಸಲಾಗಿ, ಆತನನ್ನು ಪ್ರದ್ಯುಮ್ನನು ವಧಿಸಿದನು. ಈ ಶಂಬರಾಸುರ ವಧೆಯೇ ಒಂದು ರೋಚಕ ಪ್ರಸಂಗ ಅದನ್ನು ವಿವರವಾಗಿ ತಿಳಿಯೋಣ ಎಂದು ಮೈತ್ರೇಯನು ಕೇಳಲಾಗಿ ಪರಾಶರರು ವಿವರಿಸಲು ಉದ್ಯುಕ್ತರಾದರು.

# ಶಂಬರಾಸುರನ ವೃತ್ತಾಂತ

ಈ ಹಿಂದೆ ಹೇಳಿದಂತೆ ಶಂಬರಾಸುರನು ಒಬ್ಬ ದುಷ್ಟರಾಕ್ಷಸನ ಶ್ರೀಕೃಷ್ಣನ ಮಗನಾದ ಪ್ರದ್ಯುಮ್ನನಿಂದ ತನಗೆ ಸಾವು ಬರುತ್ತದೆ ಎಂಬುದನ್ನು ಈ ಮೊದಲೇ ತಿಳಿದಿದ್ದನು. ಆದ್ದರಿಂದ ಪ್ರದ್ಯುಮ್ನನು ಹುಟ್ಟಿ ಆರು ದಿನವಾಗಿದ್ದಿತು. 'ಈತನು ನನ್ನನ್ನು ಕೊಲ್ಲತಕ್ಕವನು' ಎಂದರಿತು ಯಮಸ್ವರೂಪನಾದ ಶಂಬರಾಸುರನು ಆ ಮಗುವನ್ನು ಬಾಣಂತಿ ಮನೆಯಿಂದಲೇ ಅಪಹರಿಸಿಬಿಟ್ಟನು. ಅವನನ್ನು ಅಪಹರಿಸಿಕೊಂಡು ಹೋಗಿ ಆ ಶಿಶುವನ್ನು ತರಂಗಮಾಲೆಗಳ ಆವರ್ತಗಳಿಂದ ಅತ್ಯಂತ ಘೋರವೂ ಆದ, ಮೊಸಳೆ ತಿಮಿಂಗಿಲಗಳಿಂದ ತುಂಬಿದ್ದೂ ಆದ ಸಮುದ್ರದಲ್ಲಿ ಎಸೆದನು ! ಆ ಶಿಶುವನ್ನು ಒಂದು ಮೀನು ನುಂಗಿತು. ಆ ಮೀನಿನ ಜಠರಾಗ್ನಿಯಲ್ಲಿ ಸಿಕ್ಕಿದರೂ ಆ ಬಾಲಕನು ಸಾಯಲಿಲ್ಲ. ಮೀನುಗಾರರು ಆ ಮೀನನ್ನು ಇತರ ಮೀನುಗಳೊಡನೆ ಹಿಡಿದು ಶಂಬರಾಸುರನಿಗೆ (ಅಡಿಗೆಗಾಗಿ) ಒಪ್ಪಿಸಿದನು. ಶಂಬರನಿಗೆ ಮಾಯಾವತಿ ಎಂಬ ಪತ್ನಿಯಿದ್ದಳು. ಅಂತಃಪುರಕ್ಕೆ ಒಡತಿಯೂ ಅತ್ಯಂತ ಲಕ್ಷಣ ಸಂಪನ್ನೆಯೂ ಆದ ಅವಳು ಅಡಿಗೆಯವರ ಮೇಲಿನ ಆಧಿಪತ್ಯ (ಮೇಲುಸ್ತುವಾರಿ)ವನ್ನು ನೋಡಿಕೊಂಡಿದ್ದಳು. ಹೀಗಿರುವಲ್ಲಿ ಆ ಮೀನಿನ ಹೊಟ್ಟೆಯನ್ನು ಸೀಳಿದಾಗ ಅತ್ಯಂತ ಸುಂದರಾಕೃತಿಯ ಬಾಲಕನು ಗೋಚರಿಸಿದನು. (ಈ ಹಿಂದೆ ರುದ್ರನ ಕೋಪಾಗ್ನಿಯಿಂದ ದಗ್ಧನಾದ ಮನ್ಮಥನೆಂಬ ವೃಕ್ಷದ ಮೊದಲನೆಯ ಚಿಗುರು ಆ ಬಾಲಕ) "ಆ ಮಗುವನ್ನು ನೋಡಿ ಬಾಲಕ ಮೀನಿನ ಹೊಟ್ಟೆಯಲ್ಲಿ ಹೇಗೆ ಸೇರಿದ" ಎಂದು ಮಾಯಾವತಿಯು ಆಶ್ಚರ್ಯಚಕಿತಳಾದಳು. ಆಗ ನಾರದ ಮುನಿಗಳು ಬಂದು "ಎಲೌ ಸುಭ್ರು ಸಮಸ್ತ ಜಗತ್ತುಗಳ ಸ್ಥಿತಿ ಸಂಹಾರಗಳಿಗೆ ಕರ್ತನಾದ ವಿಷ್ಣುವಿನ ಪುತ್ರನಿವನು. ಶಂಬರಾಸುರನು ಇವನನ್ನು ಸೂತಿಕಾಗೃಹದಿಂದ ಅಪಹರಿಸಿ ಸಮುದ್ರದಲ್ಲಿ ಎಸೆದಿದ್ದನು. ಅಲ್ಲಿ ಮೀನು ನುಂಗಿದ್ದರಿಂದ ನಿನ್ನ ಮನೆಯನ್ನು ಸೇರಿದ್ದಾನೆ. ಈ ಬಾಲಕನೊಬ್ಬ ಪುರುಷರತ್ನವೆಂದು ತಿಳಿ. ರಹಸ್ಯವಾಗಿ ಇವನನ್ನು ಪರಿಪಾಲಿಸು" ಎಂದರು. ನಾರದರು ಹೇಳಿದಂತೆ ಮಾಯಾವತಿಯು ಆ ಮಗುವನ್ನು ಸಾಕಿದಳು. ಬಾಲ್ಯದಿಂದಲೇ ಅದರ ರೂಪಾತಿಶಯವನ್ನು ಕಂಡು ಅವಳು ಮುಗ್ಧಳಾಗಿದ್ದಳು. ಬಾಲಕನು

ನವಯೌವನವನ್ನು ಪಡೆದ ಮೇಲಂತೂ ಮಾಯಾವತಿಯು ಅವನಲ್ಲಿ ಅನುರಾಗವನ್ನಿಟ್ಟಳು. ಅಷ್ಟೇ ಅಲ್ಲದೆ ಸಕಲಮಾಯಾ ವಿದ್ಯೆಗಳನ್ನು ಅವನಿಗೆ ಕಲಿಸಿಕೊಟ್ಟಳು. ದಿನದಿನಕ್ಕೆ ಅವಳಿಗೆ ಪ್ರದ್ಯುಮ್ನನ ಮೇಲೆ ಮೋಹ ಹೆಚ್ಚಾಯಿತು. ಇದನ್ನು ಗಮನಿಸಿದ ಪ್ರದ್ಯುಮ್ನನು "ನಿನ್ನ ತಾಯ್ತನವನ್ನು ತೊರೆದು ಇಂದು ಇದೇನು ಹೀಗೆ ಬೇರೆ ರೀತಿಯಲ್ಲಿ ವರ್ತಿಸುತ್ತಿರುವೆ ? ಎಂದು ಕೇಳಿದನು. ಆಗ ಮಾಯಾವತಿಯು "ನೀನು ನನ್ನ ಮಗನಲ್ಲ ಶ್ರೀಕೃಷ್ಣನ ಮಗ. ಆ ಶಂಬರನು ನಿನ್ನನ್ನು ಅಪಹರಿಸಿ ಸಮುದ್ರದಲ್ಲಿ ಎಸೆದನು. ಮೀನು ನುಂಗಿದ್ದರಿಂದ ಅದರ ಹೊಟ್ಟೆಯಲ್ಲಿದ್ದ ನೀನು ನನಗೆ ದೊರಕಿದೆ. ಹೇ ಕಾಂತ! ಅತ್ಯಂತ ವಾತ್ಸಲ್ಯವನ್ನು ಇಟ್ಟಿರುವ ನಿನ್ನ ತಾಯಿ ಈಗಲೂ ನಿನಗಾಗಿ ಅಳುತ್ತಿದ್ದಾಳೆ" ಎಂದಳು. ಈ ಮಾತನ್ನು ಕೇಳಿದ ಮಹಾಬಲನಾದ ಪ್ರದ್ಯುಮ್ನನು ಕ್ರೋಧಾಂಧನಾಗಿ ಶಂಬರಾಸುರನನ್ನು ಯುದ್ಧಕ್ಕೆ ಆಹ್ವಾನಿಸಿದನು. ಯುದ್ಧದಲ್ಲಿ ಆ ದೈತ್ಯನ ಸಮಸ್ತ ಸೈನ್ಯಗಳನ್ನು ಸಂಹರಿಸಿ, ಆತನ ಏಳು ಮಾಯಾವಿದ್ಯೆಗಳನ್ನು ಗೆದ್ದು ತನ್ನದೇ ಆದ ಎಂಟನೆಯ ಮಾಯಾವಿದ್ಯೆಯನ್ನು ಪ್ರಯೋಗಿಸಿದನು. ಆ ಮಾಯಾಶಕ್ತಿಯಿಂದ ಪ್ರದ್ಯುಮ್ನನು ಶಂಬರಾಸುರನನ್ನು ವಧಿಸಿ ಮಾಯವತಿಯೊಡನೆ ಗಗನಮಾರ್ಗಕ್ಕೆ ಹಾರಿ ಅವಳನ್ನು ಕರೆದುಕೊಂಡು ತನ್ನ ತಂದೆ– ಶ್ರೀಕೃಷ್ಣನ ನಗರವಾದ ದ್ವಾರಕೆಗೆ ಬಂದನು. ಮಾಯಾವತಿಯೊಡನೆ ಅಂತಃಪುರಕ್ಕೆ ಬಂದಿಳಿದು ಪ್ರದ್ಯುಮ್ನನನ್ನು ನೋಡಿ ಶ್ರೀಕೃಷ್ಣನ ಅಂತಃಪುರಸ್ತ್ರೀಯರು ಶ್ರೀಕೃಷ್ಣನೆಂದೇ ಭ್ರಮಿಸಿದರು. ಆದರೆ ಸಾಧ್ವಿಯಾದ ರುಕ್ಮಿಣಿಯು ಪುತ್ರನನ್ನು ನೋಡಿ ಕಣ್ಣಲ್ಲಿ ನೀರು ತುಂಬಿಕೊಂಡು "ಯಾವಳೋ ಪುಣ್ಯಾತ್ಮಳ ಪುತ್ರನಿವನು ಬದುಕಿದ್ದರೆ ಇಷ್ಟೇ ವಯಸ್ಸಾಗಿರುತ್ತದೆ" ಎಂದುಕೊಂಡಳು. ಅನಂತರ ಆ ಪ್ರದ್ಯುಮ್ನನನ್ನು ಕುರಿತು "ವತ್ಸ ನಿನ್ನ ತಾಯಿ ಭಾಗ್ಯಶಾಲಿನಿ ನಿನ್ನಿಂದ ಭೂಷಿತಳಾದ ಆ ತಾಯಿ ಯಾರು ? ನಿನ್ನಲ್ಲಿ ನನಗೆ ಹೊಮ್ಮುತ್ತಿರುವ ಸ್ನೇಹವನ್ನು ಹಾಗೂ ನಿನ್ನ ಆಕೃತಿಯನ್ನು ಕಂಡರೆ ವತ್ಸ ನಿಶ್ಚಯವಾಗಿ ನೀನು ಕೃಷ್ಣನ ಪುತ್ರನೇ ಹೌದು" ಎಂದಳು, "ಕಣ್ಣರಿಯದುದನ್ನು ಕರುಳು ಅರಿಯುತ್ತದೆ" ಎಂಬ ನಾಣ್ಣುಡಿ ಅದೆಷ್ಟು ಸತ್ಯ ಎಂಬುದನ್ನು ನಾವು ಕಂಡುಕೊಳ್ಳಬಹುದು. ಈ ಸಮಯಕ್ಕೆ ಸರಿಯಾಗಿ ಶ್ರೀಕೃಷ್ಣನೊಡನೆ ನಾರದರು ಆಗಮಿಸಿದರು. ಅಂತಃಪುರಸ್ತ್ರೀಯರೊಡನೆ

ಇದ್ದ ರುಕ್ಮಿಣದೇವಿಗೆ ಹರ್ಷವಾಗುವಂತೆ ನಾರದರು ಹೇ ಸೌಮ್ಯೆ ಈತನು ನಿನ್ನ ಪುತ್ರನೇ ! ಶಂಬರಾಸುರನನ್ನು ಸಂಹರಿಸಿ ಬಂದಿದ್ದಾನೆ. ಆ ಅಸುರನು ನಿನ್ನ ಸೂತಿಕಾಗೃಹದಿಂದ ಶಿಶುವನ್ನು ಅಪಹರಿಸಿದ್ದನು, ಪತಿವ್ರತೆಯಾದ ಈ ಮಾಯಾವತಿಯು ನಿನ್ನ ಪುತ್ರನ ಮಡದಿಯೆಂದು ತಿಳಿ. ಇವಳು ಶಂಬರಾಸುರನ ಮಡದಿಯಲ್ಲ ಕಾರಣವೇನೆಂಬುದನ್ನು ಕೇಳು. ಹಿಂದೆ ಒಮ್ಮೆ ಮನ್ಮಥನು ರುದ್ರನ ಕೋಪಾಗ್ನಿಯಿಂದ ನಾಶವಾದ ಮೇಲೆ, ಆತನ ಪುನರ್ಜನ್ಮವನ್ನು ಪ್ರತೀಕ್ಷಿಸುತ್ತಿದ್ದ ರತಿಯು ಮಾಯಾಮಯವಾದ ರೂಪವನ್ನು ಧರಿಸಿ ಶಂಬರಾಸುರನನ್ನು ಮೋಹಗೊಳಿಸಿದಳು. ವಿಹಾರಾದಿ ಭೋಗಕಾಲಗಳಲ್ಲಿ ಈ ಮದಿರೇಕ್ಷಣೆಯು ಮಾಯಿಕವಾದ ರೂಪವನ್ನುಧರಿಸಿ ಶಂಬರಾಸುರರನ್ನು ಕಾಣುತ್ತಿದ್ದಳು ದೇವಿ. ಆ ಮನ್ಮಥನೇ ನಿನಗೆ ಪುತ್ರನಾಗಿ ಹುಟ್ಟಿದ್ದಾನೆ. ಅವನ ಕಾಂತೆಯಾದ ರತಿಯೇ ಈ ಮಾಯಾವತಿ ಇದರಲ್ಲಿ ಯಾವ ಸಂದೇಹವೂ ಬೇಡ. ಇವಳನ್ನು ನಿನ್ನ ಸೊಸೆಯೆಂದು ತಿಳಿ" ಎಂದರು. ಆಗ ರುಕ್ಮಿಣಿಯೂ ಶ್ರೀಕೃಷ್ಣನೂ ಆನಂದಪರವಶರಾದರು. ಈ ವಿಷಯವನ್ನು ತಿಳಿದು ಸಮಸ್ತ ಪೌರಜನರು ಹರ್ಷೋದ್ಗಾರ ಮಾಡಿದರು. ಚಿರಕಾಲ ಕಣ್ಮರೆಯಾಗಿದ್ದ ಪ್ರದ್ಯುಮ್ನನನ್ನು ಕಂಡು ವಿಸ್ಮಿತರಾದರು, ಜನರೆಲ್ಲಾ ತಾಯಿ=ತಂದೆ–ಮಗ–ಸೊಸೆ– ಎಲ್ಲರಿಗೂ ಮಂಗಳವನ್ನು ಹಾರೈಸಿದರು.

## ಅನಿರುದ್ಧನ ವಿವಾಹ

ಪರಾಶರರು ಮೈತ್ರೇಯರಿಗೆ ಅನಿರುದ್ಧನ ವಿವಾಹದ ಬಗ್ಗೆ ವಿವರಿಸಿದರು. ರುಕ್ಮಿಣಿಗೆ ಪ್ರದ್ಯುಮ್ನನಲ್ಲದೆ ಚಾರುದೇಷ್ಣ, ಸುದೇಷ್ಣ, ಚಾರುದೇಹ, ಸುಷೇಣ, ಚಾರುಗುಪ್ತ, ಭದ್ರಚಾರು, ಚಾರುವಿಂದ, ಸುಚಾರು, ಬಲಿಷ್ಟನಾದ ಚಾರು ಎಂಬ ಪುತ್ರರು ಚಾರುಮತಿಯೆಂಬ ಪುತ್ರಿಯೂ ಜನಿಸಿದರು.

ಶ್ರೀಕೃಷ್ಣನಿಗೆ ಅಷ್ಟಮಹಿಷಿಯರಿದ್ದರು. ಆ ರಾಣಿಯರ ಹೆಸರೇನೆಂದರೆ ಕಾಲಿಂದೀ, ಮಿತ್ರವಿಂದ, ಸತ್ಯಾ, ಜಾಂಬವತಿದೇವಿ, ರೋಹಿಣಿ, ಭದ್ರಾ, ಸತ್ಯಭಾಮ, ಲಕ್ಷ್ಮಣಾ ಇಷ್ಟೇ, ಇಲ್ಲದೆ ಶ್ರೀ ಕೃಷ್ಣನಿಗೆ ಹದಿನಾರುಸಾವಿರ ಮಡದಿಯರು ಇದ್ದರು. ಮಹಾವೀರನಾದ ಪ್ರದ್ಯುಮ್ನನು ರುಕ್ಮಿಯ ಸುಂದರಿಯಪುತ್ರಿ ರುಕ್ಮವತಿಯನ್ನು ಸ್ವಯಂವರದಲ್ಲಿ ಪರಸ್ಪರ ವರಿಸಿ

ವಿವಾಹವಾದರು, ಪ್ರದ್ಯುಮ್ನನಿಗೆ ಪತ್ನಿಯಲ್ಲಿ ಅತ್ಯಂತ ಬಲಿಷ್ಠನೂ ಸಂಗ್ರಾಮದಲ್ಲಿ ಎಣೆಯಿಲ್ಲದ ಸಾಮರ್ಥ್ಯವುಳ್ಳವನೂ, ವೈರಿವಿಧ್ವಂಸಕನೂ ಆದ ಅನಿರುದ್ಧ ಎಂಬ ಪುತ್ರನು ಜನಿಸಿದನು. ಅನಿರುದ್ಧನಿಗೆ ರುಕ್ಮಿಯ ಪೌತ್ರಿಯನ್ನು (ಅಂದರೆ ರೋಚನಾ ಎಂಬ ಹೆಸರಿನ ಮೊಮ್ಮಗಳನ್ನು) ಮದುವೆ ಮಾಡಿಕೊಡಬೇಕೆಂದು ಬಯಸಿದನು. ಆಗ ರುಕ್ಮಿಗೆ ಶ್ರೀಕೃಷ್ಣನೊಡನೆ ವೈರವಿದ್ದರೂ ಸಹ ತನ್ನ ಮಗಳ ಮಗನಾದ ಅನಿರುದ್ಧನಿಗೆ ತನ್ನ ಪೌತ್ರಿಯನ್ನು ವಿವಾಹ ಮಾಡಿಕೊಡಲು ರುಕ್ಮಿಯು ಒಪ್ಪಿದನು. ಅನಿರುದ್ಧನ ವಿವಾಹವಾದ ನಂತರ ಸಭೆಯಲ್ಲಿ ನೆರೆದಿದ್ದ ಕಲಿಂಗರಾಜನೇ ಮೊದಲಾದ ಪ್ರಮುಖರು ರುಕ್ಮಿಯನ್ನು ಕುರಿತು "ಎಲೈ ಮಿತ್ರ ಈ ಬಲರಾಮನಿಗೆ ದ್ಯೂತಕ್ರೀಡೆ ಎಂದರೆ ಏನೂ ಗೊತ್ತಿಲ್ಲ. ಆದರೂ ಅದರಲ್ಲಿ ಬಹಳ ಆಸಕ್ತಿ ಇವನಿಗಿದೆ. ಜೂಜಿನಲ್ಲಾದರೂ ನಾವು ಈತನನ್ನು ಗೆಲ್ಲಬಹುದು. ಎಂದು ಪ್ರಚೋದಿಸಿದರು. ಮದಾಂಧನಾದ ರುಕ್ಮಿಯು ಆಗಲಿ ಎಂದು ನುಡಿದು ಸಭೆಯಲ್ಲಿ ಬಲರಾಮನೊಂದಿಗೆ ಪಗಡೆಯ ಜೂಜಾಟವನ್ನಾಡಲು ಆರಂಭಿಸಿದನು. ಮೊದಲು ಒಂದು ಸಾವಿರ ನಿಷ್ಕಗಳನ್ನು (ಸುವರ್ಣ ನಾಣ್ಯಗಳು) ಪಣವಾಗಿಟ್ಟು ಆಡಲಾರಂಭಿಸಿದರು. ಇದರಲ್ಲಿ ರುಕ್ಮಿಯು ಬಲರಾಮನನ್ನು ಸೋಲಿಸಿ ಆ ಹಣವನ್ನು ಗೆದ್ದನು. ಎರಡನೆಯ ಆಟದಲ್ಲಿಯೂ ಬಲರಾಮನು ಒಂದು ಸಾವಿರ ನಿಷ್ಟಗಳನ್ನು ಪಣವಾಗಿಟ್ಟು ಸೋತನು. ಜೂಜಿನ ಮದ ಯಾರನ್ನೂ ಬಿಟ್ಟೀತು. ಅನಂತರ ಬಲರಾಮನು ಹತ್ತು ಸಾವಿರ ನಿಷ್ಟಗಳನ್ನು ಪಣವಾಗಿಟ್ಟನು. ದ್ಯೂತದಲ್ಲಿ ಅತ್ಯಂತ ನಿಪುಣನಾದ ರುಕ್ಮಿಯು ಅದನ್ನು ಗೆದ್ದನು. ಇದನ್ನು ಕಂಡ ಕಳಿಂಗರಾಜನು ಬಲರಾಮನನ್ನು ಅಣಕಿಸಿ ಹಲ್ಲು ಕಿಸಿದು ಜೋರಾಗಿ ನಕ್ಕನು. ಮೂಢನಾದ ರುಕ್ಮಿಯೂ ಸಹ ಮದೋದ್ಧತನಾಗಿ ಹೀಗೆ ಹೇಳಿದನು. ಈ ಬಲರಾಮನಿಗೆ ಪಗಡೆಯಾಟದ ಪರಿಚಯವೇ ಇಲ್ಲ. ಸೋತುಹೋದ ತಾನು ಅಕ್ಷಕ್ರೀಡಾಪಟುಯೆಂದು ಸುಳ್ಳು ಜಂಬಕೊಚ್ಚಿಕೊಳ್ಳುತ್ತಾನೆ. ಅಕ್ಷ ನಿಪುಣರನ್ನೆಲ್ಲಾ ಅವಮಾನ ಮಾಡುತ್ತಾನೆ" ಎಂದು ಹಂಗಿಸಿ ಮಾತನಾಡಿದನು. ಇವರಿಬ್ಬರ ನಗುವನ್ನು ಹಾಸ್ಯದ ಮಾತುಗಳನ್ನು ಕೇಳಿ ಬಲರಾಮನು ಕ್ರುದ್ಧನಾದನು. ಕೋಪಾವಿಷ್ಟನಾದ ಬಲರಾಮನು ಒಂದು ಕೋಟಿ ಸುವರ್ಣನಾಣ್ಯಗಳನ್ನು ಪಣವಾಗಿ ಒಡ್ಡಿ

ದಾಳವನ್ನು ಹಾಕಿದನು. ರುಕ್ಮಿಯು ದಾಳವನ್ನೆಸೆದು  ಆಡಿದನು. ಅದರಲ್ಲಿ ಬಲರಾಮನಿಗೆ ಜಯವಾಯಿತು. ಅವನು "ನಾನು ಜಯಿಸಿದೆ" ಎಂದು ಗಟ್ಟಿಯಾಗಿ ಹಳಿದನು. ಅಷ್ಟೇ ಗಟ್ಟಿಯಾಗಿ ರುಕ್ಮಿಯೂ 'ನಾನೂ ಜಯಿಸಿದೆ' ಎಂದು ಜೋರಾಗಿ ಕೂಗಿದನು. ಮತ್ತೊಮ್ಮೆ ಬಲರಾಮನನ್ನು ಕುರಿತು ನೀನು ಸುಳ್ಳು ಹೇಳಬೇಡ ಪಣವನ್ನು ನೀನು ಒಡ್ಡಿರುವುದು ನಿಜ. ಆದರೆ ನಾನು ಅದಕ್ಕೆ  ಒಪ್ಪಿಕೊಳ್ಳಲಿಲ್ಲವಲ್ಲಾ ಹೀಗಿರುವಾಗ ನೀನು ಜಯಿಸಿದ್ದು ಹೌದು ಎಂದಾದರೆ  ನಾನು ಜಯಿಸಿದ್ದು ಹೌದು ಎಂದಲ್ಲವೇ?  ಆಗ ಒಮ್ಮೆ ಅಂತರಿಕ್ಷದಲ್ಲಿ ಅಶರೀರವಾಣಿಯು "ನ್ಯಾಯವಾಗಿ ಬಲರಾಮ ಜಯಿಸಿದ್ದಾನೆ. ರುಕ್ಮಿ ಹೇಳುವುದು ಸತ್ಯವಲ್ಲ ಎಂದಿತು. ಮಹಾಬಲಶಾಲಿಯಾದ ಬಲರಾಮನು ಕೋಪಾವಿಷ್ಟನಾಗಿ ಆದ್ಯೂತದ ಮಣೆಯಿಂದಲೇ ರುಕ್ಮಿಯನ್ನು ಕುಟ್ಟಿ ಕೊಂದುಹಾಕಿದನು.  ಎಗರಾಡುತ್ತಿದ್ದ ಕಳಿಂಗ ರಾಜನನ್ನು ಬಲತ್ಕಾರವಾಗಿ ಹಿಡಿದು, ಅವನ ಹಲ್ಲುಗಳನ್ನು ಮುರಿದು ಹಾಕಿದನು. ಅಷ್ಟೇ ಅಲ್ಲ, ಬಲರಾಮನು ಅತ್ಯಂತ ರೋಷಾವೇಶದಿಂದ ಸುವರ್ಣಮಯವಾದ ಒಂದು ಮಹಾಸ್ತಂಭವನ್ನು ಎತ್ತಿಕೊಂಡು ರುಕ್ಮಿಯ ಪಕ್ಷಕ್ಕೆ ಸೇರಿದ್ದ ಎಲ್ಲ ರಾಜರನ್ನೂ ಬಡಿದು ಕೊಂದುಹಾಕಿದನು. ಎಲ್ಲೆಲ್ಲಿಯೂ ಹಾಹಾಕಾರವೆಬ್ಬಿತು. ಬಲರಾಮನ ಕೋಪಾವೇಶವನ್ನು ಕಂಡು ಹೆದರಿ ಇತರ ರಾಜರ ಚೆಲ್ಲಾಪಿಲ್ಲಿಯಾಗಿ ಓಡಿಹೋದರು. ಈ ಸಂದರ್ಭದಲ್ಲಿ ಶ್ರೀಕೃಷ್ಣನು ಯಾವ ಮಾತನ್ನು ಆಡಲಿಲ್ಲ. ಏಕೆಂದರೆ  ಅವನಿಗೆ ಒಂದು ಕಡೆ ರುಕ್ಮಿಣಿ ಏನು ಹೇಳುವಳೋ ಎಂಬ ಭಯ, ಮತ್ತೊಂದು ಕಡೆ ಬಲರಾಮನು ಸರಿಯಾಗಿ ಮಾಡಿದ್ದಾನೆ ಎಂಬುದನ್ನು ಹೇಳಲೂ ಭಯ. ಹೀಗಾಗಿ ಸುಮ್ಮನಿದ್ದನು. ನಂತರ ಅನಿರುದ್ಧನನ್ನು ಅವನ ಪತ್ನಿ ಸಮೇತ  ದ್ವಾರಕೆಗೆ ಕರೆದುಕೊಂಡು ಬಂದನು.

## ನರಕಾಸುರನ ಸಂಹಾರ

ಪರಾಶರರು ಮೈತ್ರೇಯರಿಗೆ ನರಕಾಸುರನ ಸಂಹಾರದ ಬಗ್ಗೆ ವಿವರವಾಗಿ ಹೀಗೆ ತಿಳಿಸಿದರು. ಶ್ರೀಕೃಷ್ಣನು ದ್ವಾರಾವತಿಯಲ್ಲಿ ವಾಸವಾಗಿರುವಾಗ ಒಮ್ಮೆ ತ್ರಿಭುವನೇಶ್ವರನಾದ ಇಂದ್ರನು ಮದಿಸಿದ ಐರಾವತವನ್ನೇರಿ ಅಲ್ಲಿಗೆ

ಬಂದನು. ಅವನು ಶ್ರೀಕೃಷ್ಣನಿಗೆ ನರಕಾಸುರನು ಮಾಡುತ್ತಿರುವ ಹಿಂಸೆಗಳನ್ನು ವಿವರಿಸಿದನು.

ಎಲೈ ಸ್ವಾಮಿ ಶ್ರೀಕೃಷ್ಣ, ನೀನು ಮನುಷ್ಯ ಜನ್ಮವನ್ನು ತಾಳಿ ದೇವತೆಗಳ ಸಕಲ ದುಃಖಗಳನ್ನೂ ಶಮನಮಾಡಿರುವೆ. ತಪಸ್ವಿಗಳು ಮಾಡುವ ಯಜ್ಞಗಳವಿಘ್ನಕ್ಕೆ ಕಾರಣರಾದ ಅರಿಷ್ಟನೇಮಿ, ಧೇನುಕಾಸುರ, ಕೇಶಿ ಮುಂತಾದವರನ್ನೆಲ್ಲಾ ನೀನು ಸಂಹರಿಸಿರುವೆ. ಕಂಸ, ಪೂತನಾ, ಕುವಲಯಾಪೀಡ ಮುಂತಾದ ಲೋಕಕಂಟಕರನ್ನು ನೀನು ಸಂಹರಿಸಿದೆ, ನಿಮ್ಮ ಅತುಲ ಪರಾಕ್ರಮದಿಂದ ಈ ಜಗತ್ರಯವು ರಕ್ಷಿಸಲ್ಪಟ್ಟ, ಯಾಜಕರು ಯಜ್ಞದಲ್ಲಿ ಅರ್ಪಿಸುವ ಹವಿರ್ಭಾಗಗಳಿಂದ ದೇವತೆಗಳು ತೃಪ್ತರಾಗಿರುತ್ತಾರೆ. ಆದರೂ ಈಗ ನಮಗೆ ಉಪದ್ರವವನ್ನು ಒಬ್ಬ ರಾಕ್ಷಸನು ಮಾಡುತ್ತಿದ್ದಾನೆ.

ಎಲೈ ಮಧುಸೂದನ ಭೂಮಿಪುತ್ರನೂ ಪ್ರಾಗ್ಜ್ಯೋತಿಷಪುರಕ್ಕೆ ಒಡೆಯನೂ ಆದ ನರಕಾಸುರ ಎಂಬ ರಾಕ್ಷಸನು ಇದ್ದಾನೆ. ಇವನು ಸರ್ವಜೀವಿಗಳಿಗೂ ಉಪದ್ರವವನ್ನು ಕೊಡುತ್ತಿದ್ದಾನೆ. ದೇವ, ಸಿದ್ಧ, ಅಸುರಾದಿಗಳ ಮತ್ತು ಭೂಲೋಕದ ರಾಜರ ಹೆಣ್ಣುಮಕ್ಕಳನ್ನು ಅಪಹರಿಸಿ ತನ್ನ ಅಂತಃಪುರದಲ್ಲಿ ಸೆರೆಯಲ್ಲಿ ಇಟ್ಟಿದ್ದಾನೆ. ವರುಣನ ಜಲಸ್ರಾವಿಯಾದ ಛತ್ರವನ್ನು ಮಂದರಪರ್ವತದ ಶೃಂಗವಾದ ಮಣಿಪರ್ವತವನ್ನು ಕಿತ್ತುಕೊಂಡು ಹೋಗಿದ್ದಾನೆ. ಶ್ರೀಕೃಷ್ಣ ಈ ದೈತ್ಯನು ನನ್ನ ತಾಯಿಯಾದ ಅದಿತಿಯ ದಿವ್ಯಕುಂಡಲಗಳನ್ನು ಅಪಹರಿಸಿದ್ದಾನೆ. ಈಗ ಐರಾವತಗಜವೂ ತನಗೆ ಬೇಕೆಂದು ಆಸೆಪಟ್ಟಿದಾನೆ. ಇವನ ಹಾವಳಿ ಬಹಳಷ್ಟು ಆಗಿದೆ. ಇದಕ್ಕೆ ಪ್ರತಿಕಾರವನ್ನು ನೀನೇ ಆಲೋಚಿಸಿ ಅದರಂತೆ ನಡೆದುಕೊಳ್ಳಿರಿ ಸ್ವಾಮಿ ಎಂದು ಇಂದ್ರನು ಕೃಷ್ಣನಿಗೆ ಸವಿನಯದಿಂದ ಪ್ರಾರ್ಥಿಸಿದನು. ದೇವಕಿ ಸುತನಾದ ಕೃಷ್ಣನು ಮುಗುಳ್ನಗೆ ಬೀರಿ ಇಂದ್ರನ ಕೈಹಿಡಿದುಕೊಂಡೇ ತನ್ನ ಪೀಠದಿಂದ ಎದ್ದನು.

ಗಗನಗಾಮಿಯಾದ ಗರುಡನನ್ನು ಸ್ಮರಿಸಿಕೊಂಡಾಕ್ಷಣ ಅವನು ಶ್ರೀಕೃಷ್ಣನ ಮುಂದೆ ಉಪಸ್ಥಿತನಾದನು. ಅನಂತರ ಸತ್ಯಭಾಮೆಯನ್ನು ಗರುಡನ ಮೇಲೆ ಕುಳ್ಳಿರಿಸಿಕೊಂಡು ಶ್ರೀಕೃಷ್ಣನು ಪ್ರಾಗ್ಜ್ಯೋತಿಷಪುರಕ್ಕೆ ಅಭಿಮುಖನಾಗಿ

ಹೊರಟನು. ನರಕಾಸುರನನ್ನು ಕೊಲ್ಲಲು ಸತ್ಯಭಾಮೆಯನ್ನು ಏಕೆ ಕರೆದುಕೊಂಡು ಹೋದನೆಂಬ ಸಂದೇಹ ನಮಗೆ ಉಂಟಾಗುತ್ತದೆ. ಅದಕ್ಕೆ ಪರಿಹಾರ ಹರಿವಂಶದಲ್ಲಿದೆ. ಅದೇನೆಂದರೆ ಒಮ್ಮೆ ನಾರದರು ಕೊಟ್ಟ ಪಾರಿಜಾತಪುಷ್ಪವನ್ನು ಶ್ರೀಕೃಷ್ಣನು ರುಕ್ಮಿಣಿಗೆ ಕೊಟ್ಟನು. ಅದಕ್ಕೆ ಸತ್ಯಭಾಮೆಯು ಕುಪಿತಳಾದಳು. ಅವಳಿಗೂ ಪಾರಿಜಾತ ಪುಷ್ಪವನ್ನು ಮಾತ್ರ ಏಕೆ ಪಾರಿಜಾತದ ಮರವನ್ನೇ ತಂದುಕೊಡುತ್ತೇನೆ ಎಂದು ಮಾತುಕೊಟ್ಟು ಅವಳನ್ನು ತನ್ನೊಡನೆ ಕರೆದೊಯ್ದನು. ವೃಕ್ಷವನ್ನು ತಂದುಕೊಟ್ಟು ಸತ್ಯಭಾಮೆಯ ಮನೆಯ ಹೂದೋಟದಲ್ಲಿ ನೆಟ್ಟು ಪಾರಿಜಾತ ಪುಷ್ಪವು ಹೂ ಬಿಡಲು ಆರಂಭಿಸಿದಾಗ ಹೂವೆಲ್ಲಾ ಪಕ್ಕದಲ್ಲಿದ್ದ ರುಕ್ಮಿಣಿಯ ಅಂಗಳಕ್ಕೆ ಬಿದ್ದುದ್ದು ಅಷ್ಟೇ ಅಲ್ಲದೆ ತಾನು ಯಾವುದೇ ಐಶ್ವರ್ಯ, ಬೊಕ್ಕಸ, ರೂಪ, ಬಿನ್ನಾಣಕ್ಕೆ ಮಾರುಹೋಗುವುದಿಲ್ಲ. ಕೇವಲ ಭಕ್ತಿಗೆ ಮಾತ್ರ ಪರವಶನಾಗುತ್ತೇನೆ ಎಂಬ ಸತ್ಯವನ್ನು (ಶ್ರೀಕೃಷ್ಣ ತುಲಾಭಾರದ ಮೂಲಕ) ಸತ್ಯಭಾಮೆಗೆ ತಿಳಿಯಪಡಿಸಿದ ವೃತ್ತಾಂತ ನಮಗೆ ತಿಳಿದಿದೆ.

ಇಂದ್ರನು ಐರಾವತವನ್ನೇರಿ ಸ್ವರ್ಗಲೋಕಕ್ಕೆ ತೆರಳಿದನು. ದ್ವಾರಕಾವಾಸಿಗಳು ನೋಡನೋಡುತ್ತಿರುವಾಗಲೇ ಶ್ರೀಕೃಷ್ಣನು ಪ್ರಾಗ್ಜ್ಯೋತಿಷಪುರಕ್ಕೆ ಪ್ರಯಾಣ ಮಾಡಿದನು. ಮುರನೆಂಬ ದೈತ್ಯನು ಕ್ಷುರದಂತೆ ತೀಕ್ಷ್ಣಾಗ್ರವುಳ್ಳಪಾಶಗಳನ್ನು ಪ್ರಾಗ್‌ಜ್ಯೋತಿಷಪುರದ ಸುತ್ತಲೂ ಹರಡಿ ರಕ್ಷಣೆಯನ್ನು ಒದಗಿಸಿದ್ದನು. ಶ್ರೀಕೃಷ್ಣನು ತನ್ನ ಸುದರ್ಶನ ಚಕ್ರವನ್ನು ಬಿಟ್ಟು ಆ ಪಾಶಗಳನ್ನೆಲ್ಲಾ ಕತ್ತರಿಸಿದನು. ಆಗ ಮುರನೇ ಸ್ವತಃ ಎದ್ದು ಬಂದಾಗ ಕೇಶವನು ಅವನನ್ನು ವಧಿಸಿದನು. ಆ ಕೃಷ್ಣನೇ ಮುರಾರಿ ಎನಿಸಿದನು.

**ತಾಂಶ್ಚಿ ಚ್ಛೇದ ಹರಿಃ ಪಾಶಾನ್ ಕ್ಷಿಪ್ತ್ವಾ ಚಕಂ ಸುದರ್ಶನಮ್**

**ತತೋ ಮುರಸ್ಸಮುತ್ತಸ್ಥೌ ತಂ ಜಘಾನ ಚ ಕೇಶವಃ**

**ಮುರಸ್ಯ ತನಯಾನ್ ಸಪ್ತ ಸಹಸ್ರಾಂ ಸ್ತ್ರಾಂ ಸ್ತತೊ ಹರಿಃ**

**ಚಕ್ರ ಧಾರಾಗ್ನಿ ನಿರ್ದಗ್ಧಾಂಶ್ಚಕಾರ ಶಲಭಾನಿವ**

**ಹತ್ವಾ ಮುರಂ ಹಯಗ್ರೀವಂ ತಥಾ ಪಂಚಜನಂದ್ವಿಜ**

**ಪ್ರಾಗ್ಜ್ಯೋತಿಷಪುರಂ ಧೀ ಮಾಂಸ್ತ್ವ ರಾವಾನ್‌ಸಮುಪಾದ್ರವತ್**

**ನರಕೇಣಾಸ್ಯ ತತ್ರಾ ಭೂನ್ಮ ಹಾಸೈನ್ಯೇನ ಸಂಯುಗಮ್**

**ಕೃಷ್ಣಸ್ಯ ಯತ್ರ ಗೋವಿಂದೋ ಜಘ್ನೇ ದೈತ್ಯಾನ್ ಸಹಸ್ರಶಃ**

**ಶಸ್ತ್ರಾಸ್ತ್ರವರ್ಷಂ ಮು ಚಂತಂ ತಂ ಭೌಮಂನರಕಂ ಬಲಂ**

**ಕ್ಷಿಪ್ತ್ವಾ ಚಕ್ರಂ ದ್ವಧಾ ಚಕ್ರೇ ಚಕ್ರೀ ರೈತೇಯ ಚಕ್ರಹಾ**

**ಹತೇ ತು ನರ ಭೂಮಿರ್ಗೃಹೀತ್ವಾದಿತಿ ಕುಂಡಲೇ**

**ಉಪತಸ್ಥೇ ಜಗನ್ನಾಥಂ ವಾಕ್ಯ ಚೇದಮಥಾಬ್ರವೀತ್**

(ವಿ.ಪು. 2ನೇ ಸಂ. ಪಂಚಮಾಂಸ ಅ.29 ಶ್ಲೋ 17ರಿಂದ 22)

ಅನಂತರ ಮುರದೈತ್ಯನ ಏಳು ಸಾವಿರ ಮಕ್ಕಳು ಯುದ್ಧಕ್ಕೆ ಬಂದು ನಿಂತಾಗ ಸುದರ್ಶನ ಚಕ್ರದ ಧಾರಾಗ್ನಿಯಲ್ಲಿ ದೀಪದ ಹುಳುಗಳಂತೆ ಬೆಂದು ಹೋದರು. ಹೀಗೆ ಮುರ, ಹಯಗ್ರೀವ (ರಾಕ್ಷಸ) ಪಂಚಜನರೆಂಬ ದೈತ್ಯರನ್ನು ಸಂಹರಿಸಿ ಧೀಮಂತನಾದ ಶ್ರೀಹರಿಯು ಪ್ರಾಗ್ಜ್ಯೋತಿಷಪುರವನ್ನು ಆಕ್ರಮಿಸಿದನು. ಆಗ ದೊಡ್ಡ ಸೇನೆಯೊಂದಿಗೆ ನರಕಾಸುರನು ಶ್ರೀಕೃಷ್ಣನನ್ನು ಎದುರಿಸಲು ಬಂದನು ನರಕಾಸುರನಿಗೂ, ಗೋವಿಂದನಿಗೂ ಘೋರಯುದ್ಧವಾಯಿತು. ಸಾವಿರಾರು ರಾಕ್ಷಸರನ್ನು ಕೃಷ್ಣನು ಸಂಹರಿಸಿದನು. ಭೂಮಿಪುತ್ರನಾದ ನರಕಾಸುರನು ಶಸ್ತ್ರಾಸ್ತ್ರಗಳ ಮಳೆಯನ್ನೇ ಸುರಿಸಿದನು. ದೈತ್ಯ ಚಕ್ರವನ್ನೇ ಧ್ವಂಸಗೊಳಿಸುವ ಬಲಾಢ್ಯನಾದ ಚಕ್ರಧರನು ಚಕ್ರಾಯುಧವನ್ನು ಪ್ರಯೋಗಿಸಿ ನರಕನ್ನು ಕತ್ತರಿಸಿ ಎರಡು ತುಂಡುಮಾಡಿದನು. ಹೀಗೆ ನರಕಾಸುರನು ಹತನಾದಾಗ ಭೂದೇವಿಯ ಅದಿತಿಯ ಎರಡು ಕುಂಡಲಗಳನ್ನು ಕೈಯಲ್ಲಿ ತಂದು ಹಿಡಿದು ಶ್ರೀಕೃಷ್ಣನನ್ನು ಕುರಿತು ಹೀಗೆಂದಳು.

**ಯದಾಹಮುದ್‌ದೃತ ನಾಥ ತ್ವಯಾ ಸೂಕರ ಮೂರ್ತಿನಾ ।**

**ತ್ವತ್ ಸ್ಪರ್ಶಸಂಭವಃ ಪುತ್ರಸ್ತದಾಯಂ ಮಯ್ಯಜಾಯತಃ ॥**

**ಸೋಯಂ ತ್ವಯೈವ ದತ್ತೋಮೇ ತ್ವಯೈವ ವಿನಿಪಾತಿತಃ ।**

**ಗೃಹಾಣ ಕುಂಡಲೇ ಚೇಮೇ ಪಾಲಯಾಸ್ಯ ಸಪ್ತತಿಮ್ ॥**

**ಭಾರಾ ವತರಣಾರ್ಥಾಯ ಮಮೈವ ಭಗವಾನಿಮಮ್ ।**

**ಅಂಶೇನ ಲೋಕಮಾಯಾತಃ ಪ್ರಸಾದಸುಮುಖಃ ಪ್ರಭೋಃ ॥**

(ವಿ.ಪು. 2ನೇ ಸಂ.ಪಂ.ಅ. ಅ.29 ಶ್ಲೋ 23ರಿಂದ 25)

ಭೂಮಾತೆಯು ಕೃಷ್ಣನಲ್ಲಿ ಹೀಗೆಂದಳು, "ಹೇ ಸ್ವಾಮಿ, ನೀನು ವರಾಹವತಾರವನ್ನು ತಾಳಿ ನನ್ನನ್ನು ಎತ್ತಿದಾಗ, ನಿನ್ನ ಸ್ಪರ್ಶದಿಂದ ಈ ನರಕಾಸುನು ನನ್ನಲ್ಲಿ ಜನಿಸಿದ್ದನು. ನೀನೇ ಈತನನ್ನು ನನಗೆ ಕೊಟ್ಟೆ. ನೀನೇ ಕಿತ್ತುಕೊಂಡೆ! ಈ ಕುಂಡಲಗಳನ್ನು ಸ್ವೀಕರಿಸು. ಈ ನರಕನ ಸಂತತಿಯನ್ನು ಪಾಲಿಸು. ಹೇ ಪ್ರಭುವೇ ನನ್ನ ಮೇಲಿದ್ದ ಭಾರವನ್ನು ಇಳಿಸುವುದಕ್ಕಾಗಿ ಭಗವಂತನಾದ ನೀನು ಪ್ರಾರ್ಥನೆಗೆ ಪ್ರಸನ್ನನಾಗಿ ಅಂಶಾವತಾರದಿಂದ ಈ ಲೋಕಕ್ಕೆ ಬಂದಿರುವೆ. ನೀನೇ ಈ ಜಗತ್ತುಗಳ ಕರ್ತ, ಪೋಷಕ, ಸಂಹರ್ತ ಇವುಗಳಿಗೆ ನಿನ್ನಲ್ಲಿ ಜನ್ಮ ನಿನ್ನಲ್ಲಿಯೇ ಲಯ, ಅಚ್ಯುತ, ಜಗದ್ರೂಪನು ನೀನೇ ಆಗಿರುವಾಗ ನಾವು ಯಾರು ಯಾವ ರೀತಿ ನಿನ್ನನ್ನು ಸ್ತುತಿಸೋಣ.

ಹೇ ಭಗವಾನ್ ನೀನೇ ಸರ್ವವ್ಯಾಪಿ, ವ್ಯಾಪ್ತನೂ ನೀನೇ, ಕ್ರಿಯೆ, ಕರ್ತ, ಕ್ರಿಯಾಜನ್ಯನೂ ನೀನೇ, ಸರ್ವಭೂತಗಳೂ ನಿನ್ನ ಆತ್ಮಸ್ವರೂಪವೇ ಆಗಿದೆ. ನೀನೇ ಪರಮಾತ್ಮ, ಪಂಚಭೂತಾತ್ಮ, ಜೀವಾತ್ಮ, ಹೇ ಭಗವಾನ್ ನರಕನು ಮಾಡಿದ ಅಪರಾಧಗಳನ್ನು ಕ್ಷಮಿಸು. ನಿನ್ನ ಪುತ್ರನನ್ನು ಆತನ ದೋಷವನ್ನು ಹೋಗಲಾಡಿಸುವುದಕ್ಕಾಗಿ ನೀನೇ ಸಂಹರಿಸಿದ್ದೀಯೇ" ಎಂದಳು. ಶ್ರೀಕೃಷ್ಣನು ಭೂಮಿತಾಯಿಯ ಮಾತಿಗೆ ತಥಾಸ್ತು ಎಂದನು. ನಂತರ ನರಕಾಸುರನ ಅರಮನೆಯಲ್ಲಿದ್ದ ನಾನಾರತ್ನಗಳನ್ನು ಸ್ವೀಕರಿಸಿದನು. ನಂತರ ಕನ್ಯಾಂತಃಪುರಕ್ಕೆ ಹೋಗಿ (ಸೆರೆಯಲ್ಲಿದ್ದ) ಹದಿನಾರು ಸಾವಿರ ಒಂದು ನೂರು ಮಂದಿ ಕನ್ಯೆಯರನ್ನು ಬಿಡಿಸಿದನು. ನಾಲ್ಕು ನಾಲ್ಕು ದಂತಗಳಿದ್ದ ಶ್ರೇಷ್ಠಜಾತಿಯ ಆರು ಸಾವಿರ ಆನೆಗಳನ್ನೂ ಇಪ್ಪತ್ತೊಂದು ಲಕ್ಷ ಕಾಂಬೋಜ ದೇಶದ ಅಶ್ವಗಳನ್ನು ವಶಪಡಿಸಿಕೊಂಡು ನರಕಾಸುರನ ಭೃತ್ಯರ ಮೂಲಕ ದ್ವಾರಕಾನಗರಕ್ಕೆ ಕಳುಹಿಸಿದನು. ಅರಮನೆಯಲ್ಲಿದ್ದ ವರುಣನ ಛತ್ರವನ್ನೂ, ಮಣಿಪರ್ವತವನ್ನು ನೋಡಿ, ಅವುಗಳನ್ನೆಲ್ಲಾ ಒಪ್ಪಿಸಲು ಸತ್ಯಭಾಮ ಸಮೇತನಾಗಿ ಸ್ವರ್ಗಲೋಕಕ್ಕೆ ಹೋದನು. ಇದರಿಂದ ತಿಳಿಯಬೇಕಾದ

ಅಂಶವೇನೆಂದರೆ ದುರ್ಮಾರ್ಗದಲ್ಲಿರುವ ಯಾರೇ ಅದರೂ, ಅಂದರೆ ತನ್ನ ಮಗನೇ ಆಗಿದ್ದರೂ ಅವನನ್ನು ಭಗವಂತನು ಶಿಕ್ಷಿಸುವನು ಎಂಬ ಸತ್ಯಸಂಗತಿ.

ಇಂದಿಗೂ ನಮ್ಮ ದೇಶದಲ್ಲಿ 'ನರಕ ಚತುರ್ದಶಿ' ಎಂಬ ಹಬ್ಬವನ್ನು ಆಚರಿಸುತ್ತೇವೆ 'ದೀಪಾವಳಿ' ಎಂದರೇನೇ ಸಾಕ್ಷಾತ್ ದೀಪದ ಸಮೂಹ, ದೀಪದ ಸಾಲು ಎಂದರೆ ದುಷ್ಟಶಕ್ತಿಯನ್ನೆಲ್ಲಾ ಸುಟ್ಟುಹಾಕುವ, ಒಳ್ಳೆಯದನ್ನು ಬೆಳಗಿಸುವ ದೀಪದ ಸಾಲಿನ ಹಬ್ಬ ದೀಪಾವಳಿ. ಮೌಢ್ಯದ ಅಂಧಕಾರವನ್ನೆಲ್ಲಾ ಹೋಗಲಾಡಿಸುವ ದೀಪದ ಹಬ್ಬವಿದು. ಹಾಗೆಂದ ಮಾತ್ರಕ್ಕೆ ಭೂಮಾತೆಯನ್ನು ಹೊಗೆಯಿಂದ ಕಲುಷಿತಗೊಳಿಸಬೇಕೆಂದಲ್ಲ. ಅದನ್ನೂ ಸಹ ಭೂಮಾತೆ ಸಹಿಸಲಾರಳು. ಎಲ್ಲದಕ್ಕೂ ಮಿತಿಯಿರಲಿ. ಮಿತಿಮೀರಿದರೆ ಅಮೃತವೂ ವಿಷವಾಗಿ ಪರಿಣಮಿಸುತ್ತದೆ ಎಂಬ ಭಯ, ಜಾಗೃತಿ ನಮ್ಮಲ್ಲಿ ಇರಲಿ. ಹಾಗೆಂತಲೆ ಭಗವಾನ್ ಶ್ರೀಕೃಷ್ಣ, ಭಗವಾನ್ ಶ್ರೀಮನ್ನಾರಾಯಣನು ಇತ್ತ ಶ್ರೀದೇವಿಯನ್ನು ಅತ್ತ ಭೂದೇವಿಯನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡಿದ್ದಾನೆ. ಈಗಲಾದರೂ ಈ ಇಬ್ಬರೂ ಮಾತೆಯರ ಮಹತ್ವವನ್ನು ನಾವು ತಿಳಿಯೋಣ. ಅವನ ಸಂದೇಶದಂತೆ ನಡೆಯೋಣ.

## ಪಾರಿಜಾತ ಹರಣ

ಮೈತ್ರೇಯರಿಗೆ ಪರಾಶರಮುನಿಗಳು ಪಾರಿಜಾತಹರಣದ ಸಂಗತಿಯನ್ನು ವಿವರಿಸತೊಡಗಿದರು. ಈ ಹಿಂದೆಯೇ ಹೇಳಿದಂತೆ ಗರುಡನು ವರುಣನ ಛತ್ರವನ್ನು, ಮಣಿಪರ್ವತವನ್ನು, ಭಾರ್ಯಾಸಮೇತನಾದ ಶ್ರೀಕೃಷ್ಣನನ್ನು ಹೊತ್ತುಕೊಂಡು ಲೀಲೆಯಿಂದಲೇ ಹಾರುತ್ತಾ ಸ್ವರ್ಗಲೋಕಕ್ಕೆ ಹೋದನು. ಶ್ರೀಹರಿಯು ಸ್ವರ್ಗದ್ವಾರದ ಬಳಿಯಲ್ಲಿ ಶಂಖವನ್ನು ಊದಿದನು. ಆಗ ದೇವತೆಗಳು ಪೂಜಾಸಾಮಾಗ್ರಿಗಳೊಂದಿಗೆ ಶ್ರೀಕೃಷ್ಣನನ್ನು ಸ್ವಾಗತಿಸಿದರು. ದೇವತೆಗಳಿಂದ ಪೂಜಿತನಾದ ಶ್ರೀಕೃಷ್ಣನು ದೇವಮಾತೆಯಾದ ಅದಿತಿಯನ್ನು ಸಂದರ್ಶಿಸಿದನು. ಜನಾರ್ಧನನು ದೇವೇಂದ್ರನೊಡನೆ ಅದಿತಿಗೆ ನಮಸ್ಕರಿಸಿ, ದಿವ್ಯಕುಂಡಲಗಳನ್ನು ಅರ್ಪಿಸಿ ನರಕಾಸುರನ ವೃತ್ತಾಂತವನ್ನು ತಿಳಿಸಿದನು.

ಜಗನ್ಮಾತೆಯಾದ ಅದಿತಿಯೂ ಸಹ ಸಂತುಷ್ಟಳಾಗಿ ಜಗದ್ರಕ್ಷಕನಾದ ಜಗನ್ನಾಥನನ್ನು ಪರಪರಿಯಾಗಿ ಸ್ತುತಿಸಿದಳು. ಹೇ ಪುಂಡರೀಕಾಕ್ಷ, ಭಕ್ತಭಯ ನಿವಾರಕ, ಸನಾತನ, ಸರ್ವಾತ್ಮ, ಭೂತಾತ್ಮ, ಭೂತ ಭಾವನನೇ ನಿನಗೆ ನಮಸ್ಕಾರ. ಹೇ ಗುಣಾತ್ಮಕ, ಗುಣಾತ್ಮಕನಾಗಿ, ಮನೋಬುದ್ಧಿಗಳನ್ನು, ಇಂದ್ರಿಯಗಳನ್ನು ನಿರ್ಮಿಸಿದವನೇ ನೀನೆ. ವಸ್ತುತಃಸ್ತುತ್ಯನಾಗಿರುವೆ. ನೀನು ತ್ರಿಗುಣಾತೀತ, ನಿರ್ದ್ವಂದ್ವ, ಶುದ್ಧಸತ್ವ, ಹೃದಯನಿವಾಸಿ, ಬಿಳುಪು ದೀರ್ಘ ಇತ್ಯಾದಿ ವರ್ಣಪ್ರಮಾಣ ಕಲ್ಪನಾ ಶೂನ್ಯನಾದವನು ನೀನೆ. ಜನ್ಮಾದಿ ವಿಕಾರರಹಿತನು, ಸ್ವಪ್ನ ಜಾಗೃತ್ ಅವಸ್ಥೆಗಳಿಂದ ಪರಿವರ್ಜಿತನು, ಹೇ ಅಚ್ಯುತ, ಸಂಜೆ, ರಾತ್ರಿ, ಹಗಲು, ಭೂಮಿ, ಆಕಾಶ, ವಾಯು, ಜಲ, ಅಗ್ನಿ, ಮನಸ್ಸು, ಬುದ್ಧಿ, ಅಹಂಕಾರ ಇವೆಲ್ಲವೂ ನೀನೇ. ಬ್ರಹ್ಮ, ವಿಷ್ಣು, ಶಿವ ಎಂಬ ನಿನ್ನ ಆತ್ಮಮೂರ್ತಿಗಳಿಂದ ಕ್ರಮವಾಗಿ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ಮಾಡತಕ್ಕವನು ನೀನು. ಅವಾಂತರ ಸೃಷ್ಟಿಕರ್ತರಾದ ದಕ್ಷ ಬ್ರಹ್ಮಾದಿಗಳಿಗೂ ಕರ್ತೃ ನೀನೇ. ದೇವತೆಗಳು, ದೈತ್ಯರು, ಯಕ್ಷ, ರಾಕ್ಷಸ, ಸಿದ್ಧಪನ್ನಗರು, ಕೂಷ್ಮಾಂಡ (ಭೂತಗಣಗಳಲ್ಲಿ ಒಂದು) ಪಿಶಾಚಗಳು, ಗಂಧರ್ವರು, ಮಾನವರು, ಪಶು ಪಕ್ಷಿ, ಮೃಗ, ಸರೀಸೃಪಗಳು, ಬಹುವಿಧದ ವೃಕ್ಷಗುಲ್ಮ ಲತೆಗಳು, ಸಮಸ್ತ ತೃಣ ಜಾತಿಗಳು – ಸ್ಥೂಲ ಮಧ್ಯ ಸೂಕ್ಷ್ಮಗಳು, ಸೂಕ್ಷ್ಮಾತ್ ಸೂಕ್ಷ್ಮತರಗಳು, ಪುರ್ಗಲಾಶ್ರಯಗಳಾದ (ಪರಮಾಣ) ಯಾವ, ಯಾವ ದೇಹ ಬೇಧಗಳು ಇದೆಯೋ ಅವೆಲ್ಲವೂ ನೀನೇ. ಪರಮಾರ್ಥ ತತ್ವವನ್ನು ಅರಿಯದ ಜೀವರಿಗೆ ಅತ್ಯಂತ ಪ್ರಾಪಂಚಿಕ ಮೋಹವನ್ನುಂಟುಮಾಡುವ ಮಾಯಾವಿ ನೀನೇ. ಅನಾತ್ಮ ವಸ್ತುವಿನಲ್ಲಿ ಆತ್ಮವೆಂಬ ಭ್ರಾಂತಿಜ್ಞಾನವುಂಟಾಗುತ್ತದೆ. ಇದರಿಂದಲೇ ಜೀವನು ಸಂಸಾರ ಬಂಧನದಲ್ಲಿ ಆತ್ಮಬುದ್ಧಿಯೂ ನಾನು, ನನ್ನದು ಎಂಬ ಭಾವನೆಯು ವಿಶೇಷವಾಗಿ ಹುಟ್ಟಯತ್ತವೆಯಲ್ಲಾ ಇವೆಲ್ಲಾ ಮಾಯಾಚೇಷ್ಟಿತವಾದದ್ದು. ಎಲೈ ಸ್ವಾಮಿ ಯಾರೂ ಸ್ವಧರ್ಮಪರಾಯಣರಾಗಿ ನಿನ್ನನ್ನು ಆರಾಧಿಸುತ್ತಾರೋ ಅವರು ತಮ್ಮ ಮೋಕ್ಷಕ್ಕಾಗಿ ಈ ಸಮಸ್ತ ಮಾಯೆಯನ್ನು ದಾಟುತ್ತಾರೆ. ಹೇ ದೇವಾ ನಾನೂ ಸಹ ಪುತ್ರರನ್ನು ಬಯಸಿ ವೈರಿಗಳಿಗೆ ಸೋಲನ್ನು ಬಯಸಿ ನಿನ್ನನ್ನು ಆರಾಧಿಸಿದೆನೇ ಹೊರತು ಮೋಕ್ಷಕ್ಕಾಗಿ ಅಲ್ಲ. ಇದು ನಿನ್ನ ಮಾಯಾ ವಿಲಾಸವೇ ಸರಿ.

**ಕೌಪೀನಾಚ್ಛಾದನ ಪ್ರಾಯಾ ವಾಂಚಾ ಕಲ್ಪದ್ರುಮಾದಪಿ ।**
**ಜಾಯತೇ ಯದ ಪುಣ್ಯಾನಾಂ ಸೋಪರಾಧಃ ಸ್ವದೋಷಜಃ ॥**

**ತತ್ ಪ್ರಸೀದಾಖಿಲ ಜಗನ್ಮಾಯಾ ಮೋಹಕರಾವ್ಯಯ ।**
**ಅಜ್ಞಾನಂ ಜ್ಞಾನ ಸದ್ಭಾವಭೂತಂ ಭೂತೇಶ ನಾಶಯ ॥**

**ನಮಸ್ತೆ ಚಕ್ರಹಸ್ತಾಯ ಶಾರ್ಙ್ಗಹಸ್ತಾಯ ತೇ ನಮಃ**
**ಗದಾಹಸ್ತಾಯ ತೇವಿಷ್ಣೋ ಶಙ್ಖ ಹಸ್ತಾಯ ತೇನಮಃ॥**

**ಏತತ್ ಪಶ್ಯಾಮಿ ತೇ ರೂಪಂ ಸ್ಥೂಲ ಚಿಹ್ನೋ ಪಲಕ್ಷಿತಮ್**
**ನ ಜಾನಾಮಿ ಪರಂ ಯತ್ತೇ ಪ್ರಸೀದ ಪರಮೇಶ್ವರ॥**

(ವಿ.ಪು. 2ನೇ ಸಂ. ಪಂಚಮಾಂಶ ಅ. 30 ಶ್ಲೋ. 20ರಿಂದ 23)

ಇಲ್ಲಿ ಅದಿತಿಯು ಮಾನವನ ಸಹಜವಾದ ಅಲ್ಪಬುದ್ಧಿಯನ್ನು ಸೊಗಸಾದ ಉದಾಹರಣೆಯನ್ನು ಕೊಟ್ಟು ವಿಡಂಬನೆ ಮಾಡಿದ್ದಾಳೆ. ಈ ಮನುಷ್ಯ ಕಲ್ಪವೃಕ್ಷದ ಬಳಿಗೆ ಹೋದರೂ ಕೌಪೀನದ ತುಂಡನ್ನು ಬೇಡುವ ಆಸೆಯಾಗುತ್ತದೆ. ಶ್ರೀಮನ್ನಾರಾಯಣ ಎಂದರೇನೇ ಸಾಕು ಮಹಾಕಲ್ಪವೃಕ್ಷಕ್ಕೆ ಸಮಾನನಾದವನು. ಅವನು ಪ್ರತ್ಯಕ್ಷನಾಗಿ ಎಲೈ ವತ್ಸ ನಿನಗೇನು ಬೇಕು ಕೇಳು ಎಂದಾಗ ನನಗೆ ಕೌಪೀನ ಬೇಕು ಎನ್ನುತ್ತಾನೆ. ಅಂದರೆ ಅಶಾಶ್ವತವಾದ ಈ ಪ್ರಾಪಂಚಿಕ ವಸ್ತುಗಳನ್ನು ಈ ಪ್ರಾಪಂಚಿಕ ಸುಖ ಭೋಗಗಳನ್ನೇ ಕೇಳುತ್ತಾನೆ. ಶಾಶ್ವತವಾದ ಮೋಕ್ಷ ಸಾಮ್ರಾಜ್ಯದ ಬಗ್ಗೆ ಅವನಿಗೆ ಅಕ್ಕರೆಯೇ ಇಲ್ಲ. ಇಹದ ಸುಖವನ್ನು ನಿಜವೆಂದು, ಸ್ಥಿರವೆಂದು ಭ್ರಮಿಸುತ್ತಾನೆ. ಅದನ್ನೇ ಬೇಕು ಎನ್ನುತ್ತಾನೆ. ಇದೂ ಸಹ ಆತನ ಮಾಯಾಶಕ್ತಿಯೇ ಸರಿ.

ಸ್ಥೂಲಾಕೃತಿಯಲ್ಲಿ ಕಾಣುವ ಈ ನಿನ್ನ ರೂಪವನ್ನು ಮಾತ್ರ ನೋಡುತ್ತಿರುವೆ. ನಿನ್ನ ಪರಸ್ವರೂಪವನ್ನು ನಾನರಿಯೆ. ಪರಮೇಶ್ವರ ಪ್ರಸನ್ನನಾಗು ಎಂದು

ಅದಿತಿಯು ಶ್ರೀಕೃಷ್ಣನನ್ನು ಸ್ತೋತ್ರಮಾಡಿದಳು. ಈ ಸ್ತೋತ್ರವು ನಮಗೆ ಬಾಳ ದಿಕ್ಸೂಚಿಯಾಗಿದೆ. ನಂತರ ಶ್ರೀಕೃಷ್ಣನ ಪತ್ನಿಯಾದ ಸತ್ಯಭಾಮೆಯು ಇಂದ್ರಪತ್ನಿಯಾದ ಶಚಿದೇವಿಯೊಡನೆ ಅದಿತಿಗೆ ನಮಸ್ಕರಿಸಿದಳು. ಅದಿತಿಯು ಸೌಮ್ಯವಾಗಿ ನನ್ನ ಅನುಗ್ರಹದಿಂದ ನಿನಗೆ ಮುಪ್ಪಾಗಲಿ, ವಿರೂಪತೆಯಾಗಲಿ ಬಾರದಿರಲಿ. ಸುಂದರಿ ನಿನಗೆ ನವಯೌವನವು ಸ್ಥಿರವಾಗಿರುತ್ತದೆ ಎಂದಳು. ಅನಂತರ ದೇವೇಂದ್ರನು ಅದಿತಿಯ ಅನುಜ್ಞೆಯಂತೆ ಶ್ರೀಕೃಷ್ಣನನ್ನು ಗೌರವಾದರಗಳಿಂದ ಅರ್ಚಿಸಿದನು. ಆದರೆ ಶಚಿದೇವಿಯು ಪಾರಿಜಾತ ಪುಷ್ಪಗಳಿಂದ ತಾನು ಅಲಂಕೃತಳಾದಳೇ ಹೊರತು ಸತ್ಯಭಾಮೆಯು ಒಬ್ಬ ಮಾನುಷ ಸ್ತ್ರೀಯೆಂದು ಭಾವಿಸಿ ಅವಳಿಗೆ ಪಾರಿಜಾತ ಪುಷ್ಪವನ್ನು ಕೊಡಲಿಲ್ಲ.

**ಶಚೀ ಚ ಸತ್ಯಭಾಮಾಯೈ ಪಾರಿಜಾತಸ್ಯ ಪುಷ್ಪಕಮ್ ।**
**ನದದೌ ಮಾನುಷೀಂ ಮತ್ವಾ ಸ್ವಯಂ ಪುಷ್ಪೈರಲಂಕೃತಾ ॥**

**ತತೋ ದದರ್ಶ ಕೃಷ್ಣೋಽಪಿ ಸತ್ಯಭಾಮಾ ಸಹಾಯವಾನ್ ।**
**ದೇವೋ ದ್ಯಾನಾನಿ ಹೃದ್ಯಾನಿ ನಂದನಾದೀನಿ ಸತ್ತಮ ॥**

**ದದರ್ಶ ಚ ಸುಗಂಧಾಡ್ಯಂ ಮಂಜರೀಪುಂಜಧಾರಿಣಮ್ ।**
**ನಿತ್ಯಾಹ್ಲಾದಕರಂ ತಾಮ್ರಬಾಲ ಪಲ್ಲವಶೋಭಿತಂ ॥**

**ಮಥ್ಯಮಾನೇಮೃತೇ ಜಾತಂ ಜಾತರೂಪೋಪಮತ್ವಚಮ್ ।**
**ಪಾರಿಜಾತಂ ಜಗನ್ನಾಥಃ ಕೇಶವ ಕೇಶಿಸೂಧನಃ ॥**
**ತತೋಽಷ ಪರಮಪ್ರೀತ್ಯಾ ತುರರಾಜಮನುತ್ತಮಮ್ ।**
**ತಂ ದೃಷ್ಟ್ವಾ ಪ್ರಾಹ ಗೋವಿಂದಂ ಸತ್ಯಭಾಮಾದ್ವಿಜೋತ್ತಮ ॥**
**ಕಸ್ಮಾನ್ನ ದ್ವಾರಕಾಮೇಷ ನೀಯತೇ ಕೃಷ್ಣಪಾದಪಃ ॥**

**ಯದಿ ಚೇತ್ತ್ವದ್ವಚಃ ಸತ್ಯಂ ತ್ವಮತ್ಯರ್ಥಂ ಪ್ರಿಯೇತಿಮೇ ।**
**ಮದ್ಗೇಹ ನಿಷ್ಕುಟಾರ್ಥಾಯ ತದಯಂ ನೀಯತಾಂ ತುರಃ ॥**

**ನಮೇ ಜಾಂಬವತೀ ತಾದೃಗ ಭೀಷ್ಟಾ ನಚ ರುಕ್ಮಿಣೀ ।**
**ಸತ್ಯೇ ಯಥಾ ತ್ವ ಮಿತ್ಯುಕ್ತಂ ತ್ವಯಾ ಕೃಷ್ಣಾ ಸಕೃತಪ್ರಿಯಮ್ ॥**

**ಸತ್ಯಂ ತದ್ಯದಿಗೋವಿಂದ ನೋಪಚಾರಕೃತಂ ಮಮ ।**
**ತದ್ಸತು ಪಾರಿಜಾತೋಯಂ ಮಮ ಗೇಹವಿಭೂಣಮ್ ॥**

**ಬಿಭ್ರತೀ ಪಾರಿಜಾತಸ್ಯ ಕೇಶ ಪಕ್ಷೇಣ ಮಂಜರೀಮ್ ।**
**ಸಪತ್ನೀ ನಾಮಹಂ ಮಧ್ಯೇ ಶೋಭೇಯಮಿತಿ ಕಾಮಯೇ ॥**

(ವಿ.ಪು. 2ನೇ ಸಂ. ಪಂಚಮಾಂಶ ಅ. 30 ಶ್ಲೋ.29)

ಶ್ರೀಕೃಷ್ಣನು ಸತ್ಯಭಾಮೆಯ ಸಹಿತ ನಂದನವೇ ಮೊದಲಾದ ರಮ್ಯವಾದ ದೇವೋಧ್ಯಾನಗಳನ್ನು ಸಂದರ್ಶಿಸಿದನು. ಪರಿಮಳಭರಿತನೂ ಕುಸುಮ ಮಂಜರೀ ಪುಂಜರಂಜಿತವೂ, ನಿತ್ಯನವಾನಂದದಾಯಿಯೂ ಆದ ವೃಕ್ಷವನ್ನು ಕೇಶಿ ನಿಷೂದನ ಕೇಶವನು ಕಂಡನು. ಆ ಮರವು ಕೆಂಪಾದ ಎಳೆತಳಿರುಗಳಿಂದ ಶೋಭಿಸುತ್ತಿತ್ತು. ಬಂಗಾರದ ತಗಡಿನಂತಿರುವ ತೊಗಟೆಯು ರಮ್ಯವಾಗಿದ್ದಿತು. ಅಂದು ಕಡಲನ್ನು ಕಡೆಯುವಾಗ ಅಮೃತದೊಡನೆ ಆವಿರ್ಭವಿಸಿದ ವೃಕ್ಷವನ್ನು ಜಗನ್ನಾಥನು ನೋಡಿದನು. (ಈ ಕಲ್ಪವೃಕ್ಷವನ್ನು ಇಂದ್ರ ತೆಗೆದುಕೊಂಡು ಹೋಗಿದ್ದನು) ಆ ವೃಕ್ಷವನ್ನು ವೀಕ್ಷಿಸಿ ಸತ್ಯಭಾಮೆಯು ಗೋವಿಂದನಿಗೆ ಹೀಗೆಂದಳು.

"ಎಲೈ ಕಾಂತ ಈ ತರುವನ್ನು ದ್ವಾರಕೆಗೆ ನಾವು ಏಕೆ ತೆಗೆದುಕೊಂಡು ಹೋಗಬಾರದು. ಸತ್ಯಭಾಮೆ ನೀನು ನನಗೆ ಅತ್ಯಂತ ಪ್ರಿಯಳು" ಎಂದು ಹೇಳುತ್ತಿರುವೆಯಲ್ಲಾ, ಆ ಮಾತು ನಿಜವಾದರೆ ಈ ಪಾರಿಜಾತ ವೃಕ್ಷವನ್ನು

ಒಯ್ದುಬಿಡು. ನನ್ನ ಮನೆಯ ಹೂದೋಟದಲ್ಲಿರಲಿ, ಕೃಷ್ಣ, ನೀನು ಎಷ್ಟೋ ಸಲ ನನಗೆ ಪ್ರಿಯವಾದ ಮಾತನ್ನು ಆಡಿದ್ದೀಯೇ, ಸತ್ಯಭಾಮಾ ನನಗೆ ಜಾಂಬವತಿಯು ನಿನ್ನಷ್ಟು ಪ್ರಿಯಳಲ್ಲ, ರುಕ್ಮಿಣಿಯೂ ನಿನ್ನಷ್ಟು ಪ್ರಿಯಳಲ್ಲ ಎಂದು ಹೇಳಿದ್ದೀಯೇ, ಆ ಮಾತು ಹೃದಯಪೂರ್ವಕವಾಗಿ ಸತ್ಯವಾದರೆ, ಬರೀ ಉಪಚಾರಕ್ಕೆ ಹೇಳಿದ್ದಲ್ಲವಾದರೆ ಈ ಪಾರಿಜಾತವು ನನ್ನ ಗೃಹಭೂಷಣವಾಗಲಿ. ಪಾರಿಜಾತದ ಪುಷ್ಪಮಂಜರಿಯನ್ನು ನನ್ನ ಕೇಶಪಾಶದಲ್ಲಿ ಮುಡಿದು ಸವತಿಯರ ನಡುವೆ ನಾನು ಶೋಭಿಸಬೇಕೆಂದು ನನ್ನ ಬಯಕೆ" ಎಂದಳು. ಅದಕ್ಕೆ ಕೃಷ್ಣನು ಹುಸಿನಗೆ ಬೀರಿ ಪಾರಿಜಾತ ವೃಕ್ಷವನ್ನೇ ಗರುಡನ ಮೇಲೆ ಏರಿಸಿದನು. ಆಗ ವನಪಾಲಕರು ಇದನ್ನು ಇಲ್ಲಿಂದ ಒಯ್ಯಬಾರದು ಎಂದು ಪ್ರತಿಪಾದಿಸಿದರು.  ಎಲೈ ಕೃಷ್ಣ ದೇವೇಂದ್ರನು ಹಿಂದೆ ಅಮೃತಮಂಥನ ಸಮಯದಲ್ಲಿ ತಂದಿದ್ದನು. ಈ ಪಾರಿಜಾತವನ್ನು ತೆಗೆದುಕೊಂಡು ಯಾವನು ಕ್ಷೇಮವಾಗಿ ಇರಲಾರನು ಎಂದು ವನಪಾಲಕರು ಹೇಳುತ್ತಿದ್ದರು.

ಅದಕ್ಕೆ ಸತ್ಯಭಾಮೆಯು ಅತಿಕ್ರುದ್ಧಳಾಗಿ ಹೀಗೆಂದಳು – ಪಾರಿಜಾತದ ಮೇಲೆ ಅಧಿಕಾರ ನಡೆಸುವುದಕ್ಕೆ ಈ ಶಚಿ ಯಾರು? ದೇವರಾಜನಾದ ಇಂದ್ರ ಯಾರು ? ಈ ವೃಕ್ಷವು ಅಮೃತಮಂಥನ ಕಾಲದಲ್ಲಿ ಹುಟ್ಟಿದ್ದು. ಎಲ್ಲರಿಗೂ ಸೇರಿದ್ದು. ಇಂದ್ರನೊಬ್ಬನೇ ಇದನ್ನು ತೆಗೆದುಕೊಳ್ಳಲು ಕಾರಣವೇನು? ಎಲೈ ವನರಕ್ಷಕರೇ ಅಮೃತಮಂಥನದಲ್ಲಿ ಹುಟ್ಟಿದ ಮಧಿರೆ, ಚಂದ್ರ, ಸಂಪತ್ತು ಇವೆಲ್ಲವೂ ಹೇಗೆ ಸರ್ವಲೋಕಕ್ಕೆ ಸೇರಿದ ಸಾಮಾನ್ಯವಸ್ತುಗಳೋ ಹಾಗೆಯೇ ಈ ಪಾರಿಜಾತ ವೃಕ್ಷವು ಸಹ ಎಲ್ಲರಿಗೂ ಸೇರಿದ್ದು. ಆ ಶಚಿಯು ಗಂಡನ ಬಾಹುಬಲದ ಕೊಬ್ಬಿನಿಂದ ಇದನ್ನು ತಡೆಯುವುದಾದರೆ ನೀವೇ ನಿಮ್ಮ ರಾಣಿಗೆ ಸತ್ಯಭಾಮೆ ಈ ವೃಕ್ಷವನ್ನು ಹಾರಿಸಿಕೊಂಡು ಹೋಗುತ್ತಿದ್ದಳೆಂದು ದೂರನ್ನು ಹೇಳಿ ಎಂದಳು.

ಅಂತೆಯೇ ವನಪಾಲಕರು ಹೋಗಿ ಸತ್ಯಭಾಮೆ ಹೇಳಿದ್ದನ್ನು ಶಚಿದೇವಿಗೆ ತಿಳಿಸಿದರು.  ಶಚಿಯು ಸುರಾಧಿಪನಾದ ಇಂದ್ರನನ್ನು ಪ್ರೋತ್ಸಾಹಿಸಿದಳು. ಹೀಗಾಗಿ ಪಾರಿಜಾತದ ನೆವದಿಂದ ಇಂದ್ರನಿಗೂ ಮತ್ತು ಶ್ರೀಕೃಷ್ಣನಿಗೂ

ಯುದ್ಧ ನಡೆಯಿತು. ದೇವಂದ್ರನೂ ಮಧುಸೂದನನೂ ಎರಡು ಮೇಘಗಳಿಂದ ಧಾರಾಕಾರವಾಗಿ ಮಳೆ ಸುರಿಸುವಂತೆ, ಸಾವಿರಾರು ಶರಗಳನ್ನು ಸುರಿಸುತ್ತ ಕಾದಾಡಿದರು. ಈ ಸಂಕುಲ ಯುದ್ಧದಲ್ಲಿ ಗರುಡನು ಐರಾವತದೊಡನೆಯೂ, ಶ್ರೀಕೃಷ್ಣನು ಇಂದ್ರಾದಿ ದೇವತೆಗಳೊಡನೆ ಹೋರಾಡಿದರೂ ತನ್ನ ಸಕಲಬಾಣಗಳು ಶಸ್ತ್ರಾಸ್ತ್ರಗಳು ಭಿನ್ನಭಿನ್ನವಾಗಲು ದೇವೇಂದ್ರನು ವಜ್ರಾಯುಧವನ್ನೇ ಹಿಡಿದನು. ಇತ್ತ ಶ್ರೀಕೃಷ್ಣ ಸುದರ್ಶನ ಚಕ್ರವನ್ನು ಹಿಡಿದನು. ಇದರಿಂದ ಮೂರ್ಲೋಕವೇ ತಲ್ಲಣಿಸಿತು. ದೇವೇಂದ್ರ ವಜ್ರಾಯುಧವನ್ನು ಪ್ರಯೋಗಿಸಿದನು. ಶ್ರೀಕೃಷ್ಣನು ಅದನ್ನು ತನ್ನ ಕೈಯಿಂದ ಹಿಡಿದುಬಿಟ್ಟನಲ್ಲದೆ ಚಕ್ರಾಯುಧವನ್ನು ಪ್ರಯೋಗಿಸಲಿಲ್ಲ. ಇಂದ್ರನನ್ನು ಕುರಿತು 'ನಿಲ್ಲು' ಎಂದು ಅಬ್ಬರಿಸಿದನು. ಇಂದ್ರನಿಗೆ ವಜ್ರಾಯುಧ ಕೈಬಿಟ್ಟಿತು. ಐರಾವತವನ್ನು ಸಹ ಗರುಡನು ಈಗಾಗಲೇ ತುಂಬಾ ಗಾಯಗೊಳಿಸಿದ್ದನು. ಆಗ ಇಂದ್ರನು ಓಡಿಹೋಗಲು ತೊಡಗಿದಾಗ ಸತ್ಯಭಾಮೆ ಇಂತೆಂದಳು. "ವೀರ ತ್ರಿಲೋಕೇಶ್ವರ, ಶಚೀಪತಿಯಾದ ನಿನಗೆ ಪಲಾಯನವು ಸರಿಯಲ್ಲ. ಶಚಿಯು ಪಾರಿಜಾತ ಪುಷ್ಪಮಾಲೆಯೊಂದಿಗೆ ನಿನ್ನ ಬಳಿಗೆ ಬರುವಳು. ಆ ಮಾಲೆಯಿಂದ ಪರಮ ರಮಣೀಯಳಾಗಿ ಪ್ರಣಯದಿಂದ ಬಳಿಗೆ ಬರುವ ಶಚಿಯನ್ನು ಮೊದಲಿನಂತೆಯೇ ನೋಡದೆ ಹೋದರೆ ಅದೆಂತಹ ಸ್ವರ್ಗಾಧಿಪತ್ಯ ನಿನ್ನದು. ಇದೋ ಪಾರಿಜಾತ ವೃಕ್ಷವನ್ನು ತೆಗೆದುಕೊ. ನನಗೆ ಪರರ ಸೊತ್ತು ಏಕೆ. ಶಚೀದೇವಿಯು ನನ್ನನ್ನು ಸತ್ಕರಿಸಲಿಲ್ಲ. ಆದರೂ ಪರವಾಗಿಲ್ಲ, ನನ್ನ ಗಂಡನ ಶೌರ್ಯವನ್ನು ತೋರಿಸುವುದಕ್ಕಾಗಿಯೇ ನಾನು ಈ ಹಗರಣ ಮಾಡಿದೆ ಎಂದಳು. ಶ್ರೀಕೃಷ್ಣನೂ ಸಹ ಆ ಪಾರಿಜಾತ ವೃಕ್ಷವನ್ನೂ, ವಜ್ರಾಯುಧವನ್ನೂ ಮತ್ತೊಮ್ಮೆ ಇಂದ್ರನಿಗೆ ಒಪ್ಪಿಸಿದನು. ಆಗ ಶ್ರೀಕೃಷ್ಣನ ಮಹಿಮೆಯನ್ನು ಅರಿತ ಇಂದ್ರನು ಅವನನ್ನು ಮನಸಾರೆ ಸ್ತುತಿಸಿ – "ಕೃಷ್ಣ, ಈ ಪಾರಿಜಾತ ವೃಕ್ಷವನ್ನು ದ್ವಾರಕಾವತೀ ನಗರಕ್ಕೆ ತೆಗೆದುಕೊಂಡು ಹೋಗು. ನೀನು ಮರ್ತ್ಯಲೋಕವನ್ನು ತ್ಯಜಿಸಿದ ನಂತರ ಇದು ಅಲ್ಲಿರುವುದಿಲ್ಲ. ದೇವ ದೇವ ಜಗನ್ನಾಥ, ಕೃಷ್ಣ, ಮಹಾಭುಜ, ಶಂಖಚಕ್ರ ಗಧಾಪಾಣಿಯೇ ನನ್ನ ತಪ್ಪನ್ನು ಮನ್ನಿಸು" ಎಂದು ಪ್ರಾರ್ಥಿಸಿದನು. ಶ್ರೀಕೃಷ್ಣನು ತಥಾಸ್ತು ಎಂದು ನುಡಿದು ನೆರೆದಿದ್ದ ಸಿದ್ಧ, ಗಂಧರ್ವ, ದೇವರ್ಷಿಗಳಿಂದ ಸ್ತುತಿಸಲ್ಪಡುತ್ತ

ಭೂಲೋಕಕ್ಕೆ ಬಂದನು. ನಂತರ ಸತ್ಯಭಾಮೆಯ ಸಹಿತ ಗರುಡನಿಂದಿಳಿದು ಬಂದು ಆಕೆಯ ಉದ್ಯಾನವನದಲ್ಲಿ ಪಾರಿಜಾತ ಮಹಾವೃಕ್ಷವನ್ನು ಸ್ಥಾಪಿಸಿದನು. ಇದರಲ್ಲಿ ಅಚ್ಚರಿಯ ಸಂಗತಿ ಏನೆಂದರೆ – ಆ ದೇವವೃಕ್ಷದ ಸಮೀಪಕ್ಕೆ ಬಂದರೆ ಸಾಕು, ಅವರಿಗೆ ಪೂರ್ವಜನ್ಮದ ಸ್ಮರಣೆ ಆಗುತ್ತಿತ್ತು. ಎಲ್ಲರೂ ಇದನ್ನು ಕಂಡು ಆಶ್ಚರ್ಯಚಕಿತರಾದರು. ಅನಂತರ ಧೀಮಂತನಾದ ಶ್ರೀಕೃಷ್ಣನು ನರಕಾಸುರನ ಅರಮನೆಯಿಂದ ಭೃತ್ಯರು ತಂದಿದ್ದ ಅಶ್ವಗಜಾದಿ ಸಂಪತ್ತುಗಳನ್ನು ತನ್ನ ಬಂಧುಗಳಿಗೆ ಹಂಚಿಕೊಟ್ಟನು. ನರಕಾಸುರನು ನಾನಾ ದೇಶಗಳಿಂದ ಹಿಡಿದು ತಂದು ಸೆರೆಯಲ್ಲಿಟ್ಟಿದ್ದ ಕನ್ಯೆಯನ್ನು ಶುಭ ಮುಹೂರ್ತದಲ್ಲಿ ತಾನು ವಿವಾಹವಾದನು. ಒಂದೇ ಮುಹೂರ್ತದಲ್ಲಿ ಆ ಎಲ್ಲ ಕನ್ಯೆಯರನ್ನು ಬೇರೆ ಬೇರೆ ಗೃಹಗಳಲ್ಲಿ ಗೋವಿಂದನು ಶಾಸ್ತ್ರೋಕ್ತವಾಗಿ ವಿವಾಹವಾದನು. ಇದೊಂದು ಪವಾಡವೇ ಸರಿ. ಮಹಾಮಹಿಮನಾದ ಶ್ರೀಕೃಷ್ಣನಿಗೆ ಯಾವುದು ತಾನೇ ಅಸಾಧ್ಯವಾದುದು ?

**ಷೋಡಶಸ್ತ್ರೀಸಹಸ್ರಾಣಿ ಶತಮೇಕಂ ತತೋಧಿಕಮ್**
**ತಾವಂತಿ ಚಕ್ರೇ ರೂಪಾಣಿ ಭಗವಾನ್ ಮಧುಸೂದನಃ**
**ಏಕೈಕ ಮೇವ ತಾಃ ಕನ್ಯಾ ಮೇದಿರೇ ಮಧುಸೂದನಃ**
**ಮಮೈವ ಪಾಣಿಗ್ರಹಣಂ ಮೈತ್ರೇಯ ಕೃತವಾನಿತಿ**
**ನಿಶಾಸು ಚ ಜಗತ್ಸ್ರಷ್ಟಾ ತಾಸಾಂ ಗ್ರಹೇಷು ಕೇಶವಃ**
**ಉವಾಸ ವಿಪ್ರ ಸರ್ವಾಸಾಂ ವಿಶ್ವರೂಪಧರೋ ಹರಿಃ**

(ವಿ.ಪು. 2ನೇ ಸಂ. ಪಂ. ಅ. ಅ. 31 ಶ್ಲೋ 18ರಿಂದ 20)

ಆ ಕನ್ಯೆಯರು ಹದಿನಾರು ಸಾವಿರದ ಮೇಲೆ ಒಂದುನೂರು ಮಂದಿಯಿದ್ದರು. ಭಗವಾನ್ ಮಧುಸೂದನನು ಅಷ್ಟೇ ಸಂಖ್ಯೆಯಲ್ಲಿ ಬೇರೆ ಬೇರೆ ರೂಪಗಳನ್ನು ಧರಿಸಿದ್ದನು. ಆ ಕನ್ಯೆಯರಾದರೋ 'ಶ್ರೀಕೃಷ್ಣನು ನನ್ನೊಬ್ಬಳನ್ನೇ ಮದುವೆಯಾದನು' ಎಂದು ತಿಳಿದುಕೊಂಡರು. ವಿಶ್ವಕರ್ತನೂ, ವಿಶ್ವರೂಪಧರನೂ ಆದ ಶ್ರೀಹರಿಯು ರಾತ್ರಿಯ ಹೊತ್ತು ಎಲ್ಲ ಮಡದಿಯರ ಮಂದಿರಗಳಲ್ಲಿಯೂ ವಾಸವಾಗಿರುತ್ತಿದ್ದನು. ಇದು ಒಂದು ಆಶ್ಚರ್ಯದ

ಸಂಗತಿ. ಆದರೂ ನಿಜವೆಂಬುದನ್ನು ಹುಲುಮಾನವರಾದ ನಾವೆಲ್ಲಾ ಒಪ್ಪಿಕೊಳ್ಳಲೇಬೇಕು. ಇದೂ ಸಹ ಆ ಜಗನ್ನಿಯಾಮಕನ ಅಪ್ರತಿಮವಾದ ಮಹಿಮೆಯೇ ಸರಿ. ಶ್ರೀಕೃಷ್ಣನಿಗೆ ರುಕ್ಮಿಣಿಯಲ್ಲಿ ಪ್ರದ್ಯುಮ್ನನೇ ಮೊದಲಾದ ಪುತ್ರರು ಜನಿಸಿದರು. ಸತ್ಯಭಾಮೆಯಲ್ಲಿ ಭಾನು, ಬೈಮೇರಿಕ ಮುಂತಾದವರು ಜನಿಸಿದರು. ರೋಹಿಣಿಯಲ್ಲಿ ದೀಪ್ತಿಮಾನ್, ತಾಮ್ರಪಕ್ಷ ಮೊದಲಾದವರು ಜನಿಸಿದರು. ನಗ್ನಜಿತ್ತಿನ ಮಗಳಾದ ಸತ್ಯೆಯಲ್ಲಿ ಭದ್ರವಿಂದಾದಿಗಳು ಜನಿಸಿದರು. ಶೈಬ್ಯೆ ಅಥವಾ ಮಿತ್ರವಿಂದ್ಯೆಯಲ್ಲಿ ಸಂಗ್ರಾಮಜಿತ್ ಮುಂತಾದವರು ಶ್ರೀಕೃಷ್ಣನ ಪುತ್ರರಾಗಿ ಜನಿಸಿದರು. ಮಾದ್ರಿಯಲ್ಲಿ (ಭದ್ರೆಯಲ್ಲಿ) ವೃಕ ಮೊದಲಾದವರು ಜನಿಸಿದರು. ಲಕ್ಷ್ಮಣೆಯಲ್ಲಿ ಗತ್ರವಾನ್, ಕಾಲಿಂದಿಯಲ್ಲಿ ಶ್ರುತ ಮುಂತಾದವರು ಜನಿಸಿದರು. ಹೀಗೆ ಇತರ ಪತ್ನಿಯರಲ್ಲಿಯೂ ಶ್ರೀಕೃಷ್ಣನಿಗೆ ಬಹು ಮಂದಿ ಮಕ್ಕಳಾದರು. ಆತನಿಗೆ ಒಟ್ಟು ಒಂದು ಲಕ್ಷದ ಎಂಬತ್ತು ಸಾವಿರ (1,80,000) ಮಕ್ಕಳಿದ್ದರು. ಇದರ ಬಗ್ಗೆ ಯಾವುದೇ ರೀತಿಯ ಅಪಾರ್ಥವನ್ನು ತಿಳಿದುಕೊಳ್ಳುವುದು ಅನವಶ್ಯಕ. ಏಕೆಂದರೆ ಅನೇಕ ಋಷಿಗಳು, ತಪಸ್ವಿಗಳು ಶ್ರೀಕೃಷ್ಣನ ಸಾಮೀಪ್ಯ ಬೇಕೆಂದು ಈ ಹಿಂದೆ ಭಗವಂತನಲ್ಲಿಯೇ ಪ್ರಾರ್ಥಿಸಿದರಂತೆ, ತತ್ಫಲವಾಗಿ ಅವರಲ್ಲಿ ಅಂದರೆ ಗೋಪಿಜನ ಪರಿವೃತರಾಗಿ, ವಿವಿಧರಾಜರುಗಳ ಮಕ್ಕಳಾಗಿ ಶ್ರೀಕೃಷ್ಣನೊಡನಾಡಿಗಳಾಗಿ ತಮ್ಮ ಪವಿತ್ರವಾದ ಜೀವನವನ್ನು ನಡೆಸಿದರು ಎಂಬುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ. ಆಧ್ಯಾತ್ಮಿಕ ದೃಷ್ಟಿಯಲ್ಲಿ ಪತಿಪತ್ನಿ ಭಾವಸಂಬಂಧವಿದ್ದಿತೇ ಹೊರತು ನಮ್ಮಂತಹ ಪ್ರಾಪಂಚಿಕ ದೃಷ್ಟಿ ಅವರಿಗೆ ಇರಲಿಲ್ಲ. ಕೃಷ್ಣನ ಪವಾಡಗಳಲ್ಲಿ ಅನೇಕವು ಅದ್ಭುತವಾದದ್ದು. ಅದರಲ್ಲಿ ಇದೂ ಒಂದು ಪವಾಡವೇ ಸರಿ. ಇರಲಿ, ರುಕ್ಮಿಣಿ ಪುತ್ರನಾದ ಪ್ರದ್ಯುಮ್ನನು ಹಿರಿಯ ಮಗ, ಪ್ರದ್ಯುಮ್ನನಿಂದ ಅನಿರುದ್ಧನೂ, ಅನಿರುದ್ಧನಿಂದ ವಜ್ರನೂ ಜನಿಸಿದನು. ಬಲಿಷ್ಟನಾದ ಅನಿರುದ್ಧನು ಯುದ್ಧದಲ್ಲಿ ಯಾರಿಗೂ ಸೋಲದ ವೀರಯೋಧನಾಗಿದ್ದನು.

ಅವನು ಬಲಿಚಕ್ರವರ್ತಿಯ ಮೊಮ್ಮಗಳು ಬಾಣಾಸುರನ ಮಗಳೂ ಆದ ಉಷೆಯನ್ನು ಮದುವೆಯಾದನು. ನಿಮಿತ್ತವಾಗಿಯೇ ಶ್ರೀಕೃಷ್ಣನಿಗೂ ಮತ್ತು ಶಿವನಿಗೂ ಘೋರಯುದ್ಧವಾಯಿತು. ಆ ಸಮಯದಲ್ಲಿ ಚಕ್ರಧರನಾದ

ಶ್ರೀಕೃಷ್ಣನು ಬಾಣಾಸುರನ 998 ತೋಳುಗಳನ್ನು ಕತ್ತರಿಸಿದನು. ಕೃಷ್ಣನಿಗೂ ಶಿವನಿಗೂ ನಡುವೆ ಯುದ್ಧವೇಕೆ ಎಂದು ಮೈತ್ರೇಯ ಪರಾಶರರನ್ನು ಕೇಳಿದಾಗ ಅವರು ಸವಿಸ್ತಾರವಾಗಿ ಹೇಳಿದರು.

## ಉಷಾಪರಿಣಯ

ಒಮ್ಮೆ ಪಾರ್ವತಿಯು ಶಿವನೊಡನೆ ವಿಹರಿಸುತ್ತಿದ್ದುದನ್ನು ಬಾಣನ ಮಗಳಾದ ಉಷೆ ನೋಡಿದಳು. ತಾನೂ ಹೀಗೆಯೇ ತನ್ನ ಪತಿಯೊಡನೆ ವಿಹರಿಸಬೇಕೆಂಬ ಆಸೆ ಅವಳಿಗೆ ಆಯಿತು. ಅಂತರ್ಯಾಮಿನಿಯಾದ ಪಾರ್ವತಿಯು ಸಕಲರ ಚಿತ್ತ ವೃತ್ತಿಯನ್ನು ಮನೋಭಿಲಾಷೆಯನ್ನು ಅರಿತವಳಲ್ಲವೇ ! ಪಾರ್ವತಿಯು ಉಷೆಯನ್ನು ಕುರಿತು, "ವತ್ಸೆ, ನೀನು ವಿಷಾದಿಸಬೇಡ ನನ್ನಂತೆಯೇ ನೀನೂ ಸಹ ಪತಿಯೊಡನೆ ವಿಹರಿಸುವೆ" ಎಂದಳು. ಉಷೆಯು ತನ್ನ ಮನಸ್ಸಿನಲ್ಲಿಯೇ ನಾನು ಯಾವಾಗ ವಿಹರಿಸುವೆನೋ ! ನನ್ನ ಪತಿ ಯಾರಾಗುತ್ತಾರೋ ಎಂದು ಚಿಂತಿಸಿದಳು.

ಅವಳ ಮನದಾಳವನ್ನು ಅರಿತ ಪಾರ್ವತಿಯು ರಾಜಪುತ್ರಿ ಮುಂದಿನ ವೈಶಾಖ ಶುಕ್ಲ, ದ್ವಾದಶಿಯ ದಿನ ಸ್ವಪ್ನದಲ್ಲಿ ನಿನ್ನನ್ನು ಯಾವಾತನು ಭೋಗಿಸುವನೋ ಅವನೇ ನಿನ್ನ ಪತಿಯಾಗುವನು ಎಂದು ಹೇಳಿದಳು. ಅತ್ಯಾಶ್ಚರ್ಯದ ಸಂಗತಿಯೆಂದರೆ

**ವೈಶಾಖ ಶುಕ್ಲ ದ್ವಾದಶ್ಯಾಂ ಸ್ವಪ್ನೇ ಯೋಭಿ ಭವಂ ತವ**
**ಕರಿಷ್ಯತಿ ಸತೇ ಭರ್ತಾ ರಾಜಪುತ್ರಿ ಭವಿಷ್ಯತಿ**

(ವಿ.ಪು. 2ನೇ ಪಂ.ಅಂ.ಅ32, ಶ್ಲೋ 14)

ಪಾರ್ವತಿಯು ಹೇಳಿದಂತೆ ವೈಶಾಖ ಶುಕ್ಲ ದ್ವಾದಶಿಯಂದು ಉಷೆಯು ಸ್ವಪ್ನದಲ್ಲಿ ಒಬ್ಬರು ಆಕೆಯನ್ನು ಭೋಗಿಸುವಂತಾಯಿತು. ಉಷೆಯು ಅವನಲ್ಲಿ ಅನುರಾಗ ತಳೆದಳು. ನಿದ್ರೆಯಿಂದ ಎಚ್ಚೆತ್ತ ಮೇಲೆ ಆತನನ್ನು ಕಾಣದೆ ಉತ್ಕಂಠಿತಳಾಗಿ ತನ್ನ ಸಖಿಯ ಕಡೆಗೆ ತಿರುಗಿ, ನಿರ್ಲಜ್ಜೆಯಿಂದ "ಕಾಂತ ಎಲ್ಲಿಗೆ ಹೋದೆ? ಎಂದಳು, ಉಷೆಯು ಆ ಸ್ವಪ್ನಸುಂದರನಲ್ಲಿ

ಅನುರಾಗವನ್ನು ತಳೆದಳು. ಆಗ ಚಿತ್ರಲೇಖೆಯು "ಉಷಾ, ನೀನು ಯಾರನ್ನು ಕುರಿತು ಹೇಳುತ್ತಿದ್ದೀಯಾ ಎಂದಾಗ ಉಷೆಯು ಲಜ್ಜೆಯಿಂದ ಏನನ್ನೂ ಹೇಳದೆ ಮೌನವಾಗಿದ್ದಳು. ಚಿತ್ರಲೇಖೆಯು ಅವಳನ್ನು ಸಂತೈಸಿ ತನ್ನ ವಿಶ್ವಾಸಕ್ಕೆ ತಂದುಕೊಂಡು ವಿಷಯವೇನೆಂಬುದನ್ನು ಬಾಯಿ ಬಿಡಿಸಿದಳು. ಸ್ವಪ್ನದಲ್ಲಿ ಒಬ್ಬ ಯುವಕನನ್ನು ಕಂಡಿದ್ದನೆಂಬುದನ್ನು ಚಿತ್ರಲೇಖೆಗೆ ತಿಳಿಸಿದಳು. ಅಷ್ಟೇ ಅಲ್ಲದೆ ಪಾರ್ವತಿದೇವಿಯೂ ಹೇಳಿದ್ದ ವಿಚಾರವನ್ನು ತಿಳಿಸಿ, ಹೇಗಾದರೂ ಮಾಡಿ ಆ ಯುವಕನನ್ನು ಪಡೆಯುವ ಉಪಾಯ ಮಾಡು" ಎಂದು ತನ್ನ ಸಖಿಗೆ ಹೇಳಿದಳು. ಚಿತ್ರಲೇಖೆಯು ಉಷೆಯಲ್ಲಿ ಎಳೆಂಟು ದಿನಗಳು ತನಗೆ ಅವಕಾಶ ಕೊಡಬೇಕೆಂದು ಹೇಳಿ ತನ್ನ ಮನೆಗೆ ಹೋಗಿ ಉಪಾಯವೇನೆಂಬುದನ್ನು ಚಿಂತಿಸಿದಳು. ಅನಂತರ ಚಿತ್ರಪಟದಲ್ಲಿ ಪ್ರಧಾನರಾದ ದೇವ ದೈತ್ಯ ಗಂಧರ್ವರ ಮತ್ತು ಮನುಷ್ಯರ ಚಿತ್ರಗಳನ್ನು ಬರೆದು ಉಷೆಗೆ ತೋರಿಸಿದಳು. ಉಷೆಯಾದರೋ ದೇವ, ಗಂಧರ್ವರ ಚಿತ್ರಗಳನ್ನು ಬದಿಗಿಟ್ಟು ಮನುಷ್ಯರ ಚಿತ್ರದ ಕಡೆಗೆ ತನ್ನ ಚಿತ್ತವನ್ನು ದೃಷ್ಟಿಯನ್ನು ಹಾಯಿಸಿದಳು. ಅದರಲ್ಲೂ ವಿಶೇಷವಾಗಿ ಅಂಧಕ, ವೃಷ್ಣಿವಂಶದ ಯಾದವರ ಚಿತ್ರಗಳನ್ನು ಗಮನಿಸತೊಡಗಿದಳು. ಅವರಲ್ಲಿ ಶ್ರೀಕೃಷ್ಣ ಬಲರಾಮರನ್ನು ನೋಡಿದಾಗ ಆ ಸುಂದರಿಯು ನಾಚಿಕೊಂಡಳು.

ಪ್ರದ್ಯುಮ್ನನ ಮಗನನ್ನು ನೋಡಿದೊಡನೆ ಉಷೆಯ ಲಜ್ಜೆಯು ಎಲ್ಲಿಗೋ ಓಡಿಹೋಯಿತು. ಅವನೇ ಇವನು ! ಅವನೇ ಇವನು ! ಎಂದು ಉಷೆ ಉದ್ಗರಿಸಿದಳು. ಆಗ ಯೋಗಮಹಿಮೆಯಿಂದ ಎಲ್ಲಿಗೆಬೇಕಾದರೂ ಸಂಚರಿಸಬಲ್ಲವಳಾದ ಚಿತ್ರಲೇಖೆಯು ಬಾಣಾಸುರನ ಮಗಳಾದ ಉಷೆಯನ್ನು ಕುರಿತು "ಇವನು ಶ್ರೀಕೃಷ್ಣನ ಮೊಮ್ಮಗ, ಪಾರ್ವತಿದೇವಿಯು ನಿನ್ನ ಪತಿ ಇವನೆಂದು ಅನುಗ್ರಹಿಸಿದ್ದಾಳೆ. ಇವನ ಹೆಸರು ಅನಿರುದ್ಧ.

**ಅಯಂ ಕೃಷ್ಣಸ್ಯ ಪೌತ್ರಸ್ತೇ ಭರ್ತಾ ದೇವ್ಯಾ ಪ್ರಸಾದಿತಃ ।**
**ಅನಿರುದ್ಧ ಇತಿಃ ಖ್ಯಾತಃ ಪ್ರಖ್ಯಾತಃ ಪ್ರಿಯದರ್ಶನಃ ।**
**ಪ್ರಾಪ್ನೋಷಿ ಯದಿ ಭರ್ತಾರಮಿಮಂ ಪ್ರಾಪ್ತಂ ತ್ವಯಾಖಿಲಮ್ ।**
**ದುಷ್ಪ್ರವೇಶಾ ಪುರೀ ಪೂರ್ವಂ ದ್ವಾರಕಾ ಕೃಷ್ಣ ಪಾಲಿತಾ ॥**
**ತಥಾಪಿ ಯತ್ನಾದ್ಭರ್ತಾರ ಮಾನಯಿಷ್ಯಾಮಿ ತೇ ಸಖಿ।**

**ರಹಸ್ಯ ಮೇತದ್ವಕ್ತವ್ಯಂ ನಕಸ್ಯ ಚಿದಪಿ ತ್ವಯಾ ॥**
**ಅಚಿರಾದಾಗಮಿಷ್ಯಾಮಿ ಸಹಸ್ವ ವಿರಹಂ ಮಮ ।**
**ಯಯೌ ದ್ವಾರವತೀಂ ಚೋಷಾಂ ಸಮಾಶ್ವಾಸ್ಯ ತತಃ ಸಖೀಮ್ ॥**
(ವಿ.ಪು. 2ನೇ ಪಂ.ಅಂ.ಅ32, ಶ್ಲೋ 27ರಿಂದ 30)

ಈ ಅನಿರುದ್ದನು ಬಹಳ ಸುಂದರನಾಗಿದ್ದಾನೆ. ಈತನು ನಿನಗೆ ಪತಿಯಗಿ ಲಭಿಸಿದರೆ ಸಕಲಸೌಭಾಗ್ಯಗಳೂ ನಿನಗೆ ದೊರಕಿದಂತೆಯೇ ಸರಿ. ಆದರೆ ಒಂದು ವಿಷಯ ಶ್ರೀಕೃಷ್ಣ ರಕ್ಷಿತದ ದ್ವಾರಕಾಪುರಿಯನ್ನು ಪ್ರವೇಶಿಸುವುದೇ ಬಹಳ ಕಷ್ಟ ! ಆದರೂ ಸಖಿ, ಹೇಗಾದರೂ ಪ್ರಯತ್ನಿಸಿ ನಿನ್ನ ಕಾಂತನನ್ನು ಇಲ್ಲಿಗೆ ಕರೆತರುವೆನು. ಇದು ಬಹಳ ರಹಸ್ಯದ ವಿಚಾರ. ಯಾರಿಗೂ ನೀನು ಇದನ್ನು ಹೇಳಬಾರದು. ಆದಷ್ಟು ಬೇಗನೆ ಬರುವೆನು. ಅಲ್ಲಿಯವರೆಗೆ ನನ್ನ ವಿರಹವನ್ನು ಸಹಿಸಿಕೊಂಡಿರು (ಚಿತ್ರಲೇಖೆಯು ಯಾವ ಸಮಾಚಾರವನ್ನು, ಸುವಾರ್ತೆಯನ್ನು ತರುವಳೋ ಎಂಬ ಕುತೂಹಲದ ವಿರಹ) ಎಂದು ಸಮಾಧಾನ ಹೇಳಿ ಚಿತ್ರಲೇಖೆಯು ದ್ವಾರಕೆಯತ್ತ ಹೊರಟಳು.

ಈ ಸಂಗತಿಗಳನ್ನು ಆಳವಾಗಿ ವಿವೇಚಿಸಿದರೆ ಭಗವಾನ್ ಶ್ರೀಕೃಷ್ಣನಿಗೂ, ಪರಮೇಶ್ವರನ ಪತ್ನಿಯಾದ ಪಾರ್ವತಿಗೂ ಅದೆಷ್ಟು ಗಾಢವಾದ ಭ್ರಾತೃತ್ವವಿದ್ದಿತೆಂದು ತಿಳಿಯುತ್ತದೆ. ಶ್ರೀಕೃಷ್ಣನ ಜನ್ಮವೃತ್ತಾಂತದಲ್ಲಿಯೂ ಪಾರ್ವತಿಯು (ತಂಗಿ ಯೋಗಮಾಯೆ) ಅಣ್ಣ ಕೃಷ್ಣನಿಗೆ ನೆರವಾದಳು. (ಗೋಪಿಯರು ಕೃಷ್ಣನನ್ನು ಪಡೆಯಲು ಕಾತ್ಯಾಯಿನಿ ವ್ರತವನ್ನು ಕೈಗೊಂಡದ್ದು) ಈಗಲೂ ಶ್ರೀಕೃಷ್ಣನ ಮೊಮ್ಮಗನನ್ನು ಹೇಗಾದರೂ ಮಾಡಿ ಬಾಣಾಸುರನ ಮಗಳಿಗೆ ಕೊಟ್ಟು ವಿವಾಹ ಮಾಡಬೇಕೆಂಬ ವ್ಯೂಹವನ್ನು, ಯೋಜನೆಯನ್ನೂ ಮನಸ್ಸಿನಲ್ಲಿಟ್ಟುಕೊಂಡು, ಅದಕ್ಕಾಗಿ ಪಾರ್ವತಿಯು ಉಷೆಯ ಸ್ವಪ್ನಸಂಗತಿಯಿಂದ ಅವಳಿಗೆ ನೆರವಾಗುವುದು, ಇವೆಲ್ಲಾ ಅಣ್ಣ ತಂಗಿಯರ ಪೂರ್ವಯೋಜಿತವೆಂದು ಸ್ಪಷ್ಟವಾಗಿ ತಿಳಿಯುತ್ತದೆ.

ಮುಂದೆ ನಡೆಯುವ ಶಿವ ಕೃಷ್ಣರ ಯುದ್ಧವೂ ಬರೀ ನಾಟಕವೆಂದು ಚೆನ್ನಾಗಿ ತಿಳಿಯುತ್ತದೆ. ಈ ನಾಟಕದಲ್ಲಿ ಕಪಟನಾಟಕ ಸೂತ್ರಧಾರಿ ಶ್ರೀಕೃಷ್ಣನ ಪಾಲೇನು ಎಂಬುದನ್ನು ನಾವು ತಿಳಿಯೋಣ. ಹೇಗಾದರೂ ಶ್ರೀಕೃಷ್ಣ

ಪಾರ್ವತಿಯರ ನಡುವೆ ಯಾರೂ ಬೇಧಿಸಲಾಗದ ಭ್ರಾತೃತ್ವ ಸಹೋದರ – ಸಹೋದರಿ ಸಂಬಂಧ ನೆಲೆಯಾಗಿರುತ್ತದೆ ಎಂಬುದಂತೂ ಶಾಶ್ವತ ಸತ್ಯ.

## ಅನಿರುದ್ಧನ ಬಂಧನ, ಅನಿರುದ್ಧನನ್ನು ಬಿಡಿಸಲು ಶ್ರೀಕೃಷ್ಣನ ಆಗಮನ

ಒಮ್ಮೆ ಬಾಣಾಸುರನು ಶಿವನನ್ನು ಕುರಿತು ಸುದೀರ್ಘ ತಪಸ್ಸನ್ನು ಮಾಡಿದನು. ಶಿವನು ಅವನ ತಪಸ್ಸಿಗೆ ಮೆಚ್ಚಿ ನಿನಗೇನು ವರ ಬೇಕು ಕೇಳು ಎಂದಾಗ ಬಾಣಾಸುರನು "ದೇವ, ನನಗೆ ಸಾವಿರ ತೋಳುಗಳಿದ್ದು ಬಲಶಾಲಿಯಾಗಿದ್ದೇನೆ. ಆದರೂ ಸರಿಯಾದ ಯುದ್ಧವಿಲ್ಲದೆ ನಿರ್ವಿಣ್ಣನಾಗಿ ಹೋಗಿದ್ದೇನೆ. ಈ ತೋಳುಗಳಿಗೆ ಸಾಫಲ್ಯವನ್ನು ಕೊಡುವಂತಹ ಯುದ್ಧ ಯಾವುದಾದರೂ ನಡೆದೀತೆ?. ಸಂಗ್ರಾಮದಲ್ಲಿ ನನ್ನ ಭುಜಬಲ ಪರಾಕ್ರಮವನ್ನು ತೋರಿಸದಿದ್ದರೆ ಈ ಭಾರವಾದ ಭುಜಗಳಿಂದ ನನಗೆ ಏನು ಪ್ರಯೋಜನ!" ಎಂದು ಕೇಳಿದನು. ಆಗ ಶಂಕರನು ಬಾಣಾಸುರನಿಗೆ ಹೀಗೆ ಹೇಳಿದನು.

**ಮಯೂರಧ್ವಜಭಂಗಸ್ತೇ ಯದಾ ಬಾಣ ಭವಿಷ್ಯತಿ**

**ಪಿಶಿತಾಶಿ ಜನಾನಂದಂ ಪ್ರಾಪ್ಸ್ಯಸೇ ತ್ವ ತದಾರಣಮ್**

(ವಿ.ಪು. 2ನೇ ಪಂ.ಅಂ.ಅ33, ಶ್ಲೋ 3)

ಎಲೈ ಬಾಣಾಸುರನೇ ನಿನ್ನ ಮಯೂರಧ್ವಜವು ಯಾವಾಗ ಮುರಿದು ಬೀಳುವುದೋ ಆಗ ಮಾಂಸ ಭೋಜಿಗಳಾದ ಪಿಶಾಚಿಗಳಿಗೆ ಸಂತೃಪ್ತಿಯನ್ನು ನೀಡುವ ಘೋರಸಂಗ್ರಾಮವು ನಿನಗೆ ಒದಗಿ ಬರುವುದು" ಎಂದು ತಿಳಿಸಿದನು. ಆಗ ಬಾಣಾಸುರನು ಅತ್ಯಂತ ಸಂತುಷ್ಟನಾಗಿ ಶಂಕರನಿಗೆ ನಮಸ್ಕರಿಸಿ ತನ್ನ ಅರಮನೆಗೆ ಬಂದನು. ಹೀಗಿರುವಲ್ಲಿ ಒಮ್ಮೆ ಬಾಣಾಸುರನ ಮಯೂರ ಧ್ವಜವು ಭಗ್ನವಾಗಿ ಹೋಯಿತು. ಅದನ್ನು ಕಂಡ ರಾಕ್ಷಸನು ಅತ್ಯಂತ ಸಂತುಷ್ಟನಾದನು. ಈ ಸಮಯದಲ್ಲಿಯೇ ಅಪ್ಸರೆಯಾದ ಸಚಿತ್ರಲೇಖೆಯು ತನ್ನ ಯೋಗವಿದ್ಯಾಬಲದಿಂದ ಅನಿರುದ್ಧನನ್ನು ಉಷೆಯ ಅಂತಃಪುರಕ್ಕೆ ಕರೆದುತಂದಿದ್ದಳು. ಆತನು ಉಷೆಯೊಡನೆ ರಹಸ್ಯವಾಗಿ ವಿಹರಿಸುತ್ತಿದ್ದದನ್ನು ಒಬ್ಬ ಕಾವಲುಗಾರನು ಪತ್ತೆ ಹಚ್ಚಿ ಬಾಣಾಸುರನಿಗೆ ಹೇಳಿದನು. ಆಗ

ರಾಕ್ಷಸನು ಅನಿರುದ್ಧನನ್ನು ಬಂಧಿಸುವಂತೆ ಆಜ್ಞಾಪಿಸಿದನು. ಪರಾಕ್ರಮಿಯಾದ ಅನಿರುದ್ಧನು ಘೋರವಾದ ಪರಿಘವನ್ನು ಹಿಡಿದು ಅವರನ್ನೆಲ್ಲಾ ಕೊಂದು ಹಾಕಿದನು. ಆಗ ಬಾಣಾಸರುನೇ ರಥಾರೂಢನಾಗಿ ಬಂದು ಅನಿರುದ್ಧನನ್ನು ಸಂಹರಿಸಲು ಬಂದನು. ಯದುವೀರನಾದ ಅನಿರುದ್ಧನು ಬಾಣಾಸುರನನ್ನು ಸೋಲಿಸಿದನು. ನಂತರ ಮಂತ್ರಿಗಳ ಪ್ರೇರಣೆಯಂತೆ ಮಾಯಾ ಯುದ್ಧವನ್ನು ಆರಂಭಿಸಿ ಸರ್ಪಾಸ್ತ್ರದಿಂದ ಆ ಯದುವೀರನನ್ನು ಬಂಧಿಸಿದರು.

ಇತ್ತ ದ್ವಾರಕೆಯಲ್ಲಿ ಅನಿರುದ್ಧನನ್ನು ಕಾಣದೆ ಎಲ್ಲಿ ಹೋದನೆಂದು ಗೊಂದಲವೆದ್ದಿತು. ಬಾಣಾಸುರನು ಅವನನ್ನು ಬಂಧನದಲ್ಲಿ ಇಟ್ಟಿರುವನೆಂಬ ವಿಷಯ ನಾರದರಿಂದ ತಿಳಿಯಿತು. ಯೋಗವಿದ್ಯಾ ಚತುರೆಯಾದ ಚಿತ್ರಲೇಖೆಯು ಅನಿರುದ್ಧನನ್ನು ಬಾಣಾಸುರನ ಶೋಣಿತಪುರಕ್ಕೆ ಒಯ್ದಳೆಂಬ ವೃತ್ತಾಂತವು ತಿಳಿಯಿತು. ಅದನ್ನು ತಿಳಿದ ಶ್ರೀಕೃಷ್ಣನು ಶೋಣಿತಪುರಕ್ಕೆ ಧಾವಿಸಿದನು. ನಗರಪ್ರವೇಶಕ್ಕೆ ಅಲ್ಲಿ ಪ್ರಮಥಗಣಗಳು ಶ್ರೀಕೃಷ್ಣನನ್ನು ಎದುರಿಸಿದವು. ಶ್ರೀಕೃಷ್ಣನು ಈ ಯುದ್ಧದಲ್ಲಿ ಅವರನ್ನು ಸೋಲಿಸಿ ಶೋಣಿತಪುರದ ಸಮೀಪಕ್ಕೆ ಹೋದನು. ಆಗ ತ್ರಿಪಾದನು ತ್ರಿಶಿರನೂ ಆದ ಮಾಹೇಶ್ವರಜ್ವರನು ಬಣನ ರಕ್ಷೆಗಾಗಿ ಬಂದು ಶಾರ್ಙ್ಗಧನ್ವನೊಡನೆ ಯುದ್ಧಮಾಡಿದನು. ಆ ಸಮಯದಲ್ಲಿ ಮಹಾಜ್ವರನು ಎರಚಿದ ಭಸ್ಮವು ಮೈಗೆ ತಾಕಲಾಗಿ ಬಲರಾಮನೂ ಸಹ ಕಂಗೆಟ್ಟನು. ನಂತರ ಕೃಷ್ಣನು ಅವನನ್ನು ಆಲಂಗಿಸಿಕೊಂಡಾಗ ಬಲರಾಮನ ತಾಪ ಇಳಿಯಿತು. ನಂತರ ಮಾಹೇಶ್ವರ ಜ್ವರವು ಶ್ರೀಕೃಷ್ಣನ ದೇಹವನ್ನು ಪ್ರವೇಶಿಸಿ ಹೋರಾಡುತ್ತಿರುವಾಗ ವೈಷ್ಣವ ಜ್ವರವು ಅದನ್ನು ಹೊರಗೆ ತಳ್ಳಿತು.

ಅನಂತರ ಶ್ರೀಕೃಷ್ಣನು ಭುಜಾಘಾತದಿಂದ ಪೀಡಿತನಾದ್ದರಿಂದ ಆಶ್ಚರ್ಯಚಕಿತನಾದ ಮಾಹೇಶ್ವರಜ್ವರನನ್ನು ಕಂಡು ಬ್ರಹ್ಮದೇವನು ಇವನನ್ನು ಕ್ಷಮಿಸು ಎಂದು ಶ್ರೀಕೃಷ್ಣನಿಗೆ ಅರಿಕೆ ಮಾಡಿದನು. ಆಗ ಶ್ರೀಕೃಷ್ಣನು ಅಂತೆಯೇ ಆಗಲಿ ಅವನನ್ನು ಕ್ಷಮಿಸಿದ್ದೇನೆ ಎಂದು ನುಡಿದನು. ಅಷ್ಟೇ ಅಲ್ಲದೆ ತನ್ನ ದೇಹದಿಂದ ಹೊರಬಂದ ವೈಷ್ಣವ ಜ್ವರವನ್ನು ತನ್ನಲ್ಲಿಯೇ ಲೀನಗೊಳಿಸಿದನು. ನಂತರ ಭಗವಂತನು ಪಂಚಾಗ್ನಿಗಳನ್ನು ಸೋಲಿಸಿ ದಾನವರ ಸೈನ್ಯವನ್ನು

ನುಚ್ಚು ನೂರುಮಾಡಿದನು. (ದಕ್ಷಿಣಾಗ್ನಿ, ಗಾರ್ಹಪತ್ಯ, ಅಹವನೀಯ, ಸಭ್ಯ, ಅವಸಥ್ಯ ಎಂಬುದು ಪಂಚಾಗ್ನಿಗಳು) ಈ ಘೋರಯುದ್ಧದಲ್ಲಿ ಶಿವ, ಕಾರ್ತಿಕೇಯರು ಶ್ರೀಕೃಷ್ಣನನ್ನು ಎದುರಿಸಲು ಮುಂದುವರೆದರು. ಶ್ರೀಕೃಷ್ಣನು ಶಿವನ ಮೇಲೆ ಜೃಂಭಕಾಸ್ತ್ರ ಪ್ರಯೋಗಮಾಡಿದನು. (ಈ ಜೃಂಬಕಾಸ್ತ್ರದಿಂದ ಎದುರಾಳಿಗೆ ಆಲಸ್ಯ, ಆಕಳಿಕೆಗಳುಂಟಾಗುತ್ತವೆ) ಇದರಿಂದಾಗಿ ಶಿವನು ಸುಮ್ಮನೆ ರಥದಲ್ಲಿ ಕುಳಿತಿದ್ದನು. ಕಾರ್ತಿಕೇಯನ ವಾಹನವು ಗರುಡನ ಆಘಾತಗಳಿಂದ ಗಾಯಗೊಂಡು ನಿಶ್ಶಕ್ತವಾಯಿತು. ಕಾರ್ತಿಕೇಯನು ಪ್ರದ್ಯುಮ್ನನ ಅಸ್ತ್ರದಿಂದ ಪೀಡಿತನಾಗಿ ಶ್ರೀಕೃಷ್ಣನ ಹುಂಕಾರದಿಂದ ಶಕ್ತಿಹೀನನಾಗಿ ಹೊರಟುಹೋದನು. ಹೀಗಾಗಿ ಬಾಣಾಸುರನೇ ಶ್ರೀಕೃಷ್ಣನೊಡನೆ ಯುದ್ಧ ಮಾಡಲು ಸಿದ್ಧನಾದನು.

ನಂದಿಕೇಶ್ವರನು ಹೂಡಿದ ಮಹಾರಥವನ್ನೇರಿದ್ದ ಬಾಣನು ಶ್ರೀಕೃಷ್ಣ ಪ್ರದ್ಯುಮ್ನ, ಬಲರಾಮರನ್ನು ಎದುರಿಸಿದನು. ಮಹಾವೀರನಾದ ಬಲಭದ್ರನು ತನ್ನ ಹಲಾಯುಧದಿಂದಲೂ, ಮುಸಲಾಯುಧದಿಂದಲೂ ಆ ದೈತ್ಯರನ್ನು ಸದೆಬಡಿದನು. ನಂತರ ಬಾಣಾಸುರನಿಗೂ ಶ್ರೀಕೃಷ್ಣನಿಗೂ ಘೋರವಾದ ಯುದ್ಧ ನಡೆಯಿತು.ಇಬ್ಬರೂ ಕವಚಗಳನ್ನು ಬೇಧಿಸತಕ್ಕ ನಿಶಿತಾಸ್ತ್ರಗಳನ್ನು ಪ್ರಯೋಗಿಸುತ್ತಿದ್ದರು. ಹೀಗೆ ನಿರಂತರವಾಗಿ ಯುದ್ಧವು ನಡೆಯುತ್ತಲೇ ಇದ್ದಿತು. ಹೀಗೆ ಸಮಸ್ತ ಶರಗಳು ಭಿನ್ನ ಭಿನ್ನವಾಗುತ್ತಿರಲು, ವಿಶೇಷವಾಗಿ ಅಸ್ತ್ರಗಳೆಲ್ಲ ಕುಂಠಿತವಾಗುತ್ತಿರಲು, ಬಾಣನನ್ನು ಸಂಹರಿಸಬೇಕೆಂದು ಶ್ರೀಹರಿಯ ನಿರ್ಣಯಿಸಿದನು. ಆಗ ಸುದರ್ಶನ ಚಕ್ರವನ್ನು ಹರಿಯು ತನ್ನ ಕರದಿಂದ ಹಿಡಿದನು. ಬಾಣನ ಸಂಹಾರಕ್ಕಾಗಿ ಮಧುಸೂದನನು ಚಕ್ರವನ್ನು ಧರಿಸಿದೊಡನೆ ದೈತ್ಯರ ಮಾಯಾ ವಿದ್ಯಾಧಿದೇವತೆಯಾದ ಕೋಟರಿಯು ಅವನ ಎದುರಿಗೆ ಬತ್ತಲೆಯಾಗಿ ಬಂದು ನಿಂತಳು. ಬತ್ತಲೆಯಾದ ಹೆಂಗಸನ್ನು ಎದುರಿಗೆ ಕಂಡೊಡನೆ ಶ್ರೀಕೃಷ್ಣ ತನ್ನ ಕಣ್ಣನ್ನು ಮುಚ್ಚಿಕೊಂಡು ಬಾಣೋದ್ದಿಷ್ಟವಾದ ಚಕ್ರವನ್ನು ವೈರಿಯ (ಬಾಣನ) ಬಾಹುಗಳನ್ನು ಕತ್ತರಿಸುವಂತೆ ಪ್ರಯೋಗಿಸಿದನು. ಆ ಚಕ್ರವು ಬಾಣಾಸುರನ ಎರಡು ಭುಜಗಳನ್ನು ಮಾತ್ರ ಬಿಟ್ಟು ಮಿಕ್ಕೆಲ್ಲ ಬಾಣಗಳನ್ನು ಕತ್ತರಿಸಿ ಹಾಕಿತು. ಶ್ರೀಕೃಷ್ಣನು ಬಾಣನನ್ನು ವಧಿಸುವುದಕ್ಕಾಗಿ ಅದನ್ನು ಮತ್ತೆ ಕೈಯಲ್ಲಿ ಹಿಡಿದನು.

ಶ್ರೀಕೃಷ್ಣನ ಉದ್ದೇಶವು ತ್ರಿಪುರಾರಿಯಾದ ಈಶ್ವರನಿಗೆ ತಿಳಿಯಿತು. ಅವನು ಶ್ರೀಕೃಷ್ಣನ ಬಳಿಗೆ ಬಂದು ಕೃಷ್ಣ, ಕೃಷ್ಣ ನೀನು ಪುರುಷೋತ್ತಮನಾದ ಹರಿಯೆಂದು ನಾನು ಬಲ್ಲೆ. ಸರ್ವಭೂತಾತ್ಮಕನಾದ ನಿನಗೆ ದೇವ, ತಿರ್ಯಕ್, ಮನುಷ್ಯ ಜನ್ಮಗಳಲ್ಲಿ ಆಯಾಯ ಶರೀರವನ್ನು ಧರಿಸಿ ಅದಕ್ಕೆ ಅನುರೂಪವಾದ ಚೇಷ್ಟೆಯನ್ನು ಮಾಡುವ ಲೀಲೆಯೇ ನಿನ್ನದು. ಎಲೈ ಕೃಷ್ಣ, ನೀನು ಪ್ರಸನ್ನನಾಗು, ನಾನು ಬಾಣಾಸುರನಿಗೆ ಅಭಯವನ್ನು ಕೊಟ್ಟಿದ್ದೇನೆ. ಹೇ ಪ್ರಭು, ನಾನು ಹೇಳಿದ ಮಾತು ಸುಳ್ಳಾಗುವಂತೆ ನೀನು ಮಾಡಬಾರದು. ಹೇ ಪ್ರಭು ಈತನು ನನ್ನ ಆಶ್ರಯದಿಂದ ದುರಹಂಕಾರಿಯಾಗಿರುವುದೇ ಹೊರತು ನಿನಗೆ ಯಾವ ಅಪರಾಧವನ್ನು ಮಾಡಿಲ್ಲ. ಅವರ ಪರವಾಗಿ ನಾನೇ ನಿನ್ನಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ ಎಂದು ಶಂಕರನು ಪಾರ್ಥಿಸಿದನು. ಆಗ ಗೋವಿಂದನು ಪ್ರಸನ್ನ ಚಿತ್ತನಾಗಿ ಬಾಣಾಸುರನ ವಿಷಯದಲ್ಲಿ ಕ್ರೋಧಭಾವವನ್ನು ತೊರೆದು ಹೀಗೆಂದನು "ಹೇ ಶಂಕರ, ನಿನ್ನಿಂದ ವರವನ್ನು ಪಡೆದ ಈ ಬಾಣನು ಬದುಕಿಕೊಂಡಿರಲಿ. ನಿನ್ನ ಮಾತಿಗೆ ಗೌರವವನ್ನಿತ್ತು ನಾನು ಈ ಚಕ್ರವನ್ನು ಹಿಂತೆಗೆದುಕೊಂಡಿರುವೆ."

**ತ್ವಯಾ ಯದಭಯಂ ದತ್ತಂ ತದ್ದತ್ತ ಮಖಿಲಂ ಮಯಾ**

**ಮತ್ತೋವಿಭಿನ್ನ ಮಾತ್ಮಾನಂ ದ್ರಷ್ಟುಉ ಮರ್ಹಸಿ ಶಂಕರ**

**ಯೋಹಂ ಸತ್ವಂ ಜಗಚ್ಛೇದಂ ಸದೇವಾಸುರ ಮಾನುಷಮ್**

**ಮತ್ತೋರೇ ನಾನ್ಯದಶೇಷಂ ಯತ್ತತ್ತ್ವಂ ಜ್ಞಾತುಮಿಹಾರ್ಹಸಿ**

**ಅವಿದ್ಯಾಮೋಹಿತಾತ್ಮಾನಃ ಪುರುಷಾಭಿನ್ನ ದರ್ಶಿನಃ**

**ವದಂತಿ ಬೇಧಂ ಪಶ್ಯಂತಿ ಚಾವಯೋರಂತರಂ ಹರ**

**ಪ್ರಸನ್ನೋಹಂ ಗಮಿಷ್ಯಾಮಿ ತ್ವಗಚ್ಛ ವೃಷಭಧ್ವಜ**

(ವಿ.ಪು. 2ನೇ ಪಂ.ಅಂ.ಅ33. ಶ್ಲೋ 47ರಿಂದ 50)

ಅಷ್ಟೇ ಅಲ್ಲ. ಶ್ರೀಕೃಷ್ಣನು ಶಿವನೊಡನೆ ಮಾತನ್ನು ಮುಂದುವರಿಸುತ್ತಾ ನೀನು ಇತ್ತ ವರವೆಲ್ಲವೂ ನಾನು ಇತ್ತ ವರವೇ. ಶಂಕರ, ನೀನು ನನಗೆ ಅಭಿನ್ನನಾಗಿರುವೆಯೆಂದು ತಿಳಿ. ನಾನು ಯಾರಾಗಿದ್ದೇನೋ ನೀನೂ ಅವನೇ

ಆಗಿದ್ದೀಯೇ ! ದೇವಾಸುರ ಮಾನುಷ ಸಹಿತವಾದ ಈ ಜಗತ್ತು ನನಗಿಂತ ಭಿನ್ನವಾದ ಇನ್ನೊಂದಲ್ಲ ಎಂಬುದನ್ನು ತಿಳಿದಿರು. ಅ ವಿದ್ಯೆಯಿಂದ ವ್ಯಾಮೋಹಿತಚಿತ್ತರಾಗಿ ಈ ಜನರು ಬೇಧದರ್ಶಿಗಳಾಗಿರುತ್ತಾರೆ. ಅವರು ನಿಷ್ಕಾರಣವಾಗಿ ಬೇಧವನ್ನು ಹೇಳುತ್ತಾರಲ್ಲದೇ ನಮ್ಮಿಬ್ಬರಲ್ಲಿಯೂ ಬೇಧವನ್ನು ಕಾಣುತ್ತಾರೆ. ಇದು ಎಂದಿಗೂ ಸಲ್ಲದು. ನಾನೀಗ ಹೊರಡುವೆನು. ನೀನೂ ಹೊರಡು ಎಂದನು. ಹೀಗೆ ನುಡಿದು ಪ್ರದ್ಯುಮ್ನನ (ಹೀಗೆ ಶ್ರೀಕೃಷ್ಣನಿಂದಲೇ ವಿಷ್ಣು ಪಾರಮ್ಯ ನಮಗೆ ಅರ್ಥವಾಗುತ್ತದೆ) ಮಗನಾದ ಅನಿರುದ್ಧನನ್ನು ಬಂಧನದಿಂದ ಬಿಡಿಸಿದನು. ಅನಂತರ ಪತ್ನಿ ಸಮೇತನಾದ ಅನಿರುದ್ಧನನ್ನು ಗರುಡನ ಮೇಲೆ ಕುಳ್ಳಿರಿಸಿಕೊಂಡು ಶ್ರೀಕೃಷ್ಣ, ಬಲರಾಮ, ಪ್ರದ್ಯುಮ್ನರು ದ್ವಾರಕಾನಗರಿಗೆ ಹಿಂತಿರುಗಿದರು. ತಮಿಳಿನಲ್ಲಿ ಒಂದು ಲೋಕೋಕ್ತಿಯಿದೆ. **ಹರಿಯುಂ ಹರನುಂ ಒಣ್ಣು ಇದೈ ಅರಿಯಾದವರ್ ಕಣ್ಣಿಲ್‌ಮಣ್ಣುಃ ಬಾಣಾಸುರ ಕರಾಂತಕಾಯ ನಮಃ** ಇದೆಲ್ಲಾ ಅವರವರ ಅಭಿಮತಕ್ಕೆ ಬಿಟ್ಟದ್ದು.

## ಪೌಂಡ್ರಕ ವಧೆ – ಕಾಶೀರಾಜನೊಡನೆ ಯುದ್ಧ – ಕಾಶೀ ದಹನ

ಮೈತ್ರೇಯರು ಪರಾಶರರನ್ನು ಕುರಿತು "ಶ್ರೀಕೃಷ್ಣನ ಮಹಿಮೆಯನ್ನು ಎಷ್ಟು ಕೇಳಿದರೂ ಸಾಲದು. ಇದುವರೆಗೂ ಇಂದ್ರ, ಶಿವ ಮುಂತಾದ ಸಕಲ ದೇವತೆಗಳನ್ನು ಜಯಿಸಿದ ಬಗ್ಗೆ ನನಗೆ ತಿಳಿಸಿದಿರಿ. ಹೀಗೆಯೇ ಮಾನವ ಜನ್ಮವನ್ನು ತಳೆದ ಭಗವಾನ್ ಶ್ರೀಕೃಷ್ಣನು ಮತ್ತಾವ ಮಹಾಕಾರ್ಯವನ್ನೆಸಗಿದನು. ದಯವಿಟ್ಟು ಅವುಗಳನ್ನು ನನಗೆ ತಿಳಿಸಿ ಎಂದು ಕೇಳಿದರು – ಅದಕ್ಕೆ ಪರಾಶರರು ಪೌಂಡ್ರಕನ ಕಥೆಯನ್ನು ಹೇಳಲು ಪ್ರಾರಂಭಿಸಿದರು. ವಾಸುದೇವ ಎಂಬ ಹೆಸರಿನ ಪೌಂಡ್ರಕ ವಂಶೀಯ ರಾಜನೊಬ್ಬನಿದ್ದನು. ಅಜ್ಞಾನ ಮೋಹಿತರಾದ ಜನರು ಅವನಿಗೆ ನಿಜವಾಗಿ ನೀನೇ ವಾಸುದೇವನಾಗಿ ಭೂಮಿಯಲ್ಲಿ ಅವತರಿಸಿದ್ದೀಯೇ ! ಎಂದು ಹೇಳುತ್ತಿದ್ದರು. ಕಡೆಗೆ ಪೌಂಡ್ರಕನು ಬುದ್ಧಿಗೆಟ್ಟು 'ಹೌದು' ಭೂಮಿಯಲ್ಲಿ ಅವತರಿಸಿದ ವಾಸುದೇವನು ನಾನೇ ಎಂದು ನಿರ್ಧರಿಸಿ ತಾನು ವಿಷ್ಣುವಿನ ಚಿಹ್ನೆಗಳಾದ ಶಂಖ ಚಕ್ರಾದಿಗಳನ್ನು ಮಾಡಿಸಿ ಧರಿಸಿದನು. ಇಷ್ಟೇ ಸಾಲದು ಎಂಬುವಂತೆ ಅವನು ಶ್ರೀಕೃಷ್ಣನ ಬಳಿಗೆ ದೂತನೊಬ್ಬನನ್ನು ಕಳುಹಿಸಿದನು.

ಅವನ ಸಂದೇಶವನ್ನು ಕೇಳಿದರೆ ನಿಜವಾಗಿಯೂ ನಗು ಬರುತ್ತದೆ. ಪೌಂಡ್ರಕನು ಹೀಗೆ ಸಂದೇಶ ಕಳುಹಿಸಿದನು. "ಎಲೈ ಮೂಢ ! ವಿಷ್ಣುಚಿಹ್ನೆಗಳಾದ ಚಕ್ರ ಶಂಖ ಮುಂತಾದವುಗಳು ನನ್ನದೇ ! ವಾಸುದೇವನೆಂಬ ಹೆಸರೂ ನನ್ನದು ! ನೀನು ಬದುಕಬೇಕೆಂದಿದ್ದರೆ ಕೃಷ್ಣ ನೀನು ಅವೆಲ್ಲ ಆಯುಧಗಳನ್ನು ಬಿಡು ಮತ್ತು ನನಗೆ ಶರಣಾಗು" ಎಂದು ಈ ಸಂದೇಶವನ್ನು ಕೇಳಿ ಶ್ರೀಕೃಷ್ಣನು ಗಟ್ಟಿಯಾಗಿ ನಕ್ಕುಬಿಟ್ಟನು. ಅನಂತರ ದೂತನ ಕಡೆಗೆ ತಿರುಗಿ ಎಲೈ ದೂತನೇ, ನೀನು ಹೋಗಿ ನನ್ನ ಪ್ರತಿವಚನವನ್ನು ಪೌಂಡ್ರಕನಿಗೆ ತಿಳಿಸು, ಅದೇನೆಂದರೆ_

**ಗೃಹೀತ ಚಿಹ್ನ ವೇಷೋಹ ಮಾಗಮಿಷ್ಯಾಮಿ ತೇ ಪುರಮ್**

**ಉತ್ಸ್ರಷ್ಯಾಮಿ ಚ ತಚ್ಚಕ್ರಂ ನಿಜಚಿಹ್ನ ಮಸಂಶಯಮ್**

**ಆಜ್ಞಾಪೂರ್ವಂ ಚಯದಿದ ಮಾಗಚ್ಛೇತಿ ತ್ವಯೋದಿತಮ್**

**ಸಂಪಾದಯಿಷ್ಯೇ ಶ್ವಸ್ತುಭ್ಯಂ ಸಮಾಗಮ್ಯಾವಿಲಂಬಿತಮ್**

**ಶರಣಂ ತೇ ಸಮಭ್ಯೇತ್ಯ ಕರ್ತಾಸ್ಮಿ ನೃಪತೇ ತಥಾ**

**ಯಥಾ ತತ್ತೋ ಭಯಂ ಭೂಯೋ ನಮೇ ಕಿಂಚಿದ್ಭವಿಷ್ಯತೊ**

(ವಿ.ಪು. 2ನೇ ಪಂ.ಅಂ.ಅ34. ಶ್ಲೋ 10ರಿಂದ 13)

ಎಲೈ ಪೌಂಡ್ರಕ ನಿನ್ನ ಸಂದೇಶದ ಸಾರಾಂಶ ನನಗೆ ತಿಳಿಯಿತು. ಮುಂದಿನ ಕರ್ತವ್ಯವನ್ನು ನೀನು ಮಾಡಬಹುದು. ನನ್ನ ಈ ವೇಷ ಚಿಹ್ನೆಗಳನ್ನೆಲ್ಲವನ್ನು ತೆಗೆದುಕೊಂಡು ನಿನ್ನ ಪಟ್ಟಣಕ್ಕೆ ಬರುತ್ತೇನೆ. ಸ್ವ ಚಿಹ್ನೆಯಾದ ಚಕ್ರವನ್ನು ನಾನು ನಿಃಸಂಶಯವಾಗಿ ಕೊಟ್ಟು ಬಿಡುತ್ತೇನೆ. ನನ್ನನ್ನು ಬಾ ಎಂದು ಆಜ್ಞಾಪೂರ್ವಕವಾಗಿ ನನಗೆ ಹೇಳಿ ಕಳುಹಿಸಿರುವೆಯಲ್ಲವೇ ? ಖಂಡಿತವಾಗಿಯೂ ನಾಳೆಯೇ ನಾನು ಬರುತ್ತೇನೆ. 'ಎಲೈ ರಾಜ 'ಶರಣಂ ವ್ರಜ' ಎಂದು ನೀನೇ ಹೇಳಿರುವಂತೆ ನಿನ್ನ ಶರಣಕ್ಕೆ ಅಂದರೆ ನಿನ್ನ ಮನೆಗೆ ಬರುವೆನು. ಅಷ್ಟೇ ಅಲ್ಲ ನಿನ್ನಿಂದ ಮತ್ತೆ ಯಾವ ಭಯವೂ ಇಲ್ಲದಂತೆ ಮಾಡಿಕೊಳ್ಳುವೆನು' ಎಂದನು. ಈ ಪ್ರತಿವಚನವನ್ನು ಪಡೆದು ದೂತನು ಹೊರಟುಹೋದನು.

ನಂತರ ಶ್ರೀಹರಿಯು ಸ್ಮರಣಮಾತ್ರದಿಂದಲೇ ಉಪಸ್ಥಿತನಾದ ಗರುಡನನ್ನು ಏರಿ ಪೌಂಡ್ರಕನಪುರಕ್ಕೆ ಪ್ರಯಾಣ ಮಾಡಿದನು. ಕೇಶವನ ಯುದ್ಧಸಿದ್ಧತೆಗಳ ವಿಷಯವನ್ನು ತಿಳಿದು ಕಾಶೀರಾಜನು (ಪೌಂಡ್ರಕನ ಮಿತ್ರ) ಸಮಸ್ತ ಸೈನ್ಯ ಸಮೇತನಾಗಿ ಪೌಂಡ್ರಕನಿಗೆ ನೆರವಾಗಲು ಬಂದನು. ನಂತರ ಪೌಂಡ್ರಕ ವಾಸುದೇವನೂ ತನ್ನ ಪ್ರಬಲವಾದ ಸೈನ್ಯದೊಡನೆ ಶ್ರೀಕೃಷ್ಣನನ್ನು ಎದುರಿಸಲು ಬಂದನು. ಪೌಂಡ್ರಕನಾದರೋ ತನ್ನ ವಿಶಾಲವಾದ ರಥದಲ್ಲಿ ಕುಳಿತು ಚಕ್ರಹಸ್ತನಾಗಿ ಗದೆ, ಶಾರ್ಙ್ಗ ಧನಸ್ಸು, ಕಮಲಗಳನ್ನು ಧರಿಸಿರುವುದನ್ನು ಶ್ರೀಕೃಷ್ಣನು ದೂರದಲ್ಲಿಯೇ ಕಂಡನು. ಅಷ್ಟೇ ಅಲ್ಲ ಅವನೂ ಸಹ ಶ್ರೀಕೃಷ್ಣನಂತೆ ವೈಜಯಂತೀ ಮಾಲೆಯನ್ನು ಧರಿಸಿದ್ದನು. ಪೀತಾಂಬರಧಾರಿಯಾಗಿದ್ದನು. ಅವನ ಧ್ವಜವು ಗರುಡ ಚಿಹ್ನೆಯಿಂದ ಅಂಕಿತವಾಗಿದ್ದಿತು. ವಕ್ಷಸ್ಥಲದಲ್ಲಿ ಶ್ರೀವತ್ಸ ಚಿಹ್ನೆಯಿತ್ತು. ಕಿರೀಟಕುಂಡಲಧಾರನಾಗಿ, ನಾನಾರತ್ನ ವಿಭೂಷಿತನಾಗಿದ್ದ ಆ ಪೌಂಡ್ರಕ ವಾಸುದೇವನನ್ನು ಶ್ರೀಕೃಷ್ಣನು ನೋಡಿ ಗಂಭೀರನಾಗಿ ನಕ್ಕನು.

ಅನಂತರ ಗಜಾಶ್ವಗಳಿಂದ ಕೂಡಿ, ಬಲಾಢ್ಯವೂ ಆದ ನಿಸ್ತ್ರಿಂಶ, ಖಡ್ಗ, ಗಧೆ, ಶೂಲ, ಶಕ್ತಿ, ಧನಸ್ಸು ಮೊದಲಾದ ಆಯುಧಗಳನ್ನು ಹಿಡಿದಿರುವ ಆತನ ಸೈನ್ಯದೊಡನೆ ಶ್ರೀಕೃಷ್ಣ ತನ್ನ ಶಾರ್ಙ್ಗ ಧನಸ್ಸಿನಿಂದ, ಶತ್ರು ಸಂಹಾರಕವಾದ ಬಾಣಗಳಿಂದಲೂ ಯುದ್ಧವನ್ನು ಆರಂಭಿಸಿದನು. ಕೆಲವೇ ಕ್ಷಣಗಳಲ್ಲಿ ಶತ್ರು ಸಂಹಾರಕನಾದ ಶ್ರೀಕೃಷ್ಣನು ತನ್ನ ಶಾರ್ಙ್ಗಧನಸ್ಸಿನಿಂದ, ಗಧಾಚಕ್ರಗಳ ಆಘಾತಗಳಿಂದ ಪೌಂಡ್ರಕನ ಸೈನ್ಯವನ್ನು ನುಚ್ಚುನೂರು ಮಾಡಿದನು. ಕಾಶೀರಾಜನ ಸೇನೆಯನ್ನು ನಾಶಗೊಳಿಸಿದನು. ಪೌಂಡ್ರಕನಿಗೆ ಕೃಷ್ಣನು ಇಂತೆಂದನು. "ಎಲೈ ಪೌಂಡ್ರಕ, ಆತ್ಮ ಚಿಹ್ನೆಗಳನ್ನು ಬಿಡಬೇಕೆಂದು ದೂತನ ಮೂಲಕ ನನಗೆ ಹೇಳಿ ಕಳಿಸಿದ್ದೆಯಲ್ಲವೇ ? ಇದೋ ಈ ಚಕ್ರವನ್ನೂ ಈ ಗಧೆಯನ್ನು ಬಿಟ್ಟಿದ್ದೇನೆ. ನನ್ನ ಗರುಡನೂ ನಿನ್ನ ಧ್ವಜವನ್ನು ಅಡರಲಿ' ಎಂದು ಹೇಳಿ ಚಕ್ರವನ್ನು ಪ್ರಯೋಗಿಸಿದನು. ಹೀಗೆ ಹೇಳಿ ಪ್ರಯೋಗಿಸಿದ ಚಕ್ರದಿಂದ ಪೌಂಡ್ರಕನನ್ನು ಸೀಳಿ ಗಧೆಯಿಂದ ನೆಲಕ್ಕೆ ಉರುಳಿಸಿದನು. ಗರುಡನು ಆತನ ಧ್ವಜಸ್ಥಂಬಕ್ಕೆ ಏರಿ ಮುರಿದು ಬೀಳಿಸಿದನು. ಇದರಿಂದ ಎಲ್ಲೆಲ್ಲಿಯೂ ಹಾಹಾಕಾರವೆದ್ದಿತು. ಬಲಿಷ್ಠನಾದ ಕಾಶಿರಾಜನೂ ಸಹ ಈ ಯುದ್ಧ ಕಣಕ್ಕೆ ಇಳಿದನು. ಆಗ ಶ್ರೀಕೃಷ್ಣನು ತನ್ನ ಶಾರ್ಙ್ಗ ಧನಸ್ಸಿನಿಂದ ಸಿಡಿದ ಶರಗಳಿಂದ

ಕಾಶೀರಾಜ ಶಿರವನ್ನು ತರಿದನು. ಆ ಶಿರಸ್ಸು ಕಾಶಿಗೆ ಹೋಗಿ ಬೀಳುವಂತೆ ಹಾರಿಸಿದನು. ಈ ಕೃತ್ಯಕ್ಕೆ ಲೋಕವೇ ವಿಸ್ಮಯಗೊಂಡಿತು. ಈ ಪ್ರಕಾರ ಶ್ರೀಕೃಷ್ಣನು ಸಕಲ ಪರಿವಾರ ಸಮೇತನಾದ ಪೌಂಡ್ರಕನನ್ನು ಕಾಶಿರಾಜನನ್ನೂ ಸಂಹರಿಸಿ ದ್ವಾರಾವತಿಗೆ ಹಿಂತಿರುಗಿದನು.

ಇಂತಹ ಪೌಂಡ್ರಕ ವಾಸುದೇವರು ಇಂದಿಗೂ ಅನೇಕ ಮಂದಿ ನಮ್ಮಲ್ಲಿ ಇದ್ದಾರೆ. ತಮ್ಮನ್ನು ಸ್ವಯಂಘೋಷಿತ ದೈವವೆಂದೇ ಹೇಳಿಕೊಂಡ ಸಾಮಾನ್ಯ ಜನರನ್ನು ಮೋಸಗೊಳಿಸುತ್ತಿದ್ದಾರೆ. ಅಷ್ಟೇ ಅಲ್ಲ ಇಲ್ಲದ ಸಲ್ಲದ ಹೀನಕೃತ್ಯಗಳನ್ನು ಮಾಡಿ ಅವರನ್ನು  ತಮ್ಮ ಸೇವಕರಂತೆ ಇಟ್ಟುಕೊಂಡಿರುವುದನ್ನು ಇಂದಿಗೂ ನಾವು ಕಾಣಬಹುದು. ಇಂತಹ ದುಷ್ಟರನ್ನು ಕಂಡರೆ ದೂರವಾಗಿರುವುದು ಸರ್ವಥಾಕ್ಷೇಮ. ಇರಲಿ, ಮುಂದೇನಾಯಿತು ಎಂಬುದರ  ಬಗ್ಗೆ ತಿಳಿಯೋಣ.

ಇತ್ತ ಕಾಶೀರಾಜನ ಶಿರಸ್ಸು ಕಾಶೀನಗರದಲ್ಲಿ ಬಿದ್ದುದನ್ನು ನೋಡಿ, ಏನಿದು ? ಯಾರು ಇದನ್ನು ಕತ್ತರಿಸಿದರು ಎಂದು ಅಲ್ಲಿನ ಜನರು ವಿಸ್ಮಿತರಾದರು. ಸಾಕ್ಷಾತ್ ಶ್ರೀಕೃಷ್ಣನೇ ಕೊಂದಿದ್ದಾನೆಂಬುದು  ಕಾಶೀರಾಜನ ಪುತ್ರನಿಗೆ ಗೊತ್ತಾಯಿತು, ಆತನು ಇದರ ಸೇಡನ್ನು ತೀರಿಸಿಕೊಳ್ಳಲು ತನ್ನ ಪುರೋಹಿತನೊಡನೆ ಸಮಾಲೋಚಿಸಿ ತಪಸ್ಸಿನಿಂದ ಶಿವನನ್ನು ಮೆಚ್ಚಿಸಿದನು. ಪರಶಿವನು ಕಾಶೀರಾಜನ ಪುತ್ರನನ್ನು ಕುರಿತು ವರವನ್ನು ಕೇಳಿಕೋ ಎಂದನು. ಆಗ ರಾಜಪುತ್ರನು "ಭಗವಾನ್ ಮಹೇಶ್ವರ ನನ್ನ ತಂದೆಯನ್ನು ಘಾತಿಸಿದ ಕೃಷ್ಣನ ವಧೆಗಾಗಿ ನಿನ್ನ ಅನುಗ್ರಹದಿಂದ ಕೃತ್ಯೆ ಉತ್ಪನ್ನಳಾಗಲಿ" ಎಂದು ವರವನ್ನು ಬೇಡಿಕೊಂಡನು. ಅಂದರೆ "ನನ್ನ ತಂದೆಯನ್ನು ಘಾತಿಸಿದ ಕೃಷ್ಣನ ಎದುರಿಗೆ  ನನ್ನ ವಧೆಗಾಗಿ ಕೃತ್ಯೆಯು  ಹೋಗಿ ನಿಲ್ಲುವಂತಾಗಲಿ ಎಂದು ಕೇಳಿಕೊಂಡನು, ಶಿವನು "ತಥಾಸ್ತು" ಎಂದನು. ('ಕೃತ್ಯೆ ಹುಟ್ಟುವಳೆಂದು ಮಾತ್ರ ಶಿವನು ವರವಿತ್ತನು)  ನಂತರ ಕಾಶೀರಾಜನ ಪುತ್ರನು ಅಭಿಚಾರಯಾಗವನ್ನು ಮಾಡಿದನು.

ಆ ಯಾಗವನ್ನು ಮಾಡುತ್ತಿರುವಾಗ ದಕ್ಷಿಣಾಗ್ನಿಯಿಂದ ಆ ಅಗ್ನಿಯನ್ನೇ ಆರಿಸಿಬಿಡುವಂತಹ, ಒಬ್ಬ ಮಹಾಕೃತ್ಯೆಯು ಆವಿರ್ಭವಿಸಿದಳು.

**ಕಾಶೀರಾಜಸುತೇನೇಯ ಮಾರಾಧ್ಯ ವೃಷಭಧ್ವಜಮ್**

**ಉತ್ಪಾದಿತಾ ಮಹಾಕೃತ್ಯೈತ್ಯವಗಮ್ಯಾಥ ಚಕ್ರಿಣಾ**

**ಆಹಿ ಕೃತ್ಯಾಮಿಮಾಮುಗ್ರಾಂ ವಹ್ನಿ ಜ್ವಾಲಾ ಜಟಾಲಕಾಮ್**

**ಚಕ್ರಮುತ್ಸೃಷ್ಟ ಮಕ್ಷೇಷು ಕ್ರೀಡಾಸಕ್ತೇನ ಲೀಲಯಾ**

**ತದಗ್ನಿ ಮಾಲಾ ಜಟಿಲ ಜ್ವಾಲೋದ್ಗಾರಾತಿ ಭೀಷಣಾಮ್**

**ಕೃತ್ಯಾಮನುಜಗಾಮಾಶು ವಿಷ್ಣುಚಕ್ರಂ ಸುದರ್ಶನಮ್**

**ಚಕ್ರಪ್ರತಾಪನಿರ್ದಗ್ಧಾ ಕೃತ್ವಾ ಮಾಹೇಶ್ವರಿ ತಥಾ**

**ನವಾಶವೇಗಿನೀ ವೇಗಾತ್ತದಪ್ಯನು ಜಗಾಮ ತಾಮ್**

(ವಿ.ಪು. 2ನೇ ಪಂ.ಅಂ.ಅ31. ಶ್ಲೋ 35ರಿಂದ 38)

ಜ್ವಾಲಾಮಾಲಾ ಸ್ವರೂಪಿಣಿಯು ಕರಾಳಮುಖಿಯೂ, ಪ್ರಜ್ವಲಿಸುವ ಮಸ್ತಕ ಕೇಶಿಯೂ, ಆದ ಕೃತ್ಯೆಯು 'ಕೃಷ್ಣ ! ಕೃಷ್ಣ ! ಎನ್ನುತ್ತಾ ದ್ವಾರಕೆಗೆ ಧಾವಿಸಿ ಬಂದಳು. ಈ ವಿಚಿತ್ರವಾದ ರಾಕ್ಷಸಿಯಂತಿರುವ ಕೃತ್ಯೆಯನ್ನು ಕಂಡು ಅಲ್ಲಿನ ಪ್ರಜೆಗಳೆಲ್ಲ ಭಯಗೊಂಡು ವಾಸುದೇವನಲ್ಲಿ ಶರಣಾದರು, ಕಾಶೀರಾಜನ ಮಗನಾದ ಸುದಕ್ಷಿಣನು ಶಿವನನ್ನು ಆರಾಧಿಸಿ ಉತ್ಪಾದಿಸಿದ ಮಹಾಕೃತ್ಯೆ ಇವಳು ಎಂಬುದು ಶ್ರೀಕೃಷ್ಣನಿಗೆ ತಿಳಿಯಿತು. ಆ ಸಮಯದಲ್ಲಿ ಶ್ರೀಕೃಷ್ಣನು ಅಕ್ಷ ಕ್ರೀಡೆಯನ್ನು ಆಡುತ್ತಿದ್ದನು, ತಕ್ಷಣವೇ "ಉಗ್ರಳೂ, ವಹ್ನಿಜ್ವಾಲೆಗಳಿಂದ ಕೂಡಿದ ಈ ಕೃತ್ಯೆಯನ್ನು ಕೊಲ್ಲು" ಎಂದು ಆದೇಶಿಸಿ ಸುದರ್ಶನ ಚಕ್ರವನ್ನು ಪ್ರಯೋಗಿಸಿದನು. ಆ ವಿಷ್ಣುಚಕ್ರವು ಆ ಮಹಾಕೃತ್ಯೆಯನ್ನು ಶೀಘ್ರವೇ ಬೆನ್ನಟ್ಟಿತು. ಚಕ್ರದ ಪ್ರತಾಪಾಗ್ನಿಯಿಂದ ಬೆಂದ ಮಾಹೇಶ್ವರಿ ಕೃತ್ಯೆಯು ಕಣ್ಣಿಗೆ ಕಾಣದಂತೆ ವೇಗವಾಗಿ ಓಡತೊಡಗಿದಳು. ಸುದರ್ಶನ ಚಕ್ರವೂ ವೇಗವಾಗಿ ಅವಳನ್ನೂ ಹಿಂಬಾಳಿಸಿತು. ವಿಷ್ಣುಚಕ್ರದ ಪ್ರಭಾವದಿಂದ ಕೃತ್ಯೆಯ ಪ್ರಭಾವ ಕುಂದುತ್ತಾ ಬಂದಿತು, ಆ ಕೃತ್ಯೆಯು ಕಾಶೀನಗರವನ್ನು ಪ್ರವೇಶಿಸಿದಳು. ಆಗ ಕಾಶೀರಾಜನ ಪುತ್ರನಾದ ಸುದಕ್ಷಿಣನೂ ಸೇನೆಯು ಪ್ರಮಥಗಣಗಳ ಸೇನೆಯೂ ಸುದರ್ಶನ ಚಕ್ರವನ್ನು ಎದುರಿಸಿದನು. ಆದರೇನು ಪ್ರಯೋಜನ ? ಸುದರ್ಶನ ಮಹಾಚಕ್ರವು ಇಡೀ ಕಾಶೀ ನಗರವನ್ನೇ ದಹಿಸಿತು. ಸಮಸ್ತ

ಗೃಹ, ಪ್ರಕಾರ, ಅಂಗಣಗಳಲ್ಲಿ ಜ್ವಾಲೆಯನ್ನು ಬೀರಿ ಆ ವಿಷ್ಣುಚಕ್ರವು ಕಾಶೀನಗರವನ್ನೇ ಸುಟ್ಟುಹಾಕಿತು. ಕಡೆಗೂ ಚಕ್ರಕ್ಕೆ ಕ್ರೋಧ ಶಮನವಾಗಲಿಲ್ಲ, ನಂತರ ಕೋಪಾವಿಷ್ಟವಾಗಿಯೇ ಚಕ್ರವು ಶ್ರೀಕೃಷ್ಣನ ಕೈಗೆ ಬಂದು ಸೇರಿತು.

## ದುರ್ಯೋಧನನ ಮಗಳನ್ನು ಸಾಂಬನು ಅಪಹರಿಸುವುದು ಅವನ ಬಂಧನ

## ಬಲರಾಮನು ಹಲಾಯುಧದಿಂದ ಹಸ್ತಿನಾವತಿ ನಗರವನ್ನೇ ಸೆಳೆಯುವುದು, ಸಾಂಬನ ವಿವಾಹ

ಮೈತ್ರೇಯರು ಪರಾಶರ ಮುನಿಗಳಿಂದ ಬಲರಾಮನ ಶೌರ್ಯ ಸಾಹಸದ ಬಗ್ಗೆ ಕೇಳಲು ಇಚ್ಛಿಸಿದರು. ಆಗ ಬಲರಾಮನ ಪರಾಕ್ರಮದ ಬಗ್ಗೆ ಪರಾಶರರು ಹೀಗೆಂದರು. ಬಲರಾಮನು ಸಾಕ್ಷಾತ್ ಆದಿಶೇಷನ ಅವತಾರ ಎಂಬುದನ್ನು ನಾವು ಈಗಾಗಲೇ ತಿಳಿದಿದ್ದೇವೆ.

ಜಾಂಬವತೀ ಪುತ್ರನಾದ ವೀರ ಸಾಂಬನು ದುರ್ಯೋಧನನ ಪುತ್ರಿ ಲಕ್ಷ್ಮಣೆಯನ್ನು ಸ್ವಯಂವರದ ಸಮಯದಲ್ಲಿ ಕಾದು ಅವಳನ್ನು ಬಲಾತ್ಕಾರವಾಗಿ ಅಪಹರಿಸಿದನು. ಆಗ ಮಹಾವೀರನಾದ ದುರ್ಯೋಧನ, ಕರ್ಣ, ಭೀಷ್ಮ, ದ್ರೋಣಾದಿಗಳು ಕುಪಿತಗೊಂಡು ಯುದ್ಧದಲ್ಲಿ ಸಾಂಬನನ್ನು ಪರಾಜಯಗೊಳಿಸಿ ಸೆರೆಹಿಡಿದರು. ಆ ಸುದ್ಧಿಯನ್ನು ಕೇಳಿದ ಯಾದವರು, ಶ್ರೀಕೃಷ್ಣನೂ ಕುಪಿತರಾಗಿ ಕರ್ಣ, ಭೀಷ್ಮಾದಿಗಳನ್ನು ಪರಾಜಯಗೊಳಿಸಬೇಕೆಂದು ಯುದ್ಧಸನ್ನದ್ಧರಾದರು. ಬಲಭದ್ರನಾದರೋ ಅವರೆಲ್ಲರನ್ನೂ ತಡೆದು ಮದಿರೆಯ ಮದದಿಂದ ತೊದಲುತ್ತ "ದುರ್ಯೋಧನನಿಗೆ ನಾನು ಹೇಳಿದರೆ ಸಾಂಬನನ್ನು ಬಿಡುಗಡೆ ಮಾಡುತ್ತಾನೆ. ಯುದ್ಧದ ಅವಶ್ಯಕತೆ ಇಲ್ಲ. ನಾನೊಬ್ಬನೇ ಕೌರವನ ಬಳಿ ಹೋಗುವೆನು ಎಂದು ಹಸ್ತಿನಾವತಿಗೆ ಪ್ರಯಾಣ ಮಾಡಿದನು. ನಗರದ ಹೊರಗಡೆಯ ಉದ್ಯಾನವನದಲ್ಲಿಯೇ ಅಂದು ಉಳಿದುಕೊಂಡನು. ಬಲರಾಮನು ಬಂದಿರುವ ಸುದ್ದಿಯನ್ನು ಕೇಳಿ ದುರ್ಯೋಧನಾದಿಗಳು ಗೋವು, ಪೂಜಾಸಾಮಾಗ್ರಿ, ಜಲಗಳನ್ನು

ತಂದು ಬಲರಾಮನಿಗೆ ನಿವೇದಿಸಿದನರು. ಬಲರಾಮನು ಅವೆಲ್ಲವನ್ನೂ ವಿಧಿಪೂರ್ವಕವಾಗಿ ಸ್ವೀಕರಿಸಿ ಕೌರವರಿಗೆ ಉಗ್ರಸೇನರಾಜನ ಆಜ್ಞೆಯಾಗಿದೆ. ಸಾಂಬನನ್ನು ಕೂಡಲೇ ಬಿಡುಗಡೆ ಮಾಡಿರಿ" ಎಂದನು. ಬಲರಾಮನ ಆ ಮಾತನ್ನು ಕೇಳಿ ಕರ್ಣ, ದುರ್ಯೋಧನ, ಭೀಷ್ಮ, ದ್ರೋಣಾದಿಗಳು ಕುಪಿತರಾದರು. "ಯದುವಂಶವೇ ರಾಜ್ಯಕ್ಕೆ ಅನರ್ಹವಾದದ್ದು" ಎಂದು ತಿಳಿದ ಬಾಹ್ಲಿಕ ಮೊದಲಾದವರು ಬಲರಾಮನಿಗೆ ಹೀಗೆಂದರು. ಏನಯ್ಯಾ ಕುರುಕುಲೋದ್ಭವರಾದ ಚಕ್ರವರ್ತಿಗಳಿಗೆ ಆಜ್ಞೆಯನ್ನು ಕೊಡತಕ್ಕ ಯಾದವನು ಅವನ್ಯಾವನು ? ಉಗ್ರಸೇನನೂ ಸಹ ಕುರು ವಂಶೋದ್ಭವರಿಗೆ ಆಜ್ಞೆಯನ್ನೀಯುವುದಾದರೆ ಕುರುವಂಶೋದ್ಭವರಿಗೆ ಆಜ್ಞೆಯನ್ನು ನೀಡುವುದಾದರೆ ರಾಜಯೋಗ್ಯವಾದ ಈ ಶ್ವೇತಚ್ಛತ್ರಗಳು ಹಾಸ್ಯಾಸ್ಪದಗಳೇ ಸರಿ. ಅಪರಾಧಿಯಾದ ಸಾಂಬನನ್ನು ನಾವು ಬಿಡತಕ್ಕವರಲ್ಲ. ಎಲೈ ಬಲರಾಮ ನಿನ್ನ ಆಜ್ಞೆಯೂ ನಡೆಯದು. ಉಗ್ರಸೇನನ ಆಜ್ಞೆಯೂ ನಡೆಯದು. ನಿಮಗೆಲ್ಲಾ ಇಲ್ಲಿ ಸಮಾನವಾದ ಆಸನ ಭೋಜನಗಳನ್ನಿತ್ತು ನಿಮ್ಮೊಡನೆ ವ್ಯವಹರಿಸಿದ್ದರಿಂದ ನಿಮಗೆ ಗರ್ವ ತಲೆಗೇರಿದೆ. ಒಟ್ಟಿನಲ್ಲಿ ಸಾಂಬನನ್ನು ನಾವು ಬಿಡುವುದಿಲ್ಲ ಎಂದು ನಿಶ್ಚಯಿಸಿ ಹೇಳಿ ಅವರೆಲ್ಲರೂ ಹಸ್ತಿನಾವತಿ ನಗರದೊಳಗೆ ಹೊರಟುಹೋದರು.

ಇತ್ತಲಾಗಿ ತನ್ನನ್ನು ತಿರಸ್ಕರಿಸಿದ್ದರಿಂದ ರೋಷದಿಂದ ಒಮ್ಮೆ ಬಲರಾಮ ತನ್ನ ಹಿಮ್ಮಡಿಯಿಂದ ನೆಲವನ್ನು ಒದ್ದನು. ಆ ಮಹಾತ್ಮನ ಹಿಮ್ಮಡಿಯ ಒದೆತಕ್ಕೆ ಭೂಮಿಯು ಸೀಳಿ ಆಸ್ಫೋಟಿಸಿ ದಿಕ್ಕು ದಿಕ್ಕಿಗೆ ಜೋರಾಗಿ ಶಬ್ದ ಕೇಳಿಸಿತು. ಈ ಕುರುವಂಶೀಯರಿಗೆ ಅದೆಷ್ಟು ಸೊಕ್ಕು, ನಮ್ಮ ಉಗ್ರಸೇನ ಮಹಾರಾಜನನ್ನೇ ಅವಮಾನ ಮಾಡುತ್ತಿರುವರು ಇಂದ್ರಾದಿ ದೇವತೆಗಳಿಗೂ ನಮ್ಮ ಯೋಗ್ಯತೆ ಏನೆಂದು ಚೆನ್ನಾಗಿ ತಿಳಿದಿದೆ. ಹೀಗಿರುವಲ್ಲಿ ನೂರಾರು ವರುಷ ಮಾನುಷರು ಕುಳಿತು ಎಂಜಲಾಗಿರುವ ಸಿಂಹಾಸನದಲ್ಲಿ ಈ ಕೌರವರಿಗೆ ತೃಪ್ತಿಯಾಗಿದೆ. ಇವರಿಗೆ ಧಿಕ್ಕಾರ ! ಉಗ್ರಸೇನನು ಸಮಸ್ತಭೂಪತಿಗಳಿಗೆ ಅಧಿಪತಿ ಈ ದಿನವೇ ಈ ಪೃಥ್ವಿಯಲ್ಲಿ ಕುರು ವಂಶದವರಿಲ್ಲದಂತೆ

ತೊಡೆದು ಹಾಕಿ ನಾನು ದ್ವಾರಕೆಗೆ ತೆರಳುತ್ತೇನೆ. ದುರ್ಯೋಧನ, ಕರ್ಣ, ಭೀಷ್ಮ ಬಾಹ್ಲಿಕ ಮುಂತಾದವರನ್ನು ಕೊಂದುಹಾಕುತ್ತೇನೆ. ವೀರನಾದ ಸಾಂಬ ಕುಮಾರನನ್ನು ಅವನ ಪತ್ನೀ ಸಹಿತನಾಗಿ ಕರೆದುಕೊಂಡೇ ದ್ವಾರಕನಗರಕ್ಕೆ ಹೋಗಿ ಉಗ್ರಸೇನಾದಿ ಬಾಂಧವರನ್ನು ನಾನು ಕಾಣುವೆನು ಅಥವಾ ಕೌರವರು ನೆಲೆಸಿರುವ ಈ ಹಸ್ತಿನಾವತಿ ನಗರವನ್ನೇ ಕೌರವ ಸಮೇತರಾಗಿ ಗಂಗಾನದಿಯಲ್ಲಿ ಎಳೆದು ತಳ್ಳಿಬಿಡುವೆನು ಎಂದುಕೊಂಡನು. ಒಡನೆಯೇ ಬಲಭದ್ರನು ಹಲಾಯುಧವನ್ನು ಕೆಳಮುಖವಾಗಿರಿಸಿ ಅದರ ತುದಿಯನ್ನು ನಗರದ ಕೋಟೆಯ ಬುಡದಲ್ಲಿ ನೆಟ್ಟು ಬಲವಾಗಿ ಎಳೆದನು. ಇದರಿಂದ ಇಡೀ ನಗರವೇ ಅಲ್ಲಾಡಿತು. ಕ್ಷುಬ್ಧರಾದ ಕೌರವರೆಲ್ಲರೂ  ಭಯದಿಂದ ತಳಮಳಗೊಂಡರು. ಅವರು ಬಲರಾಮನ ಬಳಿಗೆ ಓಡಿಬಂದು "ಎಲೈ ರಾಮ, ರಾಮ, ಮಹಾಬಾಹು, ಕ್ಷಮಿಸಪ್ಪಾ, ಕ್ಷಮಿಸಿ, ಕೋಪವನ್ನು ಬಿಡು ಪ್ರಸನ್ನನಾಗು. ಇದೋ ಪತ್ನಿಸಹಿತನಾದ ಸಾಂಬನನ್ನು ಒಪ್ಪಿಸುತ್ತಿದ್ದೇವೆ. ನಿನ್ನ ಮಹಿಮೆಯನ್ನು ತಿಳಿಯದೇ ಅಪರಾಧ ಮಾಡಿದೆವು ಎಂದು ಸಾಂಬನನ್ನು ದುರ್ಯೋಧನನ ಮಗಳಾದ ಲಕ್ಷ್ಮಣೆಯನ್ನು ಬಲರಾಮನಿಗೆ ಒಪ್ಪಿಸಿದರು. ಈಗಲೂ ಸಹ ಹಸ್ತಿನಾಪುರವು ಗಂಗಾನದಿಯ ಕಡೆಗೆ ಸರಿದು ಓರೆಯಾಗಿ ನಿಂತಿರುವುದನ್ನು ನಾವು ಕಾಣಬಹುದು.

## ಬಲರಾಮನಿಂದ ದ್ವಿವಿದನ ವಧೆ

ಮಹರ್ಷಿಗಳು ಮೈತ್ರೇಯರಿಗೆ ಬಲರಾಮನ ಪರಾಕ್ರಮದ ಬಗ್ಗೆ ವಿವರಿಸುತ್ತಾ ಹೀಗೆಂದರು. ಮಹಾವೀರನೂ, ವಾನರ ಶ್ರೇಷ್ಠನೂ ಆದ ದ್ವಿವಿಧನೆಂಬುವನು ಇದ್ದನು. ಇವನು ರಾಮಾಯಣದಲ್ಲಿ ಬರುವ ಮೈಂದ, ದ್ವಿವಿದರಲ್ಲಿ ಒಬ್ಬನು ಎಂದು ಭಾಗವತದಲ್ಲಿ ಹೇಳಲಾಗಿದೆ. (ಭಾಗ–10–17–2)

**ನರಕಸ್ಯಾ ಸುರೇಂದ್ರಸ್ಯ ದೇವಪಕ್ಷವಿರೋಧಿನಃ ।**
**ಸಖಾ ಭವನ್ಮಹಾವೀರ್ಯೋ ದ್ವಿವಿದೋ ವಾನರರ್ಷಭಃ ॥**

**ವೈರಾನುಬಂಧಂ ಬಲವನ್ ಸ ಚಕಾರ ಸುತಾನ್ ಪ್ರತಿ ।**

**ನರಕಂ ಹತವಾನ್ ಕೃಷ್ಣೋ ದೇವರಾಜೇನ ಚೋದಿತಃ ॥**

**ಕರಿಷ್ಯೇ ಸರ್ವದೇವಾನಾಂ ತಸ್ಮಾ ದೇತತ್ಪ್ರತಿ ಕ್ರಿಯಾಮ್ ।**

**ಯಜ್ಞವಿಧ್ವಂಸನಂ ಕುರ್ವನ್ ಮರ್ತ್ಯಲೋಕಕ್ಷಯಂತಥಾ ॥**

(ವಿ.ಪು. 2ನೇ ಪಂ.ಅಂ.ಅ36. ಶ್ಲೋ 2ರಿಂದ 4)

ದ್ವಿವಿದನು ನರಕಾಸುರನ ಮಿತ್ರನಾಗಿದ್ದನು. ದೇವಪಕ್ಷ ವಿರೋಧಿಯಾಗಿದ್ದನು. ದೇವೇಂದ್ರನಿಂದ ಪ್ರೇರಿತನಾಗಿ ಶ್ರೀಕೃಷ್ಣನು ನರಕಾಸುರನನ್ನು ಕೊಂದನೆಂಬ ಕಾರಣದಿಂದ ದ್ವಿವಿದನಿಗೆ ದೇವತೆಗಳ ವಿಷಯದಲ್ಲಿ ದ್ವೇಷವುಂಟಾಗಿದ್ದಿತು. ಆದ್ದರಿಂದ ಯಜ್ಞಗಳನ್ನು ನಾಶಪಡಿಸಿ ಮಾನವರನ್ನು ಕೊಂದುಹಾಕಿ ದೇವತೆಗಳಿಗೆ ಪ್ರತೀಕಾರ ಮಾಡಬೇಕೆಂದು ನಿರ್ಧರಿಸಿದನು. ನಂತರ ಅಜ್ಞಾನದಲ್ಲಿ ಮುಳುಗಿದ ದ್ವಿವಿದನು ಯಜ್ಞಭಂಗ ಮಾಡಿ, ಸಾಧುಮರ್ಯಾದೆಯನ್ನು ಉಲ್ಲಂಘಿಸಿ ಮಾನವರನ್ನು ಕೊಲ್ಲುವ ಉದ್ಯೋಗದಲ್ಲಿ ತೊಡಗಿದ್ದನು. ಕೆಲವು ವೇಳೆ ಬೆಟ್ಟಗಳನ್ನು ಪುರದ ಮೇಲೆ ಎಸೆದು ಗ್ರಾಮಾದಿಗಳನ್ನು ಪುಡಿಪುಡಿ ಮಾಡುತ್ತಿದ್ದನು. ಬೆಟ್ಟಗಳನ್ನೇ ಕಿತ್ತು ಹಾಕಿ ನೀರಿಗೆ ತಳ್ಳಿ ತಾನು ಸಮುದ್ರದಲ್ಲಿಳಿದು ನೀರನ್ನು ಉಕ್ಕಿಸುತ್ತಿದ್ದನು. ಆದ್ದರಿಂದ ಸಮುದ್ರದ ಅಲೆಗಳು ತಮ್ಮ ಮೇರೆದಪ್ಪಿ ವೇಗದಿಂದ ನುಗ್ಗಿ ತೀರದಲ್ಲಿರುವ ಗ್ರಾಮನಗರಿಗಳನ್ನು ತೇಲಿಸಿಬಿಡುತ್ತಿದ್ದವು. ಕಾಮರೂಪಿಯಾದ ದ್ವಿವಿದನು ಬೃಹದಾಕಾರವನ್ನು ತಳೆದು ಹೊಲಗದ್ದೆಗಳನ್ನು ನಾಶಪಡಿಸುತ್ತಿದ್ದನು. ಈ ಕಪಿಯ ಹಾವಳಿಯಿಂದಾಗಿ ಯಜ್ಞಯಾಗಾದಿಗಳೆಲ್ಲ ನಿಂತು ಹೋದವು. ಪ್ರಜೆಗಳೆಲ್ಲ ದುಃಖಿತರಾದರು.

ಹೀಗಿರುವಲ್ಲಿ ಒಂದು ಬಾರಿ ಬಲಭದ್ರನು ರೈವತ ಪರ್ವತದಲ್ಲಿ ಉದ್ಯಾನವನದಲ್ಲಿ ಮದಿರೆಯನ್ನು ಕುಡಿದು ವಿಹರಿಸುತ್ತಿದ್ದನು. ಅವನ ಜೊತೆಯಲ್ಲಿ ಪತ್ನಿ ರೇವತಿಯೂ ಮತ್ತಿತರ ಸುಂದರ ಸ್ತ್ರೀಯರೂ ಇದ್ದರು. ಆ ಸಮಯದಲ್ಲಿ ದ್ವಿವಿದ ವಾನರನು ಬಂದು ಬಲಭದ್ರನ ಹಲಾಯುಧ ಹಾಗೂ ಮುಸಲಾಯುಧಗಳನ್ನು ಅಪಹರಿಸಿ ಅವನೆದುರಿಗೆ ಕಪಿಚೇಷ್ಟೆಗಳನ್ನು ಮಾಡತೊಡಗಿದನು. ಅಷ್ಟೇ ಅಲ್ಲದೆ ಈ ವಾನರನು ಸ್ತ್ರೀಯರ ಎದುರಿಗೆ

ಹಲ್ಲುಕಿರಿದು ನಕ್ಕು, ಪಾನದ್ರವ್ಯಗಳ ಭರಿತವಾದ ಪಾತ್ರೆಗಳನ್ನು ಒಡೆದು ಅತ್ತಿತ್ತ ಎಸೆದನು. ಆಗ ಬಲಭದ್ರನು ಸಿಟ್ಟಿನಿಂದ ದ್ವಿವಿದನನ್ನು ಗದರಿಸಿದರೂ ಅವನನ್ನು ಲೆಕ್ಕಿಸದೆ ಅಣಕಿಸಿದನು. ಇದರಿಂದ ಬಲರಾಮನ ಕೋಪವು ಇನ್ನೂ ಹೆಚ್ಚಾಯಿತು. ಸಿಟ್ಟಿನಿಂದ ಅವನು ತನ್ನ ಮುಸಲಾಯುಧವನ್ನು ಕಿತ್ತುಕೊಂಡನು. (ಒನಕೆಯ ಆಕಾರದ ಕಬ್ಬಿಣದ ಆಯುಧ) ಆಗ ವಾನರ ವೀರನಾದ ದ್ವಿವಿದನು ಒಂದು ದೊಡ್ಡ ಬಂಡೆಯನ್ನು ಎತ್ತಿ ಬಲರಾಮನ ಮೇಲೆ ಬೀಸಿದನು. ಬಲರಾಮನಾದರೋ ತನ್ನ ಮುಸಲಾಯುಧದಿಂದ ಆ ಬಂಡೆಯನ್ನು ಸಾವಿರ ಚೂರುಗಳನ್ನಾಗಿ ಒಡೆದು ಬೀಳಿಸಿದನು.

ಅನಂತರ ಮುಸಲದ ಹೊಡೆತದಿಂದ ತಪ್ಪಿಸಿಕೊಂಡ ದ್ವಿವಿದನು ಕೋಪಾವಿಷ್ಟನಾಗಿ ಹಾರಿಬಂದು ಬಲಭದ್ರನ ಎದೆಗೆ ಗುದ್ದಿದನು. ಆಗ ಬಲಭದ್ರನೂ ಕೋಪಗೊಂಡು ಮುಷ್ಟಿಯಿಂದ ಅವನ ತಲೆಯಮೇಲೆ ಕುಟ್ಟಿದನು. ಆ ಹೊಡೆತಕ್ಕೆ ದ್ವಿವಿದನು ನೆತ್ತರನ್ನು ಕಕ್ಕುತ್ತಾ ಸತ್ತುಬಿದ್ದನು. ದ್ವಿವಿದನ ಶರೀರವು ಉರುಳಿದಾಗ ಇಂದ್ರನ ವಜ್ರಾಯುಧವು ಒಡೆಯಿತೋ ಎಂಬಂತೆ ಗಿರಿಶೃಂಗವು ಒಡೆದು ಚೂರು ಚೂರಾಯಿತು. ದೇವತೆಗಳೆಲ್ಲ ಬಲರಾಮನ ಮೇಲೆ ಹೂಮಳೆಗರೆದರು. ಹೀಗೆ ಅತ್ಯಂತ ಬಲಶಾಲಿಯೂ ಪರಾಕ್ರಮಿಯೂ ಆದ ಬಲರಾಮನನು ತನ್ನ ಶೌರ್ಯ ಪರಾಕ್ರಮವನ್ನು ತೋರಿಸಿದನು.

### ಋಷಿಗಳಿಂದ ಯಾದವರಿಗೆ ಶಾಪ

### ಪರಸ್ಪರ ಹೊಡೆದಾಡಿ ಯಾದವರು ನಾಶ ಹೊಂದುವುದು

## ಭಗವಂತನು ತನ್ನ ನಿಜಧಾಮಕ್ಕೆ ತೆರಳುವುದು

ಪರಾಶರ ಮುನಿಗಳು ಮೈತ್ರೇಯರಿಗೆ ಭಗವಂತನ ಎರಡು ಸಂಕಲ್ಪಗಳು ಎಂದರೆ ಸಾಧುಪರಿತ್ರಾಣ, ದುಷ್ಟಶಿಕ್ಷಣಗಳನ್ನು ವಿವರಿಸುತ್ತಾ, ಮಾನವ ಜನ್ಮ ತಳೆದ ಶ್ರೀಕೃಷ್ಣನು ಹೇಗೆ ತನ್ನ ಪರಂಧಾಮವನ್ನು ಸೇರಿದನು ಎಂಬುದರ ಬಗ್ಗೆಯೂ ವಿವರಿಸುತ್ತಾರೆ.

ಭಗವಂತ ಶ್ರೀಕೃಷ್ಣಪರಮಾತ್ಮನು ಅರ್ಜುನನ ಜೊತೆಗೂಡಿ, ಕುರುಕ್ಷೇತ್ರ ಯುದ್ಧದಲ್ಲಿ ದುರ್ಯೋಧನಾದಿ ಸಮಸ್ತ ಹದಿನೆಂಟು ಅಕ್ಷೌಹಿಣಿ ಸೇನೆಯನ್ನು ವಧಿಸಿ ಭೂಭಾರವನ್ನು ಇಳಿಸಿದನು. ಇದರ ಬಗ್ಗೆ 'ಮಹಾಭಾರತ'ದಲ್ಲಿ ಸವಿಸ್ತಾರವಾಗಿ ವಿವರಿಸಲಾಗಿದೆ.

ಹೀಗೆ ಶ್ರೀಕೃಷ್ಣ ಭೂಭಾರವನ್ನು ಇಳಿಸಿ ಎಲ್ಲ ದುಷ್ಟರಾಜರನ್ನು ವಧಿಸಿ, ಬ್ರಾಹ್ಮಣ ಶಾಪವ್ಯಾಜದಿಂದ ಯದುಕುಲವನ್ನೇ ನಾಶಮಾಡಿದನು. ನಂತರ ಶ್ರೀಕೃಷ್ಣನು ದ್ವಾರಕೆಯನ್ನು ಬಿಟ್ಟು, ತಾನೂ ತನ್ನ ಮನುಷ್ಯ ಜನ್ಮವನ್ನು ತ್ಯಜಿಸಿ ತನ್ನ ಬಲರಾಮಾದಿ ಅಂಶಗಳೊಡನೆ ನಿಜಧಾಮವನ್ನೈದಿದನು. ಈ ನಿಜಧಾಮವಾದರೂ ಯಾವುದು ಹುಲುಮಾನವರು ಊಹಿಸಲೂ ಅಸಾಧ್ಯವಾದಂತಹುದು. ವೈಕುಂಠಲೋಕ ಎಂದು ಕ್ಷೀರಾಬ್ಧಿ ಎಂದೂ, ಮೃತ್ಯು ಭಯವೇ ಇಲ್ಲದ ನಿಜಧಾಮವೆಂದೂ, ವೈಕುಂಠಕ್ಕೆ ಅರ್ಚಿರಾದಿ ಮಾರ್ಗದಲ್ಲಿ ಹೋದರೆ ಮತ್ತೆ ಭೂಲೋಕಕ್ಕೆ ಬರುವ ತಂಟೆಯೇ ಇಲ್ಲ ಎಂದು ಮುಂತಾಗಿ ವೇದ, ಪುರಾಣ, ಉಪನಿಷತ್ತುಗಳು ನಮಗೆ ತಿಳಿಸುತ್ತದೆ. ಇಂತಹ ನಿಜಧಾಮಕ್ಕೆ ಹೊರಡುವ ಮುನ್ನ ಯದುಕುಲವನ್ನೇ ನಾಶಮಾಡಿದ ಬಗ್ಗೆ ಪರಾಶರರು ಮೈತ್ರೇಯರಿಗೆ ವಿವರಿಸಿದರು.

ಪರಾಶರ ಉವಾಚ :

**ವಿಶ್ವಾಮಿತ್ರಸ್ತಥಾ ಕಣ್ವೋ ನಾರದಶ್ಚ ಮಹಾಮುನಿಃ ।**
**ಪಿಂಡಾರಕೇ ಮಹಾತೀರ್ಥೇ ದೃಷ್ಟ್ವಾ ಯಮಕುಮಾರಕೈಃ ॥**

**ತತಸ್ತ ಯೌವನೋನ್ಮತ್ತಾ ಭಾವಿಕಾರ್ಯ ಪ್ರಚೋದಿತಾಃ ।**
**ಸಾಯಂ ಜಾಂಬವಂತೋಪುತ್ರಂ ಭೂಷಯಿತ್ವಾ ಸ್ತ್ರೀಯಂ ಯಥಾ ।**

**ಪ್ರಶ್ರಿತಾಸ್ತಾನ್ಮುನೀ ನೂಚುಃ ಪ್ರಣಿಪಾತ ಪುರಸ್ಸರಮ್ ।**
**ಇಯಂ ಸ್ತ್ರೀ ಪುತ್ರಕಾಮಾ ವೈ ಬ್ರೂತಂ ಕಿಂ ಜನಯಿಷ್ಯತಿ ॥**

**ದಿವ್ಯಜ್ಞಾನೋಪಪನ್ನಾಸ್ತೇ ವಿಪ್ರಲಬ್ಧಾಃ ಕುಮಾರಕೈಃ**
**ಮುನಯಃ ಕುಪಿತಾಃ ಪ್ರೋಚು ರ್ಮುಸಲಂ ಜನಯಿಷ್ಯತಿ ।**

ಸರ್ವಯಾದವಸಂಹಾರ ಕಾರಣಂ  ಭುವನೋತ್ತರಮ್
ಯೇನಾಖಿಲಕುಲೋತ್ತಾದೋ ಯಾದವಾನಾಂ ಭವಿಷ್ಯತಿ
ಇತ್ಯುಕ್ತಾಸ್ತೇ ಕುಮಾರಾಸ್ತ ಆಚ ಚಕ್ಷುರ್ಯಥಾತಥಮ್
ಉಗ್ರಸೇನಾಯ ಮುಸಲಂ ಜಜ್ಞೇ ಸಾಂಬಸ್ಯ ಚೋದರಾತ್

ತದುಗ್ರಸೇನೋ ಮುಸಲಮಯಶ್ಚೂರ್ಣ ಮಕಾರಯತ್
ಜಜ್ಞೇರ ತದೇರಕಾಚೂರ್ಣಂ ಪ್ರಕ್ಷಿಪ್ತ ತೈರ್ಮಹೋದಧೌ

ಮುದಲಸ್ಯಾಥ ಲೋಹಸ್ಯ ಚೂರ್ಣಿತಸ್ಯ ತು ಯಾದವೈಃ
ಖಡ್ಗಂ ಚೂರ್ಣೀಕಶೇಷಂ ತು ತತೋ ಯತ್ತೋ ಮರಾಕೃತಿ
ತದಸ್ಯಮ್ಬುನಿಧೌ ಕ್ಷಿಪ್ತಂ ಮತ್ಸ್ಯೋಜಗ್ರಾಹ ಜಾಲಿಭಿಃ
ಘಾತಿತದ್ಯೋದರಾತ್ತಸ್ಯ ಲುಬ್ಧೋ ಜಗ್ರಾಹ ತಜ್ಜರಾಃ

ವಿಜ್ಞಾತ ಪರಮಾರ್ಥೋಽಪಿ ಭಗವಾನ್ ಮಧುಸೂದನಃ
ವೈಚ್ಛತ್ತದನ್ಯಥಾ ಕರ್ತುಂ ವಿಧಿನಾಯತ್ಸ ಮೀಹಿತಮ್ ॥

ದೇವೈಶ್ಚ ಪ್ರಹಿತೋ ವಾಯುಃ ಪ್ರಣಿಪತ್ಸಾಹ ಕೇಶವಮ್
ರಹಸ್ಯೇವಮಹಂದೂತಃ ಪ್ರಹಿತೋಭಗವಾನ್‌ಸುರೈಃ

ವಸ್ವಶ್ವಿಮರು ರಾದಿತ್ಯರುದ್ರ ಸಾಧ್ಯಾದಿಬಿಸ್ಯಹ ।
ವಿಜ್ಞಾಪಯತಿ ಶಕ್ರಸ್ತ್ವಾಂ ತದಿದಂ ಶ್ರೂಯತಾಂ ವಿಭೋ॥

ಭಾರಾವತರಣಾರ್ಥಾಯ ವರ್ಷಾಣಾಮಧಿಕಂಶತಮ್
ಭಗವಾನವತೀರ್ಣೋಽತ್ರ ತ್ರಿದಶೈಸ್ಸಹ ಚೋದಿತಃ

ದುರ್ವೃತ್ತಾನಿಹತಾ ದೈತ್ಯಾ ಭುವೋ ಬಾರೋವತಾರಿತಃ
ತ್ವಯಾ ಸನಾಥಾಸ್ತ್ರೀದಶಾ ಭವಂತು ತ್ರಿದಿವೇ ಸದಾ

ತದತೀತಂ ಜಗನ್ನಾಥ ವರ್ಷಾಣಾಮಧಿಕಂ ಶತಮ್
ಇದಾನೀ ಗಮ್ಯತಾಂ  ಸ್ವರ್ಗೋ ಭವತಾ ಯದಿ ರೋಚತೇ

**ದೇವೈರ್ವಿಜ್ಞಾಪ್ಯತೇ ದೇವ ತಥಾತ್ರೈವ ರತಿಸ್ತವ**
**ತತ್ಸ್ಥೀಯತಾಂ ಯಥಾಕಾಲ ಮಾಖ್ಯೇಯ ಮನುಜೇವಿಭಿಃ**

(ವಿ.ಪವು. ಅಂ.ಪಂ. ಅಂ. 37, ಶ್ಲೋ 6ರಿಂದ 21)

ಪರಾಶರರು ಮೈತ್ರೇಯರಿಗೆ ಹೀಗೆಂದರು. ಒಮ್ಮೆ ಪಿಂಡಾರಕವೆಂಬ ಮಹಾಕ್ಷೇತ್ರದಲ್ಲಿ ಯದುಕುಮಾರರು ವಿಶ್ವಾಮಿತ್ರ, ಕಣ್ವ ಮತ್ತು ನಾರದ ಮುನಿಗಳನ್ನು ಕಂಡರು. (ಈ ಪಿಂಡಾರಕವೆಂಬ ಕ್ಷೇತ್ರವು ಈಗಲೂ ಗುಜರಾತ್‌ನ ವಾಯುವ್ಯ ಭಾಗದಲ್ಲಿದೆ) ಅವರಿಗೆ ಯೌವನಮದವು ತಲೆಗೇರಿತ್ತು. ಅಷ್ಟೇ ಅಲ್ಲದೇ ಭವಿಷ್ಯತ್ತಿನಲ್ಲಿ ಅಂದರೆ ಮುಂದೆ ಸಂಭವಿಸಬಹುದಾದ ಅನೇಕ ಅನಾಹುತಗಳಿಗೆ ಕಾರಣರಾದರೋ ಎಂಬಂತೆ, (ವಿಧಿಯಿಂದಲೂ ಪ್ರಚೋದಿತರಾದವರಂತೆ) ಜಾಂಬವತೀ ಪುತ್ರನಾದ ಸಾಂಬನಿಗೆ ಸ್ತ್ರೀ ವೇಷವನ್ನು ತೊಡಿಸಿ ಆ ಮುನಿಗಳ ಬಳಿಗೆ ಕರೆದೊಯ್ದರು. ಅವರ ಮುಂದೆ ಅತ್ಯಂತ ವಿನಯವಾಗಿ ಇರುವಂತೆ ತೋರ್ಪಡಿಸಿಕೊಂಡು ನಮಸ್ಕರಿಸಿ, "ಮಹರ್ಷಿಗಳೇ ಈ ಸ್ತ್ರೀಗೆ ಪುತ್ರನನ್ನು ಪಡೆಯಬೇಕೆಂಬ ಆಸೆ ಇದೆ. ಇವಳು ಯಾವ ಸಂತಾನವನ್ನು ಪಡೆಯುವಳು ಹೇಳಿರಿ" ಎಂದು ಕೇಳಿದರು. ದಿವ್ಯಜ್ಞಾನ ಸಂಪನ್ನರಾದ ಆ ಮುನಿಗಳು ಯದುಕುಮಾರರು ಈ ಕುಚೇಷ್ಟೆಗೆ ಕೈಹಾಕಿದ್ದಾರೆ ಎಂದು ತಿಳಿದು ಕುಪಿತರಾಗಿ "ಲೋಕೋತ್ತರವಾದ ಮುಸಲವನ್ನು ಹಡೆಯುವಳು" ಎಂದು ಉತ್ತರಿಸಿದರು. (ಮುಸಲ ಎಂದರೆ ಒನಕೆಯ ಆಕಾರದ ಒಂದು ಕಬ್ಬಿಣದ ಆಯುಧ) ಅಷ್ಟೇ ಅಲ್ಲ, "ಆ ಮುಸಲವೇ ಸರ್ವ ಯಾದವರ ಸಂಹಾರಕ್ಕೆ ಕಾರಣವಾಗುತ್ತದೆ. ಸಮಸ್ತ ಯಾದವ ಕುಲವು ನಾಶವಾಗುವುದು ಎಂದು ಶಪಿಸಿದರು. ಈ ವೃತ್ತಾಂತವನ್ನೆಲ್ಲ ಆ ಕುಮಾರರು ಉಗ್ರಸೇನ ಮಹಾರಾಜನಿಗೆ ತಿಳಿಸಿದರು. ಋಷಿಮುನಿಗಳ ವಾಕ್ಕಿನಂತೆ ಸಾಂಬನಿಗೆ ಅವನ ಉದರದಿಂದ ಮುಸಲವು ಜನಿಸಿತು. ಉಗ್ರಸೇನನಾದರೋ ಅದನ್ನೆಲ್ಲ ಕುಟ್ಟಿ ಪುಡಿಮಾಡಿಸಿ ಸಮುದ್ರದಲ್ಲಿ ಎಸೆಯುವಂತೆ ಆಜ್ಞೆ ಮಾಡಿದನು. ಈ ಪುಡಿಯಿಂದ ಸಮುದ್ರತೀರದಲ್ಲಿ ಏರಕಾ ಎಂಬ (ಗರಿಕೆಹುಲ್ಲು) ಹುಲ್ಲು ಬೆಳೆದವು. ಮುಸಲವನ್ನು ಪುಡಿಮಾಡಿದಾಗ ಈಟಿಯ ಆಕಾರದ ಒಂದು ಕಬ್ಬಿಣದ ತುಂಡು ಉಳಿದಿತ್ತು. ಅದನ್ನೂ ಸಹ

ಯಾದವರು ಸಮುದ್ರದಲ್ಲಿ ಎಸೆದರು. ಆ ತುಂಡನ್ನು ಒಂದು ಮೀನು ನುಂಗಿತು. ಬೆಸ್ತರು ಆ ಮೀನನ್ನು ಹಿಡಿದು ಸೀಳಿದಾಗ ಆ ತುಂಡು ಸಿಕ್ಕಿತು. ಅದನ್ನು 'ಜರಾ' ಎಂಬ ವ್ಯಾಧನು ತೆಗೆದುಕೊಂಡನು. ಈ ವಿಷಯವೆಲ್ಲ ಪರಮಾತ್ಮನಾದ ಶ್ರೀಕೃಷ್ಣನಿಗೆ ತಿಳಿದಿತ್ತು. ಆದರೂ ವಿಧಿಯ ಉದ್ದೇಶವನ್ನು, ವಿಧಿವಿಲಾಸವನ್ನು ಬದಲಾಯಿಸಲು ಅವನು ಇಷ್ಟಪಡಲಿಲ್ಲ.

ಇದೇ ಸಂದರ್ಭದಲ್ಲಿ ದೇವತೆಗಳು ಸಮಾಲೋಚಿಸಿ ವಾಯುದೇವನನ್ನು ಶ್ರೀಕೃಷ್ಣನ ಬಳಿಗೆ ಕಳುಹಿಸಿದರು. ವಾಯುದೇವನು ಶ್ರೀಕೃಷ್ಣನಲ್ಲಿಗೆ ಬಂದು ನಮಸ್ಕಾರ ಮಾಡಿ ಹೀಗೆಂದನು. ಹೇ ಭಗವಾನ್ ದೇವತೆಗಳಿಂದ ಕಳುಹಿಸಲ್ಪಟ್ಟ ದೂತ ನಾನು. ಅಷ್ಟ ವಸುಗಳು, ಅಶ್ವಿನೀ ದೇವತೆಗಳು, ಮರುತ್ತುಗಳು, ರುದ್ರರುಮ, ಸಾಧ್ಯರು ಮೊದಲಾದ ದೇವಗಣಗಳಿಂದ ಸಹಿತನಾಗಿ ದೇವೇಂದ್ರನು ಹೀಗೆ ವಿಜ್ಞಾಪಿಸುತ್ತಿದ್ದಾನೆ. ಹೇ ಸ್ವಾಮಿ, ಅವರ ಸಂದೇಶವನ್ನು ಕೇಳಿ ಸ್ವಾಮಿ "ದೇವತೆಗಳ ಪ್ರಾರ್ಥನೆಯಂತೆ ಅವರೊಡನೆ ಭೂಭಾರವನ್ನು ಇಳಿಸುವುದಕ್ಕಾಗಿ ಭಗವಂತನು ಅವತರಿಸಿ ನೂರುವರ್ಷಗಳಿಗೂ ಮೇಲಾಯಿತು. ದುರಾತ್ಮರಾದ ದೈತ್ಯರನ್ನು ಸಂಹರಿಸಿದ್ದೂ ಆಯಿತು. ಇನ್ನು ದೇವತೆಗಳೆಲ್ಲಾ ಸ್ವರ್ಗದಲ್ಲಿ ನಿನ್ನೊಡನೆ ಇರಲು ಇಚ್ಛಿಸುತ್ತಾರೆ. ಹೇ ಜಗದೀಶ್ವರ ನೀನು ಈ ಧರೆಗೆ ಇಳಿದು ನೂರು ವರ್ಷಗಳಿಗೂ ಹೆಚ್ಚಾಯಿತು. ನಿನಗೆ ಇನ್ನೂ ಈ ಭೂಲೋಕದಲ್ಲಿಯೇ ಇರಬೇಕೆಂದು ಇಷ್ಟವಾದರೆ ಇಲ್ಲಿಯೇ ಇರಬಹುದು. ಇಲ್ಲದಿದ್ದಲ್ಲಿ ದಯವಿಟ್ಟು ತಾವು ಸ್ವರ್ಗಕ್ಕೆ ಪಯಣಿಸಬಹುದು" ಎಂದು ವಾಯುವು ಹೇಳಿದನು. ಈ ವಾಯುದೇವನ ಮಾತನ್ನು ಸೂಕ್ಷ್ಮವಾಗಿ ಗಮನಿಸಿ ಕೃಷ್ಣನಿಗೆ ಸ್ವರ್ಗಕ್ಕೆ ಬರಬೇಕೆಂದು ಇಚ್ಛೆಯಿದ್ದರೆ ಮಾತ್ರ ಬರುವಂತೆ ದೇವತೆಗಳು ಹೇಳಿಕಳುಹಿಸುತ್ತಾರೆ. ಭೃತ್ಯರಾದವರು ತಮ್ಮ ಸ್ವಾಮಿಗೆ ಸಮಯವೇನೆಂಬುದನ್ನು ಅರಿಕೆಮಾಡಿಕೊಳ್ಳುವುದು ಕರ್ತವ್ಯ ಎಂದನು. ಬರುವುದಾಗಲಿ, ಇಲ್ಲಿಂದ ಸ್ವರ್ಗ ಲೋಕಕ್ಕೆ ಹೋಗುವುದಾಗಲಿ ಭಗವಂತನ ಇಚ್ಛೆ ಎಂದು ವಾಯುದೇವನೇ ಸ್ಪಷ್ಟಪಡಿಸಿದ್ದಾನೆ. ಇದೇ ವ್ಯತ್ಯಾಸ ನಮ್ಮಂತಹ ಹುಲುಮಾನವರಿಗೂ ಹಾಗೂ ದೇವಮಾನವನಾದ ಪರಮಾತ್ಮ ಕೃಷ್ಣನಿಗೂ ಇರುವುದು – **'ತೇನವಿನಾ ತೃಣಮಪಿನಚಲತಿ'** ಎಂಬಂತೆ ಸಕಲವೂ ಆ ಭಗವಂತನ ಇಚ್ಛೆಗೆ ಬಿಟ್ಟದ್ದು ಎಂಬುದು ವಾಯುದೇವನ ಮಾತಿನಿಂದ

ಸ್ಪಷ್ಟವಾಗುತ್ತದೆ. ಇರಲಿ ಇದಕ್ಕೆ ಶ್ರೀಕೃಷ್ಣ ಏನೆಂದು ಉತ್ತರವಿತ್ತನು ಎಂಬುದನ್ನು ನೋಡೋಣ.

**ಶ್ರೀಭಗವಾನುವಾಚ :**

**ಯತ್ತ್ವ ಮಾತ್ಥಾಖಿಲಂ ದೂತ ವೇದ್ಮ್ಯೇತದಹಮಪ್ಯುತ**
**ಪ್ರಾರಬ್ಧ ಏವ ಹಿ ಮಯಾ ಯಾದವಾನಾಂ ಪರೀಕ್ಷಯಃ**

**ಭುವೊ ನಾದ್ಯಾಪಿ ಭಾ ರೋಯಂ ಯಾದವೈರನಿಬರ್ಹಿತೈಃ**
**ಅವತಾರ್ಯ ಕರೋಮ್ಯೇತತ್ ಸಪ್ತರಾತ್ರೇಣ ಸತ್ವರಃ**

**ಯಥಾ ಗೃಹೀತೋ ಮಮ್ಭೋಧೇ ರ್ದತ್ವಾಹಂ ದ್ವಾರಕಾಭುವಮ್**
**ಯಾದವಾನುಪ ಸಂಹೃತ್ಯ ಯಾಸ್ಯಾಮಿತ್ರಿದಶಾಲಯಮ್**

**ಮನುಷ್ಯದೇಹಮುತ್ಸೃಜ್ಯ ಸಂಕರ್ಷಣ ಸಹಾಯವಾನ್**
**ಪ್ರಾಪ್ತ ಏವಾಸ್ಮಿ ಮಂತವ್ಯೋ ದೇವೇಂದ್ರೇಣ ತಥಾಮರೈಃ**
**ಜರಾಸಂಧಾದಯೋ ಯೇನ್ಯೇ ನಿಹತಾ ಭಾರಹೇತವಃ**
**ಕ್ಷಿತೇ ಸ್ತೇಭ್ಯಃ ಕುಮಾರೋಪಿ ಯದೂನಾಂ ನಾಪಚೀಯತೇ**
**ತದೇತಂ ಸುಮಹಾಭಾರಮವತಾರ್ಯ ಕ್ಷಿತೇರಹಮ್**
**ಯಸ್ಯಾಮ್ಯಮರ ಲೋಕಸ್ಯ ಪಾಲನಾಯ ಬ್ರವೀಹಿತಾನ್**

(ವಿ.ಪು. 2ನೇ ಸಂ.ಪಂ.ಅಂ. ಅ 37 ಶ್ಲೋ22ರಿಂದ 27)

ಶ್ರೀಕೃಷ್ಣನು ವಾಯುದೇವನನ್ನು ಕುರಿತು ಹೀಗೆಂದನು– “ಎಲೈ ದೇವದೂತನೇ ನೀನು ಹೇಳುವುದನ್ನೆಲ್ಲ ನಾನು ಬಲ್ಲೆನು. ಈಗಾಗಲೇ ಈ ಯಾದವರ ನಾಶದ ಕಾರ್ಯ ಆರಂಭವಾಗಿದೆ. ಈ ಯಾದವರನ್ನು ಕೊಂದಹೊರತು ಭೂಭಾರವನ್ನು ಈಗಲೂ ಇಳಿಸಿದಂತಾಗುವುದಿಲ್ಲ. ಇನ್ನು ಏಳುರಾತ್ರಿಯೊಳಗೆ ಅಂದರೆ ಒಂದು ವಾರದೊಳಗೆ ಈ ಕಾರ್ಯವನ್ನು ಬೇಗನೇ

ಮಾಡಿ ಮುಗಿಸಿಬಿಡುತ್ತೇನೆ. ಸಮುದ್ರರಾಜನಿಂದ ಪಡೆದಿರುವ ದ್ವಾರಕೆಯ ನೆಲವನ್ನು ಆತನಿಗೆ ಹಿಂತಿರುಗಿಸಿ ಕೊಟ್ಟು ಈ ಯಾದವರನ್ನು ಮುಗಿಸಿ, ನಂತರ ನಾನು ಸ್ವರ್ಗಲೋಕಕ್ಕೆ ಬರುವೆನು. ಈ ಮನುಷ್ಯ ದೇಹವನ್ನು ತ್ಯಜಿಸಿ ಬಲರಾಮ ಸಮೇತನಾಗಿ ನಾನು ಬಂದೆನೆಂದೇ ದೇವೇಂದ್ರನೂ, ದೇವತೆಗಳೂ, ತಿಳಿದುಕೊಳ್ಳಲಿ ಭೂಭಾರಕಾರಿಗಳೆಂದು ಬಗೆದು ಜರಾಸಂಧಾದಿಗಳನ್ನು ಸಂಹರಿಸಿದ್ದಾಯಿತು. ಯಾದವರಲ್ಲಿ ಒಬ್ಬೊಬ್ಬ ಬಾಲಕನೂ ಜರಾಸಂಧಾದಿಗಳಿಗಿಂತ ಕಡಿಮೆ ಏನಲ್ಲ! ಆದ್ದರಿಂದ ಭೂಮಿಗೆ ಅತ್ಯಂತ ಭಾರಕಾರಿಗಳಾದ ಯಾದವರನ್ನು ನಾಶಪಡಿಸಿ ದೇವಲೋಕದ ಪಾಲನೆಗಾಗಿ ಬರುವೆನು. ಹೀಗೆಂದು ಅವರಿಗೆ ತಿಳಿಸು ಎಂದನು. ಹೀಗಿರುವಲ್ಲಿ ಕೃಷ್ಣನು ದ್ವಾರಕಾನಗರದಲ್ಲಿ ಹಗಲು ರಾತ್ರಿಯೂ ವಿನಾಶಸೂಚಕವಾದ ಉತ್ಪಾತ ಅಂದರೆ ಭೂಕಂಪ, ಭೂಕುಸಿತ, ಉಲ್ಕಾಪಾತ ಅಂದರೆ ಅಂತರಿಕ್ಷದಲ್ಲಿ ಸಂಭವಿಸುವ ವ್ಯತ್ಯಾಸಗಳನ್ನು ಕಂಡನು. ಯಾದವರನ್ನು ಕಂಡು ಅತಿಭೀಕರವಾದ ಈ ಮಹೋತ್ಪಾತಗಳನ್ನು ನೋಡಿರಿ ! ಇವುಗಳ ಶಾಂತಿಗಾಗಿ ಬೇಗನೇ ನಾವೆಲ್ಲಾ ಪ್ರಭಾಸ ಕ್ಷೇತ್ರಕ್ಕೆ ಹೋಗೋಣ ಎಂದನು.

ಈ ಸಂದರ್ಭದಲ್ಲಿ ಉದ್ಧವನೆಂಬ ಕೃಷ್ಣಭಕ್ತನು "ಭಗವಾನ್ ಈಗ ನಾನೇನು ಮಾಡಬೇಕೆಂದು ಆಜ್ಞಾಪಿಸು". ಈಗ ಇಡೀ ಯಾದವ ಕುಲವೇ ನಾಶವಾಗುವ ಲಕ್ಷಣಗಳನ್ನು ನಾನು ಕಾಣುತ್ತಿದ್ದೇನೆ' ಎಂದನು. ಆಗ ಭಗವಂತನು "ಉದ್ಧವ, ನರ–ನಾರಾಯಣಸ್ಥಾನವಾದ ಗಂಧಮಾದನ ಪರ್ವತದಲ್ಲಿ ಬದರಿಕಾಶ್ರಮವೆಂಬ ಪುಣ್ಯಕ್ಷೇತ್ರವಿದೆ. ಅದು ಈ ಭೂತಳದಲ್ಲಿ ಪರಮಪವಿತ್ರವಾದದ್ದು. ನನ್ನ ಅನುಗ್ರಹದಿಂದ ಲಭಿಸುವ ದಿವ್ಯಗತಿಯಿಂದ ಅಲ್ಲಿಗೆ ಹೋಗು. ಅಲ್ಲಿ ನನ್ನನ್ನೇ ನೀನು ಧ್ಯಾನಿಸುತ್ತಾ ಇರು. ಅಲ್ಲಿಯೇ ನೀನು ಸಿದ್ಧಿಯನ್ನು ಪಡೆಯುವೆ. ನಾನು ಈ ಕುಲವನ್ನೇ ಉಪಸಂಹರಿಸಿ ಸ್ವರ್ಗಲೋಕಕ್ಕೆ ತೆರಳುವೆನು. ನಾನು ತ್ಯಜಿಸಿದ ದ್ವಾರಕೆಯನ್ನು ಸಮುದ್ರವು ತೇಲಿಸಿ ನೀರಲ್ಲಿ ಮುಳುಗಿಸಿಬಿಡುತ್ತದೆ. ನನ್ನ ಭವನವನ್ನು ಮಾತ್ರ ನನ್ನ ಭಯದಿಂದ ಸಮುದ್ರ ರಾಜನು ಮುಟ್ಟುವುದಿಲ್ಲ. ಭಕ್ತರ ಹಿತಕ್ಕಾಗಿ ನಾನು ಅಲ್ಲಿ ಪಕ್ಕದಲ್ಲಿಯೇ ಇರುವೆನು" ಎಂದನು. ಹೀಗೆ ಹೇಳಿದೊಡನೆ ಉದ್ಧವನು ಭಗವಂತನಿಗೆ ನಮಸ್ಕರಿಸಿ ಆತನ ಅನುಮತಿಯನ್ನು ಪಡೆದು ನರ–

ನಾರಾಯಣರ ನಿವಾಸಸ್ಥಾನವಾದ ಬದರಿಕಾಶ್ರಮಕ್ಕೆ ತೆರಳಿದನು. ನಂತರ ಕೃಷ್ಣ ಬಲರಾಮಾದಿಗಳೊಡನೆ ಸಮಸ್ತ ಯಾದವರೂ ರಥಗಳನ್ನೇರಿ ಪ್ರಭಾಸಕ್ಷೇತ್ರಕ್ಕೆ ಪಯಣಿಸಿದರು. ಆ ಕ್ಷೇತ್ರಕ್ಕೆ ಹೋದ ನಂತರ ಕುಕುರಾಂಧಕ ವೃಷ್ಣಿ ವಂಶೀಯರಾದ ಯಾದವರು ಭೋಜನ ಮಾಡುತ್ತಾ ಶ್ರೀಕೃಷ್ಣನ ಪ್ರೇರಣೆಯಿಂದಲೇ ಯಥೇಚ್ಛವಾಗಿ ಮದ್ಯಪಾನ ಮಾಡಿದರು. ಅವರು ಹೀಗೆ ಮದ್ಯವನ್ನು ಕುಡಿಯುವಾಗ ಅವರಲ್ಲಿಯೇ ಸಂಘರ್ಷವುಂಟಾಯಿತು. ಒಬ್ಬರಿಗೊಬ್ಬರು ಬೈದುಕೊಂಡು ಕಲಹಾಗ್ನಿಯು ಭುಗಿಲೆದ್ದಿತು. ಆಗ ಪರಾಶರರನ್ನು ಮೈತ್ರೇಯರು ಕೇಳಿದರು "ಮುನಿಗಳೇ, ಆ ಯಾದವರು ತಮ್ಮ ತಮ್ಮದನ್ನು ತಾವು ತಿನ್ನುತ್ತಿರುವಾಗ ಈ ಜಗಳಕ್ಕೆ ಕಾರಣವಾದರೂ ಏನು ? ಎಂದು ಕೇಳಿದಾಗ ಪರಾಶರರು ಹೀಗೆಂದರು. ಅವರು ಒಬ್ಬರಿಗೊಬ್ಬರು ನಾನು ತಿನ್ನುತ್ತಿರುವುದು ಮೃಷ್ಟಾನ್ನ, ನೀನು ತಿನ್ನುತ್ತಿರುವುದು ಶುದ್ಧವಲ್ಲದ ಕಳಪೆ ಖಾದ್ಯ ಎಂದರು. ಹೀಗಾಗಿ ಸಂಘರ್ಷ ಕಲಹಗಳು ಉಂಟಾದವು. ಹೀಗೆ ಜಗಳ ಹೆಚ್ಚಾಗಿ ಒಬ್ಬರಿಗೊಬ್ಬರು ಶಸ್ತ್ರಗಳನ್ನೇ ತೆಗೆದುಕೊಂಡು ಹೋರಾಡಿದರು. ಆಯುಧಗಳೆಲ್ಲಾ ಮುಗಿದಮೇಲೆ ಹತ್ತಿರದಲ್ಲಿದ್ದ ಏರಕಾತೃಣವನ್ನು ಕಿತ್ತುಕೊಂಡರು. ಆ ಹುಲ್ಲು, ವಜ್ರಾಯುಧದಂತೆ ಕಠೋರವಾಗಿತ್ತು. ಆದರಿಂದಲೇ ಭೀಕರವಾಗಿ ಹೊಡೆದಾಡಿ ಒಬ್ಬರನ್ನೊಬ್ಬರು ಕೊಂದುಹಾಕಿದರು. ಪ್ರದ್ಯುಮ್ನ, ಸಾಂಬ, ಕೃತವರ್ಮ, ಸಾತ್ಯಕಿ, ಅನಿರುದ್ಧ, ಪೃಥು, ವಿಪೃಥು, ಚಾರುವರ್ಮ, ಚಾರುಕಾ, ಅಕ್ರೂರ ಮೊದಲಾದವರು ವಜ್ರಾಯುಧ ಸದೃಶವಾದ ಏರಕಾತೃಣಗಳಿಂದ ಬಡಿದಾಡಿದರು. ಇದು ವಿಧಿವಿಲಾಸವೇ ಸರಿ. ಶ್ರೀಕೃಷ್ಣನು ಇದನ್ನು ನೋಡಿಕೊಂಡು ಸುಮ್ಮನೆ ಇದ್ದನೇ? ಇಲ್ಲ, ಅವರನ್ನು ತಡೆಯಲು ಒಬ್ಬರ ಬಳಿ ಹೋದರೆ ಪ್ರತಿಪಕ್ಷದವರಿಗೆ ಕೃಷ್ಣ ಸಹಾಯ ಮಾಡುತ್ತಾನೆಂದು ಭಾವಿಸಿ ಕಲಹವನ್ನು ಮುಂದುವರಿಸುತ್ತಿದ್ದರು. ಇದು ಮದ್ಯದ ಮದವೋ ಅಥವಾ ಮೃಷ್ಟಾನ್ನದ ಕಲಹವೋ ತಿಳಿಯದು. ಅಂತೂ ಪರಸ್ಪರ ತಮ್ಮ ಜನರೊಡನೆ ತಾವು ಹೊಡೆದಾಡಿ ಬಡಿದಾಡಿ ತಮ್ಮ ಸಾವಿಗೆ ತಾವೇ ಕಾರಣರಾದರು. ಆಗ ಕೃಷ್ಣನು ಕುಪಿತನಾಗಿ ಒಂದು ಮುಷ್ಟಿಯಷ್ಟು ಹುಲ್ಲನ್ನು ಕಿತ್ತುಕೊಂಡನು. ಅದು ಲೋಹಮಯವಾದ ಮುಸಲವಾಯಿತು. ಅದರಿಂದಲೇ ಶ್ರೀಕೃಷ್ಣನು ಕೊಲೆಗೆಡುಕರಾದ

ಯಾದವರೆಲ್ಲರನ್ನೂ ಬಡಿದುಕೊಂದನು. ಹತಶೇಷರಾದವರೂ ತಮ್ಮಲ್ಲಿಯೇ ಹೊಡೆದಾಡಿ ಹತರಾದರು. ಮುಂದೆ ಏನಾಯಿತು ?

**ತತಶ್ಚಾರ್ಣವ ಮಧ್ಯೇನ ಜೈ ತ್ರೋಸೌ ಚಕ್ರಿಣೋ ರಥಃ**
**ಪಶ್ಯತೋ ದಾರುತಸ್ಯಾಥ ಪ್ರಾಯಾದಶ್ವೈರ್ಧೃತೋ ಧ್ವಿಜ ॥**

**ಚಕ್ರಂ ಗದಾ ತಥಾ ಶಾರ್ಙ್ಗಂ ತೂಣೀ ಶಂಖೋಸಿರೇವ ಚ ।**
**ಪ್ರದಕ್ಷಿಣಂ ಹರಿಂಕೃತ್ವಾ ಜಗ್ಮುರಾದಿತ್ಯ ವರ್ತ್ಮನಾ ॥**
**ಕ್ಷಣೇನ ನಾಭವತ್ಕಶ್ಚಿದ್ಯಾದವಾನಾಮ ಘಾತಿತಃ ।**
**ಋತೇ ಕೃಷ್ಣಂ ಮಹಾತ್ಮಾನಂ ದಾರುಕಂ ಚ ಮಹಾಮುನೇ ॥**

**ಚಂಕ್ರಮ್ಯಮಾಣ್ ತೌರಾಮಂ ವೃಕ್ಷಮೂಲೇ ಕೃತಾಸನಮ್**
**ದದೃಶಾತೇ ಮುಖಾಚ್ಚಾಸ್ಯ ನಿಷ್ಕ್ರಾಮಂತಂ ಮಹೋರಗಮ್ ॥**

**ನಿಷ್ಕ್ರಮ್ಯ ಸ ಮುಖಾತ್ತಸ್ಯ ಮಹಾಭಾಗೋ ಭುಜಂಗಮಃ**
**ಪ್ರಯಯಾವರ್ಣವಂ ಸಿದ್ಧೈಃ ಪೂಜ್ಯಮಾನಸ್ತಥೋರಗೈಃ**

## ಬಲರಾಮ, ಕೃಷ್ಣರ ನಿರ್ಯಾಣ :

ದಾರುಕನು ನೋಡ ನೋಡುತ್ತಿರುವಾಗಲೇ ಶ್ರೀಕೃಷ್ಣನ ಚೈತ್ರರಥವು ಅಶ್ವಗಳಿಂದ ಎಳೆಯಲ್ಪಟ್ಟು, ಸಮುದ್ರದ ನಡುವೆ ಹೊರಟುಹೋಯಿತು. ಶ್ರೀಕೃಷ್ಣನ ಚಕ್ರ, ಗಧೆ, ಶಾರ್ಙ್ಗ, ಧನಸ್ಸು, ಬತ್ತಳಿಕೆ, ಖಡ್ಗ, ಶಂಖ ಮೊದಲಾದವು ಭಗವಾನ್ ಕೃಷ್ಣನಿಗೆ ನಮಸ್ಕರಿಸಿ ಸೂರ್ಯಮಾರ್ಗದಲ್ಲಿ ತೆರಳಿದವು.

ಒಂದು ಕ್ಷಣಮಾತ್ರದಲ್ಲಿ ಮಹಾತ್ಮನಾದ ಶ್ರೀಕೃಷ್ಣನನ್ನು ಮತ್ತು ದಾರುಕನನ್ನೂ ಬಿಟ್ಟು ಯಾದವರಲ್ಲಿ ಒಬ್ಬರೂ ಬದುಕಿ ಉಳಿಯಲಿಲ್ಲ. ಅವರಿಬ್ಬರೂ ತಿರುಗಾಡುತ್ತಾ ಹೋದಾಗ ಒಂದು ವೃಕ್ಷದ ಕೆಳಗೆ ಬಲರಾಮನು

ಕುಳಿತಿರುವುದನ್ನು ಕಂಡನು. ಅವನ ಬಾಯಿಂದ ಒಂದು ಮಹಾಸರ್ಪವು ಹೊರಬರುತ್ತಿತ್ತು. ಮಹಾಶರೀರವಿದ್ದ ಆ ಸರ್ಪವು ಆತನ ಬಾಯಿಂದ ಹೊರಟು ಸಿದ್ಧರಿಂದಲೂ, ನಾಗರಿಂದಲೂ ಪೂಜಿಸಲ್ಪಟ್ಟು ಸಮುದ್ರವನ್ನು ಪ್ರವೇಶಿಸಿತು. ಪನ್ನಗೋತ್ತಮರಿಂದ ಪೂಜಿತರಾದ ಆ ಸರ್ಪವು ನೀರಿನೊಳಗೆ ಹೊರಟುಹೋಯಿತು. ಈ ಸಂಗತಿಯನ್ನು ವಸುದೇವನಿಗೂ ಉಗ್ರಸೇನನಿಗೂ ಹೇಳಬೇಕೆಂದು ಬಲರಾಮನ ನಿರ್ಯಾಣ ವೃತ್ತಾಂತವನ್ನು ತಿಳಿಸಬೇಕೆಂದು ದಾರಕನಿಗೆ ಶ್ರೀಕೃಷ್ಣನು ತಿಳಿಸಿದನು. ಯಾದವರು ನಾಶವಾದ ಸಂಗತಿಯನ್ನು ಮತ್ತು ನಾನೂ ಸಹ ಯೋಗಾರೂಢನಾಗಿ ಈ ಕಳೇಬರವನ್ನು ತ್ಯಜಿಸುವೆನು ಎಂಬ ವಿಷಯವನ್ನು ದ್ವಾರಕವಾಸಿಗಳಿಗೂ ಮತ್ತು ಉಗ್ರಸೇನನಿಗೂ ತಿಳಿದು, ಈಗ ಇಷ್ಟರಲ್ಲೇ ನಿಖಿಲದ್ವಾರಕ ನಗರವನ್ನು ಸಮುದ್ರವೇ ತೇಲಿಸಿಬಿಡುತ್ತದೆ. ಆದ್ದರಿಂದ ನೀವೆಲ್ಲರೂ ಅರ್ಜುನನು ಬರುವವರೆಗೆ ಕಾಯುತ್ತಾ ಇರಿ. ಪಾಂಡುಪುತ್ರನಾದ ಅರ್ಜುನನು ದ್ವಾರಕೆಯಿಂದ ನಿರ್ಗಮಿಸಿದ ನಂತರ ನೀವು ಯಾರು ಈ ನಗರದಲ್ಲಿರಬಾರದು. ಅರ್ಜುನನು ಎಲ್ಲಿಗೆ ಹೋಗುವನೋ ಅಲ್ಲಿಗೆ ನೀವು ಹೊರಟುಹೋಗಬೇಕು. ಅಷ್ಟೆ ಅಲ್ಲ, ಎಲೈ ದಾರುಕ ನೀನು ಹೋಗಿ ಅರ್ಜುನನಿಗೆ ನಾನು ಹೇಳಿದ್ದೇನೆಂದು ಈ ಮಾತನ್ನು ತಿಳಿಸು. ಅದೇನೆಂದರೆ ಅರ್ಜುನ, ನನ್ನ ಪರಿವಾರದ ಜನರನ್ನು ಯಥಾಶಕ್ತಿ ನೀನು ಪಾಲಿಸಬೇಕು. ನೀನು ದ್ವಾರಕೆಯಲ್ಲಿರುವ ಕೆಲ ಜನರನ್ನು ಕರೆದುಕೊಂಡು ಅರ್ಜುನನೊಡನೆ ತೆರಳು, ಮುಂದೆ ವಜ್ರನು ಯದುರಾಜನಾಗಲಿ ಎಂದನು. ಆಗ ದಾರುಕನು ಮತ್ತೆ ಮತ್ತೆ ಶ್ರೀಕೃಷ್ಣನಿಗೆ ಪ್ರದಕ್ಷಿಣೆ ಸಹಿತ ನಮಸ್ಕಾರ ಮಾಡಿ ಅವನ ಆಜ್ಞೆಯಂತೆ ಹೊರಟುಹೋದನು. ಪ್ರಾಜ್ಞನಾದ ದಾರುಕನು ಎಲ್ಲಾ ವೃತ್ತಾಂತವನ್ನು ವಸುದೇವಾದಿಗಳಿಗೆ ತಿಳಿಸಿ ಹಸ್ತಿನಾವತಿಯಿಂದ ಅರ್ಜುನನ್ನು ಕರೆದುಕೊಂಡು ಬಂದನು. ವಜ್ರನು ಯದುರಾಜನಾಗುವಂತೆ ಸಕಲ ಏರ್ಪಾಟನ್ನೂ ಮಾಡಿದನು.

ಇತ್ತ ಪರಮಾತ್ಮನು ಹೇಗೆ ತನ್ನ ಧಾಮಕ್ಕೆ ಹಿಂತಿರುಗಿದನೆಂಬುದನ್ನು ಪರಾಶರರ ಮಾತುಗಳಿಂದಲೇ ಕೇಳಿ ತಿಳಿಯೋಣ.

**ಭಗವಾನಪಿ ಗೋವಿಂದೋ ವಾಸುದೇವಾತ್ಮಕಂ ಪರಮ್ ।**

ಬ್ರಹ್ಮಾತ್ಮನಿ ಸಮಾರೋಪ್ಯ ಸರ್ವಭೂತೇಷ್ವ ಧಾರಯತ್ ॥

ನಿಷ್ಪ್ರಪಂಚೀ ಮಹಾಭಾಗ ಸಂಯೋಜ್ಯಾತ್ಮಾನ ಮಾತ್ಮನಿ ।
ತುರ್ಯಾವಸ್ಥಂ ಸಲೀಲಂ ಚ ಶೇತೇ ಸ್ಮ ಪುರುಷೋತ್ತಮಃ ॥

ಸಮ್ಮಾನಯನ್ ದ್ವಿಜವಚೋದುರ್ವಾಸಾ ಯದು ವಾಚಹ ।
ಯೋಗ ಯುಕ್ತೋ ಭವತ್ಪಾದಂ ಕೃತ್ವಾ ಜಾನುನಿ ಸತ್ತಮ ॥

ಆಯಯೌ ಚ ಜರಾ ನಾಮ ತದಾತತ್ರ ಸ ಲುಬ್ಧಕಃ ।
ಮುಸಲಾವಶೇಷ ಲೋಹೈಕ ಸಾಯಕನ್ಯಸ್ತ ತೋಮರಃ
ಸತತ್ಪಾದಂ ಮೃಗಾಕಾರ ಮವೇಷ್ಯಾರಾದ ವಸ್ಥಿತಃ ।
ತಲೇ ವಿವ್ಯಾಧ ತೇನೈವ ತೋಮರೇಣ ದ್ವಿಜೋತ್ತಮ ॥
ತತಶ್ಚ ದದೃಶೇ ತತ್ರ ಚತುರ್ಬಾಹುಧರಂ ನರಮ್ ।
ಪುಣಿಪತ್ಯಾಹ ಚೈವೈನಂ ಪ್ರಸೀದೇತಿ ಪುನಃ ಪುನಃ ॥

ಅಜಾನತಾಕೃತಮಿದಂ ಮಯಾ ಹರಿಣಶಙ್ಕಯಾ ।
ಕ್ಷಮ್ಯತಾಂ ಮಮ ಪಾಪೇನ ದಗ್ಧಂ ಮಾಂ ತತ್ರಾತುಮರ್ಹಸಿ ॥

ತತಸ್ತಂ ಭಗವಾನಾಹ ನತೇಸ್ತು ಭಯಮಣ್ವಪಿ ।
ಗಚ್ಛೇ ತಂ ಮತ್ ಪ್ರಸಾದೇನ ಲುಬ್ಧ ಸ್ವರ್ಗಂ ಸುರಾಸ್ಪದಮ್ ॥

(ವಿ.ಪು. 2ನೇ ಸಂ.ಪಂ.ಅಂ.37 ಶ್ಲೋ 66ರಿಂದ 73)

ಶ್ರೀಕೃಷ್ಣಪರಮಾತ್ಮನು ವಾಸುದೇವಾತ್ಮಕವಾದ ಪರಬ್ರಹ್ಮ ವಸ್ತುವನ್ನು ತನ್ನಲ್ಲಿಯೇ ಆರೋಪಿಸಿಕೊಂಡನು. ತಾನೇ ಪರಬ್ರಹ್ಮವೆಂದು ಧ್ಯಾನಿಸಿ ಸರ್ವಭೂತಗಳನ್ನು ತನ್ನಲ್ಲಿ ಧರಿಸಿದನು. ಸರ್ವಭೂತಗಳೂ ತಾನೇ ಎಂದು ಧ್ಯಾನಿಸಿದನು. ಮೈತ್ರೇಯ ಆ ಪುರುಷೋತ್ತಮನು ತನ್ನ ಆತ್ಮವನ್ನು ನಿರ್ವಿಶೇಷವಾದ ಆತ್ಮನಲ್ಲಿ ಲೀನಗೊಳಿಸಿ ತುರೀಯಾವಸ್ಥೆಯಲ್ಲಿ ಲೀಲೆಯಿಂದ ಮಲಗಿದನು. (ಇಲ್ಲಿ ನಾವು ಅನೇಕ ಚಿತ್ರಪಟಗಳಲ್ಲಿ ಶ್ರೀಮನ್ನಾರಾಯಣನು

ಮಲಗಿರುವ ಭಂಗಿಯನ್ನು ಸ್ಮರಿಸಿಕೊಳ್ಳಬಹುದು) ದುರ್ವಾಸನು ಆಡಿದಂತೆ ವಿಪ್ರವಾಕ್ಯವನ್ನು ಮನ್ನಿಸಬೇಕೆಂದು ಉದ್ಧೇಶಿಸಿ ತನ್ನ ಮೊಳಕಾಲಮೇಲೆ ಇನ್ನೊಂದು ಪಾದವನ್ನಿಟ್ಟು ಮಲಗಿದನು. ಹೀಗಿರುವಲ್ಲಿ ಈ ಹಿಂದೆ ಸಾಂಬನ ಹೊಟ್ಟೆಯಿಂದ ಉತ್ಪನ್ನವಾದ ಮುಸಲದ ಅವಶೇಷವಾದ ತೋಮರವನ್ನು ತನ್ನ ಬಾಣದ ತುದಿಗೆ ಅಳವಡಿಸಿಕೊಂಡಿದ್ದ ಜರಾ ಎಂಬ ಬೇಡನು ಆ ಸಮಯದಲ್ಲಿ ಅಲ್ಲಿಗೆ ಬಂದನು. ಆ ಬೇಡನಿಗೆ ಶ್ರೀಕೃಷ್ಣನ ಪಾದವು ಜಿಂಕೆಯ ಆಕಾರದಲ್ಲಿ ಗೋಚರಿಸಿತು. ಜಿಂಕೆಯೆಂದು ಭ್ರಮಿಸಿ ಆತನು ತೋಮರವಿದ್ದ ಬಾಣದಿಂದ ಹೊಡೆದುಬಿಟ್ಟನು. ಹತ್ತಿರ ಬಂದು ನೋಡಿದಾಗ ಬೇಡನಿಗೆ ಚತುರ್ಭುಜನಾದ ಮಾನವ ಎಂದು ಗೊತ್ತಾಯಿತು. ಕೂಡಲೇ ಆ ಬೇಡನು ಬಂದು ಕೃಷ್ಣನ ಪಾದಗಳಲ್ಲಿ ಎರಗಿ ತನ್ನನ್ನು ಕ್ಷಮಿಸಬೇಕು, ಮನ್ನಿಸಬೇಕು ಎಂದು ಮತ್ತೆ ಮತ್ತೆ ಬೇಡಿಕೊಂಡನು. “ನನಗೆ ಗೊತ್ತಾಗದೆ ಬಾಣವನ್ನು ಹೊಡೆದನು. ಜಿಂಕೆಯೆಂದು ಭ್ರಾಂತನಾದೆ. ಕ್ಷಮಿಸಿ, ಈಗಾಗಲೇ ಪಾಪದಿಂದ ದಗ್ಧನಾದ ನನ್ನನ್ನು ಕಾಪಾಡಬೇಕು” ಎಂದು ಪ್ರಾರ್ಥಿಸಿದನು. ಆಗ ಶ್ರೀಕೃಷ್ಣ ಪರಮಾತ್ಮನು “ವ್ಯಾಧ ನೀನು ಸ್ವಲ್ಪವೂ ಹೆದರಬೇಡ, ನನ್ನ ಕೃಪೆಯಿಂದ ದೇವತೆಗಳಿರುವ ಸ್ವರ್ಗಕ್ಕೆ ನೀನು ಹೋಗುವೆ” ಎಂದನು. ಹೀಗೆ ಶ್ರೀಕೃಷ್ಣನು ಹೇಳಿದೊಡನೆ ದೇವ ವಿಮಾನವೊಂದು ಆಗಮಿಸಿತು. ಭಗವಂತನ ಅನುಗ್ರಹದಿಂದ ಆ ವ್ಯಾಧನು ವಿಮಾನವನ್ನೇರಿ ಸ್ವರ್ಗಕ್ಕೆ ಹೋದನು.

**ಗತೇ ತಸ್ಮಿನ್ ಸ ಭಗವಾನ್ ಸಂಯೋಜ್ಯಾತ್ಮಾನ ಮಾತ್ಮನಿ ।**
**ಬ್ರಹ್ಮಭೂತೇ ವ್ಯಯೇ ಚಿಂತ್ಯೇ ವಾಸುದೇವಮಯೇ ಮಲೇ ॥**

**ಅಜನ್ಮನ್ಯಮರೇ ವಿಷ್ಣಾ ವ ಪ್ರಮೇಯೇಽಖಿಲಾತ್ಮನಿ ।**
**ತತ್ಯಾಜ ಮಾನುಷಂ ದೇಹಮತೀತ್ಯ ತ್ರಿವಿಧಾಂ ಗತಿಮ್ ॥**

(ವಿ.ಪು. 2ನೇ ಸಂ. ಪಂಚಮಾಂಶ. ಅ.37, ಶ್ಲೋ 75ಮ76)

ನಂತರ ಶ್ರೀಕೃಷ್ಣನು ತನ್ನ ಆತ್ಮವನ್ನು ಅವ್ಯಯವೂ, ಅಚಿಂತ್ಯವೂ ವಾಸುದೇವಮಯವೂ, ನಿರ್ಮಲವೂ, ಅಜನ್ಮವೂ, ಅಮರವೂ, ವಿಷ್ಣುಶಬ್ದ

ಬೋಧ್ಯವೂ, ಅಪ್ರಮೇಯವೂ, ಅಖಿಲಾತ್ಮ ಸ್ವರೂಪವೂ ಆದ ಪರಬ್ರಹ್ಮದಲ್ಲಿ ಲಯಗೊಳಿಸಿ, ಸತ್ವ, ರಜಸ್ಸು, ತಮಸ್ಸುಗಳೆಂಬ ಗುಣತ್ರಯಾತ್ಮಕವಾದ ಗತಿಯನ್ನು ದಾಟಿ ಮನುಷ್ಯ ದೇಹವನ್ನು ಪರಿತ್ಯಜಿಸಿದನು.

ಪರಾಶರರು ಶ್ರೀಕೃಷ್ಣನ ನಿರ್ಯಾಣದ ಬಗ್ಗೆ ವಿವರಿಸುತ್ತಾ ಎರಡು ಪೂರ್ವ ಘಟನೆಗಳನ್ನು ನೆನಪಿಗೆ ತಂದಿದ್ದಾರೆ. ಅವುಗಳು ಯಾವುವೆಂದರೆ 1) ದುರ್ವಾಸರ ಶಾಪ 2) ಬೇಡನು ಕೃಷ್ಣನಿಗೆ ಬಾಣವನ್ನು ಬಿಟ್ಟಿದ್ದು, ಈ ಎರಡೂ ಘಟನೆಗಳು ಸಾಕ್ಷಾತ್ ಪರಮಾತ್ಮನು ಇಹಲೋಕವನ್ನು ಪರಿತ್ಯಜಿಸಿದಾಗ ಏಕೆ ಸಂಭವಿಸಿತು ಎಂಬುದರ ಬಗ್ಗೆ ನಮಗೆಲ್ಲ ಸಂಶಯ ಬರುತ್ತದೆ ಅಲ್ಲವೇ ! ಅದಕ್ಕೂ ಸಹ ಕಾರಣಗಳನ್ನು ನಮ್ಮ ಋಷಿಮುನಿವರ್ಯರು ನೀಡಿದ್ದಾರೆ. ಅದರ ಬಗ್ಗೆಯೂ ಮಹಾಭಾರತದಲ್ಲಿ ಬರುತ್ತದೆ. ಒಮ್ಮೆ ದುರ್ವಾಸರು ಶ್ರೀಕೃಷ್ಣ ಭಗವಾನನ ತಾಳ್ಮೆಯನ್ನು ಪರೀಕ್ಷಿಸುವುದಕ್ಕಾಗಿ ಬರುತ್ತಾರೆ. ಅವರು ಪಾಯಸವನ್ನು ಕುಡಿದು ಮಿಕ್ಕಿದನ್ನು ಮೈಗೆಲ್ಲಾ ಬಳಿದುಕೋ ಎಂದು ಕೃಷ್ಣನಿಗೆ ಕೊಡುತ್ತಾರೆ, ಕೃಷ್ಣನು ಅದನ್ನು ತನ್ನ ದೇಹಕ್ಕೆಲ್ಲ ಬಳಿದುಕೊಳ್ಳುತ್ತಾನೆ. ಆದರೆ ತನ್ನ ಪಾದತಳಕ್ಕೆ ಮಾತ್ರ ಹಚ್ಚಿಕೊಳ್ಳುವುದಿಲ್ಲ. ಋಷಿಗಳು ಕೊಟ್ಟ ಪವಿತ್ರವಾದ ವಸ್ತುವನ್ನು ಪಾದತಳಕ್ಕೆ ಹಚ್ಚಬಾರದೆಂಬ ಎಂಬ ಪೂಜ್ಯಭಾವನೆ ಅವನಿಗೆ ಇದ್ದಿರಬೇಕು. ಈ ತಾಳ್ಮೆಯ ಪರೀಕ್ಷೆ ಪೂರ್ತಿಯಾದ ನಂತರ ದುರ್ವಾಸರು ಸಂತುಷ್ಟರಾಗಿ "ಎಲೈ ಕೃಷ್ಣ ಪಾಯಸವನ್ನು ದೇಹಕ್ಕೆ ಬಳಿದುಕೊಂಡಿದ್ದರಿಂದ ಈ ಅಂಗಗಳಲ್ಲಿ ನಿನಗೆ ಮೃತ್ಯು ಬರುವುದಿಲ್ಲ. ಆದರೆ ನೀನು ಪಾದಕ್ಕೆ ಪಾಯಸವನ್ನು ಏಕೆ ಬಳಿದುಕೊಳ್ಳಲಿಲ್ಲ ? ಇದು ನನಗೆ ಹಿಡಿಸಲಿಲ್ಲ ಏಕೆ ಹೀಗೆ ಮಾಡಿದೆ ಎಂದು ಕೇಳಿದರು.

**ನತು ಪಾದತಲೇ ಲಿಪ್ತೇ ಕಸ್ಮಾತ್ ತೇ ಪುತ್ರಕಾದ್ಯವೈ**

**ನೈತನ್ಮೇ ಪ್ರಿಯ ಮಿತ್ಯೇವಂ ಸಮಾಂಪ್ರೀತೋಬ್ರುವೀತ್ತದಾ**

(ಅನು– 159–44)

ಇದರಿಂದ ಶ್ರೀಕೃಷ್ಣನಿಗೆ ಪಾದತಳದಲ್ಲಿ ಮೃತ್ಯು ಭಯವಿದ್ದಿತೆಂದು ಆದ್ದರಿಂದಲೇ ಪಾಯಸವನ್ನು ಹಚ್ಚಲಿಲ್ಲ ಎಂದು ಸೂಚಿತವಾಗುತ್ತದೆ.

ಹೀಗಾಗಿ ಈ ಒಂದು ಸಂಗತಿಯನ್ನು ಎಷ್ಟರಮಟ್ಟಿಗೆ ನಂಬಬಹುದು ಎಂಬುದೇ ಸಂಶಯದ ವಿಷಯವಾಗಿದೆ. ಏಕೆಂದರೆ ಜಗನ್ನಿಯಾಮಕನಾದ ಶ್ರೀಕೃಷ್ಣ ಪರಮಾತ್ಮನಿಗೆ ಮೃತ್ಯುಭಯವಿದ್ದಿತು ಎಂಬುದು ಸರಿಯೇ ಇದು ನಗೆಪಾಟಲಾಗುವುದಿಲ್ಲವೇ ?. ಆದರೆ ಇದರಲ್ಲೂ ಒಂದು ಸಮಾಧಾನದ ಉತ್ತರವನ್ನು ನಾವು ಕಂಡುಕೊಳ್ಳಬಹುದು. ಅದೇನೆಂದರೆ ಪ್ರಸ್ತುತ ಶ್ರೀಕೃಷ್ಣನು ಮನುಷ್ಯನ ಅವತಾರವನ್ನು ತಳೆದಿದ್ದನು. ಆದ್ದರಿಂದ ಅವನೂ ಸಹ ಸಾಮಾನ್ಯ ಮನುಷ್ಯನಂತೆ ಭಯವನ್ನು ತಳೆದಿದ್ದನು ಎಂದು ತಿಳಿದುಕೊಳ್ಳಬಹುದು. ಅಂತೂ ಈ ಪಾಯಸದ ವೃತ್ತಾಂತ ರಾಮಾಯಣದಲ್ಲಿಯೂ ರಾಮಾವತಾರದಲ್ಲಿಯೂ ಬರುತ್ತದೆ. ಈ ಪಾಯಸಕ್ಕೂ ರಾಮಕೃಷ್ಣ ಅವತಾರಕ್ಕೂ ಎಡೆಬಿಡದ ನಂಟು ಇದ್ದಿರಬಹುದು.

ಮತ್ತೊಂದು ಘಟನೆ ಎಂದರೆ ಬೇಡನು ಶ್ರೀಕೃಷ್ಣನ ಪಾದಗಳಿಗೆ ಬಾಣ ಪ್ರಯೋಗ ಮಾಡಿದ್ದು. ಈ ಸಂಗತಿಗೂ ಒಂದು ಸಮಾಧಾನವನ್ನು ನಮ್ಮ ಹಿರಿಯರು ಹೇಳುವುದುಂಟು. ಮನುಷ್ಯ ಎಂದ ಮೇಲೆ ಪೂರ್ವಜನ್ಮ ಕೃತ ಪುಣ್ಯಕರ್ಮಗಳಿಗಾಗಲಿ, ಪಾಪಕರ್ಮಗಳಿಗಾಗಲಿ ಅದಕ್ಕೆ ತಕ್ಕ ಫಲವನ್ನು ಅನುಭವಿಸಲೇಬೇಕಷ್ಟೆ. ಇದರಿಂದ ಯಾವ ಮನುಷ್ಯನಾಗಲೀ ಹೊರತಾಗುವುದಿಲ್ಲ. ಅದೇ ಭಗವಂತನಾದ ಕೃಷ್ಣನು ಅದನ್ನು ಅನುಭವಿಸಬೇಕಾಗಿ ಬಂದಿತು. ಅದು ಹೇಗೆ ?. ಈ ಹಿಂದೆ ತ್ರೇತಾಯುಗದಲ್ಲಿ ಶ್ರೀರಾಮ ವಾಲಿಯನ್ನು ಮರದ ಮರೆಯಲ್ಲಿ ಕೊಂದನು. ಎದುರಿಗೆ ನಿಂತು ಬಾಣ ಪ್ರಯೋಗ ಮಾಡಿ ವಾಲಿಯನ್ನು ಕೊಲ್ಲಲಿಲ್ಲ. ಇದು ರಾಮನು ಮಾಡಿದ ತಪ್ಪೇ ಎಂದು ನಮ್ಮಂತಹ ಸಹಜ ಸ್ವಭಾವದ ಮಾನವರಿಗೆ ಅನಿಸುತ್ತದೆ. ಆದ್ದರಿಂದ ತತ್ಫಲ ಕೃಷ್ಣಾವತಾರದಲ್ಲಿ ತಾನು ಸುಮ್ಮನೆ ಮಲಗಿದ್ದಾಗ ಶ್ರೀಕೃಷ್ಣನ ಪಾದವನ್ನು ಜಿಂಕೆಯೆಂದೇ ಭ್ರಮಿಸಿ ಪಾದಕ್ಕೆ ಬಾಣ ಪ್ರಯೋಗ ಮಾಡಿದನು. ಮಹಾ ಮಹಿಮನೆನಿಸಿಕೊಂಡರೂ ಈ ಲೀಲೆಯೂ ಮನುಕುಲಕ್ಕೆ ಒಂದು ಪಾಠವನ್ನು ಹೇಳುವಂತಿದೆ. ಆದ್ಯಂತರಹಿತನಾದ ಶ್ರೀಕೃಷ್ಣ ಪರಮಾತ್ಮನಿಗೆ ಶತಷಃ ವಂದನೆಗಳು. ಅವನ ಕೃಪೆ ನಮ್ಮೆಲ್ಲರ ಮೇಲೆ ಸದಾ ಇರಲಿ.

# ಅರ್ಜುನನ ಪರಾಭವ

ಪರಾಶರ ಮುನಿಗಳು ಮೈತ್ರೇಯರಿಗೆ ಮುಂದಿನ ಸಂಭವಗಳನ್ನು ವಿವರಿಸುತ್ತಾ ಹೀಗೆಂದರು. ಅರ್ಜುನನು ಬಲರಾಮ ಮತ್ತು ಕೃಷ್ಣ ಇವರ ದೇಹಗಳನ್ನು ಯುದ್ಧಭೂಮಿಯಿಂದ ಹುಡುಕಿ ತೆಗೆದು ಅವರಿಗೂ ಮತ್ತಿತರ ಪ್ರಮುಖ ಯಾದವರಿಗೂ ರುಕ್ಮಿಣಿ ಮೊದಲಾದ ಅಷ್ಟ ಮಹಿಷಿಗಳು ಇದ್ದರಲ್ಲವೇ ? ಅವರೆಲ್ಲರೂ ಶ್ರೀಕೃಷ್ಣನ ದೇಹವನ್ನು ಅಪ್ಪಿಕೊಂಡು ಅಗ್ನಿಪ್ರವೇಶಮಾಡಿದರು. ಸತೀಮಣಿ ಎನಿಸಿದ ರೇವತಿಯೂ ಸಹ ಬಲರಾಮನ ದೇಹವನ್ನು ಅಲಂಗಿಸಿಕೊಂಡು ಉರಿಯುವ ಬೆಂಕಿಯಲ್ಲಿ ಬಿದ್ದಳು. ಉಗ್ರಸೇನ, ವಸುದೇವ, ದೇವಕಿ, ರೋಹಿಣಿ ಮುಂತಾದವರೂ ಸಹ ಈ ದುರಂತ ವಾರ್ತೆಯನ್ನು ಕೇಳಿ ಅಗ್ನಿ ಪ್ರವೇಶ ಮಾಡಿದರು. ನಂತರ ಅರ್ಜುನನು ಅವರೆಲ್ಲರಿಗೂ ಯಥಾವಿಧಿಯಾಗಿ ಪ್ರೇತಕಾರ್ಯವನ್ನು ನಡೆಸಿ ಉಳಿದ ಜನರನ್ನು, ವಜ್ರಕುಮಾರರನ್ನು ಕರೆದುಕೊಂಡು ದ್ವಾರಕೆಯಿಂದ ಹೊರಟನು. ಶ್ರೀಕೃಷ್ಣನ ಇತರ ಸಾವಿರಾರು ಪತ್ನಿಯರು ದ್ವಾರಕಾನಗರದಿಂದ ಹೊರಟರು. ಅವರನ್ನೆಲ್ಲಾ ರಕ್ಷಿಸುತ್ತಾ ಅರ್ಜುನನು ಮೆಲ್ಲ ಮೆಲ್ಲನೇ ಪ್ರಯಾಣ ಬೆಳೆಸಿದನು. ಮತ್ತೊಂದು ಅಚ್ಚರಿಯೆಂದರೆ ಶ್ರೀಕೃಷ್ಣನು ಮರ್ತ್ಯಲೋಕವನ್ನು ತ್ಯಜಿಸಿದೊಡನೆ ಸುಧರ್ಮ ಎಂಬ ಇಂದ್ರ ಸಭಾಮಂದಿರ, ಪಾರಿಜಾತವೃಕ್ಷ– ಇವೆರಡೂ ಸ್ವರ್ಗಕ್ಕೆ ಹೊರಟುಹೋದವು. ಯಾವ ದಿನ ಶ್ರೀಹರಿಯು ಈ ಭೂಮಿಯನ್ನು ಬಿಟ್ಟು ಸ್ವರ್ಗಕ್ಕೆ ಹೊರಟುಹೋದನೋ ಆ ದಿನವೇ ಮಲಿನ ಕಾಯನೂ ಬಲಾಢ್ಯನೂ ಆದ ಕಲಿಯು ಭೂಲೋಕವನ್ನು ಪ್ರವೇಶಿಸಿದನು. ಇತ್ತ ಶೂನ್ಯವಾಗಿದ್ದ ದ್ವಾರಕೆಯನ್ನು ಮಹಾಸಾಗರವು ತೇಲಿಸಿ ಮುಳುಗಿಸಿಬಿಟ್ಟಿತು. ಆದರೆ ಶ್ರೀಕೃಷ್ಣನ ಮಂದಿರವೊಂದನ್ನು ಮಾತ್ರ ಸಮುದ್ರವು ಮುಳಗಿಸಲಾಗಲಿಲ್ಲ. ಇಂದಿಗೂ ಸಹ ಆ ಮಂದಿರವನ್ನು ಆಕ್ರಮಿಸಲು ಸಮುದ್ರಕ್ಕೆ ಸಾಮರ್ಥ್ಯವಿಲ್ಲ. ಏಕೆಂದರೆ ಭಗವಾನ್ ಕೇಶವನು ಅದರಲ್ಲಿ ಸದಾ ಸನ್ನಿಹಿತನಾಗಿರುತ್ತಾನೆ. ಅದು ಭಗವಾನ್ ವಿಷ್ಣುವಿನ ಮಹಿಮಾನ್ವಿತವಾದ ಪವಿತ್ರಸ್ಥಾನ.

**ನಾತಿಕ್ರಾಂತುಮಲಂ ಬ್ರಹ್ಮಂಸ್ತ ದದ್ಯಾಪಿ ಮಹೋದದಿಃ ।**

**ನಿತ್ಯಂ ಸನ್ನಿಹಿತಸ್ತತ್ರ ಭಗವಾನ್ ಕೇಶವೋ ಯತಃ ॥**

**ತದತೀವ ಮಹಾಪುಣ್ಯಂ ಸರ್ವಪಾತಕನಾಶನಮ್ ।**

**ವಿಷ್ಣು ಶ್ರಿಯಾನ್ವಿತಂ ಸ್ಥಾನಂ ದೃಷ್ಟ್ವಾ ಪಾಪಾದ್ವಿಮುಚ್ಯತೇ ॥**

(ವಿ.ಪು. 2ನೇ ಸಂ. ಪಂಚಮಾಂಶ ಅ. 38, ಶ್ಲೋ 110,119)

ಶ್ರೀಕೃಷ್ಣನ ಆವಾಸಸ್ಥಾನವಾದ ಆ ಮಂದಿರವು ಪುಣ್ಯಜನಕವೂ, ಪಾತಕನಾಶಕವೂ ಅಗಿದೆ. ಅದನ್ನು ದರ್ಶಿಸಿದರೇನೇ ಸಾಕು, ಮಾನವನು ಪಾಪ ವಿಮುಕ್ತನಾಗುತ್ತಾನೆ.

ಹೀಗಿರುವಲ್ಲಿ ಅರ್ಜುನನು ಅವರೆಲ್ಲರನ್ನೂ ಕರೆದುಕೊಂಡು ಹೋಗುತ್ತ ನಡುವೆ ಧನಧಾನ್ಯ ಸಮೃದ್ಧವಾದ ಪಂಚನದ (ಪಂಜಾಬ್) ದೇಶದಲ್ಲಿ ತಂಗಿದರು. ಇಲ್ಲಿ ಐದು ನದಿಗಳು ಹರಿಯುವುದರಿಂದ ಇದನ್ನು ಪಂಚನದ ಎಂದು ಕರೆಯುತ್ತಾರೆ. ಆಗ ಅಲ್ಲಿ ಧಸ್ಯುಗಳಿಗೆ ಒಬ್ಬನೇ ಪಾರ್ಥನು ಧನುರ್ಧಾರಿಯಗಿ ಅನಾಥರಾದ ಸಾವಿರಾರು ಸ್ತ್ರೀಯರನ್ನು ಕರೆದೊಯ್ಯುತ್ತಿರುವುದನ್ನು ಕಂಡು ದುರಾಸೆ ಹುಟ್ಟಿತು. ಆಸೆಯಿಂದ ಆ ಪಾಪಿಗಳಿಗೆ ಬುದ್ಧಿಕೆಟ್ಟಿತು. ಈ ಮದಾಂಧರಾದ ಧಸ್ಯುಗಳು ಗುಂಪಾಗಿ ಸೇರಿ ಹೀಗೆ ಆಲೋಚಿಸಿದರು. "ಹೇಗಿದ್ದರೂ ಅರ್ಜುನನೆಂಬ ಈ ಒಬ್ಬಂಟಿಗನು ಧನುರ್ಧಾರಿಯಗಿ ಅನಾಥರಾದ ಸ್ತ್ರೀಯರನ್ನು ಕರೆದೊಯ್ಯುತ್ತಿದ್ದಾನೆ. ನಮ್ಮನ್ನು ಕಂಡು ಅಸಡ್ಡೆಯಿಂದ ಉಲ್ಲಂಘಿಸಿ ಹೋಗುತ್ತಿದ್ದಾನಲ್ಲಾ ಥೂ !, ನಿಮ್ಮ ಬಲಕ್ಕೆ ಧಿಕ್ಕಾರ. ಭೀಷ್ಮ, ದ್ರೋಣ, ಜಯದ್ರಥ, ಕರ್ಣ ಮುಂತಾದವರನ್ನು ತಾನು ಸಂಹರಿಸಿದ್ದೇನೆಂದು ಇವನಿಗೆ ಗರ್ವ ಬಂದಿದೆ. ಈ ಹಳ್ಳಿಗರ ಬಲ ಏನೆಂಬುದು ಇವನಿಗೆ ಗೊತ್ತಿಲ್ಲ. ನಮ್ಮ ಕೈಗಳಲ್ಲಿ ದೊಣ್ಣೆಗಳಿದ್ದರೆ ತನ್ನ ಕೈಯಲ್ಲಿ ಧನುಸ್ಸಿದೆಯೆಂದು ಈ ದುಷ್ಟನು ನಮ್ಮನ್ನು ಲೆಕ್ಕಿಸುತ್ತಲೇ ಇಲ್ಲ. ಹೀಗೆ ಪರಸ್ಪರ ಮಾತನಾಡಿಕೊಂಡು ಸಾವಿರಾರು ಮಂದಿ ದಸ್ಯುಗಳು ಕಲ್ಲುದೊಣ್ಣೆಗಳನ್ನು ಹಿಡಿದು, ಅನಾಥರಾಗಿದ್ದ ದ್ವಾರಕಾವಾಸಿಗಳನ್ನು ಆಕ್ರಮಿಸಿದರು.

**ತತೋ ನಿರ್ಭರ್ತ್ಸ್ಯ ಕೌಂತೇಯಃ ಪ್ರಾಹಾಭೀರಾನ್ ಹಸನ್ನಿವ ।**

**ನಿವರ್ತಧ್ವಮ ಧರ್ಮಜ್ಞಾ ಯದಿ ನ ಸ್ಥ ಮುಮೂರ್ಷವಃ ॥**

**ಅವಜ್ಞಾಯ ವಚಸ್ತಸ್ಯ ಜಗೃಹುಸ್ತೇ ತದಾ ಧನಮ್ ।**

**ಸ್ತ್ರೀಧನಂ ಚೈವ ಮೈತ್ರೇಯ ವಿಷ್ವಕ್ಸೇನ ಪರಿಗ್ರಹಮ್ ॥**

**ತತೋರ್ಜುನೋ ಧನುರ್ದಿವ್ಯಂ ಗಾಂಡೀವ ಮಜರಂ ಯುಧಿ ।**

**ಆರೋಪಯಿತು ಮಾರೇಭೇ ನ ಶಶಾಕ ಚ ವೀರ್ಯವಾನ್ ॥**

**ಚಕಾರ ಸಜ್ಜಂ ಕೃಚ್ಛ್ರಾ ಚ್ಚ ತಚ್ಚಾ ಭೂಚ್ಛಿಥಿಲಿಂ ಪುನಃ ।**

**ನ ಸಸ್ಮಾರ ತತೋಸ್ತ್ರಾಣಿ ಚಿಂತಯನ್ನಪಿ ಪಾಂಡವಃ ॥**

**ಶರಾನ್ಮುಮೋಚ ಚೈತೇಷು ಪಾರ್ಥೋ ವೈರಿಷ್ವ ಮರ್ಷಿತಃ ।**

**ತ್ವಗ್ಭೇದಂ ತೇ ಪರಂ ಚ ಕ್ರುರಸ್ತಾ ಗಾಂಡೀವಧನ್ವಿನಾ ॥**

**ವಹ್ನಿನಾ ಯೇಕ್ಷಯಾ ದತ್ತಾಶ್ಶರಾಸ್ತೇಪಿ ಕ್ಷಯಂ ಯಯಃ ।**

**ಯುಧ್ಯ ತಸ್ಸಹ ಗೋಪಾಲೈರರ್ಜುನಸ್ಯ ಭವಕ್ಷಯೇ ॥**

(ವಿ.ಪು. 2ನೇ ಸಂ. ಪಂಚಮಾಂಶ ಅ. 38, ಶ್ಲೋ 18ರಿಂದ24)

ಆಗ ಅರ್ಜುನನು ತನ್ನ ಶೌರ್ಯಮದದಿಂದ ಹೀಗೆ ಹೇಳಿದನು. ಎಲೈ ಪಾಪಿಗಳೇ ನಿಮಗೆ ಸಾಯುವ ಇಚ್ಛೆಯಿಲ್ಲವಾದರೆ ಹಿಂದಕ್ಕೆ ಸರಿಯಿ ಎಂದನು. ಅರ್ಜುನನ ಆ ಮಾತನ್ನು ಲೆಕ್ಕಿಸದೆ ಈ ದುಷ್ಟರು ಧನವನ್ನು ಲೂಟಿ ಮಾಡಿದರಲ್ಲದೆ ಶ್ರೀಕೃಷ್ಣನ ಪರಿಗ್ರಹವಾದ ಸ್ತ್ರೀಧನವನ್ನೂ ವಶಪಡಿಸಿಕೊಂಡರು. ಆಗ ವೀರನಾದ ಅರ್ಜುನನು ಯುದ್ಧದಲ್ಲಿ ಅಕ್ಷೋಭ್ಯವೂ ದಿವ್ಯವೂ ಆದ ಗಾಂಢೀವ ಧನಸ್ಸನ್ನು ಎತ್ತಿ ಹೆದೆಯೇರಿಸಲು ಪ್ರಯತ್ನಿಸಿದನು. ಆದರೆ ಹೆದೆಯೇರಿಸಲಾಗಲಿಲ್ಲ. ಕಷ್ಟದಿಂದ ಜಗ್ಗಿ ಹೇಗೋ ಜೋಡಿಸಿದರೂ ಮತ್ತೆ ಸಡಿಲವಾಯಿತು. ಮಂತ್ರಾಸ್ತ್ರಗಳನ್ನು ಚಿಂತಿಸಿದನು. ಆದರೆ ಒಂದು ಮಂತ್ರವಾದರೂ ಸ್ಮರಣೆಗೆ ಬರಲಿಲ್ಲ. ಕಡೆಗೆ ಪಾರ್ಥನು ಕ್ರುದ್ಧನಾಗಿ ಕೆಲವು ಬಾಣಗಳನ್ನು ವೈರಿಗಳ ಮೇಲೆ ಪ್ರಯೋಗಿಸಿದನು. ಆದರೆ ಅರ್ಜುನನು ಬಿಟ್ಟ ಬಾಣಗಳು ದಸ್ಯುಗಳ ಪ್ರಾಣಹರಣ ಮಾಡಲಿಲ್ಲ. ಕೇವಲ

ಅವರ ಚರ್ಮದಲ್ಲಿ ಮಾತ್ರ ಗಾಯಗೊಳಿಸಿದವು. ಅಗ್ನಿದೇವನು ಅರ್ಜುನನಿಗೆ ಅನುಗ್ರಹಿಸಿದ್ದ ಅಕ್ಷಯ ಬಾಣಗಳೂ ಸಹ ನಿಷ್ಪ್ರಯೋಜಕವಾದವು. ಅವೂ ಸಹ ಆ ಗೊಲ್ಲರೊಡನೆ ಹೋರಾಡುವಾಗ ಕ್ಷಯಿಸಿಹೋದವು. (ಯಾವುದೇ ವಸ್ತುವಾಗಲಿ, ಚರಾ ಚರಗಳಾಗಲಿ, ವ್ಯಕ್ತಿಗಳಾಗಲಿ ಉತ್ಪತ್ತಿ ಮತ್ತು ಕ್ಷಯಕ್ಕೆ ಬಾಧ್ಯರು ತಾನೇ ? ಇದೇ ಪ್ರಕೃತಿಯ ನಿಯಮವಲ್ಲವೇ ?) ಈ ಸಂದರ್ಭದಲ್ಲಿ ಅರ್ಜುನನು ತನ್ನ ಪರಾಭವಕ್ಕೆ ಕಾರಣವನ್ನು ತಿಳಿದುಕೊಂಡನು. ಇಷ್ಟು ದಿನ ಶ್ರೀಕೃಷ್ಣ **"ಮಮ ಪ್ರಾಣಾಹಿ ಪಾಂಡವಾಃ"** ಎಂದುಕೊಂಡು ನಮ್ಮನ್ನು ರಕ್ಷಿಸಿದನು. ಇದುವರೆಗೂ ಅವನ ಸಾನ್ನಿಧ್ಯದಲ್ಲಿದ್ದ ನಾನು ಕುರುಕ್ಷೇತ್ರ ಯುದ್ಧದಲ್ಲಿ ವೀರಾಧಿವೀರರನ್ನು ಪರಾಭವಗೊಳಿಸಿ ಕೀರ್ತಿ ಪತಾಕೆಯನ್ನು ಏರಿಸಿದೆ. ಈಗ ನನ್ನೊಡನೆ ಕೃಷ್ಣನಿಲ್ಲ. ಆದ್ದರಿಂದಲೇ ಈ ಸಾಧಾರಣ ದಸ್ಯುಗಳ ಎದುರಿಗೆ ಪರಾಜಿತನಾಗುತ್ತಿದ್ದೇನೆ ಎಂದು ಶ್ರೀಕೃಷ್ಣ ಪರಮಾತ್ಮನ ಹಿರಿಮೆಯನ್ನು ತಿಳಿಯುವನು. ಇಷ್ಟರಲ್ಲಿಯೇ ಬಿಟ್ಟರೇ ಆ ದಸ್ಯುಗಳು. ಖಂಡಿತಾ ಇಲ್ಲ.

ಪಾಂಡುಪುತ್ರನ ಕಣ್ಣೆದುರಿಗೆ ದಸ್ಯುಗಳು ಉತ್ತಮ ಸ್ತ್ರೀಯರನ್ನು ಹಿಡಿದೆಳೆದುಕೊಂಡು ಹೋದರು, ಮಿಕ್ಕ ಸ್ತ್ರೀಯರೆಲ್ಲ ದಿಕ್ಕಾಪಾಲಾಗಿ ಓಡಿಹೋದರು. ಅರ್ಜುನನಲ್ಲಿದ್ದ ಶರಗಳೆಲ್ಲವೂ ಕ್ಷಯಿಸಲಾಗಿ ತನ್ನ ಧನುಸ್ಸಿನ ತುದಿಯಿಂದಲೇ ದಸ್ಯುಗಳನ್ನು ತಿವಿಯಲಾರಂಭಿಸಿದನು. ಆದರೆ ದಸ್ಯುಗಳಾರೂ ಆ ತಿವಿತವನ್ನೂ ಲೆಕ್ಕಿಸಲಿಲ್ಲ. ಅರ್ಜುನನು ನೋಡುತ್ತಿರುವಾಗಲೇ ಆ ದುಷ್ಟರು ಸಮಸ್ತ ಯಾದವ ಸ್ತ್ರೀಯರನ್ನು ಅಪಹರಿಸಿಕೊಂಡು ಹೊರಟುಹೋದರು.

**ತತಸ್ಸುದುಃಖಿತೋ ಜಿಷ್ಣುಃ ಕಷ್ಟಂ ಕಷ್ಟಮಿತಿ ಬ್ರುವನ್ ।**
**ಅಹೋ ಭಗವತಾನೇನ ವಂಚಿತೋಸ್ಮಿ ರುರೋದಹ ॥**
**ತದ್ಧನುಸ್ತಾನಿ ಶಸ್ತ್ರಾಣಿ ಸ ರಥಸ್ತೇ ಚವಾಜಿನಃ ।**
**ಸರ್ವಮೇಕಪದೇ ನಷ್ಟಂ ದಾನಮಶ್ರೋತ್ರಿಯೇ ಯಥಾ ॥**

(ವಿ.ಪು. 2ನೇ ಸಂ. ಪಂಚಮಾಂಶ ಅ. 88, ಶ್ಲೋ 29,30)

ಅರ್ಜುನನು ಅತ್ಯಂತ ದುಃಖಿತನಾಗಿ ಅಯ್ಯೋ! ಕಷ್ಟ ! ಕಷ್ಟ! ಭಗವಂತ

ನನ್ನ ಕೈಬಿಟ್ಟನು ಎಂದು ಅಳತೊಡಗಿದನು. ನನ್ನ ಅದೇ ಧನಸ್ಸು, ಅವೇ ಅಸ್ತ್ರಗಳು, ಅದೇ ರಥ, ಅವೇ ಅಶ್ವಗಳು, ಅಶ್ರೋತ್ರೀಯನಿಗೆ ಕೊಟ್ಟ ದಾನದಂತೆ ಎಲ್ಲವೂ ಒಟ್ಟಿಗೆ ನಾಶವಾಯಿತಲ್ಲ. ಅಬ್ಬಾ! ದೈವ ಅತ್ಯಂತ ಬಲಶಾಲಿಯಾದದ್ದು! ಯಾವ ಸಾಮರ್ಥ್ಯವೂ ಇಲ್ಲದ ಈ ತುಚ್ಚ ಜನರಿಗೆ ಜಯವನ್ನು ಗಳಿಸಿಕೊಟ್ಟಿತಲ್ಲಾ. ಇದೆಲ್ಲವೂ ಆ ಕೃಷ್ಣಪರಮಾತ್ಮ ನನ್ನೊಡನೆ ಇಲ್ಲದಿರುವುದೇ ಕಾರಣ. ಇಲ್ಲಿ ಅರ್ಜುನನು ಒಂದು ಉಪಮೆಯನ್ನು ಹೇಳಿದ್ದಾನೆ ನೋಡಿ. (ದಾನಕೊಡುವುದು ಎಂಬುದು ಮಹತ್ವಪೂರ್ಣವಾದ ಸಂಗತಿ. ದಾನ ಮಾಡುವವರು ಸತ್ಪಾತ್ರರಿಗೆ ದಾನ ಮಾಡಬೇಕು. ಯಾರ್ಯಾರಿಗೋ ಅನರ್ಹರಿಗೆ ದಾನಮಾಡಬಾರದು ಎಂಬುದನ್ನು ಅಶ್ರೋತ್ರಿಯರಿಗೆ ದಾನ ಮಾಡಿದಂತೆ ಎಂದು ಉದಾಹರಿಸಿದ್ದಾನೆ. ಇದರ ಬಗ್ಗೆ ನಾವೂ ಸಹ ಎಚ್ಚರಿಕೆ ವಹಿಸಬೇಕು) ಈ ನನ್ನ ಬಾಹುಗಳು, ನನ್ನ ಈ ಮುಷ್ಟಿ, ಅದೇ ಸ್ಥಳ, ಆ ಅರ್ಜುನನೇ ನಾನು. ಆದರೆ ಪುಣ್ಯದರ್ಶನವಾದ ಶ್ರೀಕೃಷ್ಣ ಪರಮಾತ್ಮನು ಇಲ್ಲದಿದ್ದರಿಂದಲೇ ಇವೆಲ್ಲಾ ನಿಃಸ್ಸಾರವಾಗಿದೆ. ನಿಜ ಈ ಅರ್ಜುನನ ಅರ್ಜುನತ್ವ, ಆ ಭೀಮನ – ಭೀಮತ್ವವಾಗಲಿ ಜನಾರ್ಧನನ ಕೃಪೆಯಿಂದಲೇ ಬಂದಿದ್ದು ನಿಶ್ಚಿತ. ಮಹಾರಥ ನೆನೆಸಿಕೊಂಡ ನಾನು ಅವನಿಲ್ಲದ್ದರಿಂದಲೇ ಈ ಗೊಲ್ಲರಿಗೆ ಸೋತುಹೋದೆನು ಎಂದು ಪರಿಪರಿಯಾಗಿ ತಪಿಸಿದನು.

ಹೀಗೆಂದುಕೊಂಡು ಅರ್ಜುನನು ಇಂದ್ರಪ್ರಸ್ಥನಗರಕ್ಕೆ ಹೋದನು. ಯಾದವನಂದನರಾದ ವಜ್ರನನ್ನು ಅಲ್ಲಿ ರಾಜನನ್ನಾಗಿ ನಿಯಮಿಸಿದನು. ನಂತರ ಇಂದ್ರಪ್ರಸ್ಥದಿಂದ ಹಸ್ತಿನಾವತಿಗೆ ಹೋಗುತ್ತಿರುವಾಗ ಅರಣ್ಯದಲ್ಲಿ ವ್ಯಾಸ ಮಹರ್ಷಿಗಳನ್ನು ಸಂದರ್ಶಿಸಿದನು. ಅರ್ಜುನನು ಅವರಿಗೆ ಸವಿನಯದಿಂದ ಅಭಿವಾದನೆ ಮಾಡಿದನು. ತಮ್ಮ ಪಾದಗಳಿಗೆ ವಂದಿಸುತ್ತಿದ್ದ ಅರ್ಜುನನನ್ನು ವ್ಯಾಸಮುನಿಗಳು ಬಹಳ ಹೊತ್ತು ಗಮನಿಸಿ ನೋಡಿದರು. ವ್ಯಾಸರು ಅವನನ್ನು ಕಂಡು ಅವನ ಮುಖಭಾವನೆಯನ್ನು ಕಂಡು ಏಕೋ ದುಃಖತಪ್ತನಾಗಿದ್ದಾನೆ ಎಂಬುದನ್ನು ತಿಳಿದುಕೊಂಡರು. ಈ ಸಂದರ್ಭದಲ್ಲಿ ವ್ಯಾಸ ಮಹರ್ಷಿಗಳು ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದರು. ಅದರ ಸೊಗಸನ್ನೂ ಸಹ ನಾವೀಗ ನೋಡೋಣ.

ತಂ ವಂದಮಾನಂ  ಚರಣಾವವಲೋಕ್ಯ ಮುನಿಶ್ಚಿರಮ್
ಉವಾಚ ವಾಕ್ಯಂ ವಿಚ್ಛಾಯಃ ಕಥಮದ್ಯ ತ್ವ ಮೀದೃಶಃ
ಅವೀರಜೋನುಗಮನಂ ಬ್ರಹ್ಮ ಹತ್ಯಾ ಕೃತಾಥ ವಾ
ದೃಥಾ ಶಾ ಭಂಗದುಃಖೀವ ಭೃಷ್ಟ ಚ್ಛಾಯೋಸಿ ಸಾಂಪ್ರತಮ್
ಸಾಂತಾನಿಕಾದಯೋ ವಾ ತೇ ಯಾಚಮಾನಾ ನಿರಾಕೃತಾಃ ।
ಅಗಮ್ಯಸ್ತ್ರೀರತಿರ್ವಾತ್ವಂ ಯೇನಾಸಿ ವಿಗತಪ್ರಭುಃ ॥
ಭುಂಕ್ತೆ ಪ್ರದಾಯ ವಿಪ್ರೇಭ್ಯೋ ಮಿಷ್ಟಮೇಕೋಥವಾಭವಾನ್
ಕಿಂವಾ ಕೃಪಣ ವಿತ್ತಾನಿ ಹೃತಾನಿ ಭವತಾರ್ಜುನ
ಕಚಿನ್ನುಶಾರ್ಪವಾತಸ್ಯ ರೋಚರತ್ವಂ ಗತೋರ್ಜುನ
ದುಷ್ಟ ಚಕ್ಷುರ್ಹತೋ ವಾಸಿ ನಿಶ್ರೀಕಃ ಕಥಮನ್ಯಥಾ
ಸ್ಪೃಷ್ಟೋ ನಖಾಂಭಸಾ ವಾಥ ಘಟವಾರ್ಯುಕ್ಷಿತೋಪಿವಾ
ಕೇನ ತ್ವಂ ವಾಸಿ ವಿಚ್ಛಾಯೋನ್ಯೂನೈ ರ್ವಾ ಯುಧಿನಿರ್ಜಿತಃ

ವ್ಯಾಸರ ಈ ಪ್ರಶ್ನಾವಳಿಯಲ್ಲಿ ಯಾವ ಯಾವ ಕಾರ್ಯವು ನಿಷಿದ್ಧ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅಂದಿನಿಂದ ಇಂದಿನವರೆಗೂ ಈ ನಂಬಿಕೆಗಳು, ಶಕುನಗಳು, ಈ ನಿಷಿದ್ಧಗಳು ನಮ್ಮ ಸಮಾಜದಲ್ಲಿ ಅದೆಷ್ಟು ಬೇರೂರಿದೆಯೆಂದು ನಾವು ಕಾಣಬಹುದು. ಅರ್ಜುನನು ತನ್ನ ಜೀವನದಲ್ಲಿ ಎಂದೂ ಕಾಣದ ಸೋಲನ್ನು ಸಾಧಾರಣ ಗೊಲ್ಲರಿಂದ ಅನುಭವಿಸಬೇಕಾಯಿತು. ಈ ಮಾತುಗಳೆಲ್ಲ ಜಗದ್ವ್ಯಾಪಾರಕ್ಕೆ ಹಿಡಿದ ಕೈಗನ್ನಡಿಯಂತಿದೆ. ಮನೋದೌರ್ಬಲ್ಯದಿಂದ ಶೋಕಾಕುಲನಾದ ಅರ್ಜುನನನ್ನು ಸಂತೈಸಲು ಮುಂದಾದರು.

ಅರ್ಜುನ  ನೀನು ಇದೇಕೆ ಇಷ್ಟೊಂದು ಕಾಂತಿಹೀನನಾಗಿದ್ದೀಯೇ ? ಸಂತಾನಾರ್ಥವಾಗಿ ವಿವಾಹವನ್ನು ಬಯಸತಕ್ಕವರ ಯೋಚನೆಯನ್ನು ಏನಾದರೂ ನಿರಾಕರಿಸಿದೆಯಾ? ರಜಸ್ವಲೆಯ ಸಹವಾಸ ಮಾಡಿದೆಯಾ

ಅಥವಾ ಬ್ರಹ್ಮ ಹತ್ಯೆ ಮಾಡಿದೆಯಾ ? ಅಥವಾ ನೀನು ದೃಢವಾಗಿ ಇಟ್ಟುಕೊಂಡ ಆಸೆಗೆ ಭಂಗವಾಯಿತೇ? 'ಅವಿರಜೋನುಗಮನ' ಮಾಡಿದೆಯ ? ಅಂದರೆ ಕುರಿ, ಕತ್ತೆ, ಮೊದಲಾದವು ಎಬ್ಬಿಸಿದ ಧೂಳಿನಲ್ಲಿ ಏನಾದರೂ ಹೋಗಿದ್ದೆಯಾ ? ಅಗಮ್ಯ ಸ್ತ್ರೀಯಲ್ಲಿ ಗಮನ ಮಾಡಿದೆಯಾ ? ಮೃಷ್ಟಾನ್ನವನ್ನು ಬ್ರಾಹ್ಮಣರಿಗೆ ನೀಡದೆ ನೀನೊಬ್ಬನೇ ತಿಂದೆಯಾ ? ಜಿಪುಣರು ಕೂಡಿಟ್ಟ ಹಣವನ್ನು ಏನಾದರೂ ನೀನು ಅಪಹರಿಸಿದೆಯಾ ? ಅಕ್ಕಿ ಕೇರುವ ಮೊರದ ಗಾಳಿ ನಿನ್ನ ಮೇಲೆ ಬೀಸಿತೆ ? ಏನಾದರೂ ಕೆಟ್ಟ ಕಣ್ಣಿನವರ ದೃಷ್ಟಿ ನಿನಗೆ ತಾಗಿತೇ ? ಕಾಲುಗುರಿನ ಮೇಲೆ ಬಿದ್ದ ನೀರಾಗಲಿ, ಗಡಿಗೆಯಿಂದ ಚಿಮ್ಮಿದ ನೀರಾಗಲಿ ನಿನಗೆ ಸೋಕಿತೇ ? ಕ್ಷುದ್ರಜನರಿಂದ ಯುದ್ಧದಲ್ಲಿ ಸೋತು ಹೋದೆಯಾ ? ಯಾವ ಕಾರಣದಿಂದ ನಿನ್ನ ಮುಖದ ಕಳೆಗುಂದಿದೆ ? ಎಂದು ಕೇಳಿದರು. ಆಗ ಅರ್ಜುನನು ಯಥಾವತ್ತಾಗಿ ತನಗಾದ ಸೋಲನ್ನು ತಿಳಿಸಿದನು. "ಮಹರ್ಷಿಗಳೇ ನನ್ನ ಬಲ, ನನ್ನ ತೇಜಸ್ಸು, ನನ್ನ ಶೌರ್ಯ, ನನ್ನ ಪರಾಕ್ರಮ, ನನ್ನ ಸಂಪತ್ತು, ನನ್ನ ಕಾಂತಿ ಎಲ್ಲವೂ ಆಗಿದ್ದ ಹರಿಯು ನಮ್ಮನ್ನು ಪರಿತ್ಯಜಿಸಿ ಹೊರಟುಹೋದನು.

**ಯದ್ಬಲಂ ಯಚ್ಚ ಮತ್ತೇ ಜೋ ಯದ್ವೀರ್ಯಂ ಯಃ ಪರಾಕ್ರಮಃ**

**ಯಾ ಶ್ರೀ ಶ್ಛಾಯಾ ಚನಃ ಸೋ ಸ್ಮಾನ್ ಪರಿತ್ಯಜ್ಯ ಹರಿರ್ಗತಃ**

**ಈಶ್ವರೇಣಾಪಿ ಮಹತಾಸ್ಮಿತ ಪೂರ್ವಾಭಿಭಾಷಿಣಾ**

**ಹೀನಾವಯಂ ಮುನೇತೇನ ಜಾತಾಸ್ತೃಣಮಯಾ ಇವ**

**ನಿರ್ಯೌವನಾ ಗತಶ್ರೀಕಾ ನಷ್ಟಚ್ಛಾಯೇನ ಮೇದಿನೀ**

**ವಿಭಾತಿ ತಾತ ಮೂಕೋಹಂ ವಿರಹೇತಸ್ಯ ಚಕ್ರಿಣಃ**

(ವಿ.ಪು. 2ನೇ ಸಂ. ಪಂಚಮಾಂಶ ಅ 38. ಶ್ಲೋ 43,44,48)

ಸ್ವಯಂ ಪರಮೇಶ್ವರನೇ ಆಗಿದ್ದರೂ ನಮ್ಮೊಡನೆ ನಗುನಗುತ್ತಾ ಮಾತಾನಾಡುತ್ತಿದ್ದ. ಈಗ ಅವನಿಂದ ವಿರಹಿತರಾದೆವು. ನಾವು ಹುಲ್ಲು ತುಂಬಿದ ಬೊಂಬೆಗಳಂತೆ ಆದೆವು. ಆ ಚಕ್ರಧಾರಿಯ ವಿಯೋಗದಿಂದ ನಾನೊಬ್ಬನೇ ಅಲ್ಲ, ಸಮಸ್ತ ಪೃಥ್ವಿಯೇ ವಿರಹದಿಂದ ಬೆಂದುಹೋಗಿದೆ. ಈ

ಪೃಥ್ವಿಯೇ ಯೌವನ, ಶೋಭೆ, ಕಾಂತಿಗಳನ್ನು ಕಳೆದುಕೊಂಡಿದೆ ಎಂದು ತನ್ನ ದುಃಖವನ್ನು ತೋಡಿಕೊಂಡನು. ಈ ಮಾತುಗಳಿಂದ ಅರ್ಜುನನು ತನ್ನ ಅಸಹಾಯಕತೆಯನ್ನು ಮತ್ತು ಸಮರ್ಪಣಭಾವವನ್ನು ವ್ಯಕ್ತಪಡಿಸಿ ತನ್ನದು ಎಂಬುದು ಯಾವುದು ಇಲ್ಲ ಎಂಬ ಅಕಿಂಚನತ್ವ ಇಲ್ಲಿ ವ್ಯಕ್ತಪಡಿಸಿದ್ದಾನೆ.

## ಕಾಲದ ಮಹಿಮೆ

ಆಗ ವ್ಯಾಸಮಹರ್ಷಿಗಳು ಅವನನ್ನು ಸಂತೈಸುತ್ತ ಹೀಗೆಂದರು. (ಇವರು ಪರಾಶರ ಮಹರ್ಷಿಗಳ ಪುತ್ರರು) ಎಲೈ ಪಾರ್ಥ ಇದಕ್ಕಾಗಿ ನೀನು ಚಿಂತಿಸಬೇಡ. ಇದೆಲ್ಲಾ ಕಾಲದ ಮಹಿಮೆ ಎನ್ನುತ್ತಾರೆ.

ಶ್ರೀ ವ್ಯಾಸ ಉವಾಚ :

**ಅಲಂತೇ ವ್ರೀಡಯಾ ಪಾರ್ಥ ನತ್ವಂ ಶೋಚಿತು ಮರ್ಹಸಿ ।**
**ಅವೇಹಿ ಸರ್ವಭೂತೇಷು ಕಾಲಸ್ಯ ಗತಿರೀದೃಶೀ ॥**
**ಕಾಲೋಭವಾಯ ಭೂತಾನಾಮಭವಾಯ ಚ ಪಾಂಡವ ।**
**ಕಾಲಮೂಲಮಿದಂ ಜ್ಞಾತ್ವಾ ಭವಸ್ಥೈರ್ಯ ಪರೋರ್ಜುನ ॥**
**ನದ್ಯಃ ಸಮುದ್ರಾ ಗಿರಿಯಸ್ಯ ಕಲಾಚ ವಸುಂಧರಾ ।**
**ದೇವಾ ಮನುಷ್ಯಾಃ ಪಶನಸ್ತರವಶ್ಚ ಸರೀಸೃಪಾಃ ॥**
**ಸೃಷ್ಟಾಃ ಕಾಲೇನ ಕಾಲೇನ ಪುನರ್ಯಾಸ್ಯಂತಿ ಸಂಕ್ಷಯಮ್ ।**
**ಕಾಲಾತ್ಮಕಮಿದಂ ಸರ್ವಂ ಜ್ಞಾತ್ವಾ ಶಮಮವಾಪ್ನುಹಿ ॥**
**ಕಾಲಸ್ವರೂಪೀ ಭಗವಾನ್ ಕೃಷ್ಣಃ ಕಮಲಲೋಚನಃ ।**
**ಯಚ್ಚಾತ್ಥ ಕೃಷ್ಣಮಾಹಾತ್ಮ್ಯಂ ತತ್ತಥೈವ ಧನಂಜಯ ॥**
**ಭಾರಾವತಾರ ಕಾರ್ಯಾರ್ಥ ಮವತೀರ್ಣ್ಯಸ್ಯ ಮೇದಿನೀಮ್ ।**
**ಭಾರಾಕ್ರಾಂತಾ ಧರಾಯಾತಾ ದೇವಾನಾಂ ಸಮಿತಿಂಪುರಾ ॥**

**ತದರ್ಥಮವತೀರ್ಣೋಽಸೌ ಕಾಲರೂಪಿ ಜನಾರ್ದನಃ ।**

**ತಚ್ಚ ನಿಷ್ಪಾದಿತಂ ಕಾರ್ಯ ಮಶೇಷಾ ಭೂಭುಜೋ ಹತಾಃ ॥**

**ವೃಷ್ಣ್ಯನ್ಧಕಕುಲಂ ಸರ್ವಂ ತಥಾ ಪಾರ್ಥೋಽಪಸಂಹೃತಮ್ ।**

**ನ ಕಿಂಚಿದನ್ಯತ್ ಕರ್ತವ್ಯಂ ತಸ್ಯಭೂಮಿತಲೇಪ್ರಭೋಃ ॥**

**ಅತೋಗತಸ್ಯ ಭಗವಾನ್ ಕೃತಕೃತ್ಯೋ ಯಥೇ ಚ್ಛಯಾ ।**

**ಸೃಷ್ಟಿಂ ಸರ್ಗೇ ಕರೋತ್ಯೇಷ ದೇವದೇವಃ ಸ್ಥಿತೌ ಸ್ಥಿತಮ್ ॥**

**ಅಂತೇತಾಯ ಸಮರ್ಥೋಽಯಂ ಸಾಂಪ್ರತಂ ವೈ ಯಥಾ ಗತಃ ।**

**ತಸ್ಮಾತ್ಪಾರ್ಥ ನ ಸಂತಾಪಸ್ತ್ವಯಾ ಕಾರ್ಯಃ ಪರಾಭವೇ ॥**

**ಭವಂತಿ ಭಾವಾಃ ಕಾಲೇಷು ಪುರುಷಾಣಾಂ ಯತಃ ಸ್ತುತಿಃ ॥**

(ವಿ.ಪು. 2ನೇ ಸಂ. ಪಂಚಮಾಂಶ ಅ 38. ಶ್ಲೋ 54ರಿಂದ 63)

ಎಲೈ ಪಾರ್ಥ ಇದಕ್ಕಾಗಿ ನೀನು ನಾಚಿಕೆಪಡಬೇಡ. ನೀನು ಶೋಕಿಸುವುದೂ ಸಹ ತರವಲ್ಲ. ಸರ್ವಭೂತಗಳಲ್ಲಿಯೂ ಕಾಲಗತಿಯು ಹೀಗೆಯೇ ಇರುತ್ತದೆ. ಸಮಸ್ತ ಪ್ರಾಣಿಗಳ ಜನ್ಮಕ್ಕೆ, ನಾಶಕ್ಕೆ ಕಾಲವೇ ಕಾರಣ. ಎಲ್ಲವೂ ಕಾಲಾಧೀನವಾದುದೆಂದು ತಿಳಿದು ಧೈರ್ಯವನ್ನು ತಂದುಕೋ. ನದಿಗಳು, ಸಮುದ್ರಗಳು, ಗಿರಿಗಳು, ಸಮಸ್ತ ಪೃಥ್ವಿ, ದೇವತೆಗಳು, ಮನುಷ್ಯರು, ಪಶುಗಳು, ವೃಕ್ಷಗಳು, ಹುಳು ಹುಪ್ಪಟೆಗಳು ಎಲ್ಲವನ್ನೂ ಕಾಲವು ಸೃಜಿಸಿದೆ. ಮತ್ತೆ ಕಾಲವೇ ನಾಶಪಡಿಸುತ್ತದೆ. ಸರ್ವವೂ ಕಾಲಾತ್ಮಕವೆಂದು ತಿಳಿದು ಶಾಂತನಾಗು. ಕಮಲಲೋಚನನಾದ ಭಗವಾನ್ ಕೃಷ್ಣನು ಕಾಲಸ್ವರೂಪಿಯಾದವನು. ನೀನು ಹೇಳುತ್ತಿರುವ ಶ್ರೀಕೃಷ್ಣ ಮಹಾತ್ಮ್ಯವೆಲ್ಲವೂ ಸತ್ಯವಾದದ್ದು. ಭೂಭಾರವನ್ನಳಿಸಲು ಭಗವಂತ ಈ ಭುವಿಯಲ್ಲಿ ಅವತರಿಸಿದ್ದನು. ಬಂದ ಉದ್ದೇಶ ನೆರವೇರಿತು. ಸಕಲ ಭೂಭುಜರನ್ನೂ ಸಂಹರಿಸಿದ್ದಾಯಿತು. ಎಲೈ ಪಾರ್ಥ, ಅಂಧಕವೃಷ್ಣಿಗಳ ಕುಲವೆಲ್ಲವನ್ನೂ ನಾಶಮಾಡಿದ್ದಾಯಿತು. ಈ ಭೂಮಿಯಲ್ಲಿ ಮತ್ತಾವ ಕರ್ತವ್ಯವೂ ಉಳಿದಿರಲಿಲ್ಲ. ಆದ್ದರಿಂದ ಕೃತಕೃತ್ಯನಾದ ಭಗವಂತನು ತನ್ನ ಇಚ್ಛಾನುಸಾರವಾಗಿ ಹೊರಟುಹೋದನು. ಆ ದೇವಾದಿದೇವನು

ಸೃಷ್ಟಿಕಾಲದಲ್ಲಿ ಸೃಷ್ಟಿಯನ್ನು, ಸ್ಥಿತಿಕಾಲದಲ್ಲಿ ರಕ್ಷಣೆಯನ್ನು ಮಾಡುವನು ಅಂತಹ ಕಾಲ ಬಂದಾಗ ನಾಶಮಾಡಲೂ ಅವನು ಸಮರ್ಥನಾಗಿರುವನು. ಅದರಂತೆಯೇ ಈಗ ದುಷ್ಟರನ್ನು ನಾಶಮಾಡಿ ಹೊರಟುಹೋಗಿದ್ದಾನೆ. ಎಲೈ ಅರ್ಜುನ ! ನೀನು ದುಃಖಪಡಬೇಡ, ಸೋಲಾಯಿತೆಂದು ಪರಿತಪಿಸಬೇಡ, ಕಾಲಬಂದಾಗ ಅದಕ್ಕೆ ಅನುಸಾರವಾಗಿ ಕೆಲವು ಘಟನೆಗಳು ಸಂಭವಿಸುತ್ತದೆ. ಅವುಗಳಿಂದ ಮನುಷ್ಯರು ಈ ಹೊಗಳಿಕೆಗೆ ಪಾತ್ರರಾಗಿರುತ್ತಾರೆ. ನಿನಗೆ ಗೊಲ್ಲರಿಂದ ಸೋಲಾಗುತ್ತದೆಯೆಂದು ಯಾರೂ ತಾನೇ ನಂಬಿಯಾನು? ಕೌರವರನ್ನು ಧ್ವಂಸಗೊಳಿಸಿದ ಮಹಾವೀರ ನೀನು. ನೀನು ಧನಸ್ಸುಗಳಿಂದ ಸೋತದ್ದು ಇದೆಲ್ಲವೂ ಸಹ ಹರಿಯ ಒಂದು ಲೀಲಾವಿಶೇಷ ಎಂದರು. ವ್ಯಾಸಮಹರ್ಷಿಗಳ ಮಾತಿಗೆ ಅರ್ಜುನನು ಸ್ವಲ್ಪ ಸಮಾಧಾನಗೊಂಡನು. ಅಂತಹ ಕಾಲನಿಗೆ ನಮೋ ನಮಃ ಕಾಲಾಯ ತಸ್ಮೈ ನಮಃ

## ಅಷ್ಟಾವಕ್ರನ ಮಹಿಮೆ

ಅರ್ಜುನನು ವ್ಯಾಸರ ಬಳಿ ತನ್ನ ಅಳಲನ್ನು ತೋಡಿಕೊಳ್ಳುತ್ತಾ ದಸ್ಯುಗಳೊಡನೆ ಯುದ್ಧಮಾಡಿ ಸೋತಾಗ ಅನೇಕ ಸ್ತ್ರೀಯರನ್ನು ದಸ್ಯುಗಳು ಅಪಹರಿಸಿಬಿಟ್ಟರೆಂದು ಹೇಳಿದನು. ಅದರ ಯಥಾರ್ಥ ಸಂಗತಿಯೇನೆಂಬುದನ್ನು ವ್ಯಾಸರು ಹೇಳಲು ಆರಂಭಿಸಿದರು.

**ಅಷ್ಟಾವಕ್ರಃ ಪುರಾ ವಿಪ್ರೋ ಜಲವಾಸರತೋಭವತ್**

**ಬಹೂನ್ ವರ್ಷಗಣಾನ್ಪಾರ್ಥ ಗೃಣನ್ ಬ್ರಹ್ಮ ಸನಾತನಮ್**

**ಜಿತೇಷ್ವಸುರ ಸಂಘೇಷು ಮೇರುಕೃಷ್ಣೇ ಮಹೋತ್ಸವಃ**

**ಬಭೂವ ತತ್ರ ಗಚ್ಛನ್ತೋ ದದೃಶುಸ್ತಂ ಸುರಸ್ತ್ರಿಯಃ**

**ರಂಭಾ ತಿಲೋತ್ತಮಾದ್ಯಾಸ್ತು ಶತಶೋಥಸಹಸ್ರಶಃ**

**ತುಷ್ಟುವುಸ್ತಂ ಮಹಾತ್ಮಾನಂ ಪ್ರಶಶಂಸುಶ್ಚ ಪಾಂಡವ**

**ಆಕಂಠಮಗ್ನಂ ಸಲಿಲೇ ಜಟಾಭಾರವಹಂ ಮುನಿಮ್**

**ವಿನಯಾವನತಾಶ್ಚೈನಂ ಪ್ರಣೇಮುಃ ಸ್ತೋತ್ರತತ್ಪರಾಃ**

**ಯಥಾ ಯಥಾ ಪ್ರಸನ್ನೋ಼ ಸೌ ತುಷ್ಟವುಸ್ತಂ ತಥಾತಥಾ**

**ಸರ್ವಾಸ್ಥಾಃ ಕೌರವಶ್ರೇಷ್ಠ ತಂ ವರಿಷ್ಠಂ ದ್ವಿಜನ್ಮನಾಮ್**

ಎಲೈ ಅರ್ಜುನ, ಹಿಂದೆ ಅಷ್ಟಾವಕ್ರನೆಂಬ ಬ್ರಾಹ್ಮಣನಿದ್ದನು. ಅವನು ಸನಾತನವಾದ ಬ್ರಹ್ಮನನ್ನು ಕುರಿತು ಜಪಿಸುತ್ತಾ ಬಹುವರ್ಷಗಳ ಕಾಲ ಜಲವಾಸದಲ್ಲಿದ್ದನು. ಆ ಸಂದರ್ಭದಲ್ಲಿ ಅಸುರರನ್ನು ಜಯಿಸುವುದಕ್ಕಾಗಿ ಮೇರುಪರ್ವತದ ಮೇಲೆ ಒಂದು ಮಹೋತ್ಸವದ ಏರ್ಪಾಡು ನಡೆದಿದ್ದಿತು. ಅಲ್ಲಿಗೆ ಹೋಗುತ್ತಿದ್ದ ಅಪ್ಸರೆಯರು ಅಷ್ಟಾವಕ್ರಮುನಿಯನ್ನು ನೋಡಿದರು. ರಂಭೆ, ತಿಲೋತ್ತಮೆ ಮುಂತಾದ ಸಾವಿರಾರು ಅಪ್ಸರ ಸ್ತ್ರೀಯರು ಅಷ್ಟಾವಕ್ರನನ್ನು ಸ್ತುತಿಸಿದರು. ಅವನನ್ನು ಹೊಗಳಿದರು. ಜಟಾಭಾರವನ್ನು ಧರಿಸಿ ಕತ್ತಿನವರೆಗೆ ನೀರಲ್ಲಿ ಮುಳುಗಿ ನಿಂತಿದ್ದ ಆ ಮುನಿಯನ್ನು ಅಪ್ಸರೆಯರು ಅತ್ಯಂತ ವಿನಯದಿಂದ  ನಮಸ್ಕರಿಸಿದರು.

ಮುನಿಯು ಪ್ರಸನ್ನನಾಗಿ "ಎಲೌ ಭಾಗ್ಯಶಾಲಿನಿಯರೇ ನಿಮಗೆ ಯಾವುದು ಬೇಕೋ ಆ ವರವನ್ನು ನನ್ನಿಂದ ಪಡೆದುಕೊಳ್ಳಿರಿ, ಅದೆಷ್ಟೇ ದುರ್ಲಭವಾದರೂ ಅದೆಲ್ಲವನ್ನೂ ನಾನು ಈಡೇರಿಸುವೆನು" ಎಂದನು. ಆಗ ಅಪ್ಸರೆಯರು "ವಿಪ್ರೋತ್ತಮ ನೀನು ಪ್ರಸನ್ನನಾದರೆ ಪುರುಷೋತ್ತಮನಾದ ಭಗವಂತನು ನಮಗೆ ಪತಿಯಾಗಬೇಕೆಂದು ಬಯಸುತ್ತೇವೆ" ಎಂದರು. ಆಗ ಮುನಿಯು "ತಥಾಸ್ತು" ಎಂದು ನುಡಿದು ನೀರಿನಿಂದ ಎದ್ದು ಬಂದನು. ಅಷ್ಟು ಹೊತ್ತಿನವರೆಗೆ ನೀರಿನಲ್ಲಿದ್ದುದರಿಂದ ಅವನ ದೇಹ ಹೇಗಿತ್ತೆಂದು ಅಪ್ಸರೆಯರಿಗೆ ತಿಳಿಯಲಿಲ್ಲ. ಈಗ ನೀರಿನಿಂದ ಮೇಲೆದ್ದು ಬಂದಾಗ ಅವನ ಶರೀರದಲ್ಲಿ ಎಂಟು ಕಡೆ ಸೊಟ್ಟಸೊಟ್ಟಗೆ ಕುರೂಪಿಯಾಗಿರುವುದನ್ನು ಅಪ್ಸರೆಯರು ಗಮನಿಸಿದರು. ಆ ಮುನಿಯನ್ನು ನೋಡಿ ಪಕ್ಕನೆ ನಕ್ಕರು. ಆ ನಗು ಆದಷ್ಟು ತಡೆಯಲು ಪ್ರಯತ್ನಿಸಿದರೂ ಆಗಲಿಲ್ಲ. ಅಷ್ಟಾವಕ್ರನು ಕೋಪದಿಂದ ಹೀಗೆ ಶಪಿಸಿದನು. "ನಾನು ಕುರೂಪಿಯೆಂದು ತಿಳಿದು ನಕ್ಕು ಅವಮಾನ ಮಾಡಿದ್ದೀರಿ. ಆದ್ದರಿಂದ ನಿಮಗೆ ಈ ಶಾಪವನ್ನು ಕೊಡುತ್ತೇನೆ. ನನ್ನ ಅನುಗ್ರಹದಿಂದ ಪುರುಷೋತ್ತಮನನ್ನು ಪತಿಯನ್ನಾಗಿ ಪಡೆಯುವಿರಿ. ನಕ್ಕವರೆಲ್ಲರೂ ಅನಂತರ ಶಾಪಗ್ರಸ್ತರಾಗಿ ದಸ್ಯುಗಳ ಕೈಗೆ ಸಿಕ್ಕಿಕೊಳ್ಳಿರಿ"

ಎಂದನು. ಹೀಗೆ ಹೇಳಿದನ್ನು ಕೇಳಿ ಅಪ್ಸರೆಯರು ಆ ಮುನಿಯನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದರು. ಆಗ ಮುನಿಯು ಪುನಃ "ತರುವಾಯ ನೀವು ಮತ್ತೆ ಸ್ವರ್ಗಲೋಕವನ್ನು ಸೇರಿಕೊಳ್ಳುವಿರಿ" ಎಂದು ಹೇಳಿದನು.

ಈ ಕಾರಣದಿಂದಲೇ ಅಷ್ಟಾವಕ್ರ ಮುನಿಯ ಶಾಪವಶದಿಂದ ದೇವಾಂಗನೆಯರು ಶ್ರೀಕೃಷ್ಣನನ್ನು ಪತಿಯನ್ನಾಗಿ ಪಡೆದು ಈಗ ದಸ್ಯುಗಳ ಕೈಗೆ ಸಿಕ್ಕಿಕೊಂಡಿದ್ದಾರೆ. ಎಲೈ ಅರ್ಜುನ, ಈ ವಿಷಯದಲ್ಲಿ ನೀನು ಶೋಕಪಡಬೇಕಾದುದಿಲ್ಲ. ಆ ಜಗದೀಶ್ವರನು ಸರ್ವಸಂಗತಿಗಳನ್ನು ಹೀಗೆ ಉಪಸಂಹರಿಸಿದ್ದಾನೆ. ಪ್ರಕೃತ ನಿಮ್ಮ ಉಪಸಂಹಾರವೂ ಸಮೀಪಿಸಿದೆ ಎಂದು ಸೂಚನೆಯಿತ್ತರು. ಆದ್ದರಿಂದಲೇ ನಿಮ್ಮ ಬಲ, ತೇಜಸ್ಸು, ವೀರ್ಯ, ಪರಾಕ್ರಮಗಳು ಮುಗಿದವು. ಇದಕ್ಕೂ ನೀನು ದುಃಖಪಡಬೇಕಿಲ್ಲ ಎಂದರು. ಅಷ್ಟೇ ಅಲ್ಲ ಶ್ರೀವ್ಯಾಸ ಮಹರ್ಷಿಯು ಅರ್ಜುನನಿಗೆ ಜನನ– ಮರಣದ ಬಗ್ಗೆ, ಇಹಲೋಕದ ಅಶಾಶ್ವತೆಯ ಬಗ್ಗೆ ವಿವರಿಸುತ್ತ ಇಡೀ ಮನುಜಕುಲಕ್ಕೆ ಅಷ್ಟೆ ಏಕೆ ಇಡೀ ಜೀವಕೋಟಿಗೆ ಸಂದೇಶವನ್ನು ನೀಡಿರುವುದು ಅತ್ಯಂತ ಹೃದಯಂಗಮವಾಗಿದೆ. ಅದರ ಬಗ್ಗೆ ಈಗ ತಿಳಿಯೋಣ.

ವ್ಯಾಸ ಮಹರ್ಷಿಗಳು ಅರ್ಜುನನಿಗೆ ಸಾಂತ್ವನದ ಧೈರ್ಯದ ಮಾತುಗಳನ್ನು ಹೇಳುತ್ತಾ ಹೀಗೆ ವಿವರಿಸುತ್ತಾರೆ.

**ಭವತಾಂ ಚೋಪಸಂಹಾರ ಆಸನ್ನಸ್ತೇನ ಪಾಂಡವ**
**ಬಲಂ ತೇಜ ಸ್ತಥಾ ವೀರ್ಯಂ ಮಾಹಾತ್ಮ್ಯಂ ಚೋಪಸಂಹೃತಮ್**

**ಜಾತಸ್ಯ ನಿಯತೋ ಮೃತ್ಯುಃ ಪತನಂ ಚ ತಥೋನ್ನತೇಃ**
**ವಿಪ್ರಯೋಗಾವ ಸಾನಸ್ತು ಸಂಯೋಗಃ ಸಂಚಯೇಕ್ಷಯಃ**
**ವಿಜ್ಞಾಯ ನ ಬುಧಾಶ್ಶೋಕಂ ನ ಹರ್ಷಮುಪಯೋತಿಯೇ**
**ತೇಷಾ ಮೇ ವೇತರೇ ಚೇಷ್ಟಾಂ ಶಿಕ್ಷಂತಸ್ಸಂತಿ ತಾದೃಶಾಃ**
**ತಸ್ಮಾತ್ತ್ವಯಾ ನರಶ್ರೇಷ್ಠ ಜ್ಞಾತ್ವೈತದ್ ಭ್ರಾತೃಭಿಸ್ಸಹ**

**ಪರಿತ್ಯಜ್ಯಾಖಿಲಂ ತಂತ್ರಂ ಗಂತವ್ಯಂ ತಪಸೇ ವನಮ್**

**ತದಚ್ಚ ಧರ್ಮರಾಜಾಯ ಸಿವೇ ದ್ಯೈತದ್ವಚೋ ಮಮ**

**ಪರಶ್ವೋ ಭ್ರಾತೃಭಿ ಸ್ಸಾರ್ದ್ಧಂ ಯಥಾ ಯಾಸಿ ತಥಾಕುರು**

(ವಿ.ಪು. 2ನೇ ಸಂ. ಪಂಚಮಾಂಶ ಅ 38. ಶ್ಲೋ 86ರಿಂದ 90)

ಎಲೈ ನರಶ್ರೇಷ್ಠ, ನೀವು ಪಂಚಪಾಂಡವರೂ ಸಹ ಇಹಲೋಕದಿಂದ ಪಯಣಿಸಲು ಸಿದ್ಧವಾಗಿರಿ. ಹುಟ್ಟಿದವನಿಗೆ ಸಾವು ನಿಶ್ಚಿತ. ಉನ್ನತಿಗೆ ಪತನವೂ ನಿಶ್ಚಿತ. ಸಂಯೋಗವು ವಿಯೋಗದಲ್ಲಿ ಕೊನೆಗೊಳ್ಳುತ್ತದೆ. ಕೂಡಿಟ್ಟುಕೊಳ್ಳುವುದು ಖರ್ಚಿನಲ್ಲಿ ಪರ್ಯವಸಾನವಾಗುತ್ತದೆ. ಇದೆಲ್ಲವನ್ನೂ ಅರಿತುಕೊಂಡು ಯಾವ ಪಂಡಿತರು (ಜ್ಞಾನಿಗಳು) ಶೋಕವನ್ನಾಗಲಿ, ಹರ್ಷವನ್ನಾಗಲಿ ಪಡದೇ ಸಮಚಿತ್ತರಾಗಿರುತ್ತಾರೋ ಅವರೇ ಧನ್ಯರು. ಇಂತಹ ನಡತೆಯನ್ನು ವಿವೇಕಿಗಳಾದ ಇತರರೂ ಅನುಸರಿಸುತ್ತಾರೆ. ಅದರಿಂದ, ಓ ನರ ಶ್ರೇಷ್ಠ, ಇದನ್ನು ಚೆನ್ನಾಗಿ ನೀನು ಮನಸ್ಸಿಗೆ ತಂದುಕೊಂಡು, ಸಕಲ ರಾಜ್ಯ ವ್ಯವಹಾರವನ್ನೂ ತೊರೆದು, ಸೋದರರೊಡನೆ ತಪಸ್ಸಿಗಾಗಿ ಅರಣ್ಯಕ್ಕೆ ಹೊರಟುಹೋಗು. ನಮ್ಮ ಜೀವಿತದ ಕೊನೆಯ ಆಶ್ರಮವಾದ ವಾನಪ್ರಸ್ಥಾಶ್ರಮಕ್ಕೆ ಸೇರು. ನೀನು ಹೋಗಿ ಧರ್ಮರಾಜನಿಗೆ ನಾನೀಗ ಹೇಳಿದದನ್ನೆಲ್ಲವನ್ನು ತಿಳಿಸು. ನಾಡಿದ್ದು ನಿನ್ನ ಸಹೋದರರೊಡನೆ ವನಕ್ಕೆ ಹೊರಡುವ ಸಿದ್ಧತೆಯನ್ನು ಮಾಡಿಕೋ' ಎಂದು ನುಡಿದು ವ್ಯಾಸ ಮಹರ್ಷಿಗಳು ಸ್ವಸ್ಥಾನಕ್ಕೆ ಹೊರಟುಹೋದರು. ನಂತರ ಅರ್ಜುನನು ಹಸ್ತಿನಾವತಿಗೆ ಹೋಗಿ ತನ್ನ ಸೋದರರಿಗೆ ನಡೆದ ಸಂಗತಿಗಳನ್ನೆಲ್ಲಾ ವಿವರವಾಗಿ ತಿಳಿಸಿದನು. ಅರ್ಜುನನು ಹೇಳಿದ ವ್ಯಾಸವಾಕ್ಯವನ್ನು ಕೇಳಿದ ನಂತರ, ಪಾಂಡವರು ತಮ್ಮ ರಾಜ್ಯಭಾರವನ್ನು ಪರೀಕ್ಷಿತನಿಗೆ ವಹಿಸಿಕೊಟ್ಟು ಅರಣ್ಯದ ಕಡೆಗೆ ನಡೆದರು.

**ಯಶ್ಚೈತಚ್ಚರಿತಂ ತಸ್ಯ ಕೃಷ್ಣಸ್ಯ ಶೃಣುಯತ್ತದಾ**

**ಸರ್ವಪಾಪ ವಿನಿರ್ಮುಕ್ತೋವಿಷ್ಣುಲೋಕಂ ಸಗಚ್ಛತಿ**

(ವಿ.ಪು. 2ನೇ ಸಂ. ಅ. 38. ಪಂ.ಅ. ಶ್ಲೋಕ 94)

ಈ ಕೃಷ್ಣ ಚರಿತವನ್ನು ಯಾವನು ಸದಾ ಕೇಳುತ್ತಿರುವನೋ ಅತನು ಸರ್ವಪಾಪಗಳಿಂದ ಮುಕ್ತನಾಗಿ ವಿಷ್ಣುಲೋಕವನ್ನು ಸೇರುವನು.

**ಸರ್ವಂ ಕೃಷ್ಣಾರ್ಪಣಮಸ್ತು**

ಇನ್ನು ನಾವು ಪರೀಕ್ಷಿತ್ ಮಹಾರಾಜನ ಬಗ್ಗೆ ತಿಳಿದುಕೊಳ್ಳಬೇಕಾದುದು ಅತ್ಯವಶ್ಯ. ಈ ರಾಜನ ಬಗ್ಗೆ ಶ್ರೀಮದ್ಭಾಗವತದಲ್ಲಿ ಬಂದಿದೆ. ಭಾಗವತ ಮತ್ತು ವಿಷ್ಣುಪುರಾಣ ಎರಡೂ ಕಾವ್ಯಗಳು ಶ್ರೀಕೃಷ್ಣನ ಲೀಲೆಯನ್ನೇ ವಿವರಿಸುತ್ತವೆ. ಶ್ರೀಮದ್ಭಾಗವತದಲ್ಲಿ ಬರುವ ಪ್ರಮುಖಪಾತ್ರಗಳಲ್ಲಿ ಪರೀಕ್ಷಿತ್ ಮಹಾರಾಜನ ಪಾತ್ರವೂ ಒಂದು.

**ಅಭಿಮನ್ಯು ಸುತಂ ಸೂತ ಪ್ರಾಹು ರ್ಭಾಗವತೋತ್ತಮಮ್ ।**

**ತಸ್ಯ ಜನ್ಮ ಮಹಾಶ್ಚರ್ಯಂ ಕರ್ಮಾಣಿ ಚ ಗೃಣೀಹಿನಃ ॥**

ಪರೀಕ್ಷಿತ್ ಮಹಾರಾಜನ ಜನನವೇ ಅದ್ಭುತವಾದದ್ದು. ಏಕೆಂದರೆ ಇವನು ತಾಯಿ ಉತ್ತರೆಯ ಗರ್ಭದಲ್ಲಿದ್ದಾಗ ಶ್ರೀಕೃಷ್ಣನಿಂದ ರಕ್ಷಿಸಲ್ಪಟ್ಟವನು. ಇವನು ಪಾಂಡುಪುತ್ರರ ಕುಟುಂಬವನ್ನು ಉದ್ಧರಿಸಿದವನು. ಇವನು ತನ್ನ ಸಾಮ್ರಾಜ್ಯವನ್ನು ತನ್ನ ಹಿರಿಯರಾದ ಮಹಾರಾಜ ಯುಧಿಷ್ಠಿರಾದಿಗಳಿಂದ ಆನುವಂಶಿಕವಾಗಿ ಪಡೆದಿದ್ದನು. ತನ್ನ ಒಡೆತನದಲ್ಲಿದ್ದ ಐಹಿಕ ಸಂಪತ್ತಿನಲ್ಲಿ ಆಸಕ್ತಿ ಇರಲಿಲ್ಲ.

ಕೇವಲ ತನ್ನ ಪ್ರಜೆಗಳ ಸರ್ವತೋಮುಖ ಪ್ರಗತಿಗಾಗಿಯೇ ದುಡಿದ ಮಹಾರಾಜನಿವನು. ಅವನು ನಿಷ್ಪಕ್ಷಪಾತಿಯಾದ ಅರಸನಾಗಿದ್ದನು. ರಾಜನೆಂದರೆ ಭಗವಂತನ ಪ್ರತಿನಿಧಿ. ಎಲ್ಲ ಜೀವಿಗಳನ್ನು ರಕ್ಷಿಸಬೇಕಾದುದು ಭಗವಂತನ ಕರ್ತವ್ಯ. ಅಂತೆಯೇ ಪರೀಕ್ಷಿತ್ ಮಹಾರಾಜನು ನಿಷ್ಪಕ್ಷಪಾತಿಯಾಗಿ, ನಿಸ್ವಾರ್ಥಿಯಾಗಿ, ಪ್ರಜಾರಂಜಕನಾಗಿ, ಪ್ರಜಾಚಿಂತಕನಾಗಿ ರಾಜ್ಯವನ್ನು ಆಳಿ ಆದರ್ಶ ರಾಜನಂತೆ ಇದ್ದನು. ಹೀಗಿರುವಲ್ಲಿ ಒಮ್ಮೆ ಪರೀಕ್ಷಿತ್ ಮಹಾರಾಜನು ಬೇಟೆಯಾಡಲು ಹೋದಾಗ ಮಾರ್ಗಾಯಾಸದಿಂದ ಹಸಿವು ಬಾಯಾರಿಕೆಗಳನ್ನು ನೀಗಿಸಿಕೊಳ್ಳಲು ಕಾಡಿನಲ್ಲಿ ಅಲೆದನು. ಅಲ್ಲಿ ಶಮೀಕನೆಂಬ

ಮಹರ್ಷಿಯ ಪುಣ್ಯಾಶ್ರಮಕ್ಕೆ ಪ್ರವೇಶಿಸಿದನು. ಆಗ ಆ ಮಹರ್ಷಿಯು ಸಮಾಧಿಸ್ಥಿತಿಯಲ್ಲಿದ್ದನು. ಅವನು ಪರೀಕ್ಷಿತ್‌ನ ಆಗಮನವನ್ನು ಗಮನಿಸದೆ ಧ್ಯಾನಮಗ್ನನಾಗಿದ್ದನು. ಕುಪಿತನಾದ ಪರೀಕ್ಷಿತ್‌ನು ಸಮೀಪದಲ್ಲಿಯೇ ಸತ್ತು ಬಿದ್ದಿದ್ದ ಹಾವನ್ನು ಆ ಮುನಿಯ ಕೊರಳಿಗೆ ಹಾಕಿ ಹೊರಟುಹೋದನು. ಕೆಲಕಾಲದ ನಂತರ ಋಷಿಪುತ್ರನಾದ ಶೃಂಗಿಯು ಅಲ್ಲಿಗೆ ಬಂದು ಈ ದೃಶ್ಯವನ್ನು ಕಂಡನು. 'ಯಾವ ದುರಾತ್ಮ ಹೀಗೆ ಸತ್ತ ಹಾವನ್ನು ತಂದು ನನ್ನ ತಂದೆಯ ಕೊರಳಿಗೆ ಸಿಕ್ಕಿಸಿಹೋದನೋ ಆ ನೀಚನು ಈ ಮೊದಲು ಏಳನೆಯ ದಿನದಂದು ತಕ್ಷಕನಿಂದ (ಮಹಾಸರ್ಪ) ದಷ್ಟನಾಗಿ ಸಾಯಲಿ' ಎಂದು ಶಾಪವನ್ನಿತ್ತನು. ಈ ವಿಷಯವು ಪರೀಕ್ಷಿತ್ ಮಹಾರಾಜನಿಗೆ ತಿಳಿಯಿತು. ತನ್ನ ಮರಣ ಸನ್ನಿಹಿತವಾಗುತ್ತಿದೆ ಎಂದರಿತ ಪರೀಕ್ಷಿತ್ ಮಹಾರಾಜನು ತನ್ನ ಸಾಮ್ರಾಜ್ಯವನ್ನು ತ್ಯಜಿಸಿ ಗಂಗಾನದಿಯ ದಂಡೆಯ ಮೇಲೆ ಕುಳಿತು ಆಮರಣಾಂತ ಉಪವಾಸ ಮಾಡಿದನು. ಭಗವಂತನ ಅದ್ಭುತಲೀಲೆಗಳನ್ನು ಕೇಳಿ ಪ್ರಾಣತ್ಯಾಗ ಮಾಡಲು ಸಿದ್ಧನಾದನು. ಇವನಿಗೆ ಶುಕಮುನಿಗಳು ಈ ಸಂದರ್ಭದಲ್ಲಿ ಶ್ರೀಮದ್ಭಾಗವತವನ್ನು ಸವಿಸ್ತಾರವಾಗಿ ವಿವರಿಸಿದರು.

ಭಗವಾನ್ ಕೃಷ್ಣನ ಶುದ್ಧಭಕ್ತನಾಗಲು ಮುಖ್ಯವಾಗಿ ಎರಡು ಸಂಗತಿಗಳು ಅತ್ಯವಶ್ಯಕ. 1. ಭಕ್ತರ ಮನೆಯಲ್ಲಿ ಹುಟ್ಟುವ ಅವಕಾಶ ಸದ್ಗುರುವಿನ ಅನುಗ್ರಹ. ಪರೀಕ್ಷಿತನಿಗೆ ಇವೆರಡೂ ದೊರೆಯಿತು. ಅವನು ಪಾಂಡವರಂತಹ ದೈವಭಕ್ತರ ಮನೆಯಲ್ಲಿ ಹುಟ್ಟಿದೆ. ಮುಂದೆ ಅವನು ಭಗವಂತನ ಇಚ್ಛೆಯಂತೆ ಬ್ರಾಹ್ಮಣ ಬಾಲಕನೊಬ್ಬನಿಂದ ಶಪಿತನಾಗಿ ಶುಕಮುನಿಗಳಂತಹ ಗುರುವಿನ ಆಸರೆಯನ್ನು ಪಡೆದು ಗುರುವಿನ ಕೃಪೆ ಮತ್ತು ಭಗವಂತನ ಅನುಗ್ರಹದಿಂದ ಭಕ್ತಿಮಾರ್ಗವನ್ನು ಅನುಸರಿಸಿ, ಭಗವಂತನ ಅವ್ಯಾಜ ಕರುಣೆಗೆ ಪಾತ್ರನಾದನು.

ಮರಣ ಸನ್ನಿಹಿತಾಗಿದೆ ಎಂಬುದನ್ನು ದೈಹಿಕ ಹಾಗೂ ಮಾನಸಿಕ ದೌರ್ಬಲ್ಯಗಳಿಂದ ಅರಿತಾಗ ಮಾನವ ಈ ವಿಷಮ ಸಮಯದಲ್ಲಿ

ಗೋವಿಂದನ ನಾಮಸ್ಮರಣೆ ಮಾಡಬೇಕಾದುದು ಅತ್ಯವಶ್ಯ. ಈ ಉಪಾಯವನ್ನು ಶುಕಮುನಿಗಳು ಪರೀಕ್ಷಿತ್ ಮಹಾರಾಜನ ಮೂಲಕ ತಿಳಿಯಪಡಿಸಿದರು. ಈ ಚಿರಂತನ ತತ್ವವನ್ನು ಅನುಸರಿಸಿ ಚಕ್ರವರ್ತಿಯಾದ ಪರೀಕ್ಷಿತನು ಶ್ರೀಮದ್ಭಾಗತವನ್ನು ಶ್ರವಣ ಮಾಡಿದನು. ಹಾಗಾದರೆ ಮರಣಶಯ್ಯೆಯಲ್ಲಿ ಇದ್ದಾಗ ಮಾತ್ರ ಗೋವಿಂದನ ಸ್ಮರಣೆಯಿದ್ದರೆ ಸಾಕೇ? ಎಂಬ ಪ್ರಶ್ನೆ ನಮ್ಮ ತಲೆಗೆ ಹೊಳೆಯುತ್ತದೆ. ಖಂಡಿತಾ ಹಾಗಲ್ಲ. ನಮ್ಮ ಜೀವನದ ಉದ್ದಕ್ಕೂ ಗೋವಿಂದನ ನಾಮಸ್ಮರಣೆ ಅತ್ಯವಶ್ಯ ಎಂಬ ಶಾಶ್ವತ ಸತ್ಯವನ್ನು ಶುಕಮುನಿಗಳು ಈ ಲೋಕಕ್ಕೆ ತಿಳಿಸಿದರು.

## ಕಲಿಧರ್ಮದ ನಿರೂಪಣೆ

ಮೈತ್ರೇಯರು ಪರಾಶರ ಮುನಿಗಳಿಂದ ಕಲ್ಪಾಂತದಲ್ಲಿ ಆಗುವ ಉಪಸಂಹೃತಿಯನ್ನು ಮತ್ತು ಮಹಾಪ್ರಳಯದ ಬಗ್ಗೆ ತಿಳಿದುಕೊಳ್ಳಬೇಕೆಂದು ಇಚ್ಛಿಸಿದರು. ಅದಕ್ಕೆ ಪರಾಶರ ಮುನಿಗಳು ವಿವರಿಸಲು ಆರಂಭಿಸಿದರು. ಇಲ್ಲಿ ನಾವು ತಿಳಿದುಕೊಳ್ಳಬೇಕಾದ ಮುಖ್ಯವಾದ ಸಂಗತಿಯೇನೆಂದರೆ ಉಪಸಂಹೃತಿ ಎಂದರೆ ನಾಶ ಅಥವಾ ಪ್ರಳಯ. ಇದನ್ನು ಸಾಮಾನ್ಯ ಪ್ರಳಯವೆನ್ನುತ್ತಾರೆ. ಬ್ರಹ್ಮನ ಹಗಲು ಆಗತಕ್ಕದ್ದು ಸಾಮಾನ್ಯ ಪ್ರಳಯ ಇದನ್ನು ಕಲ್ಪಾಂತವೆಂದು ಕರೆಯುತ್ತಾರೆ. ಬ್ರಹ್ಮನ ಆಯಸ್ಸು ಮುಗಿದನಂತರ ಆಗ ತಕ್ಕದ್ದುಯ ಮಹಾಪ್ರಳಯ. ಇದಕ್ಕೆ ಪ್ರಾಕೃತ ಪ್ರಳಯ ಎಂದು ಕರೆಯುತ್ತಾರೆ. (ಇದರ ಬಗ್ಗೆ ಪ್ರಥಮಾಂಶದ 3ನೇ ಅಧ್ಯಾಯದಲ್ಲಿ ಕಾಲಗಣನೆಯ ಬಗ್ಗೆ ವಿಸ್ತಾರವಾಗಿ ಬಂದಿದೆ)

ಶ್ರೀ ಪರಾಶರ ಉವಾಚ :

**ಮೈತ್ರೇಯ ಶ್ರೂಯತಾಂ ಮತ್ತೋ ಯಥಾವದುಪಸಂಹೃತೀ ।**
**ಕಲ್ಪಾಂತೇ ಪ್ರಾಕೃತೇ ಚೈವ ಪ್ರಲಯೋ ಜಾಯತೇ ಯಥಾ ॥**

**ಅಹೋರಾತ್ರಂ ಪಿತೃಣಾಂತು ಮಸೋಬ್ದಸ್ತ್ರಿದಿವೌಕಸಾಮ್**
**ಚತುರ್ಯುಗೇ ಸಹಸ್ರೇ ಬ್ರಹ್ಮಣೋ ವೈದ್ವಿಜೋತ್ತಮ**
**ಕೃತಂ ತ್ರೇತಾದ್ವಾಪರಂ ಚ ಕಲಿಶ್ಚೇತಿ ಚತುರ್ಯುಗಮ್**
**ದಿವ್ಯರ್ವಷ ಸಹಸ್ರೈಸ್ತು ತದ್ ದ್ವಾದಶಭಿರುಚ್ಯತೇ**
**ಚತುರ್ಯುಗಾಣ್ಯಶೇಷಾಣಿ ಸದೃಶಾನಿ ಸ್ವರೂಪತಃ**
**ಆದ್ಯಂ ಕೃತಯುಗಂ ಮುಕ್ತ್ವಾ ಮೈತ್ರೇಯಾಂತ್ಯ ತಥಾ ಕಲಿಮ್**
**ಆದ್ಯೆ ಕೃತಯುಗೇ ಸರ್ಗೋ ಬ್ರಹ್ಮಣಾ ಕ್ರಿಯತೇ ಯಥಾ**
**ಕ್ರಿಯತೇ ಚೋಪ ಸಂಹಾರಸ್ತಥಾಂತೇ ಚ ಕಲೌಯುಗೇ**

(ವಿ.ಪು. 6ನೇ ಅಂಶ. ಅ.1 ಶ್ಲೋ3ರಿಂದ 7)

ಮನುಷ್ಯರ ಗಣನೆಯಲ್ಲಿ ಒಂದು ತಿಂಗಳು ಪಿತೃಗಣಗಳಿಗೆ ಒಂದು ಅಹೋರಾತ್ರವಾಗುತ್ತದೆ. (ಅಂದರೆ ಒಂದು ದಿನ) ನಮ್ಮ ಒಂದು ವರ್ಷವು ದೇವತೆಗಳಿಗೆ ಒಂದು ದಿವಸವಾಗುತ್ತದೆ. ನಮ್ಮ ಗಣನೆಯಲ್ಲಿ ಎರಡು ಸಾವಿರ ಚತುರ್ಯುಗಗಳು (ಅಂದರೆ ಕೃತ, ತ್ರೇತಾ, ದ್ವಾಪರ, ಕಲಿ ಎಂದು) ಬ್ರಹ್ಮನಿಗೆ ಒಂದು ದಿವಸವಾಗುತ್ತದೆ. ಈ ಚತುರ್ಯುಗಗಳ ಒಟ್ಟು ಕಾಲಮಾನವು ಹನ್ನೆರಡು ಸಾವಿರ ದಿವ್ಯವರ್ಷಗಳಾಗುತ್ತವೆ. ಪ್ರತ್ಯೇಕ ಮನ್ವಂತರದ ಅಂದರೆ ಮೊದಲನೆಯ ಕೃತಯುಗವನ್ನು ಕಡೆಯ ಕಲಿಯುಗವನ್ನೂ ಬಿಟ್ಟು ನಡುವೆ ಸಂಭವಿಸುವ ಎಲ್ಲ ಚತುರ್ಯುಗಗಳೂ ಸ್ವರೂಪತಃ ಒಂದೇ ವಿಧವಾಗಿರುತ್ತವೆ. ಏಕೆಂದರೆ ಮೊದಲನೆಯ ಕೃತಯುಗದಲ್ಲಿ ಬ್ರಹ್ಮನು ಸೃಷ್ಟಿಯನ್ನು ಆರಂಭಿಸುತ್ತಾನೆ. ಕಡೆಯ ಕಲಿಯುಗದಲ್ಲಿ ಪ್ರಳಯವಾಗುತ್ತದೆ. (ಮಧ್ಯದ ಯುಗಗಳಲ್ಲಿ ಸೃಷ್ಟಿಯಾಗಲಿ ನಾಶವಾಗಲೀ ಇಲ್ಲ. ಆದ್ದರಿಂದ ಇವುಗಳಲ್ಲಿಯೂ ಸ್ವಲ್ಪ ವಿಶೇಷ ಉಂಟು) ಎಂದರು. ಆಗ ಮೈತ್ರೇಯರು ಪರಾಶರರನ್ನು ಕಲಿಯ ಸ್ವರೂಪದ ಬಗ್ಗೆ ಕೇಳಿದರು. ಕಲಿಯುಗದಲ್ಲಿ ಜನರ ಪ್ರವೃತ್ತಿ ಹೇಗಿರುತ್ತದೆ ಎಂಬುದನ್ನು ಪರಾಶರರು ವಿವರಿಸುತ್ತಾರೆ.

ಪರಾಶರರ ಉವಾಚ :

ವರ್ಣಾಶ್ರಮಾಚಾರವತೀ ಪ್ರವೃತ್ತಿರ್ನಕಲೌನೃಣಾಮ್ ।
ನ ಸಾಮ ಋಗ್ಯಜುರ್ಧರ್ಮವಿನಿಷ್ಪಾದನಹೈತುಕೀ ॥

ವಿವಾಹಾ ನ ಕಲೌ ಧರ್ಮ್ಯಾ ನ ಶಿಷ್ಯಗುರುಸಂಸ್ಥಿತಿಃ ।
ನ ದಾಂಪತ್ಯಕ್ರಮೋ ನೈವ ವಹ್ನಿದೇವಾತ್ಮಕಃ ಕ್ರಮಃ ॥

ಯತ್ರ ಕುತ್ರ ಕುಲೇ ಜಾತೋ ಬಲೀ ಸರ್ವೇಶ್ವರಃ ಕಲೌ ।
ಸರ್ವೇಭ್ಯ ಏವ ವರ್ಣೇಭ್ಯೋ ಯೋಗ್ಯಃ ಕನ್ಯಾವರೌ ಧನೀ ॥

ಯೇನ ಕೇನ ಚ ಯೋಗೇನ ದ್ವಿಜಾತಿ ರ್ದೀಕ್ಷಿತಃ ಕಲೌ ।
ಯೈವ ಸೇನ ಚ ಮೈತ್ರೇಯ ಪ್ರಾಯಶ್ಚಿತ್ತಂ ಕಲೌ ಕ್ರಿಯಾ ॥
ಸರ್ವಮೇವ ಕಲೌ ಶಾಸ್ತ್ರಂ ಯಸ್ಯ ಯದ್ವ ಚನಂ ದ್ವಿಜ ।
ದೇವತಾ ಚ ಕಲೌ ಸರ್ವಾ ಸರ್ವಸ್ಯ ಚಾಶ್ರಮಃ ॥
ಉಪವಾಸ ಸ್ತಥಾಯಾಸೋ ವಿತ್ತೋತ್ಸರ್ಗಸ್ತಪಃ ಕಲೌ ।
ಧರ್ಮೋ ಯಥಾಭಿರುಚಿತೈರನುಷ್ಠಾನೈರನುಷ್ಠಿತಃ ॥
ವಿತ್ತೇನ ಭವಿತಾ ಪುಂಸಾಂ ಸ್ವಲ್ಪೇ ನಾಢ್ಯಮದಃ ಕಲೌ ।
ಸ್ತ್ರೀಣಾಂ ರೂಪಮದಶ್ಚೈವಂ ಕೇಶೈರೇವ ಭವಿಷ್ಯತಿ ॥

ಸುವರ್ಣ ಮಣಿರತ್ನಾದೌ ವಸ್ತ್ರೇ ಚೋಪಕ್ಷಯಂ ಗತೇ ।
ಕಲೌ ಸ್ತ್ರೀಯೋ ಭವಿಷ್ಯಂತಿ ತದಾ ಕೇಶೈರಲಂಕೃತಾಃ ॥
ಪರಿತ್ಯಕ್ಷ್ಯಂತಿ ಭರ್ತಾರಂ ವಿತ್ತಹೀನಂ ತಥಾಸ್ತ್ರೀಯಃ ।
ಭರ್ತಾ ಭವಿಷ್ಯತಿ ಕಲೌ ವಿತ್ತವಾನೇವ ಯೋಷಿತಾಮ್ ।
ಯೋವೈ ದದಾತಿ ಬಹುಲಂ ಸ್ವಂ ಸಸ್ವಾಮಿೀ ಸದಾ ನೃಣಾಮ್ ।
ಸ್ವಾಮಿತ್ವ ಹೇತು ಸಂಬಂಧೋ ನ ಚಾಭಿಜನತಾ ತಥಾ ॥

ಗೃಹಾಂತಾ ದ್ರವ್ಯ ಸಂಜ್ಞಾತಾ ದ್ರವ್ಯಾಂತಾ ಚ ತಥಾ ಮತೀ ।
ಅರ್ಥಾಶ್ಚಾ ತ್ಮೋಪ ಭೋಗಾಂತಾ ಭವಿಷ್ಯಂತಿ ತಿ ಕಲೌಯುಗೇ ॥

ಸ್ತ್ರಿಯಃ ಕಲೌ ಭವಿಷ್ಯಂತಿ ಸ್ವೈರಿಣ್ಯೋ ಲಲಿತಸ್ಪೃಹಾಃ ।
ಅನ್ಯಾಯವಾಪ್ತವಿತ್ತೇಷು ಪುರುಷಾಃ ಸ್ಪೃಹಯಾಲವಃ
ಅಭಾರ್ಥಿತಾಪೀಸುಹೃದಾಸ್ವಾರ್ಥ ಹಾನಿಂ ನಮಾನವಾಃ
ಪಣಾರ್ಧಾರ್ಧಾರ್ದ್ಧ ಮಾತ್ರೇಪಿ ಕರಿಷ್ಯಂತಿ ಕಲೌದ್ವಿಜಃ
ಸಮಾನ ಪೌರುಷಂ ಚೇತೋ ಭಾವಿ ವಿಪ್ರೇಷು ವೈ ಕಲೌ ।
ಕ್ಷೀರ ಪ್ರದಾನ ಸಂಬಂಧಿ ಭಾವಿ ಗೋಷು ಚ ಗೌರವಮ್ ॥

ಅನಾವೃಷ್ಟಿ ಭಯ ಪ್ರಾಯಾಃ ಪ್ರಜಾಃ ಕ್ಷುದ್ಭಯ ಕಾತರಾಃ ।
ಭವಿಷ್ಯಂತಿ ತದಾ ಸರ್ವೇ ಗಗನಾಸಕ್ತ ದೃಷ್ಟಯಃ ॥
ಕಂದಮೂಲ ಫಲಾಹಾರಾಸ್ತಾಪಸಾ ಇವ ಮಾನವಾಃ
ಆತ್ಮಾನಾಂ ಘಾತಯಿಷ್ಯಂತಿ ಹ್ಯನಾವೃಷ್ಟ್ಯಾದಿ ದುಃಖಿತಾಃ ॥
ದುರ್ಭಿಕ್ಷಮೇವ ಸತತಂ ತಥಾ ಕ್ಲೇಶಮನೀಶ್ವರಾಃ ।
ಪ್ರಾಪ್ಸ್ಯನ್ತಿ ವ್ಯಾಹತ ಸುಖಪ್ರಮೋದಾ ಮಾನವಾಃ ಕಲೌ ॥

ಅಸ್ನಾನ ಭೋಜಿನೋ ನಾಗ್ನಿ ದೇವತಾ ತಿಥಿ ಪೂಜನಮ್ ।
ಕರಿಷ್ಯತಿ ಕಲೌ ಪ್ರಾಪ್ತೇ ನಚ ಪಿಂಡೋದಕ ಕ್ರಿಯಾಮ್ ॥

ಲೋಲುಪಾ ಹ್ರಸ್ವ ದೇಹಾಶ್ಚಾ ಬಹ್ವನ್ನಾದನ ತತ್ಪರಾಃ ।
ಬ್ರಹುಪ್ರಜಾಲ್ಪಭಾಗ್ಯಾಶ್ಚ ಭವಿಷ್ಯಂತಿ ಕಲೌಸ್ತ್ರಿಯಃ ॥

ಉಭಾಭ್ಯಾಮಪಿ ಪಾಣಿಭ್ಯಾಂ  ಶಿರಃ ಕಂಡೂಯನಂ ಸ್ತ್ರಿಯಃ ।
ಕುರ್ವತ್ಯೋ ಗುರುಭರ್ತೃಣಾಮಾಜ್ಞಾಂ ಭೇತ್ಸ್ಯಂತ ನಾದರಾಃ ॥

ಸ್ವಪೋಷಣ ಪರಾಃ ಕ್ಷುದ್ರಾ ದೇಹ ಸಂಸ್ಕಾರ ವರ್ಜಿತಾಃ ।
ಪರುಷಾನೃತ ಭಾಷಿಣ್ಯೋ ಭವಿಷ್ಯಂತಿ ಕಲೌಸ್ತ್ರಿಯಃ ॥

ದುಃಶೀಲಾ ದುಷ್ಟಶೀಲೇಷು ಕುರ್ವತ್ಯ ಸತತಂ ಸ್ಪೃಹಾಮ್ ।
ಅಸದ್ ವೃತ್ತಾ ಭವಿಷ್ಯಂತಿ ಪುರುಷೇಷು ಕುಲಾಂಗನಾಃ ॥

ವೇದಾದಾನಂ ಕರಿಷ್ಯೇತಿ ವಟವಶ್ಚಾವೃತಾಃ ।
ಗೃಹಾಸ್ಥಾಶ್ಚ ನ ಹೋಷ್ಯಂತಿ ನ ದಾಸ್ಯನ್ತ್ಯುಚಿತಾ ನ್ಯಪಿ ॥

ವಾನಪ್ರಸ್ಥಾ ಭವಿಷ್ಯಂತಿ ಗ್ರಾಮ್ಯಾಹಾರ ಪರಿಗ್ರಹಾಃ ।
ಭಿಕ್ಷವಶ್ಚಾಪಿ ಮಿತ್ರಾದಿ ಸ್ನೇಹ ಸಂಬಂಧಯಂತ್ರಣಾಃ ॥

ಅರಕ್ಷಿತಾರೋ ಹರ್ತಾರ ಶುಲ್ಕ ವ್ಯಾಜೇನ ಪಾರ್ಥಿವಾಃ ।
ಹಾರಿಣೋ ಜನವಿತ್ತಾನಾಂ ಸಂಪ್ರಾಪ್ತೇ ತು ಕಲೌಯುಗೇ ॥

ಯೋ ಯೋ ಶ್ವರಥ ನಾಗಾಢ್ಯಸ್ಯ ಸರಾಜಾ ಭವಿಷ್ಯತಿ
ಯಶ್ಚ ಯಶ್ಚಾಬಲಸ್ಸರ್ವಸ್ಯ ಸಭೃತ್ಯಃ ಕಲೌಯುಗೇ ॥
ವೈಶ್ಯಾಃ ಕೃಷಿ ವಾಣಿಜ್ಯಾದಿ ಸಂತ್ಯಜ್ಯ ನಿಜಕರ್ಮಯತ್ ।
ಶೂದ್ರ ವೃತ್ತ್ಯಾ ಪ್ರವರ್ತ್ಯಂತಿ ಕಾರುಕರ್ಮೋಪಜೀವಿನಃ ॥

(1ರಿಂದ 36ರವರೆಗೆ)

ವೇದಮಾರ್ಗೇ ಪ್ರಲೀನೇ ಚ ಪಾಷಂಡ್ಯಾಢ್ಯೇ ತತೋ ಜನೇ ।
ಅಧರ್ಮ ವೃದ್ಧ್ಯಾ ಲೋಕಾನಾಮಲ್ಪ ಮಾಯುರ್ಭವಿಷ್ಯತಿ ॥

ಅಶಾಸ್ತ್ರವಿಹಿತಂ ಘೋರಂ ತಪ್ಯಮಾನೇಷು ವೈತಪಃ ।
ನರೇಷು ನೃಪದೋಷೇಣ ಬಾಲ್ಯೇ ಮೃತ್ಯುರ್ಭವಿಷ್ಯತಿ ॥
(ವಿ.ಪು. 2ನೇ ಸಂ. 6ನೇ ಅಂಕ ಅ. 1 ಶ್ಲೋ39–40)

**ಯದಾ ಯದಾ ಹಿ ಮೈತ್ರೇಯ ಹಾನಿಧರ್ಮಸ್ಯಲಕ್ಷ್ಯತೇ ।**
**ತದಾ ತದಾ ಕಲೇವೃದ್ಧಿರನುಮೇಯಾ ವಿಚಕ್ಷಣೈಃ ॥**

**ಯದಾ ಯದಾ ಹಿ ಪಾಷಂಡ ವೃದ್ಧಿ ಮೈತ್ರೇಯ ಲಕ್ಷ್ಯತೇ ।**
**ತದಾ ತದಾ ಕಲೇ ರ್ವೃದ್ಧಿರನು ಮೇಯಾ ಮಹಾತ್ಮಭಿಃ ॥**
(ವಿ.ಪು. 2ನೇ ಸಂ. 6ನೇ ಅಂಕ ಅ.1 ಶ್ಲೋ 4–45)

ಪರಾಶರರು ಕಲಿಯುಗ ಧರ್ಮವನ್ನು ವಿವರಿಸುತ್ತಾ ಹೀಗೆಂದರು. ಕಲಿಯ ಸ್ವರೂಪವನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ ಕೇಳು. ಮೈತ್ರೇಯ "ಕಲಿಯುಗದಲ್ಲಿ ಮನುಷ್ಯರ ಪ್ರವೃತ್ತಿಯು ವರ್ಣಾಶ್ರಮ ಧರ್ಮಗಳ ಆಚಾರಕ್ಕೆ ಅನುಗುಣವಾಗಿ ಇರುವುದಿಲ್ಲ. ಈ ಯುಗದಲ್ಲಿ ಋಗ್ಯಜುಃ ಸಾಮವೇದಗಳಲ್ಲಿ ಉಕ್ತವಾದ ಧರ್ಮವನ್ನು ಆಚರಿಸಬೇಕೆಂಬ ಪ್ರವೃತ್ತಿ ಜನರಿಗಿರುವುದಿಲ್ಲ. ಈ ಕಲಿಯುಗದಲ್ಲಿ ಬ್ರಾಹ್ಮಪ್ರಾಜಾಪತ್ಯ ಮುಂತಾದ ಧರ್ಮ ವ್ಯವಸ್ಥೆಯಿಂದ ವಿವಾಹಗಳು ನಡೆಯುವುದಿಲ್ಲ. ಗುರುಶಿಷ್ಯರಲ್ಲಿ ಶುಶ್ರೂಷೆ, ಗುರು ಅನುಗ್ರಹ ಮುಂತಾದ ಗುರುಕುಲ ಪದ್ಧತಿಯೂ ಇರುವುದಿಲ್ಲ. ದಾಂಪತ್ಯ ಜೀವನದಲ್ಲಿ ಪರಸ್ಪರ ಹೊಂದಿಕೊಳ್ಳುವ ಪ್ರವೃತ್ತಿ ಇರುವುದಿಲ್ಲ. ಯಾವ ಕುಲದಲ್ಲಾದರೂ ಹುಟ್ಟಿರಲಿ, ಬಲಿಷ್ಟನಾದವನು ಕಲಿಯುಗದಲ್ಲಿ ಸರ್ವನಿಯಾಮಕನಾಗುತ್ತಾನೆ. ಯಾವ ವರ್ಣದಲ್ಲಿಯೇ ಹುಟ್ಟಿರಲಿ ಧನಿಕನು ಕನ್ಯೆಗೆ ವರನಾಗಲು ಯೋಗ್ಯನಿನೆಸಿಕೊಳ್ಳುತ್ತಾನೆ.

ಬ್ರಾಹ್ಮಣನು ಯಾವುದೋ ಒಂದು ಕುತ್ಸಿತ ಮಾರ್ಗದಲ್ಲಿ 'ದೀಕ್ಷಿತ' ಎಂದೆನಿಸಿಕೊಂಡು ಬಿಡುತ್ತಾನೆ. ಈ ಕಲಿಯುಗದಲ್ಲಿ ಯಾವುದೋ ಒಂದು ಅಲ್ಪಕ್ರಿಯೆಯೇ 'ಪ್ರಾಯಶ್ಚಿತ್ತ' ವಾಗಿಬಿಡುತ್ತದೆ. ಯಾರನ್ನು ಪೂಜಿಸುತ್ತಾರೋ ಅವರೇ ದೇವರು. ಈ ಕಲಿಯುಗದಲ್ಲಿ ಎಲ್ಲರೂ ಎಲ್ಲ ಆಶ್ರಮಗಳನ್ನು ವಹಿಸಿಕೊಳ್ಳಬಹುದು. ತಮಗೆ ತೋರಿದಂತೆ ಉಪವಾಸ, ಶ್ರಮ, ಹಣವನ್ನು ತೆರುವುದು ಇದೇ ತಪಸ್ಸೆಂದು ಭಾವಿಸುತ್ತಾರೆ. ಮನಸ್ಸಿಗೆ ಕಂಡಂತೆ ಮಾಡುವ ಕ್ರಿಯೆಯೂ ಧರ್ಮ ಎನಿಸುತ್ತದೆ. ಈ ಯುಗದಲ್ಲಿ ಸ್ವಲ್ಪ ಹಣವಿದ್ದರೂ ಸಾಕು, ಜನರಿಗೆ ಧನಮದ ಐಶ್ವರ್ಯ ಮದ ಹುಟ್ಟುತ್ತದೆ. ಸ್ತ್ರೀಯರಿಗೆ ಕೇಶಗಳಿಂದಲೇ ರೂಪ ಮದ ಹೆಚ್ಚಾಗುತ್ತದೆ. ಸುವರ್ಣ ಮಣಿರತ್ನ ವಸ್ತ್ರಗಳನ್ನು ದೂರ ಮಾಡಿ

ಸ್ತ್ರೀಯರು ಕಲಿಯುಗದಲ್ಲಿ ಕೇಶಗಳಿಂದ ತಮ್ಮನ್ನು ಸಿಂಗರಿಸಿಕೊಳ್ಳುತ್ತಾರೆ. ಗಂಡನು ಧನಹೀನನಾದರೆ ಅವನನ್ನು ಬಿಟ್ಟುಬಿಡುತ್ತಾರೆ. ಧನವಂತನೊಬ್ಬನೇ ಕಲಿಯುಗದಲ್ಲಿ ಸ್ತ್ರೀಯರಿಗೆ ಗಂಡನಾಗಲು ಅರ್ಹನಾಗುತ್ತಾನೆ. ಯಾವಾತನು ಹೆಚ್ಚಾಗಿ ಹಣವನ್ನು ತ್ಯಾಗಮಾಡುತ್ತಾನೋ ಆತನು (ಎಷ್ಟೇ ನಿಂದ್ಯನಾಗಿದ್ದರೂ ಜನರಿಗೆ ಸ್ವಾಮಿಯಾಗುತ್ತಾನೆ) ಸ್ವಾಮಿಯಾಗಲು ಮತ್ತಾವ ಕಾರಣವೂ ಬೇಕಾಗಿರುವುದಿಲ್ಲ. ಉತ್ತಮ ವಂಶದ ಗಣನೆಯೂ ಇರುವುದಿಲ್ಲ. ಕಲಿಯುಗದಲ್ಲಿ ದ್ರವ್ಯ ಮಾತ್ರ ಇರುತ್ತದೆ. ಬುದ್ಧಿಯೂ ಸಹ ಕೇವಲ ಹಣ ಕೂಡಿಡುವುದರಲ್ಲಿ ಆಸಕ್ತವಾಗಿರುತ್ತದೆ. ಧನಸಂಗ್ರಹವೆಲ್ಲಾ ಆತ್ಮಭೋಗದಲ್ಲಿಯೇ ಸಮಾಪ್ತವಾಗುತ್ತದೆ. ಕಲಿಯುಗದಲ್ಲಿ ಸ್ತ್ರೀಯರು ಸ್ವೇಚ್ಛಾಚಾರಿಣಿಯರೂ ಸುಖಲಾಲಸೆಯರೂ ಆಗಿರುವರು. ಪುರುಷರಿಗೆ ಅನ್ಯಾಯದ ಧನ ಸಂಪಾದನೆ ಮಾಡುವುದೇ ಉದ್ಧೇಶವಾಗಿರುತ್ತದೆ. ಮಿತ್ರನು ಎಷ್ಟೇ ಬೇಡಿಕೊಂಡರೂ ಸಹ ಕಲಿಯುಗದಲ್ಲಿ ಜನರು ಅವನಿಗಾಗಿ ಒಂದು ಬಿಡಿಗಾಸು ಕೊಡುವುದಿಲ್ಲ. ಸ್ವಾರ್ಥಪರ ಜೀವನವೇ ಅವನದಾಗಿರುತ್ತದೆ. ವಿಪ್ರರ ವಿಷಯದಲ್ಲಿ ಅನ್ಯರಿಗೆ 'ಮನುಷ್ಯರಾದ್ದರಿಂದ ನಾವು ಅವರಿಗೆ ಸಮಾನರು' ಎಂಬ ಬುದ್ಧಿ ಹುಟ್ಟುತ್ತದೆ. (ನಾವೂ ಮನುಷ್ಯರು ಅವರೂ ಮನುಷ್ಯರು ಅವರಿಗೇನು ಹೆಚ್ಚು ಪ್ರಾಶಸ್ತ್ಯ ಕೊಡಬೇಕಾಗಿಲ್ಲ ಎಂಬ ಮನೋಭಾವವು ಜನರಲ್ಲಿ ಹುಟ್ಟುತ್ತದೆ) ಹಾಲು ಕೊಡುತ್ತದಲ್ಲಾ ಎಂಬ ಏಕೈಕ ಕಾರಣದಿಂದ ಗೋವುಗಳಲ್ಲಿ ಆದರ ಬುದ್ಧಿಯು ಇರುತ್ತದೆ. (ಅಂದರೆ ಗೋವು ಸಕಲ ದೇವತೆಗಳ ಆವಾಸಸ್ಥಾನವಾಗಿದೆ ಎಂಬ ಪೂಜ್ಯ ಭಾವನೆ. ಅದು ಒಂದು ಕಾಮಧೇನು ಎಂಬ ಆದರ ಜನರಿಗೆ ಇರುವುದಿಲ್ಲ) ಕಲಿಯುಗದಲ್ಲಿ ವಿಶೇಷವಾಗಿ ಅನಾವೃಷ್ಟಿಯ ಭಯ ಇರುತ್ತದೆ. ಹಸಿವಿನ ಹೆದರಿಕೆಯಿಂದ ವ್ಯಾಕುಲರಾದ ಪ್ರಜೆಗಳು ಸದಾ ಆಕಾಶವನ್ನೇ ನೋಡುತ್ತಾ ಇರುತ್ತಾರೆ. ತಪಸ್ವಿಗಳೋ ಎಂಬಂತೆ ಕಂದಮೂಲ ಫಲಾಹಾರಿಗಳಾಗಿ ಅನಾವೃಷ್ಟಿ ರೋಗ ಮುಂತಾದ ಬಾಧೆಗಳಿಗೆ ಸಿಕ್ಕಿ ನರಳುತ್ತಾರಲ್ಲದೆ ಆತ್ಮಹತ್ಯೆಯನ್ನೂ ಮಾಡಿಕೊಳ್ಳುತ್ತಾರೆ. ಹೀಗಾಗಿ ಕಲಿಯುಗದಲ್ಲಿ ಸದಾ ದುರ್ಭಿಕ್ಷ್ಯವೇ ಹೆಚ್ಚಾಗಿರುತ್ತದೆ. ಜನರು ಅನಾಥರಾಗಿ ಕ್ಲೇಶದಲ್ಲಿ ತೊಳಲುತ್ತಾ ನಿಜವಾದ ಸೌಖ್ಯವಾಗಲಿ ಪ್ರಮೋದವಾಗಲೀ ಇರುವುದಿಲ್ಲ.

ಕಲಿಯುಗದಲ್ಲಿ ಜನರು ಸ್ನಾನ ಮಾಡದೆ ಊಟಮಾಡುತ್ತಾರೆ. ಅಗ್ನಿಪೂಜೆಯಾಗಲಿ ದೇವತೆಗಳ ಪೂಜೆಯಾಗಲಿ, ಅತಿಥಿಗಳ ಪೂಜೆಯಾಗಲಿ ಮಾಡುವುದಿಲ್ಲ, ಪಿತೃಗಳಿಗೆ ಪಿಂಡೋದಕ ಕ್ರಿಯೆಯನ್ನೂ ನಡೆಸುವುದಿಲ್ಲ. ಸ್ತ್ರೀಯರು ವಿಷಯ ಲೋಲುಪರಾಗಿರುತ್ತಾರೆ. ಅವರು ಗಿಡ್ಡ ದೇಹದವರೂ ಆಗಿರುತ್ತಾರಲ್ಲದೆ ವಿಪುಲವಾಗಿ ಆಹಾರವನ್ನು ಸೇವಿಸುತ್ತಾರೆ. ಬಹಳ ಮಕ್ಕಳುಳ್ಳವರೂ ಅಲ್ಪ ಭಾಗ್ಯರಾಗಿರುತ್ತಾರೆ. ಎರಡೂ ಕೈಗಳಿಂದ ತಲೆಯನ್ನು ಕೆರೆದುಕೊಳ್ಳುತ್ತಾ ಗುರುಹಿರಿಯರ ಮತ್ತು ಗಂಡಂದಿರ ಆಜ್ಞೆಯನ್ನು ಅನಾದರದಿಂದ ಉಲ್ಲಂಘಿಸುತ್ತಾರೆ. ಇವರು ತಮ್ಮ ಪೋಷಣೆಯಲ್ಲಿ ಮಾತ್ರ ನಿರತರಾಗಿರುತ್ತಾರೆ. ಕ್ಷುದ್ರ ಸ್ವಭಾವದವರೂ ಆಗಿರುತ್ತಾರೆ. ಶಾರೀರಿಕವಾದ ಶೌಚದ ಬಗ್ಗೆ ಸ್ವಲ್ಪವೂ ಆಸಕ್ತಿಯಿರುವುದಿಲ್ಲ. ಕಲಿಯುಗದಲ್ಲಿ ಸ್ತ್ರೀಯರು ನಿಷ್ಠುರವಾಗಿ ಮಾತನಾಡತಕ್ಕವರೂ, ಸದಾ ಸುಳ್ಳು ಹೇಳತಕ್ಕವರೂ ಆಗಿರುತ್ತಾರೆ. ಅವರು ದುಶ್ಶೀಲರೂ ದುರ್ಜನರನ್ನು ಬಯಸತಕ್ಕವರೂ ಆಗಿರುತ್ತಾರೆ. ಇವರು ಗಂಡಸರ ವಿಷಯದಲ್ಲಿ ಕೆಟ್ಟದಾಗಿ ನಡೆದುಕೊಳ್ಳುವವರೂ ಆಗಿರುತ್ತಾರೆ. ವಟುಗಳು ಸಂಧ್ಯಾವಂದನೆ, ಗಾಯತ್ರಿ ಜಪ ಮುಂತಾದ ವೈದಿಕ ವ್ರತಗಳನ್ನು ಆಚರಿಸದೆಯೇ ವೇದಾಧ್ಯಯನದಲ್ಲಿ ತೊಡಗುವರು ಗೃಹಸ್ಥರು ವೈಶ್ಯದೇವಾದಿ ಹವನಗಳನ್ನು ಮಾಡುವುದಿಲ್ಲ. ಸತ್ಪಾತ್ರರಿಗೆ ಯೋಗ್ಯವಾದ ದಾನವನ್ನು ಮಾಡುವುದಿಲ್ಲ.

ವಾನಪ್ರಸ್ಥರು ಗ್ರಾಮ್ಯಾಹಾರಗಳನ್ನು ಸೇವಿಸುವರು (ಕಂದಮೂಲಾದಿಗಳನ್ನು ಸೇವಿಸುವುದಿಲ್ಲ ಎಂಬರ್ಥ) ಸಂನ್ಯಾಸಿಗಳಾದರೋ ತಮ್ಮ ಮಿತ್ರರು, ಬಂಧುಗಳು ಇತ್ಯಾದಿ ಸ್ನೇಹಬಂಧಕ್ಕೆ ಕಟ್ಟು ಬೀಳುವರು. ಕಲಿಯುಗದಲ್ಲಿ ರಾಜ್ಯವನ್ನಾಳತಕ್ಕವರು ರಕ್ಷಕರಾಗುವುದಿಲ್ಲ. ಶುಲ್ಕ ವ್ಯಾಜದಿಂದ ಧನವನ್ನು ಕಿತ್ತುಕೊಳ್ಳುವುದರಲ್ಲೇ ಆಸಕ್ತರಾಗಿರುವರು. ಪ್ರಜೆಗಳ ದ್ರವ್ಯವನ್ನು ಅಪಹರಿಸುವರು. ಯಾವನಿಗೆ ಕುದುರೆ, ರಥ, ಆನೆ ಮುಂತಾದ ಸಂಪತ್ತು ಇರುವುದೋ ಅವನೇ ರಾಜನಾಗುವನು, ದುರ್ಬಲನು ಭೃತ್ಯನಾಗುವನು. ವೈಶ್ಯರು ಕೃಷಿ, ವಾಣಿಜ್ಯ ಮುಂತಾದ ಸ್ವಧರ್ಮಕಾರ್ಯವನ್ನು ಬಿಟ್ಟು ಶಿಲ್ಪವೇ ಮೊದಲಾದ ವೃತ್ತಿಯಲ್ಲಿ ತೊಡಗುವರು. ವೇದಮಾರ್ಗವು ಲುಪ್ತವಾಗಿ ಪಾಷಂಡತನವೂ ಹೆಚ್ಚಾಗಿ ಅಧರ್ಮವು ಜಾಸ್ತಿಯಾಗುತ್ತದೆ. ಇದರಿಂದ ಜನರ

ಆಯಸ್ಸು ಅಲ್ಪವಾಗುತ್ತದೆ. ಶಾಸ್ತ್ರವಿರುದ್ಧವೂ ಘೋರವೂ ಆದ ತಪಸ್ಸನ್ನು ಜನರು ಆಚರಿಸತೊಡಗಿದಾಗ, ರಾಜದೋಷದಿಂದ ಪ್ರಜೆಗಳು ಬಾಲ್ಯದಲ್ಲಿಯೇ ಸಾವನ್ನು ಅಪ್ಪುತ್ತಾರೆ. ಹೆಂಗಸರಿಗೆ ಐದಾರು ವರ್ಷಗಳಲ್ಲಿಯೇ, ಗಂಡಸರಿಗೆ ಎಂಟು ಒಂಬತ್ತು ವರ್ಷಗಳಲ್ಲಿಯೇ ಅವರಿಗೆ ಸಂತಾನವಾಗುವುದು. ಹನ್ನೆರಡು ವರ್ಷಗಳಿಗೆ ಅವರ ಕೂದಲು ಬೆಳ್ಳಗಾಗುವುದು. ಅನೇಕರು ಅಲ್ಪ ಆಯಸ್ಸಿನಿಂದ ಮೃತರಾಗುವರು. ಕಲಿಯುಗದಲ್ಲಿ ಜನರ ಪ್ರಜ್ಞಾಶಕ್ತಿ ಮಂದವಾಗುತ್ತದೆ. ಜನರು ಅರ್ಥವಿಲ್ಲದ ಚಿಹ್ನೆಗಳನ್ನು ಧರಿಸುವರು ಅವರ ಅಂತಃಕರಣ ಕೆಟ್ಟದಾಗಿರುತ್ತದೆ. ಆದ್ದರಿಂದ ಅಲ್ಪಕಾಲದಲ್ಲಿಯೇ ನಾಶವಾಗುತ್ತಾರೆ.

ಎಲೈ ಮೈತ್ರೇಯ ! ಹೇಗೆ ಹೇಗೆ ಧರ್ಮವು ಕ್ಷೀಣವಾಗುತ್ತಾ ಹೋಗುತ್ತದೋ ಹಾಗೆ ಕಲಿಪ್ರಭಾವವು ವರ್ಧಿಸುತ್ತಾ ಹೋಗುತ್ತಿದೆ ಎಂದು ಪ್ರಾಜ್ಞರು ಊಹಿಸಿಕೊಳ್ಳಬೇಕು. ಹೇಗೆ ನಾಸ್ತಿಕರ ಸಂಖ್ಯೆ ಹೆಚ್ಚುತ್ತಿರುವುದು ಕಂಡುಬರುತ್ತದೆಯೋ ಹಾಗೆ ಕಲಿಯ ಪ್ರಭಾವ ವರ್ಧಿಸುತ್ತದೆ ಎಂದು ಮಹಾತ್ಮರು ಅನುಮಾನಿಸಬೇಕು. ವೇದಮಾರ್ಗಾನುಸಾರಿಗಳಾದ ಸಜ್ಜನರು ಕ್ಷೀಣಿಸುತ್ತಾ ಹೋದಂತೆ ಕಲಿಯ ಪ್ರಭಾವ ಹೆಚ್ಚಾಗುತ್ತಿದೆ ಎಂದು ವಿಚಕ್ಷಣರಾದವರು ತಿಳಿಯಬೇಕು. ಧರ್ಮಾತ್ಮರಾದ ಜನರು ಆರಂಭಿಸಿದ ಕಾರ್ಯಗಳು ಯಾವಾಗ ನಿಷ್ಫಲವಾಗುತ್ತದೋ ಆಗ ಕಲಿಯ ಪ್ರಭಾವ ಹೆಚ್ಚಾಗುತ್ತಿದೆ ಎಂದು ಪ್ರಾಜ್ಞನು ಅರಿಯಬೇಕು. ಯಜ್ಞಗಳಿಗೆ ಅಧೀಶ್ವರನಾದ ಪುರುಷೋತ್ತಮನಾದ ವಿಷ್ಣುವನ್ನು ಜನರು ಯಜ್ಞಯಾಗಾದಿಗಳಿಂದ ಆರಾಧಿಸುವುದಿಲ್ಲವೋ ಆಗ ಕಲಿಯು ಬಲಿಷ್ಠನಾಗಿರುವನೆಂಬ ಅರ್ಥವನ್ನು ಗ್ರಹಿಸಬೇಕು. ಪಾಷಂಡವಾದಿಗಳು ವಿಷ್ಣುವನ್ನು ಪೂಜಿಸುವುದಿಲ್ಲ, ದೇವರಿಂದಾಗಲಿ ಬ್ರಾಹ್ಮಣರಿಂದಾಗಲಿ, ವೇದಗಳಿಂದಾಗಲಿ ನಮಗೆ ಆಗಬೇಕಾದ್ದೇನು ಎಂಬ ಅಲಕ್ಷ್ಯಭಾವನೆ ಹೆಚ್ಚಾದಂತೆಲ್ಲ ಕಲಿಯ ಆಧಿಕ್ಯ ಅಧಿಕವಾಗುತ್ತದೆ. ಬುದ್ಧಿಹೀನರಾದ ಜನರು ಕಾಯಾ, ವಾಚಾ, ಮನಸಾ ದೋಷಗಳಿಗೆ ಒಳಗಾಗಿ ಅನುದಿನವೂ ಪಾಪಕರ್ಮಗಳಿಗೆ ಒಳಗಾಗುತ್ತಾರೆ. ನಿಃಸತ್ವರೂ ಶೌಚಹೀನರೂ, ನಿರ್ಲಜ್ಜರೂ ಆದ ಕಲಿಯುಗದ ಜನರಿಗೆ ಯಾವ ಯಾವ ದುಃಖ ಬರಲು ಸಾಧ್ಯವೋ ಅದೆಲ್ಲವೂ ಬಂದೊದಗುತ್ತದೆ.

ಪರಾಶರರು ಮೈತ್ರೇಯರಿಗೆ ಕಲಿಯುಗದಲ್ಲಿ ಕಲಿಯಿಂದ ಆಗುವ ದುಷ್ಪರಿಣಾಮಗಳನ್ನು ಹೇಳುತ್ತಾ ಇದ್ದರೆ, ಅದೆಷ್ಟು ನಿಜವಾಗಿದೆ ಎಂಬುದು ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. ಅಂದು ದ್ವಾಪರಯುಗದಲ್ಲಿ ತಿಳಿಸಿದ ಈ ಭವಿಷ್ಯವಾಣಿ ಇಂದಿಗೆ ನಿಜವಾಗಿದೆಯೇ ? ಎಂದು ಸಮರ್ಥಿಸುವ ಕಾಲ ಈಗಿನದಾಗಿದೆ. ಹಾಗಾದರೆ ಧಾರ್ಮಿಕ ಪ್ರವೃತ್ತಿ, ಸದಾಚಾರ ಸಂಪನ್ನರು, ಈ ಭುವಿಯಲ್ಲಿ ಇಲ್ಲವೇ ಇಲ್ಲವೇ? ಎಂಬ ಸಂಶಯ ನಮಗೆ ಉಂಟಾಗುತ್ತದೆ. ಖಂಡಿತಾ ಆ ಭಾವನೆ ನಮ್ಮಲ್ಲಿ ಇರಬಾರದು. ನಮ್ಮಲ್ಲಿ ಇಂದಿಗೂ ಸಜ್ಜನರು, ಸದಾಚಾರ ಸಂಪನ್ನರು, ಜ್ಞಾನಿಗಳು, ಪಂಡಿತರು, ತಪೋನಿರತರು ಲೋಕಕಲ್ಯಾಣಕ್ಕಾಗಿ ಶ್ರಮಿಸುತ್ತಿದ್ದಾರೆ. ಇಂದಿಗೂ ಪುರುಷರಾಗಲಿ, ಸ್ತ್ರೀಯರಾಗಲಿ ಸದ್ವರ್ತನೆಯಿಂದ ತಮ್ಮ ಜೀವನವನ್ನು ನಡೆಸುವ ಜನರು ಇದ್ದಾರೆ. ದುಷ್ಟರ ಆಧಿಕ್ಯ ಜಾಸ್ತಿಯಾಗಿದೆಯೇ ವಿನಹ ಶಿಷ್ಟರೇ ಇಹಲೋಕದಲ್ಲಿ ಇಲ್ಲ ಎಂಬರ್ಥವಲ್ಲ, ಶಿಷ್ಯರ ರಕ್ಷಣೆಯನ್ನು ಭಗವಂತನು ಮಾಡುತ್ತಲೇ ಇರುತ್ತಾನೆ. ಅಂತೆಯೇ ದುಷ್ಟ ಪ್ರವೃತ್ತಿಯನ್ನು ಒಂದಲ್ಲ ಒಂದು ವಿಧದಲ್ಲಿ ಭಗವಂತನು ನಾಶಮಾಡುತ್ತಾನೆ ಎಂಬ ನಂಬಿಕೆಯೂ ನಮ್ಮಲ್ಲಿ ಆಳವಾಗಿದೆ. ಇವೆಲ್ಲವನ್ನೂ ಪ್ರಕೃತ ಪರಿಸ್ಥಿತಿಯಲ್ಲಿಯೇ ನಾವು ಕಂಡರಿಯಬಹುದು. ಅವರವರ ಸದ್ಗುಣಕ್ಕಾಗಲಿ, ದುರ್ಗುಣಕ್ಕಾಗಲಿ, ಅವರ ಮನಸ್ಸೇ ಕನ್ನಡಿಯಂತೆ ಪ್ರತಿಫಲಿಸಿರುತ್ತದೆ. ಸಕಲ ಜೀವಾತ್ಮರಲ್ಲಿಯೂ ಪರಮಾತ್ಮ ಇರುತ್ತಾನೆ. ಅವನು ನಮ್ಮನ್ನು ಹೀಗೆ ಮಾಡುವುದು ಸರಿ. ಹೀಗೆ ಮಾಡುವುದು ತಪ್ಪು ಎಂದು ನಮಗೆ ಅಂತರಾತ್ಮನಾಗಿ ಕುಳಿತು ಉಪದೇಶಿಸುತ್ತಲೇ ಇರುತ್ತಾನೆ. ಮಾರ್ಗದರ್ಶನ ನೀಡುತ್ತಲೇ ಇರುತ್ತಾನೆ.

ಅವನು ಸಾಧ್ಯವಾದಷ್ಟು ಅವಕಾಶಗಳನ್ನು ನೀಡಿ ದುಷ್ಟರನ್ನೂ ಸಹ ಶಿಷ್ಯರನ್ನಾಗಿ ಮಾಡಲು ಪ್ರಯತ್ನಿಸುತ್ತಾನೆ ಎಂಬುದಂತೂ ಸತ್ಯ. ಭಗವಂತನ ನಿರ್ದೇಶನವನ್ನು ಮೀರಿ ನಡೆದುಕೊಳ್ಳುವವ ದಾನವನಾಗುತ್ತಾನೆ. ಈ ಸಂದರ್ಭದಲ್ಲಿ ಈ ಕಲಿಯುಗದಲ್ಲಿ ಪರಮಾತ್ಮನು ನಮಗೆ ಅದೆಷ್ಟು ಸುಲಭನಾಗಿರುತ್ತಾನೆ ಎಂಬುದನ್ನು ಪರಾಶರರು ಮೈತ್ರೇಯರಿಗೆ ವಿವರಿಸುತ್ತಾರೆ.

ನಿಸ್ಸ್ವಾಧ್ಯಾಯ ವಷಟ್ಕಾರೇ ಸ್ವಧಾಸ್ವಾಹಾ ವಿವರ್ಜಿತೇ ।
ತದಾ ಪ್ರವಿರಲೋ ಧರ್ಮ ಕ್ವಚಿಲ್ಲೋಕೇ ನಿವತ್ಸ್ಯತಿ ॥
ತತ್ರಾಲ್ಪೇನೈವ ಯತ್ನೇನ ಪುಣ್ಯಸ್ಕಂಧ ಮನುತ್ತಮಮ್ ।
ಕರೋತಿಯಂ ಕೃತಯುಗೇ ಕ್ರಿಯತೇ ತಪಸಾ ಹಿಸಃ ॥

(ವಿ.ಪು. 2ನೇ ಸಂ. ಷಷ್ಠಾಂಶ ಅ 1 ಶ್ಲೋ 59–60)

ಈ ಲೋಕವು ವೇದಾಧ್ಯಯನ ವಷಟ್ಕಾರರಹಿತವೂ ಸ್ವಧಾಸ್ವಾಹಾಕಾರ ವರ್ಜಿತವೂ ಆದ ಮೇಲೆ ಧರ್ಮವು ಪ್ರಕ್ಷೀಣವಾಗಿ ಎಲ್ಲಿಯೋ ಒಂದು ಕಡೆ ಹೇಗೋ ಉಳಿದುಕೊಂಡು ಇರುತ್ತದೆ. ಕೃತಯುಗದಲ್ಲಿ ಮಹತ್ತರವಾದ ಪ್ರಯತ್ನದಿಂದ (ಅಂದರೆ ಯಜ್ಞ ಯಾಗಾದಿಗಳಿಂದ ಆಗುವ ಫಲ) ಲಭಿಸುತ್ತಿದ್ದ ಪುಣ್ಯವು ಕಲಿಯುಗದಲ್ಲಿ ಅಲ್ಪಯತ್ನದಿಂದಲೇ ಲಭಿಸುತ್ತದೆ. ಇದೊಂದು ಕಲಿಯುಗದ ಗುಣ. ಅದಾವುದು ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ನಾವು ನೋಡೋಣ.

## ಶ್ರೀ ವ್ಯಾಸಮಹರ್ಷಿಗಳಿಂದ ಕಲಿಯುಗ, ಶೂದ್ರ, ಸ್ತ್ರೀ ಇದರ ವಿಶೇಷತೆಗಳ ವಿವರಣೆ

ಈ ಶೀರ್ಷಿಕೆಯನ್ನು ನೋಡಿದರೇನೆ ಅಥವಾ ಕೇಳಿದರೇನೆ ನಮಗೆ ಆಶ್ಚರ್ಯವಾಗುತ್ತದೆ. ಇದೇನು ಕಲಿಯುಗಕ್ಕೂ, ಶೂದ್ರರಿಗೂ ಅಂದರೆ ಅಂತಿಮ ವರ್ಗದವರಿಗೂ, ಸ್ತ್ರೀಯರಿಗೂ ಪರಸ್ಪರ ಸಂಬಂಧವಿದೆಯೇ? ಅದರ ವಿಶೇಷತೆಯಾದರೂ ಏನು ? ಎಂಬ ಪ್ರಶ್ನೆಗಳ ಸುರಿಮಳೆ ನಮ್ಮ ಮನಸ್ಸನ್ನು ಕಾಡುತ್ತಿರುತ್ತದೆ. ಇದೇ ಪ್ರಶ್ನೆಗಳೇ ಅಂದಿನ ಕಾಲದಲ್ಲಿ ಮುನಿಗಳಲ್ಲಿ ಉದ್ಭವಿಸಿತು. ಮುನಿಗಳ ನಡುವೆ ಒಮ್ಮೆ "ಯಾವ ಕಾಲದಲ್ಲಿ ಅಲ್ಪವಾದ ಧರ್ಮಾನುಷ್ಠಾನವೂ ಮಹತ್ತರವಾದ ಫಲವನ್ನು ಕೊಡುತ್ತದೆ ? ಯಾರು ಸುಖವಾಗಿ ಪುಣ್ಯಕಾರ್ಯವನ್ನು ಆಚರಿಸಬಲ್ಲರು ?" ಎಂಬ ಪುಣ್ಯ ವಿಷಯದ ಜಿಜ್ಞಾಸೆ ಅವರಿಗೆ ಉಂಟಾಯಿತು. ಆಗ ಅವರು ತಮ್ಮ

ಸಂದೇಹವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ವೇದವ್ಯಾಸರ ಬಳಿಗೆ ಹೋದರು. ಪರಾಶರರ ಪುತ್ರರಾದ ವೇದವ್ಯಾಸರಾದರೋ ಪವಿತ್ರ ಗಂಗಾಜಲದಲ್ಲಿ ಸ್ನಾನ ಮಾಡುತ್ತಿದ್ದರು. ಅವರು ಇನ್ನೂ ಪೂರ್ತಿ ಸ್ನಾನ ಮಾಡಿರಲಿಲ್ಲ. ಅರ್ಧಂಬರ್ಧ ಸ್ನಾನ ಮಾಡಿದ್ದರು. ವ್ಯಾಸರು ಸ್ನಾನ ಮಾಡಿ ಬರಲೆಂದು ಮುನಿಗಳು ಪ್ರತೀಕ್ಷಿಸುತ್ತಾ ದಂಡೆಯ ಮೇಲೆ ಇದ್ದ ಮರದ ಕೆಳಗೆ ಕುಳಿತು ಕಾದಿದ್ದರು. ಈ ಸಂದರ್ಭದಲ್ಲಿ ವ್ಯಾಸಮುನಿಗಳು :–

**ಮಗ್ನೋಥ ಜಾಹ್ನವೀ ತೋಯಾದುತ್ಥಾಯಾಹ ಸುತೋಮಮ ।**
**ಶೂದ್ರ ಸ್ಸಾಧುಃ ಕಲಿಸ್ಸಾಧುರಿತ್ಯೇವಂ ಶೃಣ್ವತಾಂ ವಚಃ ॥**

**ತೇಷಾಂ ಮುನಿನಾಂ ಭೂಯಶ್ಚ ಮಮಜ್ಜ ಸನದೀಜಲೇ ।**
**ಸಾಧು ಸಾಧ್ವಿತಿ ಚೋತ್ಥಾಯ ಶೂದ್ರ ಧನ್ಯೋಸ್ಮಿ ಚಾಬ್ರವೀತ್ ॥**

**ನಿಮಗ್ನಶ್ಚ ಸಮುತ್ಥಾಯ ಪುನಃ ಪ್ರಾಹ ಮಹಾಮುನಿಃ ।**
**ಯೋಕ್ಷಿತಃ ಸಾಧು ದನ್ಯಾ ಸ್ತಾಸ್ತಾ ಭ್ಯೋ ಧನ್ಯತರೋಸ್ತಿಕಃ ॥**

(ವಿ.ಪು. 2ನೇ ಸ. ಷಷ್ಠಾಂಶ ಅ, ಶ್ಲೋ 6ರಿಂದ 8)

ಗಂಗಾಜಲದಲ್ಲಿ ಮುಳುಗಿದ್ದ ವ್ಯಾಸರು ಮೇಲಕ್ಕೆ ಏಳುತ್ತಾ ಈ ಮುನಿಗಳಿಗೆ ಕೇಳಿಸುವಂತೆ 'ಶೂದ್ರನೇ ಧನ್ಯ!, ಕಲಿಯುಗವೇ ಧನ್ಯ ! ಎಂದು ಜೋರಾಗಿ ಉದ್ಗರಿಸಿದರು. ಆ ಮುನಿಗಳು ನೋಡನೋಡುತ್ತಿರುವಾಗಲೇ ಮತ್ತೊಮ್ಮೆ ನದೀಜಲದಲ್ಲಿ ಮುಳುಗಿ ಎದ್ದು ಭಲೆ, ಭಲೆ ಶೂದ್ರ! ಧನ್ಯ ನೀನು!' ಎಂದು ಉದ್ಗರಿಸಿದರು. ಪುನಃ ಜಲದಲ್ಲಿ ಮುಳುಗಿ ಎದ್ದು ಆ ಮಹಾಮುನಿಗಳು ಭಲಾ, ಸ್ತ್ರೀಯರೇ ಧನ್ಯರು ! ಅವರಿಗಿಂತ ಧನ್ಯರು ಯಾರಿದ್ದಾರೆ ! ಎಂದರು. ಹೀಗೆ ಮೂರುಸಲ ಮುಳುಗಿ ಮೇಲಕ್ಕೆ ಏಳುತ್ತಾ 'ಕಲಿಯುಗ ಧನ್ಯ, ಶೂದ್ರನು ಧನ್ಯ, ಸ್ತ್ರೀಯರು ಧನ್ಯ' ಎಂದು ಹೇಳಿದರಲ್ಲಾ, ಇದರ ರಹಸ್ಯವಾದರೂ ಏನಿರಬಹುದು ಎಂಬ ಕುತೂಹಲ ಮುನಿಗಳಿಗೆ ಉಂಟಾಯಿತು. ಹೀಗೆ ಸತ್ಯವತಿಯ ಪುತ್ರರಾದ ವ್ಯಾಸಮಹರ್ಷಿಗಳು ಸ್ನಾನಮಾಡಿ ವಿಧಿವತ್ತಾಗಿ ನಿತ್ಯಕರ್ಮವನ್ನು ನೆರವೇರಿಸಿದ ಬಳಿಕ ಮುನಿಗಳು ಇದರ ಬಗ್ಗೆ ಕೇಳಿದರು.

ಅದಕ್ಕೆ ದ್ವಿಜರೇ ಅದರ ಬಗ್ಗೆ ಈಗ ಹೇಳುತ್ತೇನೆ ಕೇಳಿ ಎಂದು ಹೇಳುತ್ತಾರೆ.

**ಯತ್ಕೃತೇ ದಶಭಿವರ್ವರ್ಷೈ ಸ್ತ್ರೇತಾಯಾಂ ಹಾಯನೇನ ತತ್**
**ದ್ವಾಪರೇ ತಚ್ಚ ಮಾಸೇನ ಹ್ಯಹೋರಾತ್ರೇಣ ತತ್‌ಕಲೌ**

**ತಪಸೋ ಬ್ರಹ್ಮಚರ್ಯಸ್ಯ ಜಪಾದೇಶ್ಚ ಫಲಂ ದ್ವಿಜಾಃ**
**ಪ್ರಾಪ್ನೋತಿ ಪುರುಷಸ್ತೇನ ಕಲಿಸ್ಯಾಧ್ವಿತಿ ಬಾಷಿತಮ್**

**ಧ್ಯಾಯನ್ ಕೃತೇ ಯಜನ್ಯಜ್ಞೈಸ್ತ್ರೇತಾಯಾಂ ದ್ವಾಪರೇರ್ಚಯನ್**
**ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯಕೇಶವಮ್**

(ವಿ.ಪು. 2ನೇ ಸಂ. ಷಷ್ಠಾಂಶ ಅ. 2 ಶ್ಲೋ 15ರಿಂದ 17)

**ಧರ್ಮೋತ್ಕರ್ಷ ಮತೀವಾತ್ರ ಪ್ರಾಪ್ನೋತಿ ಪುರುಷಃ ಕಲೌ**
**ಅಲ್ಪಾಯಾಸೇನ ಧರ್ಮಜ್ಞಾಸ್ತೇನ ತುಷ್ಟೋಸ್ಮ್ಯಹಂ ಕಲೇಃ**

**ವ್ರತ ಚರ್ಯಾಪರೈರ್ಗ್ರಾಹ್ಯಾ ವೇದಾಃ ಪೂರ್ವಂ ದ್ವಿಜಾತಿಭಿಃ**
**ತತಸ್ಸ್ವಧರ್ಮ ಸಂಪ್ರಾಪ್ತೈರ್ಯಷ್ಟವ್ಯಂ ವಿದಿವದ್ಧನೈ**
**ವೃಥಾ ಕಥಾ ವೃಥಾ ಭೋಜ್ಯಂ ವೃಥೇಜ್ಯಾ ಚ ದ್ವಿ ಜನ್ಮನಾಮ್**
**ಪತನಾಯ ತತೋ ಭಾವ್ಯಂ ತೈಸ್ತುಸಂಯಮಿಭಿಸ್ತಥಾ**

(ಶ್ಲೋಕ 18–20)

ಎಲೈ ದ್ವಿಜರೇ ಕೃತಯುಗದಲ್ಲಿ ತಪಸ್ಸು, ಬ್ರಹ್ಮಚರ್ಯ, ಜಪ ಮುಂತಾದವುಗಳನ್ನು ಹತ್ತು ವರ್ಷದವರೆಗೆ ಆಚರಿಸಿದರೆ ಯಾವ ಫಲವು ಪ್ರಾಪ್ತವಾಗುತ್ತದೋ ಅದು ತ್ರೇತಾಯುಗದಲ್ಲಿ ಒಂದು ವರ್ಷ ಆಚರಿಸಿದರೇನೆ ದೊರೆಯುತ್ತದೆ. ಅದೇ ಫಲವು ದ್ವಾಪರಯುಗದಲ್ಲಿ ಒಂದು ತಿಂಗಳೂ ಆಚರಿಸಿದರೆ ದೊರೆಯುತ್ತದೆ. ಕಲಿಯುಗದಲ್ಲಿ ಒಂದು ಅಹೋರಾತ್ರಿ

ಆಚರಿಸಿದರೇನೇ ಅದೇ ಫಲವನ್ನು ಮನುಷ್ಯನು ಪಡೆಯುತ್ತಾನೆ. ಆದ್ದರಿಂದ ಕಲಿಯುಗವೇ ಧನ್ಯ ಎಂದು ಹೇಳಿದೆನು" ಎಂದು ವ್ಯಾಸರು ಹೇಳಿದರು. ಕೃತಯುಗದಲ್ಲಿ ಕೇಶವನನ್ನು ಧ್ಯಾನಿಸುವುದರಿಂದ ತ್ರೇತಾಯುಗದಲ್ಲಿ ಯಜ್ಞಗಳಿಂದ ದ್ವಾಪರದಲ್ಲಿ ಅರ್ಚನೆಯಿಂದ ಲಭಿಸುವ ಪುಣ್ಯಫಲವನ್ನು ಕಲಿಯುಗದಲ್ಲಿ ನಾಮಕೀರ್ತನೆ ಮಾತ್ರದಿಂದಲೇ ಮಾನವನು ಪಡೆಯುವನು. ಹರಿನಾಮಸಂಕೀರ್ತನೆ ಕಲಿಯುಗದಲ್ಲಿ ಅತ್ಯಂತ ಪ್ರಮುಖವಾದುದು.

**ಧ್ಯಾಯನ್ ಕೃತೇ ಯಜನ್ಯಜ್ಞೇ ಸ್ತ್ರೇತಾಯಾಂ ದ್ವಾಪರೇ ರ್ಚಯನ್**
**ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್**

**ಧರ್ಮೋತ್ಕರ್ಷ ಮತೀವಾತ್ರ ಪ್ರಾಪ್ನೋತಿ ಪುರುಷಃ ಕಲೌ**
**ಅಲ್ಪಾಯಾಸೇನ ಧರ್ಮಜ್ಞಾಸ್ತೇನ ತುಷ್ಟೋಸ್ಮ್ಯಹಂ ಕಲೇ**

**ವ್ರತ ಚರ್ಯಾಪರೈ ಗ್ರ್ರಾಹ್ಯಾ ವೇದಾಃ ಪೂರ್ವಂ ದ್ವಿಜಾತಿಭಿಃ**
**ತತಸ್ಯ ಧರ್ಮ ಸಂಪ್ರಾಪ್ತೈರ್ಯಷ್ಟವ್ಯಂ ವದ್ಧನೈ**

ಕಲಿಯುಗದಲ್ಲಿ ಅಲ್ಪಾಯಾಸದಿಂದ ವಿಪುಲವಾದ ಧರ್ಮಫಲವು ಲಭಿಸುತ್ತದೆ ಆದ್ದರಿಂದ ಕಲಿಯುಗಕ್ಕಾಗಿ ನಾನು ಸಂತೋಷಪಡುತ್ತಿದ್ದೇನೆ.

ದ್ವಿಜರಾದರೋ ಬ್ರಹ್ಮಚರ್ಯವನ್ನು ಪಾಲಿಸುತ್ತಾ ವೇದಾಧ್ಯಯನ ಮಾಡಬೇಕಾಗುತ್ತದೆ. ನಂತರ ಸ್ವಧರ್ಮಗಳಿಂದ ಗಳಿಸಿದ ಧನವನ್ನು ವಿನಿಯೋಗಿಸಿ ವಿಧಿವತ್ತಾಗಿ ಯಜ್ಞಗ್ಗಳನ್ನು ಆಚರಿಸಬೇಕು. ಹಾಗಲ್ಲದೆ ವ್ಯರ್ಥವಾಗಿ ದೇವತಾಕೀರ್ತನವಿಲ್ಲದೆ ಮಾತನಾಡುವುದು, ಭಗವಂತನಿಗೆ ಅರ್ಪಿಸದೆ ಭೋಜನವನ್ನು ಮಾಡುವುದು, ಡಂಭಾಚಾರಕ್ಕಾಗಿ ಯಜ್ಞ ಮಾಡುವುದು. ಇವುಗಳಿಂದ ದ್ವಿಜನು ಪತಿತನಾಗುತ್ತಾನೆ. ಎಲ್ಲವನ್ನು ಶಾಸ್ತ್ರೋಕ್ತ ಕ್ರಮದಿಂದ ಮಾಡಬೇಕಾಗುತ್ತದೆ. ಇಲ್ಲದಿದ್ದಲ್ಲಿ ದೋಷ ಉಂಟಾಗುತ್ತದೆ. ಎಲ್ಲ ಕಾರ್ಯಗಳಲ್ಲಿಯೂ ದ್ವಿಜರು ಪರತಂತ್ರರಾಗಿರುತ್ತಾರೆ. ಆದರೆ ಈ ಬಗೆಯ

ಯಾವ ಕ್ಲೇಶವೂ ಇಲ್ಲದೆ ಮಂತ್ರಹೀನವಾಗಿ ಪಾಕಯಜ್ಞದಲ್ಲಿ ಅಧಿಕಾರವನ್ನು ಪಡೆದಿರುವ ಶೂದ್ರನಾದರೋ ದ್ವಿಜರ ಸೇವೆಯಿಂದಲೇ ಸದ್ಗತಿಯನ್ನು ಪಡೆಯುತ್ತಾನೆ. ಆದ್ದರಿಂದಲೇ ಶೂದ್ರನು ಧನ್ಯನು ಎಂದು ಹೇಳಿದೆನು.

ಮೂರನೆಯದಾಗಿ ಸ್ವಧರ್ಮಕ್ಕೆ ವಿರೋಧವಿಲ್ಲದಂತೆ ಸಂಪಾದಿಸಿದ ಧನವನ್ನೂ ಪುರುಷರು ಸತ್ಪಾತ್ರರಿಗೆ ವಿನಿಯೋಗಿಸಬೇಕು. ವಿಧಿವತ್ತಾಗಿ ಯಜ್ಞಗಳನ್ನು ಆಚರಿಸಬೇಕಾಗುತ್ತದೆ. ಅದನ್ನು ರಕ್ಷಿಸುವುದಕ್ಕಾಗಲೀ ಬಹಳ ಕಷ್ಟಪಡಬೇಕಾಗುತ್ತದೆ. ಹಾಗೆ ಅನುಚಿತಮಾರ್ಗದಲ್ಲಿ ಧನವನ್ನು ಬಳಸುವುದರಿಂದ ಯಾವ ಅನರ್ಥಪ್ರಾಪ್ತವಾಗುತ್ತದೆ ಎಂಬುದು ಸರ್ವವಿದಿತ. ಆದರೆ ಸ್ತ್ರೀಯಾದರೋ ಕ್ರಿಯೆ, ಮನಸ್ಸು, ವಾಕ್ ಇವುಗಳಿಂದ ಪತಿಯ ಸೇವೆಯನ್ನು ಮಾಡಿದರೆ ಸಾಕು. ಅವನಿಗೆ ಸಮಾನವಾದ ಶುಭಲೋಕವನ್ನು ಪಡೆಯುವಳು. ಗಂಡಸಿನಂತೆಯೇ ಹೆಚ್ಚು ಕಷ್ಟಪಡದೆಯೇ ಅವನು ಪಡೆಯುವ ಲೋಕವನ್ನು ಸ್ತ್ರೀಯರು ಗಳಿಸುತ್ತಾರೆ. ಆದ್ದರಿಂದ ಸ್ತ್ರೀಯರು ಧನ್ಯರು ಎಂದು ಹೇಳಿದರು.

ಈ ಮಾತುಗಳನ್ನು ಕೇಳಿ ಆ ಋಷಿಗಳು "ಮಹರ್ಷಿಗಳೇ ನಾವು ಯಾವುದನ್ನು ಕೇಳಬೇಕಾಗಿತ್ತೋ ಆ ಪ್ರಶ್ನೆಗೆ ಸರಿಯಾಗಿ ಉತ್ತರವನ್ನು ಹೇಳಿರುವಿರಿ ಎಂದರು. ವಿಸ್ಮಯದಿಂದ ವಿಕಸಿತ ನೇತ್ರರಾಗಿದ್ದ ಆ ಮುನಿಗಳನ್ನು ಕಂಡ ವ್ಯಾಸರು ಗಟ್ಟಿಯಾಗಿ ನಕ್ಕು ಹೀಗೆಂದರು. ಎಲೈ ಮುನಿಗಳೇ ನೀವು ಕೇಳಬೇಕೆಂದಿದ್ದ ಪ್ರಶ್ನೆಗಳು ನನ್ನ ದಿವ್ಯದೃಷ್ಟಿಗೆ ಆಗಲೇ ಗೋಚರಿಸಿತು. ಆದ್ದರಿಂದ ಉತ್ತರ ಹೇಳುವ ಪ್ರಸಂಗದಿಂದ 'ಭಲಾ ಧನ್ಯರು' ಎಂದು ಮೂರು ಸಲ ಉದ್ಗಾರವೆತ್ತಿದೆ ಎಂದರು. ವ್ಯಾಸ ಮಹರ್ಷಿಗಳು ಕೊಟ್ಟ ಉತ್ತರಕ್ಕೆ ಮುನಿಗ ಸಂದೇಹವು ಪರಿಹರವಾಗಿ ಅವರು ಸಂತುಷ್ಟರಾದರು ಅಂದಿನ ಕಾಲದ ಮಹರ್ಷಿಗಳ ಪ್ರಭಾವವು ಹೇಗಿದ್ದಿತು ಎಂಬುದನ್ನು ಈ ಘಟನೆಯಿಂದ ನಾವು ತಿಳಿದುಕೊಳ್ಳಬಹುದು.

## ಪ್ರಳಯ

ಪರಾಶರ ಮುನಿಗಳು ಮೈತ್ರೇಯರಿಗೆ ಪ್ರಳಯದ ಬಗ್ಗೆ ವಿವರಿಸುತ್ತಾರೆ.

ಪ್ರಳಯ ಎಂದರೆ ಈ ಬ್ರಹ್ಮ ಸೃಷ್ಟಿಯಲ್ಲಿ ಎಲ್ಲವೂ ಲಯಹೊಂದುವುದು. ಇದನ್ನು ಪ್ರತಿಸಂಚರ ಎಂದು ಕರೆಯುತ್ತಾರೆ.

**ಸರ್ವೇಷಾ ಮೇವ ಭೂತಾನಾಂ ತ್ರಿವಿದಃ ಪ್ರತಿಸಂಚರಃ ।**

**ನೈಮಿತ್ತಿಕಃ ಪ್ರಾಕೃತಿಕ ಸ್ತಥೈ ವಾತ್ಯನ್ತಿಕೋ ಲಯಃ ॥**

**ಬ್ರಾಹ್ಮೋ ನೈಮಿತ್ತಿಸ್ತೇಷಾಂ ಕಲ್ಪಾಂತೇ ಪ್ರತಿಸಂಚರಃ ।**

**ಅತ್ಯಂತಿಕಸ್ತು ಮೋಕ್ಷರಖ್ಯಃ ಪ್ರಾಕೃತೋ ದ್ವಿಪರಾರ್ಧಕಃ ॥**

(ವಿ.ಪು. 2ನೇ ಸಂ ಷಷ್ಟಾಂಶ. ಅ. 3 ಶ್ಲೋ 1 ಮತ್ತು 2)

ಸಮಸ್ತ ಪ್ರಾಣಿಗಳಿಗೂ ನೈಮಿತ್ತಿಕ ಪ್ರಾಕೃತಿಕ ಆತ್ಯಂತಿಕಗಳೆಂಬ ಮೂರು ಬಗೆಯ ಪ್ರಳಯ ಉಂಟು.

1. ಅವುಗಳಲ್ಲಿ ಕಲ್ಪಾಂತದಲ್ಲಿ ಆಗುವಂತಹುದು ಬ್ರಾಹ್ಮವೆಂಬ ನೈಮಿತ್ತಿಕ ಪ್ರಳಯ

2. ಎರಡು ಪರಾರ್ಧಗಳ ಕಡೆಯಲ್ಲಿ ಆಗತಕ್ಕದ್ದು ಪ್ರಾಕೃತಿಕ ಪ್ರಳಯ

3. ಆತ್ಯಂತಿಕ ಪ್ರಳಯ ಎಂದರೆ ಮೋಕ್ಷ

ಆಗ ಮೈತ್ರೇಯರು ಪರಾಶರರನ್ನು ಕುರಿತು ಭಗವಾನ್ ಎರಡು ಪರಾರ್ಧಗಳಿಂದ ಪ್ರಾಕೃತ ಪ್ರಳಯವಾಗುತ್ತದೆ ಎಂದು ಹೇಳಿದಿರಲ್ಲ ಅದು ಹೇಗೆ ? ಪರಾರ್ಧ ಎಂದರೆ ಎಷ್ಟು ಸಂಖ್ಯೆ ಎಂದು ಕೇಳಿದರು.

## ಅದಕ್ಕೆ ಪರಾಶರ ಉತ್ತರಿಸುತ್ತಾ ಹೀಗೆಂದರು:

**ಸ್ಥಾನಾತ್ ಸ್ಥಾನಂ ದಶಗುಣ ಮೇಕ ಸ್ಮದಣ್ಯತೇ ದ್ವಿಜ ।**

**ತತೋ ಷ್ಟಾ ದಶಮೇ ಭಾಗೇ ಪರಾರ್ಧ ಮಭಿಧೀಯತೇ ॥**

**ಪರಾರ್ಧದ್ವಿಗುಣಂ ಯತ್ತು ಪ್ರಾಕೃತಸ್ಯ ಲಯೋ ದ್ವಿಜ ।**

**ತದಾವ್ಯಕ್ತೇಖಿಲಂ ವ್ಯಕ್ತಂ ಸ್ವಹೇತೌ ಲಯಮೇತಿ ವೈ**

**ನಿಮೇಷೋ ಮಾನುಷೋ ಯೋಸೌ ಮಾತ್ರಾ ಮಾತ್ರಾ ಪ್ರಮಾಣತಃ ।**

**ತ್ತೈ ಪಂಚದಶಭಿಃ ಕಾಷ್ಠಾ ತ್ರಿಂಶತ್ಕಾಷ್ಠಾ ಕಲಾಸ್ಮೃತಾ ॥**

**ನಾಡಿಕಾ ತು ಪ್ರಮಾಣೇನ ಸಾ ಕಲಾ ದಶ ಪಂಚ ಚ ।**

**ಉನ್ಮಾನೇ ನಾಂಬ ಸಸ್ಯಾತು ಪಲಾನ್ಯರ್ಧತ್ರ ಯೋದಶ॥**

(ವಿ.ಪು. 2ನೇ ಸಂ. ಷಷ್ಠಾಂಶ ಅ. 3. ಶ್ಲೋ 4ರಿಂದ 7)

ಪರಾಶರರು ಗಣಿತ ವಿಧಾನದಿಂದ ಪರಾರ್ಧವನ್ನು ತಿಳಿಸಿದ್ದಾರೆ.

ಇಲ್ಲಿ ತಿಳಿಸಿರುವ ಪ್ರಕಾರ ಒಂದರ ಮುಂದೆ ಹದಿನೇಳು ಸೊನ್ನೆಗಳನ್ನು ಇಟ್ಟರೆ ಅದು ಪರಾರ್ಧವಾಗುತ್ತದೆ. ಅಂದರೆ 100000000000000000 ಮನುಷ್ಯಮಾನದಿಂದ ಇಷ್ಟು ವರ್ಷಗಳಿಗೆ ಬ್ರಹ್ಮನ ಅರ್ಧ ಆಯಸ್ಸು ಮುಗಿಯುತ್ತದೆ. ಎರಡು ಪರಾರ್ಧಗಳಿಗೆ ಒಂದು ಪರ–ಇದು ಬ್ರಹ್ಮನ ಪೂರ್ಣ ಅಯಸ್ಸು. ಈಗ ನಾವು ಇರುವುದು ದ್ವಿತೀಯ ಪರಾರ್ಧದಲ್ಲಿ ವೈವಸ್ವತ ಮನ್ವಂತರದ ಪ್ರಥಮ ಪಾದದಲ್ಲಿ ಎಂಬುದನ್ನು ತಿಳಿಯಬೇಕು. ಈ ಪ್ರಾಕೃತ ಪ್ರಳಯದಲ್ಲಿ ವ್ಯಕ್ತವಾದ ಸಮಸ್ತ ವಸ್ತುವೂ ತಮಗೆ ಕಾರಣವಾದ ಪ್ರಕೃತಿಯಲ್ಲಿ ಲಯವಾಗುತ್ತದೆ.

ಮನುಷ್ಯರು ಕಣ್ಣುರೆಪ್ಪೆ ಹೊಡೆಯುವ ಕಾಲವೇ ನಿಮೇಷ ಎನಿಸುತ್ತದೆ. ಒಂದು ಲಘುವರ್ಣವನ್ನು ಅಂದರೆ ಅ, ಇ, ಉ ಮುಂತಾದ ಹ್ರಸ್ವ ಸ್ವರವನ್ನು ಉಚ್ಚರಿಸುವ ಕಾಲವು ಮಾತ್ರ ಎನ್ನಿಸುವುದರಿಂದ ಅಷ್ಟೇ ಪ್ರಮಾಣವಿರುವ ನಿಮೇಷಕ್ಕೂ ಮಾತ್ರಾ ಎಂದು ಹೆಸರು. ಇಂತಹ ಹದಿನೈದು ಒಂದು ಕಾಷ್ಠಾ ಎಂದು ಹೆಸರು ಮೂಮತ್ತು ಕಾಷ್ಠಗಳಿಗೆ ಒಂದು ಕಲಾವಿಂದು ಹೆಸರು. ಇಂತಹ ಹದಿನೈದು ಕಲೆಗಳಿಗೆ ಒಂದು ನಾಡಿಕಾ – ಅಂದರೆ ನಾಡಿ ಎಂದು ಹೆಸರು. ಎರಡು ನಾಡಿಕೆಗಳಿಗೆ ಒಂದು ಮುಹೂರ್ತ. ಮೂವತ್ತು ಮುಹೂರ್ತಗಳಿಗೆ ಅಹೋರಾತ್ರಾತ್ಮಕ (ಹಗಲು ರಾತ್ರಿಗಳಿಂದ ಕೂಡಿಸಿ) ಒಂದು ದಿನವಾಗುತ್ತದೆ. ಇಂತಹ ಮೂವತ್ತು ದಿನಗಳಿಗೆ ಒಂದು ತಿಂಗಳು, ಹನ್ನೆರಡು ತಿಂಗಳುಗಳಿಗೆ ಒಂದು ವರ್ಷ. ಈ ಮಾನುಷ ವರ್ಷವು ದೇವಲೋಕದಲ್ಲಿ ಒಂದು ದಿನ ಎನಿಸಿಕೊಳ್ಳುತ್ತದೆ.

**ನಾಡಿಕಾಭ್ಯಾಮಥ ದ್ವಾಭ್ಯಾಂ ಮುಹೂರ್ತೋ ದ್ವಿಜಸತ್ತಮ ।**

**ಅಹೋರಾತ್ರಂ ಮುಹಾರ್ತಾಸ್ತು ತ್ರಿಂಶನ್ಮಾಸೋ ದಿವ್ಯೆ ಸ್ತಥಾ ॥**

**ಮಾಸ್ಯೆ ರ್ದ್ವಾದಶಭಿರ್ವರ್ಷ ಮಹೋರಾತ್ರಂ ತುತದ್ಧಿವೀ**

**ತ್ರಿಭಿರ್ವರ್ಷಶತೈರ್ವಷರ್ಮ್‌ಷಷ್ಟಾ ಚೈವಾಸುರದ್ವಿಷಾಮ್**

**ತೈಸ್ತುದ್ವಾದಶಸಾಹಸ್ರೈಶ್ಚತುರ್ಯುಗ ಮುದಾಹೃತಮ್ ।**

**ಚತುರ್ಯುಗಸಹಸ್ರಂತು ಕಥ್ಯತೇ ಬ್ರಹ್ಮಣೋದಿನಮ್ ॥**

**ಸಕಲ್ಪಸ್ತತ್ರ ಮನವಶ್ಚತುರ್ದಶ ಮಹಾಮುನೇ ।**

**ತದಂತೇಚೈವ ಮೈತ್ರೇಯ ಬ್ರಾಹ್ಮೋ ನೈಮಿತ್ತಿಕೋ ಲಯ॥**

(ವಿ.ಪು. 2ನೇ ಸಂ. ಷಷ್ಠಾಂಶ ಅ. ಶ್ಲೋ 9ರಿಂದ 12)

ಇಂತಹ ಮುನ್ನೂರು ಅರವತ್ತು ದಿವ್ಯದಿನಗಳು ದೇವತೆಗಳಿಗೆ ಒಂದು ವರ್ಷವಾಗುತ್ತದೆ. ಇಂತಹ ಹನ್ನೆರಡು ಸಾವಿರ ದಿವ್ಯವರ್ಷಗಳು ಒಂದು ಚತುರ್ಯುಗವಾಗುತ್ತದೆ. ಒಂದು ಸಾವಿರ ಚತುರ್ಯುಗಗಳಿವೆ. ಬ್ರಹ್ಮನ ಒಂದು ದಿನವೆಂದು ಹೇಳಲಾಗಿದೆ. ಬ್ರಹ್ಮನ ಒಂದು ದಿನವೇ ಕಲ್ಪ. ಒಂದು ಕಲ್ಪದಲ್ಲಿ ಹದಿನಾಲ್ಕು ಮನುಗಳು ಕಳೆದು ಹೋಗುತ್ತಾರೆ. ಈ ಕಲ್ಪಾಂತರದಲ್ಲಿ ಬ್ರಾಹ್ಮವೆಂದು ನೈಮಿತ್ತಿಕ ಪ್ರಳಯವಾಗುತ್ತದೆ.

## ನೈಮಿತ್ತಿಕ ಪ್ರಳಯದ ಅತ್ಯುಗ್ರ ಸ್ವರೂಪ

ಪರಾಶರರು ಮೈತ್ರೇಯರಿಗೆ ನೈಮಿತ್ತಿಕ ಪ್ರಳಯದ ಉಗ್ರಸ್ವರೂಪವನ್ನು ವಿವರಿಸುತ್ತಾ ಹೀಗೆ ಹೇಳಿದರು.

**ಚತುರ್ಯುಗ ಸಹಸ್ರಾಂತೇ ಕ್ಷೀಣಪ್ರಾಯೇ ಮಹೀತಲೇ**

**ಅನಾವೃಷ್ಟಿ ರತೀವೋಗ್ರಾಜಾಯತೇ ಶತವಾರ್ಷಿಕೀ**

**ತತೋ ಯಾನ್ಯಲ್ಪಸಾರಾಣಿ ತಾನಿ ಸತ್ತಾನ್ಯ ಶೇಷತಃ**

**ಕ್ಷಯಂ ಯಾಂತಿ ಮುನಿಶ್ರೇಷ್ಠ ಪಾರ್ಥಿವಾನ್ಯನು ಪೀಡನಾತ್**

**ತತಃಸ್ಯ ಭಗವಾನ್ ವಿಷ್ಣುರ್ಭಾನೋಸ್ಸಪ್ತಸು ರಶ್ಮಿಷು**
**ಸ್ಥಿತಃ ಪಿಬತ್ಯಶೇಆಣಿ ಜಲಾನಿ ಮುನಿಸತ್ತಮ**

(ವಿ.ಪು. 2ನೇವ ಸಂ. ಷಷ್ಠಾಂಶ ಅ.3 ಶ್ಲೋ 14,15–17)

ಒಂದು ಸಾವಿರ ಚತುರ್ಯುಗಗಳು ಕಳೆದಾಗ ಈ ಪೃಥ್ವಿಯು ಕ್ಷೀಣಿಸುತ್ತಾ ಬರುತ್ತದೆ. ಒಂದು ನೂರು ವರ್ಷಗಳವರೆಗೆ ಭೀಕರವಾದ ಅನಾವೃಷ್ಟಿ ಉಂಟಾಗುತ್ತದೆ. ಬರಗಾಲದಿಂದಾಗಿ ಪೃಥ್ವಿಯಲ್ಲಿರುವ ಸಕಲ ಜೀವಿಗಳೂ ನೀಃಸತ್ವರಾಗಿ ನಾಶಹೊಂದುವರು. ಆಗ ಅವ್ಯಯನಾದ ಭಗವಾನ್ ವಿಷ್ಣುವು ರುದ್ರರೂಪವನ್ನು ಧರಿಸಿ ಸಮಸ್ತ ಪ್ರಜೆಗಳನ್ನು ತನ್ನಲ್ಲಿ ಲಯಗೊಳಿಸಲು ಪ್ರಯತ್ನಿಸುತ್ತಾನೆ. ಆ ಸಮಯದಲ್ಲಿ ಭಗವಾನ್ ವಿಷ್ಣುವು ಸೂರ್ಯನ ಸಪ್ತಕಿರಣಗಳಲ್ಲಿಯೂ ಸ್ಥಿತನಾಗಿ ನಿಖಿಲ ಜಲರಾಶಿಯನ್ನು ಹೀರಿಬಿಡುತ್ತಾನೆ. ಇದರಿಂದಾಗಿ ಭೂತಳವೆಲ್ಲಾ ಒಣಗಿಹೋಗುತ್ತದೆ. ಸಮುದ್ರಗಳು, ನದಿಗಳು, ಬೆಟ್ಟಗಳು ಚಿಕ್ಕಹೊಳೆಗಳು, ಚಿಲುಮೆಗಳು ಎಲ್ಲವೂ ಒಣಗಿಹೋಗುತ್ತವೆ. ಪಾತಾಳಗಳಲ್ಲಿರುವ ನೀರೂ ಸಹ ಕ್ಷಯಿಸಿ ಹೋಗುವುದು. ಭಗವಂತನ ಪ್ರಭಾವದಿಂದಾಗಿ ಸೂರ್ಯನ ಸಪ್ತಕಿರಣಗಳು ಸಪ್ತಸೂರ್ಯಗಳಾಗಿ ಬಿಡುತ್ತವೆ, (ಸಪ್ತ ಕಿರಣಗಳು ಯಾವುವೆಂದರೆ – ಸುಷುಮ್ನ, ಹರಿಕೇಶ, ವಿಶ್ವಕರ್ಮ, ವಿಶ್ವವ್ಯಚಾಸ್ವಧಾ, ಸಂಯದ್ವಸು, ಅರ್ವಾಗ್ವಸುಗಳು ಎಂಬವು ಸಪ್ತಸೂರ್ಯರು– ಆರೋಗ, ಭ್ರಾಜ, ಪಟರ, ಪತಂಗ, ಸ್ವರ್ಣರ, ಜ್ಯೋತಿಷೀಮಾನ್, ವಿಭಾಸ ಎಂದು)

ಈ ಸೂರ್ಯನು ತೇಜೋದೀಪ್ತರಾಗಿ ಮೇಲೆ, ಕೆಳಗೆ, ಎಲ್ಲೆಡೆಯೂ ಪಾತಾಳ ಪರ್ಯಂತವಾಗಿ ತ್ರಿಲೋಕಗಳನ್ನು ಸುಟ್ಟು ದಹಿಸುತ್ತಾರೆ. ಭಗವಂತನಾದ ಶ್ರೀಹರಿಯು ಆದಿಶೇಷನ ನಿಃಶ್ವಾಸದಿಂದ ಸರ್ವವಿದ್ವಾಂಸನಾದ ಕಾಲಾಗ್ನಿ ರುದ್ರನಾಗಿ ಉದಿಸಿ ಕೆಳಭಾಗದಿಂದ ಪಾತಾಳಲೋಕಗಳನ್ನು ಸುಡಲು ಆರಂಭಿಸುತ್ತಾನೆ. ಹೀಗೆ ಸಕಲ ಚರಚರವು ವಿಧ್ವಸ್ತನಾದ ನಂತರ ಜ್ವಾಲಾವರ್ತಗಳಿಂದ ವ್ಯಾಪ್ತವಾದ ತ್ರಿಲೋಕವು ಕೆಂಪಾಗಿ ಉರಿಯುವ ಕಬ್ಬಿಣದ ಬಾಣಲೆಯಂತೆ ಕಾಣುತ್ತದೆ. ಈ ಸಂದರ್ಭದಲ್ಲಿ ಭುವರ್ಲೋಕ ಸುವರ್ಲೋಕಗಳೆಂಬ ಎರಡು ಲೋಕಗಳಲ್ಲಿರುವ ನಿವಾಸಿಗಳೂ ಆದಿಕಾರಿಕ

ಪುರುಷರೂ ಆದ ಮನ್ವಾದಿಗಳು ಅಗ್ನಿಜ್ವಾಲೆಯ ತಪ್ತರಾಗಿ ಮಹರ್ಲೋಕಕ್ಕೆ ಹೋಗುವರು. ಅವರ ಫಲ ಭೋಗದಶೆಯು ಪರಿವರ್ತನಗೊಳ್ಳಲಾಗಿ ಅಲ್ಲಿಯೂ ಮಹಾತಾಪದಿಂದ ಸಂತಪ್ತರಾಗಿ ಅದಕ್ಕಿಂತಲೂ ಮೇಲೆ ಇರುವ ಊರ್ಧ್ವಲೋಕಗಳನ್ನು ಬಯಸಿ ಜನಲೋಕಕ್ಕೆ ಹೋಗುವರು. ಆಗ ರುದ್ರರೂಪಿಯಾದ ಜನಾರ್ಧನನು ಸರ್ವಜಗತ್ತನ್ನು ದಹಿಸಿದ ನಂತರ ತನ್ನ ಮುಖ ನಿಶ್ವಾಸದಿಂದ ಮೋಡಗಳನ್ನು ಸೃಷ್ಟಿಸುವನು. ಆಗ ಗಜಯುಧಗಳಂತೆ ಕಾಣಿಸುತ್ತಾ ಮಿಂಚುಗಳೊಡನೆ ಭೀಕರವಾಗಿ ಗುಡುಗುಡು ಸಂವರ್ತಕಗಳೆಂಬ ಘೋರಾಕಾರದ ಮೇಘಗಳು ಗಗನದಲ್ಲಿ ಉದ್ಭವಿಸುತ್ತವೆ. ಈ ಮಹಾಕಾಯಗಳಾದ ಆ ಮೋಡಗಳು ಘನಘೋರವಾಗಿ ಗುಡುಗಿ ಗಗನತಳವನ್ನು ಮೊಳಗಿಸುತ್ತಾ ಮಳೆಯನ್ನು ಸುರಿಸುತ್ತ ಮೂರೂ ಲೋಕಗಳನ್ನು ವ್ಯಾಪಿಸಿ ಅತಿ ಭೀಕರವಾಗಿ ಉರಿಯುತ್ತಿರುವ ಅಗ್ನಿಯನ್ನು ಪೂರ್ತಿ ಆರಿಸಿಬಿಡುತ್ತದೆ. ಅಗ್ನಿಯು ಶಾಂತವಾದ ನಂತರ ಆ ಮೇಘಗಳು ಸತತವಾಗಿ ಅಹೋರಾತ್ರಿ ಮಳೆ ಸುರಿಸುತ್ತ ಜಗತ್ತನ್ನು ಜಲರಾಶಿಯಿಂದ ತುಂಬಿಬಿಡುತ್ತದೆ. ಬೃಹದಾಕಾರದ ವೃಷ್ಟಿಧಾರೆಗಳಿಂದ ಭೂಲೋಕವನ್ನು ಮುಳುಗಿಸಿ, ನಂತರ ಭುವರ್ಲೋಕವನ್ನು ಅದರ ಮೇಲಿನ ಸುವರ್ಲೋಕವನ್ನೂ ಜಲಮಯವಾಗಿ ಬಿಡುತ್ತದೆ. ಆಗ ಸಂಪೂರ್ಣ ಜಗತ್ತು ಅಂಧಕಾರಮಯವಾಗುವುದು. ಸ್ಥಾವರ ಜಂಗಮಗಳು ನಿಶ್ಶೇಷವಾಗುವುವು. ಆದರೂ ಸಹ ಮಹಾಮೇಘಗಳು ನೂರಾರು ವರ್ಷಗಳ ಮಳೆಯನ್ನು ಸುರಿಸುತ್ತಲೇ ಇರುತ್ತವೆ ಇವೆಲ್ಲವೂ ಪರಮಾತ್ಮ ವಾಸುದೇವನ ಮಹಿಮೆಯೇ ಸರಿ.

**ತತೋ ದಗ್ಧ್ವಾಜಗತ್ಸರ್ವ ರುದ್ರರೂಪಿ ಜನಾರ್ಧನಃ ।**

**ಮುಖನಿಃಶ್ವಾಸ ಜಾನ್ಮೇಘಾನ್ ಕರೋತಿ ಮುನಿಸತ್ತಮ ॥**

(ವಿ.ಪು. 2ನೇ ಅಂ. ಷಷ್ಠಾಂಶ ಅ.2 ಶ್ಲೋಕ 3)

## ಪ್ರಾಕೃತ ಪ್ರಳಯದ ಸ್ವರೂಪ

ಶ್ರೀಪರಾಶರ ಉವಾಚ :

ಸಪ್ತರ್ಷಿಸ್ಥಾನ ಮಾಕ್ರಮ್ಯ ಸ್ಥಿತೇಂಭಸಿ ಮಹಾಮುನೇ ।
ಏಕಾರ್ಣವಂ ಭವತ್ಯೇತತ್ ತ್ರೈಲೋಕ್ಯ ಮಖಿಲಂ ತತಃ

ಮುಖ ನಿಃಶ್ವಾಸಜೋ ವಿಷ್ಣೋರ್ವಾಯುಸ್ತಾಂಜಲದಾಂಸ್ತತಃ
ನಾಶಯನ್ ವಾತಿ ಮೈತ್ರೇಯ ವರ್ಷಾಣಾಮಪರಂ ಶತಮ್

ಸರ್ವಭೂತ ಮಯೋಚಿಂತ್ಯೋ ಭಗವಾನ್ ಭೂತಭಾವನಃ
ಅನಾದಿರಾದಿರ್ವಿಶ್ವಸ್ಯ ಪೀತ್ವಾ ವಾಯುಮಶೇಷತಃ

ಏಕಾರ್ಣವೇ ತತಸ್ತಸ್ಮಿನ್ ಶೇಷ ಶಯ್ಯಾಗತಃ ಪ್ರಭುಃ
ಬ್ರಹ್ಮರೂಪಧರಶ್ಶೇತೇ ಭಗವಾನಾದಿಕೃದ್ಧರಿಃ

ಜನಲೋಕಗತೈಸ್ಸಿದ್ಧೈಸ್ಸನಕಾದ್ಯೈ ರಭಿಷ್ಟುತಃ
ಬ್ರಹ್ಮಲೋಕಗತೈಶ್ಚೈವ ಚಿಂತ್ಯಮಾನೋ ಮುಮುಕ್ಷುಭಿಃ

ಆತ್ಮಮಯಾಮಯೀಂ ದಿವ್ಯಾಂ ಯೋಗನಿದ್ರಾಂ ಸಮಾಸ್ಥಿತಃ
ಆತ್ಮಾನಂ ವಾಸುದೇವಾಖ್ಯಂ ಚಿಂತಯನ್ ಮಧುಸೂದನಃ

ಏಷನೈಮಿತ್ತಿಕೋ ನಾಮ ಮೈತ್ರೇಯ ಪ್ರತಿಸಂಚರಃ
ನಿಮಿತ್ತಂ ತತ್ರಯಚ್ಛೇತೇ ಬ್ರಹ್ಮರೂಪಧರೋ ಹರಿಃ

ಯದಾಜಾಗರ್ತಿ ಸರ್ವಾತ್ಮ ಸತದಾ ಚೇಷ್ಠತೇ ಜಗತ್
ನಿರ್ಮಲತ್ಯೇತದಖಿಲಂಮಾಯಾ ಶಯ್ಯಾ ಗತೇಚ್ಯುತೇ

(ವಿ.ಪು. 2ನೇ ಅಷಷ್ಠಾಂಶ ಅ 4 ಶ್ಲೋ 1ರಿಂದ 8)

ಪರಾಶರ ಮುನಿಗಳು ಮೈತ್ರೇಯನಿಗೆ ಪ್ರಾಕೃತ ಪ್ರಳಯದ ಸ್ವರೂಪದ ಬಗ್ಗೆ ಹೇಳುತ್ತಾ ಹೀಗೆ ವರ್ಣಿಸುತ್ತಾರೆ. "ಮೈತ್ರೇಯ, ಈ ಹಿಂದೆ ಹೇಳಿದ ಹಾಗೆ ಸಪ್ತರ್ಷಿಮಂಡಲದವರೆಗೂ ಯಾವಾಗ ಜಲರಾಶಿಯು ವ್ಯಾಪಿಸಿ

ತುಂಬಿಕೊಳ್ಳುವುದೋ ಆಗ ನಿಖಿಲ ಲೋಕತ್ರಯವು ಏಕಾರ್ಣವ ಅಂದರೆ ಒಂದೇ ಮಹಾಸಾಗರದಂತೆ ಆಗುವುದು. ನಂತರ ವಿಷ್ಣುವಿನ ಮುಖ ನಿಃಶ್ವಾಸದಿಂದ ಹೊರಟ ವಾಯುವು ಆ ಮೇಘಗಳನ್ನು ನಾಶಪಡಿಸುತ್ತಾ ಒಂದು ನೂರು ವರ್ಷಗಳವರೆಗೆ ಬೀಸುತ್ತಿರುತ್ತದೆ. ನಂತರ ಸರ್ವಭೂತಮಯನೂ, ಅಚಿಂತ್ಯನೂ, ಅನಾದಿಯೂ, ಈ ವಿಶ್ವಕ್ಕೆ ಆದಿಯೂ ಆದ ಭಗವಂತನು ಆ ವಾಯುವನ್ನು ನಿಃಶೇಷವಾಗಿ ಹೀರಿಕೊಳ್ಳುತ್ತಾನೆ. ನಂತರ ಭಗವಾನ್ ಶ್ರೀಹರಿಯು ಶೇಷಶಯ್ಯೆಯಲ್ಲಿ ಪವಡಿಸುವನು. ಆಗ ಜನಲೋಕದಲ್ಲಿರುವ ಸನಕಾದಿ ಸಿದ್ಧ ಪುರುಷರು, ಬ್ರಹ್ಮಲೋಕದಲ್ಲಿರುವ ಮುಮುಕ್ಷುಗಳೂ ಶ್ರೀಹರಿಯನ್ನು ಧ್ಯಾನಿಸುತ್ತಿರುವರು. ಆ ಸಮಯದಲ್ಲಿ ಮಧುಸೂದನನು ಆತ್ಮಮಾಯಾಮಯವೂ ದಿವ್ಯವೂ ಆದ ಯೋಗನಿದ್ರೆಯನ್ನು ಅವಲಂಬಿಸಿ ವಾಸುದೇವ ಎಂಬ ಹೆಸರಿನ ಆತ್ಮಸ್ವರೂಪವನ್ನು ಧ್ಯಾನಿಸುತ್ತಾ ಇರುತ್ತಾನೆ. ಇದು ನೈಮಿತ್ತಿಕಪ್ರಳಯ. ಕಾರಣ ಬ್ರಹ್ಮರೂಪವನ್ನು ಧರಿಸಿದ ಶ್ರೀಹರಿಯು ನಿದ್ರಿಸುತ್ತಿರುತ್ತಾನೆ. ಇದೇ ಒಂದು ನಿಮಿತ್ತವಾಗಿರುತ್ತದೆ. ಆ ಸರ್ವಾತ್ಮನು ಯಾವಾಗ ಜಾಗೃತಾವಸ್ಥೆಯನ್ನು ಅವಲಂಬಿಸಿರುತ್ತಾನೋ ಆಗ ಜಗತ್ತು ಕಾರ್ಯನಿರತವಾಗಿರುತ್ತದೆ. ಅಚ್ಯುತನು ಮಾಯಾಶಯ್ಯೆಯನ್ನು ಸೇರಿ ಯೋಗನಿದ್ರೆಯಲ್ಲಿರುವಾಗ ಅಖಿಲ ಜಗತ್ತು ಲಯಹೊಂದುತ್ತದೆ. ಒಂದು ಸಾವಿರ ಚತುರ್ಯುಗ ಪ್ರಮಾಣವುಳ್ಳ ಬ್ರಹ್ಮನ ಹಗಲು, ಈ ಲೋಕವು ಏಕಾರ್ಣವಾದಾಗ ಅಷ್ಟೇ ಪ್ರಮಾಣವುಳ್ಳದ್ದು. (ಒಂದು ಸಾವಿರ ಚತುರ್ಯುಗ) ಆತನ ರಾತ್ರಿ. ರಾತ್ರಿಯೂ ಕಳೆಯಲಾಗಿ ಅಜನಾದ ಶ್ರೀವಿಷ್ಣುವು ಬ್ರಹ್ಮರೂಪವನ್ನು ಧರಿಸಿ ಪುನಃ ಸೃಷ್ಟಿಯನ್ನು ಮಾಡುವುದರಲ್ಲಿ ಉದ್ಯುಕ್ತನಾಗುತ್ತಾನೆ.

ಪ್ರಾಕೃತ ಪ್ರಳಯದಲ್ಲಿ ತ್ರಿಭುವನಗಳು ಪಾತಾಳಾದಿ ನಿಖಿಲಲೋಕಗಳು ಸಂಪೂರ್ಣವಾಗಿ ನಷ್ಟ ಹೊಂದುತ್ತವೆ. ಆ ಸಮಯದಲ್ಲಿ ಮಹತ್ತಿನಿಂದ ಹಿಡಿದು ವಿಶೇಷಾಂತವಾದ ಸಕಲ ವಿಕಾರಗಳೂ ಲಯ ಹೊಂದುತ್ತವೆ. ಪ್ರಾಕೃತ ಪ್ರಳಯದಲ್ಲಿ ಮೊದಲು ಭೂಮಿಯು ಗಂಧಗುಣವನ್ನು ಜಲದಲ್ಲಿ ಲಯಗೊಳಿಸುತ್ತದೆ. ಈ ಗಂಧತನ್ಮಾತ್ರೆಯು ಹೋದೊಡನೆ ಭೂಮಿಯು ಲಯವಾಗಿ ಜಲಮಯವಗುತ್ತದೆ. ಜಲವು ವೃದ್ಧಿಗೊಂಡು ವೇಗದಿಂದ

ಎಲ್ಲೆಲ್ಲಿಯೂ ಹರಿದು ಸರ್ವವೂ ಜಲಾವೃತವಾಗುತ್ತದೆ. ಸಕಲಲೋಕಗಳು ಜಲದಿಂದ ಆವೃತವಾಗಿರುತ್ತವೆ. ನಂತರ ಆಪ್ಪಿನ ಗುಣವಾದ (ನೀರಿನ) ರಸತನ್ಮಾತ್ರೆಯನ್ನು ಅಗ್ನಿ ಹೀರಿಕೊಳ್ಳಲಾಗಿ ಸಮಸ್ತ ಜಲರಾಶಿಯೂ ನಾಶ ಹೊಂದುತ್ತದೆ. ರಸವನ್ನು ಹೀರಿಕೊಂಡ ನಂತರ ಜಲವು ಅಗ್ನಿಯಲ್ಲಿ ಅಡಗಿ ಅಗ್ನಿಯ ರೂಪವನ್ನು ಪಡೆದುಕೊಂಡು ಸರ್ವವೂ ಅಗ್ನಿಜ್ವಾಲೆಯಾಗುತ್ತದೆ. ಇದು ವಿಶ್ವವನ್ನೇ ವ್ಯಾಪಿಸುತ್ತದೆ. ನಂತರ ಆ ಜ್ಯೋತಿಗೆ ಪ್ರಕಾಶವನ್ನು ಕೊಡುವ ಶ್ರೇಷ್ಠವಾದ ರಸತನ್ಮಾತ್ರೆಯನ್ನು ವಾಯುವು ನುಂಗುವುದು. ಸರ್ವರಿಗೂ ಪ್ರಾಣಸ್ವರೂಪನಾದ ವಾಯುವಿನಲ್ಲಿ (ಪ್ರಾಣ, ಅಪಾನ, ಉದಾನ, ಸಮಾನ) ಅಗ್ನಿಯೂ ಲಯ ಹೊಂದುತ್ತದೆ. ರೂಪತನ್ಮಾತ್ರೆ ಹೋದುದ್ದರಿಂದ ಅಗ್ನಿಯು ರೂಪವನ್ನು ಕಳೆದುಕೊಂಡು ನಷ್ಟವಾಗುತ್ತದೆ.

ಅನಂತರ ಮಹತ್ತರವಾಗಿ ವಾಯು ಬೀಸಲಾರಂಭಿಸುವುದು. ತೇಜಸ್ಸು ವಾಯುಸ್ವರೂಪವನ್ನು ಪಡೆದಾಗ ಲೋಕದಲ್ಲಿ ಎಲ್ಲಿಯೂ ಬೆಳಕು ಇರುವುದಿಲ್ಲ. ಆಗ ವಾಯುವು ತನಗೆ ಮೂಲ ಕಾರಣವಾದ ಆಕಾಶದಲ್ಲಿ ಮೇಲೆ ಕೆಳಗೆ ಅಡ್ಡಲಾಗಿ ದಶದಿಕ್ಕುಗಳಲ್ಲಿಯೂ ರಭಸದಿಂದ ಬೀಸುತ್ತಿರುತ್ತದೆ. ನಂತರ ವಾಯುವಿನ ಗುಣವಾದ ಸ್ಪರ್ಶ ತನ್ಮಾತ್ರೆಯನ್ನು ಆಕಾಶವು ತನ್ನಲ್ಲಿ ಲೀನಗೊಳಿಸುತ್ತದೆ. ನಂತರ ವಾಯುವು ನಷ್ಟವಾಗಲು ಆಕಾಶ ಒಂದೇ ಆವರಣರಹಿತವಾಗಿ ಉಳಿಯುತ್ತದೆ. ರೂಪ, ರಸ, ಸ್ಪರ್ಶ, ಗಂಧರಹಿತವೂ, ಅವಯವ ಶೂನ್ಯವೂ ಆದ ಮಹಾಕಾಶ ಒಂದೇ ಸರ್ವವ್ಯಾಪಿಯೂ ವಿರಾಜಿಸುತ್ತದೆ. ಗೋಳ ಸ್ವರೂಪವೂ ವಿದ್ರರೂಪದಲ್ಲಿ ಆಗಿ ಶಬ್ದ ತನ್ಮಾತ್ರೆಯುಳ್ಳ ಆಕಾಶವು ಸರ್ವವನ್ನೂ ಆವರಿಸಿಕೊಂಡಿರುತ್ತದೆ. ನಂತರ ಆಕಾಶದ ಶಬ್ದ ತನ್ಮಾತ್ರೆಯನ್ನು ಭೂತಾದಿಯಾದ ಅಹಂಕಾರ ತತ್ವವು ತನ್ನಲ್ಲಿ ಲಯಗೊಳಿಸುತ್ತದೆ. ಹೀಗೆ ಪಂಚಭೂತಗಳೂ ಇಂದ್ರಿಯಗಳೂ (ದೇವಾದಿಗಳು) ಒಟ್ಟಿಗೆ ಅಹಂಕಾರ ತತ್ವದಲ್ಲಿ ಲೀನವಾಗಿರುತ್ತದೆ. ಈ ಭೂತಾದಿಯು ಅಭಿಮಾನಾತ್ಮಕವಾಗಿ ತಮಸ್ಸಿನಿಂದ ಆಗಿರುವ ಅಹಂಕಾರವಾಗಿರುತ್ತದೆ.

ಅನಂತರ ಈ ಭೂಮಿಯನ್ನು ಬುದ್ಧಿಯೆಂಬ (ಸತ್ವಪ್ರಧಾನಮಾಡಿ)

ಮಹತತ್ವವು ತನ್ನಲ್ಲಿ ಅಡಗಿಸಿಕೊಳ್ಳುತ್ತದೆ. ಈ ಬ್ರಹ್ಮಾಂಡದ ಒಳಗಾಗಲಿ, ಹೊರಗಾಗಲಿ ಮಹತತ್ವವು ಆದಿಯ ಅವಧಿ ಪೃಥ್ವಿಯು ಅಂತ್ಯಾವಧಿ ಅನುಲೋಮ ಕ್ರಮದಿಂದ ಸೃಷ್ಟಿಕಾಲದಲ್ಲಿ ಒಂದಕ್ಕೊಂದು ಕಾರಣವಾದ ಮಹದಾದಿ ಸಪ್ತ ಪ್ರಕೃತಿಗಳೆಲ್ಲವೂ, ಪ್ರಳಯ ಕಾಲದಲ್ಲಿ ತಮಗೆ ಕಾರಣವಾಗಿದ್ದ ಒಂದರಲ್ಲೊಂದು ಪ್ರತಿಲೋಮ ಕ್ರಮದಿಂದ ಲೀನವಾಗುತ್ತದೆ. (ಮಹತ್ತು, ಅಹಂಕಾರ ಮತ್ತು ಪಂಚಭೂತಗಳು ಇವು ಸಪ್ತ ಪ್ರಕೃತಿಗಳು. ಮಹತ್ತಿನಿಂದ ಅಹಂಕಾರ, ಅಹಂಕಾರದಿಂದ ಆಕಾಶ, ಈ ಕ್ರಮದಲ್ಲಿ ಹುಟ್ಟುವುದು ಅನುಲೋಮ. ಪೃಥ್ವಿಯು ಜಲದಲ್ಲಿ, ಜಲವು ಅಗ್ನಿಯಲ್ಲಿ ಈ ಕ್ರಮದಿಂದ ಲೀನವಾಗುವುದು ಪ್ರತಿಲೋಮ) ಸಪ್ತದ್ವೀಪ, ಸಮುದ್ರ, ಸಪ್ತಲೋಕ, ಪರ್ವತಗಳನ್ನು ಆವರಿಸಿಕೊಂಡು ಅಂಡಾಕೃತಿಯಾಗಿರುವ ಪೃಥ್ವಿಯು ಜಲದಲ್ಲಿ ಅಡಗುತ್ತದೆ. ಜಲರೂಪವಾದ ಆವರಣವನ್ನು ಅಗ್ನಿಯು ಹೀರುತ್ತದೆ.

ಅಗ್ನಿಯನ್ನು ವಾಯುವು, ವಾಯುವನ್ನು ಆಕಾಶವೂ ತಮ್ಮಲ್ಲಿ ಲಯಗೊಳಿಸುತ್ತವೆ. ಆಕಾಶವನ್ನು ಭೂತಾದಿಯಾದ ಅಹಂಕಾರವೂ, ಅಹಂಕಾರವನ್ನು ಮಹತತ್ವವೂ ತಮ್ಮಲ್ಲಿ ಅಡಗಿಸಿಕೊಳ್ಳುತ್ತವೆ. ಇವೆಲ್ಲವುಗಳಿಂದ ಕೂಡಿದ ಮಹತ್ತನ್ನು ಪ್ರಕೃತಿಯು ನುಂಗಿಬಿಡುತ್ತದೆ. ಆಧಿಕ್ಯವಾಗಲಿ, ನ್ಯೂನತೆಯಾಗಲಿ ಇಲ್ಲದ ಸತ್ವಾದಿಗುಣಕ್ರಮದ ಸಾಮಾನ್ಯ ಅವಸ್ಥೆಯೇ ಪ್ರಕೃತಿ. ಇದಕ್ಕೆ ಪ್ರಧಾನವೆಂದೂ ಹೆಸರು. ಇದು ಸಮಸ್ತ ಸೃಷ್ಟಿಗೂ ಮೂಲ ಕಾರಣವಾಗಿರುತ್ತದೆ. (ಪೃಥ್ವಿಯಿಂದ ವೃಕ್ಷಾದಿಗಳು ಹುಟ್ಟುವುದರಿಂದ ಪ್ರಕೃತಿಯೆಂದು ಪೃಥ್ವಿಯನ್ನು ಹೆಸರಿಸಲಾಗಿದೆ) ಈ ರೀತಿಯಲ್ಲಿ ಪ್ರಕೃತಿಯು ವ್ಯಕ್ತಾವ್ಯಕ್ತ ಅಂದರೆ ಕಾರ್ಯಕಾರಣ ಸಂಬಂಧವನ್ನು ಹೊಂದಿರುತ್ತದೆ. ಸರ್ವಮಯಿಯಾಗಿರುತ್ತದೆ. ಹೀಗೆ ವ್ಯಕ್ತವೂ ಅವ್ಯಕ್ತದಲ್ಲಿ ಅಡಗಿಹೋಗುತ್ತದೆ.

ಹೀಗೆ ಸೃಷ್ಟಿಯ ಕಾರ್ಯವಾಗಲಿ, ಲಯದ ಕಾರ್ಯವಾಗಲಿ ಅದೆಷ್ಟು ಅದ್ಭುತವಾದುದು ಎಂದು ನಮಗೆ ಅನಿಸುತ್ತದೆ. ಇದು ನಮ್ಮ ಊಹೆಗೂ ಮೀರಿದ ಸತ್ಯಾಂಶ ಅಲ್ಲವೇ ?. ಈ ಸಂದರ್ಭದಲ್ಲಿ ಪರಾತ್ಮನ ಸ್ವರೂಪವನ್ನು ಯತ್ಕಿಂಚಿತ್ತಾದರೂ ತಿಳಿಯೋಣ. ಅದೂ ಸಹ ಊಹಿಸಲು ಅಸಾಧ್ಯವಾದರೂ ಅನುಭವವೇದ್ಯವಾದುದೆಂಬುದು ಸತ್ಯ.

# ಪರಮಾತ್ಮನ ಸ್ವರೂಪ

ಇಲ್ಲಿ ಜೀವಾತ್ಮನೂ ಸಹ ಪರಮಾತ್ಮನ ಅಂಶವೆಂದೇ ದೃಢೀಕರಿಸಲಾಗಿದೆ. ಪರಾಶರರು ಮೈತ್ರೇಯರಿಗೆ ಹೀಗೆ ವಿವರಿಸುತ್ತಾರೆ.

ಏಕಶುದ್ಧೋಕ್ಷರೋ ನಿತ್ಯ ಸ್ಸರ್ವವ್ಯಾಪೀ ತಥಾಪುಮಾನ್ ।
ಸೋಪ್ಯಂಶ ಸ್ಸರ್ವಭೂತಸ್ಯ ಮೈತ್ರೇಯ ಪರಮಾತ್ಮನಃ ॥
ನಸಂತಿ ಯತ್ರ ಸರ್ವೇಶೇ ನಾಮ ಜಾತ್ಯಾದಿಕಲ್ಪನಾ ಃ ।
ಸತ್ತಾಮಾತ್ರಾತ್ಮಕೇ ಜ್ಞೇಯೇ ಜ್ಞಾನಾತ್ಮನ್ಯಾತ್ಮನಃ ಪರೇ ॥
ತದ್ ಬ್ರಹ್ಮ ಪರಮಂ ಧಾಮ ಪರಮಾತ್ಮಾ ಸ ಚೇಶ್ವರಃ ।
ಸ ವಿಷ್ಣು ಸ್ಸರ್ವಮೇವೇದಂ ಯತೋ ನಾವರ್ತತೇ ಯತಿಃ ॥
ಪ್ರಕೃತಿಯಾ ಮಯಾಖ್ಯಾತಾ ವ್ಯಕ್ತಾ ವ್ಯಕ್ತ ಸ್ವರೂಪಿಣೀ ।
ಪುರುಷಶ್ಚಾ ಪ್ಯುಭಾವೇ ತೌ ಲೀಯೆsತೇ ಪರಮಾತ್ಮನಿ ॥
ಪರಮಾತ್ಮಾ ಚ ಸರ್ವೇಷಾಮಾಧಾರಃ ಪರಮೇಶ್ವರಃ ।
ವಿಷ್ಣುನಾಮಾಸ ವೇದೇಷು ವೇದಾಂತೇಷು ಚ ಗೀಯತೇ ॥
ಪ್ರವೃತ್ತಂ ಚ ನಿವೃತ್ತಂ ಚ ದ್ವಿವಿಧಂ ಕರ್ಮ ವೈದಿಕಮ್ ।
ತಾ ಭ್ಯಾಮುಭಾಬ್ಯಾಂ ಪುರುಷೈ ಸ್ಸರ್ವಮೂರ್ತಿಸ್ಸ ಇಜ್ಯತೇ ॥
ಋಗ್ಯಜುಸ್ಸಾಮಭಿರ್ಮಾಗೈಃ ಪ್ರವೃತ್ತೈರಿಜ್ವತೇ ಹ್ಯಸೌ ।
ಯಜ್ಞೇಶ್ವರೋ ಯಜ್ಞಪುಮಾನ್ ಪುರುಷೋಃ ಪುರುಷೋತ್ತಮಃ
ಜ್ವಾನಾತ್ಮಾ ಜ್ಞಾನ ಯೋಗೇನ ಜ್ಞಾನ ಮೂರ್ತಿ ಸ ಚೇ ಜ್ಯತೇ ।
ನಿವೃತ್ತೇ ಯೋಗಿಭಿರ್ಮಾರ್ಗೇ ವಿಷ್ಣು ರ್ಮುಕ್ತಿಫಲಪ್ರದಃ ॥
ಹ್ರಸ್ವ ದೀರ್ಘಪ್ಲುತೈರ್ಯತ್ತು ಕಿಂಚಿದ್ವ ಸ್ತ್ವಬಿಧೀಯತೇ ।
ಯಚ್ಚ ವಾಚಾಯ ವಿಷಯಂ ತತ್ಸರ್ವಂ ವಿಷ್ಣುರವ್ಯಯಃ ॥
ವ್ಯಕ್ತಸ್ಯ ಏವ ಚಾವ್ಯಕ್ತಸ್ವ ಏವ ಪುರುಷೋವ್ಯಯಃ ।
ಪರಮಾತ್ಮಾ ಚ ವಿಶ್ವಾತ್ಮಾ ವಿಶ್ವರೂಧರೋ ಹರಿಃ ॥

**ವ್ಯಕ್ತಾ ವ್ಯಕ್ತಾತ್ಮಿಕಾ ತಸ್ಮಿನ್ ಪ್ರಕೃತಿಸ್ಸಮ್ಪ್ರಲೀಯತೇ ।**

**ಪುರುಷಶ್ಚಾಪಿ ಮೈತ್ರೇಯ ವ್ಯಾಪಿನ್ಯ ವ್ಯಾಹತಾತ್ಮನಿ ॥**

**ದ್ವಿಪರಾರ್ಧ್ದಾತ್ಮಕಃ ಕಾಲಃ ಕಥಿತೋ ಯೋ ಮಯಾತವ ।**

**ತದಹಸ್ತಸ್ಯ ಮೈತ್ರೇಯ ವಿಷ್ಣೋರಿಶಸ್ಯ ಕಥ್ಯತೇ ॥**

**ವ್ಯಕ್ತೇ ಚ ಪ್ರಕೃತೌ ಲೀನೇ ಪ್ರಕೃತ್ಯಾಂ ಪುರುಷೇ ತಥಾ ।**

**ತತ್ರ ಸ್ಥಿತೇ ನಿಶಾ ಚಾಸ್ಯ ತತ್ಪ್ರಮಣಾ ಮಹಾಮುನೇ ॥**

**ನೈವಾಹಸ್ತಸ್ಯ ನನಿಶಾ ನಿತ್ಯಸ್ಯ ಪರಮಾತ್ಮನಃ ।**

**ಉಪಚಾರಸ್ತಥಾನ್ಯೇಷ ತಸ್ಸೇಶಸ್ಯ ದ್ವಿಜೋಚ್ಯತೇ ॥**

(ವಿ.ಪು. 2ನೇ ಅಂ. ಸಂ. ಷಷ್ಠಾಂಶ ಅ 4. ಶ್ಲೋ 36 ರಿಂದ 49ರವರೆಗೆ)

ಏಕನೂ ಶುದ್ಧನೂ ಕ್ಷಯವಿಲ್ಲದವನು ನಿತ್ಯನೂ ಸರ್ವಪ್ರಕೃತಿ ಕಾರ್ಯಗಳಲ್ಲಿ ಅಧಿಷ್ಠಾತವೂ ಆದ ಯಾವ ಪುರುಷ ಜೀವಾತ್ಮನಿದ್ದಾನೋ ಅವನೂ ಸಹ ಸರ್ವಸ್ವರೂಪನಾದ ಪರಮಾತ್ಮನ ಅಂಶವೇ. ಪರಮಾತ್ಮನಾದರೋ ಪುರುಷನಿಗಿಂತ ಅತ್ಯಂತ ಶ್ರೇಷ್ಠಸ್ವರೂಪನೂ ಸರ್ವೇಶ್ವರನೂ ಆಗಿದ್ದಾನೆ. ಆತನಲ್ಲಿ ನಾಮ, ಜಾತಿ ಮುಂತಾದ ಯಾವ ಕಲ್ಪನೆಯೂ ಇಲ್ಲ. ಆ ವಸ್ತು ಸತ್ತಾ ಸ್ವರೂಪನಾಗಿರುವುದು. ಮುಮುಕ್ಷುಗಳಿಗೆ ಅಂದರೆ ಮೋಕ್ಷವನ್ನು ಬಯಸುವವರಿಗೆ ಜ್ಞೇಯವಾದದ್ದು, ಸ್ವತಃ ಜ್ಞಾನ ಸ್ವರೂಪನಾದವನು ಪರಮಾತ್ಮ ಅಲ್ಲವೇ ? ಅದೇ ಬ್ರಹ್ಮವಸ್ತು, ಸಕಲ ವಿಶ್ವಕ್ಕೂ ಪರಮಾಶ್ರಯ. ಅವನೇ ಪರಮಾತ್ಮ. ಅವನೇ ಈಶ್ವರ. ಅವನೇ ವಿಷ್ಣು, ಅವನೇ ನಿಖಿಲ ವಿಶ್ವವೂ ಆತನಲ್ಲಿ ಸೇರಿದ ನಂತರ ಯೋಗಿ ಜನರು ಮತ್ತೆ ಸಂಸಾರಕ್ಕೆ ಮರಳುವುದಿಲ್ಲ. ವ್ಯಕ್ತಾವ್ಯಕ್ತ ಸ್ವರೂಪಿಣೀಯಾದ ಪ್ರಕೃತಿಯು ಹಾಗೂ ಜೀವಾತ್ಮ ಈರ್ವರೂ ಪ್ರಳಯಕಾಲದಲ್ಲಿ ಪರಮಾತ್ಮನಲ್ಲಿ ಲೀನರಾಗಿರುತ್ತಾರೆ. ಸರ್ವಾಧಾರನೂ, ಪರಮೇಶ್ವರನೂ ಆದ ಪರಮಾತ್ಮನನ್ನು ವೇದಗಳಲ್ಲಿ, ವೇದಾಂತಗಳಲ್ಲಿ ವಿಷ್ಣು ಎಂದು ಕೀರ್ತಿಸಲಾಗಿದೆ. ವೈದಿಕ ಕರ್ಮವು ಪ್ರವೃತ್ತಿ, ನಿವೃತ್ತಿ ಎಂದು ಎರಡು ವಿಧವಾಗಿವೆ. ಈ ಎರಡೂ ಬಗೆಯ ಕರ್ಮಗಳಿಂದಲೂ ವಿಷ್ಣುವಿನ ಅರ್ಚನೆ ನಡೆಯುತ್ತದೆ. ಇದರಲ್ಲಿ ಭಕ್ತಿಪ್ರವೃತ್ತಿಮಾರ್ಗ ಶರಣಾಗತಿ ನಿವೃತ್ತಿಮಾರ್ಗ, ಶರಣಾಗತಿ ಸಿದ್ಧಿಮಾರ್ಗ ಭಕ್ತಿಯೆಂಬುದು ಸಾಧ್ಯ ಧರ್ಮ.

(ಈ ಸಂದರ್ಭದಲ್ಲಿ ಆಂಡಾಳ್ ಹಾಡಿರುವ ತಿರುಪ್ಪಾವೈಯಲ್ಲಿ **"ನೈಯುಣ್ಣೋ ಪಾಲುಣ್ಣೋ, ನಾಳ್‌ಕಾಲೆ ನೀರಾಡಿ ಮೈಯಿಟ್ಟೆಳುದೋಂ ಮಲರಿಟ್ಟು ನಾ ಮುಡವೋಂ"** ಎಂದು ಕೃಷ್ಣನ ವ್ರತಾಚರಣೆಯ ನಿಯಮಗಳನ್ನು ಇಲ್ಲಿ ಸ್ಮರಿಸಬಹುದು) ಋಗ್ಯಜುಃ ಸಾಮ ವೇದೋಕ್ತಗಳಾದ ಪ್ರವೃತ್ತಿರೂಪ ಕರ್ಮಮಾರ್ಗಗಳಿಂದ ಯಜ್ಞೇಶ್ವರನೂ ಯಜ್ಞಪುರಿಯೂ ಆದ ಪುರುಷೋತ್ತಮನನ್ನು ಜನರು ಆರಾಧಿಸುತ್ತಾರೆ. ನಿವೃತ್ತಿಮಾರ್ಗದಲ್ಲಿಯೂ ಯೋಗಿಗಳು ಜ್ಞಾನಾತ್ಮನೂ ಜ್ಞಾನಮೂರ್ತಿಯೂ, ಮುಕ್ತಿಫಲದಾಯಕನೂ ಆದ ವಿಷ್ಣುವನ್ನು ಜ್ಞಾನಯೋಗದಿಂದ ಆರಾಧಿಸುತ್ತಾರೆ. ಹೃಸ್ವ, ಧೀರ್ಘ ಪ್ಲುತ– ಈ ಅಕ್ಷರಗಳುಳ್ಳ (ಮೂರನೆ ಸಲ ಕ್ಕೋ ಎಂದು ಕೋಳಿದೀರ್ಘವಾಗಿ ಕೂಗುವುದೇ ಸ್ವರ ಪ್ಲುತ) ಕ್ಕೊಽಕ್ಕೋಽ ಕ್ಕೋಽಽಽ ಎಂದಾಗ ಶಬ್ದಗಳಿಂದ ಯಾವ ಯಾವ ವಸ್ತು ಹೇಳಲ್ಪಡುತ್ತದೆಯೋ, ಈ ಶಬ್ದಗಳಿಗೂ ಅಗೋಚರವಾದದ್ದು, ಯಾವುದಿದೆಯೋ ಅವೆಲ್ಲವೂ ಅವ್ಯಯವಾದ ವಿಷ್ಣುವೇ. ವ್ಯಕ್ತವಾದ ಪದಾರ್ಥವೂ ಸಹ ಅವ್ಯಯನಾದ ಆ ಪುರುಷನೇ ಅವ್ಯಕ್ತವಾದವನೂ ಅವನೇ ಪರಮಾತ್ಮನಾದ ಶ್ರೀಹರಿಯು ವಿಶ್ವಾಮಿತ್ರನೂ ವಿಶ್ವರೂಪಧರನೂ ಆಗಿದ್ದಾನೆ. ಕಾರ್ಯ ಕಾರಣಭಾವದಿಂದ ವ್ಯಕ್ತಾವ್ಯಕ್ತ ಸ್ವರೂಪಿಣಿಯಾದ ಪ್ರಕೃತಿಯೂ ಮತ್ತು ಪುರುಷನೂ (ಜೀವಾತ್ಮನೂ) ಸಹ ಸರ್ವವ್ಯಾಪಿಯೂ ಅವಿಕೃತ ಸ್ವರೂಪನೂ ಆದ ಪರಮಾತ್ಮನಲ್ಲಿ ಲೀನವಾಗುತ್ತಾರೆ. ಒಂದು ಮುಖ್ಯವಾದ ವಿಷಯವೇನೆಂದರೆ ಪರಮಾತ್ಮನಿಗೆ ಹಗಲೂ ಇಲ್ಲ, ರಾತ್ರಿಯೂ ಇಲ್ಲ, ಇದು ಕೇವಲ ಕಾಲ್ಪನಿಕ. ಏಕೆಂದರೆ ಅವನು ನಿತ್ಯವೂ ಶಾಶ್ವತನೂ ಆಗಿದ್ದಾನೆ. ಅವನು ಸರ್ವಕಾಲದಲ್ಲಿಯೂ ವಿರಾಜಮಾನನಾಗಿರುತ್ತಾನೆ. ಇದು ಅನುಭವ ವೇದ್ಯವಾದುದು. ಈ ಆನಂದಾನುಭವವನ್ನು ಭೀಷ್ಮರ ವಿಷ್ಣು ಸಹಸ್ರನಾಮದಿಂದ ಅರಿತುಕೊಳ್ಳಬಹುದು. ಭೀಷ್ಮಾಚಾರ್ಯರು ಶರತಲ್ಪದಲ್ಲಿಯೇ ಮಲಗಿ ಪರಮಾತ್ಮನ ದರ್ಶನ ಭಾಗ್ಯವನ್ನು ಪಡೆದುಕೊಂಡವರು ಎಂದು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

## ಮಾನವ ಜನ್ಮದ ತಾಪತ್ರಯಗಳು

## ಅವುಗಳಿಂದ ಮುಕ್ತಿ ಪಡೆಯಲು ಸಾಧನ

ಪರಾಶರ ಮಹರ್ಷಿಗಳು ಮೈತ್ರೇಯರಿಗೆ ಮಾನವ ಹುಟ್ಟಿನಿಂದ ಹಿಡಿದು ಸಾಯುವವರೆಗೂ ಅದೆಷ್ಟು ತಾಪತ್ರಯಗಳನ್ನು, ತೊಂದರೆಗಳನ್ನು ಅನುಭವಿಸುತ್ತಾನೆ ಎಂಬುದನ್ನು ಸವಿವರವಾಗಿ ಇಲ್ಲಿ ವರ್ಣಿಸಿದ್ದಾರೆ. ಇದನ್ನರಿತ ಪ್ರಾಜ್ಞನು ಭಗವಂತನ ಸಾನ್ನಿಧ್ಯವನ್ನು, ಮುಕ್ತಿಯನ್ನು ಅಪೇಕ್ಷಿಸುತ್ತಾನೆಯೇ ವಿನಹ ಪುನರ್ಜನ್ಮವನ್ನಲ್ಲ **"ಪುನರಪಿ ಜನನಂ, ಪುನರಪಿ ಮರಣಂ– ಪುನರಪಿ ಜನನೀ ಜಠರೇ ಶಯನಂ ಇಹ ಸಂಸಾರೇ ಬಹುದುಃಖಾರೇ ಕೃಪಾಯ ಪಾರೇ ಪಾಹಿಮುರಾರೇ"** ಎಂದು ಶಂಕರ ಭಗವತ್ಪಾದರು **'ಭಜಗೋವಿಂದಮ್'** ಸ್ತೋತ್ರದಲ್ಲಿ ಹೇಳಿರುವುದನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು.

ಪ್ರಸ್ತುತ ಪರಾಶರರು ತಾಪತ್ರಯಗಳ ಪಟ್ಟಿಯನ್ನೇ ನೀಡುತ್ತಾರೆ. ಮನುಷ್ಯನ ಜೀವಿತದಲ್ಲಿ ಪ್ರಮುಖವಾಗಿ ಮೂರು ಘಟ್ಟಗಳ ಜನ್ಮ–ಜರಾ–ಮುಪ್ಪು ಎಂಬವು ಆಧ್ಯಾತ್ಮಿಕವೇ ಮೊದಲಾದ ತಾಪತ್ರಯಗಳನ್ನು ಅರಿತ ಮೇಲೆ ವೈರಾಗ್ಯ ಆತ್ಮಜ್ಞಾನ, ಅವನಿಗೆ ಉಂಟಾಗುತ್ತದೆ. ನಂತರ ಅವನು ಆತ್ಯಂತಿಕ ಲಯವನ್ನು ಪಡೆಯುವನು ಜೀವನದಲ್ಲಿ ಜಿಗುಪ್ಸೆ ಉಂಟಾದರೇನೇ ವೈರಾಗ್ಯ ಹುಟ್ಟುವುದು.

ಶ್ರೀಪರಾಶರ ಉವಾಚ :

**ಆಧ್ಯಾತ್ಮಿಕಾದಿ ಮೈತ್ರೇಯ ಜ್ಞಾತ್ವಾತಾಪತ್ರಯಂ ಬುದಃ**
**ಉತ್ಪನ್ನ ಜ್ಞಾನ ವೈರಾಗ್ಯಃ ಪ್ರಾಪ್ನೋತ್ಯಾತ್ಯಂತಿಕಂ ಲಯಮ್**
**ಆಧ್ಯಾತ್ಮಿಕೋಪಿ ದ್ವಿವಿಧಃ ಶಾರೀರೋ ಮಾನಸಸ್ತಥಾ**
**ಶಾರೀರೋ ಬಹುಭಿ ರ್ಬೇದೈ ರ್ಭಿದ್ಯತೇ ಶ್ರೂಯತಾಂ ಚ ಸಃ**
**ಶಿರೋರೋಗ ಪ್ರತಿಶ್ಯಾಯ ಜ್ವರ ಶೂಲ ಭಗನ್ದ ರೈಃ**
**ಗುಲ್ಮರ್ಶಃಶ್ವಯಥು ಶ್ವಾಸ ಚ್ಛರ್ಧ್ಯಾದಿ ಬಿರನೇಕದಾ ॥**
**ತಥಾ ಕ್ಷಿರೋ ಗಾತಿಸಾರ ಕುಷ್ಠಾಗ ಮಯಸಂಜ್ಞಿತೈಃ**
**ಭಿದ್ಯತೇ ದೇಹ ಜಸ್ತಾಪೋ ಮಾನಸಂ ಶ್ರೋತ್ಕು ಮರ್ಹಸಿ**
**ಕಾಮಕ್ರೋಧ ಭಯ ದ್ವೇಷ ಲೋಭಮೋಹ ವಿಷಾದಜಃ**

**ಶೋಕಾ ಸೂಯಾವಮಾನೇರ್ಷ್ಯಾ ಮಾತ್ಸರ್ಯಾದಿ ಮಯಸ್ತಥಾ**

**ಮಾನಸೋಪಿ ದ್ವಿಜಶ್ರೇಷ್ಠ ತಾಪೋ ಭವತಿ ನೈಕದಾ**

**ಇತ್ಯೇವ ಮಾದಿಭಿರ್ಭೇದೈ ಸ್ತಾಪೋ ಹ್ಯಾದ್ಯಾತ್ಮಿಕಃ ಸ್ಮೃತ್ಯಃ**

**ಮೃಗಪಕ್ಷಿಮನುಷ್ಯಾದ್ಯೈಃ ಪಿಶಾಚೋರಗರಾಕ್ಷಸೈಃ**

**ಸರೀಸೃಪಾದ್ಯೈಶ್ಚ ನೃಣಾಂ ಜಾಯತೇ ಚಾದಿ ಭೌತಿಕಃ**

**ಶೀತವಾತೋಷ್ಣವರ್ಷಾಂಬುವೈದ್ಯುತಾದಿ ಸಮುದ್ಭವಃ**

**ತಾಪೋ ದ್ವಿಜವರ ಶ್ರೇಷಠೈಃ ಕಥ್ಯತೇ ಚಾದಿದೈವಿಕಃ**

**ಗರ್ಭಜನ್ಮಜರಜ್ಞಾನ ಮೃತ್ಯುನಾರಕಜಂ ತಥಾ**

**ದುಃಖಂ ಸಹಸ್ರಶೋ ಬೇದೈರ್ಭಿಧ್ಯತೇ ಮುನಿಸತ್ತಮ**

(ವಿ.ಪು. 2ನೇ ಸಂ. 5ನೇ ಅ ಷಷ್ಠಾಂಶ ಶ್ಲೋ 1ರಿಂದ 9)

ಎಲೈ ಮೈತ್ರೇಯ ಪ್ರಾಜ್ಞನಾದವನು ಆಧ್ಯಾತ್ಮಿಕವೇ ಮೊದಲಾದ ತಾಪತ್ರಯಗಳನ್ನು ಅರಿತಮೇಲೆ, ಅವನಲ್ಲಿ ಆತ್ಮಜ್ಞಾನ, ವೈರಾಗ್ಯ ಉತ್ಪನ್ನವಾದ ಮೇಲೆ ಆತ್ಯಂತಿಕ ಲಯವನ್ನು ಹೊಂದುವನು.

ಆಧ್ಯಾತ್ಮಿಕ ತಾಪದಲ್ಲಿ ಶಾರೀರ, ಮಾನಸ ಎಂದು ಎರಡು ವಿಧಗಳಿವೆ. ಅವುಗಳಲ್ಲಿ ಶಾರೀರವು ಅನೇಕ ಬೇಧಗಳನ್ನೊಳಗೊಂಡಿರುತ್ತದೆ. ಉದಾ : ಶಿರೋರೋಗ, ನೆಗಡಿ, ಜ್ವರ, ಶೂಲೆ, ಮೂಲವ್ಯಾಧಿ, ಊತ, ಉಬ್ಬಸ, ವಾಂತಿ– ಮುಂತಾದವು ಇವು ಶರೀರಕ್ಕೆ ಸಂಬಂಧಪಟ್ಟವು.

ಇವಲ್ಲದೆ ಮಾನಸತಾಪವೂ ಬಹಳಷ್ಟಿವೆ, ಕಾಮ, ಕ್ರೋಧ, ಭಯ, ದ್ವೇಷ, ಲೋಭ, ಮೋಹ, ವಿಷಾದ, ಶೋಕ, ಅಸೂಯೆ, ಅವಮಾನ, ಈರ್ಷ್ಯೆ (ಅಸಹನೆ) ಮಾತ್ಸರ್ಯ, (ಹೊಟ್ಟೆಕಿಚ್ಚು) ಮುಂತಾದವು. (ಈ ತಾಪತ್ರಯಗಳಲ್ಲಿ ಆಧ್ಯಾತ್ಮಿಕ, ಆದಿಭೌತಿಕ, ಆದಿದೈವಿಕ ಎಂದು ಮೂರು ವಿಧಗಳುಂಟು) ಈಗಾಗಲೇ ತಿಳಿಸಿದಂತೆ ಆಧ್ಯಾತ್ಮಿಕ ಎಂಬುದು ಶರೀರದ ನೋವುಗಳಿಗೆ ಸಂಬಂಧಪಟ್ಟಿದ್ದು. ಆಧಿಭೌತಿಕ ಎಂದರೆ ಪ್ರಾಣಿಗಳಿಂದ ಉಂಟಾಗುವಂತಹ

ತೊಂದರೆಗಳು, ಆದಿದೈವಿಕ ಎಂದರೆ ಕೇವಲ ದೈವದಿಂದ ಸಂಭವಿಸತಕ್ಕದ್ದು)

ಮೃಗ, ಪಕ್ಷಿ, ಮನುಷ್ಯ, ಪಿಶಾಚ, ನಾಗ, ರಾಕ್ಷಸ, ಹಾವು, ಚೇಳು ಮುಂತಾದ ಸರೀಸೃಪಗಳಿಂದ ಜನರಿಗೆ ಆಗುವ ತೊಂದರೆಗಳಿಗೆ ಆದಿಭೌತಿಕ ಎಂದು ಹೆಸರು.

ಚಳಿ, ಗಾಳಿ, ಸೆಖೆ, ಮಳೆ, ನೀರು, ವಿದ್ಯುತ್, ಗುಡುಗು(ಸಿಡಿಲು) ಮುಂತಾದವುಗಳಿಂದ ಆಗುವ ತೊಂದರೆಗಳನ್ನು ಆದಿದೈವಿಕ ಎಂದು ಕರೆಯುತ್ತಾರೆ. ಇಷ್ಟೇ ಅಲ್ಲದೆ ಈ ತಾಪತ್ರಯಗಳಿಂದಾಗುವ ದುಃಖಗಳಲ್ಲಿ ಸಾವಿರಾರು ಕವಲುಗಳುಂಟು.

ಗರ್ಭವಾದ ಮೇಲೆ ಹುಟ್ಟು, ಮುಪ್ಪು, ಅಜ್ಞಾನ, ಸಾವು, ನರಕ ಮುಂತಾದವುಗಳಿಂದಲೂ ದುಃಖಗಳಿವೆ. ಅವುಗಳ ಬಗ್ಗೆ ಪರಾಶರರು ಅತ್ಯಂತ ಸ್ಪಷ್ಟವಾಗಿ ಇಲ್ಲಿ ವಿವರಿಸಿದ್ದಾರೆ. ಅವುಗಳ ಬಗ್ಗೆ ನಾವು ಸ್ವಲ್ಪ ತಿಳಿಯೋಣ.

**ಸುಕುಮಾರ ತನುರ್ಗರ್ಭೇ ಜಂತುರ್ಬಹು ಮಲಾವೃತೇ ।**

**ಉಲ್ವಸಂವೇಷ್ಟಿತೋ ಭುಗ್ನ ಪೃಷ್ಠಗ್ರೀವಾಸ್ಥಿಸಂಹತಿಃ ॥**

**ಅತ್ಯಂಮ್ಲ ಕಟುತೀಕ್ಷ್ಣೋಷ್ಣ ಲವಣೈರ್ಮಾತ್ರ ಭೋಜನೈಃ ।**

**ಅತ್ಯಂತ ತಾಪೈರತ್ಯರ್ಥಂ ವರ್ಧಮಾರಾತಿವೇದನಃ ॥**

**ಪ್ರಸರಣಾಕುಂಜನಾದೌ ನಾಂಗಾನಾಂ ಪ್ರಭುರಾತ್ಮನಃ ।**

**ಶಕ್ಕನ್ಮೂತ್ರಮಹಾಪಂಕಶಾಯಿ ಸರ್ವತ್ರ ಪೀಡಿತಃ॥**

(ವಿ.ಪು.ಷ.ಅಂ.ಅ 5ಶ್ಲೋ 10–12)

ಮೊದಲು ಮನುಷ್ಯ ತಾಯಗರ್ಭದಲ್ಲಿರುವಾಗ ದೇಹವು ಬಹಳ ಕೋಮಲವಾಗಿರುತ್ತದೆ. ಕಶ್ಮಲಪೂರ್ಣವಾದ ಬಸಿರಿನಲ್ಲಿ ಈ ಮಾನವ ಪ್ರಾಣಿಯು ಗರ್ಭದ ಪೊರೆಯಿಂದ ಮುಚ್ಚಲ್ಪಟ್ಟು ಬೆನ್ನು, ಕುತ್ತಿಗೆ,

ಮೂಳೆಗಳನ್ನೆಲ್ಲ ಮುದುಡಿಕೊಂಡಿರ ಬೇಕಾಗುತ್ತದೆ. ತಾಯಿಯು ತಿನ್ನುವ ಅತ್ಯಂತ ತಾಪದಾಯಕವಾದ ಹುಳಿ, ಖಾರ, ತೀಕ್ಷ್ಣವಾದ ಸಾಂಬಾರು ಪದಾರ್ಥ, ಬಿಸಿ, ಉಪ್ಪು ಮುಂತಾದವುಗಳಿಂದ ಮಗುವಿನ ವೇದನೆ ಹೆಚ್ಚುತ್ತಲೇ ಇರುತ್ತದೆ. ಕೈಕಾಲುಗಳನ್ನು ನೀಡುವುದಕ್ಕೂ, ಮಡಿಸುವುದಕ್ಕೂ ಆಗದೆ ಯಾತನೆ ಪಡುತ್ತಾ ಮಲಮೂತ್ರಗಳ ಮಹಾಪಂಕದಲ್ಲಿ ಮಲಗಿರುತ್ತಾನೆ.

ನಿರುಚ್ಛ್ವಾ ವಾಸಃ ಸ ಚೈತನ್ಯಸ್ಸ್ಮರನ್ ಜನ್ಮಶತಾನ್ಯಥ ।
ಆಸ್ತೇ ಗರ್ಭೇ ತಿದುಃ ಖೇನ ನಿಜಕರ್ಮನಿಬಂಧನಃ ॥
ಜಾಯಮಾನಃ ಪುರೀಷಾಸೃಜ್ಮೂತ್ರಶುಕ್ರಾವಿಲಾನವಃ ।
ಪ್ರಾಜಾಪತ್ಯೇನ ವಾತೇನ ಪೀಡ್ಯ ಮಾನಾಸ್ಥಿ ಬಂದನಃ ॥
ಅಧೋಮುಖೋ ವೈ ಕ್ರಿಯತೇ ಪ್ರಬಲೈಸ್ಸೂತಿಮಾರುತೈ।
ಕ್ಲೇಷಾನ್ನಿಷ್ಕ್ರಾತಿ ಮಾಪ್ನೋತಿ ಜಠರಾನ್ಮಾತುರಾತುರಃ ॥
ಮುರ್ಛಾಮವಾಪ್ಯ ಮಹತೀಂ ಸಂಸ್ಪೃಶ್ಯೋ ಬಾಹ್ಯವಾಯುನಾ ।
ವಿಜ್ಞಾನ ಭೃಂಶಮಾಪ್ನೋತಿ ಜತಾಶ್ಚ ಮುನಿಸತ್ತಮ ॥
ಕಂಟಕೈರಿವ ತುನ್ನಾಂಗ  ಕ್ರಕಚೈರಿವ ದಾರಿತಃ ।
ಪೂತಿವ್ರಣಾನ್ನಿಪತಿತೋ ಧರಣ್ಯಾಂ ಕ್ರಮಿಕೋ ಯಥಾ ॥
ಕಂಡೂಯನೇಪಿ ಚಾಶರ್ತ ಪರಿವರ್ತೇ ಪ್ಯನೀಶ್ವರಃ ।
ಸ್ನಾನದಾನಾದಿಕಾಹಾರ ಮಪ್ಯಾಪ್ನೋತಿ ಪರೇಚ್ಛಯಾ ॥
ಅಶುಚಿ ಪ್ರಸ್ತರೇ ಸುಪ್ತಃ ಕೀಟದಂಶಾದಿಭಿಸ್ತಥಾ ।
ಭಕ್ಷ್ಯ ಮಾಣೋಪಿ ನೈವೈಷಾಂ ಸಮರ್ಥೋ ವಿನಿವಾರಣೇ ॥
ಜನ್ಮ ದುಃಖಾನ್ಯನೇಕಾನಿ ಜನ್ಮನೋ ನಂತರಾಣಿ ಚ ।
ಬಾಲಭಾವೇ ಯದಾಪ್ನೋತಿ ಹ್ಯಾದಿ ಭೌತಾದಿಕಾನಿ ಚ ॥

(ವಿ.ಪು.2ನೇ ಸಂ. ಷ ಸಂ. ಅ.5.ಶ್ಲೋ13ರಿಂದ 20)

ಗರ್ಭದಲ್ಲಿರುವ ಈ ಮಗುವಿಗೆ ಚೈತನ್ಯವಿರುತ್ತದೆ. ಉಸಿರಾಟವಿರುವುದಿಲ್ಲ. ತಾನು ಮಾಡಿದ ಕರ್ಮಬಂಧನಕ್ಕೆ ಒಳಗಾಗಿ, ಪೂರ್ವಜನ್ಮದ ನೂರಾರು ಸಂಗತಿಗಳನ್ನು ಸ್ಮರಿಸಿಕೊಳ್ಳುತ್ತಾ ಅತ್ಯಂತ ದುಃಖದಿಂದ ಗರ್ಭದಲ್ಲಿ ಮಾನವ ನೆಲೆಸಿರುತ್ತಾನೆ. ನಂತರ ಜನನದ ಕಾಲವು ಬರುತ್ತದೆ. ಗರ್ಭವನ್ನು ಸಂಕೋಚಗೊಳಿಸುವ (ಸಣ್ಣದಾಗಿಸುವ) ಪ್ರಾಜಾಪತ್ಯ ವಾಯುವು ಮಗುವಿನ ದೇಹಬಂಧನವನ್ನು ಅಮುಕುತ್ತದೆ. ಪ್ರಸೂತಿವಾತಗಳು ಈತನನ್ನು ಗರ್ಭಕೋಶದಿಂದ ಹೊರಗೆ ನೂಕುತ್ತವೆ. ಮಲ, ಮೂತ್ರ, ರಕ್ತ, ರಜಸ್ಸುಗಳು ಮುಖಕ್ಕೆ ಮೆತ್ತಿಕೊಂಡಿರಲಾಗಿ ಪೀಡೆಯನ್ನು ಅನುಸರಿಸುತ್ತಾ ಅದೋಮುಖವಾಗಿ (ತಾಯಿಯ ಉದರದಿಂದ ತಲೆ ಮೊದಲು ಬರುತ್ತದೆ) ಸಾಮಾನ್ಯವಾಗಿ ಕ್ಲೇಶಪಡುತ್ತಾ ತಾಯಿಯ ಜಠರದಿಂದ ಹೊರಗೆ ಬರುತ್ತಾನೆ. (ಮಾನವಾ ಮೂಳೆ ಮಾಸದ ತಡಿಕೆ ಎಂಬ ಪದಗಳನ್ನು ಸ್ಮರಿಸಿಕೊಳ್ಳೋಣ) ಮೈತ್ರೇಯ ಹುಟ್ಟಿದೊಡನೆ ಅವನಿಗೆ ಬಾಹ್ಯ ವಾಯುವಿನ ಸ್ಪರ್ಶವಾಗುತ್ತದೆ. ಒಡನೆಯೇ ಹಿಂದಿನ ಎಲ್ಲ ನೆನಪುಗಳು ಅಳಿಸಿಹೋಗಿ ಮಹತ್ತರವಾದ ಮೋಹಾವಸ್ಥೆಯನ್ನು ಪಡೆಯುತ್ತಾನೆ. ಆ ಸಮಯದಲ್ಲಿ ಮುಳ್ಳುಗಳಿಂದ ಚುಚ್ಚುತ್ತಿರುವಂತೆ, ಗರಗಸದಿಂದ ಸೀಳಲ್ಪಟ್ಟಂತೆ ನೋವನ್ನು ಅನುಭವಿಸುತ್ತಾ ದುರ್ಗಂಧಮಯವಾದ ವ್ರಣಕ್ಕೆ ಸಮಾನವಾದ ಯೋನಿಯಿಂದ ಹುಳುವಿನಂತೆ ನೆಲಕ್ಕೆ ಬೀಳುತ್ತಾನೆ. ಇಹ ಲೋಕದಲ್ಲಿ ಬಂದಮೇಲೆ ಸುಖವಾಗಿರುತ್ತಾನೆಯೇ ಖಂಡಿತ ಇಲ್ಲ. ಮಾನವನು (ಮಗುವಿಗೆ) ಮೈತುರಿಸಿಕೊಳ್ಳಲೂ ಸಹ ಅಶಕ್ತನಾಗಿರುತ್ತಾನೆ. ಪಕ್ಕಕ್ಕೆ ಹೊರಳಲು ಅಸಮರ್ಥನಾಗಿರುತ್ತಾನೆ. ಸ್ನಾನ–ಪಾನ ಆಹಾರಾದಿಗಳಲ್ಲಿಯೂ ಅಸ್ವತಂತ್ರನಾಗಿ ಪರರ ಇಚ್ಛೆಯಿಂದ ಅವನ್ನು ಪಡೆಯಬೇಕಾಗುತ್ತದೆ. ಮಲಮೂತ್ರಗಳಿಂದ ಕೊಳೆಯಾದ ಹಾಸಿಗೆಯಲ್ಲಿ ಮಲಗಿರುತ್ತಾನೆ. ಹುಳುವೋ ಸೊಳ್ಳೆಯೋ ಕಚ್ಚಿ ತಿನ್ನುತ್ತಿದ್ದರೂ ಅವನ್ನು ಓಡಿಸಲು ಸಹ ಸಾಮರ್ಥ್ಯವಿರುವುದಿಲ್ಲ. ಹೀಗೆ ಹುಟ್ಟುವಾಗಲು ಹುಟ್ಟಿದ ಮೇಲೆ ಬಾಲ್ಯದಲ್ಲಿ ಈ ಪ್ರಕಾರವಾಗಿ ಆದಿಭೌತಿಕ ತೊಂದರೆಗಳಿಗೆ ಒಳಗಾಗುತ್ತಾನೆ.

## ಯೌವನದ ಪರಿಸ್ಥಿತಿ

ಹೀಗೆಯೇ ಬೆಳೆದು ದೊಡ್ಡವನಾಗುತ್ತಾನೆ. ಯೌವನವು ಪ್ರಾಪ್ತವಾಗುತ್ತದೆ. ಆಗಲಾದರೂ ಅವನು ಸಂತಸದಿಂದ ಇರುತ್ತಾನೆಯೇ ಖಂಡಿತ ಇಲ್ಲ. ಅದರ ವಿವರಣೆ ನೋಡೋಣ.

**ಅಜ್ಞಾನ ತಮಸಾಚ್ಛನ್ನೋ ಮೂಡಂತಃ ಕರಣೋ ನರಃ ।**

**ನ ಜಾನಾತಿ ಕುತಃ ಕೋಹಂ ಕ್ವಾಹಂ  ಗಂತ ಕಿಮಾತ್ಮಕಃ ॥**

**ಕೇನ ಬಂಧೇನ ಬದ್ಧೋಹಂ ಕಾರಣಂ ಕಿಮಕಾರಣಂ ।**

**ಕಿಂ ಕಾರ್ಯಂ ಕಿಮಕಾರ್ಯಂ  ವಾಕಿಂ ವಾಚ್ಯಂಕಿಂನೋಚ್ಯತೇ ॥**

**ಕೋಧರ್ಮಃ ಕರ್ಶಚವಾಧರ್ಮಃ ಕಸ್ಮಿನ್ವರ್ತೇಥ ವಾಕಥಮ್ ।**

**ಕಿಂಕರ್ತವ್ಯಮಕರ್ತವ್ಯಂ  ಕಿಂವಾ ಗುಣದೋಷವತ್ ।**

**ಏವಂ ಪಶುಸಮೈ ಮೂಢೈರ ಜ್ಞಾನಪ್ರಭವಂ ಮಹತ್ ।**

**ಅವಾಪ್ಯತೇ ನರೈರ್ದುಃಖಂ ಶಿಶ್ನೋದರ ಪರಾಯಣೈಃ ॥**

**ಅಜ್ಞಾನಂ ತಾಮಸೋಭಾವಃ ಕಾರ್ಯಾರಂಭ ಪ್ರವೃತ್ತಯಃ ।**

**ಅಜ್ಞಾನಿನಾಂ ಪ್ರವರ್ತಂತೇ ಕರ್ಮಲೋಪಾಸ್ತತೋ ದ್ವಿಜಃ ॥**

**ನರಕಂ ಕರ್ಮಣಾಂ ಲೋಪಾತ್ ಫಲಮಾಹು ರ್ಮನೀಕ್ಷಿಣಃ ।**

**ತಸ್ಮಾದ ಜ್ಞಾನಿನಾಂ ದುಃಖಮಿಹ ಚಾಮುತ್ರಚ್ಚೋತ್ತಮಮ್ ॥**

(ವಿ.ಪು. 2ನೇ ಸಂ. ಷ. ಅ. ಅ. 5. ಶ್ಲೋ 21ರಿದ 26)

ಯೌವನದ ದೆಸೆಯಲ್ಲಿ ಮಾನವನಿಗೆ ಅಜ್ಞಾನವೆಂಬ ಕತ್ತಲೆಯು ಮುಚ್ಚಿಕೊಳ್ಳುತ್ತದೆ. ಬುದ್ಧಿಯೂ ಮೂಢವಾಗುತ್ತದೆ. ಏಕೆಂದರೆ ಆಗ ಮನುಷ್ಯನು ನಾನು ಯಾರು?, ಎಲ್ಲಿಂದ ಬಂದೆನು?, ಎಲ್ಲಿಗೆ ಹೋಗುತ್ತೇನೆ?, ನನ್ನ ಸ್ವರೂಪವಾದರೂ ಯಾವುದು ?, ಯಾವ ಬಂಧನಕ್ಕೆ ಇಹದಲ್ಲಿ ಒಳಗಾಗಿದ್ದೇನೆ, ಈ ಬಂಧನಕ್ಕೆ ಕಾರಣವಾದರೂ ಏನು ? ಅಥವಾ

ಕಾರಣವಿಲ್ಲದೆಯೇ ಬಂಧನ ಒದಗಿತೇ ?, ನಾನು ಮಾಡಬೇಕಾದ ಕಾರ್ಯ ಯಾವುದು ?, ಮಾಡಬಾರದ ಅಕಾರ್ಯ ಯಾವುದು?, ಏನನ್ನು ನುಡಿಯಬೇಕು?, ಏನನ್ನು ನುಡಿಯಬಾರದು ?, ಯಾವುದು ಧರ್ಮ ?, ಯಾವುದು ಅಧರ್ಮ?, ನಾನು ಯಾವ ಸ್ಥಿತಿಯಲ್ಲಿ ಹೇಗೆ ಇದ್ದೇನೆ, ಈ ಸ್ಥಿತಿಯಲ್ಲಿ ಕರ್ತವ್ಯ ಯಾವುದು ?, ಅಕರ್ತವ್ಯ ಯಾವುದು?, ಯಾವುದು ಒಳ್ಳೆಯದು?, ಯಾವುದು ಕೆಟ್ಟದ್ದು? ಎಂಬ ವಿಚಾರವನ್ನೇ ಈ ಯೌವನದಲ್ಲಿ ಮಾಡುವುದಿಲ್ಲ. ತಾನು ಮಾಡುವುದೇ ಸರಿ ಎಂಬ ಭಾವನೆ ತಲೆಎತ್ತಿ ನಿಂತಿರುತ್ತದೆ. ಇದರಿಂದಾಗಿ ಜನರು ಯೌವನದಲ್ಲಿ ಪಶುಗಳಂತೆ ವರ್ತಿಸುತ್ತಾರೆ. "ಉದರನಿಮಿತ್ತಂ ಬಹುಕೃತವೇಷಂ" ಎಂಬ ನುಡಿಯಂತೆ ಹೊಟ್ಟೆ ಪಾಡಿಗಾಗಿ ದುಶ್ಚಟಗಳಿಗೆ ಅನೇಕರು ಒಳಗಾಗುತ್ತಾರೆ. ಈ ಪ್ರಕಾರವಾಗಿ ಅಜ್ಞಾನದಿಂದ ಘೋರವಾದ ದುಃಖಕ್ಕೆ ಒಳಗಾಗುತ್ತಾರೆ. ಈ ಅಜ್ಞಾನವು ತಮೋಗುಣದ ವಿಕಾರ ಎಂದು ಸ್ಪಷ್ಟವಾಗುತ್ತದೆ.

## ವೃದ್ಧಾಪ್ಯದ ದುರವಸ್ಥೆ. ಮುಪ್ಪು ಜೀವನದ ಹಿಪ್ಪೆಯೇ ಸರಿ

ಶ್ರೀ ಪರಶರ ಉವಾಚ :

**ಜರಾ ಜರ್ಜರ ದೇಹಶ್ಚ ಶಿಥಿಲಾ ವಯವಃ ಪುಮಾನ್ ।**
**ವಿಗಲಚ್ಛೀರ್ಣ ದಶನೋ ವಲಿಸ್ನಾಯು ಶಿರಾವೃತಃ ॥**

**ದೂರಪ್ರಣಷ್ಟನಯನೋ ವ್ಯೋಮಾಂತರ್ಗತ ತಾರಕಃ ।**
**ನಾ ಸಾವಿವರ ನಿರ್ಯಾಲೋಮ ಪುಂಚಶ್ಚಲದ್ವಪುಃ**
**ಪ್ರಕಟೀ ಭೂತಸರ್ವಾಸ್ಥಿರ್ನತ ಪೃಷ್ಠಾಸಿಸಂಹತಿಃ**
**ಉತ್ಸನ್ನ ಜಠರಾಗ್ನಿ ತ್ವಾದಲ್ಪಾಹಾರೋಲ್ಪ ಚೇಷ್ಟಿತಃ ॥**

**ಕೃಚ್ಛಾತ್ ಸಂಕ್ರಮಣೋತ್ಥಾನ ಶಯನಾಸನ ಚೇಷ್ಟಿತಃ ।**
**ಮನ್ದೀ ಭವಚ್ಛ್ರೋತ್ರ ನೇತ್ರಸ್ಯವಲ್ಲಾಲಾ ವಿಲಾನನಃ ॥**

**ಅನಾಯತ್ತೈಸ್ಸಮಸ್ತೈಶ್ಚ ಕರಣೈರ್ಮರಣೋನ್ಮುಖಃ ।**
**ತತ್‌ಕ್ಷಣೇಪ್ಯನು ಭೂತಾನಾಮಸ್ಮರ್ತಾಖಿಲ ವಸ್ತುನಾಮ್ ॥**

**ಸಕೃದುಚ್ಚಾರಿತೇ ವಾಕ್ಯೇ ಸಮುದ್ಭೂತ ಮಹಾಶ್ರಮಃ ।**
**ಶ್ವಾಸಕೋಶ ಸಮುದ್ಭೂತ ಮಹಾಯಾಸಪ್ರಜಾಗರಃ ॥**

**ಅನ್ಯೇನೋತ್ಥಾಪ್ಯತೇನ್ಯೇವ ತಥಾ ಸಂವೇಶ್ಯತೇಜರೀ ।**
**ಭೃತ್ಯಾತ್ಮ ಪುತ್ರ ದಾರಾಣಾಮವಮಾನಾಸ್ಪದೀಕೃತಃ ॥**

**ಪ್ರಕ್ಷೀಣಾ ಖಿಲಶೌಚಶ್ಚ ವಿಹಾರಾ ಹಾರಸ ಸ್ಪೃಹಃ ।**
**ಹಾಸ್ಯಃ ಪರಿಜನಸ್ಯಾಪಿ ನಿರ್ವಿಣ್ಣಾ ಶೇಷಬಾಂಧವಃ ॥**

**ಅನುಭೂತಮಿವಾ ನ್ಯಸ್ಮಿನ್ ಜನ್ಮನ್ಯಾತ್ಮ ವಿಚೇಷ್ಟಿತಮ್**
**ಸಂಸ್ಮರನ್ ಯೌವನೇ ದೀರ್ಘಂ ನಿಃ ಶ್ವಸತ್ಯಭೀತಾಪಿತ ॥**

(ವಿ.ಪು.2ನೇ ಸಂ.ಷ ಅಂ. ಅ 5 ಶ್ಲೋ27ರಿಂದ 35)

ವೃದ್ಧಾಪ್ಯದಲ್ಲಿ ಕತ್ತು, ಕಾಲು, ಕೈಗಳೂ ಬಲಹೀನವಾಗಿ ಬಳುಕುತ್ತ ದೇಹವೆಲ್ಲ ನಡುಗುತ್ತದೆ. ಆಯಾಸದಿಂದ ಆಗಾಗ ಎಚ್ಚರತಪ್ಪುತ್ತಾನೆ. ಆಗಾಗ ಎಚ್ಚರಿಕೆಯನ್ನು ಪಡೆಯುತ್ತಾನೆ. ಧನ, ಧಾನ್ಯ, ಪುತ್ರ, ಭಾರ್ಯೆ, ಭರ್ತಾಗೃಹ ಮುಂತಾದವುಗಳ ವಿಷಯದಲ್ಲಿ ಇವರ ಗತಿ ಮುಂದೆ ಏನಾಗುವುದೋ ಎಂಬ ಮಮತ್ವದ ಚಿತೆಯಿಂದ ವ್ಯಾಕುಲನಾಗಿರುವನು. ಗರಗಸದಂತೆ ಮರ್ಮಭೇದಕ ಸಂಗತಿಗಳೂ, ದಾರುಣ ಪ್ರಸಂಗಗಳು ಮತ್ತು ಯಮಶರಗಳಂತೆ ಮಹಾರೋಗಗಳು ವೃದ್ಧನ ಪ್ರಾಣಬಂಧನವನ್ನು ಕತ್ತರಿಸುತ್ತಾ ಹೋಗುತ್ತವೆ. ಕಣ್ಣುಗುಡ್ಡೆಗಳು ಮೇಲೆ ಸಿಕ್ಕಿಕೊಳ್ಳುತ್ತವೆ. ಕೈಕಾಲುಗಳನ್ನು ಮತ್ತೆ ಮತ್ತೆ ಬಡಿಯುತ್ತಾನೆ. ತುಟಿ ದವಡೆಗಳೆಲ್ಲ ಒಣಗುತ್ತವೆ. ಶ್ಲೇಷ್ಮಾದಿ ದೋಷಗಳಿಂದ ಗಂಟಲು ಕಟ್ಟಿಕೊಂಡು "ಘುರ್, ಘುರ್" ಎಂದು ಶಬ್ದಮಾಡುತ್ತಿರುತ್ತಾನೆ. ದೇಹದಲ್ಲಿ ಮಹಾತಾಪ ಉಂಟಾಗಿ ಹಸಿವು ಬಾಯಾರಿಕೆಗಳು ಪೀಡಿಸುತ್ತವೆ. ಅನಂತರ ಯಮದೂತರ ಪೀಡೆಗೆ ಸಿಕ್ಕಿ ಕಷ್ಟದಿಂದ ದೇಹವನ್ನು ಬಿಡುವನು. ಕರ್ಮಫಲವನ್ನು ಭೋಗಿಸುವುದಕ್ಕಾಗಿ ಕ್ಲೇಶದಿಂದ ಯಾತನಾಶರೀರವನ್ನು ಪಡೆಯುವನು. ಹೀಗೆ ಮರಣಕಾಲದಲ್ಲಿಯೂ ಹಲವು ಬಗೆಯ ದುಃಖವುಂಟಾಗುತ್ತದೆ. ಹಾಗಾದರೆ ಮಾನವ ಜನ್ಮವೇ ಘೋರವಾದುದೇ ಎಂಬ ಪ್ರಶ್ನೆ ನಮಗೆ ಉಂಟಾಗುತ್ತದೆ. ಖಂಡಿತವಾಗಿಯೂ ಅನೇಕ

ಮಹನೀಯರು ಮಾನವ ಜನ್ಮದಲ್ಲಿ ಹುಟ್ಟಿ ಜನ್ಮಸಾರ್ಥಕಪಡಿಸಿಕೊಂಡಿದ್ದಾರೆ. ಸನ್ಮಾರ್ಗದಲ್ಲಿ ನಡೆದು ಇಹದಲ್ಲಿ ಆಗಲಿ, ಪರದಲ್ಲಾಗಲಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. 'ಮಾನವ ಜನ್ಮ ದೊಡ್ಡದು. ಅದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ' ಎಂಬ ದಾಸರ ಸಂದೇಶದಂತೆ ಒಳ್ಳೆಯದನ್ನೇ ಯೋಚಿಸಿ. ಒಳ್ಳೆಯ ರೀತಿಯಲ್ಲಿ ನಡೆದುಕೊಂಡು, ಒಳ್ಳೆಯ ಕಾರ್ಯಗಳನ್ನೇ ಮಾಡಿ ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳೋಣ.

## ನರಕಯಾತನೆಯ ವಿವರ

**ಪರಾಶರರು ಮೈತ್ರೇಯರಿಗೆ ನರಕಯಾತನೆಯ ವಿವಿಧ ಬಗೆಗಳನ್ನು ವಿವರಿಸುತ್ತಾರೆ.**

**ಯಾಮ್ಯ ಕಿಂಕರ ಪಾಶಾದಿ ಗ್ರಹಣಂ ದಂಡತಾಡನಮ್ ।**
**ಯಮಸ್ಯ ದರ್ಶನಂ ಚೋಗ್ರಮುಗ್ರ ಮಾರ್ಗವಿಲೋಕನಮ್ ॥**
**ಕರಂಬವಾಲುಕಾವಹ್ನಿ ಯಂತ್ರ ಶಸ್ತ್ರಾದಿ ಭೀಷಣೇ ।**
**ಪ್ರತ್ಯೇಕಂ ನರಕೇ ಯಾಶ್ಚ ಯಾತನಾ ದ್ವಿಜ ದುಃ ಸಹಾಃ ॥**
**ಕ್ರಕಚ್ಯೈಃ  ಪಾಟ್ಯಮಾನಾನಾಂ ಮೂಷಾಯಾಂ ಚಾಪಿ ದಹ್ಯತಾಮ್ ।**
**ಕುಠಾರೈಃ ಕೃತ್ತಮಾನಾನಾಂ ಭೂಮೌ ಚಾಪಿ ನಿಖಮ್ಯತಾಮ್ ॥**
**ಶೂಲೇಷ್ವಾರೋಪ್ಯ ಮಾಣಾನಾಂ ವ್ಯಾಘ್ರ ವಕ್ತ್ರೇ ಪ್ರವೇಶ್ಯತಾಮ್ ।**
**ಗೃಧ್ರೆಸ್ಸಮ್ಭಕ್ಷ್ಯ ಮಾಣಾನಾಂ ದ್ವೀಪಿಭಿಶ್ಚೋಪ ಭುಜ್ಯತಾಮ್ ॥**
**ಕ್ವಾಥ್ಯತಾಂ ತೈಲಮಧ್ಯೇ ಚ ಕ್ಲಿದ್ಯತಾಂ ಕ್ಷಾರಕರ್ದಮೇ ।**
**ಉಚ್ಚಾನ್ನಿ ಪಾತ್ಯಮಾನಾನಾಂ ಕ್ಷಿಪ್ಯತಾಂ ಕ್ಷೇಪಯಂತ್ರಕೈಃ ॥**
**ನರಕೇ ಯಾನಿ ದುಃಖಾನಿ ಪಾಪೇತುದ್ಭವಾನಿ ವೈ ।**
**ಪ್ರಾಪ್ಯಂತೇ ನಾರಕೈ ರ್ವಿಪ್ರ ತೇಷಾಂ ಸಂಖ್ಯಾ ನವಿದ್ಯತೇ ॥**

(ವಿ.ಪು. 2ನೇ ಸಂ. ಷ. ಅಂ. ಅ. 5 ಶ್ಲೋಕ  44ರಿಂದ 49)

ಯಮಲೋಕದಲ್ಲಿ ಅನುಭವಿಸುವ ನರಕಯಾತನೆಗಳು ಭಯಂಕರವಾದವು. ಮೊದಲು ಯಮದೂತರ ಪಾಶಕ್ಕೆ ಸಿಕ್ಕಿಕೊಳ್ಳುವುದು, ನಂತರ ದಂಡಪ್ರಹಾರ ನಂತರ ಯಮಲೋಕ ಮಾರ್ಗದರ್ಶನ, ಯಮರಾಜರ ಭೀಕರ ಸಂದರ್ಶನ ಮುಂತಾದವು. ನರಕದಲ್ಲಿ ಶಿಕ್ಷೆಯು ಘನಘೋರವಾದದ್ದು. ಗರಗಸಗಳಿಂದ ಕೊಯ್ಯುವುದು, ಮೂಸೆಯಲ್ಲಿ ಸುಡುವುದು, ಕೊಡಲಿಗಳಿಂದ ಸೀಳುವುದು, ನೆಲದಲ್ಲಿ ಹುಗಿಯುವುದು, ಶೂಲಗಳಿಗೆ ಏರಿಸುವುದು, ಹುಲಿಯ ಬಾಯಿಗೆ ನುಗ್ಗಿಸುವುದು, ಹದ್ದುಗಳಿಂದಲೂ, ಚಿರತೆಗಳಿಂದಲೂ ತಿನ್ನಿಸುವುದು, ಬಿಸಿ ಎಣ್ಣೆಯಲ್ಲಿ ಕುದಿಸುವುದು, ಕ್ಷಾರದ ಕೊಚ್ಚೆಯಲ್ಲಿ ನೆನೆಸುವುದು, ಎತ್ತರದಿಂದ ಉರುಳಿಸುವುದು, ಕವಣೆಗಳಿಟ್ಟು ಎಸೆಯುವುದು ಹೀಗೆ ಅನೇಕ ರೀತಿಯ ನರಕಯಾತನೆಗಳನ್ನು ಮಾನವ ಮರಣಾನಂತರ ಅನುಭವಿಸಬೇಕಾಗುತ್ತದೆ.

ಶ್ರೀಪರಾಶರರು ಇಷ್ಟಕ್ಕೇ ಬಿಡಲಿಲ್ಲ. ಮೈತ್ರೇಯರಿಗೆ ಸ್ವರ್ಗದಲ್ಲೂ ದುಃಖವಿದೆ ಎಂಬುದನ್ನು ವಿವರಿಸಿದರು.

**ನ ಕೇವಲಂ ದ್ವಿಜ ಶ್ರೇಷ್ಠ ನರಕೇ ದುಃಖಪದ್ಧತಿಃ ।**
**ಸ್ವರ್ಗೇಪಿ ಪಾತ ಬೀತಸ್ಯ ಕ್ಷಯಿಷ್ಣೋರ್ನಾಸ್ತಿ ನಿರ್ವೃತಿಃ ॥**

**ಪುನಶ್ಚ ಗರ್ಭೇ ಭವತಿ ಜಾಯತೇ ಚ ಪುನಃ ಪುನಃ ।**
**ಗರ್ಭೇ ವಿಲೀಯತೇ ಭೂಯೋ ಜಾಯ ಮನೋಸ್ತಯೇತಿ ವೈ ॥**

**ಜಾತಮಾತ್ರಾಶ್ಚ ಮ್ರಿಯತೇ ಬಾಲ ಭಾವೇಥ ಯೌವನೇ ।**
**ಮಧ್ಯಮಂ ವಾ ವಯಃ ಪ್ರಾಪ್ಯಃ ವಾರ್ಧಕೇ ವಾಥವಾಮೃತಿಃ ॥**

(ವಿ.ಪು. 2ನೇ ಸಂ. ಷ. ಅಂ. ಅ 5 ಶ್ಲೋ 50ರಿಂದ 52)

ಮೈತ್ರೇಯ, ದುಃಖವಿರುವುದು ನರಕದಲ್ಲಿ ಮಾತ್ರವೇ ಅಲ್ಲ. ಸ್ವರ್ಗದಲ್ಲಿಯೂ ಉಂಟು. ಪುಣ್ಯವು ಕ್ಷಯಿಸಿದಂತೆಲ್ಲ ಯಾವಾಗ ಸ್ವರ್ಗದಿಂದ ಪತನವಾಗುವುದೋ ಎಂದು ಒಂದು ರೀತಿಯ ತಲ್ಲಣ ಸ್ವರ್ಗವಾಸಿಗಳಿಗೂ ಇದ್ದೇ ಇರುತ್ತದೆ. ಹೀಗೆ ಸ್ವರ್ಗ ನರಕಗಳ ಅನುಭವಗಳು ಕಳೆದ ನಂತರ ಕರ್ಮಾನುಸಾರವಾಗಿ ಮತ್ತೆ (ತಾಯಿಯ) ಗರ್ಭದಲ್ಲಿ ಸಿಕ್ಕಿಕೊಳ್ಳಬೇಕಾಗುತ್ತದೆ. ಮತ್ತೆ ಮತ್ತೆ ಹುಟ್ಟುತ್ತಿರುವನು, ಕೆಲವು ವೇಳೆ ಗರ್ಭದಲ್ಲಿಯೇ ಸಾಯುವನು.

ಕೆಲವು ವೇಳೆ ಹುಟ್ಟುವ ಸಮಯದಲ್ಲಿ ಸಾಯುವನು. ಬಾಲ್ಯದಲ್ಲಿಯೋ, ಯೌವನದಲ್ಲಿಯೋ, ಮಧ್ಯವಯಸ್ಸಿನಲ್ಲಿಯೋ ಸಾಯುತ್ತಾನೆ. ಇಲ್ಲದಿದ್ದಲ್ಲಿ ಮುಪ್ಪಿನಲ್ಲಿ ಮರಣವಂತೂ ನಿಶ್ಚಿತ. ಹೀಗೆ ಬದುಕಿರುವವರೆಗೂ ನಾನಾ ವಿಧದ ದುಃಖಗಳು ಮನುಷ್ಯ ಪ್ರಾಣಿಯನ್ನು ಆವರಿಸಿರುತ್ತವೆ. ಇಷ್ಟನ್ನು ಹೇಳಿ ಪರಾಶರರು ಇದರಿಂದ ಮುಕ್ತಿ ಪಡೆಯುವ ಮಾರ್ಗವನ್ನು ಹೇಳುತ್ತಾರೆ. ಅದೇನೆಂದರೆ ಭಗವಂತನ ದಿವ್ಯನಾಮ ಸ್ಮರಣೆ, ಅದರಲ್ಲೂ ಈ ಕಲಿಯುಗದಲ್ಲಿ ನಾಮಸ್ಮರಣೆಯೇ ಸುಲಭವಾದದ್ದು, ಉತ್ಕೃಷ್ಟವಾದದ್ದು.

## ಮೋಕ್ಷ ಮಾರ್ಗ ಸರ್ವತ್ರವ್ಯಾಪಿ ವಿಷ್ಣು

**ಯದ್ಯತ್ ಪ್ರೀತಿಕರಂ ಪುಂಸಾಂ ವಸ್ತು ಮೈತ್ರೇಯ ಜಾಯತೇ ।**
**ತದೇವ ದುಃಖವೃಕ್ಷಸ್ಯ ಬೀಜತ್ವಮುಪಗಚ್ಛತಿ ॥**
**ಕಲತ್ರಪುತ್ರ ಮಿತ್ರಾರ್ಥ ಗೃಹಕ್ಷೇತ್ರ ಧನಾಧಿಕೈಃ ।**
**ಕ್ರಿಯತೇ ನ ತಥಾ ಭೂರಿ ಸುಖಂ ಪುಂಸಾಂ ಯಥಾಸುಖಮ್ ॥**
**ಇತಿ ಸಂಸಾರದುಃಖಾರ್ಕತಾಪತಾಪಿತ ಚೇತಸಾಮ್ ।**
**ವಿಮುಕ್ತಿಪಾದ ಪಚ್ಛಾಯಾ ಮೃತೇ ಕುತಸುಖಂ ನೃಣಾಮ್ ॥**
**ತದಸ್ಯ ತ್ರಿವಿಧಸ್ಯಾಪಿ ದುಃಖ ಜಾತಸ್ಯ ವೈಮಮ ।**
**ಗರ್ಭಜನ್ಮ ಜರಾದ್ಯೇಷು ಸ್ಥಾನೇಷು ಪ್ರಭವಿಷ್ಯತಃ ॥**
**ನಿರಸ್ತಾತಿಶಯಾಹ್ಲಾದ ಸುಖಭಾವೈಕ ಲಕ್ಷಣಾ ।**
**ಬೇಷಜಂ ಭಗವತ್ ಪ್ರಾಪ್ತಿರೇಕಾಂತ್ಯಾ ತ್ಯನ್ತಿಕೀಮತಾ ॥**
**ತಸ್ಮಾತ್ತತ್ ಪ್ರಾಪ್ತಯೇ ಯತ್ನಃ ಕರ್ತವ್ಯಃ ಪಂಡಿತೈರ್ನರೈಃ ।**
**ತತ್ ಪ್ರಾಪ್ತಿ ಹೇತುರ್ಜ್ಞಾನಂ ಚ ಕರ್ಮ ಚೋಕ್ತಮಹಾಮುನೇ ॥**
**ಆಗಮೋತ್ಥಂ ವಿವೇಕಾಚ್ಚ ದ್ವಿಧಾ ಜ್ಞಾನಂ ತದುಚ್ಯತೇ ।**
**ಶಬ್ದ ಬ್ರಹ್ಮಾಗಮಮಯಂ ಪರಂ ಬ್ರಹ್ಮಾ ವಿವೇಕಜಮ್ ॥**
**ಅಂಧಂ ತಮ ಇವಾಜ್ಞಾನಂ ದೀಪವಚ್ಚೇಂದ್ರಿಯೋದ್ಭವಮ್ ।**
**ಯಥಾ ಸೂರ್ಯ ಸ್ತಥಾ ಜ್ಞಾನಂ ಯದ್ವಿಪರ್ಷೇ ವಿವೇಕಜಮ್ ॥**

(ವಿ.ಪು. 2ನೇ ಸಂ. ಷ. ಅಂ. ಅ 3 ಶ್ಲೋ 55 ರಿಂದ 62)

ಮನುಷ್ಯರಿಗೆ ಪ್ರಿಯವಾದ ವಸ್ತು ಯಾವುದಿದೆಯೋ ಅದೇ ದುಃಖವೆಂಬ ವೃಕ್ಷಕ್ಕೆ ಬೀಜವಾಗುತ್ತದೆ. ಮಡದಿ, ಮಕ್ಕಳು, ಮಿತ್ರರು, ಸಂಪತ್ತು, ಮನೆ, ಹೊಲ, ಧನ, ಧಾನ್ಯ ಮುಂತಾದವುಗಳಿಂದ ದುಃಖವು ಹೆಚ್ಚಾಗಿರುತ್ತದೆಯೇ ವಿನಹ ಸುಖವೇನು ಅಷ್ಟು ಇರುವುದಿಲ್ಲ. ಈ ಪ್ರಕಾರವಾದ ಸಂಸಾರ ದುಃಖವೆಂಬ ಸೂರ್ಯನ ತಾಪ ಯಾರ ಚಿತ್ತವು ಸಂತಪ್ತವಾಗಿದೆಯೋ ಅಂತಹ ಮಾನವರಿಗೆ ಮುಕ್ತಿಯೆಂಬ ವೃಕ್ಷದ ನೆರಳನ್ನು ಬಿಟ್ಟು ಮತ್ತಾವ ಸುಖ ಲಭಿಸೀತು. ಆದ್ದರಿಂದ ಗರ್ಭ, ಜನ್ಮ, ಜರಾ ಮುಂತಾದ ಅವಸ್ಥೆಗಳಲ್ಲಿ ಸಂಭವಿಸತಕ್ಕ ಆಧ್ಯಾತ್ಮಿಕವೇ ಮೊದಲಾದ ಮೂರು ಬಗೆಯ ದುಃಖರಾಶಿಗೆ ನನ್ನ ಅಭಿಪ್ರಾಯದಲ್ಲಿ ಒಂದೇ ಒಂದು ಔಷಧವಿದೆ. ಅದಾವುದೆಂದರೆ, ಆನಂದೈಕ ಸ್ವರೂಪನಾದ, ನಿಶ್ಚಿತನೂ ಆದ ಶಾಶ್ವತನೂ ಆದ ಭಗವತ್ ಪ್ರಾಪ್ತಿಯೇ ಇದಕ್ಕೆ ಔಷಧ. ಈ ಸಂದರ್ಭದಲ್ಲಿ ಕುಲಶೇಖರಾಳ್ವರರು ರಚಿಸಿ ಹಾಡಿರುವ ಮುಕುಂದಮಾಲಾ ಸ್ತೋತ್ರದ ಒಂದು ಶ್ಲೋಕವನ್ನು ಸದಾ ಪಠಿಸೋಣ.

**ವ್ಯಾಮೋಹ ಪ್ರಶಮೌಷಧಂಮುನಿಮನೋವೃತ್ತಿ ಪ್ರವೃತ್ತ್ಯೌಷಧಂ ।**
**ದೈತ್ಯೇಂದ್ರಾರ್ತಿಕರೌಷಧಂ ತ್ರಿಭುವನೇ ಸಂಜೀವ ನೈಕೌಷಧಮ್ ॥**
**ಭಕ್ತಾತ್ಯಂತಹಿತೌಷಧಂ ಭವಭಯ ಪ್ರಧ್ವಂಸಿನೈಕೌಷಧಂ ।**
**ಶ್ರೇಯಃ ಪ್ರಾಪ್ತಿ ಕರೌಷಧಂ ಪಿಬಮನಃ ಶ್ರೀಕೃಷ್ಣದಿವ್ಯೌಷಧಮ್ ॥**

ಈ ಭಗವತ್ ಪ್ರಾಪ್ತಿಗಾಗಿ ಎರಡು ಮಾರ್ಗಗಳನ್ನು ನಾವು

ಅನುಸರಿಸಬೇಕಾಗುತ್ತದೆ ಎಂದು ಪರಾಶರರು ಹೇಳುತ್ತಾರೆ. ಅದಾವುದೆಂದರೆ ಜ್ಞಾನ ಮತ್ತು ಕರ್ಮ ಇವೆರಡೂ ಸಾಧನಗಳು ಪರಸ್ಪರ ಪೋಷಕ ಪ್ರೇರಕವಾದವು. ಜ್ಞಾನವು ಮೋಕ್ಷಕ್ಕೆ ಸಾಕ್ಷಾತ್ ಸಾಧನ. ಕರ್ಮವು ಜ್ಞಾನಾಂಗವಾಗಿ ಸಾಧನ. ಕರ್ಮವು ಚಿತ್ತಶುದ್ಧಿ ದ್ವಾರಾಜ್ಞಾನಕ್ಕೆ ಕಾರಣವಾಗಿರುತ್ತದೆ. ಈ ಸಾಧನಗಳಲ್ಲಿಯೂ ಜ್ಞಾನವೆಂಬುದು ಶಾಸ್ತ್ರಜನ್ಯ, ವಿವೇಕಜನ್ಯ ಎಂದು ಎರಡು ವಿಧವಿದೆ. ಉದಾಹರಣೆಗೆ (ಸತ್ಯಂ ಜ್ಞಾನ ಅನಂತಂಬ್ರಹ್ಮ) ಮುಂತಾದವು. ಶಬ್ದ ಶ್ರವಣದಿಂದಾಗುವ ಬ್ರಹ್ಮಜ್ಞಾನ

ಶಾಸ್ತ್ರಜನ್ಯವೆನಿಸುತ್ತದೆ. ಆತ್ಮನಾತ್ಮ ವಿವೇಕದಿಂದ (ನಿಧಿದ್ಯಾಸನಾದಲ್ಲಿ ) ವ್ಯಕ್ತವಾಗುವ ಪರಬ್ರಹ್ಮ ಜ್ಞಾನವು ವಿವೇಕಜನ್ಯವೆನಿಸುತ್ತದೆ.

**ಆಗಮೋತ್ಥಂ ವಿವೇಕಾಚ್ಚ ದ್ವಿಧಾಜ್ಞಾನಂ ತದುಚ್ಯತೇ ।**
**ಶಬ್ದ ಬ್ರಹ್ಮಾಗಮ ಮಯಂ ಪರಂ ಬ್ರಹ್ಮ ವಿವೇಕಜಮ್ ॥**
**ಅಂಧಂ ತಮ ಇವಾಜ್ಞಾನಂ ದೀಪವಚ್ಚೇನ್ದ್ರಿಯೋದ್ಭವಮ್ ।**
**ಯಥಾಸೂರ್ಯ ಸ್ತಥಾ ಜ್ಞಾನಂ ಯದ್ವಿಪಕ್ಷೇ ವಿವೇಕಜಮ್ ॥**
**ಮನುರಪ್ಯಾಹ ವೇದಾರ್ಥಂ ಸ್ಮೃತ್ವಾ ಯನ್ಮುನಿಸತ್ತಮ ।**
**ತದೇತತ್ ಶ್ರೂಯತಾ ಮತ್ರ ಸಂಬಂಧೇ ಗದತೋ ಮಮ ॥**
**ದ್ವೇ ಬ್ರಹ್ಮಣೀ ವೇದಿತವ್ಯೇ ಶಬ್ದ ಬ್ರಹ್ಮ ಪರಂಚಯತ್ ।**
**ಶಬ್ದ ಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ॥**
**ದ್ವೇ ವೈ ವಿದ್ಯೇ ವೇದಿತವ್ಯೇ ಇತಿ ಚಾಥರ್ವಣೀ ಶ್ರುತಿಃ ।**
**ಪರಯ ತ್ವಕ್ಷರ ಪ್ರಾಪ್ತಿಂ ಋಗ್ವೇದಾದಿ ಮಯಾಪರಾ ॥**
**ಯತ್ತ ದವ್ಯಕ್ತಂ ಅಜರಮಚಿಂತ್ಯ ಮಜಮವ್ಯಯಮ್ ।**
**ಅನಿರ್ದೇಶ್ಯ ಮರೂಪಂ ಚ ಪಾಣಿಪಾದಾದ್ಯ ಪಶ್ಯಂತಿ ಸಂಯತಮ್ ॥**
**ವಿಭುಂ ಸರ್ವಗತಂ ನಿತ್ಯಂ ಭೂತೆಯೋನಿರಕಾರಣಮ್ ।**
**ಪ್ರವ್ಯಾಪ್ತಂಯತಃ ಸರ್ವಂ ಯದ್ವೈ ಪಶ್ಯಂತಿ ಸೂರಯಃ ॥**
**ತದ್‌ಬ್ರಹ್ಮ ತತ್ಪರಂ ಧಾಮ ತದ್‌ಧ್ಯೇಯಂ ಮೋಕ್ಷ ಕಾಂಕ್ಷಿ ಭಿಃ ।**
**ಶ್ರುತಿ ವಾಕ್ಯೋದಿತಂ ಸೂಕ್ಷ್ಮಂ ತದ್ವಿಷ್ಣೋಃ ಪರಮಂ ಪದಮ್ ॥**

(ವಿ.ಪು. 2ನೇ ಸಂ. ಷ ಅಂ.ಅ 5 ಶ್ಲೋ 61ರಿಂದ 68)

ಅಜ್ಞಾನವು ದಟ್ಟವಾದ ಕತ್ತಲೆ ಇದ್ದಂತೆ. ಇಂದ್ರಿಯಗಳ ಮೂಲಕ ಅಂದರೆಪಠಣ ಶ್ರವಣಾದಿಗಳಿಂದ ಆಗುವ ಶಾಸ್ತ್ರ ಜನ್ಯ ಜ್ಞಾನವು ಈ ಕತ್ತಲೆಯನ್ನು ನಿವಾರಿಸುವ ದೀಪವಿದ್ದಂತೆ. ವಿವೇಕ ಜನ್ಯವಾದ ಜ್ಞಾನವು ಸೂರ್ಯನಿದ್ದಂತೆ. ದೀಪದಿಂದ ಕತ್ತಲೆಯು ಸ್ವಲ್ಪ ಅಂದರೆ ಸೀಮಿತವಾಗಿ

ನಿವೃತ್ತಿಹೊಂದುತ್ತದೆ. ಸೂರ್ಯನಿಂದ ಕತ್ತಲೆಯು ಸಂಪೂರ್ಣವಾಗಿ ದೂರವಾಗಿರುತ್ತದೆ. (ಪ್ರಜ್ಞಾನಂ ಬ್ರಹ್ಮ, ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ಶ್ರುತಿ ವಾಕ್ಯಗಳ ಪ್ರಕಾರ ಬ್ರಹ್ಮನೇ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ) ಶ್ರುತಿ ವಾಕ್ಯಗಳ ಪ್ರಕಾರ ಬ್ರಹ್ಮನೇ ಜ್ಞಾನ ಸ್ವರೂಪವಾದದ್ದು ಎಂದು ಹೇಳಿದೆ ಮನುಧರ್ಮಶಾಸ್ತ್ರದಲ್ಲಿಯೂ ಹೀಗೆ ಹೇಳಿದ್ದಾರೆ. ತಿಳಿಯಬೇಕಾದ ಬ್ರಹ್ಮವು ಎರಡು ವಿಧವಾಗಿವೆ. ಶಬ್ದ ಬ್ರಹ್ಮ ಮತ್ತು ಪರಬ್ರಹ್ಮ. ಶಬ್ದ ಬ್ರಹ್ಮದಲ್ಲಿ (ಶಾಸ್ತ್ರ ಜನ್ಯ ಜ್ಞಾನದಲ್ಲಿ) ನಿಷ್ಣಾತನಾಗಿ (ವಿವೇಕ ಜನ್ಯ ಜ್ಞಾನದಿಂದ) ಪರಬ್ರಹ್ಮವನ್ನು ಪಡೆಯುವನು. ಅವ್ಯಕ್ತವೂ, ಅಜರವೂ, ಅಚಿಂತ್ಯದಲ್ಲಿ ಅಜವೂ, ಅವ್ಯಯವೂ ಅನಿರ್ದೇಶ್ಯವೂ, ರೂಪರಹಿತವೂ, ಪಾಣಿಪಾದಾದಿ ಶೂನ್ಯವೂ, ಭೂತಗಳ ಆದಿ ಕಾರಣವೂ, ಸ್ವತಃ ಕಾರಣರಹಿತವೂ, ಸರ್ವಕಾರ್ಯವ್ಯಾಪಿಯೂ, ಸ್ವಯಂವ್ಯಾಪ್ತವೂ, ಸಕಲ ಪದಾರ್ಥಗಳ ಉತ್ಪತ್ತಿಗೆ ಕಾರಣವೂ ಆದ ಯಾವ ವಸ್ತುವನ್ನು ಜ್ಞಾನಿಗಳು ಸಾಕ್ಷಾತ್ಕರಿಸಿಕೊಳ್ಳುವರೋ ಅದೇ ಪರಬ್ರಹ್ಮ. ಅದೇ ಪರಮಧಾಮ. ಮೋಕ್ಷಾರ್ಥಿಗಳಿಗೆ ಧ್ಯೇಯವಾದದ್ದು ಅದು. ಶ್ರುತಿವಾಕ್ಯಗಳು ಪ್ರತಿಪಾದಿಸುವ ಆ ವಸ್ತುವೇ ವಿಷ್ಣುವಿನ ಪರಮಪದ (ಸ್ವೇಚ್ಛೆಯಿಂದ ಷಾಡ್ಗುಣ್ಯಯುಕ್ತವಾಗಿ ಕಾಣಿಸುವ) ಈ ಪರಮಾತ್ಮ ಸ್ವರೂಪವೇ ಭಗವಚ್ಛಬ್ಧಕ್ಕೆ ವಾಚ್ಯವಾಗುತ್ತದೆ ಈಗ ಭಗವಚ್ಛಬ್ಧಕ್ಕೆ ಪರಾಶರರು ಅರ್ಥವನ್ನು ಹೇಳುತ್ತಾರೆ.

**ಸಂಭರ್ತೇತಿ ತಥಾ ಭರ್ತಾ ಭಕಾರೋರ್ಥ ದ್ವಯಾನ್ವಿತಃ ।**

**ನೇತಾ ಗಮಯಿತಾ ಸೃಷ್ಟಾ ಗಕಾರಾರ್ಥಸ್ತಥಾಮುನೇ ॥**

**ಐಶ್ವರ್ಯಸ್ಯ ಸಮಗ್ರ ಸ್ಯ ಧರ್ಮಸ್ಯ ಯಶಸಶ್ರಾಯಃ ।**

**ಜ್ಞಾನ ವೈರಾಗ್ಯ ಯೋಶ್ಚೈವ ಷಣ್ಣಾಂ ಭಗ ಇತೀರಣಾ ॥**

**ವಸಂತಿ ತತ್ರ ಭೂತಾನಿ ಭೂತಾತ್ಮನ್ಯಖಿಲಾತ್ಮನಿ ।**

**ಸಚ ಭೂತೇಷ್ವ ಶೇಷೇಷು ವಕಾರಾರ್ಥಸ್ತ್ತತೋ ವ್ಯಯಃ ॥**

**ಏವ ಮೇಷ ಮಹಾನ್ ಶಬ್ಧೋ ಮೈತ್ರೇಯ ಭಗವಾನಿತಿ ।**

**ಪರಮ ಬ್ರಹ್ಮ ಭೂತಸ್ಯ ವಾಸುದೇವಸ್ಯ ನಾನ್ಯಗಃ ॥**

**ತತ್ರಪೂಜ್ಯ ಪದಾರ್ಥೋಕ್ತ ಪರಿಭಾಷಾ ಸಮನ್ವಿತಃ ।**

**ಶಬ್ದೋಯಂ ನೋಪಚಾರೇಣ ತ್ವಸ್ಯತ್ರ ಹ್ಯುಪಚಾರತಃ ॥**

**ಉತ್ಪತ್ತಿ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್ ।**

**ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥**

**ಜ್ಞಾನಶಕ್ತಿ ಬಲೈಶ್ವರ್ಯ ವೀರ್ಯಕೇಜಾಂಸ್ಯ ಶೇಷತಃ ।**

**ಭಗವಚ್ಛಬ್ದ ವಾಚ್ಯಾನಿ ವಿನಾ ಹೇಯೈರ್ಗುಣಾದಿಭಿ ॥**

**ಸರ್ವಾಣಿ ತತ್ರ ಭೂತಾನಿ ವಸಂತಿ ಪರಮಾತ್ಮನಿ ।**

**ಭೂತೇಷು ಚ ಸ ಸರ್ವಾತ್ಮಾ ವಾಸುದೇವಸ್ತತಃ ಸ್ಮೃತಃ ॥**

(ವಿ.ಪು. 2ನೇ ಷ.ಅಂ. ಅ.5 ಶ್ಲೋ 73 ರಿಂದ 80)

ಭಗವಚ್ಛಬ್ದದ 'ಭ' ಕಾರಕ್ಕೆ ಸಂಭರ್ತಾ (ಪೋಷಕ), ಭರ್ತಾ(ನಿತ್ಯಾಧಾರ) ಎಂಬ ಎರಡು ಅರ್ಥಗಳುಂಟು. 'ಗ' ಕಾರಕ್ಕೆ ಕರ್ಮಫಲ, ಪ್ರಾಪಕ ಲಯಕರ್ತ, ಸೃಷ್ಟಿಕರ್ತ ಎಂಬ ಮೂರು ಅರ್ಥಗಳುಂಟು. ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಶ್ರೀಜ್ಞಾನ ಮತ್ತು ವೈರಾಗ್ಯ ಈ ಆರು ಗುಣಗಳಿಗೆ ಭಗ ಎಂದು ಹೆಸರು. ಸರ್ವಾತ್ಮನೂ ಸಮಸ್ತ ಭೂತಗಳಿಗೆ ಆತ್ಮನೂ ಆದ ಪರಮೇಶ್ವರನಲ್ಲಿ ಸಕಲ ಭೂತಗಳು ವಾಸಿಸುತ್ತವೆ. ಅವನು ಅಶೇಷಭೂತಗಳಲ್ಲಿ ವಾಸಮಾಡುತ್ತಾನೆ. ಆದ್ದರಿಂದ 'ವ' ಕಾರಾರ್ಥ ಅವ್ಯಯವಾದ ಪರಮೇಶ್ವರ ಎಂದೇ ಅರ್ಥ. ಆದ್ದರಿಂದ ಎಲೈ ಮೈತ್ರೇಯ ಮಹಾರ್ಥವನ್ನು ಒಳಗೊಂಡಿರುವ ಈ 'ಭಗವಾನ್' ಎಂಬ ಶಬ್ದವು ಪರಬ್ರಹ್ಮ ಸ್ವರೂಪನಾದ ಶ್ರೀವಾಸುದೇವನಿಗೆ ಮಾತ್ರ ಅನ್ವಯಿಸುತ್ತದೆಯೇ ವಿನಹ ಬೇರೊಬ್ಬನಿಗೆ ಅಲ್ಲ.

**ಭೂತೇಷು ವಸತೇ ಸೋಂತರ್ವಸನ್ತ್ಯತ್ರ ಚತಾನಿಯತ್ ।**

**ಧಾತಾವಿಧಾತಾ ಜಗತಾಂ ವಾಸುದೇವಸ್ತತಃ ಪ್ರಭುಃ ॥**

**ಸ ಸರ್ವಭೂತ ಪ್ರಕೃತಿಂ ವಿಕಾರಾನ್ ।**

**ಗುಣಾದಿ ದೋಷಾಂಶ್ಚ ಮುನೇ ವ್ಯತೀತಃ ॥**

**ಅತೀತ ಸರ್ವಾವರಣೋಖಿಲಾತ್ಮಾ ।**

**ತೇವಾಸ್ತೃತಂ ಯದ್ಭುವನಾಂತರಾಲೇ ॥**

ಸಮಸ್ತ ಕಲ್ಯಾಣಗುಣಾತ್ಮ ಕೋಸೌ ।
ಸ್ವಶಕ್ತಿ ಲೇಶಾವೃತ ಭೂತ ವರ್ಗಃ ॥
ಇಚ್ಛಾ ಗೃಹೀತಾಭಿ ಮತೋರುದೇಹ ।
ಸ್ಸಂಸಾಧಿತಾ ಶೇಷ ಜಗದ್ಧಿತೋ ಯಃ ॥
ತೇಜೋಬಲೈಶ್ವರ್ಯ ಮಹಾವಬೋಧ –।
ಸುವೀರ್ಯ ಶಕ್ತ್ಯಾದಿ ಗುಣೈಕ ರಾಶಿಃ ॥
ಪರಂ ಪರಾಣಾಂ ಸಕಲಾನ ಯತ್ರ ।
ಕ್ಲೇಶಾದಯಸ್ಸಂತಿ ಪರಾವರೇಶೇ ॥
ಸ ಈಶ್ವರೋ ವ್ಯಷ್ಟಿ ಸಮಷ್ಟಿರೂಪೋ ।
ವ್ಯಕ್ತಸ್ವರೂಪೋ ಪ್ರಕಟಸ್ವರೂಪಃ ॥
ಸರ್ವೇಶ್ವರ ಸ್ಸರ್ವದೃಕ್ ಸರ್ವವಿಚ್ಚ ।
ಸಮಸ್ತ ಶಕ್ತಿಃ ಪರಮೇಶ್ವರಾಖ್ಯಃ ॥
ಸಂಜ್ಞಾಯತೇ ಯೇನ ತದಸ್ತ ದೋಷಂ ।
ಶುದ್ಧಂ ಪರಂ ನಿರ್ಮಲ ಮೇಕರೂಫಮ್ ॥
ಸಂದೃಶ್ಯತೇ ವಾಪ್ಯವಗಮ್ಯತೇ ವಾ ।
ತಜ್ಞಾನ ಮಜ್ಞಾನ ಮತೋನ್ಯದುಕ್ತಮ್ ॥

(ವಿ.ಪು. 2ನೇ ಸಂ. ಷ ಅಂ.ಅ.5 ಶ್ಲೋ 83ರಿಂದ 87ರವರೆಗೆ)

ಆ ಪರಮೇಶ್ವರನು ಸರ್ವಭೂತಗಳಿಗೆ ಪ್ರಕೃತಿಯಾದ ಅವ್ಯಕ್ತವನ್ನೂ ಮಹದಾದಿ ವಿಕಾರಗಳನ್ನೂ ಸತ್ವಾದಿಗುಣಗಳನ್ನು ಮತ್ತು ಅವುಗಳ ಕಾರ್ಯಗಳಾದ ಅಜ್ಞಾನಾದಿ ದೋಷಗಳನ್ನು ದಾಟಿದ್ದಾನೆ. ಅವಿಚ್ಛಾ ಮುಂತಾದ ಆವರಣಗಳೂ ಅವನಿಗೆ ಇಲ್ಲ. ಆ ಸರ್ವಾತ್ಮನು ಈ ವಿಶ್ವದೊಳಗಿರುವ ಸಮಸ್ತಕ್ಕೂ ವ್ಯಾಪಿಸಿದ್ದಾನೆ. ಆತನು ಸಮಸ್ತ ಕಲ್ಯಾಣಗುಣನಿಲಯನಾಗಿ ತನ್ನ ಮಾಯಾಶಕ್ತಿಯಿಂದ ಸಕಲಪ್ರಾಣಿಗಳನ್ನು ಆವರಿಸಿದ್ದಾನೆ. ಭಗವಂತನು ತನ್ನ

ಇಚ್ಛಾನುಸಾರವಾಗಿ ತನಗೆ ಬೇಕಾದ ವಿವಿಧ ದೇಹಗಳನ್ನು ಧರಿಸಿ ಅಶೇಷ ಜಗತ್ತಿನ ಹಿತವನ್ನು ಸಾಧಿಸುವನು. ತೇಜಸ್ಸು, ಬಲ, ಐಶ್ವರ್ಯ, ಅಪ್ರತಿಹತ ಜ್ಞಾನ, ವೀರ್ಯ, ಶಕ್ತಿ ಮುಂತಾದ ಕಲ್ಯಾಣಗುಣಗಳಿಂದ ಕೂಡಿದವನಾಗಿರುತ್ತಾನೆ. ಪರವಾದ ಪ್ರಕೃತಿ, ಮಹದಾದಿ ಇವುಗಳಿಗೆ ಈಶ್ವರನಾದ ಇವನಲ್ಲಿ ಅವಿದ್ಯಾ ಅಸ್ಮಿತಾ ಮುಂತಾದ ಕ್ಲೇಶಗಳೇ ಇಲ್ಲ. ಆತನು ಪರವಸ್ತುಗಳಿಗೂ ಪರನಾಗಿದ್ದಾನೆ. ಆತನು ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಮುಂತಾದ ವ್ಯಷ್ಟಿರೂಪನಾಗಿ ಇದ್ದಾನೆ. ಸಮಷ್ಟಿರೂಪನಾದ ವಸುದೇವನು ಆಗಿದ್ದಾನೆ. ಹೀಗೆ ಏಕರೂಪವೂ ವಿಕಾರವೂ ಆದ ಪರವಸ್ತುವಿನ ಸಾಕ್ಷಾತ್ಕಾರವು ಯಾವುದರಿಂದ ಆಗುತ್ತದೆಯೋ ಮತ್ತು ಅವಿದ್ಯಾ ನಿವೃತ್ತಿಯಿಂದ ಪ್ರಾಪ್ತಿಯಾಗುತ್ತದೆಯೋ ಅದೇ ಜ್ಞಾನ. ಮಿಕ್ಕುದೆಲ್ಲ ಅಜ್ಞಾನ ಎಂದು ಪರಾಶರರು ದೃಢವಾಗಿ ಮೈತ್ರೇಯರಿಗೆ ಭಗವಾನ್ ವಾಸುದೇವನ ಶುದ್ಧ ಸತ್ವರೂಪವನ್ನು ವರ್ಣಿಸುತ್ತಾರೆ.

**ಶ್ರೀಭೀಷ್ಮ ಉವಾಚ : ಮಹಾಭಾರತಾನ್ತರ್ಗತಂ ವಿಷ್ಣುಸಹಸ್ರನಾಮ)**

**ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ**

**ಪರಮಂಯೋ ಮಹತ್ ಬ್ರಹ್ಮ ಪರಮಂಯಃ ಪರಾಯಣಮ್**

**ಪವಿತ್ರಾಣಾಂ ಪವಿತ್ರಂಯೋ ಮಂಗಳಾನಾಂಚ ಮಂಗಲಮ್**

**ದೈವತಂ ದೇವತಾನಾಂಚ ಭೂತಾನಾಂ ಯೋ ವ್ಯಯಃ ಪಿತಾ**

**ಯತಸ್ಸರ್ವಾಣಿ ಭೂತಾನಿ ಭವಂತ್ಯಾದಿಯುಗಾಗಮೇ**

**ಯಸ್ಮಿಂಶ್ಚ ಪ್ರಲಯಂ ಯಾಂತಿ ಪುನರೇವ ಯುಗಕ್ಷಯೇ**

**ತಸ್ಯಲೋಕ ಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ**

**ವಿಷ್ಣೋರ್ನಾಮ ಸಹಸ್ರಂ ಮೇ ಶೃಣು ಪಾಪಭಯಾಪಹಮ್**

**ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ**

**ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ**

ಋಷಿರ್ನಾಮ್ನಾಂ ಸಹಸ್ರಸ್ಯ ವೇದವ್ಯಾಸೋ ಮಹಾಮುನಿಃ
ಛಂದೋನುಷ್ಟುಪ್ ತಥಾ ದೇವೋ ಭಗವಾನ್ ದೇವಕೀಸುತಃ

ಅಮೃತಾಂಶೂದ್ಭವೋ ಬೀಜ ಶಕ್ತಿರ್ದೇವಕಿ ನಂದನಃ
ತ್ರಿಸಾಮ ಹೃದಯಂತಸ್ಯ ಶಾಂತ್ಯರ್ಥೇ ವಿನಿಯುಜ್ಯತೇ

ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಪ್ರಭವಿಷ್ಣುಂ ಮಹೇಶ್ವರಮ್
ಅನೇಕರೂಪ ದೈತ್ಯಾಂತಂ ನಮಾಮಿ ಪುರುಷೋತ್ತಮಮ್

# ಖಾಂಡಿಕ್ಯಜನಕ ಮತ್ತು ಕೇಶಿಧ್ವಜರ ವೃತ್ತಾಂತ

## ಜಪಯೋಗಗಳ ಪ್ರಾಶಸ್ತ್ಯ

ಮುಂದೆ ಪರಾಶರರು ಮೈತ್ರೇಯರಿಗೆ ಪರಮಾತ್ಮನನ್ನು ನೋಡಲು ಸಾಧನಗಳಾದ ಜಪಯೋಗಗಳ ಬಗ್ಗೆ ವಿವರಿಸುತ್ತಾರೆ. ಬ್ರಹ್ಮಸ್ವರೂಪನಾದ ಪರಮಾತ್ಮನನ್ನು ನೋಡಲು ಮಾಂಸಮಯವಾದ ನೇತ್ರನಿಂದ ಸಾಧ್ಯವಾಗುವುದಿಲ್ಲ. ಅವನು ಸ್ವಾಧ್ಯಾಯದಿಂದ ಅಂದರೆ ಪ್ರಣವಾದಿ ಜಪದಿಂದ (ಉದಾ – ಓಂ ನಮೋ ನಾರಾಯಣಾಯ) ಮತ್ತು ಸಂಯಮ ಅಂದರೆ ಯೋಗದಿಂದ ಗೋಚರಿಸುತ್ತಾನೆ.

**ಸ್ವಾಧ್ವಾಯ ಸಂಯಮಾಭ್ಯಾಂ ಸದೃಶ್ಯತೇ ಪುರುಷೋತ್ತಮಃ ।**
**ತತ್ಪ್ರಾಪ್ತಿ ಕಾರಣಂ ಬ್ರಹ್ಮ ತದೇತದಿತಿ ಪಠ್ಯತೇ ॥**
**ಸ್ವಾಧ್ಯಾಯಾ ದ್ಯೋಗ ಮಾಸೀತ ಯೋಗಾತ್ ಸ್ವಾಧ್ಯಾಯಮಾವಸೇತ್ ।**
**ಸ್ವಾಧ್ಯಾಯ ಯೋಗ ಸಂಪತ್ತ್ಯಾ ಪರಮಾತ್ಮಾ ಪ್ರಕಾಶತೇ ॥**
**ತದೀಕ್ಷಣಾಯ ಸ್ವಾಧ್ಯಾಯ ಶ್ಚಕುರ್ಯೋಗಸ್ತಥಾಪರಮ್ ।**
**ನ ಮಾಂಸ ಚಕ್ಷುಣಾ ಧೃಷ್ಟುಂ ಬ್ರಹ್ಮಭೂತಃ ಸ ಶಕ್ಯತೇ ॥**

(ವಿ.ಪು. 2ನೇ ಸಂ. ಷಷ್ಠಾಧ್ಯಾಯ ಷಷ್ಠಾಂಕ ಶ್ಲೋ 1ರಿಂದ 3)

ಪರಮಾತ್ಮನ ದರ್ಶನ ಭಾಗ್ಯವನ್ನು ಪಡೆಯಲು ಅಂತಃಚಕ್ಷುವಿನಿಂದಲೇ

ಸಾಧ್ಯ. ಬಾಹ್ಯ ಚಕ್ಷುವಿನಿಂದಲ್ಲ. ಅವನ ಸಾಕ್ಷಾತ್ಕಾರ ಪಡೆಯಬೇಕಾದರೆ ಸ್ವಾಧ್ಯಾಯ ಮತ್ತು ಯೋಗಾಭ್ಯಾಸಗಳನ್ನು ನಿರಂತರವಾಗಿ ಮಾಡುತ್ತಿರಬೇಕು,

ಇದು ಬಾಯಲ್ಲಿ ಹೇಳುವಷ್ಟು ಸುಲಭವಲ್ಲ. ಜಪ ಮತ್ತು ಯೋಗ ಈ ಎರಡೂ ಸಾಧನಗಳನ್ನು 'ಬ್ರಹ್ಮ' ಎನ್ನುತ್ತಾರೆ. **ಜಪಾತ್ ಶ್ರಾಂತಃ ಪುನರ್ಧ್ಯಾಯೇತ್ ಧ್ಯಾನಾತ್ ಶ್ರಾಂತಃ ಪುನರ್ಜಪೇತ್ । ಜಪಧ್ಯಾನಾಭಿಯೋಗೇನ ಪಶ್ಯೇದಾತ್ಮಾನ ಮಾತ್ಮನಿ ।** ಎಂದು ಯೋಗ

ಶಾಸ್ತ್ರದಲ್ಲಿ ಹೇಳಲಾಗಿದೆ. ಆದ್ದರಿಂದ ಜಪವಾದ ಮೇಲೆ ಯೋಗ. ಯೋಗವಾದ ಮೇಲೆ ಜಪ ಈ ರೀತಿಯಲ್ಲಿ ಆಚರಿಸುತ್ತ ಹೋಗಬೇಕು. ಜಪ ಯೋಗಗಳ ಸಿದ್ಧಿಯಿಂದ ಮಾತ್ರ ಪರಮಾತ್ಮನು ಗೋಚರಿಸುವನು ಎಂದು ಪರಾಶರರು ಹೇಳಿದರು. ಅದಕ್ಕೆ ತಕ್ಷಣವೇ ಮೈತ್ರೇಯರು ಭಗವನ್, ಯಾವ ಯೋಗವನ್ನು ತಿಳಿದು ಅನುಷ್ಠಾನ ಮಾಡಿದರೆ ಅಖಿಲಾಧಾರನಾದ ಪರಮೇಶ್ವರನನ್ನು ನಾನು ನೋಡಬಲ್ಲೆನೋ ಆ ಯೋಗದ ಸ್ವರೂಪವನ್ನು ತಿಳಿಯಲು ಇಚ್ಛಿಸುತ್ತೇನೆ ಎಂದರು. ಆಗ ಪರಾಶರರು ಹಿಂದೆ ಮಹಾತ್ಮನಾದ ಖಾಂಡಿಕ್ಯನೆಂಬ ಜನಕರಾಜನಿಗೆ ಕೇಶಿಧ್ವಜನು ಉಪದೇಶಿಸಿದ ಯೋಗವಿಧಾನಗಳ ಬಗ್ಗೆ ಪರಾಶರರು ಹೇಳಲು ಉದ್ಯುಕ್ತರಾಗುತ್ತಾರೆ. ಅವರು ಪೂರ್ವಚರಿತವನ್ನೂ ಹೇಳಲು ಆರಂಭಿಸುತ್ತಾರೆ.

ಪೂರ್ವಕಾಲದಲ್ಲಿ ಧರ್ಮಧ್ವಜನೆಂಬ ಜನಕವಂಶದ ರಾಜನಿದ್ದನು. ಅವನಿಗೆ ಅಮಿತಧ್ವಜ, ಕೃತಧ್ವಜ ಎಂಬ ಇಬ್ಬರು ಮಕ್ಕಳಿದ್ದರು. ಅವರಿಬ್ಬರಲ್ಲಿ ಕೃತಧ್ವಜನು ಯಾವಾಗಲೂ ಅಧ್ಯಾತ್ಮದಲ್ಲಿ ಆಸಕ್ತನಾಗಿದ್ದನು. ಕೃತಧ್ವಜನ ಪುತ್ರನಾದ ಕೇಶಿಧ್ವಜನು ಪ್ರಖ್ಯಾತನಾದ ರಾಜನೆನಿಸಿದನು. ಅಂತೆಯೇ ಅಮಿತಧ್ವಜನಿಗೂ ಖಾಂಡಿಕ್ಯನೆಂಬ ಮಗನಿದ್ದನು. ಈ ಖಾಂಡಿಕ್ಯನು ಕರ್ಮಮಾರ್ಗದಿಂದ ಜಗತ್ಪ್ರಸಿದ್ಧನಾಗಿದ್ದನು. ಕೇಶಿಧ್ವಜನಾದರೋ ಅಧ್ಯಾತ್ಮ ವಿದ್ಯೆಯಲ್ಲಿ ನಿಪುಣನಾಗಿದ್ದನು. ಅವರಿಬ್ಬರ ನಡುವೆ ಒಮ್ಮೆ ಕಲಹವೇರ್ಪಟ್ಟಿತು. ಆ ಯುದ್ಧದಲ್ಲಿ ಕೇಶಿಧ್ವಜರು ಖಾಂಡಿಕ್ಯನನ್ನು ಸೋಲಿಸಿ ರಾಜ್ಯಚ್ಯುತನನ್ನಾಗಿ ಮಾಡಿದನು. ಅಲ್ಪಸೇನೆಯಿಂದ ಕೂಡಿದ ಖಾಂಡಿಕ್ಯನು ರಾಜ್ಯಭ್ರಷ್ಟನಾಗಿ ಪುರೋಹಿತ ಮತ್ತು ಮಂತ್ರಿಗಳೊಡನೆ ಅರಣ್ಯಕ್ಕೆ ಹೊರಟುಹೋದನು.

ಇತ್ತ ಕೇಶಿಧ್ವಜನು ಜ್ಞಾನನಿಷ್ಠನಾಗಿದ್ದರೂ ಅಂದರೆ ಕರ್ಮಯೋಗದಿಂದ ಮೃತ್ಯುವನ್ನು ದಾಟಬೇಕೆಂದು ಉದ್ದೇಶಿಸಿ ಬ್ರಹ್ಮಾರ್ಪಣಬುದ್ಧಿಯಿಂದ ಬಹುವಿಧ ಯಜ್ಞಗಳನ್ನು ಆಚರಿಸುತಿದ್ದನು. ಹೀಗೆ ಯಜ್ಞವನ್ನು ಆಚರಿಸುತ್ತಿರುವಾಗ ಘರ್ಮಾರ್ಥವಾದ (ಅಂದರೆ ಪ್ರವರ್ಗ್ಯದಲ್ಲಿ ಬಳಸುವ ಹವಿಸ್ಸು. ಅದಕ್ಕಾಗಿ ಹಾಲುಕೊಡುವ ಹಸುವಿಗೆ ಘರ್ಮಧೇನು ಎಂದು ಹೆಸರು) ಗೋವನ್ನು ನಿರ್ಜನವಾದ ವನದಲ್ಲಿ ಘೋರವ್ಯಾಘ್ರವು ಕೊಂದುಹಾಕಿತು. ಇದಕ್ಕೆ ಪ್ರಾಯಶ್ಚಿತ್ತಾರ್ತವಾಗಿ ಪರಾಜಿತನಾದ ಶತ್ರು ಖಾಂಡಿಕ್ಯನ ಬಳಿ ಹೋಗಿ ತಿಳಿಯಬೇಕೆಂದು ಶುನಕಮುನಿಗಳು ನಿರ್ದೇಶಿಸಿದರು.

ಅಂತೆಯೇ ಖಾಂಡಿಕ್ಯನು ಶಾಸ್ತ್ರೀಯವಾಗಿ ಮಾಡಿಕೊಳ್ಳಬೇಕಾದ ಪ್ರಾಯ ಶ್ಚಿತ್ತ ವಿಧಿವಿಧಾನವನ್ನೆಲ್ಲಾ ಖಾಂಡಿಕ್ಯನು ಕೇಶಿಧ್ವಜನಿಗೆ ವಿವರಿಸಿ ಹೇಳಿದನು. ಈ ಖಾಂಡಿಕ್ಯನಿಗೆ ಗುರುದಕ್ಷಿಣೆಯನ್ನು ಕೊಡುವುದನ್ನೇ ಮರೆತನು. ಆದ್ದರಿಂದ ' ಮತ್ತೆ ಖಾಂಡಿಕ್ಯನ ಬಳಿ ಕೇಶಿಧ್ವಜನು ಧಾವಿಸಿದನು. ಖಾಂಡಿಕ್ಯನು ಕೇಶಿಧ್ವಜನಲ್ಲಿ ಬ್ರಹ್ಮಯೋಗವನ್ನು ಗುರುದಕ್ಷಿಣಾರ್ಥವಾಗಿ ಉಪದೇಶಿಸಬೇಕೆಂದು ಕೇಳಿಕೊಂಡನು. ಅದರಂತೆ ಕೇಶಿಧ್ವಜನು ಖಾಂಡಿಕ್ಯನಿಗೆ ಬ್ರಹ್ಮಯೋಗವನ್ನು ಉಪದೇಶಿಸಿದನು.

ಕೇಶಿಧ್ವಜನು ಉಪದೇಶಿಸಿದ ಬ್ರಹ್ಮಯೋಗದ ಸಾರವನ್ನು ಕೇಳೋಣ. ಅನಾತ್ಮವಾದ ದೇಹಾದಿಗಳಲ್ಲಿ ಆತ್ಮಬುದ್ಧಿ, ತನ್ನದಲ್ಲದ ಗೃಹಾದಿಗಳಲ್ಲಿ ಮಮತಾಬುದ್ಧಿ. ಹೀಗೆ ಅವಿದ್ಯೆಯು ಎರಡು ಬಗೆಯಾಗಿದೆ. ಈ ಅವಿದ್ಯೆಯೇ ಸಂಸಾರ ವೃಕ್ಷವು ಹುಟ್ಟುವುದಕ್ಕೆ ಕಾರಣವಾಗುತ್ತದೆ. ಅಜ್ಞಾನವೆಂಬ ಕತ್ತಲಿನಿಂದ ಆವೃತವಾದ ಜೀವನು ತಪ್ಪು ತಿಳಿವಳಿಕೆಯನ್ನು ತಳೆದು ಪಂಚಭೂತಾತ್ಮಕವಾದ ದೇಹದಲ್ಲಿ 'ನಾನು ನನ್ನದು' ಎಂಬ ಬುದ್ಧಿಯನ್ನು ಮಾತ್ರ ತನ್ನಲ್ಲಿ ಗಟ್ಟಿಯಾಗಿ ಇಟ್ಟುಕೊಂಡಿರುತ್ತಾನೆ. ಮಾನವನು ಸಕಲ ಕರ್ಮಗಳನ್ನು ದೇಹದ ಭೋಗಕ್ಕಾಗಿ ಮಾಡುತ್ತಾನೆ. ಆತ್ಮನಿಗಿಂತ ದೇಹವು ಭಿನ್ನವಾಗಿರುವಾಗ ಕರ್ಮವೆಲ್ಲವೂ ದೇಹೋತ್ಪತ್ತಿ ರೂಪವಾದ ಬಂಧಕ್ಕೆ ಕಾರಣವಾಗುತ್ತದೆ.

**ಮೃಣ್ಮಯಂ ಹಿ ಯಥಾ ಗೇಹಂಲಿಪ್ಯತೇ ವೈ ಮೃದಮ್ಬುಸಾ ।**

**ಪಾರ್ಥಿಓಯಂ ತಥಾ ದೇಹೋ ಮೃದಂಬ್ವಾಲೇಪನಸ್ಥಿತಃ**

(ವಿ.ಪು. ಷ.ಅಂ.ಅ 7. ಶ್ಲೋ 17)

ಮಣ್ಣಿನ ಮನೆಯು ಮಣ್ಣುನೀರುಗಳ ಲೇಪನದಿಂದ ಹೇಗೆ ನಿಂತಿರುತ್ತದೆಯೋ ಹಾಗೆಯೇ ಈ ಮಣ್ಣಿನ ದೇಹವು ಅನ್ನಪಾನಗಳೆಂಬ ಮಣ್ಣು ನೀರುಗಳ ಲೇಪನದಿಂದ ಉಳಿದುಕೊಂಡಿರುತ್ತದೆ. ಹೀಗೆ ಅವಿದ್ಯೆಯಿಂದ ಪ್ರಾಪ್ತವಾಗುವ ಕ್ಲೇಶಗಳನ್ನು ಹೋಗಲಾಡಿಸತಕ್ಕದ್ದು ಯೋಗಕ್ಕಿಂತ ಮತ್ತೊಂದಿಲ್ಲ.

**ಆತ್ಮಭಾವಂ ನಯತ್ಯೇನಂ ತದ್ ಬ್ರಹ್ಮ ಧ್ಯಾಯಿನಂ ಮುನಿಮ್।**

**ವಿಕಾರ್ಯ ಮಾತ್ಮನಶ್ಯಕ್ತ್ಯಾ ಲೋಹಮಾಕರ್ಷಕೋಯಥಾ ॥**

**ಆತ್ಮ ಪ್ರಯತ್ನ ಸಾಪೇಕ್ಷಾ ವಿಶಿಷ್ಟಾಯಾ ಮನೋಗತಿಃ ।**

**ತಸ್ಯಾ ಬ್ರಹ್ಮಣಿ ಸಂಯೋಗೋ ಯೋಗ ಇತ್ಯಭಿದೀಯತೇ ॥**

(ವಿ.ಪು. 2ನೇ ಷ. ಅಂ. ಅ. 7 ಶ್ಲೋ 30, 31)

ಆಯಸ್ಕಾಂತವು ತನ್ನ ಶಕ್ತಿಯಿಂದ ವಿಕಾರಾರ್ಹವಾದ ಅಂದರೆ ಸ್ಥಾನಾಂತರಗೊಳಿಸಲು ಅರ್ಹವಾದ ಕಬ್ಬಿಣವನ್ನು ಸೆಳೆದು ಹೇಗೆ ತನ್ನೊಡನೆ ಸೇರಿಸಿಕೊಳ್ಳುವುದೋ ಹಾಗೆ ಆ ಬ್ರಹ್ಮವು ಧ್ಯಾನಶೀಲನಾದ ಮುನಿಯನ್ನು ತನ್ನಲ್ಲಿ ಲಯಗೊಳಿಸುತ್ತದೆ. ಅಂದರೆ ಮುನಿಯು ಬ್ರಹ್ಮನಲ್ಲಿ ಲಯ ಹೊಂದುತ್ತಾನೆ. ಆತ್ಮ ಜ್ಞಾನೋಪಯುಕ್ತವಾದ ಯಮನಿಯಮಾದಿ ಪ್ರಯತ್ನಗಳಿಗೆ ಒಳಪಟ್ಟು ಸತ್ವಗುಣ ವಿಶಿಷ್ಟವಾದ ಯಾವ ಮಾನಸ ಪ್ರವೃತ್ತಿಯುಂಟೋ ಅದನ್ನು ಬ್ರಹ್ಮದಲ್ಲಿ ಸಂಯೋಗಗೊಳಿಸುವುದಕ್ಕೆ ಯೋಗವೆಂದು ಹೆಸರು. ಯೋಗಿಯು ಸತ್ವಗುಣ ವಿಶಿಷ್ಟವಾಗಿರುತ್ತಾನೆ. ಯೋಗಿಯಾದವನು ಬ್ರಹ್ಮನಲ್ಲಿ ಪ್ರವೇಶಿಸಲು ತನ್ನ ಮನಸ್ಸನ್ನು, ಯೋಗ್ಯತೆಯನ್ನು ಸಂಪಾದಿಸುವುದಕ್ಕೋಸ್ಕರ ನಿಷ್ಕಾಮವಾಗಿ ಬ್ರಹ್ಮಚರ್ಯ, ಅಹಿಂಸೆ, ಸತ್ವ, ಅಸ್ತೇಯ, ಅಪರಿಗ್ರಹಗಳನ್ನು ಪಾಲಿಸಬೇಕು, ಅಪರಿಗ್ರಹ ಎಂದರೆ ಯೋಗಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹರ, ಧಾರಣ, ಧ್ಯಾನ, ಸಮಾದಿಗಳು, ಮುಂತಾದವುಗಳನ್ನು ಪಾಲಿಸಬೇಕು. ಯೋಗಿಯಾದವನು ಶ್ರೀಹರಿಯ

ವಿಶ್ವಗೋಚರವಾದ ಸ್ಥೂಲರೂಪವನ್ನು ಧ್ಯಾನಿಸಬೇಕು. ನಂತರ ವಿಷ್ಣು ಎಂಬ ಹೆಸರಿನ ಶುದ್ಧಬ್ರಹ್ಮನಲ್ಲಿ ಚಿತ್ತವನ್ನು ಏಕಾಗ್ರತೆಯಿಂದ ನಿಲ್ಲಿಸಬೇಕೆಂದು ಕುಶಧ್ವಜನು ಹೇಳಿದನು. ಅಂತೆಯೇ ಖಾಂಡಿಕ್ಯನು ಎಲ್ಲವನ್ನೂ ತೊರೆದು ಮುಕ್ತಿ ಪಡೆದನು.

## ವಿಷ್ಣುಪುರಾಣ ಮಹಾತ್ಮೆ

ಹೀಗೆ ಮೈತ್ರೇಯರಿಗೆ ಪರಾಶರ ಮಹರ್ಷಿಗಳಿಗೆ ವಿಷ್ಣುಪುರಾಣವನ್ನು ವರ್ಣಿಸುತ್ತಾ ಮಹಾಪುರುಷರ ವಿಶಿಷ್ಟ ಚರಿತೆಗಳನ್ನೂ, ಪುಣ್ಯ ಪ್ರದೇಶಗಳನ್ನೂ, ಪುಣ್ಯನದಿಗಳನ್ನೂ, ಸಮುದ್ರಗಳನ್ನೂ, ಜ್ಞಾನಿಗಳ ಚರಿತ್ರೆಯನ್ನೂ ವರ್ಣಿಸಿದರು. ಅಷ್ಟೇ ಅಲ್ಲ ಫಲಶ್ರುತಿಯನ್ನು ತಿಳಿಸುತ್ತಾ ಪರಾಶರರು ಹೀಗೆಂದರು.

**ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ ।**
**ಪುಮಾನ್ ವಿಮುಚ್ಯತೆ ಸದ್ಯಃ ಸಿಂಹತ್ರಸ್ತೈರ್ವೃಕೈರಿವ ॥**

**ಯನ್ನಾಮಕೀರ್ತನಃ ಭಕ್ತ್ಯಾವಿಲಾಯನ ಮನುತ್ತಮಮ್ ।**
**ಮೈತ್ರೇಯಾ ಶೇಷಪಾಪಾನಂ ಧೂತಾನಮಿವ ಪಾವಕ ॥**

**ಕಲಿಕಲ್ಮಷಮತ್ಯುಗ್ರಂ ನರಕಾರ್ತಿಪ್ರದಂ ನೃಣಾಮ್ ।**
**ಪ್ರಯಾತಿ ವಿಲಯಂ ಸಧ್ಯಃ ಸಕೃಧ್ಯತ್ರ ಚ ಸಂಸ್ಮೃತೇ ॥**

(ವಿ.ಪು. 2ನೇ ಸಂ. ಅ. 8 ಷಷ್ಠಾಂಕ ಶ್ಲೋ 20ರಿಂದ 22)

ಭಗವಾನ್ ವಿಷ್ಣುವಿನ ನಾಮವನ್ನು ಆಕಸ್ಮಿಕವಾಗಿ ಉಚ್ಚರಿಸಿದರೂ ಸಾಕು, ಉಚ್ಚರಿಸುವವನ ಸಕಲ ಪಾಪಗಳೂ, ಸಿಂಹಕ್ಕೆ ಹೆದರಿದ ತೋಳಗಳಂತೆ ಓಡಿಹೋಗುತ್ತವೆ. ಮೈತ್ರೇಯ ಲೋಹಗಳನ್ನು ಅಗ್ನಿಯು ಹೇಗೆ ಕರಗಿಸುತ್ತದೆಯೋ ಹಾಗೆ ಭಕ್ತಿಯಿಂದ ಮಾಡಿದ ಭಗವಂತನ ನಾಮ

ಸಂಕೀರ್ತನೆಯು ಸಮಸ್ತಪಾಪಗಳನ್ನು ನಾಶಪಡಿಸುತ್ತದೆ. ಜನರಿಗೆ ನರಕ ಪೀಡೆಯನ್ನು ಕೊಡತಕ್ಕ ಅತ್ಯುಗ್ರವಾದ ಕಲಿಕಲ್ಮಷವು ಆ ಭಗವಂತನ ಸ್ಮರಣ ಮಾತ್ರದಿಂದಲೇ ವಿಲಯ (ನಾಶ) ವಾಗುತ್ತದೆ ಅಂತಹ ಭಗವಂತನಾದ ವಾಸುದೇವನನ್ನೇ ನಾವೆಲ್ಲಾ ಶರಣಾಗುವಾ.

ಸರ್ವಂ ಶ್ರೀಕೃಷ್ಣಾರ್ಪಣಮಸ್ತು

# ಶ್ರೀವೇದಾಂತ ದೇಶಿಕ ವಿರಚಿತ ಶ್ರೀದಶಾವಾತಾರ ಸ್ತೋತ್ರಂ

**ಶ್ರೀಮಾನ್ ವೆಂಕಟನಾಥಾರ್ಯಃ ಕವಿತಾರ್ಕಿಕಕೇಸರಿ**

**ವೇದಾಂತಾಚಾರ್ಯ ವರ್ಯೋ ಮೇ ಸನ್ನಿಧತ್ತಾಂ ಸದಾಹೃದಿ**

**ದೇವೋ ನಃ ಶುಭಮಾತನೋತು ದಶಧಾ ನಿರ್ವರ್ತಯನ್ ಭೂಮಿಕಾಂ**

**ರಂಗೇ ಧಾಮನಿಲಬ್ಧ ನಿರ್ಭರರಸೈ ರಧ್ಯಕ್ಷಿತೋ ಭಾವುಕೈಃ**

**ಯದ್ಭಾವೇಷು ಪೃಥಗ್ವಿ ಧೇಷ್ವನುಗುಣಾನ್ ಭಾವಾನ್ ಸ್ವಯಂ ಬಿಭ್ರತೀ**

**ಯದ್ಧರ್ಮೈರಿಹ ಧರ್ಮಿಣೇ ವಿಹರತೇ ನಾನಾಕೃತಿ ರ್ನಾಯಿಕಾ ॥1॥**

## ಮತ್ಸ್ಯಾವತಾರ

**ನಿರ್ಮಗ್ನಶ್ರುತಿಜಾಲ ಮಾರ್ಗಣದಶಾದತ್ತ ಕ್ಷಣೈರ್ವೀಕ್ಷಣೈಃ**

**ಅಂತಸ್ತಂನ್ವದಿವಾರವಿಂದ ಗಹನಾ ನ್ಯೌದನ್ವ ತೀ ನಾಮಪಾಂ**

**ನಿಷ್ಪ್ರತ್ಯೂಹ ತರಂಗ ರಿಂಗಣಮಿಥಃ ಪ್ರತ್ಯೂಢ ಪಾಥಶ್ಚಟಾ**

**ಡೋಲಾ ರೋಹ ಸ ದೋಹಳಂ ಭಗವತೋ ಮಾತ್ಸ್ಯಂ ವಪುಃ ಪಾತುನಃ ॥2॥**

## ಕೂರ್ಮಾವತಾರ

ಅವ್ಯಾಸುರ್ಭುವನತ್ರಯೀಂ ಅನಿಭೃತಂಕಂಡೂಯನೈರದ್ರಿಣಾನಿದ್ರಾಣಸ್ಸಪರಸ್ಯ

ಕೂರ್ಮವಪುಪೋನಿಷ್ವಾಸ ವಾತೋರ್ಮಯಃ

ಯದ್ವಿಕ್ಷೇಪಣ ಸಂಸ್ಕೃತೋ ದಧಿಪಯಃ ಪ್ರೇಂಖೋಳಪರ್ಯಂಕಿಕಾ ॥3॥

## ವರಾಹ

ನಿತ್ಯಾರೋಹಣ ನಿರ್ವೃತೋವಿಹರತೇ ದೇವಃ ಸಹೈವಶ್ರಿಯಾ

ಗೋಪಾಯೇದನಿಶಂ ಜಗಂತಿಕುಹನಾ ಪೋತ್ರೀ ಪವಿತ್ರೀಕೃತ

ಬ್ರಹ್ಮಾಂಡಃ ಪ್ರಳಯಯೋರ್ಮಿ ಘೋಷ ಗುರುಭಿರ್ಘೋಣಾ ರವೈರ್ಘುರ್ಘುರೈ

ಯದ್ವಂಷ್ಟ್ರಾಂಕುರ ಕೋಟಿ ಗಾಢ ಘಟನಾ ನಿಷ್ಕಂಪನಿತ್ಯಸ್ಥಿತಿಃ ॥4॥

ಬ್ರಹ್ಮಸ್ತಂಬ ಮಸೌದಸೌಭಗವತೀ ಮುಸ್ತೇವ ವಿಶ್ವಂಬರಾ

## ನರಸಿಂಹ

ಪುತ್ಯಾದಿಷ್ಟ ಪುರಾತನಪ್ರಹರಣಗ್ರಾಮಃ ಕ್ಷಣಂ ಪಾಣಿಜೈಃ ।

ಅವ್ಯಾತ್ ತ್ರೀಣಿ ಜಗಂತ್ಯಕುಂಠ ಮಹಿಮಾ ವೈಕುಂಠಕಂಠೀರವ ॥

ಯತ್ಪ್ರಾದುರ್ಭವನಾದ ವಂಧ್ಯ ಕಠರಾ ಯಾದೃಚ್ಛಕಾದ್ ವೇದಸಾಂ ।

ಯಾ ಕಾಚಿತ್ ಸಹನಾ ಮಹಾಸುರ ಗೃಹಸ್ಥೂಣಾ ಪಿತಾಮಹ್ಯಭೂತ್ ॥5॥

## ವಾಮನ

ವ್ರೀಡಾವಿದ್ಧ ವದಾನ್ಯ ದಾನವಯ ಶೋ ನಾಸೀರ ಧಾಟೀ ಭಟಃ ।

ತ್ರೈಯಕ್ಷಂ ಮಕುಟಂ ಪುನನ್ನವತು ನಸ್ತ್ರೈವಿಕ್ರಮೋ ವಿಕ್ರಮಃ॥

ಯತ್ಪ್ರಸ್ತಾವ ಸಮುಚ್ಛ್ರಿತಧ್ವಜಪಟೀ ವೃತ್ತಾಂತಸಿದ್ಧಾಂತಿಭಿಃ ।

ಸ್ರೋತೋಭಿಃ ಸುರಸಿಂಧುರಷ್ಟಸು ದಿಶಾಸೌದೇಶುದೋಧೂಯತೇ ॥6॥

## ಪರಶುರಾಮ

ಕ್ರೋಧಾಗ್ನಿಂ ಜಮದಗ್ನಿಪೀಡನ ಭವಂ ಸಂತರ್ಪಯಿಷ್ಯನ್ ಕ್ರಮಾತ್ ।
ಅಕ್ಷತ್ರಾಮಿಹ ಸಂತತಕ್ಷ ಯ ಇಮಾಂ ತ್ರಿಸ್ಸಪ್ತಕೃತ್ವಃ ಕ್ಷಿತಿಂ ॥
ದತ್ವಾ ಕರ್ಮಣಿ ದಕ್ಷಿಣಾಂ ಕ್ವ ಚನತಾಮಾಸ್ಕಂದ್ಯ ಸಿಂಧುಂ ವಸನ್ ।
ಅಬ್ರಣ್ಯಮಪಾಕರೋತು ಭಗವಾನಾ ಬ್ರಹ್ಮ ಕೀಟಂ ಮುನಿಃ ॥7॥

## ರಾಮ

ಪಾರಾವರ ಪಯೋ ವಿಶೇಷಣ ಕಲಾ ಪಾರೀಣ ಕಾಲಾನಲ ।
ಜ್ವಾಲಾ ಜಾಲ ವಿಹಾರ ಹಾರಿ ವಿಶಿಖ ವ್ಯಾಪಾರ ಘೋರ ಕ್ರಮಃ ॥
ಸರ್ವಾವಸ್ಥ ಸಕೃತ್ಪ್ರಪನ್ನ ಜನತಾ ಸಂರಕ್ಷಣೈಕ ವ್ರತೀ ।
ಧರ್ಮೋ ವಿಗ್ರಹವಾನಧರ್ಮ ವಿರತಿಂ ಧನ್ವಿ ಸತನ್ವೀತನಃ ॥8॥

## ಬಲರಾಮ

ಫಕ್ಕತ್ಕೌರವ ಪಟ್ಟಣಪ್ರಭೃತಯಃ ಪ್ರಾಸ್ತ ಪ್ರಲಂಬಾದಯಃ
ತಾಲಾಂಕಸ್ಯ ತಥಾವಿದಾ ವಿಹೃತಯಃ ತನ್ವಂತು ಭದ್ರಾಣಿನಃ ॥
ಕ್ಷೀರ ಶರ್ಕರಯೇವ ಯಾಭಿರಪೃಥಗ್ಭೂತಾಃ ಪ್ರಭೂತೈರ್ಗುಣೈ।
ಆಕೌಮಾರಕಮಸ್ಯದಂತಜಗತೇ ಕೃಷ್ಣಸ್ಯ ತಾಃ ಕೇಲಯಃ ॥9॥

## ಕೃಷ್ಣ

ನಾಥಾಯೈವ ನಮಃ ಪದಂ ಭವತು । ನಶ್ಚಿತ್ರೈಶ್ಚರಿತ್ರ ಕ್ರಮೈಃ ॥
ಭೂಯೋಭಿರ್ಭುವನಾನ್ಯಮೂನಿ ಕುಹನಾ । ಗೋಪಾಯ ಗೋಪಾಯತೇ ॥
ಕಾಳಿಂದೀ ರಸಿಕಾಯ ಕಾಳಿಯ ಫಣಿ । ಸ್ಫಾರಸ್ಫಟಾವಾಟಿಕಾ ॥
ರಂಗೋತ್ಸಂಗ ವಿಶಂಕ ಚಂಕ್ರಮಧುರಾ । ಪರ್ಯಾಯ ಚರ್ಯಾಯತೇ ॥10॥

## ಕಲ್ಕಿ

ಭಾವಿನ್ಯಾ ದಶಯಾಭವನ್ನಿಹ ಭವದ್ವಂಸಾಯ ನಃ ಕಲ್ಪತಾಂ ।
ಕಲ್ಕೀ ವಿಷ್ಣುಯಶಸ್ಸುತಃ ಕಲಿಕಥಾ ಕಾಲುಷ್ಯ ಕೂಲಂಕಷಃ ॥
ನಿಃಶೇಷ ಕ್ಷತ ಕಂಟಕೇಕ್ಷಿತಿತಲೇ ಧಾರಾ ಜಲೌಘ್ಯೈ ಧ್ರುವಂ ।
ಧರ್ಮ ಕಾರ್ತಯುಗಂ ಪ್ರರೋಹಯತಿ ಯನ್ನಿಸ್ತ್ರಿಂಶಧಾರಾಧರಃ ॥11॥

ಇಚ್ಛಾ ಮೀನ ವಿಹಾಕಚ್ಛಪ ಮಹಾ ಪೋತ್ರಿನ್ ಯದ್ರಚ್ಛಾಹರೇ ।
ರಕ್ಷಾ ವಾಮನ ರೋಷರಾಮಕರುಣಾ ಕಾಕುತ್ಸ್ಥಹೇಲಾ ಹಲಿನ್ ॥
ಕ್ರೀಡಾವಲ್ಲವ ಕಲ್ಕವಾಹನದಾಶಾ ಕಲಿನ್ನಿತಿ ಪ್ರತ್ಯಹಂ ।
ಜಲ್ಪಂತಃ ಪುರುಷಾಃ ಪುನಂತಿ ಭುವನಂ ಪುಣ್ಯಾಘ ಪಣ್ಯಾಪಣಾಃ ॥12॥

ವಿದ್ಯೋದನ್ವತಿ ವೇಂಕಟೇಶ್ವರ ಕವೌ ಜಾತಂ ಜಗನ್ಮಂಗಳಂ ।
ದೇವೇಶಸ್ಯ ದಶಾವತಾರ ವಿಷಯಂ ಸ್ತೋತ್ರಂ ವಿವಕ್ಷೇತಯಃ ॥
ವಸ್ತೇ ತಸ್ಯ ಸರಸ್ವತೀ ಬಹುಮುಖಿ ಭಕ್ತಿಃ ಪರಾಮಾನಸೇ ।
ಶುದ್ಧಿ ಕಾಪಿ ತನೌದಿಶಾಸು ದಶಸು ಖ್ಯಾತಿಃ ಶುಭಾಜೃಂಭತೇ ॥13॥
ಕವಿತಾರ್ಕಿಕ ಸಿಂಹಾಯ ಕಲ್ಯಾಣ ಗುಣಶಾಲಿನೇ
ಶ್ರೀಮತೇ ವೆಂಕಟೇಶಾಯ ವೇದಾಂತ ಗುರವೇ ನಮಃ

ಏಷನಾರಾಯಣಃ ಶ್ರೀಮಾನ್ ಕ್ಷೀರಾರ್ಣವ ನಿಕೇತನಃ ।
ನಾಗ ಪರ್ಯಂಕಂ ಉತ್ಸೃಜ್ಯ ಹ್ಯಾಗತೋ ಮಧುರಾಂ ಪುರೀಂ ॥
ವೈಕುಂಠೇತುಃ ಪರೇಲೋಕೇ ಶ್ರಿಯಾ ಸಾರ್ಧಂ ಜಗತ್ಪತಿಃ ।
ಆಸ್ತೇ ವಿಷ್ಣುಃ ಅಚಿಂತ್ಯಾತ್ಮಾ ಭಕ್ತೈಃ ಭಾಗವನ್ನೈಃ ಸಹ ॥

ಶ್ರಿಯಃ ಕಾಂತಾಯಃ ಕಲ್ಯಾಣ ನಿಧಯೇ ನಿಧಯೇರ್ಥಿನಾಮ್
ಶ್ರೀ ವೆಂಕಟನಿವಾಸಾಯ ಶ್ರೀನಿವಾಸಾಯ ಮಂಗಳಮ್

**ಮಂಗಳಾಶಾಸನಪರೈರ್ಮದಾಚಾರ್ಯ ಪುರೋಗಮೈಃ**

**ಸರ್ವೈಶ್ಚ ಪೂರ್ವೈರಾಚಾರ್ಯೈಸ್ಸತ್ಕೃತಾಯಾಸ್ತು ಮಂಗಳಮ್**

**ಸರ್ವಂ ಶ್ರೀಕೃಷ್ಣಾರ್ಪಣಮಸ್ತು**

## ಶಾಂತಿ ಮಂತ್ರ

ಹರಿಃ ಓಂ

ಭದ್ರಂ ಕರ್ಣೇಭಿಃ ಶ್ರುಣುಯಾಮ ದೇವಾಃ

ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ

ಸ್ಥಿರೈ ರಂಗೈಸ್ತುಷ್ಟು ವಾಂಸಸ್ತನೂಭಿಃ

ವ್ಯಶೇಮ ದೇವಹಿತಂ ಯದಾಯುಃ

ಸ್ವಸ್ತಿನ ಇಂದ್ರೋ ವೃದ್ಧ ಶ್ರವಾ ಃ

ಸ್ವಸ್ತಿ ನಃ ಪೂಷಾಃ ವಿಶ್ವದೇವಾಃ

ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ

ಸ್ವಸ್ತಿ ನೋ ಬೃಹಸ್ಪತಿರ್ದಧಾತು

ಓಂ ಶಾಂತಿಃ ಶಾಂತಿಃ ಶಾಂತಿಃ